ಶಿವಳ್ಳಿ ಬ್ರಾಹ್ಮಣರು- ಸಾಂಸ್ಕೃತಿಕ ಅಧ್ಯಯನ

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಮುಖೇನ

ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಪಿಎಚ್.ಡಿ. ಪದವಿಗಾಗಿ
ಸಲ್ಲಿಸಿದ ಮಹಾಪ್ರಬಂಧ

ಸಂಶೋಧನ ವಿದ್ಯಾರ್ಥಿ

ಕೆ.ಪಿ. ರಾಧಾಕೃಷ್ಣ ಕೆದಿಲ್ಲಾಯ

ಉಪನ್ಯಾಸಕ, ಕನ್ನಡ ವಿಭಾಗ

ಶ್ರೀ.ಧ.ಮಂ. ಕಾಲೇಜು, ಉಜಿರೆ

ಬೆಳ್ತಂಗಡಿ ತಾಲೂಕು, ದ.ಕ.

574240.

ಮಾರ್ಗದರ್ಶಕರು


ಡಾ.ಪಿ. ಆರ್. ಪಾಂಡುರಂಗ

ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಭಾಗ

ಎಂ.ಜಿ.ಎಂ. ಕಾಲೇಜು ಉಡುಪಿ-3

ಹಂಪಿ ಕನ್ನಡ ವಿಶ್ವವಿದ್ಯಾನಿಲಯ, ವಿದ್ಯಾರಣ್ಯ

ಆಗಸ್ಟ್ 2010



ಶಿವಳ್ಳಿ ಬ್ರಾಹ್ಮಣರು- ಸಾಂಸ್ಕೃತಿಕ ಅಧ್ಯಯನ

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಮುಖೇನ

ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಪಿಎಚ್.ಡಿ. ಪದವಿಗಾಗಿ
ಸಲ್ಲಿಸಿದ ಮಹಾಪ್ರಬಂಧ

ಸಂಶೋಧನ ವಿದ್ಯಾರ್ಥಿ

ಕೆ.ಪಿ. ರಾಧಾಕೃಷ್ಣ ಕೆದಿಲ್ಲಾಯ

ಉಪನ್ಯಾಸಕ, ಕನ್ನಡ ವಿಭಾಗ

ಶ್ರೀ.ಧ.ಮಂ. ಕಾಲೇಜು, ಉಜಿರೆ

ಬೆಳ್ತಂಗಡಿ ತಾಲೂಕು, ದ.ಕ.

574240.

ಮಾರ್ಗದರ್ಶಕರು

ಡಾ.ಡಿ. ಆರ್. ಪಾಂಡುರಂಗ

ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಭಾಗ

ಎಂ.ಜಿ.ಎಂ. ಕಾಲೇಜು ಉಡುಪಿ-೨

ಹಂಪಿ ಕನ್ನಡ ವಿಶ್ವವಿದ್ಯಾನಿಲಯ, ವಿದ್ಯಾರಣ್ಯ

ಆಗಸ್ಟ್ 2010

ಘೋಷಣಾ ಪತ್ರ

ಡಾ. ಡಿ. ಆರ್. ಪಾಂಡುರಂಗ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಮಹಾ ಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಲಾಗಿದೆ. ಈ ಅಧ್ಯಯನ ಮಹಾಪ್ರಬಂಧವನ್ನು ಬೇರೆ ಯಾವುದೇ ವಿಶ್ವವಿದ್ಯಾನಿಲಯದ ಯಾವುದೇ ಪದವಿಗಾಗಿ ಒಪ್ಪಿಸಿಲ್ಲ ಎಂದು ಘೋಷಿಸುತ್ತೇನೆ.

DR Pandurang

ಸಂಶೋಧನ ಮಾರ್ಗದರ್ಶಕರು
ಡಾ. ಡಿ. ಆರ್. ಪಾಂಡುರಂಗ
ನಿವೃತ್ತ ಪ್ರಾಧ್ಯಾಪಕರು
ಎಂ. ಜಿ. ಎಂ. ಕಾಲೇಜು ಉಡುಪಿ

Radhakrishna

ಕೆ.ಪಿ. ರಾಧಾಕೃಷ್ಣ ಕೆದಿಲಾಯ

ದಿನಾಂಕ: 25.08.2010

ಕೃತಜ್ಞತೆಯ ಮಾತು

ಶಿವಳ್ಳಿ ಬ್ರಾಹ್ಮಣರು- ಸಾಂಸ್ಕೃತಿಕ ಅಧ್ಯಯನ. ಈ ಮಹಾ ಪ್ರಬಂಧವನ್ನು ಬರೆದು ಒಪ್ಪಿಸುವಲ್ಲಿ ಮಾರ್ಗದರ್ಶಕರಾದ ಡಾ. ಡಿ. ಆರ್. ಪಾಂಡುರಂಗ ಅವರು ತಮ್ಮ ಅಮೂಲ್ಯವಾದ ಸಮಯವನ್ನು ಸೂಕ್ತ ಸಲಹೆ ಸೂಚನೆಗಳನ್ನು ನೀಡಲು ಉಪಯೋಗಿಸಿದ್ದಾರೆ. ಅವರಿಗೆ ನನ್ನ ಆತ್ಮೀಯ ನಮನಗಳು.

ಈ ಅಧ್ಯಯನ ಪ್ರಬಂಧದ ರಚನೆಯ ಸಂದರ್ಭದಲ್ಲಿ ನನಗೆ ಅಗತ್ಯವಾದ ಸಹಾಯ ಸಹಕಾರವನ್ನು ನೀಡುತ್ತಾ ಅನೇಕ ವಿಷಯಗಳಲ್ಲಿ ಮಾರ್ಗದರ್ಶನ ಮಾಡಿದ ಡಾ. ಯು.ಪಿ. ಉಪಾಧ್ಯಾಯ, ಡಾ. ಸುಶೀಲಾ ಉಪಾಧ್ಯಾಯ, ಡಾ. ತಾಳ್ತಜೆ ವಸಂತ ಕುಮಾರ್, ಡಾ. ಪದ್ಮನಾಭ ಕೇಕುಣ್ಣಾಯ, ಅವರನ್ನು ಕೃತಜ್ಞತಾ ಪೂರ್ವಕವಾಗಿ ಸ್ಮರಿಸುವುದು ನನ್ನ ಆದ್ಯ ಕರ್ತವ್ಯ.

ನನ್ನ ಸಂಶೋಧನ ಸಂದರ್ಭದಲ್ಲಿ ಸಹಕರಿಸಿದ ಡಾ. ಬಿ. ಯಶೋವರ್ಮ, ಪ್ರೊ. ಹೇರಂಜೆ ಕೃಷ್ಣಭಟ್, ಡಾ. ಎಸ್.ಡಿ. ಶೆಟ್ಟಿ, ಎನ್.ಜಿ. ಪಟವರ್ಧನ್, ಪ್ರೊ. ಸತೀಶ್ಚಂದ್ರ, ಡಾ.ಬಿ.ಪಿ. ಸಂಪತ್ ಕುಮಾರ್, ಬಿ. ರಾಜೇಶ್, ದಿವಾ ಕೊಕ್ಕಡ, ರಾಮಚಂದ್ರ ಪುರೋಹಿತ, ವೆಂಕಟೇಶ ಇವರುಗಳ ಉಪಕಾರವನ್ನು ಸ್ಮರಿಸುತ್ತೇನೆ.

ದಿನಾಂಕ: ೨೮.08.2010 ಕೆ.ಪಿ.ರಾಧಾಕೃಷ್ಣ ಕೆದಿಲಾಯ

ವಿಷಯಸೂಚಿ ಪುಟ ಸಂಖ್ಯೆ

ಅಧ್ಯಾಯ ಒಂದು –ಉದ್ದೇಶ ಮತ್ತು ವ್ಯಾಪ್ತಿ

1.1 ಪ್ರಸ್ತಾವನೆ

ವರ್ತಮಾನದ ಬದುಕು ಭೂತಕಾಲದ ಮೇಲೆ ರೂಪಿತವಾಗುತ್ತದೆ. ಕಾಲದ ಓಟದೊಂದಿಗೆ ಮಾನವನ ಬದುಕಿನ ಲಯವು ತನ್ನದೇ ಆದ ರೀತಿಯಲ್ಲಿ ಸ್ಪಂದಿಸಿ ಪ್ರಕ್ರಿಯಿಸುತ್ತದೆ. ನಾನಾ ಗುಂಪುಗಳು ಜಾತಿಗಳಾಗಿ ಮಾರ್ಪಟ್ಟು ಅದರಲ್ಲಿ ಒಳ ಪಂಗಡಗಳಾಗಿ ವಿಂಗಡಣೆ ಹೊಂದಿರುವುದು ಇತಿಹಾಸ. ಅವರ ಆಚಾರ, ವಿಚಾರ, ಆರಾಧನಾ ಪದ್ಧತಿ, ಜೀವನ ಕ್ರಮ ಮತ್ತು ಸಿದ್ಧಾಂತಗಳಿಂದಾಗಿ ನಾನಾ ಗುಂಪು, ಜಾತಿ, ವರ್ಗಗಳು ತಮ್ಮದೇ ಆದ ಜೀವನ ಶೈಲಿಯನ್ನು ಮೈಗೂಡಿಸಿಕೊಂಡು ಬಾಳುತ್ತಿರುವುದು ಈ ದೇಶದ ವೈಶಿಷ್ಟ್ಯ. ಈ ಹಿನ್ನೆಲೆಯಲ್ಲಿ ವೈದಿಕ ಪರಂಪರೆಗೆ ಸೇರಿರುವ ಶಿವಳ್ಳಿ ಬ್ರಾಹ್ಮಣರು ಕೂಡಾ ಒಂದು ಪಂಗಡವಾಗಿದ್ದು ಅವರ ಸಾಂಸ್ಕೃತಿಕ ಬದುಕು ಕುತೂಹಲವನ್ನು ಹುಟ್ಟಿಸುತ್ತದೆ.

ಬಹುಮುಖಿಯಾದ ನಮ್ಮ ಸಮಾಜದಲ್ಲಿ ವಿವಿಧ ವರ್ಗ, ಜಾತಿ ಮತ, ಪಂಥದವರು ಕೂಡಿ ಬಾಳುತ್ತಿದ್ದಾರೆ. ಪ್ರತಿಯೊಬ್ಬರ ಜೀವನ ಕ್ರಮದಲ್ಲಿ ತಮ್ಮದೇ ಆದ ವೈಶಿಷ್ಟ್ಯ ಮತ್ತು ಅನನ್ಯತೆ ಇದೆ. "ಗ್ರಾಮ ಪದ್ಧತಿ" ಕೃತಿಯ ಪ್ರಕಾರ ಕ್ರಿ.ಶ 280–330 ರ ಅವಧಿಯಲ್ಲಿ ಕರ್ನಾಟಕವನ್ನು ಆಳ್ವಿಕೆ ಮಾಡಿದ್ದ ಮಯೂರವರ್ಮನ ಕಾಲದಲ್ಲಿ ಬ್ರಾಹ್ಮಣರು ದಕ್ಷಿಣ ಕನ್ನಡಕ್ಕೆ ಬಂದು ನೆಲೆಸಿದರೆಂಬ ಹೇಳಿಕೆ ಉಂಟು. (ಶಿವನ ಹಳ್ಳಿ) – ಶಿವಳ್ಳಿ ಗ್ರಾಮದಲ್ಲಿ ಬಂದು ನೆಲೆಸಿದ್ದ ಕಾರಣ ಅವರನ್ನು ಶಿವಳ್ಳಿ ಬ್ರಾಹ್ಮಣರು ಎಂದು ಗುರುತಿಸುತ್ತಾ ಬಂದಿದ್ದಾರೆಂಬುದು ವಿದ್ವಾಂಸರ ಅಭಿಪ್ರಾಯ. ತನ್ನದೇ ಆದ ಆಚಾರ–ವಿಚಾರ, ಪರಂಪರೆ, ಸಂಪ್ರದಾಯ, ನಂಬಿಕೆ, ಜೀವನ ಮೌಲ್ಯಗಳನ್ನು ಮೈಗೂಡಿಸಿಕೊಂಡು ಜೀವನ ನಡೆಸುತ್ತಾ ಬಂದವರಿವರು. ಕಾಲದ ಚಲನೆಯೊಂದಿಗೆ ಈ ಜನಾಂಗದಲ್ಲಿ ಸಾಕಷ್ಟು ಪರಿವರ್ತನೆಯಾಗಿದೆ. ಸಮಾಜದ ಮುಖ್ಯ ವಾಹಿನಿಯಲ್ಲಿ ತಮ್ಮನ್ನು ಗುರುತಿಸಿಕೊಂಡು ಇತರರೊಡನೆ ಸಹಬಾಳ್ವೆ ನಡೆಸುತ್ತಾ ಬಂದಿದ್ದಾರೆ. ಈಗಾಗಲೇ ಪ್ರಕಟವಾಗಿರುವ ಹಲವು ಬಿಡಿ ಲೇಖನಗಳು ಹಾಗೂ ಕೆಲವು ಪ್ರಕಟಿತ ಗ್ರಂಥಗಳ ಮೂಲಕ ಈ ಜನಾಂಗದ ಸಾಂಸ್ಕೃತಿಕ ಹಿನ್ನೆಲೆಯನ್ನು ಸ್ವಲ್ಪಮಟ್ಟಿಗೆ ತಿಳಿದುಕೊಳ್ಳಲು ಸಾಧ್ಯವಾಗಿದೆ.

ಪ್ರಸ್ತುತ ಐತಿಹ್ಯ, ಇತಿಹಾಸಗಳನ್ನು ಸಂಗ್ರಹಿಸಿ ದಾಖಲಿಸುವುದು ಹಾಗೂ ಈ ಜನಾಂಗದ ಕುರಿತು ಸಮಗ್ರ ಅಧ್ಯಯನ ಕೈಗೊಳ್ಳುವುದು ಅತ್ಯಂತ ಸಕಾಲಿಕ ಹಾಗೂ ಉಚಿತವಾದುದು.

1.2 ಪ್ರವೇಶ

ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆ ಉಡುಪಿ ಜಿಲ್ಲೆ ಮತ್ತು ಕಾಸರಗೋಡು ಪ್ರದೇಶಗಳಲ್ಲಿ ಶಿವಳ್ಳಿ ಬ್ರಾಹ್ಮಣರು ವಾಸಮಾಡುತ್ತಿದ್ದಾರೆ. ಉಡುಪಿ ಜಿಲ್ಲೆಯ 'ಶಿವಳ್ಳಿ'

ಎಂಬ ಗ್ರಾಮದಲ್ಲಿ ಪ್ರಾರಂಭದಲ್ಲಿ ನೆಲೆಸಿದ ಕಾರಣ 'ಶಿವಳ್ಳಿ' ಬ್ರಾಹ್ಮಣರು ಎಂಬ ಹೆಸರು ಬಂತೆಂದು ಹಲವು ವಿದ್ವಾಂಸರ ಅಭಿಪ್ರಾಯ. ಅನಂತರದಲ್ಲಿ ಬೇರೆ ಬೇರೆ ಊರಿಗೆ ವಲಸೆ ಹೋಗಿ ನೆಲೆಸಿ ಜೀವನ ನಡೆಸುತ್ತಿದ್ದಾರೆ. ಪ್ರಾರಂಭದಲ್ಲಿ ವೈದಿಕ ಪದ್ಧತಿಯ ಪೂರಕ ವೃತ್ತಿಗಳೇ ಪ್ರಮುಖವಾಗಿದ್ದವು. ಯಾಗ, ಯಜ್ಞ, ಪೌರೋಹಿತ್ಯ, ದೇವಸ್ಥಾನಗಳಲ್ಲಿ ಪೂಜೆ ಮುಂತಾದ ವೃತ್ತಿ ಮಾಡುತ್ತಾ ಜೀವನ ನಿರ್ವಹಣೆ ಮಾಡುತ್ತಿದ್ದರು. ಕಾಲ ಪರಿವರ್ತನೆಯಾದಂತೆ ತಮ್ಮ ವೃತ್ತಿಯಲ್ಲಿಯೂ ಬದಲಾವಣೆಗಳನ್ನು ಮಾಡಿಕೊಂಡು ಬರುತ್ತಿದ್ದಾರೆ.

ವೈದಿಕ ವೃತ್ತಿಗೆ ಸೀಮಿತರಾಗಿದ್ದವರು ಈಗೀಗ ಬೇರೆ ಬೇರೆ ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕೃಷಿ, ಶಿಕ್ಷಣ, ಬ್ಯಾಂಕ್, ಹೋಟೇಲು, ಕೈಗಾರಿಕೆ, ವ್ಯಾಪಾರ, ಮುಂತಾದ ಹಲವು ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಅದರಲ್ಲಿ ಯಶಸ್ಸನ್ನು ಕಾಣುತ್ತಿದ್ದಾರೆ. ದೇವಸ್ಥಾನ ಮತ್ತು ಊರಲ್ಲಿ ಜರುಗುವ ಧಾರ್ಮಿಕ ಆಚರಣೆಯಲ್ಲಿ ಇವರ ನಾಯಕತ್ವ ಮತ್ತು ಮಾರ್ಗದರ್ಶನ ಮಹತ್ವವನ್ನು ಪಡೆದುಕೊಂಡಿದೆ. ಎಲ್ಲಾ ವರ್ಗದ ಜನರೊಂದಿಗೆ ಬೆರೆತು ಎಲ್ಲರ ವಿಶ್ವಾಸ ಮತ್ತು ಗೌರವಕ್ಕೆ ಪಾತ್ರರಾಗಿದ್ದಾರೆ. ದೇವತಾಕಾರ್ಯಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತಾರೆ. ಕಾಲದ ಪರಿವರ್ತನೆಯೊಂದಿಗೆ ಸ್ಪಂದಿಸುವುದು ಇವರ ವಿಶಿಷ್ಟವಾದ ಗುಣ.

1.3 ಸಂಸ್ಕೃತಿ–ಅರ್ಥ ಮತ್ತು ವ್ಯಾಪ್ತಿ

ಪ್ರಕೃತಿ ಮತ್ತು ಮನುಷ್ಯ ಕಾಲಕ್ಕೆ ಬದಲಾಗುತ್ತ ಪರಿಷ್ಕರಣಗೊಳ್ಳುತ್ತ ಬಂದುದು. ನಾಲ್ಕು ಕಾಲಿನ ಪ್ರಾಣಿ ಎರಡು ಕಾಲುಗಳನ್ನು ಕೈಯಾಗಿ ಬಳಸಿಕೊಳ್ಳುವ ಮತ್ತು ಬುದ್ಧಿ ಪೂರ್ವಕವಾಗಿ ಕೆಲಸ ಮಾಡಲು ಕಲಿತಾಗ ಮನುಷ್ಯ ಎನಿಸಿಕೊಂಡಿತು. ಈ ಬುದ್ಧಿಪೂರ್ವಕವಾದ ವರ್ತನೆಯೇ ಸಂಸ್ಕೃತಿಯ ಉಗಮಕ್ಕೆ ಕಾರಣವಾಯಿತು. ಅಲೆಮಾರಿ ಜೀವನವನ್ನು ನಡೆಸುತ್ತಿದ್ದ ಮಾನವ ಕಾಲಾಂತರದಲ್ಲಿ ಸ್ವಪ್ರಯತ್ನದ ಮೂಲಕ ಮಾನವೀಯ ಗುಣಗಳನ್ನು ತ್ಯಜಿಸದೆ ಪ್ರಗತಿಯ ಅಭಿವೃದ್ಧಿಯ ಪಥದಲ್ಲಿ ಮುಂದುವರಿಯುತ್ತ ಬಾಳ್ವೆ ನಡೆಸತೊಡಗಿದನು. ತಿದ್ದಿದ ನಡಾವಳಿಗಳನ್ನು ಈ ಜೀವನ ಪಥದ ಹಿಂದೆ ಬಹಳ ವರ್ಷಗಳ ಸತತವಾದ ಸಾಧನೆ ಇದೆ. ಈ ಸಾಧನೆಯ ಫಲ ಸ್ವರೂಪವಾಗಿ ಮಾನವ ಜೀವನದಲ್ಲಿ ಒಂದು ಬಗೆಯ ಹೊಂದಾಣಿಕೆ, ಹೆಚ್ಚುಗಾರಿಕೆ, ವಿವಿಧತನ, ಹಿರಿತನ ಕಂಡು ಬರುತ್ತದೆ.

ಪ್ರಾಕೃತನಾಗಿದ್ದ ಮಾನವ ಬರಬರುತ್ತ ತನ್ನ ಬುದ್ಧಿ ಶಕ್ತಿಯನ್ನು ಉಪಯೋಗಿಸುತ್ತ, ಪ್ರಗತಿ ಪರನಾಗಿ ಮುಂದುವರೆಯುತ್ತ ಸುಸಂಸ್ಕೃತನಾಗುತ್ತ ಸಾಗಿದನು. ಈ ಸುಧಾರಿತ ಅಥವಾ ಸಂಸ್ಕಾರಗೊಂಡ ನಡತೆಯಲ್ಲಿ ಸಂಸ್ಕೃತಿಯನ್ನು ಗುರುತಿಸಬಹುದು. ಒಂದು ಸಮಾಜದ ಸದಸ್ಯರು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಂಸ್ಕೃತಿ ನೆರವಾಗುತ್ತದೆ. ಸಂಸ್ಕೃತಿ ರಹಿತವಾದ ಸಮಾಜವಿರಲಾರದು. ಸಮಾಜ ಮತ್ತು ಸಂಸ್ಕೃತಿಯ ಮಧ್ಯೆ ಅಂಥ ಅವಿನಾಭಾವ ಸಂಬಂಧವೇರ್ಪಟ್ಟಿದೆ.

ಯಾವ ವಿಶೇಷ ಗುಣವು ಮಾನವನನ್ನು ಪ್ರಾಣಿಗಳಿಂದ ಬೇರ್ಪಡಿಸುತ್ತದೊ ಅದೇ ಅವನ ವೈಶಿಷ್ಟ್ಯ. ಆ ವಿಶೇಷ ಗುಣವೇ ಮಾನವ ಸಂಸ್ಕೃತಿ. ಸಂಸ್ಕೃತಿ ಎಂಬ ಶಬ್ದವನ್ನು ಸಂದರ್ಭಾನುಸಾರವಾಗಿ ನಾನಾ ವಿಷಯಗಳಿಗೆ ಅನ್ವಯಿಸಿ

ಉಪಯೋಗಿಸುತ್ತೇವೆ. ಸಂಸ್ಕೃತಿ ಎಂಬ ಶಬ್ದವನ್ನು ಜನಜೀವನದ ಸಮಷ್ಠಿ ರೂಪವಾದ ಸಮಾಜ, ದೇಶ, ಭಾಷೆ, ಧರ್ಮ ಇವುಗಳಿಗೆಲ್ಲ ಅನ್ವಯಿಸಿ ಉಪಯೋಗಿಸುತ್ತೇವೆ.[1]

'ಸಂಸ್ಕೃತಿ ಎಂಬುದು ನಾಗರಿಕತೆಗಿಂತ ಪ್ರಾಚೀನ ಹಾಗೂ ಹೆಚ್ಚು ವ್ಯಾಪಕಾರ್ಥವುಳ್ಳದಾಗಿದೆ' ಎಂಬ ಅಭಿಪ್ರಾಯವನ್ನು ಡಾ. ಶಂ.ಬಾ ಜೋಶಿಯವರು ವ್ಯಕ್ತಪಡಿಸಿದ್ದಾರೆ. ನಗರಕ್ಕೆ ಸಂಬಂಧಿಸಿದುದು ನಾಗರಿಕತೆ, ಮಾನವನ ಸಂಸ್ಕಾರಕ್ಕೆ ಸಂಬಂಧಿಸಿದುದು ಸಂಸ್ಕೃತಿ ಎಂದು ಸ್ಥೂಲವಾಗಿ ಹೇಳಬಹುದು.

'ಸಂಸ್ಕೃತಿ' ಎಂಬ ಪದಕ್ಕೆ ಜ್ಞಾತಿಪ್ರಾಯವಾದ 'ಸಂಸ್ಕಾರ' ಎಂಬ ಪದವು ಬಹಳ ಪೂರ್ವದಿಂದಲೇ ಪ್ರಯೋಗದಲ್ಲಿದೆ. ಸಮ್ಯಕ್‌ಕಾರಃ ಸಂಸ್ಕಾರಃ. ಉದಾಹರಣೆಗೆ ಷೋಡಶ ಸಂಸ್ಕಾರ, ಬುದ್ಧಿ ಸಂಸ್ಕಾರ ಮೊದಲಾದವುಗಳನ್ನು ಗಮನಿಸಬಹುದು. ಸಂಸ್ಕಾರ ಎಂಬ ಪದಕ್ಕೆ ಚೆನ್ನಾಗಿ ಮಾಡು, ಒಳ್ಳೆಯದಾಗಿಸುವುದು, ಅಂದವಾಗಿಸುವುದು, ಉತ್ತಮಗೊಳಿಸುವುದು, ಸುಸಂಸ್ಕೃತಗೊಳಿಸುವುದು ಎಂದು ಮುಂತಾದ ಅರ್ಥಗಳಿವೆ. ಸಂಸ್ಕೃತಿ ಎನ್ನುವಾಗ ಯಾವೆಲ್ಲ ಪರಿಷ್ಕಾರದ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುತ್ತೇವೆಯೋ ಅವೆಲ್ಲ ಸಂಸ್ಕಾರ ಎಂಬ ಪದಕ್ಕೂ ಅನ್ವಯವಾಗುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಡಿ.ವಿ.ಜಿ. ಅವರು ಸಂಸ್ಕಾರ ಎಂಬ ಪದದಿಂದ ಸಂಸ್ಕೃತಿ ಎಂಬ ಪದ ಹುಟ್ಟಿಕೊಂಡಿದೆ ಎಂದಿದ್ದಾರೆ. ಅವರು ಸಂಸ್ಕೃತಿ ಎಂಬ ಶಬ್ದಕ್ಕೆ ಈ ರೀತಿಯ ನಿಷ್ಪತ್ತಿಯನ್ನು ಕೊಟ್ಟಿದ್ದಾರೆ. 'ಸಂಸ್ಕಾರ ಅಥವಾ ಸಂಸ್ಕರಣ ಎಂದರೆ ಸಮ್ಯಕ್‌ಕರಣ –ಸಮ್ಯಕ್‌ಕೃತಿ–ಸಂಸ್ಕೃತಿ[2]. ಶಿಕ್ಷಣ ತಜ್ಞ ಎನಿಸಿಕೊಂಡ ಮಾಥ್ಯೂ ಆರ್ನಾಲ್ಡ್, ಸಂಸ್ಕೃತಿಯನ್ನು ತನ್ನ Culture and Anarchy' (ಸಂಸ್ಕೃತಿ ಮತ್ತು ಅನಾಯಕತೆ) ಎಂಬ ಗ್ರಂಥದಲ್ಲಿ 'ಸಂಸ್ಕೃತಿ ಎಂದರೆ ಸುಗುಣ ಸಾಮರಸ್ಯ ಸಮರಸ ಸಂಪೂರ್ಣತೆಯಲ್ಲಿ ಎರಡು ಅತ್ಯುತ್ಕೃಷ್ಟ ಗುಣಗಳು ಸಮ್ಮಿಳಿತವಾಗಿರುತ್ತದೆ. ಅವು ಮಾಧುರ್ಯ ಮತ್ತು ಕಾಂತಿ (Sweetness and Light) ....ಸಂಸ್ಕೃತಿ ಎಂಬುದು ಕಾವ್ಯಕ್ಕೆ ಸಮಾನವಾದದ್ದು. ಅದು ಕಾವ್ಯ ಅನುಸರಿಸುವ ಧರ್ಮವನ್ನು ಅನುಸರಿಸತಕ್ಕದ್ದು. ಒಂದು ಸುಂದರ ಜೀವನದ ಭಾವನೆ ಮತ್ತು ಅದಕ್ಕನುಸಾರವಾಗಿ ಮನುಷ್ಯ ಸ್ವಭಾವದ ಸರ್ವತೋಮುಖವಾದ ಗುಣ ಸಂಪಾದನೆ –ಇವು ಕಾವ್ಯದ ಪ್ರಧಾನತತ್ತ್ವ ಸಂಸ್ಕೃತಿಯದೂ ಅದೇ ಎಂದು ಹೇಳಿದ್ದಾನೆಂದು ಡಿ.ವಿ.ಜಿ. ಹೇಳಿದ್ದಾರೆ[3].

ಸಂಸ್ಕೃತಿಯ ಅರ್ಥ ವ್ಯಾಪ್ತಿಯ ವಿಚಾರವಾಗಿ ಅಭಿಪ್ರಾಯಗಳು–ಕವಿ, ವಿಮರ್ಶಕ, ಟಿ.ಯಸ್. ಎಲಿಯಟನು 'ಒಂದು ಪ್ರದೇಶದಲ್ಲಿ ಒಟ್ಟಾಗಿ ಕೂಡಿ ಬದುಕುತ್ತಿರುವ ನಿರ್ದಿಷ್ಟ ಜನತೆಯ ಜೀವನಕ್ರಮವೇ ಸಂಸ್ಕೃತಿ ಎನ್ನಬಹುದು.' ಈ ಜನತೆಯ ಕಲೆಗಳು, ಅವರ ಸಾಮಾಜಿಕ ವ್ಯವಸ್ಥೆ, ಅವರ ಆಚಾರ ಸಂಪ್ರದಾಯಗಳಲ್ಲಿ

---

1. 1. ಸಮಾಜವಾಚಕವಾಗಿ – ಹರಿಜನ ಸಂಸ್ಕೃತಿ, ಬ್ರಾಹ್ಮಣ ಸಂಸ್ಕೃತಿ, ಶಿವಳ್ಳಿ ಬ್ರಾಹ್ಮಣ ಸಂಸ್ಕೃತಿ ಇತ್ಯಾದಿ
   2. ದೇಶವಾಚಕವಾಗಿ – ಭಾರತೀಯ ಸಂಸ್ಕೃತಿ, ಕರ್ನಾಟ ಸಂಸ್ಕೃತಿ ಇತ್ಯಾದಿ
   3. ಭಾಷಾವಾಚಕವಾಗಿ – ಕನ್ನಡ ಸಂಸ್ಕೃತಿ, ತಮಿಳು ಸಂಸ್ಕೃತಿ, ತೆಲುಗು ಸಂಸ್ಕೃತಿ ಇತ್ಯಾದಿ
   4. ಧರ್ಮವಾಚಕವಾಗಿ – ಜೈನ ಸಂಸ್ಕೃತಿ, ಬೌದ್ಧಸಂಸ್ಕೃತಿ, ಹಿಂದೂ ಸಂಸ್ಕೃತಿ ಇತ್ಯಾದಿ
2. ಡಿ.ವಿ.ಜಿ. ಸಂಸ್ಕೃತಿ, 1969, ಪುಟ 11
3. ಸಂಸ್ಕೃತಿ, 1969 , ಪುಟ 18

ಮತ್ತು ಅವರ ಧರ್ಮದಲ್ಲಿ ಅವರ ಸಂಸ್ಕೃತಿ ಒಡೆದು ಕಾಣಿಸುತ್ತದೆ.[1] ಎಂದು ಹೇಳುವುದರ ಮೂಲಕ ಮಾನವ ಶಾಸ್ತ್ರಜ್ಞರ ಅಭಿಪ್ರಾಯಕ್ಕೆ ಸಮ್ಮತಿ ಸೂಚಿಸಿದ್ದಾರೆ.

ಡಾ. ಶಂ.ಬಾ. ಜೋಶಿಯವರ ಪ್ರಕಾರ ಮಾನವನ 'ನಡೆವಳಿ ನುಡಿವಳಿಯೇ ಸಂಸ್ಕೃತಿ' ಯಾಗಿದೆ.[2]

ಡಾ. ಜಿ.ಎಸ್. ಶಿವರುದ್ರಪ್ಪನವರು ಸಂಸ್ಕೃತಿಯನ್ನು 'ಒಂದು ನಾಡಿನ ಬಾಳಿನಲ್ಲಿ ಹಾಸು ಹೊಕ್ಕಾಗಿ ಸೇರಿಕೊಂಡು ಬಾಳನ್ನು ಶಿವಮುಖವಾಗಿ ನಡೆಯಿಸುವ ಕ್ರತು ಶಕ್ತಿ; ಒಂದು ದೇಶದ ಅನುಭವಿಗಳು ಮಥಿಸಿ, ಮಥಿಸಿ, ತೆಗೆದಿರುವ ಜೀವನದರ್ಶ" ಎಂದು ವಿವರಿಸಿದ್ದಾರೆ[3].

ಡಾ.ಎಂ. ಫಣಿಕ್ಕರ್ ಎಂಬ ಇತಿಹಾಸತಜ್ಞರು ಹೀಗೆ ನಿರ್ವಚಿಸಿದ್ದಾರೆ. 'ಒಂದು ಸಮಾಜದಲ್ಲಿ ಸಾಮಾನ್ಯವಾಗಿ ಇರುವ ವಿಚಾರಗಳು ನಂಬುಗೆಗಳು, ವಿಕಸಿತ ಗುಣಗಳು ಹಾಗೂ ಸ್ಥಾಪಿತವಾದ ಸಂಬಂಧ ಮತ್ತು ಸಭ್ಯತೆಗಳು ಇವುಗಳ ಸಂಕಿರಣವನ್ನು ಸಂಸ್ಕೃತಿ ಎಂದು ಕರೆಯಲಾಗಿದೆ[4]

ಸಮಾಜ ಮಾನವ ಶಾಸ್ತ್ರಜ್ಞನಾಗಿ ಪ್ರಸಿದ್ಧವಾದ ಇ.ಬಿ. ಟೈಲರನ ಪ್ರಕಾರ, 'ಸಂಸ್ಕೃತಿ ಅಥವಾ ನಾಗರಿಕತೆಯನ್ನು ಒಂದು ಜನತೆಯ ಬದುಕಿನ ಹಿನ್ನೆಲೆಯಲ್ಲಿ ಸಮಗ್ರವಾಗಿ ಪರಿಭಾವಿಸಿದಾಗ ಜ್ಞಾನ, ನಂಬಿಕೆ, ಕಲೆ, ನೀತಿ, ಕಾನೂನು, ಸಂಪ್ರದಾಯಗಳು ಹಾಗೂ ಮನುಷ್ಯ ತನ್ನ ಸಮಾಜ ಸದಸ್ಯನಾಗಿ ಗಳಿಸಬಹುದಾದ ಬೇರೆ ಯಾವುದೇ ಅರ್ಹತೆಗಳ ಮತ್ತು ಅಭ್ಯಾಸಗಳ ಮೊತ್ತ ಎಂದಾಗುತ್ತದೆ[5]." "ಸಂಸ್ಕೃತಿಯು ಮಾನವನ ಸಮೂಹಕ್ಕೆ ಸಂಬಂಧಿಸಿದ ರೀತಿ ನೀತಿಗಳು, ಪರಂಪರೆಗಳು, ಮತ್ತು ಪ್ರಚಲಿತ ವರ್ತನೆಗಳಿಂದ ಕೂಡಿದ್ದು ಒಂದು ಸಮೂಹಕ್ಕೆ ಮೂಲಧನವಾಗಿದೆ." ಎಂದಿದ್ದಾರೆ ಬೊಗಾರ್ಡಸ್ ಎಂಬ ಸಮಾಜ ಶಾಸ್ತ್ರಜ್ಞ.[6]

ಸ್ವಾಮಿ ವಿವೇಕಾನಂದರು– 'ಯಾವುದು ಮಾನವನಲ್ಲಿ ಅಂತರ್ಗತವಾಗಿರುವ ದೈವಿಕತೆಯನ್ನು ಹೊರಗಳೆಯುತ್ತದೆಯೋ ಅದೇ ಸಂಸ್ಕೃತಿ. ಸಂಸ್ಕೃತಿ ಜನಜೀವನದ ಪ್ರತಿಯೊಂದು ಚಟುವಟಿಕೆಯಲ್ಲೂ ಪ್ರಕಟವಾಗಬೇಕು' ಎಂದು ಸಂಸ್ಕೃತಿಯನ್ನು ವಿವರಿಸಿದ್ದಾರೆ[7].

ಮಾನವ ಶಾಸ್ತ್ರಜ್ಞರ ಪ್ರಕಾರ 'ಸಂಸ್ಕೃತಿ ಎಂಬುದು ಒಂದು ಸಾಮಾಜಿಕ ಪರಂಪರೆ. ಅದು ಒಬ್ಬ ವ್ಯಕ್ತಿಗೆ ಆಯಾ ಸಮಾಜ ಕೊಡುವ ದಾನ ಅಥವಾ ಉಡುಗೊರೆ. ಪ್ರತಿಯೊಬ್ಬನೂ ಕಿಂಚಿತ್ ಪ್ರಮಾಣದಲ್ಲಾದರೂ ತನ್ನ ಸಂಸ್ಕೃತಿಯ ಮೇಲೆ ತನ್ನ ಪ್ರಭಾವವನ್ನು ಬೀರಿಯೇ ಬೀರುತ್ತಾನೆ. ಅದರ ಅಂಶಗಳನ್ನು ಸಾಮಾಜಿಕವಾಗಿ ಒಬ್ಬ

---

[1]ಡಾ. ತಂ.ತಪಸ್ವೀ ಕುಮಾರ್, ಸಂಸ್ಕೃತಿಯ ಅಧ್ಯಯನ, ಪುಟ–14

[2]ಶಂ.ಬಾ. ಜೋಶಿ, ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ ಭಾಗ–1 1967, ಪುಟ–1.

[3]ಡಾ. ಜಿ.ಎಸ್. ಶಿವರುದ್ರಪ್ಪ ಪರಿಶೀಲನ 1972, ಪುಟ –30,

[4]ಡಾ. ಹೆಚ್.ವಿ. ಶ್ರೀನಿವಾಸಮೂರ್ತಿ ಮತ್ತು ಡಾ. ಸೂರ್ಯನಾಥ ಕಾಮತ್, ಭಾರತೀಯ ಸಂಸ್ಕೃತಿಯ ಸಮೀಕ್ಷೆ ಪುಟ–4

[5]ಡಾ. ನಂ. ತಪಸ್ವಿಕುಮಾರ್, ಸಂಸ್ಕೃತಿಯ ಅಧ್ಯಯನ, 1980, ಪುಟ–11,

[6] ಬೈರಪ್ಪ ಕೆ. ಸಮಾಜಶಾಸ್ತ್ರ 1982 , ಪುಟ 20–22,

[7]ಅ.ನ.ಕೃ. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ, ಪುಟ–110

ವ್ಯಕ್ತಿ ಕಷ್ಟಪಟ್ಟು ಕಲಿತು ತನ್ನದಾಗಿಸಿಕೊಳ್ಳುತ್ತಾನೆ. ಇದರಲ್ಲಿ ಸಮಷ್ಟಿ ಜೀವನದ ದೃಷ್ಟಿಯೇ ಮುಖ್ಯ. ಸಂಸ್ಕೃತಿ ಅಂತರಂಗದ ಪರಿಪಾಠಕ್ಕೆ ಅಷ್ಟೇ ಅಲ್ಲದೆ ಮಾನವನ ಸಮಸ್ತ ಬಹಿರಂಗ ವ್ಯವಹಾರಗಳಿಗೂ ಅನ್ವಯಿಸುತ್ತದೆ. ಒಂದು ಸಮಾಜವನ್ನು ಇನ್ನೊಂದರಿಂದ ಬೇರ್ಪಡಿಸಿ ತೋರುವ ಮುಖ್ಯ ಅಂಶವೇ ಅದರದರ ಸಂಸ್ಕೃತಿ. ಒಟ್ಟಿನಲ್ಲಿ ಸಮಾಜವೊಂದರ ಒಟ್ಟು ಜೀವನಕ್ರಮವನ್ನು ಸಂಸ್ಕೃತಿ ಎಂದು ಹೇಳಬಹುದು.

ಒಟ್ಟಿನಲ್ಲಿ ಸಂಸ್ಕೃತಿಯ ಕುರಿತಾಗಿ ಇರುವ ಎಲ್ಲಾ ಅಭಿಪ್ರಾಯಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಲಕ್ಷಣಗಳನ್ನು ಗಮನಿಸಿದಾಗ ಸಂಸ್ಕೃತಿಯ ಅರ್ಥವ್ಯಾಪ್ತಿ ಬಹಳ ವಿಶಾಲವಾದದ್ದು ಸ್ಪಷ್ಟ. ಸಂಸ್ಕೃತಿಯು ಕಲಿಕೆಯಿಂದ ಲಭ್ಯವಾಗಿದ್ದು, ಸಾಮಾಜಿಕವಾಗಿದ್ದು, ಪೀಳಿಗೆಯಿಂದ ಪೀಳಿಗೆಗೆ ರವಾನಿಸಲ್ಪಡುತ್ತಿದ್ದು, ಪರಿವರ್ತನಶೀಲ ಮತ್ತು ಪ್ರಭಾವಿತ ಗುಣಗಳಿಂದದೊಡಗೂಡಿದ್ದು, ಆದರ್ಶ ಪ್ರಾಯವಾಗಿದ್ದು ಮಾನವನ ಬಾಳಿನ ಮತ್ತು ಸಮಾಜದ ಉನ್ನತಿಗೆ ಕಾರಣವಾಗಿರುತ್ತದೆ. ಅದು ಆತಂರಿಕ ಮತ್ತು ಬಾಹ್ಯ ಎಂಬ ಎರಡು ರೂಪಗಳನ್ನು ಹೊಂದಿರುತ್ತದೆ. ಒಂದು ಸಮಾಜವನ್ನು ಈ ಹಿನ್ನೆಲೆಯಲ್ಲಿ ಅಭ್ಯಸಿಸಿದರೆ ಅದರ ಸಂಸ್ಕೃತಿಯನ್ನು ಅಭ್ಯಸಿಸಿದಂತೆ. ಆದ್ದರಿಂದ ಸಂಸ್ಕೃತಿ ಭಾಷೆ, ರೂಢಿಗಳು, ಸಂಪ್ರದಾಯಗಳು, ಮೌಲ್ಯಾದರ್ಶಗಳು, ನೀತಿ ನಿಯಮಾವಳಿಗಳು, ಹವ್ಯಾಸ, ಅಭಿರುಚಿ, ನಂಬಿಕೆಗಳು, ಆಚರಣೆಗಳು, ಧರ್ಮ, ಆಲೋಚನಾ ವಿಧಾನಗಳು ಇವೇ ಮೊದಲಾದವುಗಳನ್ನು ಅಂದರೆ ಒಟ್ಟು ಜೀವನ ವಿಧಾನವನ್ನು ಒಳಗೊಳ್ಳುತ್ತದೆ. ಇವುಗಳ ಸಮಷ್ಟಿ ರೂಪದಿಂದ ಪ್ರಕಟವಾಗುವ 'ಸತ್ಯ, ಅಹಿಂಸೆ, ಪರೋಪಕಾರ ಮೊದಲಾದ ಜೀವನ ಕಲ್ಪನೆಯೇ ಆಯಾ ಸಮಾಜದ ಸಂಸ್ಕೃತಿ'. ಒಟ್ಟಿನಲ್ಲಿ ಒಂದು ಸಮಾಜದ ಸಂಸ್ಕೃತಿಯ ಅಧ್ಯಯನ ಎಂದರೆ ಆ ಸಮಾಜದ ಜನರ ಜೀವನ ವಿಧಾನದ ಅಧ್ಯಯನ ಎಂದು ಹೇಳಬಹುದು. ಸಮಾಜ ಮತ್ತು ಸಂಸ್ಕೃತಿ ಅಂಥ ಅವಿನಾಭಾವ ಸಂಬಂಧದಿಂದೊಡಗೂಡಿದೆ. ಸಮಾಜದ ಹೊರತು ಸಂಸ್ಕೃತಿಗೆ ಅಸ್ತಿತ್ವ ಇಲ್ಲ. ಸಮಾಜ ಎಂದಾಗ ಅದಕ್ಕೊಂದು ಸಂಸ್ಕೃತಿ ಇದ್ದೇ ಇದೆ... ಒಂದು ಪ್ರದೇಶದ ಒಂದು ಜನಾಂಗದ ಜೀವನ ಕ್ರಮದ ಸವಿವರವಾದ ಅಧ್ಯಯನವು ಆ ಜನಾಂಗದ ಸಂಸ್ಕೃತಿಯ ಅಧ್ಯಯನ ಎನಿಸುತ್ತದೆ.

1.4 ಅಧ್ಯಾಯನದ ಉದ್ದೇಶ ಮತ್ತು ವ್ಯಾಪ್ತಿ:

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಬ್ರಾಹ್ಮಣ ಸಮುದಾಯಗಳಲ್ಲಿ ಶಿವಳ್ಳಿ ಬ್ರಾಹ್ಮಣರದ್ದು ದೊಡ್ಡ ಸಮುದಾಯ. ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ, ಅವರು ಸಾಧಿಸಿರುವ ಸಾಧನೆಗಳು ಅತಿಶಯವಾದುವು. ಇವರ ಸಾಧನೆ ಸಿದ್ಧಿಗಳು ರಾಜ್ಯದ ಎಲ್ಲೆಯನ್ನು ಮೀರಿ ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದಲ್ಲಿ ಹಬ್ಬಿಕೊಂಡಿದೆ. ಕೌಟುಂಬಿಕವಾಗಿ ಸಂಸ್ಕೃತಿಯ ಮೌಲ್ಯಗಳನ್ನು ಅಳವಡಿಸಿಕೊಂಡು ಒಟ್ಟೊಟ್ಟಿಗೆ ಅನ್ಯ ಸಂಸ್ಕೃತಿಯನ್ನು ಸ್ವೀಕರಿಸಿಕೊಂಡು ಬಾಳುವುದನ್ನು ಕಾಣಬಹುದು. ಭಾರತೀಯ ಸಂಸ್ಕೃತಿಯ ಎಲ್ಲ ಉತ್ಕೃಷ್ಟವಾದ ಅಂಶಗಳನ್ನು ಮೈಗೂಡಿಸಿಕೊಂಡು ಎಲ್ಲರೊಂದಿಗೆ ಸಮಭಾವದಿಂದ, ಸಾಮರಸ್ಯದಿಂದ ಬಾಳುವ ವಿಶಿಷ್ಟವಾದ ಗುಣಗಳನ್ನು ಇವರು ಹೊಂದಿದ್ದಾರೆ.

ದೇಶದ ಪ್ರತಿಯೊಂದು ಸಮುದಾಯವು ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಬಂದಿದೆ. ಹಾಗೆ ಬೆಳೆಯುತ್ತಾ ಬರಬರುತ್ತಾ 'ಜಾತಿ' ಯಾಗಿ ಗುರುತಿಸಲ್ಪಟ್ಟಿದೆ. ಅಂತೆಯೇ ಆಚಾರ ವಿಚಾರಗಳಿಂದ ಪ್ರತ್ಯೇಕ ಗುಣಲಕ್ಷಣಗಳನ್ನುಳ್ಳ ಸಮುದಾಯವು 'ಜಾತಿ' ಎಂಬ ಹೆಸರಿನಲ್ಲಿ ಗುರುತಿಸಲ್ಪಟ್ಟಿದೆ. ಶಿವಳ್ಳಿ ಬ್ರಾಹ್ಮಣಸಮುದಾಯ ಬ್ರಾಹ್ಮಣ ಸಮುದಾಯದಲ್ಲಿ ಒಂದು ಪ್ರಭೇದ. ಇತರ ಬ್ರಾಹ್ಮಣರ ಹಾಗೆಯೇ ವೈದಿಕ ಧರ್ಮದ ಸಂಪ್ರದಾಯಗಳಲ್ಲಿ ನಿಷ್ಣರಾದವರು.) ವೈದಿಕ ಧರ್ಮದ ಅನುಸರಣೆಯಲ್ಲಿ ಬೇರೆಯವರಿಗೆ ಸಹಾಯಕರಾಗುತ್ತಾ ತಾವೂ ಪಾಲಿಸುತ್ತಾ ಮಾರ್ಗದರ್ಶನ ನೀಡುತ್ತಿದ್ದಾರೆ.

ಅರ್ಚಕ ವೃತ್ತಿ, ಆಧ್ಯಾತ್ಮ, ಅಧ್ಯಾಪನ, ಆಯುರ್ವೇದ, ಪೌರೋಹಿತ್ಯ, ಕೃಷಿ, ಜ್ಯೋತಿಷ್ಯ ಕ್ಷೇತ್ರಗಳನ್ನು ದಾಟಿ, ಕಲೆ, ವಿಜ್ಞಾನ, ವಾಣಿಜ್ಯ, ಉದ್ಯಮ, ಆಡಳಿತ, ಸಾಹಿತ್ಯ, ತಂತ್ರಜ್ಞಾನ, ವೈದ್ಯಕೀಯ ಮುಂತಾದ ವಿವಿಧ ಕ್ಷೇತ್ರಗಳ ಕಡೆಗೆ ಒಲವನ್ನು ತೋರಿಸಿ ತಮ್ಮದೇ ಆದ ಛಾಪನ್ನು ಮೂಡಿಸುತ್ತಿದ್ದಾರೆ. ಕಾಲದ ಪರಿವರ್ತನೆಯೊಂದಿಗೆ ಶಿವಳ್ಳಿಯವರೂ ತಮ್ಮ ಆಚಾರ-ವಿಚಾರ ಮಾರ್ಪಾಡು ಮಾಡುತ್ತಾ ಬಂದಿದ್ದಾರೆ. ಆಚರಣೆ, ಸಂಪ್ರದಾಯ, ಕಟ್ಟುಕಟ್ಟಳೆಗಳಲ್ಲಿ ಪರಿವರ್ತನೆಗಳು ಆಗಿವೆ. ಇವರ ವೈದಿಕ ಆಚರಣೆಗಳು ಬ್ರಾಹ್ಮಣೇತರ ವರ್ಗದವರ ಮೇಲೆ ಪ್ರಭಾವ ಬೀರಿದೆ. ಅಂತೆಯೇ ಭಾಷಾ ಬಳಕೆ ಆಚರಣೆಗಳಲ್ಲಿ ಬ್ರಾಹ್ಮಣೇತರರ ಪ್ರಭಾವವೂ ಶಿವಳ್ಳಿಯವರ ಮೇಲೆ ಆಗಿರುವುದನ್ನು ಗಮನಿಸಬಹುದು. ಎಲ್ಲ ವರ್ಗದ ಒಟ್ಟಿಗೆ ಸಾಮರಸ್ಯದ ಜೀವನವನ್ನು ನಡೆಸುತ್ತಾ ಬಂದಿರುತ್ತಾರೆ. ಧಾರ್ಮಿಕ ನೆಲೆಗಟ್ಟಿನಲ್ಲಿ ಅದು ಅನಿವಾರ್ಯ. ವಿಶೇಷವಾಗಿ ಈ ಕ್ಷೇತ್ರದಲ್ಲಿ ಇವರ ಪ್ರಭಾವವಿರುವುದನ್ನು ಗಮನಿಸಬಹುದು. ಹೀಗೆ ಹಲವು ವಿಷಯಗಳನ್ನು ಚರ್ಚಿಸುವ, ಅರಿತುಕೊಳ್ಳುವ, ಅಂತೆಯೇ ಮುಂದಿನ ಹೆಜ್ಜೆಗಳನ್ನು ತಿಳಿದುಕೊಳ್ಳುವ ಅಗತ್ಯವಿರುವುದರಿಂದ 'ಶಿವಳ್ಳಿ' ಯವರ ಬಗ್ಗೆ ಅಧ್ಯಯನ ಮಾಡುವ ಅಗತ್ಯತೆ ಇದೆ.

1.5 ಶಿವಳ್ಳಿ ಬ್ರಾಹ್ಮಣರ ಬಗೆಗೆ ಈವರೆಗೆ ನಡೆಸಿದ ಅಧ್ಯಯನದ ಸಮೀಕ್ಷೆ

ಮಂಜೇಶ್ವರ ಗಣಪತಿ ರಾವ್ ಐಗಳವರ– 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ' ಕೃತಿಯಲ್ಲಿ ಬ್ರಾಹ್ಮಣರ ಬಗೆಗೆ ಪ್ರಾಸಂಗಿಕವಾಗಿ ಪ್ರಸ್ತಾಪಿಸಿದ್ದಾರೆ. ಪ್ರಮುಖ ಇತಿಹಾಸ ಸಂಶೋಧಕರಾದ ಡಾ.ಪಿ.ಗುರುರಾಜ ಭಟ್‌ರವರು ತಮ್ಮ 'ತುಳುನಾಡು' (1963) ಎಂಬ ಸಂಶೋಧನ ಗ್ರಂಥದಲ್ಲಿ ತುಳುನಾಡಿಗೆ ವಲಸೆ ಬಂದ ಬ್ರಾಹ್ಮಣರ ಬಗ್ಗೆ ಮಹತ್ವದ ಚರ್ಚೆ ನಡೆಸಿದ್ದಾರೆ. ಹೊರಗಿನ ಪ್ರದೇಶಗಳಿಂದ ವಲಸೆ ಬಂದ ಬ್ರಾಹ್ಮಣರಿಂದಾಗಿ ಈ ಪರಿಸರದ ಸ್ಥಾನಿಕ ಬ್ರಾಹ್ಮಣರು ಮೂಲೆ ಗುಂಪಾದ ಕ್ರಮದ ಬಗ್ಗೆ ವಿವರಿಸಿದ್ದಾರೆ. ಬ್ರಾಹ್ಮಣರ ವಲಸೆಯ ದೃಷ್ಟಿಯಿಂದ ಈ ಕೃತಿ ಮುಖ್ಯವಾಗುತ್ತದೆ.

* ದ.ಕ. ಜಿಲ್ಲೆಯ ಚರಿತ್ರೆ ಮತ್ತು ಭೂತಾಳ ಪಾಂಡ್ಯನ ಅಳಿಯಕಟ್ಟು ಪುಸ್ತಕದಲ್ಲಿ ಎನ್.ವಿ. ಶೀನಪ್ಪ ಹೆಗ್ಗಡೆಯವರು –ಮಯೂರವರ್ಮನ ವೃತ್ತಾಂತ ಹೇಳುತ್ತಾ ಅಹೀ ಕ್ಷೇತ್ರದಿಂದ ಉತ್ತಮಕುಲದ ಬ್ರಾಹ್ಮಣರನ್ನು ಕರೆಸಿ ಋಷಿಯಾಜ್ಞೆಯಂತೆ ಹಾಗೂ

ಶಂಕರಾಚಾರ್ಯರ ನಿಬಂಧನೆಗಳಿಗೊಳಗಾಗಿ ದೇವಾಲಯಗಳನ್ನು ನಿರ್ಮಿಸಿ ಅಲ್ಲಲ್ಲಿ ಪೂಜಾವಿನಿಯೋಗಗಳನ್ನು ಬ್ರಾಹ್ಮಣರಿಗೆ ಕೊಟ್ಟು ಅವರನ್ನು ಗುರು ಮರ್ಯಾದೆಯಿಂದ ಕಾಣುವಂತೆ ಆಜ್ಞೆಯಿತ್ತ ಮಾಹಿತಿಯನ್ನು ನೀಡುತ್ತಾರೆ. ಬ್ರಾಹ್ಮಣರಿಗೆ ವಿಭಾಗಿಸಿಕೊಟ್ಟ ಗ್ರಾಮಗಳ ವಿವರಗಳನ್ನು ಕೊಡುತ್ತಾರೆ.

* 1923 ರಲ್ಲಿ ಪ್ರಕಟಗೊಂಡ ಮಂಜೇಶ್ವರ ಗಣಪತಿ ರಾವ್ ಐ ಗಳ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ' ಪುಸ್ತಕದಲ್ಲಿ ತುಳುನಾಡಿನ ಇತಿಹಾಸದ ಬಗ್ಗೆ ವಿವರಣೆ ಕೊಡುತ್ತಾ, ತುಳು ಬ್ರಾಹ್ಮಣರ ಹತ್ತಿರ ದೊರೆತ 'ಮಯೂರವರ್ಮ ಚರಿತ್ರೆ' ಪುಸ್ತಕವನ್ನು ಆಧರಿಸಿ ಮಯೂರವರ್ಮನು ಹಾಗೂ ಅವನ ಮಗ ಚಂದ್ರಾಂಗದನೂ ತುಳುನಾಡಿನ 32 ಗ್ರಾಮಗಳಲ್ಲಿ ಉತ್ತರಭಾರತದ ಅಹಿಕ್ಷೇತ್ರದಿಂದ ಬರಮಾಡಿಕೊಂಡ ಬ್ರಾಹ್ಮಣ ಕುಟುಂಬಗಳನ್ನು ನೆಲೆಗೊಳಿಸಿದರೆಂದು ಪ್ರತಿಪಾದಿಸಿದ್ದಾರೆ.

* 1948 ರಲ್ಲಿ ಕನ್ನಡದ ಇತಿಹಾಸ (ತುಳುವ ಚರಿತ್ರೆ) ಪುಸ್ತಕದಲ್ಲಿ ಕೇಶವಕೃಷ್ಣ ಕುಡ್ವ – ಕಾರ್ಕಳ ಇವರು "ಮಯೂರವರ್ಮ ಕಥೆ ಎನ್ನುವ ಲೇಖನದಲ್ಲಿ ಅಹಿಚ್ಛತ್ರದಿಂದ ಪಂಚದ್ರಾವಿಡ ಬ್ರಾಹ್ಮಣರನ್ನು ಮಯೂರವರ್ಮ ತುಳುನಾಡಿಗೆ ಕರೆತಂದನೆಂಬ ಅಭಿಪ್ರಾಯವನ್ನು ಹೊಂದಿದ್ದಾರೆ.

* 'ತುಳುನಾಡು' ಕೃತಿಯಲ್ಲಿ ಪಿ. ಗುರುರಾಜ ಭಟ್ಟರು ಅಹಿಚ್ಛತ್ರದ ಬ್ರಾಹ್ಮಣರನ್ನು ಕರೆಸಿ ವಸತಿಗೊಳಿಸಿದ ವಿಚಾರ ಹನ್ನೆರಡನೆಯ ಶತಮಾನಕ್ಕಿಂತ ಮೊದಲು ಉಲ್ಲೇಖವಿದ್ದರೂ ಮಯೂರವರ್ಮನ ಕುರಿತಾಗಲೇ ಆತನಿಂದ ಗ್ರಾಮಗಳು ದಾನ ಕೊಡಲ್ಪಟ್ಟ ವಿಚಾರವಾಗಲೀ ತಿಳಿದು ಬರುವುದಿಲ್ಲವೆಂದು ಅಭಿಪ್ರಾಯ ಪಡುತ್ತಾರೆ.

* ಶಿವಳ್ಳಿ ಬ್ರಾಹ್ಮಣರ ಮೂಲ ಮತ್ತು ಕುಲನಾಮ ಲೇಖನದಲ್ಲಿ ಪು. ಶ್ರೀನಿವಾಸ ಭಟ್ ಕಟೀಲರು

ತುಳುನಾಡನ್ನು ಒಂದುಸಾವಿರವರ್ಷ ಆಳಿದ್ದ ಆಳುಪವಂಶದ ಅರಸರ ಆಡಳಿತವನ್ನು ಗಮನಿಸಿದಾಗ ಅವರ ಕಾಲದಲ್ಲಿ ಬ್ರಾಹ್ಮಣರಿಗೆ ಭೂದಾನ ಮಾಡಿದ ಮಾಹಿತಿ 'ಗುಂಟೂರು' ತಾಮ್ರ ಶಾಸನಗಳ ಮೂಲಕ ಲಭ್ಯವಾಗುತ್ತದೆ. ಉಡುಪಿ ತಾಲೂಕಿನ 'ವಡ್ಡರ್ಸೆ' ಶಿಲಾಶಾಸನ 17 ಜನ ಬ್ರಾಹ್ಮಣರಿಗೆ ಭೋಜನ ವ್ಯವಸ್ಥೆ ಮಾಡಿದನ್ನು ತಿಳಿಸುತ್ತದೆ.

ಶೈವ, ವೈಷ್ಣವರೆಂಬ ಭೇದವು ಬಹಳ ಹಿಂದಿನಿಂದಲೂ ಇತ್ತು ಎಂಬ ಅಭಿಪ್ರಾಯಕ್ಕೆ ಸಮರ್ಥನೆಗಳು ಲಭ್ಯವಾಗುತ್ತಿಲ್ಲ. ಶಿವಳ್ಳಿ ಬ್ರಾಹ್ಮಣರೆಂದರೆ ಮಧ್ವಾಚಾರ್ಯರ ಮತವನ್ನು ಅನುಸರಿಸಿದವರೆಂಬ ಕಲ್ಪನೆಯಿದೆ. ಇದು ಸರಿಯಲ್ಲ. ಶಿವಳ್ಳಿಯವರೆಲ್ಲ ಮಾಧ್ವರಲ್ಲ.

ಸ್ಮಾರ್ತ ಶಿವಳ್ಳಿ, ಭಾಗವತ ಸಂಪ್ರದಾಯದ ಶಿವಳ್ಳಿ, ನಾಡ ಶಿವಳ್ಳಿ, ಕಂದಾವರ ಶಿವಳ್ಳಿ ಎಪ್ಪತ್ತರ ಶಿವಳ್ಳಿ, ನಲ್ವತ್ತರ ಶಿವಳ್ಳಿ, ಮುಂತಾದ ಪಂಗಡಗಳಿವೆ.

* ತಾಳಗುಂದ ಅಗ್ರಹಾರಿಂದ 5ಕಿ.ಮೀ ದೂರದಲ್ಲಿ (ಶಿರಾಳಕೊಪ್ಪದ ಬಳಿ) ಶಿವಳ್ಳಿ ಎಂಬ ಊರಿದೆ. ಕದಂಬ ಅರಸರ ಕಾಲದಿಂದಲೂ ಪ್ರಸಿದ್ಧವಾಗಿತ್ತು. ಹೂ-ಪ್ರಶ್ನೆ ಕೇಳುವ ಸಂಪ್ರದಾಯಕ್ಕೆ ಪ್ರಸಿದ್ಧವಾದ ಆಂಜನೇಯ ದೇವಾಲಯವಿದೆ. ಕ್ರಿ.ಶ.516 -540 ಕದಂಬ ಇಮ್ಮಡಿ ಕೃಷ್ಣವರ್ಮನ ಕಾಲದ ಎರಡು ತಾಮ್ರ ಶಾಸನಗಳು ಮಾಹಿತಿ ಒದಗಿಸುತ್ತವೆ.

* ಶಿರಸಿ ತಾಲೂಕಿನಲ್ಲಿ ಶಿವಳ್ಳಿ ಎಂಬ ಗ್ರಾಮ ಶಿವಳ್ಳಿ ಸೀಮೆಯೆಂದೇ ಪ್ರಸಿದ್ಧವಾಗಿದೆ. ತೀರ್ಥಹಳ್ಳಿ ತಾಲೂಕಿನಲ್ಲಿಯೂ ಶಿವಳ್ಳಿಯಿದೆ.

*ಉತ್ತರ ಕನ್ನಡ ಜಿಲ್ಲೆಯ ಶಿರಾಲಿಯ ಚಿತ್ರಾಪುರಮಠದ ವಸ್ತು ಸಂಗ್ರಾಹಾಲಯದಲ್ಲಿರುವ ಹಳದಿಪುರ ತಾಮ್ರ ಪಟಗಳೆಂದು ಪ್ರಸಿದ್ಧಿ ಪಟ್ಟ ಶಾಸನವು, ಪಲ್ಲವ ಕುಲದ ಗೋಪಾಲ ದೇವನೆಂಬ ಅರಸನು ಉತ್ತರಕನ್ನಡದ ಶಿವಳ್ಳಿಯನ್ನು ರಾಜಧಾನಿ ಮಾಡಿಕೊಂಡು ಆಳುತ್ತಿದ್ದನೆಂದು ತಿಳಿಸುತ್ತದೆ. ಇದರ ಕಾಲ 6ನೇ ಶತಮಾನದ ಅಂತ್ಯಪಾದ.

* ಹೊನ್ನಾವರ ತಾಲೂಕಿನ ಕೆಕ್ಕಾರ ಗ್ರಾಮದಲ್ಲಿರುವ ಶಿಲಾಶಾಸನವು ಕೇಕೆಯ ವಂಶದ ಅಣ್ಣಿಯರಸನ (ಕ್ರಿ.ಶ800) ರಾಜ್ಯದ ಗಡಿಯನ್ನು ಸೂಚಿಸಿದಾಗ 'ಶಿವಳ್ಳಿ' ಯನ್ನು ಹೆಸರಿಸುತ್ತದೆ.

* ಮಂಡ್ಯ ಜಿಲ್ಲೆಯಲ್ಲಿ 'ಶಿವಳ್ಳಿ' ಎಂಬ ಊರಿದೆ.

*ಗೋವೆಯ ಬಾರ್ದೆಶ್ ತಾಲೂಕಿನ ಮಾಪ್ಸಾ ಎಂಬ ಊರಿಂದ ನಾಲ್ಕು ಮೈಲು ಉತ್ತರ-ಪಶ್ಚಿಮಕ್ಕೆ 'ಶಿವಳ್ಳಿ' ಎಂಬ ಸ್ಥಳವಿದೆ.

ಒಂದು ಊರಿಂದ ವಲಸೆ ಹೋದವರು ನೆಲೆನಿಂತ ಊರನ್ನು ಮೂಲಸ್ಥಾನದ ಹೆಸರಿನಿಂದ ಕರೆಯುತ್ತಿದ್ದರು. ಕದಂಬ ರಾಜರ ಕೇಂದ್ರ ಬನವಾಸಿ. ಇದೇ ಹೆಸರಿನ ಇನ್ನೊಂದು ಊರು ಆಂಧ್ರ ಪ್ರದೇಶದ ಆದಿವಾಸಿ ತಾಲೂಕಿನಲ್ಲಿದೆ. ಅವರ ಆಡಳಿತ ಆ ಪ್ರದೇಶದಲ್ಲಿದ್ದಾಗ ಆವೂರು ನಿರ್ಮಾಣವಾಗಿರುವ ಸಾಧ್ಯತೆಯಿದೆ. ಶಿವಳ್ಳಿಯವರ ಮೂಲದ ಬಗ್ಗೆ ಉತ್ತರ ಪಾಂಚಾಲ, ಅಹಿಚ್ಛತ್ರ, ಶೈವಾಲಿ, ಇಂತಹ ಸ್ಥಳಗಳ ಹೆಸರೂ ಕೇಳಿಬರುತ್ತಿದೆ. ಕದಂಬರು ಬ್ರಾಹ್ಮಣ್ಯಕ್ಕೆ ಪ್ರೋತ್ಸಾಹವಿತ್ತರೆಂಬುದರಲ್ಲಿ ಎರಡು ಮಾತಿಲ್ಲ. ತಾಳಗುಂದ ಅಗ್ರಹಾರಕ್ಕೆ ಕದಂಬ ಪೂರ್ವದ ಶಾತವಾಹನರ ಕಾಲದ ದಾಖಲೆಗಳಿವೆ. ಕದಂಬರು ತಮ್ಮ ಮೂಲಪುರುಷ ಬ್ರಾಹ್ಮಣನಾಗಿದ್ದ ಕಾರಣದಿಂದ ಅಗ್ರಹಾರಗಳ ಅಭಿವೃದ್ಧಿಗೆ ಅಧಿಕ ಒಲವು ತೋರಿಸಿದ್ದಾರೆ. ತುಳುನಾಡಿನ ಆಳುಪ ಚಕ್ರವರ್ತಿಗಳ ಆಧಿಪತ್ಯಕ್ಕೆ ಬನವಾಸಿ ಮಂಡಲವು ಒಳಪಟ್ಟಾಗ ಬ್ರಾಹ್ಮಣರ ವಲಸೆ ತುಳುನಾಡಿಗೆ ವಿಶೇಷವಾಗಿ ಬಂದಿರುವ ಸಾಧ್ಯತೆಯಿದೆ.

ಜನಜನಿತವಾದ ನಂಬಿಕೆ, ಗ್ರಾಮಪದ್ಧತಿ, ಮತ್ತು ಸ್ಕಂದಪುರಾಣದ ಸಹ್ಯಾದ್ರಿ ಖಂಡ-ಇವುಗಳ ಪ್ರಕಾರ ಬ್ರಾಹ್ಮಣರು ಅಹಿಚ್ಛತ್ರದಿಂದ ಇಲ್ಲಿಗೆ ಬಂದವರು. ಕದಂಬ ರಾಜ ಮಯೂರವರ್ಮ ಸ್ವತಃ ತಾನೇ ಬ್ರಾಹ್ಮಣರನ್ನು ಇಲ್ಲಿಗೆ ಕರೆತಂದು ನೆಲೆಗೊಳಿಸಿದ್ದ. ಅನಂತರ ಎರಡು ಬೇರೆ ಬೇರೆ ಕಾಲಗಳಲ್ಲಿ ಬ್ರಾಹ್ಮಣರನ್ನು ಇಲ್ಲಿಗೆ ಕರೆತಂದು 32 ವಿವಿಧ ಸ್ಥಳಗಳಲ್ಲಿ ನೆಲೆಗೊಳಿಸಲಾಗಿದೆ. ಈ ಬಗೆಗಿನ ಲಭ್ಯವಿರುವ ಎಲ್ಲಾ ಮಾಹಿತಿಗಳನ್ನು ಪರಾಮರ್ಶಿಸಿದ ಡಾ. ಪಿ. ಗುರುರಾಜಭಟ್ಟರು ದಕ್ಷಿಣ ಕನ್ನಡಕ್ಕೆ ಬ್ರಾಹ್ಮಣರ ವಲಸೆ

ಶಿವಮೊಗ್ಗ ಜಿಲ್ಲೆಯ ತಾಳಗುಂದ (ಸ್ಥಾನಕುಂದೂರು) ಮತ್ತು ಕುಪ್ಪಟೂರುಗಳಿಂದ ಬಂದಿರಬಹುದೆಂದು ಅಭಿಪ್ರಾಯಪಡುತ್ತಾರೆ. ಆದರೆ ಇದಕ್ಕೆ ನೇರ ಆಧಾರಗಳಿಲ್ಲ. ಅಲ್ಲಗೆಳೆಯುವಂತೆಯೂ ಇಲ್ಲ.

ಪ್ರಾಚೀನ ಕದಂಬ ಶಾಸನಗಳ ಪ್ರಕಾರ ಸ್ಥಾನ ಕುಂದೂರು (ತಾಲಗುಂದ) ಅತ್ಯಂತ ಪ್ರಖ್ಯಾತವಾದ ಬ್ರಹ್ಮಪುರಿ. ತನ್ನ ರಾಜ್ಯಕ್ಕೆ ವೇದ ವಿದ್ಯಾ ಪಾರಂಗತರೂ, ವೈದಿಕ ಕರ್ಮಾನುಷ್ಠಾನ ಪರಿಣತರೂ ಆದ ಬ್ರಾಹ್ಮಣೋತ್ತಮರವನ್ನು ಮಯೂರವರ್ಮನು ಕರೆತಂದಾಗ ಪ್ರಥಮವಾಗಿ ಇಲ್ಲಿ ನೆಲೆಗೊಳಿಸಿರಬಹುದು. ಅನಂತರ ಕರಾವಳಿ ಉದ್ಧಕ್ಕೂ ನೆಲೆಗೊಳಿಸಿರಬೇಕು. ಹೀಗೆ ನೆಲೆಗೊಂಡ ಬ್ರಾಹ್ಮಣ ಕುಟುಂಬಗಳು ತಮ್ಮ ಕಾರ್ಯವನ್ನು ನಿರ್ವಹಿಸಿಕೊಳ್ಳುತ್ತಾ ಸ್ಥಳಿಯರೊಂದಿಗೆ ಬೆರೆತು ಇಲ್ಲಿಯ ತುಳು ಭಾಷೆಯನ್ನು ತಮಗೆ ಒಗ್ಗಿಕೊಳ್ಳುವ ರೀತಿಯಲ್ಲಿ ಬಳಸಿಕೊಂಡಿರಬೇಕು. ಶಿವಳ್ಳಿಬ್ರಾಹ್ಮಣರ ತುಳುವಿಗೂ ಇಲ್ಲಿಯವರ ತುಳುವಿಗೂ ವ್ಯತ್ಯಾಸವಿದೆ. ಶಿವಳ್ಳಿ ಬ್ರಾಹ್ಮಣರ ತುಳುವಿನಲ್ಲಿ ಸಂಸ್ಕೃತದ ಪ್ರಭಾವವನ್ನು ಗುರುತಿಸಬಹುದು, ಅಂತೆಯೇ ತುಳು ಜನರ ಸಂಸ್ಕೃತಿ – ಭಾಷೆ–ಆರಾಧನಾ ಪದ್ಧತಿ ಶಿವಳ್ಳಿ ಬ್ರಾಹ್ಮಣರ ಮೇಲೆ ಪ್ರಭಾವ ಬೀರಿರುವುದನ್ನು ಅಲ್ಲಗೆಳೆಯುವಂತಿಲ್ಲ.

'ಶಿವಳ್ಳಿ' ಸ್ಥಳವಾಚಕ ಪದ. ಶಿವಳ್ಳಿಯಲ್ಲಿ ನೆಲೆಸಿದವರಿಗೆ ಈ ಹೆಸರು ಬಂತು. ಎನ್ನುವುದಕ್ಕಿಂತ ಅವರು ನೆಲೆಸಿದ್ದರಿಂದ ಆ ಹೆಸರು ಬಂತೆನ್ನುವುದು ಹೆಚ್ಚು ಸೂಕ್ತ[1] ಎನ್ನುವ ಅಭಿಪ್ರಾಯವನ್ನು ಹೊಂದಿದ್ದಾರೆ.

---

1. ಶ್ರೀನಿವಾಸ ಭಟ್ಟ ಪು. ಕಟೀಲು – ಶಿವಳ್ಳಿ ಬ್ರಾಹ್ಮಣರ ಮೂಲ ಮತ್ತು ಕುಲನಾಮಗಳು ಶಿವಳ್ಳಿ ಬ್ರಾಹ್ಮಣರು ಭಾಗ–1, 2001, ಪುಟ– 197

ಅಧ್ಯಾಯ ಎರಡು– ವೈದಿಕರು ಮತ್ತು ತುಳುನಾಡು

2.1 ಬ್ರಾಹ್ಮಣರ ಮೂಲ:

ತುಳುನಾಡಿಗೆ ಬ್ರಾಹ್ಮಣರು ಹೊರಗಿನಿಂದಲೇ ಬಂದವರು ಎಂಬ ಅಭಿಪ್ರಾಯದಲ್ಲಿ ವಿದ್ವಾಂಸರಲ್ಲಿ ಒಮ್ಮತವಿದೆ. ಆದರೆ ಬ್ರಾಹ್ಮಣರ ಮೂಲಸ್ಥಳ ಮತ್ತು ವಲಸೆ ಯಾವಾಗ ಪ್ರಾರಂಭವಾಯಿತು ಎಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ. 'ಸ್ಕಂದ ಪುರಾಣದ ಭಾಗವಾಗಿ ಬರುವ ಸಹ್ಯಾದ್ರಿ ಖಂಡದ ಉತ್ತರಾರ್ಧದಲ್ಲಿ ಮಯೂರ ಶರ್ಮನು 'ಅಹಿಚ್ಛತ್ರ'ದಿಂದ ಬ್ರಾಹ್ಮಣರನ್ನು ಅಬ್ರಾಹ್ಮಣ್ಯವಿರುವ ತುಳುನಾಡಿಗೆ ತಂದು 32 ಗ್ರಾಮಗಳಲ್ಲಿ ನೆಲೆಸುವಂತೆ ಮಾಡಿದ' ಎಂಬ ಅಭಿಪ್ರಾಯವಿದೆ. (ಕೋಟ ಕಾರಂತ 1958.9)

ಬ್ರಾಹ್ಮರ ಮೂಲದ ಬಗ್ಗೆ ಎದ್ದ ಅನೇಕ ವಿದ್ವಾಂಸರ ವಾದವಿವಾದಗಳನ್ನು ಸಂಗ್ರಹಿಸಿ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ ಗುರುರಾಜ ಭಟ್ಟರ ಅಭಿಪ್ರಾಯ ಮುಖ್ಯ ಎನಿಸುತ್ತದೆ. ಅವರ ಪ್ರಕಾರ ಬ್ರಾಹ್ಮಣರ ಪೋಷಕರಾಗಿದ್ದ ಕದಂಬರ ಕಾಲದಲ್ಲಿ ಶಿವಮೊಗ್ಗ ಜಿಲ್ಲೆಯ ಸ್ಥಾನ ಕುಂದೂರು ಮತ್ತು ಕುಪ್ಪತ್ತೂರಿನ ಅಗ್ರಹಾರಗಳು ಪ್ರಸಿದ್ಧಿ ಪಡೆದಿದ್ದವು. ಹೊರಗಿನ ಚೋಳರ ಧಾಳಿಯ ನೇರ ಪರಿಣಾಮದಿಂದ ಮತ್ತು ಕದಂಬ ವಂಶದೊಳಗೆ ಹಕ್ಕು ಸಂಬಂಧವಾದ ಕಲಹವು ಉಂಟಾಗಿ ಗೊಂದಲದ ಪರಿಸ್ಥಿತಿ ನಿರ್ಮಾಣವಾಯಿತು. ಸೈನಿಕರು ಕುಪ್ಪತ್ತೂರು ಅಗ್ರಹಾರಗಳಿಗೆ ಧಾಳಿ ಮಾಡಿದುದರ ಪರಿಣಾಮವಾಗಿ ಕದಂಬ ರಾಜ್ಯದಿಂದ ತುಳುನಾಡಿಗೆ ಬ್ರಾಹ್ಮಣರು ವಲಸೆ ಬಂದರು. (ಇದು ಬ್ರಾಹ್ಮಣರ 3ನೇ ವಲಸೆ) ಈ ವಲಸೆ ಕ್ರಿ.ಶ. 11ನೇ ಶತಮಾನದ ಮಧ್ಯಕಾಲದಿಂದಾರಂಭವಾಗಿ ಅಂತ್ಯದವರೆಗೆ ಮುಂದುವರಿದಿರಬೇಕು ಎಂದು ಗುರುರಾಜ ಭಟ್ಟರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಗೊಳಿಸುತ್ತಾರೆ.[1]

ಬ್ರಾಹ್ಮಣರ ವಲಸೆಯ ಮೂಲ ಸ್ಥಾನ ಮತ್ತು ಕಾಲವನ್ನು ನಿಖರವಾಗಿ ಗುರುತಿಸುವುದು ಕಷ್ಟವಾಗುತ್ತದೆ. ಬಾಹ್ಯಧಾಳಿಗೆ ತುತ್ತಾಗೆ ಮೂರನೇ ವಲಸೆ ಬಂದ ಬ್ರಾಹ್ಮಣರು ಶಿವಳ್ಳಿ ಬ್ರಾಹ್ಮಣರೇ ಎಂದು ಖಚಿತವಾಗಿ ಹೇಳಲು ಬರುವುದಿಲ್ಲ.

ವಾದಗಳೆಲ್ಲ ಬ್ರಾಹ್ಮಣ ವಲಸೆಯ ಸಂಕೀರ್ಣ ಸ್ವರೂಪವನ್ನು ತಿಳಿಸುತ್ತದೆ. ಗುರುರಾಜ ಭಟ್ಟರು ಊಹಿಸಿದಂತೆ ಕದಂಬ ಮತ್ತು ಆಳುಪರ ಸೌಹಾರ್ದ ಸಂಬಂಧದ ಹಿನ್ನೆಲೆಯಲ್ಲೇ ಈ ವಲಸೆ ಪ್ರಾಮುಖ್ಯ ಪಡೆದಿದೆ. ಸ್ಥಾನ ಕುಂದೂರು (ತಾಳಗುಂದ) ಮತ್ತು ಕುಪ್ಪತ್ತೂರು ಅಗ್ರಹಾರದಿಂದ ಹಂತ ಹಂತವಾಗಿ ತುಳುನಾಡಿಗೆ ವಲಸೆ ಬಂದರು. ಅವರೇ ಪ್ರಸ್ತಾಪಿಸಿದ ಮೂರನೇ ವಲಸೆ ಎಂಬ ಮಾತು ಬ್ರಾಹ್ಮಣರು ತುಳುನಾಡಿಗೆ ಏಕ ಕಾಲದಲ್ಲಿ ಒಟ್ಟಿಗೇ ಬಂದವರಲ್ಲ ಎಂಬುವುದನ್ನು ಧ್ವನಿಸುತ್ತದೆ. ಭಿನ್ನಕಾಲ ಮತ್ತು ಪರಿಸ್ಥಿತಿಗಳಲ್ಲಿ ಸ್ಥಳೀಯ ಜನರೊಂದಿಗಿನ ಹೊಂದಾಣಿಕೆಯ ಅನಿವಾರ್ಯತೆ ಈ ವಲಸೆ

1. ಗುರುರಾಜ ಭಟ್ಟ–ತುಳುನಾಡು 1963, ಪುಟ 94

ಬಂದ ಬ್ರಾಹ್ಮಣರಿಗೊದಗಿತ್ತು. ಮೂಲತಃ ಒಂದೇ ಮೂಲದವರಾದ ತುಳುನಾಡಿನ ಬ್ರಾಹ್ಮಣರು ಭಿನ್ನ ಭಿನ್ನ ಸ್ಥಳೀಯ ಸಂಸ್ಕೃತಿಯೊಂದಿಗೆ ಸೇರಿಕೊಂಡು ಸಾಂಸ್ಕೃತಿಕ ಭಿನ್ನತೆಯನ್ನು ಪಡೆಯಬೇಕಾಯಿತು. ಹೀಗೆ ಸ್ಥಳೀಯ ಸಂಸ್ಕೃತಿಯೊಂದರಲ್ಲಿ ಸೇರುವಿಕೆಯಿಂದ ಶಿವಳ್ಳಿ, ಹವ್ಯಕ, ಕೋಟ, ಕಂದಾವರ, ಮುಂತಾದ ಒಳವರ್ಗಗಳಾದವು. ಭಾಷಿಕ ನೆಲೆಯಲ್ಲೂ ಈ ವ್ಯತ್ಯಾಸವನ್ನು ಗುರುತಿಸಲು ಸಾಧ್ಯ. ತುಳುನಾಡಿನ ಬ್ರಾಹ್ಮಣರೆಲ್ಲ ವಿವಿಧ ಕಾಲ ಘಟ್ಟಗಳಲ್ಲಿ ತುಳುನಾಡಿಗೆ ವಲಸೆ ಬಂದವರು. ವಿವಿಧ ತಂಡಗಳಲ್ಲಿ ವಲಸೆ ಬಂದ ಬ್ರಾಹ್ಮಣರು ತಾವು ನೆಲೆಮಾರಿನಿಂದ ಪ್ರದೇಶದ ವೈಶಿಷ್ಟ್ಯತೆಗಳಲ್ಲಿ ಹೊಂದಿದರು. ಸ್ಥಳೀಯ ಸಂಸ್ಕೃತಿಯೊಂದಿಗೆ ಸೇರುವಿಕೆ ಮತ್ತು ಪ್ರಾದೇಶಿಕ ವೈಶಿಷ್ಟ್ಯಗಳ ಹಿನ್ನಲೆಯಲ್ಲಿ ಕಾಲಕ್ರಮೇಣ ವಲಸೆ ಬಂದ ಬ್ರಾಹ್ಮಣರ ಆಚಾರ ವಿಚಾರಗಳಲ್ಲಿ ಗುರುತಿಸುವಷ್ಟು ವ್ಯತ್ಯಯ ಉಂಟಾಗಿದೆ.

ಬ್ರಾಹ್ಮಣರು ಕರಾವಳಿ ಕರ್ನಾಟಕದ ಸಾಂಸ್ಕೃತಿಕ ಸಾಮಾಜಿಕ, ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದ್ದರು. ಶಿವಳ್ಳಿಯವರ ಕುರಿತು ವಿದ್ವಾಂಸರುಗಳು ಈವರೆಗೆ ಅಧ್ಯಯನಕ್ಕೆ ಆಧಾರವಾಗಿಟ್ಟುಕೊಂಡಿರುವುದು ಧಾರ್ಮಿಕ ಗ್ರಂಥಗಳು, ಸ್ಥಳೀಯರು ನಂಬಿಕೊಂಡು ಬರುತ್ತಿದ್ದ ಹೇಳಿಕೆಗಳು. ಶಿಲಾ ಶಾಸನಗಳು ಮತ್ತು ತಾಮ್ರ ಶಾಸನಗಳಿಗೆ ಅಧ್ಯಯನದ ಸಂದರ್ಭದಲ್ಲಿ ಹೆಚ್ಚಿನ ಮಹತ್ವಕೊಡಲಿಲ್ಲ. ಹೆಚ್ಚಿನ ಶಾಸನಗಳು ಬ್ರಾಹ್ಮಣರ ರಕ್ಷಣೆಯಲ್ಲಿದ್ದವು. ಈ ಶಾಸನಗಳನ್ನು ಅಧ್ಯಯನ ಮಾಡಿದರೆ ಕರ್ನಾಟಕದ ಬ್ರಾಹ್ಮಣರ ಸ್ಥಾನಮಾನ, ಚಟುವಟಿಕೆಗಳನ್ನು ತಿಳಿಯಬಹುದು. ಇಂತಹ ಶಾಸನಗಳನ್ನು ವಿಶ್ಲೇಷಿಸಿ ಅಧ್ಯಯನ ಮಾಡಿದಾಗ ಕರಾವಳಿ ಕರ್ನಾಟಕದ ಬ್ರಾಹ್ಮಣರ ಬಗ್ಗೆ ಕೆಲವು ಮಾಹಿತಿಗಳು ದೊರಕುತ್ತವೆ. ಶಾಸನಗಳು ಪ್ರತ್ಯಕ್ಷ ಆಕರಗಳು. ಶಾಸನಗಳ ಅಧ್ಯಯನದಿಂದ ಆಕಾಲೀನ ಸಾಮಾಜಿಕ ಇತಿಹಾಸ, ಭೌಗೋಳಿಕ ಸನ್ನಿವೇಶದ ಅರಿವು ಆರ್ಥಿಕ ಸ್ಥಿತಿಗಳ ಬಗ್ಗೆ ಮಾಹಿತಿಗಳು ಲಭ್ಯವಾಗುತ್ತವೆ. ಅಂತೆಯೇ ತುಳುನಾಡಿನಲ್ಲಿ ಬ್ರಾಹ್ಮಣರ ಬದುಕಿನ ಬಗ್ಗೆ ಜೀವನ ಕ್ರಮ ಮತ್ತು ಅನ್ಯವರ್ಗದವರೊಂದಿನ ಸಂಬಂಧದ ಬಗ್ಗೆ ಮಾಹಿತಿ ಲಭ್ಯವಾಗಬಹುದು.

2.4 ಶಾಸನಗಳಲ್ಲಿ ವ್ಯಕ್ತವಾದ ಕರಾವಳಿ ಕರ್ನಾಟಕದ ಬ್ರಾಹ್ಮಣರು

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಬ್ರಾಹ್ಮಣತ್ವವನ್ನು ತಿಳಿದುಕೊಳ್ಳುವಲ್ಲಿ ಕೋಟದ ಸಮೀಪವಿರುವ ವಡ್ಡರ್ಸೆ ಶಿಲಾ ಶಾಸನವನ್ನು ಗಮನಿಸುವ ಅಗತ್ಯವಿದೆ. ಕ್ರಿ.ಶ. 7ನೇ ಶತಮಾನದ ಮಧ್ಯಕ್ಕೆ ಸರಿ ಹೊಂದುವ ಈ ಶಾಸನದಲ್ಲಿ ಹದಿನೇಳು ಬ್ರಾಹ್ಮಣರಿಗೆ ಅಶನಾರ್ಥವಾಗಿ ಒಂದಿಷ್ಟು ಹಣವನ್ನು ದಾನ ನೀಡಲಾಯಿತೆಂದು ಹೇಳಿದೆ.[1] ಈ ಶಾಸನದ ಪ್ರಾಮುಖ್ಯತೆ ಏನೆಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬ್ರಾಹ್ಮಣರ ಮೊದಲ ಉಲ್ಲೇಖ ಬರುವುದು ಈ ಶಿಲಾ ದಾಖಲೆಯಲ್ಲಿ. ಆದರೆ ಇಲ್ಲಿ ಹೇಳಿದ ಬ್ರಾಹ್ಮಣರು ಯಾವ ಪಂಗಡದವರು, ಇವರ ಕುಲಗೋತ್ರಗಳೇನು ಎಂಬ ಸಂಗತಿಗಳನ್ನು ತಿಳಿಯಲು ಈ ಶಾಸನದಿಂದ ಆಗುವುದಿಲ್ಲ. ಹೇಗಿದ್ದರು ವಡ್ಡರ್ಸೆ ಮತ್ತು ಇದರ ಪರಿಸರದಲ್ಲಿ ಬ್ರಾಹ್ಮಣರು ಇದ್ದರೆಂದು, ಇವರು ದಾನ ಪಡೆಯುತ್ತಿದ್ದಾರೆಂದೂ ಅಭಿಪ್ರಾಯ ಪಡಲು ಈ ಶಾಸನದ ಅಧ್ಯಯನವು ಅವಕಾಶವನ್ನು ನೀಡುತ್ತದೆ. ಇಲ್ಲಿ ತಿಳಿಸಿದ ಬ್ರಾಹ್ಮಣರು

ಶೈವಾರಾಧಕರಾಗಿರಬೇಕು. ಏಕೆಂದರೆ ಈ ಶಾಸನವು 'ಕನರ್‌ಶಿವನ್ಪರೆದೋನ್' ಎಂದು ಆರಂಭವಾಗುತ್ತದೆ.

ವಡ್ಡರ್ಸೆ ಶಾಸನದಲ್ಲಿ ಬ್ರಾಹ್ಮಣರ ಪ್ರಸ್ತಾಪವಿರುವ ಕಾರಣ ಪ್ರಾಚೀನ ಅಳುಪರ ಕಾಲದಲ್ಲಿ ಸಮಾಜವು ವರ್ಣವಿಭಕ್ತವಾಗಿತು. ಆದರೆ ಸಮಾಜದ ನಾಲ್ಕು ಜಾತಿಗಳ ಬಗ್ಗೆ ಸ್ಪಷ್ಟವಾದ ಹೇಳಿಕೆಗಳು ಕಂಡು ಬರುವುದು ಮಧ್ಯಯುಗೀನ ಕಾಲದಲ್ಲಿ. ಅಳುಪರ ರಾಜಸಭೆಯಲ್ಲಿ ಪ್ರಧಾನದಿ ಅಧಿಕಾರಿಗಳಷ್ಟೇ ಅಲ್ಲದೇ ಪುರೋಹಿತರು, ದೇಶಿಪುರುಷರು ಪ್ರಸನ್ನರಿರುತ್ತಿದ್ದರು. ತುಳುನಾಡಿನಲ್ಲು ಬ್ರಾಹ್ಮಣರು ಜನಸಾಮಾನ್ಯರ ಗೌರವಾದಿಗಳಿಗೆ ಪಾತ್ರರಾಗಿದ್ದರು. ದಾನಧರ್ಮಗಳನ್ನು ಅಲ್ಲಗಳೆಯವವರಿಗೆ ಒಂದು ಸಾವಿರ ಬ್ರಾಹ್ಮಣರ ಕೊಂದ ದೋಷ, ಪ್ರತಿಪಾಲಿಸಿದವರಿಗೆ ಸಾವಿರ ಬ್ರಾಹ್ಮಣರ ರಕ್ಷಿಸಿದ ಪುಣ್ಯ ಎಂಬ ಮಾತಿದೆ.[1] ಕ್ರಮೇಣ ಬ್ರಾಹ್ಮಣರು ಅಳುಪರ ರಾಜ್ಯಸಭೆಯಲ್ಲಿ ಪ್ರಮುಖ ಪಾತ್ರಗಳನ್ನು ವಹಿಸುತ್ತಿದ್ದುದನ್ನು ಶಾಸನಗಳ ಅಧ್ಯಯನದಿಂದ ವ್ಯಕ್ತವಾಗುತ್ತಿದೆ. ಇನ್ನು ಬ್ರಾಹ್ಮಣರ ವಿಚಾರ ತಿಳಿಯುವಲ್ಲಿ ಧರ್ಮಸ್ಥಳದಲ್ಲಿ ಸಿಕ್ಕಿದ ತಾಮ್ರ ಶಾಸನವನ್ನು ಅಧ್ಯಯನ ಮಾಡುವ ಅಗತ್ಯವಿದೆ. ಕ್ರಿ.ಶ.685ರ ಈ ಶಾಸನದಲ್ಲಿ ಬ್ರಾಹ್ಮಣರ ಗೋತ್ರಗಳಾದ ವಿಶ್ವಾಮಿತ್ರ, ಮಾಧವ ಸ್ವಾಮಿ, ಗೌತಮ ಗೋತ್ರದ ಸ್ವಾಮಿನ್, ಕೌಶಿಕ ಗೋತ್ರದ ಜಮದಗ್ನಿ, ಗೋತ್ರ ಆಂಮನ್ ಸ್ವಾಮಿಯವರ ಉಲ್ಲೇಖವಿದೆ. ಈ ಗೋತ್ರಗಳ ಬ್ರಾಹ್ಮಣರು ವೇದ ಪಾರಂಗತರಾಗಿ ಆಳುಪರಸ ಚಿತ್ರವಾಹನನ ವಿಜ್ಞಾಪನೆಯಂತೆ ಎಡನಾಡು, ಕಿರುಮಂಡಲ ಗ್ರಾಮವನ್ನು ದಾನ ಪಡೆಯುತ್ತಾರೆ.

ಪ್ರಾಚೀನ ಅಳುಪರ ಕಾಲದ ತುಳುನಾಡಿನಲ್ಲಿ ಶೈವಧರ್ಮ ಹೆಚ್ಚು ಪ್ರಸಾರದಲ್ಲಿತ್ತು. ಉದ್ಯಾವರದಲ್ಲಿ ದೊರೆತಿರುವ ಶಾಸನಗಳು ಅಲ್ಲಿಯಾ ಚಂಬುಕಲ್ (ಸೋಮೇಶ್ವರ) ದೇವಾಲಯ ಮತ್ತು ಅದರ ಸುತ್ತಮುತ್ತಲಿನ ಶಿವಳ್ಳಿಗ್ರಾಮವು ಅಂದಿನ ತುಳುನಾಡಿನ ಧಾರ್ಮಿಕ ಜೀವನದ ಕೇಂದ್ರ ಸ್ಥಾನಗಳಾಗಿದ್ದವೆಂಬುದನ್ನು ಸ್ಪಷ್ಟಪಡಿಸುತ್ತದೆ.

"ಇದನಪಮೋರ್ವಾರಣಾಸಿಯುಂ ಶಿವಳ್ಳಿಯುಮನಪೆದ ಪಂಚಮಹಾಪಾತಕ ಸಂಯುಕ್ತರಪರ್" ಇದಾನ್ದೇವರ್ಗ್ಗಲ್ಲದೇ ಪರಕೊರ್ಳ್ವರೊಳರಾ ಶಿವಳ್ಳಿಯ ಬ್ರಹ್ಮ ಪುರಮುಮಪೆದ ಮಹಾಪಾತಕನಕ್ಕು ಮುಂತಾಗಿ ಪ್ರಾಚೀನ ಅಳುಪರ ಶಾಸನಗಳಲ್ಲಿ ಕಂಡು ಬರುವ ಶಾಸನ ವಚನಗಳು ಆ ಕಾಲದಲ್ಲಿ ಶಿವಳ್ಳಿಯನ್ನು ಕಾಶಿಯಷ್ಟೇ ಪುನೀತವೆಂದು ಪರಿಗಣಿಸಲಾಗುತ್ತಿತ್ತೆಂದು ತೋರಿಬರುತ್ತದೆ.[2]

ತುಳುನಾಡಿನ ದಾನಶಾಸನಗಳ ಕೊನೆಯಲ್ಲಿ ಶಾಪವಾಕ್ಯದಲ್ಲಿ ದಾನಧರ್ಮಗಳನ್ನು ಅಲ್ಲಗಳೆಯವವರಿಗೆ ಬ್ರಾಹ್ಮಣರನ್ನು ಕೊಂದ ದೋಷ ಬರುತ್ತದೆ ಎಂಬ ವಾಕ್ಯ ಸರ್ವಸಾಮಾನ್ಯವಾಗಿ ಕಂಡುಬರುತ್ತದೆ. ಬ್ರಾಹ್ಮಣರ ಬಗ್ಗೆ ಯಾವರೀತಿಯ ಭಯ, ಭಕ್ತಿ ಹಾಗೂ ಗೌರವ ಹೊಂದಿದ್ದರು ಎಂಬ ಅಂಶ ಗಮನಕ್ಕೆ ಬರುತ್ತದೆ. 'ಬ್ರಾಹ್ಮಣರನ್ನು ತಮ್ಮ ಕೈಯಾರೆ ವಧಿಸಿದದೋಷ' ಸಾವಿರದ ಹದಿನಾಲ್ಕು ಮಂದಿ ಬ್ರಾಹ್ಮಣರ ವಾರಾಣಾಸಿಯನ್ನು ಕೊಂದವರು.

[1]ಕೆ.ವಿ.ರಮೇಶ ತುಳುನಾಡಿನ ಇತಿಹಾಸ, 1969, ಪುಟ–73

[2]ಕೆ.ವಿ.ರಮೇಶ ತುಳುನಾಡಿನ ಇತಿಹಾಸ, 1969, ಪುಟ 139

ಈ ಎಲ್ಲ ಉದಾಹರಣೆಗಳು ತುಳುನಾಡಿನಲ್ಲಿದ್ದ ದಾನ, ದತ್ತಿ, ಬ್ರಾಹ್ಮಣ-ಭೋಜನ, ಮಠಗಳ ನಿರ್ಮಾಣ ಮುಂತಾದ ವಿಷಯಗಳ ಬಗ್ಗೆ ಬೆಳಕು ಚೆಲ್ಲುವುದರೊಂದಿಗೆ ಆಗಿನ ಬ್ರಾಹ್ಮಣರು ಎಂತಹ ಸಾಮಾಜಿಕ ಹಿಡಿತ ಹೊಂದಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಬ್ರಾಹ್ಮಣರಿಗಾಗಿ ಅಗ್ರಹಾರಗಳನ್ನು ನಿರ್ಮಿಸುತ್ತಿದ್ದರು. ಕ್ರಿ.ಶ 958ರ ಕೊನೆಯ ಕುಂದವರ್ಮನ ಶಾಸನ ಇಂತಹ ವ್ಯವಸ್ಥೆ ಆಳುಪರ ಕಾಲದಲ್ಲಿ ಇತ್ತೆಂಬುದ್ದಕ್ಕೆ ಸಾಕ್ಷಿ.[1]

ವಿಜಯನಗರ ಕಾಲದಲ್ಲಿ ಬ್ರಾಹ್ಮಣರು ಹಿಂದೆಂದೂ ಅನುಭವಿಸಿರದಷ್ಟು ದಾನಗಳನ್ನು ಪಡೆಯುತ್ತಿದ್ದರು.[2]

ಎರಡನೇ ಆಳುಪರಸರ ಕಾಲದ ಕನ್ನಡದ ಅತ್ಯಂತ ಪ್ರಾಚೀನ ಬೆಳ್ಮಣ್ಣಿನ ಏಳನೇ ಶತಮಾನದ ಮಧ್ಯಭಾಗದ ತಾಮ್ರ ಶಾಸನ ಬ್ರಾಹ್ಮಣರ ಮಹತ್ವವನ್ನು ತಿಳಿಸುತ್ತದೆ. ಅಲ್ಲದೆ ಈ ಶಾಸನ ಬ್ರಾಹ್ಮಣರ ಮುಖ್ಯ ಕೇಂದ್ರವಾಗಿದ್ದ ಶಿವಳ್ಳಿಯ ಮಹತ್ವವನ್ನು ತಿಳಿಸುತ್ತದೆ. ಬ್ರಾಹ್ಮಣರು ಆಗಿನಕಾಲದ ಸಾಂಸ್ಕೃತಿಕ ಹಾಗೂ ಧಾರ್ಮಿಕ ಚಟುವಟಿಕೆಗಳಲ್ಲಿ ಮಹತ್ವರವಾದ ಪಾತ್ರವನ್ನು ವಹಿಸುತ್ತಿದ್ದರು. ಫಲವತ್ತಾದ ಭೂಮಿಯನ್ನು ಹೊಂದಿದ್ದರು, ದಾನಪಡೆಯುತ್ತಿದ್ದರು. ಬ್ರಾಹ್ಮಣರಿಗೆ ಊಟ ಹಾಕಿದರೆ ಪುಣ್ಯ ಬರುತ್ತದೆ ಎಂಬ ಪರಿಕಲ್ಪನೆ ತುಳುನಾಡಿನಲ್ಲಿ ಪ್ರಬಲವಾಗಿತ್ತು. ತುಳುನಾಡಿನ ಹೆಚ್ಚಿನ ದಾನ ಶಾಸನಗಳು ಬ್ರಾಹ್ಮಣ ಭೋಜನಕ್ಕೆ ಮಾಡಿದ ವ್ಯವಸ್ಥೆಯನ್ನು ತಿಳಿಸುತ್ತದೆ.

ಅದ್ಯಪಾಡಿಯ ಆದಿನಾಥೇಶ್ವರ ದೇವಸ್ಥಾನದಲ್ಲಿನ ಕ್ರಿ.ಶ 1453ರ ಶಾಸನ 'ಅಡಿಗೆಯ ಮಾಡುವಾತನು ಊಟದಲ್ಲಿ ಬ್ರಾಹ್ಮಣರ ಸಂತೋಷ ಬಡಿಸಿ ವೀಳೆಯನ್ನು ಕೊಟ್ಟು ಬರಣಂತರಿಗೆ ಆಯುಷ್ಯ ಅಭಿವೃದ್ಧಿ ಆಗಲಿ ಸ್ಥಾನೋತ್ತವಾಗಿ ವರ್ಧಿಸಲಿಯೆಂದು ಬ್ರಾಹ್ಮಣರಿಂದ ಮಂತ್ರಾಕ್ಷತೆಯ ನಿಕ್ಕಿಸುವರು' ಎಂದು ತಿಳಿಸುವಲ್ಲಿ ಬ್ರಾಹ್ಮಣ ಭೋಜನಕ್ಕಿದ್ದ ಮಹತ್ವ, ಸಮಾಜದಲ್ಲಿ ಅವರ ಸ್ಥಾನಮಾನವನ್ನು ವಿವರಿಸುತ್ತದೆ. ಅದೇ ರೀತಿ ಕುದ್ಮಾರ್ ಪುತ್ತೂರಿನ ಕ್ರಿ.ಶ 1440ರ ಎರಡನೆಯ ದೇವರಾಯನ ಶಾಸನದಲ್ಲಿನ ಬ್ರಾಹ್ಮಣರು ಉಂಡು (ಹ) ರಸುತಿ-ಹ ಎಂಬ ಉಲ್ಲೇಖ ಸಹ ಮೇಲಿನ ಮಾತನ್ನು ದೃಢೀಕರಿಸುತ್ತದೆ.

ಕ್ರಿ.ಶ 9ನೇ ಶತಮಾನದ ಮಧ್ಯಭಾಗಕ್ಕೆ ಸರಿಹೊಂದುವ ಬಂಟ್ರ ಶಾಸನದಲ್ಲಿ ಬ್ರಾಹ್ಮಣರು ಗಣ್ಯ ವ್ಯಕ್ತಿಗಳಾಗಿ ರಾಜಕೀಯ ಕ್ಷೇತ್ರಗಳಲ್ಲಿ ಪ್ರಮುಖ ಸ್ಥಾನವನ್ನು ಹೊಂದಿ ಪ್ರಭಾವಶಾಲಿಗಳಾಗಿದ್ದರೆಂಬುದು ಶಾಸನದ ಅಧ್ಯಯನದಿಂದ ತಿಳಿದುಬರುತ್ತದೆ. ಇಲ್ಲಿಯ ಮಹಾಲಿಂಗೇಶ್ವರ ದೇವಸ್ಥಾನದ ಶ್ರೀಧರ ಭಟ್ಟರು ಮತ್ತು ಮೇಧಾವಿ ಭಟ್ಟರು ಮತ್ತು ಇನ್ನಿತರ ಗಣ್ಯರೊಂದಿಗೆ ಮತ್ತು ನಾಲ್ಕು ರಾಜರುಗಳೊಳಗಾದ ಒಪ್ಪದಿಂದ ಸಂತೋಷದಿಂದ ಇದ್ದರೆಂದು ತಿಳಿಯುತ್ತದೆ. ಕದಿರೆಯ ಮಂಜುನಾಥ ದೇವಾಲಯದಲ್ಲಿರುವ ಲೋಕೇಶ್ವರ ಪ್ರತಿಮೆಯ ಪೀಠಶಾಸನದಿಂದ ಕದಿರೆಯ ಅಗ್ರಹಾರವು ಕ್ರಿ.ಶ. 968 ರಲ್ಲಿ ರಚಿತವಾಯಿತೆಂದು ತಿಳಿದು ಬರುತ್ತದೆ.

[1] ಕೆ.ವಿ.ರಮೇಶ ಮತ್ತು ಎಂ.ಜೆ. ಶರ್ಮ 'ತುಳುನಾಡಿನ ಶಾಸನಗಳು .ಮೈಸೂರು 1978 ಪುಟ 9-10

[2] ಕೆ.ವಿ.ರಮೇಶ ತುಳುನಾಡಿನ ಇತಿಹಾಸ 1969, ಪುಟ 157

ಕ್ರಿ.ಶ. 1256 ರ ಗೋಕರ್ಣ ತಾಮ್ರ ಪಟದಲ್ಲಿ ಸಮಸ್ತ ಕದಂಬ ಚಕ್ರವರ್ತಿ ವೀರಕಾವ ದೇವರಸ ರಾಜಧಾನಿ ಚಂದ್ರಪುರ ಈಗಿನ ಚಂದಾವರವನ್ನು ಆಳುತ್ತಿರುವ ಸಮಯದಲ್ಲಿ ವಿಶ್ವಾಮಿತ್ರಾ ಗೋತ್ರದ ಮಹಿತಾಗ್ನಿ ಮಹೇಶ್ವರ ಭಟ್ಟ ಮತ್ತು ಅನಾದಿ ಅಗ್ರಹಾರ ಮೂರುರು ಗ್ರಾಮದ ಕೆಲವು ಭೂಮಿಗಳನ್ನು ದಾನ ಪಡೆದ ಮಾಹಿತಿ ಸಿಗುತ್ತದೆ. ಈ ದಾನವು ಶ್ರೀ ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ನಡೆಯಿತು. ಕರಾವಳಿ ಕರ್ನಾಟಕದಲ್ಲಿ ಬ್ರಾಹ್ಮಣರ ಅಗ್ರಹಾರಗಳು ಇದ್ದು, ಬ್ರಾಹ್ಮಣರು ವೇದ ಸಂಸ್ಕೃತಿಯನ್ನು ಪೋಷಿಸುತ್ತಿದ್ದರು ಮತ್ತು ಈ ಕಾರ್ಯಗಳಿಗೆ ಸ್ಥಳೀಯ ರಾಜಕೀಯ ಶಕ್ತಿಗಳು ಪ್ರೋತ್ಸಾಹವನ್ನು ನೀಡುತ್ತಿದ್ದವು. ಕರಾವಳಿ ಕರ್ನಾಟಕದ ಬ್ರಾಹ್ಮಣರ ಇತಿಹಾಸದಲ್ಲಿ ಹನ್ನೊಂದರಿಂದ ಹದಿನಾಲ್ಕನೆಯ ಶತಮಾನಗಳ ಅವಧಿಗಳಲ್ಲಿ ಕೆಲವು ಪ್ರಮುಖ ಘಟನೆಗಳು ನಡೆದು ಬ್ರಾಹ್ಮಣರ ಸಂಸ್ಕೃತಿಗೆ ಹೊಸ ಸ್ವರೂಪ ಸಿಕ್ಕಿತು. ಶಿವಳ್ಳಿ, ನೀಲಾವರ, ಬ್ರಹ್ಮಾವರ-ಶಿವಪೂರು, ಮುರುಡೇಶ್ವರ, ಚಂದಾವರ, ಧಾರೇಶ್ವರ, ಕೋಟ, ಗೋಕರ್ಣಗಳಲ್ಲಿ ಆಗಿನ ನಿರ್ದಿಷ್ಟ ಸಂಖ್ಯೆಯ ಸಭೆಗಳಿದ್ದವು. ಇದರಲ್ಲಿ ಹೆಚ್ಚಿನ ಬ್ರಾಹ್ಮಣರು ಇದ್ದರು. ಅದು ಮಾತ್ರವಲ್ಲದೆ ಇವುಗಳ ನಿಯಂತ್ರಣವೆಲ್ಲವೂ ಬ್ರಾಹ್ಮಣರ ವಶದಲ್ಲಿಯೇ ಇದ್ದಿತು. ಇಲ್ಲಿ ಬ್ರಾಹ್ಮಣರು ದಾನ ಪಡೆದವರಾಗಿಯೂ, ಮತ್ತು ದಾನ ಪಾಲಕರಾಗಿಯೂ ಕಾಣಿಸಿಕೊಳ್ಳುತ್ತಾರೆ. ರಾಜ ಭಂಡಾರಕ್ಕೆ ಗ್ರಾಮಗಳಿಂದ ಸಮಯಕ್ಕೆ ಸರಿಯಾಗಿ ತೆರಿಗೆಯ ಮೊತ್ತವನ್ನು ನಿರ್ಧರಿಸುವ ಅಧಿಕಾರವನ್ನು ಇವರೇ ಹೊಂದಿದ್ದರು.

ಬ್ರಾಹ್ಮಣರು ರಾಜಾಧಿಕಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. 1254 ರ ಬ್ರಹ್ಮಾವರದ ಮಹಾಲಿಂಗೇಶ್ವರ ದೇವಸ್ಥಾನದ ಶಾಸನದಲ್ಲಿ ಪುರೋಹಿತರು ರಾಜಸಭೆಯ ಇತರರೊಂದಿಗೆ ನೆರವಾಗುತ್ತಿದ್ದರು ಎಂಬ ಮಾಹಿತಿ ಸಿಗುತ್ತದೆ. ಬ್ರಾಹ್ಮಣರು ರಾಜಾಧಿಕಾರಗಳಲ್ಲಿ ಗ್ರಾಮಣಿ, ಸೇನಭೋವ, ಕರಣಿಕ, ಊರಾಳುವ, ಹೆಗಡೆಗಳಾಗಿದ್ದ ಉಲ್ಲೇಖ ಮಹತ್ತ್ವದ್ದು. ರಾಜರುಗಳಿಂದ ಪಡೆದು ಭೂಸ್ವತ್ತುಗಳು ದೇವಸ್ವಂ, ಪುರೋಹಿತ ಸ್ಥಳ ಮತ್ತು ಬ್ರಹ್ಮಸ್ವಗಳೆಂದು ಶಾಸನಗಳಲ್ಲಿ ಉಲ್ಲೇಖ ಬರುತ್ತದೆ. ಬ್ರಾಹ್ಮಣರು ದಾನ ಪಡೆದ ಭೂಮಿಗಳನ್ನು ಕೇಡಿಲ್ಲದೆ ರಕ್ಷಿಸುವಲ್ಲಿ ರಾಜರು, ಜನ್ನಿ ಮತ್ತು ಪ್ರಮುಖ ಪ್ರಜೆಗಳು ಹೆಚ್ಚಿ ಆಸಕ್ತಿ ವಹಿಸುತ್ತಿದ್ದರು. ದೇವಾಲಯಗಳಲ್ಲಿ ಸೇರಿದ ಹೊಲಗದ್ದೆಗಳ ಬೇಸಾಯಗಾರರು –'ಬಾನಗೇಡು ಬರಗೇಡು' ಎನ್ನದೇ ತಾವು ದೇವ ದೈವಗಳಿಗೆ ಸಲ್ಲಿಸಬೇಕೆಂಬ ಕಟ್ಟಪ್ಪಣೆ ಶಾಸನಗಳಲ್ಲಿ ಕಂಡು ಬರುತ್ತದೆ. ಇದು ಬ್ರಾಹ್ಮಣರ ಭೂ ಹಿಡುವಳಿಗೆ ಹೆಚ್ಚಿನ ಭದ್ರತೆಯನ್ನು ಕೊಟ್ಟಿತು. ದೇವಸ್ಥಾನದ ಹೆಚ್ಚಿನ ಭೂಮಿ ಬ್ರಾಹ್ಮಣರ ಕೈಯಲ್ಲೇ ಇತ್ತು. ಮಧ್ಯಕಾಲೀನ ಕರಾವಳಿ ಕರ್ನಾಟಕದ ಬ್ರಾಹ್ಮಣರ ಇತಿಹಾಸವನ್ನು ಗಮನಿಸಿದರೆ ಸ್ಥಾನಿಕರ ಪ್ರಭಾವ ಮತ್ತು ವರ್ಚಸ್ಸು ಅಧಿಕವಾಗಿ ಇತ್ತೆಂದು ಶಾಸನಗಳಿಂದ ತಿಳಿದು ಬರುತ್ತದೆ. ಮಾತ್ರವಲ್ಲದೆ ಉನ್ನತ ಸ್ಥಾನದಲ್ಲಿದ್ದು, ರಾಜರಿಂದ ಗೌರವವನ್ನು ಪಡೆಯುತ್ತಿದ್ದರು.

1083 ರ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಧಾರೇಶ್ವರ ಶಾಸನ 1140 ರ ಹೊನ್ನಾವರ ಸಮೀಪದ ತುಂಬೋಳಿ ಶಾಸನ, 1222ರ ಚಂದಾವರ ಶಾಸನ, 1304 ರ ಉಳಗೊಂಡ ಶಾಸನವು ವೈಷ್ಣವ ಪಂಥವು 'ಕರಾವಳಿ ಕರ್ನಾಟಕದಲ್ಲಿ ಪ್ರವೇಶ ಮಾಡಿದುದರ ಬಗ್ಗೆ ಉಲ್ಲೇಖ ನೀಡುತ್ತದೆ. ಆರಾಧಿಸುತ್ತಿರುವ ದೇವತೆ ವಿಷ್ಣುನರಸಿಂಹ

ಮತ್ತು ಯೋಗಾ ನರಸಿಂಹ ಹಿನ್ನೆಲೆಯಲ್ಲಿ ವೈಷ್ಣವ ಪಂಥ ಉತ್ತರ ಕನ್ನಡ ಜಿಲ್ಲೆಯಿಂದ ದಕ್ಷಿಣಕ್ಕೆ ಪ್ರಚಾರವಾಯಿತೆಂಬ ಅಭಿಪ್ರಾಯವಿದೆ. ಆದರೆ ವೈಷ್ಣವ ದೇವತೆ ನರಸಿಂಹ ದೇವಸ್ಥಾನದ ಇರುವಿಕೆ ಕ್ರಿ.ಶ. 929 ರಲ್ಲಿ ಕೇರಳದ ಕಣ್ಣನೂರು ಸಮೀಪದ ರಾಮತಾಳಿಯಲ್ಲಿರುವುದು ಅಲ್ಲಿ ಸಿಕ್ಕಿದ ಶಾಸನದಿಂದ ತಿಳಿದು ಬರುತ್ತದೆ. ತುಳುನಾಡಿನಲ್ಲಿ ವೈಷ್ಣವ ದೇವತೆಯ ಉಲ್ಲೇಖ ಬರುವುದು 1286 ರ ಬ್ರಹ್ಮಾವರ ಸಮೀಪದ ಹಂದಾಡಿಯಲ್ಲಿಯ ಶಾಸನದಲ್ಲಿ. ಇಲ್ಲಿ ತಿಳಿಸಿದ ದೇವತೆ ಗೋಪಿನಾಥ. ಶಿವಳ್ಳಿ ಬ್ರಾಹ್ಮಣರ ಪ್ರಧಾನ ದೇವತೆ. ಕ್ರಿ.ಶ. 14ನೇ ಶತಮಾನದ ಉತ್ತರಾರ್ಧದಲ್ಲಿ ಉಡುಪಿಯಲ್ಲಿ ಕೃಷ್ಣನ ಉಲ್ಲೇಖ ಬರುತ್ತದೆ. ಆ ಕಾಲದಲ್ಲಿ ತುಳುನಾಡಿನಲ್ಲಿ ಪೂಜಿಸುತ್ತಿದ್ದ ವೈಷ್ಣವ ದೇವತೆಗಳಾವುವೆಂದರೆ, ಕೃಷ್ಣ, ನರಸಿಂಹ, ಚಕ್ರಪಾಣಿ, ವಿಷ್ಣುಮೂರ್ತಿ, ಗೋಪಿನಾಥ, ಸೂರ್ಯನಾರಾಯಣ, ನಾರಾಯಣ, ಜನಾರ್ದನ, ಲಕ್ಷ್ಮೀನಾರಾಯಣ, ರಾಮಚಂದ್ರ, ತಿರುಮಲ ವಿಠಲ. ವೈಷ್ಣವ ಪಂಥದ ಪ್ರಭಾವದಿಂದ ಕರಾವಳಿ ಕರ್ನಾಟಕದ ಬ್ರಾಹ್ಮಣರಲ್ಲಿ ಎರಡು ಪಂಗಡಗಳಾದವು. ಒಂದನೇ ಪಂಗಡದವರು ಶಿವಶಕ್ತಿ ಆರಾಧಿಸುವ ಭಾಗವತರು. ಎರಡನೇ ಪಂಗಡದವರು ಕೃಷ್ಣನ ಭಕ್ತರೆನಿಸಿದ ಮಾಧ್ವರು. ಉಡುಪಿ ಮತ್ತು ಇದರ ದಕ್ಷಿಣಕ್ಕೆ ಮಾಧ್ವ ಪಂಗಡದವರು ಹೆಚ್ಚು ಪ್ರಬಲರಾಗಿದ್ದಾರೆ. ಸ್ಮಾರ್ತಬ್ರಾಹ್ಮಣರ ಪ್ರಾಬಲ್ಯ ಕರಾವಳಿ ಕರ್ನಾಟಕದ ಉಳಿದ ಕಡೆಗಳಲ್ಲಿತ್ತು. ಕಚ್ಚೂರಿನ ಮಾರ್ಕಂಡೇಶ್ವರ ದೇವಾಲಯ, ಬೈಂದೂರು ಪಡುವರಿ ಮತ್ತು ಮಂಗಳೂರು ಬಂಕೇಶ್ವರ ದೇವಾಲಯಗಳು, ಗುಜ್ಜಾಡಿಯ ಗುಹೇಶ್ವರ ದೇವಾಲಯ, ಮಣೂರಿನ ಮಹಾಲಿಂಗೇಶ್ವರ ದೇವಾಲಯ, ಆವರ್ಸೆ ಮತ್ತು ಕೋಟೇಶ್ವರ ಕೋಟಲಿಂಗ ದೇವಾಲಯಗಳು, ಪೊಸ್ರಾಲಿನ ಮಹಾಲಿಂಗೇಶ್ವರ, ಪಾವಂಜೆಯ ಮಹಾದೇವಾಲಯ, ಸುಜೀರಿನ ತಿಮಿರೇಶ್ವರ, ಬೆಳುವಾಯಿ ಮತ್ತು ಕಾಂತಾವರದ ಕಾಂತೇಶ್ವರ, ಶಿವಪುರದ ಶಂಕರಲಿಂಗೇಶ್ವರ ಉಳ್ಳಾಲ ಮತ್ತು ಪುತ್ತಿಗೆಯ ಸೋಮನಾಥೇಶ್ವರ ದೇವಾಲಯಗಳು ಶೈವಾರಾಧನ ಕೇಂದ್ರಗಳಾಗಿದ್ದವು. ಇಷ್ಟಲ್ಲದೆ ಕೃಷ್ಣನ ಪ್ರಮುಖ ಆರಾಧನ ಕೇಂದ್ರದಲ್ಲಿ 16ನೆಯ ಶತಮಾನದವರೆಗೆ ಶೈವಾರಾಧನೆಗೆ ಹೆಚ್ಚಿನ ಮಹತ್ವವಿದ್ದಿತ್ತು.

ಕರಾವಳಿ ಕರ್ನಾಟಕದಲ್ಲಿ ಬ್ರಾಹ್ಮಣರು ಭೂ ಹಿಡುವಳಿಗಾರರಾಗಿ ಕೃಷಿ ಜೀವನದಲ್ಲಿ ಹೆಚ್ಚಿನ ಒಲವನ್ನು ತೋರಿಸಿದ್ದಾರೆಂದು ಹದಿನಾಲ್ಕು ಮತ್ತು ಹದಿನೆಂಟನೇ ಶತಮಾನಗಳ ಅವಧಿಗಳಲ್ಲಿ ಶಾಸನಗಳು ತಿಳಿಸುತ್ತವೆ. ವಿಜಯನಗರದ ಅರಸರು ಮತ್ತು ಅವರ ಅನಂತರ ಬಂದ ಕೆಳದಿನಾಯಕರು ಮತ್ತು ಸ್ಥಳೀಯ ಅರಸುಮನೆತನಗಳಿಂದ ಭೂದಾನ ಪಡೆದವರಲ್ಲಿ ಬ್ರಾಹ್ಮಣರು ಮುಖ್ಯರು ಮತ್ತು ಪ್ರಮುಖರು. ಸರಕಾರದಿಂದ ರಕ್ಷಣೆ ಪಡೆದ ಬ್ರಾಹ್ಮಣ ಭೂ ಹಿಡುವಳಿಗಾರರು ಕರಾವಳಿ ಕರ್ನಾಟಕದ ಫಲವತ್ತಾದ ಪ್ರದೇಶಗಳಲ್ಲಿ ಕಾಣಿಸಿಕೊಂಡರು. ಬ್ರಾಹ್ಮಣರು ಹೊಂದಿದ್ದ ಭೂಮಿಗಳಾದ 'ದೇವಸ್ವಂ' ಬ್ರಹ್ಮಸ್ವಂ ಮತ್ತು 'ಪುರೋಹಿತಸ್ವಂ' ಗಳಿಗೆ ಆಗಿನ ರಾಜಾಡಳಿತದ ರಕ್ಷಣೆ ಇತ್ತು. ಇವುಗಳನ್ನು ನಾಶಪಡಿಸುವವರಿಗೆ ಸರಕಾರ ಶಿಕ್ಷೆ ಕೊಡುತ್ತಿತ್ತು. ಬ್ರಾಹ್ಮಣರ ಹಿಡುವಳಿಗಳಲ್ಲಿ ರಾಜನು ಸೇರಿದಂತೆ ಯಾರೊಬ್ಬರೂ ಆಯಾಯ 'ದೇವಸ್ವಂ' ಭೂಮಿಗಳಲ್ಲಿ ಅರಮನೆ ಕಟ್ಟುವ, ಮನೆಕಟ್ಟುವ ಅಧಿಕಾರವಿರಲಿಲ್ಲ. ವಿಜಯನಗರ ಕಾಲದ ಶಾಸನಗಳಲ್ಲಿ ಉಕ್ತಿ ಸಿಗುತ್ತದೆ. ಅಂತೆಯೇ ಭೂಮಿಗಳಿಗೆ ತೆರಿಗೆಯಿಂದ ಹೆಚ್ಚಿನ ಮಟ್ಟಿಗೆ ಮಾನ್ಯವಾಗಿತ್ತು. ಆಗಿನ ಕಾಲದಲ್ಲಿ ಬ್ರಾಹ್ಮಣರು ವಿಶಿಷ್ಟ ರೀತಿಯ ಹಕ್ಕುಗಳನ್ನು ಹೊಂದಿದ್ದ ಭೂಮಾಲಿಕರು

ಆಗಿದ್ದರು. ಮೂಡಬಿದಿರೆಯ 1709 ರ ಕಲ್ಲಬಸ್ತಿಯ ತಾಮ್ರ ಶಾಸನದಂತೆ ಮೂಲಿಕೆ ಸೀಮೆಯ ಒಳಕುಂಜೆ ಮಾಗಣೆ ಉಳಿಪಾಡಿ ಗ್ರಾಮದ ಶಾಂತಿಕೆರೆ ನಾರಾಯಣ ಭಟ್ಟನು ಮೂಡಬಿದಿರೆ ಕಲ್ಲಬಸ್ತಿ ಚಂದ್ರನಾಥ ದೇವರ ಭಂಡಾರದಿಂದ 100 ಗದ್ಯಾಣಗಳನ್ನು ತೆಗೆದುಕೊಂಡು ಇದಕ್ಕೆ ಆಧಾರವಾಗಿ ತನ್ನ ಸ್ವಂತ ಭೂಮಿಯನ್ನು ಅಡವಾಗಿ ಮೂಡಬಿದಿರೆಯ ನಂದ ಪಡುಪು ಸೆಟ್ಟಿಯರ ಮುಖಾಂತರ ಇರಿಸಿಕೊಂಡದ್ದು ತಿಳಿಯುತ್ತದೆ.

ದಿ. ವಸಂತ ಶೆಟ್ಟರು ಬಸ್ರೂರಿನಲ್ಲಿ ಸಂಶೋಧಿಸಿದ ಕ್ರಿ.ಶ. 1519 ರ ಕಲ್ಲು ಶಾಸನದಲ್ಲಿ ದಾನ ಪಡೆಯುವ ಬ್ರಾಹ್ಮಣರ ಕುಲ ಗೋತ್ರಗಳ ಉಲ್ಲೇಖ ಬರುತ್ತದೆ. ವಸಿಷ್ಠ, ಭಾರದ್ವಾಜ, ಕಾಶ್ಯಪ, ವಿಶ್ವಾಮಿತ್ರ, ಹರಿತ, ಗೋತ್ರದ ಬ್ರಾಹ್ಮಣರನ್ನು ಬೇರೆ ಬೇರೆ ಕಡೆಯಿಂದ ಕರೆಸಿದ ಮಾಹಿತಿ ಶಾಸನದಲ್ಲಿದೆ. ವಿಜಯನಗರ ಅರಸ ಕೃಷ್ಣದೇವರಾಯನ ಬಾರಕೂರಿನ ರಾಜ್ಯಪಾಲಕ ವಿಜಯಪ್ಪ ಒಡೆಯನು ಉಂಬಳಿ ಮನೆಸ್ಥಳಗಳನ್ನು ಬ್ರಾಹ್ಮಣ ಕುಟುಂಬಗಳಿಗೆ ದಾನ ಮಾಡಿದನು. ಕುಲ ಮತ್ತು ಗೋತ್ರಗಳ ಉಲ್ಲೇಖ ಹೆಚ್ಚಾಗಿ ಹೊರಗಿನಿಂದ ಬಂದ ಬ್ರಾಹ್ಮಣರಿಗೆ ಅನ್ವಯಿಸುವುದು ಶಾಸನಗಳ ಅಧ್ಯಯನದಿಂದ ತಿಳಿದು ಬರುತ್ತದೆ.

ರಾಜ್ಯದ ಮತ್ತು ಸ್ಥಳೀಯ ಆಡಳಿದಲ್ಲಿ ಪ್ರಮುಖ ಸ್ಥಾನವನ್ನು ಬ್ರಾಹ್ಮಣರು ವಹಿಸಿದ್ದರು. ಊರಾಳುವ, ಶ್ರೀಕರಣ, ಗ್ರಾಮಣಿ, ಕರಣಿಕ, ಮಧ್ಯಸ್ಥರೆಂಬ ಉಪನಾಮಗಳನ್ನು ಬ್ರಾಹ್ಮಣರು ಹೊಂದಿದ್ದರು. ರಾಜ್ಯದ ತೆರಿಗೆ ವಸೂಲಿಯ ಹಕ್ಕನ್ನು ಬ್ರಾಹ್ಮಣರು ಹೊಂದಿದ್ದರು.

ಮಲೆದಂಡನಾಯಕನು ಬಾರಕೂರು ರಾಜ್ಯವನ್ನು ಆಳುತ್ತಿರುವ ಕಾಲದಲ್ಲಿ 1342 ರ ಕೆರ್ಗಾಲು ಶಾಸನಗಳಲ್ಲಿ ಗೋವಿಂದ ಮತ್ತು ಕೃಷ್ಣರೆಂಬಿಬ್ಬರು ಬ್ರಾಹ್ಮಣನೊಬ್ಬನನ್ನು ಕೊಂದ ಮಾಹಿತಿ ಇದೆ. ಇದಕ್ಕೆ ಪ್ರತಿಯಾಗಿ ಪ್ರಾಯಶ್ಚಿತ್ತಕ್ಕಾಗಿ ಈ ಅಪರಾಧಿಗಳು ದೇವಾಲಯಕ್ಕೆ ದಾನಗಳನ್ನು ಮಾಡಬೇಕಾಗಿ ಬಂತು. ಅಲ್ಲಲ್ಲಿ ಬ್ರಾಹ್ಮಣರ ಮೇಲೆ ಹಿಂಸೆ, ಕೊಲೆ ಮತ್ತು ಅವರಿಂದ ಆಸ್ತಿಗಳನ್ನು ಕಸಿದುಕೊಳ್ಳುವ ಘಟನೆಗಳು ನಡೆಯುತ್ತಿತ್ತು.

ಕುಂದಾಪುರದ ಕುಂದೇಶ್ವರ ದೇವಸ್ಥಾನದ ಪರಿಸರದಲ್ಲಿದ್ದ ಪುರೋಹಿತ ಸ್ಥಳಗಳನ್ನು ಕಸಿದುಕೊಂಡ ಘಟನೆ ಕ್ರಿ.ಶ. 1425 ರಲ್ಲಿ ನಡೆದಿತ್ತು. ದೇವರಿಗೆ ಬಿಟ್ಟಿದ್ದ ಧರ್ಮಸಾಧನ ನಿಲ್ಲಿಸಲ್ಪಟ್ಟಿತ್ತು. ಬಾರಕೂರ ರಾಜ್ಯಪಾಲಕನಾಗಿದ್ದ ನರಸಿಂಹ ಒಡೆಯರು ತಿರುಗಿ ಸ್ಥಾಪಿಸಿದ್ದನೆಂಬ ಸಂಗತಿ. ಕುಂದೇಶ್ವರ ದೇವಾಲಯದಲ್ಲಿರುವ ಶಾಸನದಿಂದ ತಿಳಿದು ಬರುತ್ತದೆ.

ವಿಜಯನಗರದಲ್ಲಿ ಇಮ್ಮಡಿ ದೇವರಾಯನು ಆಳಿಕೊಂಡಿರುವಾಗ ಸಿಂಗಣ ದಂಡನಾಯಕನ ನಿರುಪದಿಂದ ಬಾರಕೂರು ಆಡಳಿತ ಮಾಡುತ್ತಿದ್ದ ಅಣ್ಣಪ್ಪ ಒಡೆಯರು ಶಿವಳ್ಳಿ ಗ್ರಾಮದ ಮೇಲೆ ದಾಳಿ ಮಾಡಿದರು. ಶ್ರೀಕೃಷ್ಣ ದೇವರಿಗೆ ನಡೆಯುತ್ತಿದ್ದ ಪೂಜಾಕಾರ್ಯ ನಿಂತು ಹೋಯಿತು. ಇಷ್ಟಲ್ಲದೇ ಶ್ರೀಕೃಷ್ಣನ ಪ್ರತಿಮೆ ಸ್ಥಾನಾಂತರವಾಯಿತು. ಈ ಎಲ್ಲಾ ಘಟನೆಗಳು ಶಿವಳ್ಳಿಯಲ್ಲಿದ್ದವರ ಮನನೋಯಿಸಿತು. ಇವರನ್ನು ಬಾರಕೂರ ನಗರ ಕಟ್ಟಳೆಯವರು ಸಂತೈಸಿ ದೇವಾಲಯದ ಧಾರ್ಮಿಕ ಕಟ್ಟಳೆಗಳು ತಿರುಗಿ ನಡೆಯುವಂತೆ ಮಾಡಿದರು. ವಿಜಯನಗರ ಚಕ್ರವರ್ತಿ ಇಮ್ಮಡಿ ದೇವರಾಯ ಮತ್ತು ರಾಜಪಾಲಕನ ಆಜ್ಞೆಯಂತೆ ಸಿಂಗರಸ ಈ ವ್ಯವಸ್ಥೆಯನ್ನು ಮಾಡಿದ.

ಬ್ರಾಹ್ಮಣರು ಮತ್ತು ಇತರ ವರ್ಗದವರು ಯಾವುದೋ ಕಾರಣಕ್ಕೆ ತಮ್ಮೊಳಗೆ ಕೋಟೇಶ್ವರ ಕೊಡಿ ಹಬ್ಬದಂದು ಕಡಿದಾಡಿದರು. ಇದರ ಪರಿಣಾಮವಾಗಿ ಬ್ರಾಹ್ಮಣ ಮತ್ತು ಇತರ ವರ್ಗದವರ ಹೆಣಗಳು ದೇವಸ್ಥಾನದ ಒಳಗೆ ಬಿದ್ದವು. ಕೋಟೇಶ್ವರ ದೇವಸ್ಥಾನದ ಬಾಗಿಲು ಮುಚ್ಚಿ, ನೈವೇದ್ಯ, ನಿತ್ಯಪೂಜೆ, ನಂದಾದೀಪ ನಿಂತು ಹೋಯಿತು. ಕ್ರಿ.ಶ. 1551 ರಂದು ಅಳಿಯ ರಾಮರಾಜ ಮತ್ತು ಅವನ ತಮ್ಮ ವೆಂಕಟಾದ್ರಿ ಇವರಿಬ್ಬರಿಗೂ ಧರ್ಮವಾಗಬೇಕೆಂದು, ಬಾರಕೂರ ರಾಜ್ಯಪಾಲಕ ಏಕದಳಖಾನ ಒಡೆಯನು ಕೋಟೇಶ್ವರ ದೇವಾಲಯದಲ್ಲಿ ನಡೆಯಬೇಕಾಗಿದ್ದ ಪ್ರಾಯಶ್ಚಿತ್ತ ಕರ್ಮಗಳ ವೆಚ್ಚಕ್ಕಾಗಿ ದಾನವನ್ನು ಕೊಟ್ಟನು. ದೇವಾಲಯದ ಪೂಜಾ ವ್ಯವಸ್ಥೆಗಳು ಪುನಃ ಸ್ಥಾಪಿತವಾಗಿ ಬ್ರಾಹ್ಮಣರಿಗೆ ಸಲ್ಲುತ್ತಿದ್ದ ಮಾನ್ಯಗಳು ಊರ್ಜಿತವಾದವು. ಈ ಧರ್ಮಕಾರ್ಯಗಳನ್ನು ಪುನಃ ಸ್ಥಾಪಿಸಿದ ಏಕದಳಖಾನ ಇಸ್ಲಾಂ ಮತದವನು.

ಬ್ರಾಹ್ಮಣರ ವಲಸೆಗಳು ಕರಾವಳಿ ಕರ್ನಾಟಕದ ಪಡು ಪಣಂಬೂರು, ಪಾವಂಜೆ, ಉದಿಯಾವರ, ಬಸ್ರೂರು, ಕೋಟೇಶ್ವರ, ಕೊಲ್ಲೂರು, ಶಂಕರನಾರಾಯಣ, ಹೊಸಂಗಡಿ, ಗೋಕರ್ಣಗಳಲ್ಲೂ ಮತ್ತು ಸಾಗರ, ನಗರ, ತೀರ್ಥಹಳ್ಳಿ ತಾಲೂಕುಗಳಲ್ಲೂ ಇದ್ದವು. ಕರಾವಳಿಯಿಂದ ಘಟ್ಟದ ಮೇಲೂ, ಘಟ್ಟದ ಮೇಲಿಂದ ಕರಾವಳಿಗೂ ವಲಸೆ ನಡೆಯುತ್ತಿತ್ತು. 1418 ರ ಪಾವಂಜೆ ಮತ್ತು ಇಲ್ಲಿನ ಸಮೀಪದ ಪಡುಪಣಂಬೂರು ಶಾಸನಗಳು ಹೊಯ್ಸಳ ರಾಜ್ಯದ ಬೆಳಗೋಳದ ಪೇಟೆಯ ಆತ್ರೇಯ ಗೋತ್ರದ ಗೋವಿಂದ ದೇವರ ಮಕ್ಕಳು ಹರಿಯಂಣಗಳು ಇಲ್ಲಿ ಬಂದು ನೆಲೆಸಿ ಸ್ಥಳೀಯ ಬಂಗರಾಜರಿಂದ ಭೂದಾನ ಪಡೆದು ಕೃಷಿ ವೃತ್ತಿಯಲ್ಲಿ ನಿರತರಾದರೆಂದು ತಿಳಿದು ಬರುತದೆ. ಕ್ರಿ.ಶ. 1614 ಮತ್ತು 1618 ರ ತಾಮ್ರ ಶಾಸನಗಳಲ್ಲಿ ಉಲ್ಲೇಖವಾದ ಸುರಣ್ಣ ಮತ್ತು ಕೃಷ್ಣಯ್ಯ ಘಟ್ಟದ ಮೇಲಿಂದ ಬಂದವರು. ಸುರಣ್ಣ ಕೊಲ್ಲೂರಿನಲ್ಲಿ ಭಜನೆ ನಡೆಸಲು ಇಲ್ಲಿ ಕೆಲವು ಸ್ಥಳಗಳನ್ನು ಉಂಬಳಿ ಪಡೆದಿದ್ದ.

ಪು. ಶ್ರೀನಿವಾಸ ಭಟ್ಟ ಕಟೀಲು ಇವರು ಪ್ರಾಚೀನ ಚರಿತ್ರೆಯನ್ನರಿಯಲು ಆಧಾರರೂಪವಾಗಿರುವ ಶಿಲಾಶಾಸನಗಳು ಹಾಗೂ ಹಳೆಯ ದಾಖಲೆಗಳಲ್ಲಿ ಉಲ್ಲೇಖಿತ ಕೆಲವು ಕುಲನಾಮಗಳನ್ನು ಸಂಗ್ರಹಿಸಿದ್ದಾರೆ. ಸಾಮಾನ್ಯವಾಗಿ ಶಿವಳ್ಳಿ ಬ್ರಾಹ್ಮಣರ ಕುಲನಾಮಗಳಲ್ಲಿ ಉತ್ತರ ಪದಗಳಾಗಿರುವ ಆಯ, ತ್ತಾಯ ಇತ್ಯಾದಿ ಪದ ರಹಿತವಾಗಿ ಕೆಲವು ಕುಲನಾಮಗಳನ್ನು ಗುರುತಿಸಿದ್ದಾರೆ. ದಕ್ಷಿಣ ಭಾರತ ಶಾಸನಗಳ ಸಂಪುಟ VII ಮತ್ತು IX ರಲ್ಲಿ ಭಾಗ II ಇವುಳಲ್ಲಿರುವ ಶಾಸನಗಳಲ್ಲಿ ಮಾಹಿತಿಯನ್ನು ಯಥಾವತ್ತಾಗಿ ಇಲ್ಲಿ ಗುರುತಿಸಿದ್ದೇನೆ. ಈ ಮಾಹಿತಿಗಳು ಶಿವಳ್ಳಿ ಬ್ರಾಹ್ಮಣರ ಪ್ರಾಚೀನತೆಯನ್ನು ತಿಳಿಯಲು ಸಹಾಯಕ.

ದಕ್ಷಿಣ ಭಾರತದ ಶಾಸನಗಳು ಸಂಪುಟ IX ಭಾಗ II

ಶಾಸನಗಳಸಂಖ್ಯೆ	**ಕಾಲ ಕ್ರಿ.ಶ.**	**ಸ್ಥಳ**	**ರಾಜವಂಶ**	**ಕುಲನಾಮಗಳು**
407	1364	ಕೋಟೇಶ್ವರ	ವಿಜಯನಗರ	ಧನ್ಯ
417	1377	ಕೋಟೇಶ್ವರ	ವಿಜಯನಗರ	ಧನ್ಯ
426	1402	ಯೆರ್ಮಾಳು	ವಿಜಯನಗರ	ನೆಲ್ಲಿ, ಅಗ್ಗಿ
446	1436	ಬಸರೂರು	ವಿಜಯನಗರ	ಮೊಗರ

511	1519	ಬಸರೂರು	ವಿಜಯನಗರ	ಮಿತ್ರಾಂಕ
517	1515	ಬಸರೂರು	ವಿಜಯನಗರ	ಕೊಡಚ
540	1531	ಬಸರೂರು	ವಿಜಯನಗರ	ಉಡುಪ
637	1562	ಕೋಟೇಶ್ವರ	ವಿಜಯನಗರ	ಆಸ್ರಣ್ಣ
625	1562	ಕುಂಭಾಸಿ	ವಿಜಯನಗರ	ಮಧ್ಯಸ್ತ

ಸಂಪುಟ VII

185 ತಂತ್ರಿ	1204	ಮಂಗಳೂರು	ಆಲುಪ	ಆಸ್ರಣ್ಣ,
233	15ನೇಶತ	ಕಾಂತಾವರ	ವಿಜಯನಗರ	ಆಸ್ರಣ್ಣ
264	16ನೇಶತ	ಪಡಪಣಂಬೂರು	ಮೂಲಿಕೆಸಾವಂತ	ಪೆರ್ಲಾಯ
288	1429	ಉದ್ಯಾವರ	ವಿಜಯನಗರ	ಅರಿನಾಯ,ಮಟ್ಟಿನ್ನಾಯ
296	1437	ಉಡುಪಿ	ವಿಜಯನಗರ	ಕುಂಜತ್ತಾಯ
299	1395	ಉಡುಪಿ	ವಿಜಯನಗರ	ನಡುವಂತಿಲ್ಲ, ತೆಂಕಿಲ,ನಿಡುಂಬೂರ
303	15ನೇಶತ	ಉಡುಪಿ	ವಿಜಯನಗರ	ಕುಂಜತ್ತ
319	1370	ಬಾರಕೂರು	ವಿಜಯನಗರ	ಮಂಡಚ್ಚ
321	1582	ಬಾರಕೂರು	ವಿಜಯನಗರ	ಕಲ್ಕೂರ
324	1402	ಬಾರಕೂರು	ವಿಜಯನಗರ	ಕಲ್ಕೂರ
325	1380	ಬಾರಕೂರು	ವಿಜಯನಗರ	ಆಶ್ರಂಣ
326	1380	ಬಾರಕೂರು	ವಿಜಯನಗರ	ಆಸ್ರಣ್ಣ
334	1468	ಬಾರಕೂರು	ವಿಜಯನಗರ	ಉಂಗುರುಪುಳಿ
344	1392	ಬಾರಕೂರು	ವಿಜಯನಗರ	ಕೆದಿಲ,ಮಡಿಕುಡಲ
350	1379	ಬಾರಕೂರು	ವಿಜಯನಗರ	ನಿಡೂಂಬರ
355	1471	ಬಾರಕೂರು	ವಿಜಯನಗರ	ಉಂಗುರುಪುಳಿ
365	1420	ಬಾರಕೂರು	ವಿಜಯನಗರ	ಕೇಕುಡ
387	1372	ಬಾರಕೂರು	ವಿಜಯನಗರ	ಊರಾಳ
	1408	ಕೆಂಜೂರಪಾದೆ	ವಿಜಯನಗರ	ಕುಂಜತ್ತ, ಮಂಡಚ್ಚ
	1431	ಪುತ್ತೂರುಮಠ	ವಿಜಯನಗರ	ಆಸ್ರಣ್ಣ, ಮುರುಡಿತ್ತಾಯ
	1383	ಉಳ್ಳಂಪಳ್ಳಿ	ವಿಜಯನಗರ	ನಿಡೂಂಬರ
	1371	ತಂತ್ರಾಡಿ	ವಿಜಯನಗರ	ಮಂಡಚ್ಚ
	1379	ಕಂಗುಮಠ	ವಿಜಯನಗರ	ನಿಡೂಂಬರ
	1441	ಕಂಗುಮಠ	ವಿಜಯನಗರ	ಮಧ್ಯಸ್ಥ
	1383	ಸಾಸ್ತಾವು	ವಿಜಯನಗರ	ನಿಡೂಂಬರ

ಕ್ರಿ.ಶ 1571 ರಲ್ಲಿ ಅಂಬಲಪಾಡಿಯ ಶ್ರೀಧರ ನಿಡುಂಬರರು ಜನಾರ್ದನ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದ್ದರೆಂದು ಹೇಳುವ ಶಿಲಾಶಾಸನ ಅಲ್ಲಿದೆ.

ಕ್ರಿ.ಶ. 1802 ರಲ್ಲಿ ಮೈಸೂರಿನ ದಿವಾನ ಪೂರ್ಣಯ್ಯನವರು ತುಳು ದೇಶದ ಬ್ರಾಹ್ಮಣರ ಆಚಾರ ವಿಚಾರ ವ್ಯವಸ್ಥೆ ನೋಡಿಕೊಳ್ಳಲು ನಿಡುಂಬೂರು ಬಲ್ಲಾಳರಿಗೆ ಪತ್ರ ಬರೆದ ದಾಖಲೆಯಿದೆ. ಬಂಟ್ವಾಳ ತಾಲೂಕಿನ ಅನಂತಾಡಿಯ ಕೊಬರಿ ಮಠದ ಬನ್ನಿಂತಾಯರು ಕ್ರಿ.ಶ. 1749ರ ಪೂರ್ವದಿಂದಲೂ ಅಲ್ಲಿದ್ದರೆಂದು ಹೇಳಿಕೆಯಿದೆ[1]

ದೇವಾಲಯ, ಭೂತಾಲಯಗಳ ಚರಿತ್ರೆಯಲ್ಲಿ ಶಿವಳ್ಳಿ ಬ್ರಾಹ್ಮಣರ ಕುಲನಾಮಗಳು ಮಹತ್ವದ ಸ್ಥಾನಗಳನ್ನು ಪಡೆದಿವೆ. ಅಡೂರು–ದೇವಣ್ಣಾಯ, ಶರಣಂತಾಯ, ಮಧೂರು–ಉಳಿಯತ್ತಾಯ, ಪೆರಡಾಲ–ಕೊಳತ್ತಾಯ, ಶರವು–ಕೇಕುಣ್ಣಾಯ, ಪಾವಂಜೆ–ಮಂಜತ್ತಾಯ, ಕಬ್ಬಿನಾಲೆ– ಕೆಂಗಿನ್ನಾಯ, ಪೆರ್ಡೂರು ಮಾಗಣೆ ದೇವಾಲಯದ ಕೈಫಿಯತ್ತಿನಲ್ಲಿ– ಸೀಮಂತೂರಾಯ, ಕಾಸರಗೋಡು ತಾಲೂಕಿನ ಕಾನಧೂಮವತಿ – ಕಡಮಣ್ಣಾಯ, ಕಲ್ಕುಡಕಲ್ಲುರ್ಟಿ ಪಾಡ್ದನದಲ್ಲಿ –ವೈಲಾಯ, ಕಾಂತಬಾರೆ–ಬುದಬಾರೆ ಪಾಡ್ದನದಲ್ಲಿ –ಪುತ್ತುರಾಯ ಕುಲನಾಮಗಳ ಮಾಹಿತಿ ಇದೆ.

1ನೇ ಆಳುಪರಸನ ವಡ್ಡರ್ಸೆ ಶಾಸನ
2ನೇ ಆಳುವರಸನ ಬೆಳ್ಮಣ್ಣು ತಾಮ್ರ ಶಾಸನ
ಕುಂದವರ್ಮನ ಕದಿರೆ ಶಾಸನ ಕಲಿ 4068
ವೀರಕುಲಶೇಖರ ದೇವ ಆಳುಪೇಂದ್ರನ ಮಂಗಳೂರು ಶಾಸನ
2ನೇ ಹರಿಹರನ ಬಾರಕೂರು ಶಾಸನ, ಶಕ 1301
2ನೇ ಹರಿಹರನ ಬಾರಕೂರು ಶಾಸನ, ಶಕ. 1302
2ನೇ ಹರಿಹರನ ಉಡುಪಿ ಶಾಸನ, ಶಕ. 1317
ಉಡುಪಿ ಕೃಷ್ಣಮಠದ ಶಾಸನ, ಶಕ. 1536

ಗ್ರಾಮಪದ್ಧತಿ ಮತ್ತು ಶಿವಳ್ಳಿ ಬ್ರಾಹ್ಮಣರು

ಗ್ರಾಮ ಪದ್ಧತಿ ಯಾವಾಗ ಬರೆಯಲ್ಪಟ್ಟಿತೆಂದು ಸ್ಪಷ್ಟವಾಗಿ ಹೇಳಲು ಯಾವುದೇ ಆಧಾರವಿಲ್ಲ. ಬೇರೆ ಬೇರೆ ಆವೃತ್ತಿಯಗಳು ಹಾಗೂ ಪ್ರತಿಗಳು ಬೇರೆ ಬೇರೆ ಸಮಯದಲ್ಲಿ ಬರೆಯಲ್ಪಟ್ಟವೆಂದು ಕಂಡು ಬರುತ್ತದೆ. ಪ್ರಾರಂಭದಲ್ಲಿ ಮೌಖಿಕವಾಗಿ ಇದ್ದ ಗ್ರಾಮಪದ್ಧತಿ ಸುಮಾರು 15 ನೇಯ ಶತಮಾನದಲ್ಲಿ ಇದನ್ನು ಬರವಣಿಗೆಯ ರೂಪಕ್ಕೆ ಇಳಿಸಲಾಯಿತೆಂದು ವಿದ್ವಾಂಸರುಗಳಾದ ಡಾ. ಗುರುರಾಜ ಭಟ್ಟ ಹಾಗೂ ಡಾ. ಬಿ.ಎ. ಸಾಲೆತ್ತೂರರು ಅಭಿಪ್ರಾಯ ಪಟ್ಟಿದ್ದಾರೆ. ಎಲ್ಲಾ ಆವೃತ್ತಿಗಳು 15 ನೇ ಶತಮಾನದಲ್ಲಿ ಬರೆಯಲ್ಪಟ್ಟವೆ ಎಂದು ಹೇಳಲೂ ಬರುವುದಿಲ್ಲ. ಕೆಲವು ಪ್ರತಿಗಳು ಅನಂತರದ ಶತಮಾನದಲ್ಲಿ ಅಂದರೆ 17–18 ನೇ ಶತಮಾನಗಳಲ್ಲಿ ಕೂಡಿ ಬರೆಯಲ್ಪಟ್ಟಿರಲು ಸಾಧ್ಯತೆಗಳು ಇವೆ. ಪ್ರಾರಂಭದ ಪ್ರತಿಗಳಲ್ಲಿ ಮೂಲ ಗ್ರಂಥದಲ್ಲಿದ್ದ ಸಂಸ್ಕೃತ ಶ್ಲೋಕಗಳ ಜೊತೆಗೆ ಗದ್ಯ ರೂಪದಲ್ಲಿ ಕನ್ನಡ ಭಾಷೆಗೆ ಅನುವಾದ ಮಾಡಿರುವುದನ್ನು ಕಾಣಬಹುದು.

ತೌಳವ ಬ್ರಾಹ್ಮಣರ ಕುಲಗಳ, ಸ್ಥಳಗಳ ಇತಿಹಾಸವನ್ನು ಹೇಳುವ ಒಂದು ಪ್ರಾಚೀನ ಗ್ರಂಥ 'ಗ್ರಾಮಪದ್ಧತಿ' ಇದರ ಪ್ರತಿಗಳು ಸಂಸ್ಕೃತದಲ್ಲಿ, ಕನ್ನಡದಲ್ಲಿಯೂ ಲಭ್ಯವಿದೆ ಕೆಲವೊಮ್ಮೆ ತುಳುಲಿಪಿಯನ್ನೂ ಕ್ವಚಿತ್ತಾಗಿ ಬಳಸಿದನ್ನು ಕಾಣಬಹುದು. ಇತಿಹಾಸ ಶಾಸ್ತ್ರದ ನಿಯಮಗಳನ್ನು ಸರಿಸಿ ಈ ಗ್ರಂಥದಲ್ಲಿರುವ ಕೆಲವು ಸತ್ಯಾಂಶಗಳನ್ನು ಅವಗಣಿಸಲಾಗದೆಂದು ಕೆಲವು ಇತಿಹಾಸಗಾರರ ಅಭಿಪ್ರಾಯವಾಗಿದೆ. ಡಾ. ಬಿ.ಎ. ಸಾಲೆತ್ತೂರರ ಪ್ರಕಾರ ತುಳುನಾಡಿನ ಹಾಗೂ ತೌಳವ ಬ್ರಾಹ್ಮಣರ ಸಾಮಾಜಿಕ ಇತಿಹಾಸ ದ ದೃಷ್ಟಿಯಲ್ಲಿ ಗ್ರಾಮಪದ್ಧತಿ ಪ್ರಾಮುಖ್ಯವನ್ನು ಪಡೆಯುತ್ತದೆ. ಕೆಲವು ನ್ಯೂನ್ಯತೆಗಳನ್ನು ಗ್ರಂಥದಲ್ಲಿ ಕಾಣಬಹುದಾದರೂ ತೌಳವ ಬ್ರಾಹ್ಮಣರ ಪರಂಪರಾಗತ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನದ ಕೆಲವು ಮಹತ್ವದ ಮಾಹಿತಿಗಳು ಗ್ರಾಮಪದ್ಧತಿ ಗ್ರಂಥದಲ್ಲಿ ಲಭ್ಯವಾಗುತ್ತದೆ. ಗ್ರಾಮ ಪದ್ಧತಿ ಗ್ರಂಥಗಳ ವಿವಿಧ ಆವೃತ್ತಿ ಮತ್ತು ಪ್ರತಿಗಳ ತೌಲನಿಕ ಅಧ್ಯಯನವನ್ನು ಮಾಡಿದರೆ ತೌಳವ ಬ್ರಾಹ್ಮಣರ ಇತಿಹಾಸದ ಕೆಲವು ವಿವರಗಳಾದರೂ ಇನ್ನಷ್ಟು ಸ್ಪಷ್ಟವಾಗಿ, ನಿಖರವಾಗಿ ಹಾಗೂ ವಿಸ್ತಾರವಾಗಿ ತಿಳಿಯಲು ಸಾಧ್ಯವಿದೆ.

ಪ್ರಸ್ತುತ ಗ್ರಾಮಪದ್ಧತಿಯ ಮೂರು ಪ್ರತಿಗಳ ಆಧಾರದ ಮೇಲೆ ಅಧ್ಯಯನವನ್ನು ಮಾಡಲ್ಪಟ್ಟಿದೆ. 1924ರಲ್ಲಿ ಹೊಳ್ಳ ಕೃಷ್ಣಯ್ಯನವರು ಒಲನಾಡುವಿನಲ್ಲಿ ಪ್ರಕಟಿಸಿದ ಪ್ರತಿ ಜರ್ಮನಿಯ ಟ್ಯುಬಿಂಜನ್ ವಿಶ್ವವಿದ್ಯಾನಿಲಯದಲ್ಲಿಯ ಪ್ರತಿ ಹಾಗೂ ಮಂಗಳೂರಿನ ವಿಶ್ವ ವಿದ್ಯಾನಿಲಯದ ಕನ್ನಡ ವಿಭಾಗದಲ್ಲಿರುವ ಪ್ರತಿ. ಅಧ್ಯಯನ ಉದ್ದೇಶಕ್ಕಾಗಿ ಈ ಮೂರು ಪ್ರತಿಗಳನ್ನು ಗ್ರಾ 1, ಗ್ರಾ 2, ಗ್ರಾ 3 ಎಂದು ಗುರುತಿಸಲಾಗಿದೆ.

ಗ್ರಾಮ ಪದ್ಧತಿಯ ಕೆಲವು ಪ್ರತಿಗಳು ಕೆಮ್ಮಿಂಜೆ ಕೇಶವ ತಂತ್ರಿ, ಮಿತ್ತಾಲ ಆಚಾರ್ಯ, ದೇರೆ ಬೈಲು ಹರಿಕೃಷ್ಣತಂತ್ರಿ ಉಡುಪಿ, ಮಂಜನಾಡಿ ರಾಮ ಬಲ್ಲಾಳ ಮುಂತಾದವರ ಮನೆಯಲ್ಲಿಯೂ ಕಾಣಬಹುದು. ನಡ್ವಂಕಾಡಿ ಪಾಂಗಣ್ಣಾಯ, ಮಂಗಳೂರು ಉರ್ವ ಪಂಚಲಿಂಗೇಶ್ವರ ದೇವಸ್ಥಾನದ ಗ್ರಂಥ ಭಂಡಾರದಲ್ಲಿಯ ಗ್ರಾಮ ಪದ್ಧತಿ ಪ್ರತಿ ಇದೆ. ಬಾಳೆ ಕುದ್ರು ಮಠದಲ್ಲಿದ್ದ ಗ್ರಾಮ ಪದ್ಧತಿಯ ಪ್ರತಿ ಈಗ ಧರ್ಮಸ್ಥಳ ತಾಳೆಗರಿ ಗ್ರಂಥಾಲಯದಲ್ಲಿದೆ.

ಗ್ರಾಮ ಪದ್ಧತಿಯ ಪ್ರತಿಗಳಲ್ಲಿ ತೌಳವ ಬ್ರಾಹ್ಮಣ ಪಂಗಡಗಳ ಕುರಿತು ಕೆಲವು ಐತಿಹ್ಯಗಳನ್ನು ತಿಳಿಸುತ್ತದೆ.

1. ತುಳುನಾಡಿನ ಪಶ್ಚಿಮ ಕರಾವಳಿ ಪ್ರದೇಶವನ್ನು ಪರಶುರಾಮ ಋಷಿಯು ಸೃಷ್ಟಿಸಿದ ಕತೆ.
2. ಬ್ರಾಹ್ಮಣರು ಪ್ರಾರಂಭದಲ್ಲಿ ತುಳುನಾಡಿನ 32 ಗ್ರಾಮಗಳಲ್ಲಿ ವಾಸವಾಗಿದ್ದ ವಿವರ ಮತ್ತು ಆಯಾ ಗ್ರಾಮದಲ್ಲಿದ್ದ ಬ್ರಾಹ್ಮಣ ಕುಲಗಳ ವಿವರಗಳು.
3. ಅಹಿಚ್ಛತ್ರದಿಂದ ತುಳುನಾಡಿಗೆ ಕದಂಬ ವಂಶದ ರಾಜ ಮಯೂರವರ್ಮ ಅವನ ಮಗ ಚಂದ್ರಾಂಗದವರ್ಮ ಮತ್ತು ಮೊಮ್ಮಗ ಲೋಕಾದಿತ್ಯನು ಕರೆದು ಕೊಂಡು ಬಂದ ವೃತ್ತಾಂತದ ಬಗ್ಗೆ ವಿವರಣೆ ಇದೆ.

ಆಗಿನ ಕಾಲದ ಕನ್ನಡದಲ್ಲಿ ರಾಜ್ಯದ ಉಗಮದ ಕುರಿತು ಮತ್ತು ಬ್ರಾಹ್ಮಣರ ವಸತಿಗಳ ನಿರ್ಮಾಣದ ಬಗ್ಗೆ ದಂತ ಕಥೆಯರೂಪದಲ್ಲಿ ಮೊದಲಭಾಗದಲ್ಲಿ ವಿವರಣೆ ಇದೆ. ತುಳುನಾಡನ್ನು ಪರಶುರಾಮನು ಸೃಷ್ಟಿಸಿದ ಬಗ್ಗೆ ನಿರೂಪಣೆ ಇದೆ. ತುಳುನಾಡು ಅಬ್ರಾಹ್ಮಣ್ಯ ದೇಶವಾದ್ದರಿಂದ ಉತ್ತರದಿಂದ ಬ್ರಾಹ್ಮಣರು ಈ ಪ್ರದೇಶಕ್ಕೆ ಬರಲು ಒಪ್ಪದ ಕಾರಣ ಮೊದಲೇ ಇಲ್ಲಿ ನೆಲೆಸಿದ ಮೊಗೇರ ಜನಾಂಗದವರನ್ನು ಬ್ರಾಹ್ಮಣೀಕರಣಗೊಳಿಸುತ್ತಾನೆ. ಅಂತೆಯೇ ಬ್ರಾಹ್ಮಣರಿಗೆ ಸಿಗಬೇಕಾದ ಮರ್ಯಾದೆ ಸ್ಥಾನಮಾನಗಳನ್ನು ಕೊಡುವ ಭರವಸೆಯನ್ನು ನೀಡುತ್ತಾನೆ. ತ್ರಿನೇತ್ರ ಕದಂಬನ ಜನ್ಮದ ಕುರಿತು ಕಥೆ ಇದೆ. ಈ ದೇಶವನ್ನು ಆಳ್ವಿಕೆ ಮಾಡಿದ್ದ ಬೇರೆ ಬೇರೆ ರಾಜರುಗಳ ಹೆಸರನ್ನು ನಮೂದಿಸಲಾಗಿದೆ.

ಕೆಲವು ಬ್ರಾಹ್ಮಣ ಹಾಗೂ ಅಬ್ರಾಹ್ಮಣ ಗುಂಪುಗಳು ರಾಜರುಗಳ ವಿರುದ್ಧ ದಂಗೆ ಎದ್ದ ಬಗ್ಗೆ ನಿರೂಪಿಸಲಾಗಿದೆ. ಪರಶುರಾಮ ಕ್ಷೇತ್ರವಾದ ತುಳುನಾಡನ್ನು ಆಳ್ವಿಕೆ ಮಾಡಿರುವ ಮಯೂರವವರ್ಮ, ಚಂದ್ರಾಂಗದ ಹಾಗೂ ಲೋಕಾದಿತ್ಯರ ಬಗ್ಗೆ ಹಾಗೂ ಅವರ ಆಳ್ವಿಕೆಯ ಕ್ರಮದ ಕುರಿತು ಕೆಲವು ವಿಷಯಗಳನ್ನು ಮತ್ತು ಆಗ ನಡೆದ ಘಟನೆಗಳನ್ನು ಹೇಳಲಾಗಿದೆ. ಚಂಡಾಲರ ರಾಜನಾದ ಹುಬ್ಬಾಸಿಗನ ದಂಗೆಯನ್ನು ವಿವರಿಸಲಾಗಿದೆ. ಮಯೂರವರ್ಮ ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ಕರೆತರುತ್ತೇನೆಂದು ನಿಶ್ಚಯಿಸಿದಾಗ, ಪರಶುರಾಮನಿಂದ ಸೃಷ್ಟಿಸಲ್ಪಟ್ಟ ಬ್ರಾಹ್ಮಣರು ತಾವು ತಮ್ಮ ಸ್ಥಾನ

ಮರ್ಯಾದೆಯನ್ನು ಕಳೆದುಕೊಳ್ಳುತ್ತೇವೆಯೋ ಎಂಬ ಭೀತಿಯಿಂದ ಮಯೂರ ವರ್ಮನ ವಿರುದ್ಧ ದಂಗೆ ಎದ್ದಾಗ ಮಯೂರ ವರ್ಮ ಅವರನ್ನು ಸಮಾಧಾನ ಪಡಿಸಿದ ವಿವರಣೆ ಬರುತ್ತದೆ. ಕದಂಬ ರಾಜನಾದ ಮಯೂರವರ್ಮನ ತಾಯಿ ಕದಂಬ ರಾಜಕುಮಾರಿ ಸುಶೀಲಾ ಹಾಗೂ ಆತನ ತಂದೆ ಸೂರ್ಯವಂಶದ ಹೇಮಾಂಗರಾಯ. ಮಯೂರವರ್ಮ ತನ್ನ ತಂದೆಯ ವಂಶದ ಬದಲು ತಾಯಿಯ ಕುಲವಾದ ಕದಂಬ ಮನೆತನಕ್ಕೆ ಸೇರಿದವನಾಗಿದ್ದಾನೆ. ಈ ವಿವರಣೆಯಿಂದ ಈ ಗ್ರಂಥವನ್ನು ದಕ್ಷಿಣ ಕನ್ನಡದಲ್ಲಿದ್ದ ಮಾತೃಪ್ರಧಾನ ಸಮಾಜದಿಂದ ಪ್ರಭಾವಿತನಾಗಿದ್ದ ವ್ಯಕ್ತಿಯೆಂದು ನಿರ್ಧರಿಸಬಹುದು. ಇದಕ್ಕಾಗಿಯೇ ತನ್ನ ದೇಶದಲ್ಲಿ ಎಲ್ಲರೂ ದೌಹಿತ್ರಧರ್ಮವನ್ನು ಪಾಲಿಸಬೇಕೆಂದು ಮಯೂರವರ್ಮ ಆದೇಶ ನೀಡಿದ ಬಗ್ಗೆ ವಿವರಣೆ ಇದೆ.

ಬ್ರಾಹ್ಮಣರಿಗೆ ನೀಡಿದ 32 ಗ್ರಾಮಗಳ ಕುರಿತು ವಿವರಣೆ ಮೂರನೇ ಭಾಗದಲ್ಲಿದೆ. ಬ್ರಾಹ್ಮಣ ಕುಲಗಳು ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ ವಿವರಣೆ ಹಾಗೂ ಬ್ರಾಹ್ಮಣ ಕುಲಗಳು ಎಲ್ಲೆಲ್ಲಿ ನೆಲೆಸಿದವು ಎಂಬುದನ್ನು ತಿಳಿಸುತ್ತದೆ. ಈ ಮೂವತ್ತೆರಡು ಗ್ರಾಮಗಳನ್ನು ತುಳುನಾಡಿನಲ್ಲಿ ಈಗಲೂ ಗುರುತಿಸಬಹುದು. ವಿಶೇಷವಾಗಿ ವಿವಿಧ ಬ್ರಾಹ್ಮಣಕುಲಗಳು ಮತ್ತು ಅವುಗಳು ಪಾಲಿಸುವ ಸಂಪ್ರದಾಯಗಳನ್ನು ಅಲ್ಲಿಯ ದೇವಸ್ಥಾನಗಳ ಮೂಲಕ ಮುಂದುವರೆಸಿಕೊಂಡು ಹೋಗಿರುವುದನ್ನು ಕಾಣಬಹುದು. ಆಗಿನ ಕಾಲದ ಸಮಾಜದ ಗ್ರಾಮೀಣ ಇತಿಹಾಸವನ್ನು ಬರೆಯಲು ಈ ಗ್ರಂಥ ಸಹಕಾರಿಯಾಗಿದೆ. ಪರಶುರಾಮ 21 ಬಾರಿಕ್ಷತ್ರಿಯ ಸಮಾಜವನ್ನು ನಿರ್ನಾಮ ಮಾಡಿದ ಬಳಿಕ ತನಗೆ ಅಂಟಿರುವ ಪಾಪದ ಪರಿಹಾರಕ್ಕಾಗಿ ಕಾಶ್ಯಪನಿಗೆ ತಾನು ಗೆದ್ದ ಭೂಮಿಯನ್ನೆಲ್ಲಾ ಧಾರೆಯೆರೆದು ಕೊಡುತ್ತಾನೆ. ಬೇರೆಯವರಿಗೆ ಧಾರೆ ಎರೆದ ಭೂಮಿಯಲ್ಲಿ ನೆಲೆ ನಿಂತರೆ 'ದತ್ತಾಪಹಾರ' ದೋಷ ಬರುತ್ತದೆಂಬ ವಿಚಾರವನ್ನು ಕಾಶ್ಯಪ ಹೇಳಿದಾಗ ಸಹ್ಯಪರ್ವತಕ್ಕೆ ಪರಶುರಾಮ ಬಂದು ಪಶ್ಚಿಮ ಕರಾವಳಿಯಲ್ಲಿ ಹೊಸ ಪ್ರದೇಶವನ್ನು ಸೃಷ್ಟಿಸುತ್ತಾನೆ. ಹೊಸದಾಗಿ ಸೃಷ್ಟಿಸಿದ ಈ ಭೂಮಿಯಲ್ಲಿ ಬ್ರಾಹ್ಮಣರು ಇರುವುದಿಲ್ಲ. ಅಬ್ರಾಹ್ಮಣವಾದ ಈ ಪ್ರದೇಶದಲ್ಲಿ ಬೇರೆ ಪ್ರದೇಶದ ಬ್ರಾಹ್ಮಣರು ಬರಲು ಒಪ್ಪುವುದಿಲ್ಲ. ಈ ಪ್ರದೇಶದಲ್ಲಿ ಮೊದಲಿನಿಂದಲೂ ವಾಸವಾಗಿದ್ದ ದಾಸ-ರೇವರ-ಕೈವರ್ತವನ್ನು ಪರಶುರಾಮ ಬ್ರಾಹ್ಮಣೀಕರಣಗೊಳಿಸುತ್ತಾನೆ. ಮತ್ತು ಬ್ರಾಹ್ಮಣರಿಗೆ ಸಲ್ಲುವ ಎಲ್ಲಾ ಸವಲತ್ತುಗಳನ್ನು ಇವರಿಗೂ ಕೊಡುತ್ತಾನೆ. ಈ ಬ್ರಾಹ್ಮಣರಿಗೆ ಕಷ್ಟವೇನಾದರೂ ಬಂದರೆ ಕೂಡಲೇ ತನ್ನ ಹೆಸರನ್ನು ಕರೆಯಬೇಕೆಂದೂ, ಆಗ ಪ್ರತ್ಯಕ್ಷನಾಗಿ ಕಷ್ಟವೆಲ್ಲವನ್ನೂ ಪರಿಹರಿಸುತ್ತೇನೆಂದು ಅಭಯವನ್ನು ನೀಡುತ್ತಾನೆ. ಮತ್ತೆ ಮಹೇಂದ್ರ ಪರ್ವತಕ್ಕೆ ತಪಸ್ಸಿಗೆಂದು ಪರಶುರಾಮ ಹೋಗುತ್ತಾನೆ. ಪರಶುರಾಮನ ಮಾತನ್ನು ಪರೀಕ್ಷಿಸಬೇಕೆಂಬ ಉದ್ದೇಶದಿಂದ ಬ್ರಾಹ್ಮಣರು 'ರಾಮ' ಎಂದು ಕರೆಯುತ್ತಾರೆ. ಪ್ರತ್ಯಕ್ಷನಾದ ಪರಶುರಾಮ ನಿಜ ಸಂಗತಿಯನ್ನು ತಿಳಿದು ಕೋಪಗೊಂಡು ನೀವು ಶೂದ್ರಪ್ರಾಯರಾಗಿ ಎಂದು ಶಾಪವನ್ನು ನೀಡುತ್ತಾನೆ.

ಕದಂಬನ ಹುಟ್ಟಿನ ಬಗ್ಗೆ ಮುಂದಿನ ಭಾಗದಲ್ಲಿ ನಿರೂಪಣೆ ಇದೆ. ಶಿವ ಮತ್ತು ಪಾರ್ವತಿಯರು ಸಹ್ಯ ಪರ್ವತಕ್ಕೆಂದು ಬಂದಾಗ ಕದಂಬನ ಜನನವಾಗುತ್ತದೆ. ಕದಂಬ ವೃಕ್ಷದ ಕೆಳಗೆ ಜನನವಾದ ಕಾರಣ ಆತನಿಗೆ ಕದಂಬನೆಂಬ ಹೆಸರನ್ನು ಇಡಲಾಯಿತು. ರಾಜನಾಗು ಎಂದು ಆಶೀರ್ವಾದ ಮಾಡಿದರು. ಆತನ ಅನಂತರ

ವಸುಚಕ್ರವರ್ತಿಯಾಗಿ ರಾಜ್ಯವನ್ನು ಆಳುತ್ತಾನೆ. ಆತನ ಮಗಳಾದ ಸುಶೀಲಾ ಸೂರ್ಯವಂಶದ ಹೇಮಾಂಗರಾಯನನ್ನು ಮದುವೆಯಾಗುತ್ತಾಳೆ. ಈ ದಂಪತಿಗಳಿಗೆ ಜನಿಸಿದವನೇ ಮಯೂರವರ್ಮ. ಗೋದಾವರಿ ನದಿ ತೀರದಲ್ಲಿರುವ ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ಕರೆತರಬೇಕೆಂಬ ಸಲಹೆಯನ್ನು ಮಯೂರವರ್ಮನಿಗೆ ಋಷಿಗಳು ನೀಡುತ್ತಾರೆ. ಋಷಿಗಳ ಸಲಹೆಯಂತೆ ಮಯೂರವರ್ಮ, ಬ್ರಾಹ್ಮಣರನ್ನು ಅಹಿಚ್ಛತ್ರದಿಂದ ಕರೆತರುತ್ತಾನೆ. ಇದಕ್ಕೂ ಮೊದಲು ಪರಶುರಾಮ ಈ ಪ್ರದೇಶವನ್ನು ಈ ಕೆಳಗಿನಂತೆ ವಿಂಗಡಿಸಿರುತ್ತಾನೆ.

1. ಕರಾಟ 2. ವರಾಟ 3. ಮರಾಟ 4. ಕೊಂಕಣ 5. ಹೈವ
6. ತೌಳವ 7. ಕೇರಳ

ಮಯೂರವರ್ಮನಿಂದ ಕರೆಸಲ್ಪಟ್ಟ ಬ್ರಾಹ್ಮಣರು ಹೈವ, ತೌಳವ, ಹಾಗೂ ಕೇರಳದ ವಿವಿಧ ಗ್ರಾಮಗಳಲ್ಲಿ ನೆಲೆಸುತ್ತಾರೆ. ಈ ಬ್ರಾಹ್ಮಣರು ಹೈವದ 18 ಗ್ರಾಮಗಳಲ್ಲಿ, ತೌಳವರ 32 ಗ್ರಾಮಗಳಲ್ಲಿ ಹಾಗೂ ಕೇರಳದ 64 ಗ್ರಾಮಗಳಲ್ಲಿ ನೆಲೆಸುತ್ತಾರೆ.

ಬ್ರಾಹ್ಮಣರು ತಮ್ಮ ಸಹಾಯಕ್ಕೆಂದು ಬ್ರಾಹ್ಮಣೇತರರನ್ನು ಕರೆತಂದಿದ್ದರು. ಅವರಿಗೆ ನಾಯರರು ಎಂದು ಹೆಸರಿಡುತ್ತಾರೆ. ನಾಯರರು ಬ್ರಾಹ್ಮಣರ ಹತೋಟಿಯಲ್ಲಿರಬೇಕು. ಬ್ರಾಹ್ಮಣ ಸಮಾಜದ ನಿರ್ಮಾಣದ ಸಮಯದಲ್ಲಿ ಆಗಾಗಲೇ ಈ ಪ್ರದೇಶದಲ್ಲಿ ಇದ್ದ ಹಳೆಯ ಪತಿತ ಬ್ರಾಹ್ಮಣರು ವಿರೋಧಿಸುತ್ತಾರೆ. ಮಯೂರವರ್ಮ ಇವರನ್ನು ಶಿಕ್ಷಿಸುವುದಿಲ್ಲ. ಬದಲಾಗಿ ಪರ್ಯಾಯ ವ್ಯವಸ್ಥೆಯನ್ನು ಮಾಡುತ್ತಾನೆ. ಪತಿತ ಬ್ರಾಹ್ಮಣರಿಗೆ ಈ ಕೆಳಗಿನ ಗ್ರಾಮವನ್ನು ನೀಡುತ್ತಾನೆ.

1. ನಾಗೂರುಗ್ರಾಮ 2. ಮಟ್ಟಿನಗ್ರಾಮ 3. ಕುಶಸ್ಥಳಿಗ್ರಾಮ 4. ಸ್ವಾಸ್ಥಿಗ್ರಾಮ

ಆ ಬ್ರಾಹ್ಮಣರಿಗೆ ಅವರವರ ಗ್ರಾಮದ ಹೆಸರನ್ನೇ ನೀಡುತ್ತಾನೆ.

ಬ್ರಾಹ್ಮಣೇತರರು ಬ್ರಾಹ್ಮಣರಿಗೆ ಸಹಕಾರ ನೀಡಬೇಕೆಂಬ ಉದ್ದೇಶದಿಂದ ಮಯೂರವರ್ಮ ಎರಡು ದೇಶವನ್ನು ನೀಡುತ್ತಾನೆ. ಈ ನಾಡುಗಳಲ್ಲಿ ನೆಲೆಸಿದವರನ್ನು 'ನಾಡ'ವರೆಂದು ಕರೆಯಲಾಗುತ್ತದೆ. ಈ ನಾಡುಗಳನ್ನು ಕೆಳಗಿನಂತೆ ವಿಂಗಡಿಸಲಾಗಿದೆ.

ಕೆಲನಾಡು–ನಲವತ್ತನಾಡು–ಹಲಸನಾಡು–ಯರಡುನಾಡು. ಬ್ರಾಹ್ಮಣರು ತಮ್ಮ ಅಗ್ರಹಾರಗಳಲ್ಲಿ ವೇದಾಧ್ಯಯನ, ಈಶ್ವರಪೂಜೆ, ಮಹಾವಿಷ್ಣು ಪೂಜೆ ಹಾಗೂಮಹಾಗಣಪತಿ ಆರಾಧನೆ ಮಾಡಬೇಕು.

ಮಯೂರವರ್ಮನಿಗೆ ಚಂದ್ರಾಂಗದನೆಂಬ ಮಗ ಜನಿಸಿದಾಗ ರಾಜ್ಯತ್ಯಾಗ ಮಾಡಿ ಮಯೂರವರ್ಮ ತಪಸ್ಸಿಗೆ ಕಾಡಿಗೆ ತೆರಳುತ್ತಾನೆ. ಮಯೂರವರ್ಮನಿಂದ ಕರೆತರಲ್ಪಟ್ಟ ಎಲ್ಲಾ ಬ್ರಾಹ್ಮಣರೂ ರಾಜಪ್ರೋತ್ಸಾಹ ಇಲ್ಲವೆಂದು ಹೇಳಿ ಪುನಃ ಅಹಿಚ್ಛತ್ರಕ್ಕೆ ತೆರಳುತ್ತಾರೆ. ಚಂದ್ರಾಂಗದ ಪ್ರಾಯಕ್ಕೆ ಬಂದಾಗ ಈ ವಿಷಯವನ್ನು

ತಿಳಿದು ಅಹಿಚ್ಛತ್ರಕ್ಕೆ ಹೋಗಿರುವ ಬ್ರಾಹ್ಮಣರನ್ನು ಕರೆತರುತ್ತಾನೆ. ಅವರಿಗೆ ಬೇಕಾಗಿರುವ ಎಲ್ಲಾ ಅನುಕೂಲತೆಗಳನ್ನು ಕಲ್ಪಿಸುತ್ತಾನೆ. ಆತನ ಮರಣದ ಅನಂತರ ಚಂಡಾಲ ರಾಜನಾದ ಹುಬ್ಬಾಸಿಗ ಬ್ರಾಹ್ಮಣರಿಗೆ ಹಲವು ರೀತಿಯ ತೊಂದರೆಗಳನ್ನು ಕೊಡಲು ಪ್ರಾರಂಭಿಸಿದಾಗ ಹಿಂಸೆ ತಡೆಯಲು ಸಾಧ್ಯವಾಗದೆ ಕೆಲವು ಬ್ರಾಹ್ಮಣರು ಪುನಃ ಅಹಿಚ್ಛತ್ರಕ್ಕೆ ವಾಪಾಸಾಗುತ್ತಾರೆ. ಚಂದ್ರಾಗದನ ಮಗ ಲೋಕಾಧಿತ್ಯ ಮಯೂರವರ್ಮ ಗೋಕರ್ಣದ ಚಂಡಸೇನನ ಸಹಾಯದಿಂದ ಉಪಾಯದಿಂದ ಹುಬ್ಬಾಸಿಗನನ್ನು ಕೊಲ್ಲುತ್ತಾನೆ. ಅನಂತರ ಪುನಃ ಅಹಿಚ್ಛತ್ರಕ್ಕೆ ಲೋಕಾದಿತ್ಯ ಹೋಗಿ ಅಲ್ಲಿ ಭಟ್ಟಾಚಾರ್ಯರನ್ನು ಭೇಟಿ ಆಗಿ ಅವರ ಮೂಲಕ ಬ್ರಾಹ್ಮಣರನ್ನು ಪುನಃ ತುಳುನಾಡಿಗೆ ಕರೆ ತರುತ್ತಾನೆ.. ಅವರಿಗೆ ಬೇಕಾದ ಸೌಲಭ್ಯ ಮತ್ತು ರಕ್ಷಣೆಯನ್ನು ಒದಗಿಸುತ್ತಾನೆ. ಇನ್ನು ಕೆಲವು ಮೂಲನಿವಾಸಿಗಳ ಜಾತಿಗಳನ್ನು ಹೆಸರಿಸಲಾಗಿದೆ.
1. ಬಕ್ಕ 2. ಬಾಕುಡ 3. ಮೇರ 4. ಗೊದ್ದಿ 5. ಬಿಳೆ 6. ಹಸಳವ ಹಾಗೂ 7. ಕೊರಗ ಈ ಎಲ್ಲರೂ ಬ್ರಾಹ್ಮಣರಿಗೋಸ್ಕರ ಕೆಲಸ ಮಾಡಬೇಕಿತ್ತು.

ಬ್ರಾಹ್ಮಣರಿಗೆ ಭೂಮಿಯನ್ನು ದಾನ ಕೊಡುವ ಉದ್ದೇಶದಿಂದ ಗೋಕರ್ಣದ ಮಹಾಬಲೇಶ್ವರ ಸನ್ನಿಧಿಯಲ್ಲಿ ಒಂದು ಯಜ್ಞವನ್ನು ನೆರವೇರಿಸಲಾಯಿತು. ಭೂದಾನದ ಜೊತೆಗೆ ಕೋಟ ಗ್ರಾಮದ ಎರಡು ಬ್ರಾಹ್ಮಣರಿಗೆ ಮಹಾಬಲೇಶ್ವರದಲ್ಲಿ ಪೂಜೆ ಮಾಡುವ ಹಕ್ಕು ಹಾಗೂ ಅಲ್ಲಿಯ ತಂತ್ರಿತ್ವದ ಹಕ್ಕನ್ನು ನೀಡಲಾಯಿತು. ಗ್ರಾಮ ಪದ್ದತಿಯ ವಿವಿಧ ಪ್ರತಿಗಳು ಬ್ರಾಹ್ಮಣ ಗ್ರಾಮಗಳ ಕುರಿತು ಮತ್ತಷ್ಟು ಮಾಹಿತಿಗಳನ್ನು ನೀಡುತ್ತದೆ. 16 ಪಶ್ಚಿಮ ಗ್ರಾಮಗಳು ಹಾಗೂ 16 ಪೂರ್ವ ಗ್ರಾಮಗಳೆಂದು ವಿಭಾಗಿಸಲಾಗಿದೆ. ಈ ಗ್ರಾಮದಲ್ಲಿ ನೆಲೆಸಿದ ವಿವಿಧ ಕುಲಗಳ ಬಗ್ಗೆ ಮಾಹಿತಿ ನೀಡುತ್ತದೆ. ಪಂಚಮಹಾಯಜ್ಞ ಹಾಗೂ ವೇದಾಧ್ಯಯನಗಳು ಬ್ರಾಹ್ಮಣರ ಕರ್ತವ್ಯಗಳೆಂದು ಅಲ್ಲಿ ನಮೂದಿಸಲಾಗಿದೆ. ಗ್ರಾಮಗಳ ವಿಂಗಡನೆ ಹಾಗೂ ಕುಲಗಳ ವಿವರವಾದ ಮಾಹಿತಿಯ ನಿರೂಪಣೆಯನ್ನು 'ಸಂಕೇತಿ ಪದ್ಧತಿ'[1] ಎಂದು ಕರೆಯಲಾಗಿದೆ.

ಬ್ರಾಹ್ಮಣರ ಮನೆಗಳ ಸಂಪ್ರದಾಯಗಳ ನಿರೂಪಣೆ, ಬ್ರಾಹ್ಮಣ ಕುಲಗಳ ಸ್ಥಾನಮಾನ, ಅವುಗಳ ಹಕ್ಕು ಬಾಧ್ಯತೆಗಳನ್ನು ನಿರೂಪಿಸಲಾಗಿದೆ. ಇಲ್ಲಿ ಭಟ್ಟರು, ಪ್ರಭು, ತಂತ್ರಿ ಗ್ರಾಮಣಿ, ಅಧಿವಾಸಿ, ಪಕ್ಷನಾಥ ಮತ್ತು ಜನ್ನಿಗಳ ಕುರಿತಾಗಿ ವಿವರಣೆಗಳು ನೀಡಲಾಗಿದೆ.

ಭಟ್ಟ ಸ್ಥಾನಗಳು 40, ಅಗ್ನಿಹೋತ್ರಿಗಳು 24, ಸ್ಮಾರ್ತರು 24, ಸಭಾಪತಿಗಳು 2, ಪಂಡಿತರು 2, ಪ್ರಭುಗಳು 4, ತಂತ್ರಿಗಳು 6, ಅಗ್ರಾಮಣಿಗಳು 24, ಮಂದಿ ಅಧಿವಾಸಿಗಳು 21, ಮಂದಿ ಪಕ್ಷನಾಥರು 2, ಜನ್ನಿಗಳು 28,

ಸಭಾಪತಿಗಳು	:	ಶಬರಾಯ, ತಿಬುರಾಯ
ಪಂಡಿತರು	:	ಕಲ್ಲುರಾಯ, ಉಪರಣ್ಣಾಯ
ತಂತ್ರಿಗಳು	:	ನೇತ್ರತ್ತಾಯ, ಇಚ್ಚಿಲತ್ತಾಯ, ಪುತ್ರಾಯ, ಪಾಂಗಂಣಾಯ, ಉಡುಪ,ಬ್ರಹ್ಮಕಾರಂತ

ಸಂಕೇತಿಪದ್ಧತಿ –ಗ್ರಾಮಗಳ ವಿಂಗಡನೆ ಮತ್ತು ಕುಲಗಳ ವಿವರವಾದ ಮಾಹಿತಿಯ ನಿರೂಪಣೆ

ಪಕ್ಷನಾಥರು	:	ಮುಡಿಲಾಯ, ನಿಡುಬೂರಾಯ
ಪ್ರಭುಗಳು	:	ಚೌಟರು, ಬಂಗರು, ಮುಡಿಲಾಯ, ನಿಡುಂಬುರಾಯ
ಭಟ್ಟರು	:	ಮುನ್ನೂರಾಯ, ಅರಿನಾಯ, ಕೋವಿನಾಯ, ಪೆರಣ್ಣಾಯ ಕೊಯಮಗತ್ತಾಯ, ಕುದುರಾಯ, ಮಜ್ಜಿತ್ತಾಯ, ತಾಳತ್ತಾಯ, ಪಿಜತ್ತಾಯ, ಪಾತುರಾಯ, ಇಂದುವಳಿತ್ತಾಯ,ಕೊಯಕೊಡನಾಯ, ಸೀಮಂತುರಾಯ, ಪುಂಚನಾಯ, ಮುಚಂತೂರಾಯ, ಮೊಗೆರಾಯ, ಮಿತ್ರಂತಾಯ, ಅಲೆವೂರಾಯ, ತುಂಗ, ಬ್ರಹ್ಮಕಾರಂತ, ಕಲ್ಲೂರಾಯ, ಉಡುಪ,ಬೈಪಾಡಿತ್ತಾಯ, ಅತ್ರಾಡಿತ್ತಾಯ, ಅಪ್ಪಂತಾಡಿತ್ತಾತಯ, ಬೆಳನ್ನಾಯ, ಅರೆಮನೆತ್ತಾಯ, ಇಡೆಪಾಡಿತ್ತಾಯ, ಶಬರಾಯ, ಉಪರಣ್ಣಾಯ, ಕೊರ್ಗಿನ್ನಾಯ, ಆಮೆಡಿತ್ತಾಯ, ಶಂಬರಾಯ, ಕೊಳತಾಯ, ಮುಡಂಪಾಡಿತ್ತಾಯ, ಬಜಿತ್ತಾಯ, ಕೊರ್ನಾಯ, ಶಗುರಿತ್ತಾಯ, ಮಾಡಂತಿಲಾಯ, ಪಾತ್ತೂರಾಯ.
ಅಗ್ನಿಹೋತ್ರಿ	:	ಶಿಮಂತೂರಾಯ, ಮುಚಂತುರಾಯ, ಮುನ್ನೂರಾಯ,ಅಲೆವೂರಾಯ, ಕೊಡೆಂಚ, ಮಂಜೆತ್ತಾಯ, ಶರಳಾಯ, ಮಡಪಳಿತ್ತಾಯ, ಕಡಂಬಳಿತ್ತಾಯ, ಕುಂಜಿತಾಯ, ನಡುವಂತಿಲಾಯ, ಶಗುರಿತ್ತಾಯ ತೆಂಕಿಲಾಯ, ಪುತ್ರಾಯ, ಕೆಕುಡೆನಾಯ, ಬಾಯಿರಿತಾಯ, ಕಲ್ಲೂರಾಯ, ಬೈಪಾಡಿತಾಯ, ವಪ್ಪಂತಾಯ, ಇಡೆಪಾಡಿತ್ತಾಯ, ಕೊರ್ನಾಯ, ಮರಡಿತಾಯ, ಉಡುಪು, ಬ್ರಹ್ಮಕಾರಂತ, ಬನ್ನಿಂಜಿತಾಯ, ಶಿವತಾಯ
ಸ್ಮಾರ್ತರು	:	ನೂಜಿತಾಯ, ಕಿದೆನಾಯ, ನಾರಳತಾಯ, ತಾಳಂತ್ರಾಯ, ಅಯವಿನಾಯ,ಮಣ್ಣಕಳತಾಯ, ಅಲೆವೂರಾಯ, ಬ್ರಹ್ಮಕಾರಂತ, ಕಲ್ಲೂರಾಯ,

ಉಡುಪ, ಬೈಪಾಡಿತ್ತಾಯ, ಕೊಂಗಿರ್ನಾಯ, ಮುಂಡಪಾಡಿತ್ತಾಯ, ಕೊಡಂಚ.

ಗ್ರಾಮಣಿಗಳು : ಪಾತುರಾಯ, ಪೊಯ್ಯೆತ್ತಾಯ, ಶುಳ್ಳಣ್ಣಾಯ,

ಕಿದಕಿದೆನಾಯ, ಕೋಟಂಜಿತ್ತಾಯ, ನಡುವಂತಿಲಾಯ, ಕುಂಜಿತ್ತಾಯ, ಹೆರಳ, ಕಾರಾಂತ, ನಾರಿತ್ತಾಯ, ಎಡೆಬೆಟ್ಟಿನಾಯ, ಹೆಬ್ಬಾರ, ನೀರಾವರದಲ್ಲಿ ಸಂಪಿಗೆತ್ತಾಯ, ಅಂಬರಣ್ಣಾಯ, ಅರಮನೆತಾಯ, ಮಾಡಪ್ಪಿನಾಯ, ಪುತ್ರಣ್ಣಾಯ, ಕಕರಣ್ಣಾಯ, ಕಿನಕಳತ್ತಾಯ, ಉಡುಪ, ಉರಂಬಳಿ.

ಅಧಿವಾಸಿಗಳು : ಅಲೆವೂರಾಯ,ಪಾಗಂಪಿನಾಯ,

ತಾರೆತಾಯ,ಅಣ್ಣಕುಂಜಿತಾಯ, ಬಾಶಕಣ್ಣಾಯ, ಕೆದಟಿರಾಯ, ಅರ್ಬಿರಾಯ, ಪೆಲಾಡಿತಾಯ, ಕನ್ನರಾಡಿತಾಯ,ಕಂಬರಣ್ಣಾಯ, ಉಳಿಯಾರಾಯ, ಕಬೆಕೊಡಿನಾಯ, ಮಲಾಂಪಾಡಿತ್ತಾಯ, ಏರಿಂಕತಾಯ ಬರ್ತೊಡಿತಾಯ, ಪುಂಜಕುಣ್ಣಾಯ,ಕುದುರಾಯ, ನಿಂಜೂರಾಯ, ಇರವತ್ತೂರಾಯ, ನಂಬುನಿತ್ತಾಯ, ಜಾತೊಡಿತಾಯ.

ಜನ್ನಿಗಳು : ಮಡಿಕುಡಿಲಾಯ, ಶಿಡಿಕುಡಿಲಾಯ,

ತಿನಕಳತಾಯ, ಮಡುಮಣ್ಣಾಯ, ಕಾಂಪುಂಜಾಯ, ವೈಲಾಯ, ಮಂಜಿತ್ತಾಯ, ಕೆಮ್ಮುಂಡೆನಾಯ, ವೊಡಂಬಾಡಿತಾಯ, ಕಬೆಕೊಡಿನಾಯ, ಹೆಬ್ಬಾರ, ಉಂಗುಪಳ್ಳಿ, ಯೆಡೆಬೆಟ್ಟಿನಾಯೆ, ಕತೊಡೆನಾಯ, ರೈಪತ್ತಾಯ, ಕೊಡಿತಿಲ್ಲಾಯ, ಬಾಬೆತಿಲಾಯ, ಮಡಿಲಾಯ, ಊರಾಳ, ಕುದುರೆತ್ತಾಯ, ತೆಂಜತ್ತಾಯ, ಕುಂತುರಾಯ, ಮರತಾಯ, ಅಮ್ಮಣ್ಣಾಯ, ಬಾಯತ್ತಾಯ, ಪುದೆನಾಯ, ಮುಲತಾಯ, ಅರ್ದುಂಡಾಯ, ಅಂಬರಣ್ಣಾಯ, ಉಳಿತಾಯ, ಪಡ್ಡಿಲ್ಲಾಯ, ಎಡೆಪುಳಿತ್ತಾಯ, ಊರಾಯ, ಪಡಿಲಾಯ, ಈರಕಡಿತ್ತಾಯ, ಪೊಣೆತ್ತಾಯ, ಉಡುಪ, ಹೆರಳ.

ಬಲ್ಲಾರು : ತಲೆಪಾಡಿ, ಮಂಜನೋಡಿ, ನಿಡುಂಬೂರು, ಮುಡಿಲ

ದೊರೆಗಳು : ಕುಂದ ಹೆಗ್ಗಡೆ, ಮುದ ಹೆಗ್ಗಡೆ, ಮಾರಂಬ ಹೆಗ್ಗಡೆ,

ಬಿರದೇಶ, ವೊಮಂಜೂರು, ರಾಮನಾಥ, ಬೋಳದ

		ದೇಶಿಂಗತ್ತಾಯ
ಸಾವಂತರು	:	ಇರವತ್ತೂರ ಬಸವ ಸಾವಂತ, ಮೂಲಿಕೆ ಕಿನ್ನಿಕ ಸಾವಂತ
ನಾಡುಗಳು	:	ನಲ್ವತ್ತನಾಡು, ಕೆಲನಾಡು
ಬೀಡು	:	ಬೈಂದೂರು, ಬಟ್ಟಳಕ
ದಿವಾಣ	:	ಕದರಿ, ಕಾರ್ಕಳ
ಸಿಂಹಾಸನ	:	ಬಾರ್ಕೂರು, ಮಂಗಳೂರು
ರಾಜಸ್ಥಾನ	:	ಬಾರ್ಕೂರು, ಮಂಗಳೂರು, ಕಡಬ, ಹೊನ್ನಾವರ

ಜನ್ನಿಗಳ ಮರ್ಯಾದೆ : ಅಟ್ಟಿ ಮುರಿದ ಅಕ್ಕಿ 1, ಐದು ಮೊಲೆ ಎಮ್ಮೆ 1, ತಪ್ಪಿ ಬಂದ ಗೋವು1, ಕೆಗ್ಗೊಡ1, ಜೋಡುಮರ 1, ಕೂಪ1, ಕುಲಾಶೃಂಬಿಲ1, ಮನಕಾಲೇ ಶೃಂಗವಾದ್ಯ1, ನಡಮುಡಿ 1, ಪಕ್ಷಕವಾಟ1, ಮಕರತೋರಣ1, ದೀಪಮಾಲಾಸ್ತಂಭ1, ಛತ್ರ 1, ದೊಳಮಂಜಿ1, ಕೆಟ್ಟು ಎದ್ದುಬಂದ ಹೆಣ್ಣು1, ರತ್ನಕಂಬಳಿ1, ಹೀಗೆ ಹದಿನಾರು ಕಟ್ಟಳೆಯನ್ನು ಲೋಕಾದಿತ್ಯರಾಯನು ಸ್ಥಾಪಿಸಿದನು. ಇದೇ ಪ್ರಕಾರ ಹದಿನಾರು ಮರಿಯಾದಿಯನ್ನು ಕೂಡಿ ಗ್ರಾಮದಲ್ಲಿ ಆರು ಗ್ರಾಮದವರಿಗೆ ವಿಧಿಸಿದನು.

ಗ್ರಾಮದ ವಿವರ : ಹರತಟ್ಟಿ, ಕಾರತಟ್ಟು, ಕೊಡತಟ್ಟು, ಹಂದಟ್ಟು,ಕಾರುಕುಳ,

ಈ ರೀತಿಯಾದ ಸಂಕೇತ ಪದ್ಧತಿಯನ್ನು ವಿಧಿಸಿದನು.

ಗ್ರಾಮಪದ್ಧತಿಯ ಎರಡನೆಯ ಪ್ರತಿಯನ್ನು (ಗ್ರಾ2) ಸ್ಥೂಲವಾಗಿ ಎರಡು ಭಾಗವಾಗಿ ವಿಂಗಡಿಸಬಹುದು. ಮೊದಲನೆಯ ಭಾಗದಲ್ಲಿ ಬ್ರಾಹ್ಮಣಕುಲಗಳ ಹೆಸರುಗಳು, ಅವರಿರುವ ಗ್ರಾಮಗಳು, ಆ ಗ್ರಾಮಗಳಲ್ಲಿ ಬ್ರಾಹ್ಮಣಕುಲಗಳ ಕರ್ತವ್ಯ ಈ ವಿಚಾರಗಳನ್ನು ವಿಸ್ತಾರವಾಗಿ ಸೂಚಿಸಲಾಗಿದೆ. ಈ ಭಾಗವನ್ನು ಕನ್ನಡ ಭಾಷೆಯಲ್ಲಿ ಬರೆಯಲಾಗಿದೆ. ಈ ಪ್ರತಿಯ ಎರಡನೆಯ ಪ್ರತಿ ಸಂಸ್ಕೃತ ಭಾಷೆಯಲ್ಲಿದ್ದು ಇದನ್ನು 'ಮಯೂರವರ್ಮವಂಶಾವಳಿ' ಎಂದು ಹೆಸರಿಸಲಾಗಿದೆ.

ಈ ಪ್ರತಿಯಲ್ಲಿ ಪರಶುರಾಮ ಕ್ಷೇತ್ರದ ಸೃಷ್ಟಿಯ ವಿಚಾರವಾಗಿ ಹೆಚ್ಚು ವಿಸ್ತಾರವಾದ ನಿರೂಪಣೆ ಕಾಣುವುದಿಲ್ಲ. ಅದರ ಬದಲಾಗಿ ದಕ್ಷಿಣ ಕನ್ನಡದ ವಿವಿಧ ಗ್ರಾಮಗಳ ಬ್ರಾಹ್ಮಣ ಕುಲಗಳ ವಿಚಾರವಾಗಿ ನಮಗೆ ಹೆಚ್ಚು ಸಾಮಗ್ರಿ ದೊರೆಯುತ್ತದೆ. ಈ ಪ್ರತಿಯ ಪ್ರಕಾರ ಬ್ರಾಹ್ಮಣ ಕುಲಗಳನ್ನು ಈ ಕೆಳಗಿನಂತೆ ವಿಭಾಗಿಸಬಹುದು.

1. ಅತ್ಯುತ್ತಮರು : ಶ್ರೌತ ಮತ್ತು ಸ್ಮಾರ್ತ
2. ಎರಡನೆ ಉತ್ತಮರು : ಭಟ್ಟ, ತಂತ್ರಿ ಮತ್ತು ಪಂಡಿತ
3. ಮಧ್ಯಮೋತ್ತಮರು : ಪಕ್ಷನಾಥ, ಸಭಾಪತಿ, ಬಲ್ಲಾಳ,

ಅಣ್ಣಗ್ರಾಮಣಿ, ಗ್ರಾಮಣಿ, ಜನ್ನಿ, ಅಧಿವಾಸಿ

4. ವಿಪ್ರೋತ್ತಮರು : ಲೌಕಿಕರು

ಈ ಪ್ರತಿಯು ಹೇಳುವಂತೆ ಚಿಟ್ಟುಪಾಡಿ ಬಳ್ಳಾಲರು ಪೂರ್ವದ ಹದಿನಾರು ಗ್ರಾಮಗಳಿಗೂ ಹಾಗೂ ನಿಡಂಬೂರು ಬಲ್ಲಾಳರು ಪಶ್ಚಿಮದ ಹದಿನಾರು ಗ್ರಾಮಗಳಿಗೂ ಪಕ್ಷನಾಥರು. ಶಬರಾಯ ಹಾಗೂ ಶಿಬರಾಯ ಪೂರ್ವದ ಹಾಗೂ ಪಶ್ಚಿಮದ ಗ್ರಾಮಗಳಿಗೆ ಸಭಾಪತಿಗಳು ವಪ್ಪಂತಾಯ ಹಾಗೂ ಪಿಜತ್ತಾಯ ಪೂರ್ವದ ಹಾಗೂ ಪಶ್ಚಿಮದ ಗ್ರಾಮಗಳಿಗೆ ಪಂಡಿತರು. ದೇಶದ ಚಾತುರ್ವಣ ಪದ್ಧತಿಯನ್ನು ನೋಡಿಕೊಳ್ಳಬೇಕಾದದ್ದು ಪಕ್ಷನಾಥರು ಅಥವಾ ಪಕ್ಷನಾಯಕರು. ಸ್ಮೃತಿ, ಶಾಸ್ತ್ರ, ಪ್ರಾಯಶ್ಚಿತ್ತ ಹಾಗೂ ಕ್ರಮಗಳ ವಿಚಾರವಾಗಿ ಪಂಡಿತರು ಸಭಾಪತಿಗಳಿಗೆ ಕೆಲವು ಸಲಹೆಸೂಚನೆಗಳನ್ನು ಕೊಡುತ್ತಿದ್ದರು. ಆಗಿನ ಕಾಲದಲ್ಲಿ ನಾಲ್ಕು ಬಲ್ಲಾಳರಿದ್ದು ಪ್ರತಿಯೊಬ್ಬರೂ 8 ಗ್ರಾಮಗಳ ಅಧಿಪತಿಗಳಾಗಿದ್ದರು. ಕುಂಞಮಣ್ಣಾಯ, ಕವುಡಂಬಾಡಿತ್ತಾಯ, ತಲೆಪಾಡಿತಾಯ ಮತ್ತು ಮಂಜನಾಡಿತಾಯ ಇವರೇ ನಾಲ್ಕು ಬಲ್ಲಾಳರು. ಆಗಿನ ಕಾಲದಲ್ಲಿ 8 ಅಣ್ಣಗ್ರಾಮಗಳು, 16 ಗ್ರಾಮಣಿಗಳು, ಹಾಗೂ 32 ಅಣ್ಣಮಣಿಗಳಿದ್ದರು. ಈ ಪ್ರತಿಯಲ್ಲಿ 24 ಶ್ರೌತಾಗ್ನಿಹೋತ್ರಿಗಳು ಹಾಗೂ 64 ಭಟ್ಟರುಗಳನ್ನು ಕೂಡ ಸೇರಿಸಲಾಗಿದೆ. ದೇವಸ್ಥಾನ ಕ್ಷೇತ್ರಗಳು, ನಾಗಬ್ರಹ್ಮಭೂತ, ಆಗಮ, ಮಂತ್ರಶಾಸ್ತ್ರ, ಕಲಾಶಾಸ್ತ್ರ, ಹಬ್ಬಗಳು ಹಾಗೂ ಹರಿದಿನಗಳು ಇತ್ಯಾದಿಗಳನ್ನು ನೋಡಿಕೊಳ್ಳುತ್ತಿದ್ದವರು ತಂತ್ರಿಗಳು. ದೇವಸ್ಥಾನದ ಆಡಳಿತ ಮಾಡುತ್ತಿದ್ದವರು ಜನ್ನಿಗಳು. ಅಧಿವಾಸಿಗಳು ಹಾಗೂ ಅಧಿವಂಶಿಗಳು ಜನ್ನಿಗಳ ಸೇವಕರಾಗಿದ್ದರು. ಈ ಎಲ್ಲ ಬ್ರಾಹ್ಮಣರು ಸೇರುವ ಸ್ಥಳ ಕೋಟ ನರಸಿಂಹ ದೇವಸ್ಥಾನದ ಹಾಗೂ ಶಿವಳ್ಳಿ ಅನಂತೇಶ್ವರ ದೇವಸ್ಥಾನ.

ಗ್ರಾಮಪದ್ಧತಿಯ ಈ ಪ್ರತಿಯ ಕೊನೆಯಲ್ಲಿ ಮಯೂರವರ್ಮ ಮೂವತ್ತೆರಡು ಗ್ರಾಮಗಳಿಗೆ ನೀಡಿದ ಬಿರುದಾವಳಿಗಳನ್ನು ಹೆಸರಿಸಲಾಗಿದೆ. ಅವುಗಳು: ಇಳಿದು ಹೋದ ಹೆಣ್ಣು, ಬಸುರು ಬಂದ ಹೆಣ್ಣು, ಕೂಡ ಪಶು, ಐದು ಮೊಲೆ ಪಶು, ಗತಿ ಮುತ್ತಿದವನ ಬದುಕು, ಅನಾಥನ ಒಡವೆ, ಅಟ್ಟ ಮುರಿದ ಅಕ್ಕಿ, ನಡೆಮುಡಿ, ನಡೆಚಪ್ಪರ, ನಡೆನೃತ್ಯ, ಹಗಲು ದೀವಟಿಗೆ, ಉಭಯ ಚಾಮರ, ಜೋಡು ವೆಜನಾ, ಉಭಯಚಾವಡಿ, ಶಂಖಧ್ವನಿ, ಶ್ವೇತಛತ್ರಿ, ಗಜಾಶ್ವ, ಅಂದಳಾದಿ, ವಾಹನ, ಸಿಂಹಾಸನ, ಮದನಕೈ, ಗಜದ್ವಾರ, ಧ್ವಜಕ್ಷೇತ್ರ.

ಈ ಪ್ರತಿಯ ಎರಡನೆಯ ಭಾಗವನ್ನು 'ಮಯೂರವರ್ಮ ವಂಶಾವಳಿ' ಎಂದು ಹೆಸರಿಸಲಾಗಿದ್ದರೂ ಇದನ್ನು ವಂಶಾವಳಿ ಎಂದು ಕರೆಯುವ ಬದಲು ಕೆಲವು ರಾಜರುಗಳ ಪಟ್ಟಿ ಎಂದು ಹೇಳುವುದು ಹೆಚ್ಚು ಸರಿಯಾಗುತ್ತದೆ. ಯಾಕೆಂದರೆ ಈ ವಿವಿಧ ರಾಜರುಗಳಿಗೆ ಇದ್ದ ಪರಸ್ಪರ ಸಂಬಂಧವನ್ನು ಈ ವಂಶಾವಳಿ ಹೇಳುವುದಿಲ್ಲ. ಈ ರಾಜರುಗಳು ತುಳುನಾಡನ್ನು ಆಳಿದ್ದಾರೆ ಎನ್ನುವುದಕ್ಕೆ ಐತಿಹಾಸಿಕವಾಗಿ ಯಾವುದೇ ಪುರಾವೆಗಳು ದೊರೆಯುವುದಿಲ್ಲ. ಈ ವಿವಿಧ ರಾಜರುಗಳ ಪಟ್ಟಿಯನ್ನು ಈ ಕೆಳಗಿನಂತೆ ಕೊಡಬಹುದು.

ನಂದನಂದರಾಯ	:	85ವರ್ಷ
ನಂದನರಾಯ	:	70ವರ್ಷ
ವಿಜಯನಂದನರಾಯ	:	40ವರ್ಷ(ಈ ಮೂರು ರಾಜರುಗಳು 195ವರ್ಷ ಆಳಿದರು)
ವಹಿಕರಾಯ	:	72ವರ್ಷ
ಕುಂತೀರಾಯ	:	77ವರ್ಷ
ಕೊಯತರಾಯ	:	19ವರ್ಷ
ಜಯಂತಿಕ ಕದಂಬರಾಯ	:	45ವರ್ಷ
ಹೇಮಾಂಗರಾಯ	:	
ಲೋಕಾದಿತ್ಯಮಯೂರವರ್ಮ	:	72 ವರ್ಷ
ಚಂದ್ರಾಗದ	:	45ವರ್ಷ
ಚಿತ್ರವೀರ್ಯವರ್ಮ	:	64 ವರ್ಷ
ಜಯವರ್ಮರಾಯ	:	50ವರ್ಷ
ದೇವವರ್ಮರಾಯ	:	43ವರ್ಷ
(ಹೆಸರು ಓದಲಾಗಿಲ್ಲ)	:	74 ವರ್ಷ
ಜಯಚಂದರಾಯ	:	80ವರ್ಷ
ಚಿಕ್ಕವೀರ್ಯರರ್ಮರಾಯ	:	50ವರ್ಷ
ಅಂಗಾರವರ್ಮರಾಯ	:	95 ವರ್ಷ

(ಮಯೂರವರ್ಮ ಹಾಗೂ ಆತನ ಕುಲದವರು 539 ವರ್ಷ ಆಳಿದರು)

ಈ ಮೇಲಿನ ಪಟ್ಟಿಯನ್ನು ನೋಡುವಾಗ ಗ್ರಾಮಪದ್ಧತಿಯಲ್ಲಿ ಕೇವಲ ಕದಂಬ ರಾಜರ ಸಂತತಿ ಬಗ್ಗೆ ಮಾತ್ರವಲ್ಲದೆ ಬೇರೆ ರಾಜಕುಲಗಳ ಬಗ್ಗೆ ಮಾಹಿತಿ ಕೊಡಲಾಗಿದೆ ಎಂದು ತಿಳಿಯುತ್ತದೆ. ಈ ರಾಜಕುಲಗಳು ಬಹಳ ಇತ್ತೀಚಿನ ವರೆಗೆ ಕೂಡ ರಾಜ್ಯವಾಳಿದ್ದಿರಬಹುದು. ಅಥವಾ ತುಳುನಾಡಿನ ಕೆಲವೇ ಪ್ರಾಂತಗಳನ್ನು ಆಳಿದ್ದಿರಬಹುದು. ಇದರಿಂದಾಗಿ ಗ್ರಾಮಪದ್ಧತಿಯ ಬೇರೆಬೇರೆ ಪ್ರತಿಗಳಲ್ಲಿ ಆಗಿನ ಕಾಲದಲ್ಲಿ ನಡೆಯುತ್ತಿದ್ದ ರಾಜಕೀಯ ಹಾಗೂ ಸಾಮಾಜಿಕ ಬದಲಾವಣೆಗಳ ಬಗ್ಗೆ ವಿಶೇಷ ಮಾಹಿತಿ ದೊರೆಯುತ್ತದೆ. ಈ ಎಲ್ಲಾ ಮಾಹಿತಿಗಳು ಐತಿಹಾಸಿಕವಾಗಿ ಸತ್ಯ ಎಂದು ಪರಿಗಣಿಸಲು ಕೆಲವೊಮ್ಮೆ ಆಧಾರ ದೊರೆಯದೆ ಹೋಗಬಹುದಾದರೂ ಕೂಡ ಇದೇ ಒಂದು ಕಾರಣದಿಂದ ಗ್ರಾಮಪದ್ಧತಿಯ ಐತಿಹಾಸಿಕ ಮೌಲ್ಯವನ್ನು ಕಡೆಗಣಿಸಲು ಸಾಧ್ಯವಿಲ್ಲ. ಗ್ರಾ2 ರಲ್ಲಿ ತುಳುನಾಡನ್ನು 32 ರಾಜರುಗಳು ಆಳಿದ್ದರೆಂದೂ ಹೈಗವನ್ನು

ಮೂರು ರಾಜರು ಹಾಗೂ ಮಲಯಾಳವನ್ನು 32 ರಾಜರು ಆಳಿದರು ಎಂದು ಹೇಳಲಾಗಿದೆ. ಈ ಪ್ರತಿಯಲ್ಲಿ ಭೂತಾಳ ಪಾಂಡ್ಯರಾಯನ ಹೆಸರು ಬರುತ್ತದೆ.

ಗ್ರಾ3 ನ್ನು ಬರೆದವನು ವರಡಾ ತಿಮ್ಮಪ್ಪ. ಇದನ್ನು ಕಾವ್ಯಶೈಲಿಯಲ್ಲಿ ಬರೆಯಲಾಗಿದೆ. ಸೋಮಯಾಜಿ ಎನ್ನುವಾತ ಶಾಲಿವಾಹನ ಶಕ 1786(ಕ್ರಿ.ಶ1848) ರಲ್ಲಿ ಇದರ ಪ್ರತಿ ಮಾಡಿದನು. ಪುರಾಣ ಗ್ರಂಥವೊಂದನ್ನು ಬರೆಯಲಾಗುವ ಶೈಲಿಯಲ್ಲಿ ಈ ಪ್ರತಿಯನ್ನು ರಚಿಸಲಾಗಿದೆ. ಈ ಗ್ರಂಥ ಪಾರ್ವತಿ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುತ್ತದೆ. ಇದನ್ನು ಗುಪ್ತವಾಗಿ ಕೇಳತಕ್ಕದ್ದು, ಹಾಗೂ ಇದನ್ನು ಪ್ರಶ್ನಿಸಬಾರದು. ಪ್ರಾಯಶಃ ಇದು ಆಗಿನ ಅಬ್ರಾಹ್ಮಣ ವರ್ಗದವರು ಈ ಗ್ರಂಥದ ಭಾಗಗಳನ್ನು ಕೇಳಬಾರದು ಎಂಬ ಉದ್ದೇಶದಿಂದ ಈ ಮೇಲಿನ ಹೇಳಿಕೆ ಮಾಡಿರಬಹುದು. ಜಾತಿಪದ್ಧತಿಯ ಕಾನೂನುಗಳು ಗ್ರಾಮಪದ್ಧತಿಯ ರಚನೆಯ ಕಾಲದಲ್ಲಿ ಕೂಡ ಮುಂದುವರಿದಂತೆ ಕಂಡುಬರುತ್ತದೆ.

ಗ್ರಾ3 ರ (ಗ್ರಾಮಪದ್ಧತಿಯ ಮೂರನೇ ಪ್ರತಿಯ) ಪೌರಾಣಿಕ ಭಾಗ ಜಮದಗ್ನಿ, ಆತನ ಪತ್ನಿ ಹಾಗೂ ಆತನ ಪುತ್ರ ಪರಶುರಾಮ ಕತೆಯೊಂದಿಗೆ ಪ್ರಾರಂಭವಾಗುತ್ತದೆ. ಕಾರ್ತವೀರ್ಯಾರ್ಜುನ ಜಮದಗ್ನಿಯ ಅಮೂಲ್ಯ ಆಕಳುಗಳನ್ನು ಸೆರೆ ಹಿಡಿಯಬೇಕೆಂದು ಪ್ರಯತ್ನಿಸಿದಾಗ ಪರಶುರಾಮ ಆತನ ವಿರುದ್ಧ ಸೇಡು ತೀರಿಸಿಕೊಳ್ಳುತ್ತಾನೆ. ಈ ಭಾಗವು ಗ್ರಾ1 ರಲ್ಲಿ ಹಾಗೂ ಗ್ರಾ2 ರಲ್ಲಿ ಇರುವುದಿಲ್ಲ. ಗ್ರಾ3 ರ ಮುಂದಿನ ಭಾಗದಲ್ಲಿ ಪರಶುರಾಮನು ಪರಶುರಾಮ ಕ್ಷೇತ್ರ ನಿರ್ಮಾಣ ಮಾಡಿದ ಬಳಿಕ ಬ್ರಾಹ್ಮಣರಿಗೆ ಕೊಟ್ಟ ಗ್ರಾಮಗಳ ಬಗೆಗೆ ಹಾಗೂ ಮಯೂರವರ್ಮನು ಈ ಬ್ರಾಹ್ಮಣ ಅಗ್ರಹಾರಗಳನ್ನು ಪ್ರೋತ್ಸಾಹಿಸಿದ ಬಗೆಗೆ ಮಾಹಿತಿ ಇದೆ.

ಗ್ರಾ3 'ಪತಿತಬ್ರಾಹ್ಮಣ' ರ ಕುರಿತು ಕೆಲವು ಕುತೂಹಲಕಾರಿ ಮಾಹಿತಿಯನ್ನು ನೀಡುತ್ತದೆ. ಇಲ್ಲಿ ಹೇಳಲಾಗಿರುವ ಕೆಲವು ಕುತೂಹಲಕಾರಿ ಅಂಶಗಳು ಮೊದಲಿನ ಎರಡು ಪ್ರತಿಗಳಲ್ಲಿ ಇರುವುದಿಲ್ಲ. ಇದರಲ್ಲಿ ಭೂಮಿಯ ಒಡೆತನದ ಕುರಿತಾಗಿ ಕೋಟೇಶ್ವರ ಬ್ರಾಹ್ಮಣರಿಗೂ ಕೋಟ ಬ್ರಾಹ್ಮಣರಿಗೂ ನಡೆದ ಕಲಹದ ವರ್ಣನೆ ಇದೆ. ಇದರ ಪ್ರಕಾರ ಭೂಮಿಯ ಒಡೆತನವನ್ನು ಪಡೆಯಲು ಕೋಟೇಶ್ವರ ಬ್ರಾಹ್ಮಣರು ಕುಶಲ ತಂತ್ರವೊಂದನ್ನು ಉಪಯೋಗಿಸುತ್ತಾರೆ. ನೆಲದಲ್ಲಿ ಒಂದು ಹೊಂಡವನ್ನು ಮಾಡಿ ಅದರಲ್ಲಿ ಒಬ್ಬ ಕೋಟೇಶ್ವರ ಬ್ರಾಹ್ಮಣನನ್ನು ಅಡಗಿಸಿರುತ್ತಾರೆ. ಭೂಮಿ ಯಾರದ್ದೆಂದು ಭೂಮಿತಾಯಿಯನ್ನು ಪ್ರಶ್ನೆ ಮಾಡಿದಾಗ ಇದು ಕೋಟೇಶ್ವರ ಬ್ರಾಹ್ಮಣರದ್ದು ಎಂದು ನೆಲದಡಿಯಲ್ಲಿದ್ದ ಕೋಟೇಶ್ವರ ಬ್ರಾಹ್ಮಣ ಹೇಳುತ್ತಾನೆ. ಆದರೆ ಒಂದು ಅಶರೀರವಾಣಿ ಕುಟಿಲ ತಂತ್ರವನ್ನು ಬಯಲಿಗೆಳೆಯುತ್ತದೆ. ಹಾಗೂ ಅವರು ಪತಿತ ಬ್ರಾಹ್ಮಣರಾಗಲೆಂದು ಶಾಪ ಕೊಡುತ್ತದೆ.[1] ಈಗ ಕೆಲವು ಕೋಟೇಶ್ವರ ಬ್ರಾಹ್ಮಣಕುಲಗಳು ಸುರತ್ಕಲ್ ಸಮೀಪದ ಇಡ್ಯದಲ್ಲಿ ನೆಲಸಿರುತ್ತವೆ. ಇವರು ಹಿಂದೆ ಸ್ಮಾರ್ತ ಸಂಪ್ರದಾಯಕ್ಕೆ ಸೇರಿರುವ ಸಾಧ್ಯತೆಯಿದೆ. ಪ್ರಾಯಃ ಹಿಂದಿನ ಕಾಲದಲ್ಲಿ ಕೋಟೇಶ್ವರ ಹಾಗೂ ಕೋಟ ಬ್ರಾಹ್ಮಣರ ಸಂಪ್ರದಾಯ, ಆಚಾರ ವಿಚಾರ ಇತ್ಯಾದಿ ಒಂದೇ ಆಗಿದ್ದಿರಬಹುದು. ಈ ಬ್ರಾಹ್ಮಣರನ್ನು

[1]'ಕೋಟ ಶಂಕರನಾರಾಯಣ ಕಾರಂತ, 'ಕೂಟಮಹಾಜಗತ್ತು' ಸಾಲಿಗ್ರಾಮ 1958

ಸೋದೆಮಠದ ವಾದಿರಾಜರು ವೈಷ್ಣವಪಂಥಕ್ಕೆ ಸೇರುವಂತೆ ಮಾಡಿದರು ಎಂಬ ಹೇಳಿಕೆ ಇದೆ. ಈ ಕತೆ ಸಹ್ಯಾದ್ರಿ ಖಂಡದಲ್ಲಿ ಬರುತ್ತದೆ.[1]

ಗ್ರಾ3 ರಲ್ಲಿ ಆಗಿನ ಕಾಲದ ಹೊಲೆಯರ ರಾಜನಾದ ಹುಬ್ಬಾಸಿಗನ ದುಸ್ಸಾಹಸದ ಕತೆಯನ್ನು ಹೇಳಲಾಗಿದೆ. ಕದಂಬವಂಶದ ಚಂದಸೇನ, ಚಂದ್ರಾಯುಧನೆಂಬವನ ಸಹಾಯದಿಂದ ಹುಬ್ಬಾಸಿಗನನ್ನು ಕೊಲ್ಲುತ್ತಾನೆ. ಹಾಗೂ ಉಳಿದ ಆತನ ಅನುಯಾಯಿಗಳು ಸಮಾಜದ ಬೇರೆ ವರ್ಗಗಳ ಸೇವಕರಾಗಿರಬೇಕೆಂದೂ ಅವರಲ್ಲಿ ಒಗ್ಗಟ್ಟು ಇರಲೇಬಾರದೆಂದೂ ಶಾಪ ಕೊಡುತ್ತಾನೆ. ಗ್ರಂಥದಲ್ಲಿ ಆರ್ಯಾವರ್ತ, ಬ್ರಹ್ಮಾವರ್ತ, ಪದ್ಮಾವರ್ತ ಹಾಗೂ ನಾಗಾವರ್ತದ ಕುರಿತು ಉಲ್ಲೇಖವಿದೆ. ಇದು ಪಂಚದ್ರಾವಿಡರ ಬಗ್ಗೆ ಮಾಹಿತಿ ಕೊಡುವಾಗ ಮಹಾರಾಷ್ಟ್ರ ದ್ರಾವಿಡ, ಆಂಧ್ರ, ದ್ರಾವಿಡ, ಕರ್ನಾಟಕ ಹಾಗೂ ಚೋಳ ದ್ರಾವಿಡರ ಬಗೆಗೆ ಮಾಹಿತಿ ಕೊಡುತ್ತದೆ. ಮೂವತ್ತೆರಡು ಗ್ರಾಮವೆಂದು ಹೇಳಲು ಉಪಯೋಗಿಸಲಾಗಿರುವ 'ಬತ್ತೀಸ' ಎನ್ನುವ ಶಬ್ದ ಹಿಂದೀ ಭಾಷೆಯದ್ದಾಗಿರುತ್ತದೆ. ಇದರಲ್ಲಿ 'ಹತ್ತು ಸಾವಿರ ಜಗತ್ತು' ಹಾಗೂ ಕೋಟ ನರಸಿಂಹ ದೇವಸ್ಥಾನ ನಿರ್ಮಾಣದ ಕುರಿತು ಮಾಹಿತಿ ದೊರೆಯುತ್ತದೆ.

ಈ ಮೇಲೆ ಕಾಣಿಸಿದ 'ಗ್ರಾಮಪದ್ಧತಿಯ' ಯ ಮೂರು ಪ್ರತಿಗಳಲ್ಲಿ ಕೆಲವು ಭೌಗೋಳಿಕ ಅಂಶಗಳಿವೆ. ಗ್ರಾ1 ಹೇಳುವಂತೆ "ಹೈವ" ದಕ್ಷಿಣದಲ್ಲಿ ಗಂಗಾವಳಿ, ಪೂರ್ವದಲ್ಲಿ ಸಹ್ಯಪರ್ವತ ಹಾಗೂ ಪಶ್ಚಿಮದಲ್ಲಿ ಸಮುದ್ರ ಪರ್ವತ ನಡುವೆ ಇದೆ. ತೌಳವವು ಉತ್ತರದಲ್ಲಿ ಗಂಗಾವಳಿ, ದಕ್ಷಿಣದಲ್ಲಿ ನೀಲೇಶ್ವರ ನದಿ, ಪೂರ್ವದಲ್ಲಿ ಸಹ್ಯವರ್ತ ಹಾಗೂ ಪಶ್ಚಿಮದಲ್ಲಿ ಇರುವ ಸಮುದ್ರದ ನಡುವೆ ಇದೆ.

ಕೇರಳದೇಶವು ಉತ್ತರದಲ್ಲಿ ನೀಲೇಶ್ವರ ನದಿ, ದಕ್ಷಿಣದಲ್ಲಿ ಕನ್ಯಾಕುಮಾರಿ, ಪಶ್ಚಿಮದಲ್ಲಿ ಸಮುದ್ರ ಹಾಗೂ ಪೂರ್ವದಲ್ಲಿರುವ ಸಹ್ಯಪರ್ವತಗಳ ನಡುವೆ ಇದೆ. ಈ ವಿಚಾರಗಳು ಹೈವ, ತೌಳವ ಮತ್ತು ಕೇರಳ –ಈ ಪ್ರದೇಶಗಳ ಭೌಗೋಳಿಕ ವಿವರಣೆಯನ್ನು ನೀಡುತ್ತದೆ. ಭೌಗೋಳಿಕವಾಗಿ ಗ್ರಾಮಪದ್ಧತಿಯು ಈಗ ಕೇರಳ ರಾಜ್ಯಕ್ಕೆ ಸೇರಿರುವ ಕಾಸರಗೋಡನ್ನು ಒಳಗೊಂಡಿದೆ. ಈ ಗ್ರಂಥದಲ್ಲಿ ಸಿಕ್ಕಿದ ಸ್ಥಳನಾಮಗಳ ಅಧ್ಯಯನದಿಂದ ಈ ಸ್ಥಳಗಳ ಚರಿತ್ರೆಯನ್ನು ತಿಳಿಯಬಹುದು.

ಗ್ರಾಮಪದ್ಧತಿಯ ಮೊದಲಿನ ಭಾಗದಲ್ಲಿ (ಇದನ್ನು ಪೌರಾಣಿಕ ಭಾಗ ಎಂದು ಕರೆಯಬಹುದು) ಅನೇಕ ಸ್ಥಳಗಳ ಪರಿಚಯ ಸಿಕ್ಕುತ್ತದೆ. ಗ್ರಾ1 ರಲ್ಲಿ ಈ ಕೆಳಗಿನ ಭೌಗೋಳಿಕ ಅಂಶಗಳನ್ನು ಕಾಣಿಸಲಾಗಿದೆ.

ಗೋದಾವರಿ ಅಹಿಚ್ಛತ್ರ, ಸಹ್ಯಪರ್ವತ, ಮಹೇಂದ್ರಪರ್ವತ, ಕನ್ಯಾಕುಮಾರಿ, ಕೇರಳ, ಮರಾಟ, ಕೊಂಕಣ, ಹೈವ, ತೌಳವ, ಕೇರಳ, ಗಂಗಾವಳಿ ನದಿ, ನೀಲೇಶ್ವರ ನದಿ, ನಾಗೂರು ಗ್ರಾಮ, ಮಟ್ಟಿನಗ್ರಾಮ, ಕುಶಸ್ತಳ ಗ್ರಾಮ, ಸ್ವಾಸ್ಥಿ ಗ್ರಾಮ, ಗೋಕರ್ಣದೇಶ, ಕೋಟ, ಕಂದಾವರ ಹಾಗೂ ಶಿವಳ್ಳಿ.

ಗ್ರಾ2 ರಲ್ಲಿರುವ ಸ್ಥಳಗಳ ಹೆಸರುಗಳು: ಅಹಿಕ್ಷೇತ್ರ, ಶಿವಳ್ಳಿ, ಕೋಟ, ತುಳು,

[1]ಕುಪ್ಪಣ್ಣಾಚಾರ್ಯ, 'ಶ್ರೀ ಗುರುವರ ವಾದಿರಾಜರ ಚರಿತಾಮೃತ', ಕಿನ್ನಿಗೋಳಿ, 1983

ಮಲೆಯಾಳ, ಹರಿಗ, ಜಯಂತಿಕಾ, ಬಾರ್ಕೂರು, ನಗರ. ಗ್ರಾ3 ರಲ್ಲಿ ಗಜಪುರ, ಕೋಟೇಶ್ವರ, ಸಾಲಿಗ್ರಾಮ, ವೇಣುಪುರ, ನಟಪುರ, ಶಿವಬೆಳ್ಳಿ, ನಿಟ್ಟೂರು, ತಾಳಿತೊಡೆ, ಮಂಗಳೂರು, ಬಾರಕೂರು, ಮಜಿವೂರು ಇತ್ಯಾದಿ ಸ್ಥಳಗಳ ಹೆಸರನ್ನು ಕಾಣುತ್ತೇವೆ.

'ಗ್ರಾಮಪದ್ಧತಿ'ಯ ಕಡೆಯ ಭಾಗದಲ್ಲಿ ಬ್ರಾಹ್ಮಣಕುಲಗಳು ನೆಲಸಿದ ಮೂವತ್ತೆರಡು ಗ್ರಾಮಗಳು ಹಾಗೂ ಕೋಟ, ಶಿವಳ್ಳಿ ಇತ್ಯಾದಿ ಮುಖ್ಯ ಗ್ರಾಮಗಳ ಗಡಿವಿವರಗಳನ್ನು ನೀಡಲಾಗಿದೆ. ಗ್ರಾ3 ರಲ್ಲಿ ಶಿವಳ್ಳಿಯ ವಿವಿಧ ಅಧಿವಾಸಿಗಳಲ್ಲಿ ಬ್ರಾಹ್ಮಣರ ಜನಸಂಖ್ಯೆ ಇತಿಹಾಸದ ಅಧ್ಯಯನಕ್ಕೆ ಈ ವಿವರಗಳು ಪ್ರಯೋಜನಕಾರಿಯಾಗಿವೆ.

ಈ ಮೂರು ಪ್ರತಿಗಳಲ್ಲಿ ಬ್ರಾಹ್ಮಣರು ನೆಲಸಿದ ಮೂವತ್ತೆರಡು ಗ್ರಾಮಗಳ ವಿವರಗಳನ್ನು ಕಾಣುತ್ತೇವೆ.

ಗ್ರಾ1 ರಲ್ಲಿ ಪಶ್ಚಿಮ ಗ್ರಾಮಗಳು: ತಾರೆವೂರು, ವರ್ಕಾಡಿ, ಮರಣೆ, ಕೊಲ್ಯನಾಡು, ಪಾಡಿ, ಕೂಡಲು, ಮೊಗೆಬೈಲು, ಮಿತ್ತನಾಡು, ನೀರುಮಾರ್ಗ, ಸೀಮಂತೂರು, ತೆನೆಕಳ, ಶಿವಬೆಳ್ಳಿ, ಬ್ರಹ್ಮಪುರ, ನೀಲಾವರ, ಕೂಟ ಮತ್ತು ಸ್ಕಂದಪುರ.

ಪೂರ್ವಗ್ರಾಮಗಳು: ಶ್ರೀಪಾಡಿ, ಒಡಿಲು ನಾಳ, ಕಾರಂದೂರು, ಉಜಿರೆ, ಕುಞ್ಞಮಾರ್ಗ, ಕೊಕ್ಕಡ, ರಾಮಿಂಜ, ಮದೆಗ್ರಾಮ, ಬೆಳಪ, ಐರ್ನಾಡು, ಇಡೆಕದ್ದು, ಕೆಮ್ಮಿಂಜ, ಪಾಡಿಂಜ, ಸಿರಿಯಾಡಿ ಮತ್ತು ಕುದಿನಾಡಿ.

ಗ್ರಾ2 ರಲ್ಲಿ ಪಶ್ಚಿಮ ಗ್ರಾಮ ವಿಭಾಗದಲ್ಲಿ ತಾರೆವೂರನ್ನು ಕಾರೂರು ಎಂದೂ ತೆನೆಕಳವನ್ನು ಕನಕ್ಕಳವೆಂದೂ ಕೊಳ್ಯನಾಡನ್ನು ಕೊವಿನಾಡು ಎಂದೂ ಸ್ಕಂದಪುರವನ್ನು ಸ್ಕಂದಾವರ ಎಂದೂ ಕರೆಯಲಾಗಿದೆ. ಈ ಪ್ರತಿಯಲ್ಲಿ 'ಮೊಗಬೈಲ್' ಗ್ರಾಮದ ಬದಲಾಗಿ 'ಮೊಗ್ರಾಲು' ಎನ್ನುವ ಹೆಸರು ಕಾಣುತ್ತದೆ. ಗ್ರಾ2 ರಲ್ಲಿ ಪೂರ್ವಗ್ರಾಮ ವಿಭಾಗದಲ್ಲಿ ಕರೆಯ, ಕಾವಳ ಹಾಗೂ ಮಣಿಕಳ ಗ್ರಾಮಗಳನ್ನು ಹೆಸರಿಸಲಾಗಿದೆ. ಈ ಗ್ರಾಮಗಳು ಗ್ರಾ1 ರಲ್ಲಿ ಕಾಣುವುದಿಲ್ಲ. ಆದರೆ ಗ್ರಾ1 ರಲ್ಲಿ ಕಾಣಿಸಲಾಗಿರುವ ಐರ್ನಾಡು ಸಿರಿಯಾಡಿ ಮತ್ತು ಕುಡಿಪಾಡಿ ಗ್ರಾಮಗಳನ್ನು ಗ್ರಾ2 ರಲ್ಲಿ ಹೆಸರಿಸಿರುವುದಿಲ್ಲ. ಗ್ರಾ2 ರಲ್ಲಿ ಕಾರಂದೂರನ್ನು ಕಾರಂಜೂರು ಎಂದೂ ಕುನ್ಯಮಾರ್ಗವನ್ನು ಕುಞ್ಞಮಾರ್ಗವೆಂದೂ ರಾಮಿಂಜವನ್ನು ರಾಮಂಜೂರು ಎಂದೂ ಬೆಳೆಪವನ್ನು ಬೆಳವ್ಯ ಎಂದೂ ಪಾವಿಂಜವನ್ನು ಪಾಲಿಂಜವೆಂದು ಕರೆಯಲಾಗಿದೆ.

ಗ್ರಾ3 ರಲ್ಲಿ ಹೆಸರಿಸಲಾಗಿರುವ ಎಲ್ಲ ಹದಿನಾರು ಪಶ್ಚಿಮ ಗ್ರಾಮಗಳನ್ನು ಕಾಣಬಹುದು. ಆದರೆ 'ಮೊಗಬೈಲು' ಗ್ರಾಮದ ಬದಲು 'ಮೊಗೆನಾಡು' ಗ್ರಾಮದ ಹೆಸರನ್ನು ಕಾಣುತ್ತೇವೆ. ಈ ಪ್ರತಿಯಲ್ಲಿ ಕೂಟವನ್ನು ಗಜಪುರವೆಂದೂ ಸ್ಕಂದಪುರವನ್ನು ಸ್ಕಂದಗ್ರಾಮವೆಂದೂ ಹೆಸರಿಸಲಾಗಿದೆ. ಪಶ್ಚಿಮ ಗ್ರಾಮ ವಿಭಾಗದಲ್ಲಿ ಶ್ರೀಪಾಡಿಯನ್ನು ಸಿರ್‍ರಿಪಾಡಿ ಎಂದು ಕರೆಯಲಾಗಿದೆ.

ಒಟ್ಟಿನಲ್ಲಿ 'ಗ್ರಾಮಪದ್ಧತಿ'ಯು ತುಳುನಾಡಿನ ಪ್ರಾಚೀನ ಇತಿಹಾಸವನ್ನು ಮುಖ್ಯವಾಗಿ ಈ ಪ್ರದೇಶಕ್ಕೆ ಬ್ರಾಹ್ಮಣರ ಆಗಮನವನ್ನು ಅವರ ನೆಲೆಗಳನ್ನು ತಿಳಿಸುವ

ಒಂದು ಐತಿಹಾಸಿಕ ಮಹತ್ವವುಳ್ಳ ಚಿಕ್ಕ ಗ್ರಂಥ. ಈ ಗ್ರಂಥವು ಎಷ್ಟು ಜನಪ್ರಿಯವಾಗಿತ್ತೆಂಬುದಕ್ಕೆ ಅದರ ಹತ್ತಾರು ವಿಧದ ಪಾಠಂತರಪ್ರತಿಗಳೇ ಸಾಕ್ಷಿ. ತುಳುನಾಡಿನ ಬ್ರಾಹ್ಮಣರ ಮೂಲದ ಕುರಿತಾಗಿ ತಿಳಿಸುವ ಏಕೈಕ ಗ್ರಂಥ ಎನ್ನುವ ಕಾರಣಕ್ಕಾಗಿಯೂ ಗ್ರಾಮಪದ್ಧತಿಗೆ ಚಾರಿತ್ರಿಕ ಮಹತ್ವ ದೊರೆಯುತ್ತದೆ. ಹೊರಗಿನಿಂದ ಕರೆತರಲ್ಪಟ್ಟ ಬ್ರಾಹ್ಮಣರಿಗೆ ಯಾವ ರೀತಿ ಇಲ್ಲಿ ನೆಲೆಗಳನ್ನು ಕಲ್ಪಿಸಲಾಯಿತೆಂದು ಸವಿವರವಾಗಿ ತಿಳಿಸುವುದರಿಂದ ಇಲ್ಲಿ ನೆಲೆನಿಂತ ಬ್ರಾಹ್ಮಣರ ಅಧಿಕಾರ ವ್ಯಾಪ್ತಿಯನ್ನು ಸಹ ಈ ಗ್ರಂಥದಿಂದ ತಿಳಿಯಬಹುದು. ಇತರ ಕಡೆಗಳಲ್ಲಿರುವ ಬ್ರಾಹ್ಮಣರಿಗಿಂತ ವಿಭಿನ್ನವಾದ ಕುಲನಾಮಗಳು ತುಳುನಾಡಿನ ಬ್ರಾಹ್ಮಣರಿಗೆ ಹೇಗೆ ಲಭಿಸಿತೆಂಬುದನ್ನು ತಿಳಿಯಲು ಕೂಡ ಈ ಗ್ರಂಥ ಉಪಯುಕ್ತವಾಗಿದೆ. ಒಂದು ಸ್ಥಳದ ಹೆಸರಿನಿಂದಲೇ ಅಲ್ಲಿ ನೆಲೆನಿಂತ ಬ್ರಾಹ್ಮಣರಿಗೆ ಕುಲನಾಮ ಪ್ರಾಪ್ತವಾದುದು ಬಹುಶಃ ಬೇರಲ್ಲೂ ಸಿಕ್ಕದ ಒಂದು ವಿಶೇಷ ಸಂಗತಿ. ಈ ಎಲ್ಲ ಕಾರಣಗಳಿಂದಾಗಿ ತುಳುನಾಡಿನ ಬ್ರಾಹ್ಮಣರ ಕುರಿತಾಗಿ, ಅವರ ಕುಲನಾಮಗಳ ಕುರಿತಾಗಿ, ಅವರ ಅಧಿಕಾರ ವ್ಯಾಪ್ತಿಯನ್ನು ಕುರಿತಾಗಿ ತಿಳಿಯಲು ಅತ್ಯುಪಯುಕ್ತವಾದ 'ಗ್ರಾಮಪದ್ಧತಿ' ಯು ಒಂದು ಅಮೂಲ್ಯ ಕೃತಿ.

---

* ನಾಗೇಂದ್ರರಾವ್ ಉಡುಪಿ: ಗ್ರಾಮಪದ್ಧತಿ ಮತ್ತು ತೌಳವ ಬ್ರಾಹ್ಮಣ ಇತಿಹಾಸ

ಅಧ್ಯಾಯ ಮೂರು –ಕುಲನಾಮಗಳು ಮತ್ತು ಭಾಷೆ

3.1 ಶಿವಳ್ಳಿಯವರ ಕುಲನಾಮಗಳು

ಒಂದು ಮನೆತನವನ್ನು ಮತ್ತೊಂದು ಮನೆತನದಿಂದ ಪ್ರತ್ಯೇಕವಾಗಿ ಗುರುತಿಸುವುದೋಸ್ಕರ ಕುಲನಾಮಗಳು ಬಳಕೆಯಾಗುತ್ತದೆ. ಕುಲನಾಮಗಳು ಉಂಟಾಗಲು ಬೇರೆಬೇರೆ ವರ್ಗ, ಜನಾಂಗಗಳಲ್ಲಿ ಹಲವು ಕಾರಣಗಳಿರಬಹುದು. ಒಬ್ಬ ವ್ಯಕ್ತಿಯ ಸ್ವಭಾವ, ವೃತ್ತಿ, ಬಿರುದು, ಚರ್ಯೆ, ಶಿಕ್ಷಣ, ದೈಹಿಕರೂಪ, ಮುಂತಾದ ಹಲವು ಅಂಶಗಳ ಕಾರಣದಿಂದ ಕುಲನಾಮಗಳು ಬಳಕೆಯಾಗಿರಬಹುದು.

ಶಿವಳ್ಳಿ ಬ್ರಾಹ್ಮಣರಲ್ಲಿ ಕುಲನಾಮಗಳು ವೈಪುಲ್ಯವನ್ನು ವೈವಿಧ್ಯವನ್ನು ಗುರುತರವಾಗಿ ಗಮನಿಸಬಹುದು. ಇಷ್ಟೊಂದು ವಿಪುಲ ಸಂಖ್ಯೆಯ ಹಾಗೂ ವೈವಿದ್ಯಮಯ ಕುಲನಾಮಗಳು ಒಂದೇ ಜನಾಂಗದಲ್ಲಿ ಕಾಣಸಿಗುವುದು ಅಪೂರ್ವ. ಶಿವಳ್ಳಿಯವರ ಕುಲನಾಮಗಳು ಒಂದು ಸ್ಥಳದಲ್ಲಿ ವಾಸಿಸುವುದರ ಮೂಲಕ, ಉದ್ಯೋಗ ಅಥವಾ ವೃತ್ತಿಯಿಂದ, ಸ್ಥಳ ವೈಶಿಷ್ಟ್ಯದಿಂದ ಹೀಗೆ ಅನೇಕ ಕಾರಣಗಳಿಂದ ಹುಟ್ಟಿ ತಲೆಮಾರಿನಿಂದ ತಲೆಮಾರಿಗೆ ಮುಂದುವರೆಯುತ್ತಾ ಬಂದಿದೆ, ಬರುತ್ತಿದ್ದೆ. ಅಂತೆಯೇ ಕೆಲವು ಕುಲನಾಮಗಳು ಸಸ್ಯಗಳ ಹೆಸರಿನಿಂದ ಗುರುತಿಸಲ್ಪಡುತ್ತದೆ. ಶಿವಳ್ಳಿಯವರ ಕುಲನಾಮಗಳು ಉಂಟಾಗಲು ಸ್ಥಳದ ಹೆಸರು ಪ್ರಮುಖ್ಯ ಪಾತ್ರವಹಿಸಿದುದು ಕಂಡು ಬರುತ್ತದೆ. ಕುಲನಾಮಗಳ ಸಂಖ್ಯೆ ಮೂಲದಲ್ಲಿ (ಪ್ರಾರಂಭದಲ್ಲಿ) ಎಷ್ಟಿತೆಂದು ಹೇಳುವುದು ಕಷ್ಟಸಾಧ್ಯ. ಮನೆಗಳು ಮನೆತನಗಳೂ ಹೆಚ್ಚಾದಂತೆ, ಜನಸಂಖ್ಯೆ ವೃದ್ಧಿಯಾದಂತೆ ಅವುಗಳನ್ನು ಪ್ರತ್ಯೇಕವಾಗಿ ಗುರುತಿಸಲು ಆ ಮನೆತನದವರಿಗೆ ಅವರು ನೆಲೆಸಿದ ಸ್ಥಳದ ಹೆಸರನ್ನೋ ಸ್ಥಳ ಲಕ್ಷಣದ ಹೆಸರನ್ನೋ, ಮರದ ಹೆಸರನ್ನೋ ಗುರುತಿಸಲು ಸಹಾಯಕವಾಗುವ ವಿಷಯಗಳನ್ನು ಹೆಸರಿಸುತ್ತಿದ್ದರು. ಈ ಹೆಸರು ಮುಂದೆ ಆ ಮನೆತನದ ಹೆಸರುಗಳಾಗಿಯೇ ಮುಂದುವರಿದವು. ಹೀಗೆ ಮನೆತನಗಳು ಹೆಚ್ಚಾದಂತೆ ಕುಲನಾಮಗಳ ಸಂಖ್ಯೆಯೂ ಹೆಚ್ಚಾಗುತ್ತಾ ಬಂದಿದೆ. ಈಗ ಶಿವಳ್ಳಿಯವರಲ್ಲಿ ಸುಮಾರು ಐದು ನೂರಕ್ಕಿಂತಲೂ ಹೆಚ್ಚು ಕುಲನಾಮಗಳನ್ನು ಗುರುತಿಸಬಹುದು.

ಶಿವಳ್ಳಿಯವರ ಕುಲನಾಮಗಳಲ್ಲಿ ಎರಡು ಪದಗಳಿವೆ. ಪೂರ್ವಪದ ಮತ್ತು ಉತ್ತರಪದ. ಪೂರ್ವಪದವು ಸಾಮಾನ್ಯವಾಗಿ ಷಷ್ಠೀವಿಭಕ್ತಿಸಹಿತವಾಗಿ ಯಾವುದಾದರೊಂದು ಸ್ಥಳ, ಸಸ್ಯ, ಭೂಲಕ್ಷಣ, ದಿಕ್ಕು, ಇತ್ಯಾದಿ ಅಂಶಗಳಿಂದ ಕೂಡಿದ್ದರೆ ಉತ್ತರಪದವು 'ಆಯೆ' ಎಂಬ (ಅವನು) ಪ್ರಥಮ ಪುರುಷ ಪುಲ್ಲಿಂಗ ಸರ್ವನಾಮವಾಗಿರುತ್ತದೆ.

ಉದಾಹರಣೆಗೆ:

ಪೆಜ+ತ್ತ+ಆಯೆ–ಪೆಜತ್ತಾಯ

ಪೆರ್ಲ+ತ(ತ್ತ)+ಆಯೆ– ಪರ್ಲತ್ತಾಯೆ(ಯ)

ಮಂಜನಾಡಿ+ತ(ತ್ತ)+ ಆಯೆ –ಮಂಜನಾಡಿತ್ತಾಯೆ–ಇತ್ಯಾದಿ.

ಈ ಕುಲನಾಮಗಳು ಮೂಲತಃ ಉಡುಪಿಯ ಶಿವಳ್ಳಿಯುದ್ದಕ್ಕೂ ಕಾಲಕ್ರಮೇಣ ತುಳುನಾಡಿನ ಇತರ ಕಡೆಗಳಲ್ಲಿ ವಲಸೆ ಹೋದುದರಿಂದ ಕುಲನಾಮಗಳ ಸಂಖ್ಯೆ ಹೆಚ್ಚಾಯಿತು. ಉತ್ತರ ತುಳುನಾಡಿನಿಂದ ದಕ್ಷಿಣಕ್ಕೆ ವಲಸೆ ಹೋದ ಶಿವಳ್ಳಿಯವರಲ್ಲಿ ಕುಲನಾಮಗಳು ಈಗಲೂ ಪ್ರಚಲಿತದಲ್ಲಿದೆ. ಹೆಸರಿನೊಂದಿಗೆ ಕುಲನಾಮಗಳನ್ನು ಬಳಸುತ್ತಾರೆ. ಉತ್ತರದಲ್ಲೇ ಉಳಿದ ಶಿವಳ್ಳಿಯರು ಸಂಸ್ಕೃತ ಭಾಷೆ, ಸಾಹಿತ್ಯ, ವೇದಾಧ್ಯಾಯನದಲ್ಲಿ ಹೆಚ್ಚು ಹೆಚ್ಚು ತಮ್ಮನ್ನು ತೊಡಗಿಸಿಕೊಡುದರಿಂದಲೋ, ಮಠಗಳ ನಿಕಟ ಸಂಪರ್ಕದಲ್ಲಿದ್ದುದರಿಂದಲೋ ಏನೋ ಅವರು ತಮ್ಮ ತುಳು ಭಾಷೆಯ ಕುಲನಾಮಗಳ ಸ್ಥಾನದಲ್ಲಿ ಸಂಸ್ಕೃತದ ಪದಗಳಾದ ಉಪಾಧ್ಯಾಯ, ಭಟ್ಟ, ಆಚಾರ್ಯ, ತಂತ್ರಿ, ಪುರಾಣಿಕ, ಮುಂತಾದ ವೃತ್ತಿನಾಮಗಳನ್ನಿಟ್ಟುಕೊಂಡರು. ಇದು ಹೆಚ್ಚಾಗಿ ವೃತ್ತಿಯನ್ನು ಅವಲಂಭಿಸಿ ಬಂದಿರುತ್ತದೆ. ಇದರಿಂದಾಗಿ ಶಿವಳ್ಳಿಯವರ ಕುಲನಾಮಗಳಿಗೆ ಆಧುನಿಕ ಕಾಲದಲ್ಲಿ ಪ್ರಾದೇಶಿಕ ಮಿತಿ ಪ್ರಾಪ್ತವಾಗತೊಡಗಿತು. ಉತ್ತರದ ಶಿವಳ್ಳಿಯವರು ವೃತ್ತಿ ನಾಮಕ್ಕೆ ಹೆಚ್ಚು ಪ್ರಾಮುಖ್ಯ ಕೊಟ್ಟರು. ತುಳು ಶಬ್ದಗಳಿಂದ ಕೂಡಿದ ಕುಲನಾಮಗಳು ದಕ್ಷಿಣ ತುಳುನಾಡಿನ ಶಿವಳ್ಳಿಯವರಲ್ಲೇ ಹೆಚ್ಚಾಗಿ ಬಳಕೆಯಲ್ಲಿದೆ. ಉತ್ತರದ ಶಿವಳ್ಳಿಯವರಲ್ಲಿ ಹಿರಿಯ ತಲೆಮಾರಿನವರಿಗೆ ಮಾತ್ರ ತಮ್ಮ ಮೂಲ ತುಳು ಕುಲನಾಮಗಳು ತಿಳಿದಿದೆಯಾದರೂ ಹೊಸ ತಲೆಮಾರಿನವರಿಗೆ ತಿಳಿದಿರುವ ಸಾಧ್ಯತೆ ಕಡಿಮೆ. ಆದರೆ ಮದುವೆಯ ಸಂದರ್ಭದಲ್ಲಿ ಒಂದೇ ಕುಲದವರು ಮದುವೆಯಾಗಬಾರದು ಎಂಬ ನಂಬಿಕೆಯಿಂದಾಗಿ ಆಗಲಾದರೂ ಕುಲದ ಬಗ್ಗೆ–ಚಿಂತನೆ ಮಾಡುವುದನ್ನು ಗಮನಿಸಬಹುದು.

ಈಗೀಗ ಹಿರಿಯರು ಇಟ್ಟುಕೊಂಡಿರುವ ಭಟ್ಟ, ಆಚಾರ್ಯ, ಉಪಾಧ್ಯಾಯ ಮುಂತಾದ ಕುಲನಾಮಗಳೂ ಸಹ ಆಧುನಿಕ ಜೀವನ ಕ್ರಮದಲ್ಲಿ ಶಿವಳ್ಳಿ ಬ್ರಾಹ್ಮಣರ ಸಮಾಜದಲ್ಲಿ ಬೇರೆ ಬೇರೆ ಕಾರಣಗಳಿಂದಾಗಿ ಕಣ್ಮರೆಯಾಗುತ್ತಿದೆ. ಈ ಪ್ರಕ್ರಿಯೆ ದಕ್ಷಿಣದ ಶಿವಳ್ಳಿಯವರಲ್ಲೂ ಸ್ವಲ್ಪ ಮಟ್ಟಿಗೆ ಕುಲನಾಮಗಳನ್ನು ಹೆಸರಿನೊಂದಿಗೆ ಸೇರಿಸುವುದನ್ನು ಬಿಡುವ ಕ್ರಮ ಆಗುತ್ತಿದೆ. ಹೊಸ ತಲೆಮಾರಿನ ಶಿವಳ್ಳಿ ಬ್ರಾಹ್ಮಣ ಯುವಕರು ತಮ್ಮ ಕುಲನಾಮಗಳನ್ನು ತಮ್ಮ ಹೆಸರಿನ ಮುಂದೆ ಇಟ್ಟುಕೊಳ್ಳುತ್ತಿಲ್ಲ. ಸದ್ಯ ಉತ್ತರದ ಶಿವಳ್ಳಿಯಲ್ಲಿರುವಷ್ಟು ತೀವ್ರಗತಿಯಲ್ಲಿ ದಕ್ಷಿಣದ ಶಿವಳ್ಳಿಯವರಲ್ಲಿ ಕಂಡು ಬರುತ್ತಿಲ್ಲ.

ಉತ್ತರದ ಶಿವಳ್ಳಿಯವರಲ್ಲಿ ಕುಲನಾಮಗಳಲ್ಲಿ ವೃತ್ತಿ ಸಂಬಂಧಿಯಾದ ಕುಲನಾಮಗಳು ಹೆಚ್ಚು ಹೆಚ್ಚು ಕಂಡುಬರುತ್ತಿದೆ. ಅಂತಹ ಕೆಲವು ಕುಲನಾಮಗಳು ದಕ್ಷಿಣದ ಶಿವಳ್ಳಿ ಬ್ರಾಹ್ಮಣರಲ್ಲಿ ಕಂಡು ಬರುವುದಿಲ್ಲ. ಉದಾಹರಣೆಗೆ ಬಲ್ಲಾಳ, ಐತಾಳ, ಪುರಾಣಿಕ, ಕಲ್ಕೂರ, ಆಚಾರ್ಯ ಇತ್ಯಾದಿ. ಆದರೆ ಉಪಾಧ್ಯಾಯ, ಭಟ್ಟ, ಎಂಬ ಕುಲನಾಮಗಳು ದಕ್ಷಿಣದ ಶಿವಳ್ಳಿಯರಲ್ಲೂ ಸ್ವಲ್ಪಮಟ್ಟಿಗೆ ಕಂಡು ಬರುತ್ತದೆ. ಕೆಲವೊಮ್ಮೆ ತುಳು ಕುಲನಾಮಗಳೊಂದಿಗೆ ಭಟ್ಟ–ಉಪಾಧ್ಯಾಯ ಎಂಬ ವೃತ್ತಿ ನಾಮಗಳನ್ನು ಹೆಸರಿನ ಪೂರ್ವೋತ್ತರ ಸ್ಥಾನದಲ್ಲಿ ಸೇರಿಸಿ ಉಲ್ಲೇಖಿಸುವುದುಂಟು. ಉದಾಹರಣೆಗೆ, ರಾಮಕೃಷ್ಣ ಉಪಾಧ್ಯಾಯ, ಆನಂದ ಭಟ್ಟ ಇತ್ಯಾದಿ.

ಇಂತಹ ಸಂದರ್ಭದಲ್ಲಿ ಆ ವ್ಯಕ್ತಿಗಳನ್ನು ಸಂಬೋಧಿಸುವಾಗ ಉತ್ತರದ ಶಿವಳ್ಳಿಯವರು ವೃತ್ತಿನಾಮಕ್ಕೆ ಹೆಚ್ಚು ಮಹತ್ವಕೊಟ್ಟು ಉಪಾಧ್ಯಾಯರೇ, ಭಟ್ಟರೇ, ಎಂದು

ಸಂಬೋಧಿಸಿದರೆ, ದಕ್ಷಿಣದ ಶಿವಳ್ಳಿಯು ತುಳು ಕುಲನಾಮಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟು ಕೆದಿಲ್ಲಾಯರೇ, ಯಡಪಡಿತ್ತಾಯರೇ ಎಂಬಿತ್ಯಾದಿಯಾಗಿ ಸಂಬೋಧಿಸುತ್ತಾರೆ. ಕೆಲವು ಸಂದರ್ಭದಲ್ಲಿ ವ್ಯಕ್ತಿಯ ಹೆಸರಿಗಿಂತ ಆತನ ಕುಲನಾಮವೇ ಹೆಚ್ಚು ಬಳಕೆಯಲ್ಲಿರುವುದು ದಕ್ಷಿಣದ ಶಿವಳ್ಳಿಯವರಲ್ಲಿ ಗುರುತಿಸಬಹುದು. ಕುಲನಾಮಗಳ ಉಪಯೋಗಗಳಲ್ಲಿ ಪ್ರಾದೇಶಿಕತೆಯ ಲಕ್ಷಣಗಳನ್ನು ಗುರುತಿಸಬಹುದು.

ಶಿವಳ್ಳಿ ಬ್ರಾಹ್ಮಣರ ಕುಲನಾಮಗಳು

1	ಅಂಗಿತ್ತಾಯ	23	ಅಪ್ಪುಂತ್ತಾಯ
2	ಅಂಣಕುಂಜತ್ತಾಯ	24	ಅಮತೋಡಿತ್ತಾಯ (ಆಮೇತೋಡಿತ್ತಾಯ)
3	ಅನಂತೋಡಿತ್ತಾಯ	25	ಅಮೆತಾಯ
4	ಅಂತಿಲ್ಲಾಯ(ಅಂತಿಲ್ಲಾಯ, ಅಂಕಿಲ್ಲಾಯ	26	ಅಮ್ಮಣ್ಣಾಯ
5	ಅಂಬರತ್ತಾಯ	27	ಅಮ್ಮಣ್ಣಿತ್ತಾಯ
6	ಅಂಬಳಿತ್ತಾಯ	28	ಅಮ್ಮಿಣ್ಣಾಯ (ಅಮ್ಮಿನ್ನಾಯ)
7	ಅಂಬಿತ್ತಾಯ	29	ಅಯ್ಯ
8	ಅಂಬುಳಣ್ಣಾಯ(ಅಂಬುಕಣ್ಣಾಯ)	30	ಅರಬಿತ್ತಾಯ (ಅರ್ಬಿತ್ತಾಯ)
9	ಅಗಳಿತ್ತಾಯ	31	ಅರಳಿತ್ತಾಯ(ಅರ್ಳಿತ್ತಾಯ)
10	ಅಗ್ಗಿತ್ತಾಯ	32	ಅರಿತೋಡುತ್ತಾಯ
11	ಅಗ್ನಿತ್ತಾಯ	33	ಅರಿನಾಯ
12	ಅಡಪುನ್ನಾಯ	34	ಅರಿಪಡಿತ್ತಾಯ
13	ಅಡ್ಕತ್ತಾಯ(ಅಡ್ಕಂತಾಯ)	35	ಅರಿಮಣಿತ್ತಾಯ (ಅರಿಮನೆತ್ತಾಯ, ಅರಮನೆತ್ತಾಯ, ಅರ್ಮುಡಿತ್ತಾಯ)
14	ಅಡಿಗ	36	ಅರಿಮೆತ್ತಾಯ
15	ಅಣ್ಣಿತ್ತಾಯ	37	ಅರಿಯಪ್ಪಿನಾಯ (ಅರ್ಯಪಟ್ನಾಯ)
16	ಅಣೊಳಿತ್ತಾಯ(ಅರ್ಣಿತ್ತಾಯ, ಅನಲತ್ತಾಯ)	38	ಅರುಂಬುತ್ತಾಯ
17	ಅತ್ರಾಡಿತ್ತಾಯ	39	ಅರ್ಕಂತಾಯ(ಅಕ್ಯಂತಾಯ)
18	ಅಧಿಕಾರಿ	40	ಅರ್ತಿನ್ನಾಯ

19	ಅನಂತೋಡಿತ್ತಾಯ	41	ಅಲಂಪುಳಿತ್ತಾಯ
20	ಅನಲತ್ತಾಯ	42	ಅಲವುತ್ತಾಯ
21	ಅನಳಿತ್ತಾಯ	43	ಅಲಪಾಯಿ(ಅಲಪ)
22	ಅನಿಂಜತ್ತಾಯ(ಅನಿಂಜೆತ್ತಾಯ)	44	ಅಲೆವೂರಾಯ
45	ಅಲ್ಯಾ	69	ಇರೆಕಟ್ಟಿತ್ತಾಯ
46	ಅಸುರಣ್ಣಾಯ	70	ಇರ್ನಿರಾಯ(ಇರ್ನೂರಾಯ)
48	ಅಳ್ಳಿತ್ತಾಯ	71	ಇಲ್ಲಡಿತ್ತಾಯ
49	ಅಡರಾಯ	72	ಇಳಂತೂರಾಯ
50	ಆತ್ತಾಡಿತ್ತಾಯ	73	ಉಂಗ್ರುಪುಳಿತ್ತಾಯ
51	ಅದೂಂಡತ್ತಾಯ	74	ಉಕ್ಕುರಾಯ(ಉಳ್ಕುರಾಯ, ಉಲುಕುರಾಯ)
52	ಆಚಾರ್ಯ	75	ಉಗ್ರವಳ್ಳಿತ್ತಾಯ
53	ಆನೆತ್ತಾಯ	76	ಉಚ್ಚಿಲ್ತಾಯ, ಉಚ್ಚಿಲಣ್ಣಾಯ, ಚಿಲ್ಲಣ್ಣಾಯ, ಶಿಲ್ಲಣ್ಣಾಯ)
54	ಆರ್ಯಪಿನ್ನಾಯ	77	ಉಡುಪ
55	ಆಲಂತಾಯ	78	ಉಡುವಣ್ಣಾಯ
56	ಆಲುಂಪೋರಿತ್ತಾಯ	79	ಉಪರಣ್ಣಾಯ (ಉಪ್ಪಾರ್ಣ, ಉಪ್ಪಾಂಡ್)
57	ಆಸ್ರಣ್ಣ (ಆಸ್ರ,ಆಸರಣ್ಣ)	80	ಉಪಾದ್ರ್ (ಉಪಾಧ್ಯಾಯ, ಉಪಾಧ್ಯ)
58	ಇಂದ್ರವಳ್ಳಿತ್ತಾಯ(ಇಂದುವಳ್ಳಿತ್ತಾಯ)	81	ಉಬೆವುತ್ತಾಯ
59	ಇಚ್ಚಿಲ್ತಾಯ(ಈಚಿಲ್ತಾಯ, ಯಿಚಿಲರಾಯ)	82	ಉಬ್ಬಳಿತ್ತಾಯ
60	ಇಚ್ಲಂಪಾಡಿತ್ತಾಯ	83	ಉಮ್ಮಣತ್ತಾಯ
61	ಇಡೆಪಾಡಿತ್ತಾಯ(ಎಡೆಪಾಡಿತ್ತಾಯ)	84	ಉಮ್ಮಣಿತ್ತಾಯ
62	ಇಡೆವೆಟ್ನಾಯ (ಇಡೆವಿಡೆನಾಯ), ಎಡಡಬಡಿನ್ನಾಯ, ಎಡವೆಟ್ನಾಯ)	85	ಉರತ್ತಾಯ
63	ಇನ್ನಿಂಜೆತ್ತಾಯ	86	ಉರಾಳ

64	ಇನ್ನೊಂತಾಯ(ಇನ್ನಂತಾಯ)	87	ಉರಿವುಳ್ಳಬೈಪಾಡಿತ್ತಾಯ
65	ಇಬ್ಬಡಿತ್ತಾಯ(ಇಬ್ಬಳಿತ್ತಾಯ)	88	ಉರ್ಲಂಗೋಡಿತ್ತಾಯ
66	ಇರಿತ್ತಾಯ(ಇಪ್ರಂತಾಯ)	89	ಉಲಪಾಡಿತ್ತಾಯ
67	ಇರುವಂತೂರಾಯ	90	ಉಳಿತ್ತಾಯ
68	ಇರುವೆತ್ತಾಯ(ಇರ್ವತ್ತೂರಾಯ)	91	ಉಳಿಯತ್ತಾಯ
92	ಉಳಿರಾಯ	116	ಕಜಂಣಾಯ(ಕಜನಾಯ)
93	ಉಳ್ಳೂರಾಯ (ಉಳ್ಳಿರಾಯ, ಉಲ್ಲೂರಾಯ)	117	ಕಜೆಕಂತಾಯ
94	ಎಂಬ್ರಾಂದ್ರಿ(ಎಂಬ್ರನ್ ಕೇರಳ)	118	ಕಟ್ಟಿತ್ತಾಯ
95	ಎಡಂಬಡಿತ್ತಾಯ	119	ಕಡಂಬಳಿತ್ತಾಯ
96	ಎಡೆಕಿಲ್ಲಾಯ(ಎಡಕ್ಕಿಲ್ಲಾಯ)	120	ಕಡಂಬಾಡಿತ್ತಾಯ
97	ಎಡೆಬೆಟ್ನಾಯ	121	ಕಡಮಣ್ಣಾಯ
98	ಎಡೆಪಾಡಿತ್ತಾಯ	122	ಕಡೆಕಲ್ಲಾಯ
99	ಎರ್ಕಾಡಿತ್ತಾಯ(ಎರ್ಕಡಿತ್ತಾಯ)	123	ಕಡೆಕರಾಯ
100	ಎಲಿಯತ್ತಾಯ	124	ಕಡೆಕ್ರಾಯ
101	ಎಳಚಿತ್ತಾಯ(ಎಳ್ಚಿತ್ತಾಯ, ಎಲಿಚಿತ್ತಾಯ)	125	ಕಣ್ಣರಡಿತ್ತಾಯ
102	ಐತಾಳ	126	ಕಣ್ಣಾರಾಯ(ಕಣ್ಣಾರಣ್ಣಾಯ)
103	ಒಪ್ಪಂತಾಯ	127	ಕನ್ನರ್ಪಾಡಿತ್ತಾಯ
104	ಒಕ್ಕುಣ್ಣಾಯ (ಓಕುಂಡಾಯ)	128	ಕಬಣೂರು
105	ಒರಂಬಳ್ಳಿತ್ತಾಯ(ವಾರಂಬಳ್ಳಿತ್ತಾಯ)	129	ಕಬೆಕೊಡಿನ್ನಾಯ(ಕಬೆಕೊತಾಯ)
106	ಕಂಗಿನ್ನಾಯ	130	ಕರ್ಕಡಿತ್ತಾಯ(ಕರ್ಕಟತ್ತಾಯ)
107	ಕಂಡಿಪಾಡಿತ್ತಾಯ	131	ಕರ್ತಾಯ
108	ಕಂಡೊದಿಡಿನಾಯ	132	ಕರೆವೂರಾತ್ತಾಯ
109	ಕಂಬಳಿಕೊಡಿತ್ತಾಯ	133	ಕಲೆಂಬಿತ್ತಾಯ
110	ಕಂಬರಣ್ಣಾಯ(ಅರ್ಕುಳದಲ್ಲಿ)	134	ಕಲ್ಕಾಣಿತ್ತಾಯ(ಕಲ್ಯಾಣಂತಾಯ)
111	ಕಂಬಳಿತ್ತಾಯ(ಕಂಬೊಳಿತ್ತಾಯ)	135	ಕಲ್ಕುಡತ್ತಾಯ
112	ಕಂಬೂರನ್ನಾಯ	136	ಕಲ್ಕೂರಾಯ(ಕಲ್ಕೂರ್)

113	ಕಕ್ಕರಣ್ಣಾಯ(ಕೆಕ್ಕಾರಣ್ಣಾಯ)	137	ಕಲ್ಲೂರಾಯ
114	ಕಕ್ಕಿಲ್ಲಾಯ	138	ಕಾಂತಾರಂತಾಯ
115	ಕಕ್ಕೊತ್ತಾಯ(ಕಕ್ಕೋಡಿತ್ತಾಯ)	139	ಕಾಚಂತಾಯ(ಕಾಚಿಂತಾಯ)
140	ಕಾಚೋಳಾಡಿತ್ತಾಯ	164	ಕುಂಡಾಯ
141	ಕಾಡಂತಾಯ(ಕಾಟೂರಾಯ)	165	ಕುಂಡ್ಲಾಯ(ಕುಂಡ್ಲಾಯರ್)
142	ಕಾನತ್ತಾಯ(ಕಾನಂ, ಕೇರಳ)	166	ಕುಂದಣ್ಣಾಯ
143	ಕಾಮಡ (ಕಾಮಟ್ರು)	167	ಕುಕ್ಕಿಲ್ಲಾಯ
144	ಕಾಮೋಚೆ(ಕಾಮೋಚಿ)	168	ಕುಕ್ಕಿಣ್ಣಾಯ
145	ಕಾಯರ್ತಾಯ	169	ಕುಕ್ಕೋಡಿತ್ತಾಯ
146	ಕಾಯರ್ತೋಡಿತ್ತಾಯ (ಕಾಯಕೋಡಿತ್ತಾಯ)	170	ಕುಜಿಮಣ್ಣಾಯ
147	ಕಾರ್ಮುಣ್ಣಾಯ	171	ಕುಞ್ಞಣ್ಣಾಯ
148	ಕಾವಾರ್ಡಿತ್ತಾಯ	172	ಕುಡಲತ್ತಾಯ(ಕುಡುಮೆತ್ತಾಯ)
149	ಕಾವು ಭಟ್ಟ	173	ಕುಡುಮತ್ತಾಯ
150	ಕಿದಕಿದೆನ್ನಾಯ	174	ಕುಡುವಣ್ಣಾಯ
151	ಕಿದಕೆದಿಲ್ಲಾಯ(ಕಿದೆನಾಯ)	175	ಕುಣಿಕುಡಲಾಯ
152	ಕಿದವೂರಾಯ	176	ಕುಣಿಕುಳ್ಳಾಯ(ಕುಣಿಕುಳ್ಳಾಯ)
153	ಕಿದವೂರುತ್ತಾಯ	177	ಕುಣಿಲಾಯ
154	ಕಿನ್ನಿ	178	ಕುತ್ಯಾರಾಯ
155	ಕೀಲ್ಲಾಡಿತ್ತಾಯ	179	ಕುತ್ತುಬುಳಿತ್ತಾಯ
156	ಕುಂಕೋಡಿತ್ತಾಯ	180	ಕುದಿಪುಸ್ತೂರಾಯ
157	ಕುಂಜತ್ತಾಯ(ಕುಂಜಿರಾಯ, ಕುಂಜಿತ್ತಾಯ)	181	ಕುದ್ದಣ್ಣಾಯ ಕುದ್ವಣ್ಣಾಯ
158	ಕುಂಜಿತ್ತೂರಾಯ	182	ಕುದ್ರೆತ್ತಾಯ(ಕುದ್ರೆಂತಾಯ)
159	ಕುಂಜಿಮಣ್ಣಾಯ	183	ಕುದುರಾಯ
160	ಕುಂಜಿಮಾರ್ಗತ್ತಾಯ	184	ಕುಬನೂರಾಯ
161	ಕುಂಟಾರಂತಾಯ	185	ಕೂರ್ಕಪಾಡಿತ್ತಾಯ

162	ಕುಂಡಂಗೋಳಿತ್ತಾಯ	186	ಕೂಡೆಮೂರುತ್ತಾಯ
163	ಕುಂಡಂತಾಯ (ಕುಂಡಂದಿತಾಯ)	187	ಕೆದಿಲ್ಲಾಯ(ಕೆದಿಲಾಯ)
188	ಕೆಮುಂಡೆತ್ತಾಯ	211	ಕೊದುವೆಟ್ನಾಯ
189	ಕೆರ್ಮುಣ್ಣಾಯ	212	ಕೊದ್ವಟಿರಾಯ (ಕೊದ್ವಟುರಾಯ, ಕೆದಟಿರಾಯ)
190	ಕೆಳತೂರಾಯ	213	ಕೊಯಕುಡಲಾಯ
191	ಕೇಕುಣ್ಣಾಯ(ಕೇಕೋಡೆನಾಯ, ಕೇಕುಂಡಾಯ)	214	ಕೊಯಿಕುಡಿತ್ತಾಯ (ಕೊಯಿಕುಡೆ)
192	ಕೇಕುಡೆ	215	ಕೊರತ್ತಿನ್ನಾಯ
193	ಕೇಡಂಬಾಡಿತ್ತಾಯ	216	ಕೊರಿನ್ನಾಯ
194	ಕೊಂಗ್ರಿನ್ನಾಯ(ಕೊರಂಗನಾಯ, ಕೊಂಗ್ರತ್ನಾಯ)	217	ಕೊರ್ನ್ನಾಯ(ಕೊರೆನಾಯ)
195	ಕೊಕ್ಕಡನಾಯ(ಕೊಕ್ಕೊಡಿನಾಯ)	218	ಕೊಳಂಬೆತ್ತಾಯ
196	ಕೊಟ್ಲಾಡಿನ್ನಾಯ	219	ಕೋಳತ್ತಾಯ
197	ಕೊಡಂಚ (ಕೊಡೆಂಚ)	220	ಕೋಳಿಕೆತ್ತಾಯ
198	ಕೊಡಂಚತ್ತಾಯ (ಕೊಡಂಚಿತ್ತಾಯ)	221	ಕೋಟೆಕುಂಜತ್ತಾಯ (ಕೋಟಿಕುಂಜತ್ತಾಯ)
199	ಕೊಡಂಬಳಿತಾಯ	222	ಕೋಣೆತ್ತಾಯ
200	ಕೊಡಪಾಳಿತ್ತಾಯ	223	ಕೌಡಂಬಾಡಿತ್ತಾಯ
201	ಕೊಡಲಾಯ(ಕೊಡ್ಲಾಯ)	224	ಖಡ್ಗತ್ತಾಯ
202	ಕೊಡಿಕೊಡಿತ್ತಾಯ	225	ಗಂಗೆತ್ತಾಯ
203	ಕೊಡಿನ್ನಾಯ	226	ಗಂಜಿತ್ತಾಯ
204	ಕೊಡಿಶಿಲ್ಲಾಯ	227	ಗುಡ್ಡೆತ್ತಾಯ
205	ಕೊಡೆಕಲ್ನಾಯ	228	ಗೂಡೆತ್ತಾಯ
206	ಕೊಡೆತಿಲ್ಲಾಯ	229	ಗೋಳಿತ್ತಾಯ
207	ಕೊಡೆತ್ತಾಯ(ಕೊಡೆನ್ನಾಯ)	230	ಚಕ್ಕೆತ್ತಾಯ
208	ಕೊಡೆವೂರುತ್ತಾಯ	231	ಚಕ್ಕೇರಾಯ

209	ಕೊತ್ತಂಬರಿತ್ತಾಯ	232	ಚಡಗತ್ತಾಯ
210	ಕೊತ್ತಾಯ	233	ಚಿಕ್ಕರಾಯ
234	ಚಿಲನ್ನಾಯ	258	ದುರ್ಗೆತ್ತಾಯ
235	ಚೆಪ್ಪಿಲ್ಲತ್ತಾಯ(ಚೆಪ್ಪಿಲ್ಲ-ಕೇರಳ)	259	ದುಡಿಪುಳಿತ್ತಾಯ
236	ಜೆನ್ನಿ(ಅಡ್ವೆಯಲ್ಲಿ)	260	ದೇವಪೂಜೆತ್ತಾಯ
237	ಜೋಗಿತ್ತಾಯ	261	ದೇಲಂಪಾಡಿತ್ತಾಯ
238	ತಂತ್ರಿತ್ತಾಯ(ತಂತ್ರಿ)	262	ದೇವಣ್ಣಾಯ
239	ತಂಬ್ಲಂತೋಡಿತ್ತಾಯ (ತಂಬಲತೋಡಿತ್ತಾಯ)	263	ಧನ್ಯ
240	ತಲಪಾಡಿತ್ತಾಯ (ತಲೆಪಾಡಿತ್ತಾಯ)	264	ನಕ್ಕತ್ತಾಯ
241	ತಾಡೆತ್ತಾಯ	265	ನಕ್ಷತ್ರಿತ್ತಾಯ
242	ತಾಳಿತ್ತಾಯ	266	ನಡುವಂತಿಲ್ಲಾಯ
243	ತಾಳೆತ್ತಾಯ	267	ನಡುವಂತೋಡಿತ್ತಾಯ
244	ತುಂಬಿಕಲಾಯ	268	ನಯಂಪಳಿತ್ತಾಯ
245	ತೆಂಕಿಲ್ಲಾಯ	269	ನರಕಟತ್ತಾಯ
246	ತೆಂಜಿತ್ತಾಯ	270	ನಲ್ಲೂರಾಯ
247	ತೆಕ್ಕತ್ತಾಯ	271	ನಾಣಿಲ್ತಾಯ
248	ತೆರಕುಂಜಿತ್ತಾಯ	272	ನಾರಳತ್ತಾಯ(ನಾರ್ಲತ್ತಾಯ)
249	ತೇಕತಿಲ್ಲತ್ತಾಯ	273	ನಾರಿತ್ತಾಯ
250	ತೊಂತಿನ್ನಾಯ	274	ನಾಲವತ್ತಾಯ
251	ತೋಟಂತಿಲ್ಲಾಯ	275	ನಿಂಜೂರಾಯ
252	ತೋಡಿನ್ನಾಯ	276	ನಿಡುಂಬೂರಾಯ
253	ತೋಡ್ತಿಲ್ಲಾಯ	277	ನಿಡುವಣ್ಣಾಯ
254	ತೋಣಿಲ್ಲಾಯ	278	ನೂಜಿತ್ತಾಯ
255	ತೋಳ್ಪಾಡಿತ್ತಾಯ	279	ನೂಜಿನ್ನಾಯ
256	ದಂಡಿಲ್ಲಾಯ	280	ನೂರಿತ್ತಾಯ
257	ದಪ್ಪಂತಾಯ	281	ನೂವತ್ತೂರಾಯ

282	ನೆಕ್ಕರಂತಾಯ	306	ಪಾಕಂ, ಪಾಕಂತಿಲ್ಲ(ಕೇರಳ)
283	ನೆಲ್ಲಿತ್ತಾಯ	207	ಪಾಡಿತ್ತಾಯ
284	ನೇತ್ರತ್ತಾಯ(ನೇತ್ರಣ್ಣಾ)	308	ಪಾತುರಾಯ/ಪಾತೂರಾಯ (ಪಾಂತುರಾಯ)
285	ಪಂಜಿಕಣ್ಣಾಯ	309	ಪಾತೂರುತ್ತಾಯ
286	ಪಂಡಾರತ್ತಾಯ(ಕೇರಳ)	310	ಪಾದೂರಾಯ
287	ಪಟ್ಟೇರಿ(ಕೇರಳ)	311	ಪಾದೆತ್ತಾಯ (ಪಾದೆ)
288	ಪಡಂಗತ್ತಾಯ(ಪಡಂಗ, ಪತಂಗತ್ತಾಯ)	312	ಪಾಧ್ಯಾಯ
289	ಪಡಂತಾಯ	313	ಪಾನಂಜೆತ್ತಾಯ
290	ಪಡತ್ತಾಯ	314	ಪಾರೂರುತ್ತಾಯ
291	ಪಡಿತ್ತಾತ	315	ಪಾಲೆತ್ತಾಯ(ಪಾಲ್ಯತ್ತಾಯ)
292	ಪಡುಕಣ್ಣಾಯ(ಪಡುವಣ್ಣಾಯ)	316	ಪಿಳಿಕರೆತ್ತಾಯ(ಪೆಳ್ಳಕರತ್ತಾಯ)
293	ಪಡುವಂತಾಯ	317	ಪುಚ್ಚೆತ್ತಾಯ
294	ಪಡುವೆಟ್ನಾಯ(ಪಡುವೆಟ್ನಾಯ)	318	ಪುಣಿಂಚಿತ್ತಾಯ (ಪುಳಿಂಚತ್ತಾಯ, ಪುಣಿಚಿತ್ತಾಯ)
295	ಪಡ್ಡಣಾಯ(ಪಡ್ವಣಾರ್)	319	ಪುಣಿಕಳ್ಳಾಯ
296	ಪಡ್ಡಿಲ್ಲಾಯ	320	ಪುತ್ತಿಲತ್ತಾಯ(ಪುತ್ತಿಲ್ಲಂ)
297	ಪದಕಣ್ಣಾಯ	321	ಪುತ್ತಿಲ್ಲಾಯ
298	ಪನೋರುತ್ತಾಯ	322	ಪುತ್ತೂರಾಯ (ಪುತ್ರಾಯ)
299	ಪರಮಂಜಿತ್ತಾಯ	324	ಪುತ್ಯೆತ್ತಾಯ
300	ಪರಳತ್ತಾಯ(ಪೊರಳತ್ತಾಯ)	325	ಪುದಿನ್ನಾಯ(ಪುದೆನಾಯ)
301	ಪರಿಕತ್ತಾಯ	326	ಪುರತ್ತಾಯ
302	ಪರ್ಕಳತ್ತಾಯ(ಪಾರ್ಕಾಳತ್ತಾಯ)	327	ಪುರಾಣಿಕ
304	ಪಳಂಗಾಯ	328	ಪುಳಿಂತಾಯ
305	ಪಾಂಗಾಣ್ಣಾಯ(ಪಾಂಗಿನ್ನಾಯ)	329	ಪುಳಿಂಪೊಡಿತ್ತಾಯ
330	ಪೂಜಿತ್ತಾಯ	353	ಬರ್ಕನ್ನಾಡಿತ್ತಾಯ
331	ಪೆಂಬುರ್ಡದನಾಯ(ಪೆರಂಬುದುರಾಯ)	354	ಬಜಪ್ಪಿಲತ್ತಾಯ

332	ಪೆಜತ್ತಾಯ (ಪಿಜಿತ್ತಾಯ)	355	ಬಡಿಕೊಳತ್ತಾಯ
333	ಪೆರಡಿತ್ತಾಯ (ಪೆರ್ಬಿಡಿತ್ತಾಯ)	356	ಬಡ್ಕೂತ್ತಾಯ(ಬಡಕೆಡೆನಾಯ, ಪಿರ್ದೆಡೆನಾಯ)
334	ಪೆರಣ್ಣಾಯ (ಪೆರುವೆಣ್ಣಾಯ)	357	ಬರ್ಪತ್ತಾಯ
335	ಪೆರ್ಮುನ್ನಾಯ	358	ಬರ್ಲಾಯ
336	ಪೆಲತ್ತಾಯ	359	ಬಲ್ಲಾಳ್
337	ಪೆರ್ಲಾಯ	360	ಬಲ್ಲಕೂರಾಯ
338	ಪೊಗೆತ್ತಾಯ	361	ಬರ್ವತ್ತೂರಾಯ (ಬರ್ವತ್ತಾಯ)
339	ಪೊಣೆತ್ತಾಯ	362	ಬರ್ವನ್ನಾಯ
340	ಪೊದೆನ್ನಾಯ	363	ಬಳ್ಕೂರ್
341	ಪೊನ್ನೆತ್ತಾಯ	364	ಬಳ್ಳಕ್ಕೂರಾಯ
342	ಪೊಯ್ಯತ್ತಾಯ	365	ಬಳ್ಳಣ್ಣಾಯ
343	ಪೊಳಂಗಾಯ	366	ಬಳ್ಳುಳುತ್ತಾಯ
344	ಪೊಳಿನ್ನಾಯ (ಪೊಳ್ನಾಯ)	367	ಬಳ್ಳುಳ್ಳಾಯ
345	ಪೋತಿ(ಕೇರಳ)	368	ಬಾಂಗಿನ್ನಾಯ
346	ಬಂಬಟ್ನಾಯ (ಮುಚ್ಚೂರನಲ್ಲಿದ್ದಾರೆ)	369	ಬಾಕುಡೆತ್ತಾಯ
347	ಬಕ್ಕುತ್ತಾಯ	370	ಬಾಗಿಲ್ತಾಯ
348	ಬಜತ್ತಾಯ (ಬಜೆತ್ತಾಯ	371	ಬಾಜಿತ್ತಿಲ್ಲಾಯ(ಜಾಬಿತ್ತಿಲಾಯ)
349	ಬಡ್ಕಿಲ್ಲಾಯ (ಬಡಕ್ಕಿಲಂ–ಕೇರಳ)	372	ಬಾಣಿಲ್ಲಾಯ
350	ಬನ್ನಿಂತಾಯ(ಬನ್ಯಂತಾಯ)	373	ಬಾಯರಿತ್ತಾಯ (ಬಾಯಾರಿತ್ತಾಯ; ಬಾಯರಿ)
351	ಬರ್ಕಣ್ಣಾಯ	374	ಬಾರಿತ್ತಾಯ
352	ಬರ್ಕಣ್ಣಾರಿತ್ತಾಯ	375	ಬಾರಿಕ್ಕಾಡಿತ್ತಾಯ
376	ಬಾರ್ನಾಯ	399	ಮಂಜಗೊಡಿತ್ತಾಯ
377	ಬಾಸ್ರಿತ್ತಾಯ	400	ಮಂಜತ್ತಾಯ(ಮಂಜಿತ್ತಾಯ)
378	ಬಾಳ್ತಿಲ್ಲಾಯ	401	ಮಂಜರೋಡಿತ್ತಾಯ
379	ಬಿಜೆತ್ನಾಯ(ಬಿಜಿತ್ತಾಯ)	402	ಮಂಜಿನಾಡಿತ್ತಾಯ

			(ಮಂಜನಾಡಿತ್ತಾಯ)
380	ಬಿಟ್ಟಿಗತ್ತೂರಾಯ (ಬಿಟ್ಟಿಗೆತ್ತಾಯ	403	ಮಂಜೂರಾಯ
381	ಬಿನ್ನಿಂಜೆತ್ತಾಯ (ಬನ್ನಿಂಜೆತ್ತಾಯ)	404	ಮಂಡೇಜ (ಮಂಡಚ್ಚಾಯ)
382	ಬೆಲಂಣ್ಣಾಯ	405	ಮಂದಣ್ಣಾಯ
383	ಬೆಳಿರಾಯ	406	ಮಕ್ಕಿತ್ತಾಯ
384	ಬೆಳ್ಮನ್ನಾಯ	407	ಮಕ್ಕಿಣ್ಣಾಯ
385	ಬೆಳ್ನಾರಾಯ	408	ಮಚ್ಚಿನ್ನಾಯ(ಮುಚ್ಚಿನ್ನಾಯ)
386	ಬೈಪಾಡಿತ್ತಾಯ	409	ಮಜಲಾಯ(ಮಜಿಲಾಯ)
387	ಬೊಳಮಿನ್ನಾಯ	410	ಮಜಿತ್ತಾಯ
388	ಬೋನಂತಿಲ್ಲಾಯ (ಬೋನಂತಾಯ)	411	ಮಜ್ಜಿನ್ನಾಯ
389	ಬೋರಿತ್ತಾಯ	412	ಮಡಂತಾಯ
390	ಬೋವಿಣ್ಣಾಯ	413	ಮಡಪುಳಿತ್ತಾಯ
391	ಬೋಳಿನ್ನಾಯ (ಬೋಳ್ನಾಯ,ಬೋಳಿಲ್ಲಾಯ)	414	ಮಡಿನ್ನಾಯ
392	ಬ್ರಹ್ಮತ್ತಾಯ	415	ಮಡುಮಣ್ಣಾಯ(ಇನ್ನದಲ್ಲಿ)
393	ಭಟ್ಟ	416	ಮಡುವಳ್ಳಿತ್ತಾಯ
394	ಭಸ್ಮಾರಿತ್ತಾಯ	417	ಮಡುವಿನ್ನಾಯ
395	ಭಾಗವತ	418	ಮಡ್ಕುಳ್ಳಾಯ (ಮಡಿಕುಳಾಯ)
396	ಭಾಗಿನ್ನಾಯ	419	ಮಡ್ಪುಳಿತ್ತಾಯ (ಮದಪುಳಿತ್ತಾಯ)
397	ಭಾಸುರಿ	420	ಮಣಿಕುಳ್ಳಾಯ(ಮಣಿಕುಲತಾಯ)
398	ಮಂಗಲತ್ತಾಯ	421	ಮಣಿಗಳ್ಳತ್ತಾಯ (ಮಣ್ಣಂಗಳತ್ತಾಯ)
422	ಮಣಿಯಂತಾಯ	445	ಮುಡಿಪಾಡಿತ್ತಾಯ
423	ಮಣೊಳಿತ್ತಾಯ(ಮನೊಳಿತ್ತಾಯ)	446	ಮುನ್ನೂರಾಯ
424	ಮಣ್ಣನ್ನಿತ್ತಾಯ (ಮಣ್ಣಿನ್ನಿತ್ತಾಯ)	447	ಮುರುಡಿತ್ತಾಯ

425	ಮದವೂರುತ್ತಾಯ	448	ಮೂಡಂಬಡಿತ್ತಾಯ
426	ಮಧ್ಯಸ್ಥ	449	ಮೂಡಪಳ್ಳಿತ್ತಾಯ
427	ಮಯೂರತ್ತಾಯ(ಮರ್‍ಯ್ಯಾರುತ್ತಾಯ)	450	ಮೂಡಿತ್ತಾಯ
428	ಮರಡಿತ್ತಾಯ	451	ಮೂಡಿಲ್ಲಾಯ
429	ಮಲೆಪಾಡಿತ್ತಾಯ(ಮಲಿಪಾಡಿತಾಯ)	452	ಮೂಡುವಣ್ಣಾಯ
430	ಮಲ್ಲಂಜಿತ್ತಾಯ (ಮಲ್ಲಂಜಿನ್ನಾಯ; ಮೆಲ್ಲಂಜಿನ್ನಾಯ)	453	ಮೂಲೆಪಾಡಿತ್ತಾಯ
431	ಮಾಡಂತಿಲ್ಲಾಯ(ಮಾಡತ್ತಾಯ)	454	ಮೂಸಿಪಡಿತ್ತಾಯ
432	ಮಾಣಿಲತ್ತಾಯ	455	ಮೈಪಾಡಿತ್ತಾಯ
433	ಮಾವಂತ್ರಾಯ	556	ಮೈಲತ್ತಾಯ
434	ಮಾಳ್ಳತ್ತಾಯ	457	ಯತ್ರಡಿತ್ತಾಯ
435	ಮಿತ್ತಂತಾಯ	458	ಯಸಪಡಿತ್ತಾಯ
436	ಮಿತ್ತಡ್ಕತ್ತಾಯ	459	ರಾಯ
437	ಮಿತ್ತನಡಕತ್ತಾಯ	460	ಲಿಬಿಲಿತ್ತಾಯ
438	ಮಿತ್ತನಾಡುತ್ತಾಯ	461	ವಕೀಲಾಯ
439	ಮಿತ್ತಿಲ್ಲಾಯ	462	ವಕ್ಕಿನ್ನಾಯ(ವಟನಾಯ)
440	ಮುಂಡಾಡಿತ್ತಾಯ	463	ವಯಲಾಯ
441	ಮುಕ್ಕತ್ತಾಯ	464	ವರ್ಕಾಡಿತ್ತಾಯ
442	ಮುಗೇರಾಯ(ಮೊಗೆರಾಯ)	465	ವಾಗಣ್ಣಾಯ
443	ಮುಚ್ಚಂತಾಯ(ಮುಚ್ಚಿಂತಾಯ)	466	ವಾವುನ್ನಮ್(ಬಾವುನ್ನೋರ್ – ಕೇರಳ)
444	ಮುಡಿಕುಡಲಾಯ	467	ವೆಳ್ಳಾಯ
468	ವೋಕುಡೆನ್ನಾಯ(ಓಕುಡೆ)	492	ಸಿಂಬುರಯತ್ತಾಯ
469	ಶಂಬರತ್ತಾಯ	493	ಸಿತ್ತಿಲ್ಲಾಯ
470	ಶಬರಾಯ	494	ಸಿರತ್ತಾಯ
471	ಶಬರೂರಾಯ	495	ಸಿರ್ಕುಳಿತ್ತಾಯ(ಚಿರ್ಕುಳಿತ್ತಾಯ)
472	ಶರಣಂತಾಯ	496	ಸೀಮಂತೂರಾಯ

473	ಶರ್ಮ	497	ಸುಣ್ಣತ್ತಾಯ
474	ಶಾಸ್ತ್ರಿ	498	ಸುನ್ನೆತ್ತಾಯ
475	ಶಿಡಿಕುಳಾಯ	499	ಸುವಿತ್ತಾಯ
476	ಶಿಪ್ಪಿಲ್ಲಾಯ	500	ಸಂಭೋಜೆತ್ತಾಯ
477	ಶಿಬರೂರಾಯ(ಶಿಬರಾಯ)	501	ಸುವಿತ್ತಾಯ
478	ಶಿವತ್ತಾಯ	502	ಸುಳ್ಯಣ್ಣಾಯ
479	ಶಿವಮುದಿನ್ನಾಯ	503	ಸೆಡಿಕುಳ್ಳಾಯ
480	ಶಿರಂತೂರಾಯ	504	ಸೋಮಯಾಜಿ
481	ಶಿರಿಯಾಡಿತ್ತಾಯ	505	ಸೋಮಾಧ್ಯಾಯ
482	ಷಡಂಗತ್ತಾಯ(ಚಡಗ, ಷಡಂಗ)		
483	ಸಂಪಿಗೆತ್ತಾಯ		
484	ಸಂಬ್ಲಾಜ		
485	ಸಗ್ರಿತ್ತಾಯ (ಸರಿಗರಿತ್ತಾಯ, ಶಗ್ರಿತ್ತಾಯ)		
486	ಸಣ್ಣಡ್ಕತ್ತಾಯ(ಕಣ್ವತೀರ್ಥದಲ್ಲಿ)		
487	ಸದ್ದಣ್ಣಾಯ		
488	ಸರಳತ್ತಾಯ		
489	ಸರಳಾಯ(ಶರಳಾಯ)		
490	ಸಾದಾಂಗಾಯ		
491	ಸಾಮಗ		

3.2 ಶಿವಳ್ಳಿ ಬ್ರಾಹ್ಮಣರ ತುಳುವಿಗೂ–ಇತರರ ತುಳುವಿಗೂ ಇರುವ ಭಾಷಾ ವೈಶಿಷ್ಟ್ಯ

ದಕ್ಷಿಣ ಕನ್ನಡ, ಉಡುಪಿ ಹಾಗೂ ಕಾಸರಗೋಡು ಪ್ರದೇಶದ ಶಿವಳ್ಳಿ ಬ್ರಾಹ್ಮಣರು ಮಾತನಾಡುವ ಭಾಷೆ ತುಳು ದ್ರಾವಿಡ ಭಾಷಾ ಪರಿವಾರಕ್ಕೆ ಸೇರಿದ ಒಂದು ಪ್ರಾಚೀನ ಭಾಷೆ. ಶಿವಳ್ಳಿಬ್ರಾಹ್ಮರು ಮೂಲತ: ಅಹಿಚ್ಚತ್ರದಿಂದಲೋ ಉತ್ತರಭಾರತದಿಂದಲೋ ಉತ್ತರಕರ್ನಾಟಕದಿಂದಲೋ ಹಂತ ಹಂತವಾಗಿ ಬಂದವರು. ಮೂಲತ: ತುಳುನಾಡಿನವರು ಅಲ್ಲ. ತುಳುನಾಡಿಗೆ ಬಂದು, ವಂಶಾಭಿವೃದ್ಧಿ ಮಾಡಿಕೊಂಡು, ತುಳುಭಾಷಿಗರಾಗಿದ್ದಾರೆ. ದ್ರಾವಿಡ ಬ್ರಾಹ್ಮಣರು ಎನ್ನಿಸಿಕೊಂಡಿದ್ದಾರೆ. ಇಲ್ಲಿಗೆ ವಲಸೆ ಬಂದ ಬ್ರಾಹ್ಮಣರು ತುಳುವನ್ನು ತಮ್ಮಭಾಷೆಯಾಗಿ ಸ್ವೀಕಾರಮಾಡಿದರೂ ತಮ್ಮ ಸಂಸ್ಕೃತ ಜ್ಞಾನ ಹಾಗೂ ಕನ್ನಡ ಜ್ಞಾನದಿಂದಾಗಿ, ಸಂಸ್ಕೃತ–ಕನ್ನಡಗಳ ಹಲವಾರು ಅಂಶಗಳನ್ನು ಸ್ವೀಕರಿಸಿ ತಮ್ಮ ಆಡುನುಡಿ ಇತರ ವರ್ಗದವರ ಆಡು ನುಡಿಗಳಿಗಿಂತ ಸಾಕಷ್ಟು ಭಿನ್ನವಾಗಿ ಬೆಳೆದು ಬರುವಂತೆ ಮಾಡಿದ್ದಾರೆ. ಭಾರತದ ಎಲ್ಲ ಭಾಷೆಗಳಲ್ಲಿಯೂ ಬ್ರಾಹ್ಮಣರ ಆಡುನುಡಿ ಇತರ ವರ್ಗದವರ ಆಡುನುಡಿಗಿಂತ ಭಿನ್ನವಾಗಿದೆ. ಇವರಲ್ಲಿ ಸಂಸ್ಕೃತ ಶಬ್ದಗಳು ಹೆಚ್ಚಾಗಿ ಬಳಕೆಯಾಗಿರುವುದನ್ನು ಕಾಣಬಹುದು.ತುಳುವಿನಲ್ಲಿ ಈ ವ್ಯತ್ಯಾಸ ಇನ್ನಷ್ಟು ಹೆಚ್ಚಾಗಿದ್ದು ಪರಸ್ಪರ ಅರ್ಥಗ್ರಹಣಕ್ಕೆ ಸಾಕಷ್ಟು ತೊಡುಕುಗಳು ಉಂಟಾಗಿವೆ.

ಬ್ರಾಹ್ಮಣರ ತುಳುವಿಗೂ ಇತರರ ತುಳುವಿಗೂ ಇರುವ ವ್ಯತ್ಯಾಸಗಳು

‘ ಐ ’ ಕಾರ ಬ್ರಾಹ್ಮಣರ ತುಳುವಿನಲ್ಲಿ ‘ಳ’ ಕಾರವಾಗಿಯೂ, ಇತರರ ತುಳುವಿನಲ್ಲಿ ‘ರ’ ಕಾರವಾಗಿಯೂ ವಿಕಾಸಗೊಂಡಿದೆ.

ಬಾಳೆ	–	ಬ್ರಾ.ತು –ಬಾಳೆ	ಇ.ತು –ಬಾರೆ
ತಾಳೆ	–	ತಾಳೆ	ತಾರೆ
ಕೋಳಿ	–	ಕೋಳಿ	ಕೋರಿ.
ಕೊಡು	–	ಕೊಳು	ಕೊರು.

ಬ್ರಾ.ತುಳುವಿನ ‘ಣ’ ಕಾರಕ್ಕೆ ಸಂವಾದಿಯಾಗಿ ಇ. ತುಳುವಿನಲ್ಲಿ ನಕಾರವಿದೆ

ಹೇಳು	–ಪಣ್	–	ಪನ್
ತೆಗೆದುಕೊಂಡುಬಾ	–ಕೊಣ	–	ಕನ
ಕೇಳು	–ಕೇಣ್	–	ಕೇನ್
ಕಣ್ಣು	–ಕಣ್ಣ್	–	ಕನ್ನ್

ಬ್ರಾಹ್ಮಣರು ತುಳುವಿನ ‘ಳ’ ಕಾರಕ್ಕೆ ಸಂವಾದಿಯಾಗಿ ಇ.ತುಳುವಿನಲ್ಲಿ ಲ ಕಾರವಿದೆ.

ಚಳಿ	–ಚಳಿ	–	ಚಲಿ

ಹಲ್ಲು	–ಕೂಳಿ	–	ಕೂಲಿ
ಕಳ್ಳು	–ಕಳಿ	–	ಕಲಿ
ಬೆಳ್ಳಿ	–ಬೊಳ್ಳಿ	–	ಬೊಲ್ಲಿ

ಬ್ರಾ. ತುಳುವಿನಲ್ಲಿಯ ಆದಿ ಸ್ವರವಿರುವ ಮೂರಕ್ಷರದ ಪದಗಳಿಗೆ ಸಂವಾದಿಯಾಗಿ ಇ.ತುಳುವಿನಲ್ಲಿ ಆದಿಸ್ವರ ಲೋಪವಾಗಿ ಅಂತ್ಯಾಕ್ಷರ ದ್ವಿತ್ವವನ್ನು ಕಾಣುತ್ತೆವೆ. ಮಧ್ಯದ 'ಡ' 'ಳ' ಕಾರಗಳು ದ, ಲ ಕಾರಗಳಾಗಿವೆ.

ಉಳು	–ಅಡಪು	–ದಪ್ಪು
ಬಿಸಾಡು	–ಅಡಕ್	–ದಕ್
ಎಡವು	–ಎಡಂಕ್	–ದಂಕ್.
ಎರಡು	–ಎರಡ್	–ರಡ್ಡ್.
ಏಣಿ	–ಎಳೆಂಚಿ	–ಲೆಂಚಿ.

ಬ್ರಾ. ತುಳುವಿನ 'ಗ'ಕಾರಕ್ಕೆ ಸಂವಾದಿಯಾಗಿ ಇ.ತುಳುವಿನಲ್ಲಿ ಯಕಾರವಿರುತ್ತದೆ.

ಜೇನುತುಪ್ಪ	–ತಿಗ	–ಚಿಯ
ನಾಲಗೆ	–ನಾಲಗೆ	–ನಾಲಯಿ
ಬಾಡಿಗೆ	–ಬಾಡಿಗೆ	–ಬಾಡಯಿ

ಬ್ರಾ. ತುಳು ಮತ್ತು ಇ.ತುಳುವಿನ ಬಹುವಚನ ಪ್ರತ್ಯಯದಲ್ಲಿ ಳು/ಲು, ಕುಳು/ಕುಲು ವ್ಯತ್ಯಾಸ ಮಾತ್ರವಲ್ಲದೆ ಬ್ರಾ.ತುಳುವಿನಲ್ಲಿ ಒಂಕುಳು ಎಂಬ ವಿಶಿಷ್ಟ ಪ್ರತ್ಯಯವೂ ಇದೆ.

ಜನರು	–ಜನೊಂಕುಳು	–ಜನೊಕುಲು
ಹೂಗಳು	–ಪುಷ್ಪೊಂಕುಳು	–ಪೂಕುಲು
ದನಗಳು	–ಪೆತ್ತಗುಳು	–ಪೆತ್ತೊಲು

ಅನುನಾಸಿಕ ಆಗಮವನ್ನು ಸಾಹಚರ್ಯ ವಿಭಕ್ತಿ ಪ್ರತ್ಯಯದಲ್ಲಿಯೂ ಚತುರ್ಥಿ ವಿಭಕ್ತಿ ಪ್ರತ್ಯಯದಲ್ಲಿ ಕಾಣಬಹುದು.

ಜನರೊಡನೆ	–ಜನೊಂಟ	–ಜನೊಟ
ಜನರಿಗೆ	–ಜನೊಂಕು	–ಜನೊಕು

ಇವರ ಕೆಲವು ವಿಭಕ್ತಿ ಪ್ರತ್ಯಯಗಳಲ್ಲಿಯೂ ಈ ವೈಶಿಷ್ಟ್ಯವನ್ನು ಕಾಣಬಹುದು

ಮರದ	–ಮರಂತ	–ಮರತ
ವಸ್ತ್ರದಲ್ಲಿ	–ವಸ್ತ್ರೊಂಟು	–ವಸ್ತ್ರೊಡು

ಬ್ರಾ. ತುಳುವಿನ ಪಂಚಮಿ ವಿಭಕ್ತಿ ತ್/ನ್ತ್ ಪ್ರತ್ಯಯಕ್ಕೆ ಸಂವಾದಿಯಾಗಿ ಇ. ತುಳುವಿನಲ್ಲಿ ಡ್ತ್ ಪ್ರತ್ಯಯವನ್ನು ಕಾಣಬಹುದು.

ಮರದಿಂದ – ಮರತ್ತ್ – ಮರಡ್ತ್

ಕಿಟಕಿಯಿಂದ – ಕಂಡಿತ್ತ್ – ಕಂಡಿಡ್ದ್

ಬ್ರಾ. ತುಳುವಿನಲ್ಲಿ ಸಪ್ತಮೀ ವಿಭಕ್ತಿ ಪ್ರತ್ಯಯ ಒಂಟು /ಟ್ವಿ ಎಂಬುದಕ್ಕೆ ಸಂವಾದಿಯಾಗಿ ಇ. ತುಳುವಿನಲ್ಲಿ 'ಡು' ಪ್ರತ್ಯಯವಿದೆ.

ಗದ್ದೆಯಲ್ಲಿ – ಕಂಡೊಟು / ಕಂಡೊಂಟು – ಕಂಡೊಡು

ಸರ್ವನಾಮಗಳಲ್ಲಿ ಕಂಡು ಬರುವ ವ್ಯತ್ಯಾಸಗಳು

	ಬ್ರಾ. ತು.		ಇ.ತು.
ನಾನು –	ಏನ್	–	ಯಾನ್
ನಾವು –	ಎಂಕುಳು	–	ಯಂಕುಲು
ನೀವು –	ನಿಂಕುಳು	–	ನಿಕುಲು / ನಿಗುಲು / ಈರ್
ಅವಳು –	ಆಳ್	–	ಆಲ್
ಅವರು –	ಆಕುಳು	–	ಅಕುಲು / ಆರ್
ಇವರು –	ಮೊಕುಳು	–	ಮೊಕುಲು / ಮೇರ್

ಸಂಖ್ಯಾವಾಚಕಗಳಲ್ಲಿ ವ್ಯತ್ಯಾಸಗಳನ್ನು ಕಾಣುತ್ತೇವೆ.

		ಬ್ರಾ.ತು.	ಇ.ತುಳು
ಎರಡು	->	ಎರಡ್	– ರಡ್ಡ್
ಎಂಟು	->	ಎಣ್ಮ	– ಎಡ್ಮ
ನಲವತ್ತು	->	ನಾರ್ಪ	– ನಲ್ಪ

ನಪುಂಸಕ ಲಿಂಗ ಏಕವಚನ ಪ್ರತ್ಯಯ ಬ್ರಾ. ತುಳುವಿನಲ್ಲಿ 'ಣು' ಇ.ತುಳುವಿನಲ್ಲಿ ಉಂಡು

ಬರುತ್ತದೆ – ಬರ್ಪುಣು – ಬರ್ಪುಂಡು

ಹೋಗುತ್ತದೆ – ಪೋಪುಣು – ಪೋಪುಂಡು

ಭೂತಕಾಲದಲ್ಲಿ ಪ್ರಥಮ ಪುರುಷ ನಪುಂಸಕ ಏಕವಚನ ಪ್ರತ್ಯಯ ಬ್ರಾ. ತುಳುವಿನಲ್ಲಿ ನು, ಇ.ತುಳುವಿನಲ್ಲಿ ಉಂಡು/ನ್ಡು

ಹೋಯಿತು – ಪೋನು – ಪೋಂಡು

ನಿಷೇದಾರ್ಥಕ ಪ್ರತ್ಯಯ ಬ್ರಾ.ತುಳುವಿನಲ್ಲಿ 'ರಿ' ಇ.ತುಳುವಿನಲ್ಲಿ'ಜಿ'

ಹೋಗುವುದಿಲ್ಲ – ಪೋಪುರಿ – ಪೋಪುಜಿ

ಹೋಗಲಿಲ್ಲ – ಪೋತಿರಿ – ಪೋತಿಜಿ

ಮಾಡಲಿಲ್ಲ – ಮಂತಿರಿ – ಮಲ್ತುಜಿ

ಸಂಭಾವ್ಯ ಭವಿಷ್ಯತ್ಕಾಲದಲ್ಲಿ ಪ್ರಥಮ ಪುರುಷ ನಪುಂಸಕ ಲಿಂಗ ಏಕವಚನ ಪ್ರತ್ಯಯ ಬ್ರಾ.ತುಳುವಿನಲ್ಲಿ 'ಅನ್', ಇ.ತುಳುವಿನಲ್ಲಿ ಅಂದ್

ಬರಲಾರದು – ಬರನ್ – ಬರಂದ್

ನೋಡದು – ಸೂವನ್ – ತೂವಂದ್

ಮಾಡದು – ಮಂಪನ್ – ಮಲ್ಪಂದ್

ವಿಧ್ಯರ್ಥಕ ಕ್ರಿಯಾಪದಗಳಲ್ಲಿ ಪುಲ್ಲಿಂಗ ಸೂಚಕ ಪ್ರತ್ಯಯ

ಬ್ರಾ. ತುಳುವಿನಲ್ಲಿ ಣಿ, ಇ. ತುಳುವಿನಲ್ಲಿ ಅಂಬೆ ಸ್ತ್ರೀಲಿಂಗ ಸೂಚಕ ಪ್ರತ್ಯಯ ಬ್ರಾ.ತುಳುವಿನಲ್ಲಿ ಜೆ, ಇ.ತುಳುವಿನಲ್ಲಿ 'ದೆ'.

ಹೋಗೋ (ಪು) ಪೋಲಣಿ (ಬ್ರಾ.ತು) ಪೋಲಂಬೆ (ಇ.ತುಳು)

ಹೋಗೇ (ಸ್ತ್ರೀ) ಪೋಲಜೆ (ಬ್ರಾ. ತು) ಪೋಲದೆ (ಇ.ತುಳು)

ಕೃದಂತಾವ್ಯಯ ಪ್ರತ್ಯಯ ಬ್ರಾ.ತುಳು – ತ್ತು / ತ್ತ್, ಇ.ತುಳು – ದು/ದ್ ಅದರ ನಿಷೇಧಾರ್ಥಕ ಪ್ರತ್ಯಯ ಬ್ರಾ.ತು. ಅಂತೆ, ಇ.ತುಳು ಅಂದೆ

ಹೋಗಿ ಪೋತು (ಬ್ರಾ.ತು) ಪೋದು(ಇ.ತು)

ಬಂದು ಬತ್ತ್ ಬತ್ತ್‌ದ್

ಹೋಗದೆ ಪೋವಂತೆ ಪೋವಂದೆ

ಉಣ್ಣದೆ ಉಣಂತೆ ಉಣಂದೆ

ಶಿವಳ್ಳಿ ಬ್ರಾಹ್ಮಣರಲ್ಲಿಯೇ ಪ್ರಾದೇಶಿಕವಾಗಿ ಕೆಲವು ವ್ಯತ್ಯಾಸಗಳಿವೆ.

ಮಾಡು –ಅಂಪು ಮಾಂಪು.

ಗಂಡ –ಪುರ್ಷೆ ಮದಿಮಾಯೆ.

ಹೆಂಡತಿ –ರಾಮ್ಮಣಿ ಬುಡೆತ್ತಿ

ಸಿಹಿ –ತೀಪೆ ಸಬಿ.

ಚಿಕ್ಕ –ಕಿನ್ಯ ಸಿದ್ಯ.

ಒಳಪಂಗಡಗಳು

3.3 ಮಾಧ್ವ ಶಿವಳ್ಳಿ

ಇವರು ಮಧ್ವಾಚಾರ್ಯರ ಪ್ರಭಾವಕ್ಕೆ ಒಳಗಾಗಿ ಅವರ ತತ್ತ್ವ ಸಿದ್ಧಾಂತಗಳನ್ನು ಪಾಲಿಸುವವರು. ಮನೆಯ ದೇವರಲ್ಲಿ ಪ್ರಧಾನವಾಗಿ ಹರಿಸರ್ವೋತ್ತಮತ್ವವನ್ನು ಪ್ರತಿಪಾದಿಸಿ ವಿಷ್ಣು, ನಾರಾಯಣ, ಕೇಶವಾದಿ, ದ್ವಾದಶಾದಿತ್ಯರೂಪದ ಅಥವಾ ದಶಾವತಾರದ ರೂಪದ ಇಷ್ಟ ದೇವತೆಗಳಿದ್ದು, ಪರಿವಾರವಾಗಿ ಲಕ್ಷ್ಮೀಯೋ, ರುಕ್ಮಿಣಿಯೋ ಸೀತೆಯೋ, ಪಕ್ಕದಲ್ಲಿ ಜೊತೆಗೆ ಮುಖ್ಯಪ್ರಾಣ–ಗರುಡ. ಇವೆಲ್ಲಕ್ಕೂ ಅನ್ವಯಿಸಿ ಪೂಜಾವಿಧಾನದ ತಂತ್ರವೂ ಮುಖ್ಯವಾಗಿ ಮಧ್ವಾಚಾರ್ಯರ 'ತಂತ್ರಸಾರ'ದ ವಿಧಿಯಂತೆ ನಡೆಯುತ್ತದೆ. ಇಲ್ಲಿ ಪೂಜಿಸುವುದು ಸಪರಿವಾರವಾಗಿ ಕೇವಲ ವಿಷ್ಣುವನ್ನೇ ಓಂ ನಮಃ ಶಿವಾಯ ಎನ್ನುವ ಪಂಚಾಕ್ಷರಿಯನ್ನು ಹೇಳುವಾಗಲೂ ಧ್ಯಾನಿಸುವುದು ರುದ್ರಾಂತರ್ಗತ 'ಲಕ್ಷ್ಮೀ ನರಸಿಂಹ ವಿಷ್ಣುವನ್ನೇ. ಮಾಧ್ವ ಶಿವಳ್ಳಿಯವರು ಗೋಪಿ ಧರಿಸುತ್ತಾರೆ, ಏಕಾದಶಿಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಆ ದಿವಸ ಮಠದಲ್ಲಿ ಪ್ರಸಾದ ಮಾತ್ರ ಕೊಡುವುದು. ಭಕ್ತರಿಗೆ ಮಧ್ಯಾಹ್ನ ಊಟವಿಲ್ಲ. ದ್ವಾದಶಿಯಿಂದ ಬೆಳಿಗ್ಗೆ 9 ಗಂಟೆಗೆ ಊಟ. ಉಡುಪಿ ಪರಿಸರದಲ್ಲಿ ಹೆಚ್ಚಾಗಿ ಮಾಧ್ವ ಶಿವಳ್ಳಿಯವರೇ ಇದ್ದಾರೆ. ಇವರು ಮಠ ಸಂಪ್ರದಾಯದವರು. ಮುದ್ರೆಗಳನ್ನು ಧರಿಸುತ್ತಾರೆ. ಸಂಜೆಯ ಹೊತ್ತು ಮಕ್ಕಳು ಮತ್ತು ಹೆಂಗಸರು ಮನೆಯಲ್ಲಿ ಭಜನೆಯನ್ನು ಮಾಡುವ ಸಂಪ್ರದಾಯನ್ನು ಉಳಿಸಿಕೊಂಡು ಬಂದಿದ್ದಾರೆ.

3.4 ಕಂದಾವರ ಶಿವಳ್ಳಿ

ಕುಂದಾಪುರ ತಾಲೂಕಿನಿಂದ 10 ಕಿಲೋಮಿಟರ್ ದೂರದಲ್ಲಿ ಕಂದಾವರ ಎಂಬ ಹಳ್ಳಿಯಲ್ಲಿ ನೆಲೆಸಿದವರು. ಬಾಳೆಕುದ್ರು, ಶೃಂಗೇರಿ ಮಠಕ್ಕೆ ಒಳಪಟ್ಟವರು. ಇವರ ಆಡು ಭಾಷೆ ಕನ್ನಡ. ಪಂಚಾಯತನ ಪೂಜೆಯನ್ನು ಮಾಡುತ್ತಾರೆ. ಹರಿಹರರಲ್ಲಿ ಭೇದವಿಲ್ಲ. ಎಲ್ಲಾ ಹಬ್ಬಗಳನ್ನು ಆಚರಿಸುತ್ತಾರೆ ಅಷ್ಟಮಿ, ಶಿವರಾತ್ರಿ, ಏಕದಶಿ, ಅನಂತವ್ರತ, ಗಣೇಶ ಚತುರ್ಥಿ ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ. ಶಿವಳ್ಳಿ ಬ್ರಾಹ್ಮಣರ ಹಾಗೆಯೇ ಇವರ ಪದ್ಧತಿ. ಕಂದಾವರದಲ್ಲಿ ನೆಲೆಸಿರುವ ಕಾರಣ ಇವರಿಗೆ ಕಂದಾವರ ಶಿವಳ್ಳಿಯವರು ಎಂದು ಕರೆಯುತ್ತಾರೆ.

3.5 ಸ್ಮಾರ್ತ ಬ್ರಾಹ್ಮಣರು

ಸ್ಮಾರ್ತ ಬ್ರಾಹ್ಮಣರು ಶಿವ ಭಕ್ತರು. ವಿಭೂತಿಯನ್ನು ಹಾಕಿ ಕೊಳ್ಳುತ್ತಾರೆ. ಇವರು ಬಾಳೆಕುದ್ರು, ಶೃಂಗೇರಿ ಮಠದ ಅನುಯಾಯಿಗಳು. ಗಣೇಶ ಚತುರ್ಥಿ, ಶಿವರಾತ್ರಿ, ಮಹಾಲಯ ಅಮವಾಸ್ಯೆ ಇವರಿಗೆ ವಿಶೇಷವಾದ ಹಬ್ಬ. ಶಿವ, ವಿಷ್ಣು, ಗಣಪತಿ, ದೇವಿ ಮತ್ತು ಪಂಚ ಬ್ರಹ್ಮರನ್ನು ಆರಾಧಿಸುತ್ತಾರೆ. ವೈದಿಕ ಬ್ರಾಹ್ಮಣರನ್ನು ದೇವರಂತೆ ಕಾಣುತ್ತಾರೆ. ಹಿರಿಯರಲ್ಲಿ ಮಡಿಮೈಲಿಗೆ ಹೆಚ್ಚು. ಸ್ಮಾರ್ತ ಏಕಾದಶಿಯನ್ನು ಆಚರಿಸುತ್ತಾರೆ. ಶಿವನಿಗೆ ಬಿಲ್ವ ಪತ್ರೆಯನ್ನು ವಿಶೇಷವಾಗಿ ಅರ್ಪಿಸುತ್ತಾರೆ. ಶಿವರಾತ್ರಿಯ ದಿವಸ ಉಪವಾಸವಿದ್ದು ಜಾಗರಣೆ ಮಾಡುತ್ತಾರೆ. ಸ್ಮಾರ್ತ ಸಂಪ್ರದಾಯ ಮಾಧ್ವ

ಸಂಪ್ರದಾಯಕ್ಕಿಂತಲೂ ಪ್ರಾಚೀನ. ಇವರು ಅದ್ವೈತ ಸಂಪ್ರದಾಯವನ್ನು ಪಾಲಿಸುತ್ತಾ ಪಂಚಾಯತನ ಪೂಜೆಯನ್ನು ಮೈಗೂಡಿಸಿಕೊಂಡವರೆಂದು ರೂಢಿ ಮಾತು.

ನಾಡಶಿವಳ್ಳಿ

ಬೆಳ್ತಂಗಡಿ ತಾಲೂಕಿನ ನಿಡ್ಲೆ ಗ್ರಾಮದಲ್ಲಿ ಹೆಚ್ಚಾಗಿ ನಾಡ ಶಿವಳ್ಳಿಯವರು ವಾಸಿಸುತ್ತಿದ್ದಾರೆ. ಬೇರೆ ಬ್ರಾಹ್ಮಣ ವರ್ಗದವರಿಗೆ ಹೋಲಿಸಿದರೆ ಇವರ ಸಂಖ್ಯೆ ಕಡಿಮೆ. ಕೃಷಿಯೇ ಇವರ ಪ್ರಧಾನ ಕಸುಬು.

ಇವರು ಬೆಳ್ತಂಗಡಿ ತಾಲೂಕಿನ ನಿಡ್ಲೆ ಗ್ರಾಮದಲ್ಲಿ ಇದ್ದ ಬ್ರಾಹ್ಮಣರು. ಶಿವಳ್ಳಿಯವರು ತುಳುನಾಡಿಗೆ ಆಗಮಿಸುವುದಕ್ಕಿಂತಲೂ ಮುಂಚೆಯೇ ಇಲ್ಲಿ ನೆಲೆಸಿದವರು. 'ನಾಡ' ಎನ್ನುವ ಶಬ್ದಕ್ಕೆ ನಾಡವರು, ನಾಡಿನವರು ಎಂಬ ಅರ್ಥವನ್ನು ಕಲ್ಪಿಸುವುದಾದರೆ ಹಲವು ಶತಮಾನಗಳ ಹಿಂದೆ ನೆಲೆಸಿದವರು. ಶಿವಳ್ಳಿ ಬ್ರಾಹ್ಮಣ ಆಗಮನದ ಅನಂತರ ನಾಡವರು ಎಂಬ ಶಬ್ದ 'ನಾಡ–ಶಿವಳ್ಳಿ' ಎಂಬುದು ಆಗಿರಬೇಕು. ಶಿವಳ್ಳಿಯವರ ಎಲ್ಲಾ ಆಚಾರವಿಚಾರ, ಸಂಪ್ರದಾಯ, ಪೂಜಾವಿಧಾನಕ್ಕೂ ನಾಡಶಿವಳ್ಳಿಯವರು ಪೂಜಾ ವಿಧಾನಕ್ಕೂ ವ್ಯತ್ಯಾಸವಿಲ್ಲ. ಆದರೆ ನಾಡಶಿವಳ್ಳಿಯವರ ಪುರೋಹಿತರು ಶಿವಳ್ಳಿಯವರ ಮನೆಗೆ ಬಂದು ಪೂಜೆ ಮಾಡುವ ಕ್ರಮ ಈಗಲೂ ಇಲ್ಲ. ಅಂತೆಯೇ ಮದುವೆ ಹೋಮಗಳಲ್ಲಿ ಪೌರೋಹಿತ್ಯ ವಹಿಸುವ ಕ್ರಮವಿಲ್ಲ. ಅ ನಾಡ ಶಿವಳ್ಳಿಯವರಲ್ಲಿಯೇ ಪುರೋಹಿತರು ಇದ್ದಾರೆ. ಅವರು ಅವರ ವರ್ಗದವರಿಗೆ ಮಾತ್ರ ಪೌರೋಹಿತ್ಯ ಮಾಡುತ್ತಾರೆ. ಅಂತೆಯೇ ಸಾಮಾನ್ಯ ತುಳುವರೂ ಸಹಾ ಅವರಿಂದ ಪೌರೋಹಿತ್ಯ ಮಾಡಿಸುವುದಿಲ್ಲ. ಇದನ್ನು ಗಮನಿಸಿದಾಗ ಹಿಂದೆ ನಾಡಶಿವಳ್ಳಿಯವರಿಗೆ ಪೌರೋಹಿತ್ಯದಲ್ಲಿ ಪ್ರಾಬಲ್ಯವಿದ್ದರೂ ಶಿವಳ್ಳಿಯವರ ಆಗಮನದ ನಂತರ ತುಳುವರು ಶಿವಳ್ಳಿಯವರಿಗೆ ಮಹತ್ವ ಕೊಟ್ಟ ಕಾರಣ ನಾಡ ಶಿವಳ್ಳಿ ಪುರೋಹಿತರು ಅವರ ವರ್ಗಕ್ಕೆ ಮಾತ್ರ ಸೀಮಿತವಾದರು. ಶಿವಳ್ಳಿ ಬ್ರಾಹ್ಮಣರಲ್ಲಿ ಹಲವು ಕುಲನಾಮಗಳು ಇರುವಂತೆ 'ನಾಡಶಿವಳ್ಳಿ' ಯವರಲ್ಲಿ ಇಲ್ಲ. ಹೆಚ್ಚಾಗಿ ಹೆಬ್ಬಾರ್, ರಾವ್, ಭಟ್ ಎಂಬುದನ್ನು ಹೆಸರಿನೊಂದಿಗೆ ಸೇರಿಸುತ್ತಾರೆ. ಜೀವನೋಪಾಯಕ್ಕೆ ಕೃಷಿಯನ್ನೇ ಅವಲಂಬಿಸಿಕೊಂಡಿರುವುದರಿಂದ ವೇದ, ಮಂತ್ರಗಳ ಅಧ್ಯಯನ ಮತ್ತು ಪೌರೋಹಿತ್ಯ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿ ಹೊಂದಲಿಲ್ಲ. ತುಳುನಾಡಿನ ಯಾವುದೇ ದೇವಸ್ಥಾನದಲ್ಲಿ ನಾಡಶಿವಳ್ಳಿಯವರು ಅರ್ಚಕರಾಗಿ ಸೇವೆ ಸಲ್ಲಿಸುತ್ತಾ ಇಲ್ಲ. ಶಿವಳ್ಳಿಯವರಂತೆ ಎಲ್ಲಾ ದೇವರನ್ನು ಆರಾಧಿಸುತ್ತಾರೆ. ಹರಿಹರ ಬೇಧವಿಲ್ಲ. ಶಿವಳ್ಳಿಯೊಂದಿಗೆ ಸಹಪಂಕ್ತಿಯಿದೆ. ಆದರೆ ಹಿಂದೆ ಮದುವೆ ಆಗುತ್ತಿರಲಿಲ್ಲ. ಈಗೀಗ ಆಗುತ್ತಿದೆ.

3.6 ಬ್ರಹ್ಮಕ್ಷತ್ರಿಯ:–

ತೌಳವ ಅಂದರೆ ಉಡುಪಿ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೇರಳ ರಾಜ್ಯಗಳಿಗೆ ಅಹಿಚ್ಛತ್ರದಿಂದ ಬ್ರಾಹ್ಮಣ ಕುಲಗಳನ್ನು ತಂದು ನೆಲೆಗೊಳಿಸಿದ ಕದಂಬ ಸಾಮ್ರಾಜ್ಯದ ಸ್ಥಾಪಕ ಮಯೂರ ವರ್ಮನೇ ಬ್ರಾಹ್ಮಣರು ಕೈಗೊಂಡ ಕ್ಷಾತ್ರ ವೃತ್ತಿಗೆ ದೃಷ್ಟಾಂತ. ಮಯೂರಶರ್ಮನೆಂಬ ಬ್ರಾಹ್ಮಣನೇ ಕ್ಷಾತ್ರ ವೃತ್ತಿಯನ್ನವಲಂಬಿಸಿ ಮಯೂರವರ್ಮನೆನಿಸಿಕೊಂಡನೆಂಬ ಐತಿಹ್ಯವಿದೆ. ಅಂತೆಯೇ ತುಳುನಾಡಿನ

ಬ್ರಾಹ್ಮಣಕುಲಗಳಲ್ಲಿ ಕೆಲವು ಕುಲಗಳು ಸಾಮಾಜಿಕ-ರಾಜಕೀಯ ಸಂಘಟನೆಗೆ ಸಂಬಂಧಿಸಿದ ಕರ್ತವ್ಯಗಳನ್ನು ನಿರ್ವಹಿಸಿ 'ಬ್ರಹ್ಮಕ್ಷತ್ರಿಯ'ರೆಂಬ ವಿಂಗಡನೆಗೆ ಸೇರಿಕೊಂಡಿವೆ. ಬಲ್ಲಾಳ, ಪ್ರಭು, ಪಕ್ಷನಾಥ, ಸಭಾಪತಿ, ಗ್ರಾಮಣಿ, ಜನ್ನಿ, ಮುಂತಾದ ಉಪನಾಮಗಳನ್ನು ಹೊಂದಿರುವ ತೌಳವ ಬ್ರಾಹ್ಮಣ ಕುಲಗಳು ಈ ವಿಂಗಡನೆಗೆ ಸೇರುತ್ತವೆ.

ಬ್ರಹ್ಮ ಕ್ಷತ್ರಿಯರು ಅಂಬಲಪಾಡಿಯ ನಿಡಂಬೂರ ಬಲ್ಲಾಯರು ಮತ್ತು ಚಿಟ್ಪಾಡಿಯ ಮೂಡಿಲ್ಲಾಯ ಬಲ್ಲಾಳರು.

ತುಳುನಾಡಿನ ಬ್ರಾಹ್ಮಣ ಕುಲಗಳಲ್ಲಿ ಕೆಲವು ಕುಲಗಳು 'ಬಲ್ಲಾಳ' ಎಂಬ ಉಪನಾಮಗಳನ್ನು ಪಡೆದಿವೆ. ಉಡುಪಿ ನಗರದ ಮೂಡು ಬದಿಯಲ್ಲಿರುವ ಚಿಟ್ಪಾಡಿ ಬೀಡಿನ 'ಮೂಡಿಲ್ಲಾಯ ಬಲ್ಲಾಳ' ಕುಲ ಮತ್ತು ಪಡುಬದಿಯಲ್ಲಿರುವ ಅಂಬಲಪಾಂಡಿ ಬೀಡಿನ ನಿಡಂಬೂರು ಬಲ್ಲಾಳ ಕುಲ ಇದು ಬಲ್ಲಾಳ ಎಂಬ ಹೆಸರಿನಿಂದಲೇ ಪ್ರಸಿದ್ಧವಾಗಿವೆ. ರಾಜಕೀಯ ಅಧಿಕಾರವನ್ನು ನಿರ್ವಹಿಸುತ್ತಿದ್ದ ಬ್ರಾಹ್ಮಣೇತರ ಕುಟುಂಬಗಳಿಗೆ ಮೀಸಲಾಗಿದ್ದ 'ಬಲ್ಲಾಳ' ಎಂಬ ಉಪನಾಮ ಆ ಕಾರ್ಯದಲ್ಲಿ ಪಾಲುಗೊಳ್ಳುತ್ತಿದ್ದ ಕೆಲವು ಬ್ರಾಹ್ಮಣ ಕುಲಗಳಿಗೂ ಅನ್ವಯವಾಗಿರಬೇಕು. ಇಂತಹ ಬ್ರಾಹ್ಮಣ ಕುಲಗಳಿಗೆ ಬ್ರಹ್ಮಕ್ಷತ್ರಿಯ ಎಂಬ ವಿಶೇಷಣವನ್ನು ಬಳಸಲಾಗುತ್ತಿತ್ತು.

ಅಂಬಲಪಾಡಿಯ ಪ್ರಸಿದ್ಧ ಮಹಾಕಾಳೀ ಗುಡಿಯ ಪಕ್ಕದಲ್ಲೇ ಸ್ಥಾಪನೆಗೊಂಡಿರುವ ಜನಾರ್ದನ ದೇವಸ್ಥಾನವನ್ನು ಕ್ರಿ.ಶ 16ನೇಯ ಶತಮಾನದಲ್ಲಿ ಜೀರ್ಣೋದ್ದಾರಗೊಳಿಸಿದ 'ನಿಡಂಬೂರ ಶ್ರೀ ಶ್ರೀಧರ ಬಲ್ಲಾಳ'ರನ್ನು ಈ ಕುರಿತು ARSIE-574 ಶಿಲಾಶಾಸನದಲ್ಲಿ ಬ್ರಹ್ಮ ಕ್ಷತ್ರಿಯ ಶ್ರೀಧರ ನಿಡಂಬೂರರು ಎಂದು ಕರೆಯಲಾಗಿದೆ. ಅಂಬಪಾಡಿ ದೇವಸ್ಥಾನದಲ್ಲಿ ಸ್ಥಾಪನೆಗೊಂಡಿರುವ ಈ ಶಿಲಾ ಶಾಸನದ ಕಾಲ -ಶಾಲಿವಾಹನ ಶಕ ವರ್ಷ 1463 ಅಂದರೆ ಕ್ರಿ.ಶ. 1571. ವಿಜಯನಗರದ ಸಾಮ್ರಾಟ ವೀರ ಪ್ರತಾಪ ಸದಾಶಿವರಾಯ, ಕೆಳದಿ ಸಂಸ್ಥಾನದ ರಾಮರಾಜ ನಾಯಕ ಮತ್ತು ಬಾರಕೂರು ರಾಜ್ಯದ ರಾಮಕೃಷ್ಣ ಒಡೆಯ ಇವರ ಆದೇಶದಂತೆ (ನಿರೂಪ) ಸ್ಥಾಪನೆಗೊಂಡ ಈ ಶಿಲಾಶಾಸನದ ಕೆಲವುವಾಕ್ಯಗಳು ಇಂತಿವೆ.

"ಬ್ರಹ್ಮ ಕ್ಷತ್ರಿಯ... ಶ್ರೀಧರ ನಿಡಂಬೂರರು ರಾಮೇಶ್ವರಕ್ಕೆ ತಮ್ಮ ಯಾತ್ರೆಗೆ ಹೋಗಿ, ತೀರ್ಥಸ್ಥಾನ ಮಾಡಿ, ತಿರುಗಿ ನಡಂಬೂರಿಗೆ ಬಂದು ಅಂಬಲಪಾಡಿಯ ಜನಾರ್ದನ ದೇವಾಲಯದ ಜೀರ್ಣೋಧಾರವಾಗಿ ಕಲ್ಲಲಿ ಕಟ್ಟಿಸಿ...ಇತ್ಯಾದಿ)[1]

ಶಿವಳ್ಳಿ, ಕಡೆಕಾರು, ಕಿದಿಯಾರು, ಕುತ್ಪಾಡಿ, ಅಂಬಲಪಾಡಿ, ಮೂಡು ನಡಂಬೂರು, ಕೊಡುವೂರು, ಪುತ್ತೂರು, ಬಡಾನಿಡಿಯೂರು, ಕೆಳರ್ಕಳಬೆಟ್ಟು ಮುಂತಾಗಿ ಉಡುಪಿಯ ಪಡುಬದಿಯ 10ಗ್ರಾಮಗಳು ನಿಡಂಬೂರು ಬಲ್ಲಾಳರ ಆಡಳಿತಕ್ಕೆ ಒಳಪಟ್ಟಿದ್ದವು.

ಕ್ರಿ.ಶ. 16ನೆಯ ಶತಮಾನದಲ್ಲಿ ನಡಂಬೂರು ಶ್ರೀಧರ ಬಲ್ಲಾಳರಿಗಿಂತಲೂ ಪೂರ್ವದಲ್ಲಿ ಕ್ರಿ.ಶ 14-15ನೆಯ ಶತಮಾನಗಳಲ್ಲಿ ನಡಂಬೂರು ಬೀಡಿನ ಅರಸರಾಗಿದ್ದ 'ಅಣ್ಣ ನಿಡಂಬೂರ'ರ ಉಲ್ಲೇಖ ಕ್ರಿ.ಶ 1379ರ ಕೊಡವೂರು ಗ್ರಾಮದ ಸಂಖ್ಯೆ 186-

1972ರ ಶಿಲಾಶಾಸನ ಕ್ರಿ.ಶ 1426ರ ಕಡೆಕಾರು ಗ್ರಾಮದ ಸಂಖ್ಯೆ ARSIE – 57ರ ಶಿಲಾಶಾಸನದಲ್ಲಿಯಾ 'ಕೊಡವೂರು' ಮತ್ತು ಕಡೆಕಾರು ಗ್ರಾಮದ ಶಿಲಾಶಾಸನಗಳಲ್ಲಿ ಲಭ್ಯವಾಗಿದೆ. ಅಣ್ಣ ನಿಡಂಬೂರರ ಮಗ 'ಶಿವ ನಿಡಂಬೂರ'ರ ಉಲ್ಲೇಖವುಳ್ಳ ಕ್ರಿ.ಶ 1383ರ ಉಡುಪಿ ತಾಲೂಕಿನ ಬೆಣಗಲ್ಲು ಸಮೀಪದ ಸಾಸ್ತವು ಶಿಲಾಶಾಸನವೊಂದನ್ನು ಡಾ।ಬಿ ವಂಸಂತ ಶೆಟ್ಟರು 'ಉಡುಪಿ ತಾಲೂಕಿನ ಶಾಸನಗಳು' ಎಂಬ ಕೃತಿಯಲ್ಲಿ ತಿಳಿಸಿದ್ದಾರೆ.

ನಿಡಂಬೂರ ಮತ್ತು ಮೂಡಿಲ್ಲಾಯ ಬಲ್ಲಾಳರಿಗೆ ಮೀಸಲಾಗಿದ್ದ 'ಪಕ್ಷನಾಥ' ಎಂಬ ಸಂಕೇತ ಅಂಬಲಪಾಡಿಯಾ ನಿಡಂಬೂರ ಬಲ್ಲಾಳರು ಮತ್ತು ಚಿಟ್ಪಾಡಿಯಾ ಮೂಡಿಲ್ಲಾಯ ಬಲ್ಲಾಳರು ರಾಜಕೀಯ ಶಿಕ್ಷಾರಕ್ಷಾಧಿಕಾರದ ಜೊತೆಗೆ ವರ್ಣಾಶ್ರಮ ಧರ್ಮದ ಕಟ್ಟಳೆಗಳನ್ನು ನಿರ್ಣಯಿಸುವ ಅಧಿಕಾರವನ್ನು ನಿರ್ವಹಿಸುತ್ತಿದ್ದರು. ಈ ನಿಟ್ಟಿನಲ್ಲಿ ಅವರಿಗೆ ಪಕ್ಷನಾಥ ಎಂಬ ಸಂಕೇತ ಬಳಕೆಯಲ್ಲಿತ್ತು.

'ಪಕ್ಷನಾಥ'ರ ವರ್ಣಾಶ್ರಮ ಕಟ್ಟಳೆಗಳ ನಿರ್ಣಾಯಾಧಿಕಾರ ಕ್ರಿ.ಶ 19ನೆಯಾ ಶತಮಾನದವರೆಗೂ ರಾಜಕೀಯ ಮನ್ನಣೆ ಪಡೆದಿತ್ತು. ಇದಕ್ಕೆ ಸಮರ್ಥನೆಯಾಗಿ ಕ್ರಿ.ಶ 1802ರಲ್ಲಿ ನಿಡಂಬೂರು ಬೀಡಿನ ಪಕ್ಷನಾಥರಾಗಿದ್ದ ನಿಡಂಬೂರು ಪಕ್ಷನಾಥ ಬಲ್ಲಾಳ ಅನಂತಾಚಾರ್ಯರೆಂಬರಿಗೆ ಮೈಸೂರು ರಾಜ್ಯದ ದಿವಾನ್ ಪೂರ್ಣಯ್ಯನವರು ಕಳುಹಿಸಿದ್ದ ಪರವಾನೆ ಸಾಕ್ಷಿ. ಕನ್ನಡ ಭಾಷೆಯಲ್ಲಿರುವ ಈ ಪರವಾನೆಯನ್ನು ದೇವನಾಗರಿ ಲಿಪಿಯಲ್ಲಿ ಬರೆಯಲಾಗಿದೆ. ಪರವಾನೆಯ ಒಕ್ಕಣೆ ಈ ರೀತಿಯಲ್ಲಿದೆ ಶ್ರೀ ವೆಂಕಟ ನರಸಿಂಹ ಪೂರ್ಣ ಸುಖ ಪೂರ್ಣಯ್ಯನವರ ಹುಜೂರಿನ ಸ್ವಂತ ಅರಗಿನ ಶೀಲೆ.

ಶ್ರೀಮಾನ್ ಮಧ್ವಶಾಸ್ತ್ರ ಸಂಪನ್ನರಾದಂಥ ವೇದಮೂರ್ತಿ ನಿಡಂಬೂರು ಪಕ್ಷನಾಥ ಅನಂತಾಚಾರ್ಯರಿಗೆ ಶ್ರೀಮಂತ ಪೂರ್ಣಯ್ಯನ ಸಾಷ್ಟಾಂಗ ನಮಸ್ಕಾರ, ರುಧಿರೋದ್ಗಾರಿ ಸಂವತ್ಸರದ ಕಾರ್ತಿಕ ಬಹುಳ 2ವರೆಗೆ ಕ್ಷೇಮದಲ್ಲಿದ್ದೇವೆ. ನಿಮ್ಮ ಕ್ಷೇಮ ಕುಶಲಗಳಿಗೆ ಬರೆಸಿಕೊಳ್ಳುವುದು. ಸಾಂಪ್ರತ ನಮ್ಮ ತಾಲೂಕುಗಳಲ್ಲಿ ಇರುವ ನಿಮ್ಮ ತೌಳವ ದೇಶದ ದ್ವಾತ್ರಿಂಶ ಅಗ್ರಹಾರದ ಬ್ರಾಹ್ಮಣರ ವರ್ಣಾಶ್ರಮ ಧರ್ಮ– ಆಚಾರ ವಿಚಾರ ಶ್ರೀ ಮಧ್ವ ವಿಜಯ ಸಹ್ಯಾದ್ರಿ ಖಂಡ ಪುರಾಣೋಕ್ತ ಪ್ರಕಾರ ನಡಿವಂತಾದ್ದರಲ್ಲಿ ಎಂದರೆ ಜನರು ನಿಮ್ಮ ಆಜ್ಞಾ ಮೀರಿ ನಡೆಯಲಿಕ್ಕೆ ಕಾರಣವೇನಿದಿತ್ತು? ತಾಲೂಕು ಅಮೀರರಿಗೆ ಪರವಾನೆ ಬರೆಸಿ ಕಳುಹಿಸಿದ್ದೇನೆ. ಪರಶುರಾಮ ದೇವರ ಆಜ್ಞೆ ಪ್ರಕಾರ ವರ್ಣಾಶ್ರಮಧರ್ಮ ಚೆನ್ನಾಗಿ ವಿಚಾರಿಸಿಕೊಂಡು ಬರುವುದು. ಎಂಬ ಹುಕುಂ ಹೊರಡಿಸಿದ್ದರು. ಇದರಿಂದ ವರ್ಣಾಶ್ರಮಕಟ್ಟಳೆಗಳ ನಿರ್ಣಾಯಧಿಕಾರ ಇವರಿಗಿತ್ತು ಎಂದು ತಿಳಿದು ಬರುತ್ತದೆ.

ಶ್ರೀಶ ಬಲ್ಲಾಳ ಎಸ್. ತೌಳವ ಬ್ರಾಹ್ಮಣರೊಳಗಣ ಬ್ರಹ್ಮಕ್ಷತ್ರಿಯರು

ಶಿವಳ್ಳಿಬ್ರಾಹ್ಮಣರುಭಾಗ–1,2001,ಪುಟ313

ಅಧ್ಯಾಯ– ನಾಲ್ಕು ಸಂಸ್ಕಾರಗಳು ಮತ್ತು ಹಬ್ಬ ಹರಿದಿನಗಳು
ಷೋಡಶ ಸಂಸ್ಕಾರಗಳು

4.1 ಸಂಸ್ಕಾರಗಳು

ಮಾನವನ ಬಾಳು ಕೊನೆ ಮೊದಲಿಲ್ಲ ನಿರಂತರವಾಗಿ ಸುತ್ತುತ್ತಿರುವ ಒಂದು ಚಕ್ರ. ಈ ಚಕ್ರದ ಒಂದು ಸುತ್ತು ಮುಗಿದಾಗ ಅಲ್ಲಿಂದಲೇ ಮುಂದಿನ ಸುತ್ತು ಆರಂಭವಾಗುತ್ತದೆ. ಜೀವನದ ಒಂದು ಸುತ್ತಿನ ಆರಂಭವನ್ನು ಹುಟ್ಟಿನಿಂದ ಮತ್ತು ಅಂತ್ಯವನ್ನು ಸಾವಿನಿಂದ ಗುರುತಿಸುತ್ತೇವೆ. ಈ ಜನನ –ಮರಣಗಳ ಮಧ್ಯೆ ಶಿಶುವಿದ್ದಾಗ ಆಹಾರ ಸೇವನೆ, ಆಟ ಆರಂಭ, ಬಳಿಕ ಶಿಕ್ಷಣದ ಆರಂಭ, ಬೆಳೆದಾಗ ವಿವಾಹ ಇತ್ಯಾದಿ ಮಹತ್ವದ ಘಟನೆಗಳು ನಡೆಯುತ್ತವೆ. ಈ ಕ್ರಿಯೆಗಳಿಗೆ ಒಂದು ನಿರ್ದಿಷ್ಟವಾದ ರೂಪು ಕೊಟ್ಟು ಅವುಗಳನ್ನು ಮಾನವನ ಒಳಿತಿಗಾಗಿ ಉಪಯೋಗಿಸಿಕೊಳ್ಳುವ ಪದ್ಧತಿ ಎಲ್ಲಾ ಸಮಾಜಗಳಲ್ಲೂ ನಡೆಯುತ್ತಾ ಬಂದಿದೆ. ಮಾನವನು ತನ್ನ ಬಗ್ಗೆ, ತನ್ನ ಪರಿಸರದ ಬಗ್ಗೆ, ತನ್ನ ಬಾಳಿನ ಬಗ್ಗೆ ಅನೇಕ ವಿಚಾರಗಳನ್ನು, ನಂಬಿಕೆಗಳನ್ನು ಮತ್ತು ಅಶೋತ್ತರಗಳನ್ನು ಬೆಳೆಸಿಕೊಂಡಿರುತ್ತಾನೆ ಮತ್ತು ಅವುಗಳಿಗನುಸಾರವಾಗಿ ಈ ಕ್ರಿಯೆಗಳನ್ನು ರೂಪಿಸಿಕೊಳ್ಳುತ್ತಾನೆ. ಧರ್ಮಪ್ರದಾನವಾಗಿರುವ ಹಿಂದೂ ಜೀವನ ಪದ್ಧತಿಯಲ್ಲಿ ಈ ಕ್ರಿಯೆಗಳು ಧಾರ್ಮಿಕ ಉದ್ದೇಶ, ಪ್ರಭಾವ ಮತ್ತು ವಿಧಿವಿಧಾನಗಳಿಗೆ ಒಳಪಟ್ಟು ಧಾರ್ಮಿಕ ಕ್ರಿಯೆಗಳಾಗಿ ಏರ್ಪಟ್ಟಿವೆ. ಇವೇ ನಮ್ಮ ಸಂಸ್ಕಾರಗಳು.

ಸಂಸ್ಕಾರವೆಂದರೆ ಯೋಗ್ಯವಾದ ನಿಶ್ಚಿತ ವಿಧಿಯಿಂದ ಜೀವಿಯ ಶಾರೀರಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಉನ್ನತಿಗೆ ಅನುಕೂಲವಾಗುವಂತೆ ದೇಹ, ಮನಸ್ಸುಗಳನ್ನು ಪವಿತ್ರಗೊಳಿಸುವ ಕ್ರಿಯೆ. ವಿಧಿಪೂರ್ವಕವಾಗಿ ಆಯಾಕಾಲಕ್ಕೆ ಮಾಡುವ ಸಂಸ್ಕಾರಗಳಿಂದ ಮನುಷ್ಯನು ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಪೂರ್ಣತ್ವವನ್ನು ಪಡೆಯುತ್ತಾನೆ.

'ಸಂಸ್ಕಾರ' ಎಂಬ ಶಬ್ದಕ್ಕೆ ಸಂಸ್ಕೃತದಲ್ಲಿ ಅನೇಕ ಅರ್ಥಗಳಿವೆ. 'ಸಂಸ್ಕರೋತಿ ಇತಿ ಸಂಸ್ಕಾರ' ಶುದ್ಧಮಾಡುವಿಕೆ, ಒಳ್ಳೆಯದಾಗಿಸುವಿಕೆ ಇತ್ಯಾದಿ. ಒಂದು ಕೆಲಸವನ್ನು ಮತ್ತೆ ಮತ್ತೆ ಮಾಡುವುದರಿಂದ ಉಂಟಾಗುವ ಚಿತ್ತದ ಪರಿಪಾಕಕ್ಕೂ 'ಸಂಸ್ಕಾರ' ಎಂಬ ಹೆಸರು ಸಲ್ಲುತ್ತದೆ. ಪ್ರತಿದಿನ ದೇವರ ಸ್ತುತಿ ಮಾಡುವುದು, ಒಳ್ಳೆಯ ಮಾತುಗಳನ್ನಾಡುವುದು, ಉತ್ತಮ ವಿಚಾರಗಳನ್ನು ಯೋಚಿಸುವುದು ಮುಂತಾದವುಗಳಿಂದ ಚಿತ್ತಕ್ಕೆ ಪರಿಪಾಕ ಬರುವುದರಿಂದ ಇವುಗಳು ಸಂಸ್ಕಾರಗಳೇ. ಜೀವನದ ಜನನ, ವಿವಾಹ, ಮರಣ, ಇತ್ಯಾದಿ ವಿವಿಧ ಘಟ್ಟಗಳಲ್ಲಿ ನಡೆಸಲಾಗುವ ವಿಶಿಷ್ಠ ಧಾರ್ಮಿಕ ಕ್ರಿಯೆಗಳು ಎಂಬ ಅರ್ಥದಲ್ಲಿ 'ಸಂಸ್ಕಾರ' ಶಬ್ದ ಬಳಸಲಾಗಿದೆ. ಮಾನವನಲ್ಲಿ ಹುಟ್ಟಿನಿಂದಲೇ ಇರಬಹುದಾದ ದೋಷಗಳನ್ನು ತೆಗೆದು ಹಾಕುವುದು, ಏನಾದರೂ ಕೊರತೆಯಿದ್ದರೆ ಅದನ್ನು ಪೂರ್ತಿ ಮಾಡುವುದು ಮತ್ತು ಇರುವ ಉತ್ತಮ ಗುಣಗಳನ್ನು ಬೆಳೆಸಿ ಅತಿಶಯವಾಗಿ ಮಾಡುವುದು ಈ ಉದ್ದೇಶಗಳಿಗಾಗಿ ನಡೆಸುವ ಧಾರ್ಮಿಕ ಕ್ರಿಯೆಗಳು ಸಹಾ ಸಂಸ್ಕಾರಗಳು.

ಅಗ್ನಿ, ನೀರು, ನವಧ್ಯಾನಗಳು, ಕೆಲವು ಸಸ್ಯಗಳು, ಕೆಲವು ಮಣಿಗಳು ಇವೆಲ್ಲ ಶುಭಶಕ್ತಿಗಳ ಸಂಕೇತ. ಪರೋಕ್ಷವಾಗಿ ಮಾನವನ ಜೀವನದ ಮೇಲೆ ಪ್ರಭಾವ ಬೀರುತ್ತದೆಂದೇ ನಂಬಲಾಗಿದೆ. ಸಂಸ್ಕಾರಗಳಲ್ಲಿ ಅಗ್ನಿ ಸ್ಥಾಪನೆ, ಕಲಶಸ್ಥಾಪನೆ, ಹವನ, ಪ್ರೋಕ್ಷಣ, ಮುಂತಾದ ಕ್ರಿಯೆಗಳಿಗೆ ವಿಶೇಷ ಮಹತ್ವವಿದೆ. ವಿಶ್ವ ನಿಯಂತ್ರಕ ಮಹಾಶಕ್ತಿಗಳಿಗೆ ಮಾನವನ ಶರಣಾತಿಯ ಅಂಶವೂ ಇವುಗಳಲ್ಲಿ ಅಡಕವಾಗಿದೆ.

ಸಮಾನವಾದ ವಿಧಿವಿಧಾನಗಳು ಹೆಚ್ಚಿನ ಸಂಸ್ಕಾರಗಳಲ್ಲಿ ಕಂಡು ಬರುತ್ತದೆ. ಮುಖ್ಯವಾಗಿ ತಣ್ಣೀರಿನಲ್ಲಿ ಸ್ನಾನ, ಮೃತಿಗೆ, ಗಂಧ, ವಿಭೂತಿಗಳ ಲೇಪನ, ಶುಭ್ರವಸ್ತ್ರ, ಹೊಸ ಬಟ್ಟೆ ಧಾರಣೆ ಮುಂತಾದವು. ಸಂಸ್ಕಾರದ ಹಿಂದಿನ ದಿನ ಹಾಗೂ ಆ ದಿನ ಪ್ರಾತಃಕಾಲ ನಿರಾಹಾರ ಅಥವಾ ಅಲ್ಪಾಹಾರ ಸೇವಿಸುವ ಕ್ರಮವಿದೆ. ಅಕ್ಕಿಯಿಂದ ಮಾಡಿದ ಯಾವುದೇ ವಸ್ತುವನ್ನು ಸೇವಿಸುವಂತಿಲ್ಲ. ಅಂತೆಯೇ ಎಲ್ಲಾ ಸಂಸ್ಕಾರಗಳಲ್ಲೂ ಮುಹೂರ್ತಕ್ಕೆ ಹೆಚ್ಚಿನ ಮಹತ್ವವಿದೆ.

ಸಂಸ್ಕಾರಗಳಿಂದ ಸಾಮಾಜಿಕ ಪ್ರಯೋಜನಗಳು ಇವೆ. ಕುಟುಂಬದ ಬಾಳಿನ ಪ್ರಮುಖ ಘಟ್ಟಗಳಲ್ಲಿ ಮದುವೆ, ಜನನ, ಮರಣ, ಮುಂತಾದ ಸಂದರ್ಭಗಳಲ್ಲಿ ವ್ಯಕ್ತವಾಗುವ ಸಂತೋಷ ದುಃಖ ಮುಂತಾದವುಗಳನ್ನು ಸೂಕ್ತ ರೀತಿಯಲ್ಲಿ ಅಭಿವ್ಯಕ್ತಗೊಳಿಸಲು ಮತ್ತು ಪರಸ್ಪರ ಹಂಚಿಕೊಂಡು ಹೃದಯವನ್ನು ಹಗುರಗೊಳಿಸಲು ಸಂಸ್ಕಾರಗಳು ಸಹಾಯಕವಾಗಿವೆ. ಸಂಸ್ಕಾರಗಳ ಆಚರಣೆಯಲ್ಲಿ ವಿದ್ಯುಕ್ತ ಕರ್ಮಭಾಗದಷ್ಟೇ ಸಾಮಾಜಿಕ ರೀತಿ ನಿಯಮಗಳು ಮುಖ್ಯ ಎಣಿಸುತ್ತವೆ.

ಪ್ರತಿಯೊಂದು ಸಂಸ್ಕಾರ ಕ್ರಿಯೆಯೂ ವೈದಿಕ ಮಂತ್ರ, ಯಜ್ಞ ಮತ್ತು ದಾನ ಎಂಬ ಮೂರು ರೀತಿಯ ಧಾರ್ಮಿಕ ವಿಧಿಗಳಿಂದ ಕೂಡಿಯೇ ಆಚರಿಸಲ್ಪಡುತ್ತದೆ. ಸಂಸ್ಕಾರ ಕ್ರಿಯೆಗಳಲ್ಲಿ ಶರೀರಗಳ ಆಧ್ಯಾತ್ಮಿಕ, ಮಾನಸಿಕ ಮತ್ತು ಶಾರೀರಿಕ ಪರಿಶುದ್ಧಿ, ಶಕ್ತಿ ಮತ್ತು ಅಭಿವೃದ್ಧಿಗಳಿಗಾಗಿ ಮಾಡಲ್ಪಡುತ್ತದೆ. ಈ ಸಂಸ್ಕಾರಗಳಲ್ಲಿ ವ್ಯಕ್ತಿಗತವಾದ ಆತ್ಮೋನ್ನತಿಯ ತತ್ವವಿರುವಂತೆ ಸಾಮಾಜಿಕ ಜೀವನದ ನೈತಿಕ ಸಾಂಸ್ಕೃತಿಕ ರಕ್ಷಣೆ ಮತ್ತು ಸರ್ವಾಂಗೀಣ ಉನ್ನತಿಗಾಗಿ ದೇವರನ್ನು ಪ್ರಾರ್ಥಿಸುವುದು. ದುಷ್ಟ ಶಕ್ತಿಗಳ ದಮನಕ್ಕೆ ಇರುವ ಪ್ರತ್ಯಕ್ಷ ಮತ್ತು ಪರೋಕ್ಷ ವಿಧಿಗಳು ಸೇರಿಕೊಂಡಿವೆ.

ಹಿಂದೂ ಧರ್ಮಶಾಸ್ತ್ರದಲ್ಲಿ ಸಂಸ್ಕಾರಗಳನ್ನು ಹೇಳಿದೆ. ಇವುಗಳಲ್ಲಿ ಜೀವಿಯ ಗರ್ಭೋತ್ಪತ್ತಿಯಿಂದ ಮರಣದ ತನಕದ ಸಂಸ್ಕಾರಗಳನ್ನು ಪೂರ್ವ ಸಂಸ್ಕಾರಗಳೆಂದೂ ಮರಣೋತ್ತರ ಸಂಸ್ಕಾರಗಳನ್ನು ಉತ್ತರ ಸಂಸ್ಕಾರಗಳೆಂದು ಹೇಳಲಾಗಿದೆ. ಪೂರ್ವ ಸಂಸ್ಕಾರಗಳಲ್ಲಿ ಮುಖ್ಯವಾಗಿ 16 ಸಂಸ್ಕಾರಗಳಿವೆ. ಇವುಗಳನ್ನು 'ಷೋಡಶ ಸಂಸ್ಕಾರಗಳು' ಎಂದು ಕರೆಯುತ್ತಾರೆ.

1. ಗರ್ಭಾದಾನ
2. ಪುಂಸವನ
3. ಸೀಮಂತೋನ್ನಯನ
4. ಜಾತಕರ್ಮ

5. ನಾಮಕರಣ
6. ನಿಷ್ಕ್ರಮಣ
7. ಅನ್ನಪ್ರಾಶನ
8. ಚೂಡಾಕರ್ಮ/ಚವಲ
9. ಉಪನಯನ
10. ಮಹಾನಾಮ್ನಿ
11. ಮಹಾವ್ರತ
12. ಉಪನಿಷದ್ವ್ರತ
13. ಕೇಶಾಂತ
14. ಗೋದಾನ
15. ಸಮಾವರ್ತನ
16. ವಿವಾಹ

4.2 ಗರ್ಭಾಧಾನ

ಉತ್ತಮವಾದ ಸಂತಾನವನ್ನು ಪಡೆಯಲಿಕ್ಕಾಗಿ ಮಗು ಹುಟ್ಟುವ ಮೊದಲೇ ಸಂಸ್ಕಾರಗಳನ್ನು ಆರಂಭಿಸಲಾಗುತ್ತದೆ. ಹುಟ್ಟುವ ಮುನ್ನ ಮಗುವು ತಾಯಿಯ ಗರ್ಭದಲ್ಲಿ ಬೆಳೆಯುವುದರಿಂದ ಅದಕ್ಕೆ ತಾಯಿಯ ಮೂಲಕವೇ ಜನನಪೂರ್ವ ಸಂಸ್ಕಾರಗಳನ್ನು ನೀಡಬೇಕಾಗುತ್ತದೆ. ಷೋಡಶ ಸಂಸ್ಕಾರಗಳಲ್ಲಿ ಮೊದಲನೆಯದಾದ ಗರ್ಭಾಧಾನ ಸಂಸ್ಕಾರವು ಶಿಶುವು ಅಂಕುರಗೊಳ್ಳುವ ಮುನ್ನವೇ ತಂದೆ-ತಾಯಿಯ ಮೂಲಕ ಮಾಡುವ ಸಂಸ್ಕಾರ. ಸಂತಾನೋತ್ಪತ್ತಿಗೆ ತಾಯಿಯೇ ಕ್ಷೇತ್ರ. ತಂದೆಯೇ ಬೀಜ. ಅವೆರಡೂ ಆರೋಗ್ಯವಂತವೂ, ದೃಢವೂ, ಫಲವತ್ತೂ ಆಗಿರಬೇಕು. ವಿವಾಹಾನಂತರ ಪತ್ನಿಯ ಗರ್ಭವನ್ನು ಫಲಿಸುವಂತೆ ಮಾಡುವ ಕಾರ್ಯವೇ ಗರ್ಭಾಧಾನ. ಗರ್ಭಾಧಾನ ಕಾರ್ಯಕ್ಕಾಗಿ ಗಂಡು-ಹೆಣ್ಣುಗಳ ದೇಹವನ್ನು ಶುದ್ಧಸನ್ನದ್ಧಗೊಳಿಸುವ ಉದ್ದೇಶದಿಂದ ಹಲವು ದಿನಗಳ ಮೊದಲಿಂದಲೇ ಪೂರ್ವಭಾವೀ ಸಿದ್ಧತೆಗಳನ್ನು ವಿಧಿಸಲಾಗಿದೆ. ಗರ್ಭಾಧಾನಕ್ಕೆ ಕೆಲದಿನ ಮೊದಲಿಂದ ವಿವಾಹಿತ ಪತಿ-ಪತ್ನಿಯರು ಬ್ರಹ್ಮಚಾರಿಗಳಾಗಿಯೇ ಇರಬೇಕು. ಇದು ಗಂಡನ್ನು ವೀರ್ಯವತ್ತಾಗಿಯೂ ಹೆಣ್ಣಿನ ಗರ್ಭವನ್ನು ದೃಢವಾಗಿಯೂ ಇರಿಸುವ ಪ್ರಯತ್ನ. ಪ್ರತಿದಿನ ಗಂಡಿನ ಮೈಗೆ ತುಪ್ಪವನ್ನೂ, ಹೆಣ್ಣಿನ ಮೈಗೆ ಎಳ್ಳೆಣ್ಣೆ ಹಚ್ಚುವುದು ಸಂಪ್ರದಾಯ. ಇದು ಚರ್ಮ, ಸ್ನಾಯುಗಳನ್ನು ಮತ್ತು ಮನಸ್ಸನ್ನು ಸಾತ್ವಿಕವಾಗಿಯೂ ಇರಿಸುತ್ತದೆ.

ದಂಪತಿಗಳು ಸೇವಿಸುವ ಆಹಾರವೂ ಸಹ ಮಗುವಿನ ಮನಸ್ಸು, ದೇಹ ಮತ್ತು ಬುದ್ಧಿಯ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ ಎಂಬ ಕಾರಣಕ್ಕಾಗಿ ಆಹಾರವೂ ಗರ್ಭಾಧಾನಕ್ಕೆ ಪೂರಕವಾಗಿ ಸಂಪ್ರದಾಯದ ರೂಪತಾಳಿದೆ. ಗಂಡಿನ ಭೋಜನದಲ್ಲಿ ಸಮೃದ್ಧವಾಗಿ ಹಾಲು-ತುಪ್ಪಗಳನ್ನೂ ಹೆಣ್ಣಿನ ಭೋಜನದಲ್ಲಿ ಹಾಲು-ತುಪ್ಪದೊಂದಿಗೆ ಎಣ್ಣೆ ಮತ್ತು ಉದ್ದುಗಳು ಸೇರಿರುವ ಆಹಾರವನ್ನು ಸೇರಿಸಬೇಕೆಂಬ ರೂಢಿಯಿದೆ. ಹೀಗೆ ಹಲವಾರು ದಿನಗಳ ಕಾಲ ಪತಿ-ಪತ್ನಿಯರ ದೇಹ ಮತ್ತು ಮನಸ್ಸುಗಳನ್ನು ಪಕ್ವಗೊಳಿಸುವ ಕಾರ್ಯ ನಡೆದ ಅನಂತರ ಗರ್ಭಾಧಾನ. ಹೆಣ್ಣಿನ ಮೂಗಿನ ಬಲರಂಧ್ರದಲ್ಲಿ ಗರಿಕೆ ಹುಲ್ಲಿನ ಅಥವಾ ಅಶ್ವಗಂಧದ ರಸವನ್ನು ಹನಿಸುವ ಮೂಲಕ ಗರ್ಭಶುದ್ಧಿ ಮಾಡುವ ಕ್ರಮವನ್ನು ಶಿವಳ್ಳಿ ಬ್ರಾಹ್ಮಣರಲ್ಲಿ ಕಾಣಬಹುದು. ಗರ್ಭಾಧಾನ ಸಮಯದಲ್ಲಿ ಮೂಗಿನ ಬಲರಂಧ್ರದಲ್ಲಿ ಉಸಿರಾಟವಿದ್ದರೆ ಗಂಡು ಮಗವೂ, ಎಡಮೂಗಿನಲ್ಲಿ ಉಸಿರಾಟವಿದ್ದರೆ ಹೆಣ್ಣು ಮಗವೂ ಆಗುತ್ತದೆಂದು ನಂಬಿಕೆ.

4.3 ಪುಂಸವನ

ಸ್ತ್ರೀಯು ಗರ್ಭವತಿಯಾಗುವುದು ನೆಲದಲ್ಲಿ ಬೀಜವನ್ನು ಬಿತ್ತಿದಂತೆ. ಈ ಬೀಜವು ಆರೋಗ್ಯವಂತ ಜೀವವಾಗಿ ಜನಿಸಲು ಗರ್ಭವನ್ನು ಸರಿಯಾಗಿ ಪೋಷಿಸುವುದು ಅಗತ್ಯ. ಗರ್ಭಸ್ಥ ಶಿಶುವು ದೈಹಿಕ ಮತ್ತು ಮಾನಸಿಕವಾಗಿ ಆರೋಗ್ಯವಾಗಿ ಬೆಳೆಯಲು ಜನನದ ತನಕ ತಾಯಿಯ ಮೂಲಕವೇ ಸಂಸ್ಕಾರಗಳನ್ನು ಮಾಡಬೇಕಾಗುತ್ತದೆ.

ಪುಂಸವನ ಷೋಡಶ ಸಂಸ್ಕಾರಗಳಲ್ಲಿ ಎರಡನೆಯದು. 'ಗಂಡು ಮಗುವೇ ಹುಟ್ಟುವಂತೆ ಮಾಡುವ ಸಂಸ್ಕಾರ' ಎಂಬ ಅಭಿಪ್ರಾಯ ಹಲವರಲ್ಲಿದೆ. ಹಿಂದೆ ಗಂಡು

ಮಗುವಿಗೆ ಪ್ರಾಧಾನ್ಯತೆ ಮತ್ತು ಬೇಡಿಕೆ ಹೆಚ್ಚಾಗಿದ್ದುದರಿಂದ ಪುಂ ಪುಂಸ ಎಂಬುದು 'ಗಂಡೂ' ಎಂದೂ, ಪುಂಸವನ ಎಂದರೆ ಗಂಡು ಮಗುವಿಗಾಗಿ ಮಾಡುವ ಸಂಸ್ಕಾರ ಎಂದೂ ಸೀಮಿತಾರ್ಥ ಪ್ರಾಪ್ತಿಯಾಗಿದ್ದಿರಬೇಕು. ಆದರೆ ಪುಂಸ ಎಂಬುದಕ್ಕೆ ಭ್ರೂಣ, ಗರ್ಭ ಎಂದು ಅರ್ಥ. ಪುಂಸವನವು ಗರ್ಭದ, ಭ್ರೂಣದ ಬಲವರ್ಧನೆಗಾಗಿ ಮಾಡುವ ಕಾರ್ಯ. ಗರ್ಭ ಮತ್ತು ಬೀಜದ ದೋಷಗಳನ್ನು ನಿವಾರಿಸಿ ದೈಹಿಕ ಮಾನಸಿಕವಾಗಿ ದೃಢವಾಗಿರುವ ಮಗುವನ್ನು ಪಡೆಯುವ ಉದ್ದೇಶದಿಂದ ಗರ್ಭವನ್ನು ಬಲಗೊಳಿಸಿ ಶಿಶುವಿನ ಬೆಳವಣಿಗೆಯು ಚೆನ್ನಾಗಿ ಆಗುವಂತೆ ಪ್ರೋತ್ಸಾಹಿಸಲು ಮಾಡುವ ಸಂಸ್ಕಾರವೇ ಪುಂಸವನ. ಗರ್ಭಧರಿಸಿದ ಎರಡನೇ ಅಥವಾ ಮೂರನೇ ತಿಂಗಳಲ್ಲಿ ಮಾಡಬೇಕು.

ಪುಂಸವನದ ಹಿಂದಿನ ರಾತ್ರಿ ಗರ್ಭಿಣಿಯು ಉಪವಾಸವಿರಬೇಕು. ಮರುದಿನ ಬೆಳಗಿನ ಹೊತ್ತಿಗೆ ಜೀರ್ಣಾಂಗಗಳು ಮತ್ತು ರಕ್ತ ಪರಿಚಲನೆಯು ಔಷಧವನ್ನು ಸ್ವೀಕರಿಸಲು ಸನ್ನದ್ಧವಾಗಿರುತ್ತದೆ. ಗರ್ಭಿಣಿಯ ಉಡಿಯಲ್ಲಿ ನೀರು ತುಂಬಿದ ಪಾತ್ರೆಯನ್ನಿಡುವುದು, ಅಂಗೈಯಲ್ಲಿ ಅಕ್ಕಿಯ ಕಾಳನ್ನೂ ಅದರ ಬದಿಯಲ್ಲಿ ಉದ್ದಿನ ಕಾಳನ್ನೂ ಮೊಸರಿನೊಂದಿಗೆ ಇಟ್ಟು ಆಕೆಯು' ನಾನು ಪುಂಸವನವನ್ನು ಕುಡಿಯುತ್ತಿದ್ದೇನೆ' ಎಂಬ ಭಾವನೆಯಲ್ಲಿ ಅದನ್ನು ಸೇವಿಸಬೇಕು. ಇದರಲ್ಲಿ ದೈಹಿಕ ಮತ್ತು ಮಾನಸಿಕ ಪರಿಣಾಮ ಇದೆ. ಇದರೊಂದಿಗೆ ಮಾಡುವ ವನಸ್ಪತಿ ಉಪಚಾರವು ದೈಹಿಕ ಸಂಸ್ಕಾರ. ಇದಕ್ಕೆ ಆಲದ ಮರದ ಚಿಗುರು, ಬಿಳಲಿನ ಕುಡಿಗಳನ್ನು ಬಳಸುತ್ತಾರೆ. ಇವನ್ನು ರಾತ್ರಿಯ ಹೊತ್ತೇ ಕೀಳಬೇಕೆಂಬ ನಿಯಮವಿದೆ. ಸಸ್ಯಗಳ ಎಲೆಗಳಲ್ಲಿ ಹಗಲಿನಲ್ಲೇ ಬೇರೆ ರಾತ್ರಿಯಲ್ಲೇ ಬೇರೆ ಔಷಧೀಯ ಸತ್ವಗಳಿರುವ ಕಾರಣವಿರಬೇಕು. ರಾತ್ರಿ ಹೊತ್ತಿನಲ್ಲಿ ಆಲದಕುಡಿ. ಬಿಳಿಲುಗಳನ್ನು ಕಿತ್ತು ಅದನ್ನು ಅರೆದು ಚಂದ್ರನ ಬೆಳಕಿನಲ್ಲಿ ಅದನ್ನು ದರ್ಬೆಯ ತುದಿಯಿಂದ ಬೆರೆಸಬೇಕು. ಅನಂತರ ಶುದ್ಧವಾದ ತೆಳು ಬಟ್ಟೆಯ ಮೂಲಕ ಶೋಧಿಸಿ ಇಟ್ಟುಕೊಳ್ಳಬೇಕು. ಬೆಳಗ್ಗೆ ಪತಿ-ಪತ್ನಿಯರು ಸ್ನಾನ ಹಾಗೂ ಪ್ರಾತರ್ವಿಧಿಗಳನ್ನು ಮುಗಿಸಿದ ನಂತರ ಗರ್ಭಿಣಿಗೆ ಪ್ರಾಣಾಯಾಮ ಮಾಡಿಸುವ ಮೂಲಕ ಉಸಿರಾಟ, ಶ್ವಾಸಾಂಗಗಳು ಮತ್ತು ಜೀರ್ಣಾಂಗಗಳನ್ನು ಸನ್ನದ್ಧಗೊಳಿಸಿ ಪತಿಯು ಪತ್ನಿಯ ಮೂಗಿನ ಬಲಗಡೆಯ ರಂಧ್ರಕ್ಕೆ ಆ ವನಸ್ಪತಿ ರಸವನ್ನು ಹನಿಸಬೇಕು.

4.4 ಸೀಮಂತೋನ್ನಯನ

ಸೀಮಂತ ಅಂದರೆ ಕೂದಲು, ಉನ್ನಯನ ಅಂದರೆ ಚೆನ್ನಾಗಿ ಬಾಚಿ ಮೇಲಕ್ಕೆ ಎತ್ತುವುದು ಎಂದು ಅರ್ಥ. ನಾಲ್ಕರಿಂದ ಎಂಟು ತಿಂಗಳ ಒಳಗೆ ಯಾವುದಾದರೂ ಒಂದು ಅನುಕೂಲ ದಿನದಲ್ಲಿ ಈ ಸಂಸ್ಕಾರವನ್ನು ನಡೆಸಬಹುದು. ಗರ್ಭದ ಶಕ್ತಿಯು ಹೆಚ್ಚಾಗಿ ಅದು ಸ್ಥಿರವಾಗಬೇಕೆಂದು ಪತಿಯು ಎರಡು ಕಾಯಿಗಳಿರುವ ಔದುಂಬರದಕೊಂಬೆ (ಅತ್ತಿಮರ), ಮೂರು ಬಿಳಿ ಚುಕ್ಕೆಗಳಿರುವ ಹಂದಿಮುಳ್ಳು ಮತ್ತು ಮೂರು ದರ್ಭೆಗಳಿಂದ ಪತ್ನಿಯ ತಲೆಯನ್ನು ಬಾಚುವ ಕ್ರಿಯೆಯೇ ಈ ಸಂಸ್ಕಾರ, ಈ ಅತ್ತಿಯು ಬಲವಾದ ರಸದಿಂದ ಕೂಡಿರುವಂತೆ ನೀನೂ ರಸಭರಿತಳಾಗಿ ಫಲವನ್ನು ಹೊಂದು ಎಂಬರ್ಥದ ಮಂತ್ರಪಠಣ, ಅಲಂಕಾರ, ಪತಿಯಿಂದ ಪತ್ನಿಗೆ ಒಳ್ಳೆಯ ಮಾತುಗಳು, ತಿಂಡಿತಿನಸುಗಳು, ಉಡುಗೊರೆ, ಹಿರಿಯರಿಂದ ಆಶೀರ್ವಾದ ಮುಂತಾದ ಕಾರ್ಯ ಕ್ರಮಗಳು ಈ ಸಂದರ್ಭದಲ್ಲಿ ನಡೆಯುತ್ತವೆ. ಬೆಳ್ತಂಗಡಿ ಪುತ್ತೂರು ಕಡೆ

ಮುಳ್ಳು ಹಂದಿಯ ಮುಳ್ಳನ್ನು ತಲೆಯ ಕೂದಲಿಗೆ ಚುಚ್ಚುತ್ತಾರೆ. ಯಾವುದೇ ರೀತಿಯ ದೃಷ್ಟಿ ಬೀಳದಿರಲೆಂದು, ಸ್ತ್ರೀಯು ಮೊದಲಬಾರಿ ಗರ್ಭಿಣಿಯಾದಾಗ ಅವಳನ್ನು ಪೀಡಿಸಲು ಬರಬಹುದಾದ ದುಷ್ಟ ಶಕ್ತಿಗಳ ನಾಶ ಗುರಿಯಾದರೆ, ಅಲಂಕಾರ ಬಯಕೆಗಳ ಪೂರೈಕೆಯಿಂದಾಗಿ ಶಾಂತಿ ಸಂತೋಷಗಳಲ್ಲಿ ಅವಳನ್ನಿಡುವುದು ಉದ್ದೇಶ. ಆಹಾರ ಮತ್ತು ಸಂಸ್ಕಾರಗಳು ಗರ್ಭಿಣಿ ಮತ್ತು ಗರ್ಭದ ಒಳಗಿರುವ ಶಿಶು ಇಬ್ಬರ ಶರೀರ ಮತ್ತು ಮನಸ್ಸುಗಳ ರಕ್ಷಣೆ ಮತ್ತು ಪೋಷಣೆಗೆ ಸಹಾಕಾರಿಯಾಗಿದೆ.

4.5 ಜಾತಕರ್ಮ

ಷೋಡಶ ಸಂಸ್ಕಾರಗಳಲ್ಲಿ ನಾಲ್ಕನೆಯದಾದ ಜಾತಕರ್ಮಕ್ಕೆ ಪ್ರಧಾನ ಸಂಸ್ಕಾರದ ಸ್ಥಾನವಿದೆ. ಹುಟ್ಟುವವರೆಗೆ ಮಗುವಿಗೆ ನೀಡಬೇಕಾದ ಸಂಸ್ಕಾರಗಳನ್ನು ತಾಯಿಯ ಮೂಲಕವೇ ನೀಡಿ ಹುಟ್ಟಿದ ನಂತರ ನೇರವಾಗಿಯೇ ಸಂಸ್ಕಾರಗಳನ್ನು ನೀಡುತ್ತಾರೆ. ಜಾತಕರ್ಮ ಸಂಸ್ಕಾರವು ಮಗುವಿಗೆ ನೇರವಾಗಿ ನೀಡಲಾಗುವ ಮೊದಲ ಸಂಸ್ಕಾರ. ಇದು ತಾಯಿಯ ಗರ್ಭದ ಸಂಪರ್ಕವನ್ನು ಪೂರ್ಣವಾಗಿ ಕಡಿದುಕೊಳ್ಳುವ ಮೊದಲೇ ಶಿಶುವಿಗೆ ಮಾಡಬೇಕಾದ ಸಂಸ್ಕಾರ. 'ಜಾತ' ಎಂದರೆ ಹುಟ್ಟಿದ ಎಂದೂ 'ಕರ್ಮ' ಎಂದರೆ ಮಾಡಬೇಕಾದ ಕೆಲಸ ಎಂದು ಅರ್ಥ. ಮಗು ಜನಿಸಿದ ತಕ್ಷಣ ಮಾಡಬೇಕಾದ ಸಂಸ್ಕಾರ ಕಾರ್ಯವೇ 'ಜಾತಕರ್ಮ'.

ಒಂಬತ್ತು ತಿಂಗಳ ಕಾಲ ಗರ್ಭದಲ್ಲಿ ಗರ್ಭಜಲದಲ್ಲಿ ಬೆಳೆದ ಶಿಶುವು ಜನಿಸುವಾಗ ತನ್ನ ಶ್ವಾಸಾಂಗ ಮತ್ತು ಜೀರ್ಣಾಂಗಗಳನ್ನು ಕ್ರಿಯಾಶೀಲಗೊಳಿಸಿಕೊಳ್ಳಬೇಕಾಗುತ್ತದೆ. ಈ ಪ್ರಯತ್ನದಲ್ಲಿರುವ ಶಿಶುವು ಪ್ರಸವದ ಒತ್ತಡದಲ್ಲಿ ಒಮ್ಮೊಮ್ಮೆ ಮೂಗು ಅಥವಾ ಬಾಯಿಯ ಮೂಲಕ ಗರ್ಭದ ಜಲವನ್ನು ದೇಹದೊಳಕ್ಕೆ ತೆಗೆದುಕೊಳ್ಳುವ ಸಾಧ್ಯತೆ ಇರುತ್ತದೆ. ಈ ಗರ್ಭಜಲವು ಶಿಶುವಿನ ದೇಹಕ್ಕೆ ತೊಂದರೆ ಮಾಡುವ ಸಾಧ್ಯತೆ ಇರುತ್ತದೆ. ಮಗುವು ಹುಟ್ಟಿದ ತಕ್ಷಣವೇ ಆ ದೋಷಗಳನ್ನು ನಿವಾರಿಸದಿದ್ದರೆ ಅದು ಮಗುವಿನ ದೇಹ ಮತ್ತು ಬುದ್ಧಿಗಳ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಬೀರುವ ಸಾಧ್ಯತೆಗಳಿರುತ್ತವೆ. ಅದನ್ನು ನಿವಾರಿಸುವ ಉದ್ದೇಶದಿಂದ ಜಾತಕರ್ಮವನ್ನು ಮಾಡುತ್ತಾರೆ.

ಮಗು ಹುಟ್ಟುತ್ತಿದ್ದಂತೆಯೇ ಅದರ ತಂದೆಯು ಪ್ರಸೂತಿ ಗೃಹಕ್ಕೆ ಬಂದು ಅದರ ಮುಖದರ್ಶನ ಮಾಡಬೇಕು. ಅನಂತರ ತೊಟ್ಟಿರುವ ಬಟ್ಟೆಯ ಸಹಿತ ಸ್ನಾನ ಮಾಡಿ, ಚಂದನಾದಿಗಳಿಂದ ಶುದ್ಧಾಲಂಕೃತನಾಗಿ ಶೀಘ್ರವಾಗಿ ಸೂತಿಕಾಗೃಹಕ್ಕೆ ಬರಬೇಕು. ಮಗುವಿನ ಹೊಕ್ಕುಳ ಬಳ್ಳಿಯನ್ನು ಕತ್ತರಿಸುವ ಮೊದಲೇ ಕೆಲವು ಹನಿ ಹಸುವಿನ ಶುದ್ಧವಾದ ತುಪ್ಪ ಮತ್ತು ಜೇನು ತುಪ್ಪಗಳನ್ನು ಚೆನ್ನಾಗಿ ಬೆರೆಸಿ ಯಾವುದಾದರೂ ಚಿನ್ನದ ವಸ್ತುಗಳನ್ನು ಅದರಲ್ಲಿ ತೇಯಬೇಕು. ಇದಕ್ಕೆ ಮಧು–ಸರ್ಪಿ–ಹಿರಣ್ಯ ಚೂರ್ಣ ಎನ್ನುತ್ತಾರೆ. ಅದನ್ನು ಚಿನ್ನದ ಶಲಾಕೆಯಿಂದ ಅಥವಾ ನಿರ್ಮಲವಾದ ಬೆರಳಿನ ತುದಿಯಿಂದ ಐದು ಬಾರಿ ಮಗುವಿನ ನಾಲಗೆಗೆ ನೆಕ್ಕಿಸಬೇಕು. ಹೀಗೆ ಮಾಡುವಾಗ ಬುದ್ಧಿವರ್ಧಕವಾದ ಗಾಯತ್ರೀವ್ಯಾಹೃತಿಯನ್ನು ಉಚ್ಚರಿಸಬೇಕು. ಇದು ಜಾತಕರ್ಮದ ಮೊದಲ ಘಟ್ಟ. ಇದಾದ ತಕ್ಷಣ ಮಗುವಿನ ನಾಭಿ ಮತ್ತು ಬಲ ಕಿವಿಯ ಬಳಿ

ಮಂತ್ರಗಳನ್ನು ಸಸ್ವರವಾಗಿ ಉಚ್ಚರಿಸಬೇಕು. ಇದು ಶಿಶುವಿನ ಆಯುಷ್ಯವನ್ನು ಹೆಚ್ಚಿಸುತ್ತದೆ ಎಂಬ ನಂಬಿಕೆ. ಇದಕ್ಕೆ 'ಆಯುಷ್ಯಕರಣ' ಎನ್ನುತ್ತಾರೆ. ನಂತರ ಬೆವರು, ಕೊಳೆ ಮುಂತಾದವುಗಳಿಲ್ಲದಂತೆ ತಾಯಿಯ ಸ್ತನಗಳನ್ನು ನೀರಿನಿಂದ ತೊಳೆದು ಶುದ್ಧಿಗೊಳಿಸಬೇಕು. ಮಗುವಿಗೆ ಮೊದಲು ಬಲಭಾಗದ ಹಾಗೂ ನಂತರ ಎಡಭಾಗದ ಸ್ತನ್ಯಪಾನ ಮಾಡಿಸಬೇಕು. ಇದನ್ನು ಪಕ್ಷಾಲಿತ ಅಮಲಸ್ತನ್ಯ ಪಾನ ಎನ್ನುತ್ತಾರೆ. ಇದು ಮಗುವಿಗೆ ರೋಗ ನಿರೋಧಕ ಶಕ್ತಿಯನ್ನೂ ಜೀರ್ಣಶಕ್ತಿಯನ್ನೂ ನೀಡುವ ಮತ್ತು ಸದೃಢಗೊಳಿಸುವ ಸತ್ವವನ್ನು ಈ ಹಾಲು ಹೊಂದಿರುತ್ತದೆ. ಮಗುವಿನ ಕಿವಿ, ನಾಭಿ ಮುಂತಾದ ಭಾಗಗಳಲ್ಲಿ ಮಂತ್ರ ಘೋಷ ಹಾಗೂ ಮಗುವಿನ ವಿವಿಧ ಅಂಗಗಳನ್ನು ಮಂತ್ರ ಪೂರ್ವಕವಾಗಿ ಸ್ಪರ್ಶಿಸುವ ಮೂಲಕ ಅಂಗಗಳನ್ನು ಕ್ರಿಯಾ ಶೀಲಗೊಳಿಸಲಾಗುತ್ತದೆ. ಅನಂತರವೇ ಶುದ್ಧವಾದ ಆಯುಧದಿಂದ ಹೊಕ್ಕುಳ ಬಳ್ಳಿಯನ್ನು ಕತ್ತರಿಸಿ ತಾಯಿಯ ಗರ್ಭದ ಸಂಬಂಧದಿಂದ ಮಗುವನ್ನು ಬೇರ್ಪಡಿಸಬೇಕು.

ಆದರೆ ಈಗ ಮಗು ಜನಿಸಿದ ಹನ್ನೊಂದನೇ ದಿನವೋ ಅಥವಾ, ಮೂರನೇ, ಐದನೇ, ಏಳನೇ ತಿಂಗಳೋ ಹೀಗೆ ಅನುಕೂಲವಾದಯಾವುದೋ ದಿನ ನಾಮಕರಣದ ಅಂಗವೆಂಬಂತೆ ಬಟ್ಟಲಿನಲ್ಲಿಟ್ಟ ಜೇನನ್ನು ಕೈ ಬೆರಳಿನ ಉಂಗುರುದಿಂದ ಮಗುವಿನಗೆ ನೆಕ್ಕಿಸುವುದರ ಮೂಲಕ ಜಾತ ಕರ್ಮದ ಶಾಸ್ತ್ರವನ್ನು ಶಿವಳ್ಳಿ ಬ್ರಾಹ್ಮಣರು ಮಾಡುತ್ತಾರೆ.

4.6 ನಾಮಕರಣ

ನಾಮಕರಣವು ಷೋಡಶ ಸಂಸ್ಕಾರಗಳಲ್ಲಿ ಐದನೆಯದು. ಜನಿಸಿದ ಮಗುವಿಗೆ ಹೆಸರನ್ನು ಇಡುವ ಮೂಲಕ ಸಮಾಜದಲ್ಲಿ ಅದರದೇ ಆದ ಒಂದು ಸ್ಥಾಯೀ ಸಾಂಕೇತಿಕ ಗುರುತನ್ನು ನೀಡುವ ಕ್ರಿಯೆಯಿದು. ನಾಮಕರಣ ಒಂದು ಸ್ವತಂತ್ರ ಮತ್ತು ಪ್ರಧಾನ ಸಂಸ್ಕಾರ. ಮಗು ಜನಿಸಿದ ಹತ್ತು-ಹನ್ನೆರಡನೇ ದಿನ ನಾಮಕರಣ ಮಾಡಬೇಕು. 'ನಾಮಧೇಯಂ ದಶಮ್ಯಾಂತು ದ್ವಾದಶಾಂವಾಸ್ಯ ಕಾರಯೇತ್' ಎಂದು ಮನುಸ್ಮೃತಿ ಗ್ರಂಥದಲ್ಲಿ ಹೇಳಿದೆ. ನಾಮಕರಣ ಕಾಲದಲ್ಲಿ ಮಗುವಿಗೆ ಒಂದಕ್ಕಿಂತ ಹೆಚ್ಚಿನ ಅಂದರೆ ಮೂರು, ನಾಲ್ಕು, ಐದು ಹೆಸರುಗಳನ್ನು ಇಡುತ್ತಾರೆ. ಈ ಹೆಸರುಗಳನ್ನಿರಿಸುವುದರಲ್ಲೂ ಒಂದು ಕ್ರಮವಿದೆ. ಶಿಶುವೊಂದಕ್ಕೆ ಸಾಮಾನ್ಯವಾಗಿ ಮಾಸನಾಮ, ನಕ್ಷತ್ರನಾಮ ಮತ್ತು ವ್ಯವಹಾರನಾಮ ಎಂದು ಮೂರು ಹೆಸರುಗಳನ್ನು ಇರಿಸುವುದು ಒಂದು ಪದ್ಧತಿ. ತನ್ನ ಕುಲ ದೇವತಾನಾಮವನ್ನು ನಾಲ್ಕನೆಯ ಹೆಸರಾಗಿ ಇಡುವುದು ಇನ್ನೊಂದು ಕ್ರಮ. ಈ ನಾಲ್ಕು ಹೆಸರುಗಳನ್ನು 'ನಾಮ ಚತುಷ್ಟಯ' ಎಂದೇ ಗುರಿತಿಸಲಾಗುತ್ತದೆ. ಇದಲ್ಲದೆ ಒಂದು ಗುಪ್ತ ನಾಮಕರಣವನ್ನೂ ಮಾಡಿ, ಉಪನಯನದ ತನಕ ಅದನ್ನು ಗುಪ್ತವಾಗಿಸುವುದು ಮತ್ತೊಂದು ಪದ್ಧತಿ. ಒಂದು ಹೆಸರು ಮಾತ್ರ 'ವ್ಯವಹಾರ ನಾಮ' ಎಂದು ಸ್ವೀಕೃತವಾಗಿ ಜಗತ್ತಿನಲ್ಲಿ ಈ ಮಗುವಿನ ಅಸ್ತಿತ್ವದ ಸಂಕೇತವಾಗಿ ನಿಲ್ಲುತ್ತದೆ.

ಮಗುವು ಯಾವ ಮಾಸದಲ್ಲಿ ಹುಟ್ಟಿದೆಯೋ ಅದನ್ನು ನೆನಪಿಸುವುದು 'ಜನ್ಮಕಾಲೀನ ಮಾಸನಾಮ'. ಅದು ಮಾಸದ ಹೆಸರೇ ಆಗಿರಬಹುದು ಅಥವಾ ಮಾಸಾಧಿಪತಿಯ ಹೆಸರು ಆಗಬಹುದು. ಉದಾಹರಣೆಗೆ ಕೃಷ್ಣ, ಅನಂತ, ಅಚ್ಚುತ, ಚಕ್ರಿ, ವೈಕುಂಠ , ಜನಾರ್ದನ, ಉಪೇಂದ್ರ, ಯಜ್ಞಪುರುಷ, ಹರಿ, ಯೋಗೀಂದ್ರ,

ಪುಂಡರೀಕಾಕ್ಷ ಇವು ಸಾಂಕೇತಿಕ ಪುರುಷ ಮಾಸನಾಮಗಳು. ಹಾಗೆಯೇ ಹೆಣ್ಣು ಮಕ್ಕಳಿಗೆ ಭೂಮಿ, ಕಲ್ಯಾಣಿ, ಸತ್ಯಭಾಮಾ, ಪುಣ್ಯವತೀ, ಸುಶೀಲಾ, ಇಂದುಮತೀ, ವಾರಹೀ, ಕಮಲಾ, ವಾಗ್ದೇವೀ, ಪದ್ಮಾವತೀ, ಶ್ರೀದೇವೀ, ಸಾವಿತ್ರಿ ಈ ಸಾಂಕೇತಿಕ ಮಾಸನಾಮಗಳಿವೆ.

'ನಕ್ಷತ್ರನಾಮ' ಅಂದರೆ ಮಗುವು ಯಾವ ನಕ್ಷತ್ರದಲ್ಲಿ ಹುಟ್ಟಿದೆಯೋ ಆದಕ್ಕೆ ಸಂಬಂಧಿಸಿದ ಹೆಸರನ್ನು ಇಡುವುದು ಇದು ಪುರಾತನ ಭಾರತೀಯ ಕಾಲಗಣನ ಪದ್ಧತಿ ಮತ್ತು ಜಾತಕಾ ರಚನಾ ಪದ್ಧತಿಯನ್ನು ಆವಲಂಬಿಸಿದೆ. ಭಾರತೀಯ ಕಾಲ ಗಣನ ಕ್ರಮದ ಪ್ರಕಾರ ಚಂದ್ರನ ದೃಗೋಚರ ಚಲನೆಯನ್ನನುಸರಿಸಿ ಕ್ರಾಂತಿ ವೃತ್ತವನ್ನು ಇಪ್ಪತ್ತೇಳು ಭಾಗಗಳಾಗಿ ವಿಭಾಗಿಸಲಾಗಿದೆ. ಇವಕ್ಕೆ 'ನಕ್ಷತ್ರ ವಿಭಾಗಗಳು' ಎಂದು ಹೆಸರು. ಹಾಗೆಯೇ ಸೂರ್ಯನ ಚಲನೆಯನ್ನು ಆಧರಿಸಿ ಕ್ರಾಂತಿ ವೃತ್ತವನ್ನು 'ರಾಶಿ' ಗಳೆಂಬ ಹನ್ನೆರಡು ಭಾಗ ಮಾಡಲಾಗಿದೆ. ಈ ನಕ್ಷತ್ರ ಮತ್ತು ರಾಶಿಗಳನ್ನು ಸಮೀಕರಿಸಲು ನಕ್ಷತ್ರಗಳನ್ನು ತಲಾ ನಾಲ್ಕು ಪಾದಗಳಾಗಿ ವಿಭಾಗಿಸಿದ್ದು ಕ್ರಾಂತಿ ವೃತ್ತದಲ್ಲಿ 27 ನಕ್ಷತ್ರಗಳೂ ಅವಕ್ಕೆ ತಲಾ ನಾಲ್ಕರಂತೆ ಒಟ್ಟು 108 ನಕ್ಷತ್ರ ಪಾದಗಳು ಪ್ರತಿ ನಕ್ಷತ್ರಕ್ಕೆ ಅದರ ನಾಲ್ಕು ಪಾದಗಳ ಸಂಕೇತವಾಗಿ ನಾಲ್ಕು ಅಕ್ಷರಗಳು.

ಉದಾಹರಣೆ ಅಶ್ವಿನಿಯ ನಕ್ಷತ್ರಕ್ಕೆ ಚು, ಚೆ, ಚೊ, ಲ– ಇದು ಸಂಕೇತಾಕ್ಷರಗಳು. ಅಂದರೆ ಅಶ್ವಿನಿಯ ಮೊದಲ ಪಾದದಲ್ಲಿ ಹುಟ್ಟಿದ ಮಗುವಿಗೆ 'ಚು' ದಿಂದ ಆರಂಭವಾಗುವ, ಎರಡನೇ ಪಾದದಲ್ಲಿ ಜನಿಸಿದ ಮಗುವಿಗೆ 'ಚೊ' ದಿಂದ ಆರಂಭವಾಗುವ ಹೆಸರನ್ನು ಇಡಬೇಕೆಂದು ನಿಯಮ. ಹೀಗೆ ಎಲ್ಲಾ 27 ನಕ್ಷತ್ರಗಳಿಗೂ ತಲಾ ನಾಲ್ಕರಂತೆ ಒಟ್ಟು 108 ಸಂಕೇತಾಕ್ಷಾರಗಳಿವೆ. ಆಯಾ ಮಗುವಿನ ಜನ್ಮಾ ನಕ್ಷತ್ರದ ಪಾದಕ್ಕೆ ಅನುಗುಣವಾದ ಅಕ್ಷರದಿಂದ ಆರಂಭವಾಗುವ ಹೆಸರನ್ನು ಇಡುವುದೇ ನಕ್ಷತ್ರನಾಮ. ಒಬ್ಬ ವ್ಯಕ್ತಿಯ ನಕ್ಷತ್ರ ನಾಮದ ಮೊದಲನೆಯ ಅಕ್ಷರದಿಂದ ಆತನ ಜನ್ಮ ನಕ್ಷತ್ರ, ಪಾದ ಮತ್ತು ಜನ್ಮರಾಶಿಯನ್ನು ತಿಳಿಯಲು ನಕ್ಷತ್ರಧಾರಿತ ನಾಮಕರಣ ಪದ್ಧತಿಯಲ್ಲಿ ಸಾಧ್ಯ.

'ವ್ಯವಹಾರ' ನಾಮ ಸಾಮಾನ್ಯವಾಗಿ ವ್ಯಕ್ತಿಯ ಅಧಿಕೃತ ನಾಮವಾಗಿ ಬಳಸಲ್ಪಡುತ್ತದೆ. ಕೆಲವೊಮ್ಮೆ ನಕ್ಷತ್ರ ನಾಮವೇ ವ್ಯವಹಾರ ನಾಮವಾಗಲೂಬಹುದು. ಆದರೆ ಅಲ್ಲಿನ ಸೀಮಿತ ಅಕ್ಷರಗಳ ಕಾರಣ ಆಯ್ಕೆಗೆ ಅವಕಾಶ ಕಮ್ಮಿ ಇರುವುದರಿಂದ ವ್ಯಕ್ತಿಯ ವ್ಯಕ್ತಿತ್ವ ವಿಕಾಸನಕ್ಕೆ ಪೂರಕವಾಗಬಲ್ಲ ಆಕರ್ಷಕವಾದ ಹೆಸರನ್ನು ಆಯ್ದು ಇಡಬೇಕಾಗುತ್ತದೆ. ಹಾಗಾಗಿ ವ್ಯವಹಾರನಾಮದ ಪದ್ಧತಿಬಂದಿದೆ. ಭಾರತದಲ್ಲಿ ಚತುವರ್ಣ ಪದ್ಧತಿಯು ಜನಪ್ರೀಯವಾಗಿದ್ದಾಗ ಹೆಸರಿನ ಜೊತೆಗೆ ಶರ್ಮ (ಬ್ರಾಹ್ಮಣ), ವರ್ಮ (ಕ್ಷತ್ರೀಯ) ಗುಪ್ತ (ವೈಶ್ಯ) ಮತ್ತು ದಾಸ (ಶೂದ್ರ) ಇತ್ಯಾದಿ ವರ್ಣಸೂಚಕಗಳನ್ನು ಸೇರಿಸಿ ಅವನ ವರ್ಣವನ್ನು ಸಂಕೇತಿಸುವ ಪದ್ಧತಿ ಇತ್ತು.

ಮಾಸ, ನಕ್ಷತ್ರ ಮತ್ತು ವ್ಯವಹಾರ ಎಂಬ ಮೂರು ನಾಮಗಳಲ್ಲದೆ ಮನೆಯ ಮಗುವಿನ ನೆಪದಲ್ಲಿ ದೇವರನಾಮವನ್ನು ಸದಾ ಉಚ್ಚರಿಸುವಂತಾಗಲಿ ಎಂಬ ಆಶಯದಿಂದ ಕುಲ ದೇವತೆಯನ್ನು ಸಂಕೇತಿಸುವ 'ದೇವತಾನಾಮದ' ಪದ್ಧತಿ ಬೆಳೆಯಿತು. ಇಂದು ಅಷ್ಟಾಗಿ ಬಳಕೆಯಲ್ಲಿಲ್ಲದ ನಾಮಕರಣ 'ಗುಪ್ತನಾಮಕರಣ'. ತಂದೆ ತಾಯಿಗಳು ಮಗುವಿಗೆ ಯೋಗ್ಯವಾದ ಮತ್ತೊಂದು ಹೆಸರನ್ನು ಆಯ್ಕೆಮಾಡಿ ಅದನ್ನು

ಉಚ್ಚರಿಸದೆಯೇ ಮಗುವಿಗೆ ಉಪನಯನವಾಗುವ ತನಕ ಅದನ್ನು ಗುಪ್ತವಾಗಿ ಇಟ್ಟಿರುತ್ತಾರೆ. ಅದು ತಂದೆ-ತಾಯಿಯ ಹೊರತು ಮತ್ತೆಯಾರಿಗೂ ಗೊತ್ತಿರುವುದಿಲ್ಲ. ಉಪನಯನದಿನ ಅಭಿವಾದನ ಅಂದರೆ ವಟುವು ತನ್ನ ಪರಿಚಯ ಹೇಳಿ ನಮಸ್ಕರಿಸುವ ಕಾಲಕ್ಕೆ ಅವನಿಗೆ ಆ ಹೆಸರನ್ನು ತಿಳಿಸಿ, ಆ ಹೆಸರಿನಿಂದಲೇ ಅಭಿವಾದನ ಮಾಡುವಂತೆ ಸೂಚಿಸುತ್ತಾರೆ. ಉಪನಯನವು ಎರಡನೇ ಹುಟ್ಟು, ಹೊಸ ನಾಮಕರಣ ಮಾಡುವ ಪದ್ಧತಿ ಇಲ್ಲ. ಆದ್ದರಿಂದ ನಾಮಕರಣ ಕಾಲದಲ್ಲೇ ಉಪನಯನ ಸಂದರ್ಭಕ್ಕಾಗಿ ಒಂದು ಹೆಸರನ್ನು ಆಯ್ಕೆ ಮಾಡಿ ಅದನ್ನು ಗುಪ್ತವಾಗಿ ಇರಿಸಿದ್ದು, ಉಪನಯನ ದಿನದಿಂದ ಬಳಕೆಗೆ ತರಲಾಗುತ್ತಿದೆ. ವ್ಯವಹಾರ ನಾಮವನ್ನು ಎಂಟು- ಹತ್ತು ವರ್ಷಕಾಲ ಅಂದರೆ ಉಪನಯನ ಆಗುವ ವರೆಗೂ ಬಳಸುವುದರಿಂದ ಅದೇ ಅಧಿಕೃತವಾಗಿ ಮಾನ್ಯವಾಗುವುದರಿಂದ ಗುಪ್ತನಾಮಕರಣವು ಅಷ್ಟಾಗಿ ಜನ ಪ್ರಿಯವಾಗಲಿಲ್ಲ. ಇಂದಂತೂ ಶಿವಳ್ಳಿ ಬ್ರಾಹ್ಮಣರಲ್ಲಿ ಗುಪ್ತನಾಮಕರಣದ ಪದ್ಧತಿಯು ಮರೆತು ಹೋಗಿದೆ. ಮರೆಯಾಗಿದೆ. ನಾಮಕರಣವು ವ್ಯಕ್ತಿಗೆ ಸಮಾಜದಲ್ಲಿ ಅವನದೇ ಆದ ಗುರುತನ್ನು ನೀಡುವುದರೊಂದಿಗೆ ಆಯುಸ್ಸನ್ನು ಕಾಂತಿಯನ್ನು ನೀಡುತ್ತದೆ ಎಂದು ಭಾರತೀಯರ ನಂಬಿಕೆ. ಈ ಕಾರಣಗಳಿಂದ ನಾಮಕರಣಕ್ಕೆ ಷೋಡಶ ಸಂಸ್ಕಾರಗಳಲ್ಲಿ ಸ್ಥಾನದೊರಕಿದೆ. ಆದರೆ ಎಲ್ಲಾ ವರ್ಗದಲ್ಲಿರುವಂತೆ ಶಿವಳ್ಳಿಯವರಲ್ಲಿ ಹಿಂದಿನ ಎಲ್ಲಾ ಕ್ರಮವನ್ನು ಬಿಟ್ಟು ವ್ಯವಹಾರಿಕ ದೃಷ್ಟಿಯಿಂದ ಹೆಸರನ್ನು ಮಕ್ಕಳಿಗೆ ಇಡುವ ಪದ್ಧತಿ ರೂಢಿಯಲ್ಲಿದೆ.

4.7 ನಿಷ್ಕ್ರಮಣ

ನಿಷ್ಕಮಣ ಎಂದರೆ ಹೊರ ಹೋಗುವುದು ಎಂದರ್ಥ. ಮಗುವನ್ನು ಮೊದಲ ಬಾರಿ ಮನೆಯಿಂದ ಹೊರಕ್ಕೆ ಒಯ್ಯುವಿಕೆಯೇ ನಿಷ್ಕ್ರಮಣ. ಈ ಪೃಥ್ವಿಯ ಎಲ್ಲ ಜೀವಿಗಳ ದೇಹಗಳೂ ಭೂಮಿ, ನೀರು, ಬೆಳಕು, ಗಾಳಿ ಮತ್ತು ಆಕಾಶ ಎಂಬ ಪಂಚಭೂತಗಳಿಂದ ರೂಪುಗೊಂಡಿದ್ದು, ಜೀವಿಯು ಬದುಕಿರುವ ತನಕ ಈ ಪಂಚಭೂತಗಳ ಆಸರೆಯಲ್ಲೇ ಬೆಳೆಯಬೇಕಾಗುತ್ತದೆ. ಹಾಗಾಗಿ ಜನಿಸಿದ ಮಗುವಿಗೂ ಪ್ರಕೃತಿಯನ್ನು ಯಥಾವತ್ತಾಗಿ ಸ್ವೀಕರಿಸುವ ಅಗತ್ಯವಿರುತ್ತದೆ. ಆ ಸಾಮರ್ಥ್ಯ ಬರುವವರೆಗೆ ಮಗುವನ್ನು ಮನೆಯೊಳಗೇ ಸಂರಕ್ಷಿಸಿ ಕ್ರಮೇಣ ಪ್ರಕೃತಿಗೆ ಮತ್ತು ಹೊರ ಪ್ರಪಂಚಕ್ಕೆ ತೆರೆದಿಡಬೇಕು. ಇದರ ಮೊದಲು ಹೆಜ್ಜೆಯೇ ನಿಷ್ಕ್ರಮಣ. ಮೂರರಿಂದ ಆರು ತಿಂಗಳವರೆಗಿನ ಅವಧಿಯಲ್ಲಿ ನಿಷ್ಕ್ರಮಣ ಸಂಸ್ಕಾರವನ್ನು ನಡೆಸುವ ಸಂಪ್ರದಾಯ ಇದೆಯಾದರೂ ನಾಲ್ಕನೇ ತಿಂಗಳಲ್ಲಿ ಮಗುವನ್ನು ಮನೆಯಿಂದ ಹೊರತರಬೇಕು-'ಚತುರ್ಥೆಮಾಸಿ ಕರ್ತವ್ಯಂ ಶಿಶೋರ್ನಿಷ್ಕ್ರಮಣಂ ಗೃಹಾತ್' ಮುಂತಾಗಿ ಮನುಸ್ಮೃತಿ ಹೇಳಿದೆ. ಜೀವಮಾನವಿಡೀ ಪ್ರಕೃತಿಯ ನಡುವೆ ಬದುಕಬೇಕಾದ ಮಗುವು ಪ್ರಕೃತಿಯೊಂದಿಗೆ ಮೊದಲ ಬಾರಿಗೆ ನೇರ ಮುಖಾಮುಖಿಯಾಗುವ ಈ ಘಟ್ಟವು ತುಂಬಾ ಮಹತ್ವದ್ದು.

ಮಗುವಿನ ಜನ್ಮನಕ್ಷತ್ರ ಅಥವಾ ತಿಥಿಯಂದು ಮಂಗಳ ಸ್ನಾನ, ಅಲಂಕಾರಗಳನ್ನು ಮಾಡಿಸಿ ಮಗುವಿನ ಮನಸ್ಸು ಪ್ರಸನ್ನವಾಗಿರುವಂತೆ ರಮಿಸಿ ಬಾಹ್ಯ ಪ್ರಪಂಚದ ದರ್ಶನ ಮತ್ತು ಅನುಭವವನ್ನು ಪಡೆಯಲು ಸಿದ್ಧಗೊಳಿಸಬೇಕು. ತಾಯಿಯ ತೊಡೆಯ ಮೇಲೆ ಕೂತುಕೊಳ್ಳಿಸಿ ದೇವತಾ ಪೂಜೆಯನ್ನು ಮಾಡಿ ಅಗ್ನಿ, ಹಸುಗಳನ್ನು ಮಗುವಿಗೆ ತೋರಿಸಿ, ಸೂರ್ಯನು ಪ್ರಖರವಾಗುವ ಮುಂಚೆ ವೇದ ಘೋಷಗಳ ಸಹಿತ

ಮಗುವನ್ನು ಮನೆಯಿಂದ ಹೊರಗೆ ಕರೆ ತರುತ್ತಾರೆ. ಸೂರ್ಯನಿಗೆ ಅಭಿಮುಖವಾಗಿ ಮಗುವನ್ನು ಎತ್ತಿಕೊಂಡು ಎಳೆಯ ಸೂರ್ಯನನ್ನು ತೋರಿಸುತ್ತಾರೆ. ಇದಕ್ಕೆ ಸೂರ್ಯ ದರ್ಶನ ಅಥವಾ ಸವಿತೃದರ್ಶನ ಎಂದು ಹೆಸರು. ಅನಂತರ ಮಗುವನ್ನು ದೇವಾಲಯಕ್ಕೆ ಕರೆದೊಯ್ಯುತ್ತಾರೆ. ದೇವಸ್ಥಾನಕ್ಕೆ ಪ್ರದಕ್ಷಿಣೆ ಬರಿಸಿ, ನಮಸ್ಕಾರ ಮಾಡಿಸಿ, ಅನಂತರ ಸಮೀಪದ ಬಂಧುಗಳ ಮನೆಗೆ ಹೋಗಿ, ಮತ್ತೆ ಮನೆಗೆ ಮಗುವನ್ನು ಕರೆತರುತ್ತಾರೆ. ಅದೇ ತಿಂಗಳು ಒಂದು ಯೋಗ್ಯ ರಾತ್ರಿಯಲ್ಲಿ ಮಗುವಿಗೆ ಚಂದ್ರನ ದರ್ಶನವನ್ನು ಮಾಡಿಸುತ್ತಾರೆ. ಇದು 'ನಿಷ್ಕ್ರಮಣ ವಿಧಿ'. ನಿಷ್ಕ್ರಮಣದ ಅನಂತರ ಯಾವಾಗ ಬೇಕಾದರೂ ಮಗುವನ್ನು ಹೊರಕ್ಕೆ ಕರೆದೊಯ್ಯಲು ಅನುಮತಿ ಸಿಕ್ಕಂತೆ.

ಶಿವಳ್ಳಿ ಬ್ರಾಹ್ಮಣರಲ್ಲಿ ಈ ಪದ್ಧತಿ ಸಂಪ್ರದಾಯಸ್ಥ ಕುಟುಂಬದಲ್ಲಿ ಸ್ವಲ್ಪ ಮಟ್ಟಿಗೆ ಕಾಣಬಹುದು. ಹೆಚ್ಚಾಗಿ ಈ ಪದ್ಧತಿ ಈಗೀಗ ಇಲ್ಲ.

4.8 ಅನ್ನಪ್ರಾಶನ

ಅನ್ನ ತಿನ್ನಿಸುವುದು ಎಂದು ಇದರ ಅರ್ಥ. ಮಗುವಿಗೆ ಹಾಲಿಗಿಂತ ಭಿನ್ನವಾದ ಹೊಸ ಆಹಾರವನ್ನು ತಿನ್ನಲು ಕಲಿಸಿ, ಪ್ರಾಕೃತಿಕ ಆಹಾರವನ್ನು ಸ್ವತಂತ್ರವಾಗಿ ಸ್ವೀಕರಿಸಲು ಸಮರ್ಥವಾಗುವಂತೆ ಮಾಡುವುದು ಈ ಸಂಸ್ಕಾರದ ಉದ್ದೇಶ.

ಅನ್ನಪ್ರಾಶನದ ಸಂಕಲ್ಪದಲ್ಲಿ ಬೀಜ ಮತ್ತು ಗರ್ಭದ ದೋಷದಿಂದ ಇನ್ನು ಉಳಿದಿರಬಹುದಾದ ಕಲ್ಮಷಗಳು ನಾಶವಾಗಿ ಶಿಶುವಿಗೆ ತೇಜಸ್ಸು, ಬ್ರಹ್ಮತೇಜಸ್ಸು, ಇಂದ್ರಿಯ ಬಲ ಹಾಗೂ ಆಯುಸ್ಸು ಲಭ್ಯವಾಗಲಿ ಎಂದು ಹೇಳಿ ಅನ್ನಪ್ರಾಶನವನ್ನು ಮಾಡುತ್ತಾರೆ. ಅನ್ನ ಪ್ರಾಶನಕ್ಕೆ ನಿಗದಿಯಾದ ದಿನ ಮನೆಯಲ್ಲಿ ಪೂಜೆ ಹಾಗೂ ಹೋಮಾದಿಗಳನ್ನು ಮಾಡಿ, ತುಪ್ಪ, ಮೊಸರು, ಜೇನುಗಳಿಂದ ಕೂಡಿದ ಅನ್ನವನ್ನು ಚಿನ್ನದ ತಟ್ಟೆಯಲ್ಲಿಟ್ಟು ಚಿನ್ನದ ಚಮಚದಲ್ಲಿ ತಿನ್ನಿಸುವ ಪದ್ಧತಿ ಹಿಂದೆ ಇತ್ತು. ಚಿನ್ನ ಅಥವಾ ಬೆಳ್ಳಿಯ ತಟ್ಟೆಯಲ್ಲಿ ಹದವಾಗಿ ಬಿಸಿಯಾದ ಆಹಾರವನ್ನು ತಿನ್ನಿಸುವುದರಿಂದ ಆರೋಗ್ಯ ಹೆಚ್ಚುತ್ತದೆ ಎಂಬುದು ಭಾರತೀಯರ ನಂಬಿಕೆ. ಇಂದು ಮಧ್ಯಮವರ್ಗದವರಲ್ಲಿ ಕೈಯಲ್ಲಿ ಚಿನ್ನದ ಉಂಗುರ ಹಿಡಿದು ಮಗುವಿಗೆ ಹಾಲು, ತುಪ್ಪ, ಜೇನು, ಅನ್ನವನ್ನು ತಿನ್ನಿಸುತ್ತಾರೆ. ಚಿನ್ನ- ಬೆಳ್ಳಿ ಇಲ್ಲದವರು ಕಂಚಿನ ಅಥವಾ ತಾಮ್ರದ ಪಾತ್ರೆಯನ್ನೂ ಬಳಸುತ್ತಾರೆ.

ಈಗೀಗ ಹೆಚ್ಚಾಗಿ ದೇವಸ್ಥಾನಗಳಲ್ಲಿ ಅನ್ನ ಪ್ರಾಶನ ಮಾಡುವ ಪದ್ಧತಿ ಇದೆ. ಕೆಲವರು ಮಗು ಹುಟ್ಟುವ ಸಂದರ್ಭದಲ್ಲಿ ಬೇರೆ ಬೇರೆ ಕಾರಣಕ್ಕಾಗಿ ದೇವರಿಗೆ ಹರಕೆ ಹೊತ್ತಿರುತ್ತಾರೆ. ಅಂತೆಯೇ ದೇವಸ್ಥಾನಕ್ಕೆ ಹೋಗಿ ಮಗುವಿಗೆ ಅನ್ನ ಪ್ರಾಶನ ಮಾಡಿಸುತ್ತಾರೆ.

ಹುಟ್ಟಿದಂದಿನಿಂದಲೂ ತಾಯಿಯ ಹಾಲನ್ನು ಆಧರಿಸಿ ಬೆಳೆದ ಮಗುವಿಗೆ ತಕ್ಕಷ್ಟು ಜೀರ್ಣ ಶಕ್ತಿ ಬಂದಾಗ ಅದಕ್ಕೆ ಅನ್ನದಂತಹ ಘನಾಹಾರವನ್ನು ಅಭ್ಯಾಸ ಮಾಡಿಸುವುದು, ಆಮೂಲಕ ಮಗುವು ಆಹಾರಕ್ಕಾಗಿ ತಾಯಿಯನ್ನೇ ಅವಲಂಬಿಸುವುದನ್ನು ಬಿಟ್ಟು ಪ್ರಕೃತಿಯ ಆಶ್ರಯಕ್ಕೆ ಬರುವುದು, ಮುಂದೆ ತಕ್ಕ ಆಹಾರವನ್ನು ಸ್ವೀಕರಿಸುವುದನ್ನು ಕಲಿಯುವಂತೆ ಮಾಡುವುದು ಇವೆಲ್ಲವೂ ಅನ್ನಪ್ರಾಶನ ವಿಧಿಯ ಹಿನ್ನಲೆ.

4.9 ಚೂಡಾಕರ್ಮ

ಚೂಡಾ ಎಂದರೆ ಜುಟ್ಟು ಎಂದರ್ಥ. ತಲೆಯ ತುಂಬಾ ಇರುವ ಕೂದಲಿನಲ್ಲಿ ಹಿಂಬದಿಯಲ್ಲಿ ಜುಟ್ಟನ್ನು ಮಾತ್ರ ಉಳಿಸಿ, ಉಳಿದ ಕೂದಲನ್ನು ನಿವಾರಿಸುವ ಕಾರ್ಯವೇ ಚೂಡಾಕರ್ಮ. ಚೂಡಾಕರ್ಮವನ್ನು ಒಂದರಿಂದ ಏಳು ವರ್ಷದ ಒಳಗೆ ಕುಲಾಚಾರಕ್ಕೆ ತಕ್ಕಂತೆ ಮಾಡುತ್ತಾರೆ.

ದೇಹದೊಂದಿಗೆ ಬುದ್ಧಿಯನ್ನು ಪ್ರಚೋದಿಸಿ ಮಿದುಳನ್ನು ದೇಹದ ಸ್ಥಾಯಿ ವಿದ್ಯುತ್ತಿನ ಆವರಣದ ಪ್ರಭಾವವಲಯವನ್ನು ಬಲಗೊಳಿಸುವ ಯತ್ನದ ಮೊದಲ ಹಂತವೇ ಚೂಡಾಕರ್ಮ. ಮಾನವನ ಮಿದುಳು ಒಂದು ಅದ್ಭುತ ಕಂಪ್ಯೂಟರ್‌ನಂಥ ಜೈವಿಕ ವಿದ್ಯುನ್ಮಾನ ಅಂಗ. ಹಾಗಾಗಿ ಇಡೀ ದೇಹವನ್ನು ನಿಯಂತ್ರಿಸುವ ವಿದ್ಯುನ್ಮಾನ ಜಾಲ ತಲೆ ಬುರುಡೆಯೊಳಗೆ ಹರಡಿರುತ್ತದೆ, ಅತಿಯಾದ ಸೂರ್ಯ ತಾಪವಾಗಲೀ, ಬಲವಾದ ಹೊಡೆತವಾಗಲೀ ಜುಟ್ಟು ಬಿಡುವ ಜಾಗಕ್ಕೆ ಬೀಳದಂತೆ ರಕ್ಷಣೆಯಾಗಿ ಅಲ್ಲಿ ಕೂದಲು ಉಳಿಸಿಕೊಂಡರು. ತಲೆ ಬುರುಡೆಯ ಅಧಿಪತಿ ಎಂಬ ನರಸಂಧಿ ಭಾಗದ ಕೂದಲನ್ನು ಉಳಿಸಿ, ಉಳಿದ ಕೂದಲನ್ನು ತೆಗೆಯುವುದರಿಂದ ಮಿದುಳು ಸಮರ್ಥವಾಗಿ ಪ್ರಚೋದನೆಗೊಂಡು ಬುದ್ಧಿ ಚುರುಕಾಗುತ್ತದೆ ಹಾಗೂ ಪ್ರಭಾವಲಯವೆಂಬ ದೈಹಿಕ ವಿದ್ಯುದಾವರಣ ಬಲಗೊಳ್ಳುತ್ತದೆ. ಇದರಿಂದ ಮಾನವನ ದೇಹಶಕ್ತಿ, ದೇಹಕಾಂತಿ, ಧೀಶಕ್ತಿ ಗಣನಿಯವಾಗಿ ಊರ್ಜಿತಗೊಂಡು ಆಯಸ್ಸು ಕೂಡ ಹೆಚ್ಚುತ್ತದೆ. ಈ ಕಾರಣದಿಂದ ತಲೆಯಲ್ಲಿ ಜುಟ್ಟನ್ನು ಉಳಿಸಿ ಉಳಿದ ಕೂದಲನ್ನು ತೆಗೆದು ಹಾಕುವುದು ಸಂಸ್ಕಾರ ವಿಧಿಯ ರೂಪ ತಳೆಯಿತು. ಮಗುವಿಗೆ ಚೂಡಾಕರ್ಮವನ್ನು ಮಾಡುವುದು ತಂದೆಯ ಕರ್ತವ್ಯ. ನಿರ್ಧರಿತವಾದ ಹೋಮಾದಿಗಳ ಅನಂತರ ಮಗುವನ್ನು ತಾಯಿಯ ತೊಡೆಯ ಮೇಲೆ ಕುಳಿತುಕೊಳ್ಳಿಸಬೇಕು. ತಣ್ಣೀರು ಬಿಸಿನೀರನ್ನು ಬೆರೆಸಿ ಹದಮಾಡಿ ಅದಕ್ಕೆ ಬೆಣ್ಣೆ ಅಥವಾ ಗಟ್ಟಿ ಮೊಸರನ್ನು ಬೆರೆಸಿ ನಿರ್ದಿಷ್ಟ ಮಂತ್ರಪೂರ್ವಕವಾಗಿ ತಲೆಯನ್ನು ತೇವಗೊಳಿಸಬೇಕು. ಅನಂತರ ಬಲಕಿವಿಯಿಂದ ಆರಂಭಿಸಿ ಶಿಖೆಯನ್ನು ಉಳಿಸಿ ಬಾಕಿ ಕೂದಲನ್ನು ತೆಗೆಯಬೇಕು ಎಂಬುದು ವಿಧಿ. ಚೂಡಾಕಾರ್ಯ ಒಂದು ಕಲೆ, ನೈಪುಣ್ಯತೆ ಬೇಕು. ಸರಿಯಾಗಿ ತಲೆಕೂದಲು ತೆಗೆಯಲು ತಿಳಿಯದ ತಂದೆಯು ಮಗುವಿನ ತಲೆಯಲ್ಲಿ ಗಾಯ ಮಾಡಲುಬಹುದು. ತಂದೆಯು ಸಾಂಕೇತಿಕವಾಗಿ ತಲೆಕೂದಲು ಕತ್ತರಿಸಿ ವೃತ್ತಿ ನಿಪುಣ ಕ್ಷೌರಿಕನಿಂದ ಮಾಡಿಸುವ ಕ್ರಮ ಬಂದಿದೆ. ತಂದೆಯು ದರ್ಭೆಯನ್ನು ಹಿಡಿದು ಸಾಂಕೇತಿಕವಾಗಿ ಕತ್ತರಿಸುವ ಪದ್ಧತಿ ಬಂದಿದೆ.

4.10 ಮಾತೃಭೋಜನ

ತಾಯಿಯ ಜೊತೆ ಊಟ ಮಾಡುವುದು ಎಂದು ಇದರ ಅರ್ಥ. ಹಿಂದೆ 8ನೇ ವರ್ಷಕ್ಕೆ ಉಪನಯನ ಮಾಡುವ ಪದ್ಧತಿ. ಆ ವಯಸ್ಸಿನ ತನಕ ಮಗು ತಾಯಿಯ ಆಸರೆಯಲ್ಲೇ ಬೆಳೆದಿರುತ್ತದೆ. ಒಮ್ಮೆಲೇ ಹತ್ತಾರುವರ್ಷಗಳ ಕಾಲ ತಾಯಿಯನ್ನು ಅಗಲಿ ಗುರುಕುಲಕ್ಕೆ ಹೋಗಬೇಕಾಗುತ್ತಿತ್ತು. ಅಲ್ಲಿ ಅವನಿಗೆ ಹಲವಾರು ನಿಯಮಗಳಿರುತ್ತಿತ್ತು. ಆದ್ದರಿಂದ ಕೊನೆಯ ಬಾರಿಗೆ ತಾಯಿಯ ಮಡಿಲಲ್ಲಿ ಕುಳಿತು ಅವಳ ಕೈಯಿಂದ ಊಟಮಾಡುವ ಅವಕಾಶವನ್ನು ಉಪನಯನಕ್ಕೆ ಮುನ್ನ ಅವನಿಗೆ ಕಲ್ಪಿಸಲಾಗುತ್ತಿತ್ತು. ಈ

ಕ್ರಮವು ತಾಯಿಗೂ–ಮಗುವಿಗೂ ಕೂಡಿಯೇ ಸಮಾಧಾನ ತರುವ ಮಹತ್ವದ ಆಚರಣೆಯಾಗಿತ್ತು. ಮನೋವಿಜ್ಞಾನಕ್ಕೂ ಸಂಪ್ರದಾಯವು ಸ್ಥಾನ ಕೊಟ್ಟಿರುವುದು ಗಮನಾರ್ಹ. ಆದರೆ ಈಗ ಅದರ ಕುರುಹಾಗಿ ಮಾತೃಭೋಜನ ಜರುಗುತ್ತದೆ. ಹಿಂದಿನ ಹಾಗೆ ವಟು ಅಧ್ಯಯನಕ್ಕಾಗಿ ಗುರುಗಳ ಹತ್ತಿರಹೋಗುವ ಪ್ರಮೇಯವಿಲ್ಲ. ಆದರೂ 'ಮಾತೃ ಭೋಜನ' ಕಾರ್ಯಕ್ರಮ ಶಿವಳ್ಳಿಯವರಲ್ಲಿ ಈಗಲೂ ಉಳಿದುಕೊಂಡು ಬಂದಿದೆ.

4.11 ಉಪನಯನ

ಉಪನಯನವು ಷೋಡಶ ಸಂಸ್ಕಾರಗಳಲ್ಲಿ ಒಂಬತ್ತನೆಯದು. ಬ್ರಾಹ್ಮಣರಲ್ಲಿ ಹೆಚ್ಚಿನ ಮಹತ್ವ ಕೊಟ್ಟು ಆಚರಿಸುತ್ತಿರುವ ಸಂಸ್ಕಾರಗಳಲ್ಲಿ ಉಪನಯನವೂ ಒಂದು ವಿದ್ಯಾರಂಭದ ಅನಂತರ ಮನೆಯಲ್ಲೇ ಅಕ್ಷರಾಭ್ಯಾಸ, ಭಾಷಾಪರಿಚಯ, ಕಂಠಪಾಠಗಳ ಮೂಲಕ ಪ್ರಾಥಮಿಕ ಶಿಕ್ಷಣ ಮುಂತಾದವುಗಳನ್ನು ನೀಡಿ, ಗುರುವಿನಿಂದ ವಿದ್ಯೆಯನ್ನು ಸ್ವೀಕರಿಸಲು ಶಕ್ತವಾಗುವಂತೆ ಮಗುವನ್ನು ಸಿದ್ಧಗೊಳಿಸಬೇಕಾಗುತ್ತಿತ್ತು. ವೇದ ಜ್ಞಾನವನ್ನು ಗಳಿಸಿ ಬ್ರಹ್ಮಜ್ಞಾನದ ಕಡೆಗೆ ನಡೆಯುವುದು ಅಗತ್ಯವಾಗಿದ್ದ ಕಾರಣ ಪುರಾತನ ಬ್ರಾಹ್ಮಣ ವರ್ಣದಲ್ಲಿ ಉಪನಯನಕ್ಕೆ ಅತೀ ಹೆಚ್ಚಿನ ಮಹತ್ವವಿತ್ತು. ಉಪನಯನ ಸಂಸ್ಕಾರದ ಕ್ರಿಯೆಗಳು ಸರಳವಾಗಿದ್ದರೂ ಅದರ ಉಪಯುಕ್ತತೆ ಮತ್ತು ಅರ್ಥಗಳು ವಿಶೇಷವಾಗಿರುವ ಕಾರಣ ಅದಕ್ಕೆ ಮಹತ್ವದ ಸ್ಥಾನ ಸಿಕ್ಕಿದೆ.

'ಉಪನಯನ'ವೆಂದರೆ, ಉಪ ಅಂದರೆ ಸಮೀಪಕ್ಕೆ, ನಯನ ಅಂದರೆ ಕರೆದೊಯ್ಯುವಿಕೆ. ವಟುವನ್ನು ಸಮೀಪಕ್ಕೆ ಒಯ್ಯುವುದು ಎಂದರ್ಥ. ಉಪನಯನ ಪದದ ವಾಚಾರ್ಥವು ಮಗುವನ್ನು ಗುರುವಿನ ಸಮೀಪಕ್ಕೆ ಒಯ್ಯುವಿಕೆ ಎಂದಾಗುತ್ತದೆ. ವಿದ್ಯೆಯ ಬಳಿಗೆ ಕರೆದೊಯ್ಯುವುದು ಎಂದು ಅದರ ಲಕ್ಷ್ಯಾರ್ಥ. ಉಪನೀತನಾಗಲಿರುವ ಬಾಲಕನಿಗೆ 'ವಟು' ಎಂದು ಕರೆಯಲಾಗುತ್ತದೆ. ಸೂಕ್ತ ವಿದ್ಯೆಯನ್ನು ಕಲಿಯಲು ಅಗತ್ಯವಾದ ತರಬೇತಿಯನ್ನು ನೀಡಿ ಗುರುವಿನ ಬಳಿಗೆ ಕಳಿಸುವುದು ಉಪನಯನದ ಉದ್ದೇಶ.

5ನೇ ವಯಸ್ಸಿನಲ್ಲಿ ಚೌಲ–ವಿದ್ಯಾರಂಭಗಳ ಮೂಲಕ ವಿದ್ಯಾಭ್ಯಾಸದ ಪ್ರಾಥಮಿಕ ತರಬೇತಿಗಳನ್ನು ನೀಡಿ 8ನೇ ವಯಸ್ಸಿಗೆ ಗುರುಕುಲಕ್ಕೆ ಕಳಿಸುವ ಕ್ರಮ ರೂಢಿಯಲ್ಲಿತ್ತು. ಹಾಗಾಗಿ 8ನೇ ವರ್ಷವು ಉಪನಯನಕ್ಕೆ ಉತ್ತಮ ಎಂದೆನಿಸಿತ್ತು. ಆದರೆ ಈಗ ಗುರುಬಲವಿರುವಾಗ ಉಪನಯನಕ್ಕೆ ವಿಶೇಷವಾದ ಪ್ರಾಧಾನ್ಯತೆಯನ್ನು ಕೊಡುತ್ತಾರೆ. ಯಜ್ಞೋಪವೀತಧಾರಣೆ ಮತ್ತು ಗಾಯತ್ರಿ ಮಂತ್ರೋಪದೇಶ ಈ ಸಂಸ್ಕಾರದ ಪ್ರಧಾನ ಕರ್ಮಾಂಗ. ಉಪವೀತದ ಜೊತೆಗೆ 'ಮುಂಜಾ' ಎಂಬ ಹುಲ್ಲಿನಿಂದ ತಯಾರಿಸಿದ 'ಮೌಂಜಿ'ಯನ್ನು ಕಟ್ಟುತ್ತಾರೆ. ಅದನ್ನು ನಿಜವಾಗಿ ಸೊಂಟಕ್ಕೆ ಕಟ್ಟಬೇಕು. ಈಗ ಬಟ್ಟೆಯ ಮೇಲೆ ಸೊಂಟಕ್ಕೆ ಕಟ್ಟುತ್ತಾರೆ. ಅರಶಿನ ನೀರಿನಲ್ಲಿ ಅದ್ದಿದ ಪಂಚೆಯೇ ಉಪನಯನ ಕ್ರಿಯಾವಿಧಿಯಲ್ಲಿ ವಟುವು ತೊಡುವ ಬಟ್ಟೆ. ಅರಶಿನ ಶುಭ ಮತ್ತು ಮಡಿಯ ಸಂಕೇತ.

ಮುಂಜಾ ಅಂದರೆ ಹೊಳೆಯ ಬದಿಯಲ್ಲಿ ಬೆಳೆಯುವ ಒಂದು ಜಾತಿಯ ಹುಲ್ಲು

ಉಪನಯನಕ್ಕೆ ತಂದೆಯೇ ಮುಖ್ಯ. ಉಪನಯನದ ಮುಹೂರ್ತ ನಿಶ್ಚಯಿಸಲು ಪುರೋಹಿತರು ಅಗತ್ಯ. ಹಿಂದೆ ನಾಲ್ಕು ದಿನದ ಉಪನಯನ ಕಾರ್ಯಕ್ರಮವನ್ನು ಸಂಭ್ರಮದಿಂದ ಮಾಡುತ್ತಿದ್ದರು. ಈಗ ಕೇವಲ ಒಂದು ದಿನಕ್ಕೆ ಸೀಮಿತವಾಗಿದೆ.

ಚೂಡಾಕರಣದ ಸಂಸ್ಕಾರದಲ್ಲಿ ಮಾಡಿದಂತೆಯೇ ಉಪನಯನದಲ್ಲೂ ಸಹ ವಟುವಿನ ಶಿಖೆಯನ್ನು ಉಳಿಸಿ ಉಳಿದ ಕೂದಲನ್ನು ತೆಗೆದು ಹಾಕಲಾಗುತ್ತದೆ. ಇದನ್ನು 'ವಪನ' ಎನ್ನುವರು. ಈಗ ಉಪನಯನದ ಸಂದರ್ಭದಲ್ಲಿ ವಟುವಿನ ತಂದೆ ಸಾಂಕೇತಿಕವಾಗಿ ದರ್ಭೆಯನ್ನು ಚೂರಿಯಿಂದ ತುಂಡರಿಸಿದ ಅನಂತರ ಕ್ಷೌರಿಕನಿಂದ ವಟುವಿನ ಕೂದಲನ್ನು ಕತ್ತರಿಸುತ್ತಾರೆ. ರೂಢಿಯಲ್ಲಿ ಅಲ್ಲಿಯವರೆಗೆ ವಟುವಿಗೆ 'ಬಾಳ್'ನ್ನು ತಾಗಿಸಬಾರದೆಂದು ನಿಯಮ. ತಲೆ ಕೂದಲನ್ನು ನಿವಾರಿಸುವ ಮೂಲಕ ನೈಸರ್ಗಿಕ ಶಕ್ತಿಗಳು ಮಿದುಳಿನ ಕಾರ್ಯಶೀಲತೆಯನ್ನು ಊರ್ಜಿತಗೊಳಿಸಲು ಸಾಧ್ಯವಾಗುತ್ತದೆ ಎಂಬುದು ಅದರ ಹಿಂದಿನ ಉದ್ದೇಶ. ನಂತರ ಕೌಪೀನಧಾರಣೆ ಶಾಸ್ತ್ರ. ಮುಂದೆ 'ಮುಂಜಿ' ಕಾರ್ಯಕ್ರಮ.

ಮುಂಜದ ಹುಲ್ಲಿನಿಂದ ತೆಳುವಾದ ದಾರವನ್ನು ಹೊಸೆದು (ಈಗೀಗ ದರ್ಭೆಯ ದಾರವನ್ನು) ಬ್ರಾಹ್ಮಣ ವಟುವಿನ ಸೊಂಟಕ್ಕೆ ಮೂರು ಸುತ್ತು ಕಟ್ಟುವುದು ಉಪನಯನ ವಿಧಿಯ ಕ್ರಮಗಳಲ್ಲಿ ಒಂದು. ಮುಂದೆ ಯಜ್ಞೋಪವೀತಧಾರಣೆ. ಕ್ರಮಬದ್ಧವಾಗಿ ತಯಾರಿಸಿದ ದಾರಕ್ಕೆ ದೇವತೆಗಳನ್ನು ಆವಾಹಿಸಿ, ಬ್ರಹ್ಮ ಗಂಟು ಹಾಕಿ ಜನಿವಾರವನ್ನು ಸಿದ್ಧಗೊಳಿಸಿಕೊಂಡು ವಟುವಿಗೆ ಯಜ್ಞೋಪವಿತವನ್ನು ಹಾಕುತ್ತಾರೆ. ಅನಂತರದಲ್ಲಿ 'ಅಜಿನಧಾರಣೆ' ಎಂದರೆ ಚರ್ಮವನ್ನು ಧರಿಸುವುದು ಎಂದರ್ಥ. ಸಂಪ್ರದಾಯದ ಇತ್ತೀಚಿನ ಪರಿಷ್ಕರಣೆಗಳಲ್ಲಿ ಮಟುವಿಗೆ ಯಜ್ಞೋಪವೀತಕ್ಕೆ ಸುಮಾರು ಒಂದು ಚದರ ಅಂಗುಲದಷ್ಟು ಅಗಲದ ಜಿಂಕೆಚರ್ಮದ ಪುಟ್ಟ ತುಂಡನ್ನು ಪೋಣಿಸಿ ಯಜ್ಞೋಪವೀತದೊಂದಿಗೆ ಹಾಕುತ್ತಾರೆ.

"ಗಾಯತ್ರಿ ಮಂತ್ರ" ದ ಉಪದೇಶವು ಉಪನಯನದಲ್ಲಿ ಪ್ರಮುಖ ಭಾಗಗಳಲ್ಲಿ ಒಂದು. ಈ ಕಾರಣದಿಂದಲೇ ಉಪನಯನಕ್ಕೆ 'ಬ್ರಹ್ಮೋಪದೇಶ' ಎಂಬ ಹೆಸರು ಬಂದಿದೆ. 'ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ ಧಿಯೋಯೊನ: ಪ್ರಚೋದಯಾತ್' – ದೇವಶ್ರೇಷ್ಠ, ಸ್ವೀಕಾರಾರ್ಹವೂ ಆದ ಸವಿತೃನಿಂದ ನನ್ನ ಧೀ ಶಕ್ತಿಯು ಪ್ರಚೋದಿಸಲ್ಪಡಲಿ ಎಂದು ಆಶಿಸುವ ಮಂತ್ರ ಗಾಯತ್ರಿ ಮಂತ್ರ. ಗಾಯತ್ರಿ ಮಂತ್ರದ ಉಪದೇಶವನ್ನು ಪಡೆಯುವುದು ಬ್ರಹ್ಮಚಾರೀ ಜೀವನದ ಅತ್ಯಂತ ಪ್ರಮುಖ ಕ್ಷಣವಾಗಿದೆ. ಆ ಉಪದೇಶವನ್ನು ಪಡೆದು ಮುಂದೆ ಸಾಧನೆ ನಡೆಸಬೇಕೆಂಬ ಮಹೋದ್ದೇಶದಿಂದಲೇ ವಟುವನ್ನು ಇಷ್ಟೆಲ್ಲ ರೀತಿಯಲ್ಲಿ ದೈಹಿಕ ಮತ್ತು ಮಾನಸಿಕವಾಗಿ ಸಿದ್ಧಪಡಿಸಲಾಗುತ್ತದೆ. ಬ್ರಾಹ್ಮಣರಲ್ಲಿ ಮಗನಿಗೆ ತಂದೆಯೇ ಮೊದಲ ಗುರು. ತಂದೆಯೇ ವಟುವಿಗೆ ಗಾಯತ್ರಿ ಮಂತ್ರದ ಉಪದೇಶವನ್ನು ಮಾಡುತ್ತಾನೆ. ತಂದೆ ಮಗನನ್ನು ತೊಡೆಯ ಮೇಲೆ ಕುಳ್ಳಿರಿಸಿ ಮುಸುಕುಧಾರಿಯಾಗಿ ಗಾಯತ್ರಿ ಮಂತ್ರದ ಉಪದೇಶವನ್ನು ನೀಡುವ ಪದ್ಧತಿ ಶಿವಳ್ಳಿ ಬ್ರಾಹ್ಮಣರಲ್ಲಿದೆ. ಈಗ ವಟುವಿಗೆ ದ್ವಿಜತ್ವ ಪ್ರಾಪ್ತಿಯಾಗುತ್ತದೆ.

ಬಾಳ್ ಅಂದರೆ ಕ್ಷೌರಿಕ ಗಡ್ಡ ಮೀಸೆ ತೆಗೆಯಲು ಬಳಸುವ ಹರಿತವಾದ ಕತ್ತಿ

ಆಧಾನ'ವೆಂದರೆ ಸಕ್ರಮವಾಗಿ ಇಡುವುದು ಎಂದರ್ಥ. ಹೋಮಕಾರ್ಯದಲ್ಲಿ ಪವಿತ್ತನ್ನು ಹೋಮಾಗ್ನಿಗೆ ಹಾಕುವ ಕ್ರಮದ ಪ್ರಾಥಮಿಕ ತಿಳುವಳಿಕೆಯನ್ನು ನೀಡುವುದೇ 'ಸವಿದಾಧಾನವಿಧಿ' ಇದು ವಟುವಿಗೆ ಹೋಮಕಾರ್ಯದ ರೀತಿ–ನೀತಿಗಳು ಅರ್ಥವಾಗಿ, ಅಗ್ನಿ ಹಾಗೂ ಅಗ್ನಿಕಾರ್ಯದ ಬಗ್ಗೆ ಅರ್ಥಪೂರ್ಣವಾಗಿ ಭಕ್ತಿ ಗೌರವಗಳು ಮೂಡುವಂತೆ ಮಾಡುತ್ತದೆ.

'ದಂಡಧಾರಣೆ'ಯು ಲೌಕಿಕ ಮತ್ತು ಆಧ್ಯಾತ್ಮಿಕ ಈ ಎರಡೂ ಮಾರ್ಗಗಳಲ್ಲಿ ಉಂಟಾಗುವ ಅಡ್ಡಿಯನ್ನು ನಿವಾರಿಸುವುದೇ ಉದ್ದೇಶ. ಈ ದಂಡಕ್ಕೆ 'ಬ್ರಹ್ಮದಂಡ' ಎಂದೂ ಹೆಸರಿರುವುದನ್ನು ಬ್ರಹ್ಮೋಪದೇಶಕನು ವಟುವಿನ ಎದೆಯನ್ನು ಮುಟ್ಟಿ ಬ್ರಹ್ಮಜ್ಞನಾಗು ಎಂದು ಹಾರೈಸುತ್ತಾ ಆ ಬ್ರಹ್ಮದಂಡ ನೀಡುವುದನ್ನೂ, ದಂಡಗ್ರಹಣ ಸಂದರ್ಭದಲ್ಲಿ ವಟುವು ಆಯುಸ್ಸು, ಬ್ರಹ್ಮಜ್ಞಾನ–ಬ್ರಹ್ಮವರ್ಚಸ್ಸನ್ನೂಗಳಿಸಲಿಕ್ಕೂ, ರಹಸ್ಯಾಂಗ ಸಹಿತವಾದ ವೇದಗ್ರಹಣಕ್ಕಾಗಿಯೂ ದೀಕ್ಷೆಯಂತೆ ಈ ದಂಡವನ್ನೂ ಧರಿಸುತ್ತೇನೆ ಎಂದು ಸಂಕಲ್ಪ ಮಾಡುವುದನ್ನೂ ಗಮನಿಸಿದರೆ ದಂಡವು ಬ್ರಹ್ಮಾಚಾರಿಯ ಬ್ರಹ್ಮಮಾರ್ಗದ ಸಾಧನೆಯ ಅಡ್ಡಿಗಳನ್ನು ನಿವಾರಿಸುವ ಸಾಧನವಾಗಿದ್ದು, ಈ ಕಾರಣಕ್ಕೇ ಅದು ಬ್ರಹ್ಮಚಾರಿಯ ಲಾಂಛನವೂ ಆಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ದಂಡಧಾರಣೆಗೂ ವಿಶೇಷವಾದ ಮಹತ್ವವಿದೆ. ಅನಂತರ ಉಪನಯನಲ್ಲಿ ಸೇರಿದವರೆಲ್ಲ ನೆಂಟರಿಷ್ಟರು ವಟುವಿಗೆ ಭಿಕ್ಷೆಯನ್ನು ಹಾಕುವ ಕಾರ್ಯಕ್ರಮವಿರುತ್ತದೆ. ಅನಂತರಲ್ಲಿ ಅನುಪ್ರವಚನೀಯ ಹೋಮ. ಉಪನಯನದಲ್ಲಿ ಗಾಯತ್ರಿ ಉಪದೇಶ, ಅನುಪ್ರವಚನೀಯ ಹೋಮ ಮತ್ತು ಮೇಧಾಜನನ–ಇವು ಮೂರು ಪ್ರಧಾನ ಅಂಗಗಳು. ಅನುಪ್ರವಚನೀಯ ಹೋಮ ಎಂದರೆ ಜ್ಞಾನ ವಿಶೇಷಗಳನ್ನು ಗುರುವಿನ ವಿವರಣೆಯೊಂದಿಗೆ ಕಲಿಯುವ ಶಕ್ತಿಯನ್ನು ಪಡೆಯುವುದಕ್ಕಾಗಿ ಮಾಡುವ ಹೋಮ. ಮುಂದಿನ ಕಾರ್ಯ ಮೇಧಾಜನನ. ಗಾಯತ್ರಿ ಮಂತ್ರದ ಪ್ರಕಾರ ತನ್ನ ಧೀಶಕ್ತಿಯನ್ನು ಪ್ರಚೋದಿಸಿಕೊಳ್ಳವುದು ಬ್ರಹ್ಮಜ್ಞಾನ ಸಾಧಕರ ಉದ್ದೇಶ. ವಟುವು ತಾನು ಮೇಧಾವಿಯಾಗಬೇಕೆಂದು ಅಗ್ನಿ ಕಾರ್ಯದಲ್ಲಿ ಪ್ರಾರ್ಥಿಸುತ್ತಾನೆ. ಆ ಮೇದಾಶಕ್ತಿಯನ್ನು ವಟುವಿನಲ್ಲಿ ಹುಟ್ಟಿಸುವ ಸಂಸ್ಕಾರವೇ ಮೇಧಾಜನನ. ಹಿಂದಿನ ಕಾಲದಲ್ಲಿ ಅನುಪ್ರವಚನೀಯ ಹೋಮದ ನಂತರದಲ್ಲಿ ನಾಲ್ಕನೇ ದಿನ ಅಗ್ನಿಕಾರ್ಯವನ್ನು ಮುಗಿಸಿ ಸಮೀಪದ ಮುತ್ತುಗದ ಮರದ ಬುಡದಲ್ಲಿ ಈ ಕಾರ್ಯವನ್ನು ಮಾಡುತ್ತಿದ್ದರು. ಸ್ಥಾನಶುದ್ಧಿ ಮಾಡಿ, ಇಂದ್ರ, ಅಗ್ನಿ, ವರುಣ, ಸರಸ್ವತಿ, ಮುಂತಾದವರನ್ನು ವೃಕ್ಷದಲ್ಲಿ ಆವಾಹಿಸಿ ಪೂಜಿಸಬೇಕು. ನನಗೆ ಮೇಧಾಶಕ್ತಿಯನ್ನು ಕೊಡಿ, ನನ್ನನ್ನು ಮೇಧಾವಿಯನ್ನಾಗಿ ಮಾಡಿ ಎಂದು ಮೇಧಾದೇವತೆಗಳನ್ನು ಪ್ರಾರ್ಥಿಸುವುದು ಇಲ್ಲಿ ಉದ್ದೇಶ. ಆದರೆ ಈಗ ಮನೆಯಲ್ಲೇ ಮಣ್ಣಿನ ವೇದಿಕೆಯಲ್ಲಿ ಮುತ್ತುಗದ ಕೊಂಬೆಯೊಂದನ್ನು ನೆಟ್ಟು ಉಪನಯನದ ದಿವಸವೇ ಪೂಜಿಸುವ ಸಂಪ್ರದಾಯವಿದೆ.

ಉಪನಯನದ ದಿವಸ ಮಧ್ಯಾಹ್ನ ವಟುವಿಗೂ ಆತನ ತಂದೆಗೂ ಊಟವಿಲ್ಲ. ರಾತ್ರಿ ಹೊತ್ತು ಬ್ರಹ್ಮಭೋಜನ. ಈಗೀಗ ಉಪನಯನದ ದಿವಸವೇ ಸ್ವಸ್ತಿಕದಲ್ಲಿ ಸೂರ್ಯನನ್ನು ಆವಾಹನೆ ಮಾಡಿ ದಂಡುಕೋಲು, ಅಜಿನ, ಮೇಖಲೆಯನ್ನು ವಿಸರ್ಜಿಸುತ್ತಾರೆ. ಹೀಗೆ ಶಿವಳ್ಳಿಯವರಲ್ಲಿ ಉಪನಯನ ಕಾರ್ಯಕ್ರಮ ಜರುಗುತ್ತದೆ.

ಶಿವಳ್ಳಿ ಬ್ರಾಹ್ಮಣರಲ್ಲಿ ಉಪನಯನ ಮತ್ತು ಮದುವೆಗಳು ಎರಡು ಒಂದೇ ದಿನವಾಗಲು ನಿಷೇಧವಿದೆ. ಅವೆರಡೂ ಭಿನ್ನಕಾಲಘಟ್ಟಗಳಲ್ಲಿ ನಡೆಯುವ ಸಂಸ್ಕಾರಗಳು. ಉಪನಯನದಂತಹ ಸಂಸ್ಕಾರದ ಆರಂಭ ಮತ್ತು ಅಂತ್ಯದಲ್ಲಿ ಅಕ್ಕಿ ವಿಶಿಷ್ಟವಾದ ಪಾತ್ರ ವಹಿಸುತ್ತದೆ. ಉಪನಯನದ ಕೊನೆಯಲ್ಲಿ ಅಕ್ಕಿಯ ಮುಡಿಯ ಮೇಲೆ ಕುಳಿತು ಕೊಳ್ಳಬೇಕಾಗುತ್ತದೆ. ಅನ್ನಕ್ಕಾಗಿ ಪಡೆದ ವಿದ್ಯೆ ಅಥವಾ ಜ್ಞಾನ ಮಾರ್ಗದ ಸಂಕೇತವಾಗಿ ಇಲ್ಲಿ ಅಕ್ಕಿ ಬಂದಿದೆ. ಪ್ರತಿ ದಿನ ಬೆಳಗ್ಗೆ ಮತ್ತು ಸಂಜೆ ಕನಿಷ್ಠ ಪ್ರಮಾಣದಲ್ಲಾದರೂ ಜಪದ ಮಂತ್ರಗಳನ್ನು ಜಪಿಸಬೇಕೆಂಬ ನಿಯಮವಿದೆ, ಆಧುನಿಕ ವಿದ್ಯಾಭ್ಯಾಸದ ಫಲವಾಗಿ ಜಪದ ನಿಯಮಗಳ ಅನುಷ್ಠಾನದ ಬಗ್ಗೆ ಆಸಕ್ತಿ ಕಡಿಮೆಯಾಗುತ್ತಿದೆ.

ಉಪನಯನ ವಟುವಿನಲ್ಲಿ ಬದಲಾವಣೆಯನ್ನೂ, ಸ್ವಲ್ಪ ಮಟ್ಟಿನ ಜವಾಬ್ದಾರಿಯನ್ನು, ಬದುಕಿನಲ್ಲಿ ಶಿಸ್ತನ್ನೂ ತರುತ್ತದೆ. ಉಪನಯನದ ಅನಂತರದ ದಿನಗಳಲ್ಲಿ ವಟುವು ಕೆಲವು ವಿಧಿ-ನಿಷೇದಗಳನ್ನು ಪಾಲಿಸಬೇಕಾಗುತ್ತದೆ. ಅವು ಹೀಗಿವೆ.

1. ತಂಗಳನ್ನ ನಿಷೇಧ
2. ಬೆಳಿಗ್ಗೆ ಸ್ನಾನ ಮಾಡಿ ಜಪ ಮಾಡಿದ ಅನಂತರವೇ ತಿಂಡಿ ತೆಗೆದುಕೊಳ್ಳಬೇಕು.
3. ನಿಂತುಕೊಂಡು ಮೂತ್ರ ಮಾಡಬಾರದು.
4. ನಾಯಿಗೆ ಕಲ್ಲು ಹೊಡೆಯಬಾರದು.
5. ಶೌಚದ ಸಂದರ್ಭದಲ್ಲಿ ಜನಿವಾರವನ್ನು ಕೊರಳಿಗೆ ಹಾರ ಹಾಕಿದಂತೆ ಇಳಿಬಿಡಬೇಕು.
6. ಮರ ಹತ್ತಬಾರದು.
7. ಕೌಪೀನ ಕಡ್ಡಾಯವಾಗಿ ಧರಿಸಬೇಕು.
8. ಊಟ ಮಾಡುವಾಗ ಮಾತಾಡಬಾರದು.
9. ಎಡದಕೈಯ ಉಂಗುರ ಬೆರಳನ್ನು ಎಲೆಗೆ ತಾಗಿಸಿಕೊಂಡಿರಬೇಕು.

ಹೀಗೆ ಉಪನಯನದ ವಟು ಒಂದು ಬಗೆಯ ಶಿಸ್ತಿಗೆ ಒಳಪಡುವುದರಿಂದ ಉಪನಯನ ಮಾಡಿದರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಶಿವಳ್ಳಿಯವರಲ್ಲಿ ಇದೆ. ಒಂದು ಬಗೆಯ ಮಾನಸಿಕ ಬೆಳವಣಿಗೆಗೆ ಕಾರಣವಾಗಬಲ್ಲ ಉಪನಯನ ಸಂಸ್ಕಾರದಂತಹ ಆಚರಣೆ ವ್ಯಕ್ತಿಗತ ಆಚರಣೆಯಾದರೂ ಮಹತ್ವ ಪಡೆಯುತ್ತದೆ. ಈ ಆಚರಣೆ ಪುರೋಹಿತನಿಗೆ ವಟುವಿನ ಮೇಲೆ ಹಿಡಿತ ಸಾಧಿಸುವ ಅವಕಾಶವೂ ಆಗಿರುತ್ತದೆ.

4.12 ಮಹಾನಾಮ್ನಿ, ಮಹಾವ್ರತ, ಉಪನಿಷತ್ ವ್ರತ:

1. ಬ್ರಹ್ಮಚಾರಿಗೆ 13ನೇ ವರ್ಷದಲ್ಲಿ ಮಹಾನಾಮ್ನೀವ್ರತ
   14ನೇ ವರ್ಷದಲ್ಲಿ ಮಹಾವ್ರತ
   15ನೇ ವರ್ಷದಲ್ಲಿ ಉಪನಿಷದ್ ವ್ರತ

4.13 ಕೇಶಾಂತ

ಕೇಶಾಂತ ಎಂದರೆ ಕೂದಲುಗಳನ್ನು ತೆಗೆಯುವುದು ಎಂದರ್ಥ. ಬ್ರಹ್ಮಚಾರಿಯಾಗಿ ಗುರುಕುಲಕ್ಕೆ ಬಂದ ವಟುವಿಗೆ ಕಾಲಕ್ಕೆ ತಕ್ಕಂತೆ ದೈಹಿಕ ಬದಲಾವಣೆಗಳಾಗುತ್ತ 15–16ನೆಯ ವಯಸ್ಸಿಗೆ ಗಡ್ಡ ಮೀಸೆಗಳೂ ಬೆಳೆಯುತ್ತವೆ. ಕೂದಲು, ಉಗುರು ಮುಂತಾದವು ದೇಹದ ಮೃತ ಜೀವಕೋಶಗಳಿಂದ ರೂಪುಗೊಂಡ ಬಾಹ್ಯಕರಣಗಳು. ಪ್ರಾಣಿಗಳಂತೆ ಅವನ್ನು ಬಳಸದ ಕಾರಣ ಬೆಳಯುವ ಈ ದೈಹಿಕ ಕಲ್ಮಷವನ್ನು ಸಕ್ರಮವಾಗಿ ಕಾಲಕಾಲಕ್ಕೆ ನಿವಾರಿಸಬೇಕು. ಅದು ದೇಹ ಶೃಂಗಾರದ ಸಾಧನ ಎಂಬ ಭಾವನೆ ವಟುವಿಗೆ ಬರಬಾರದು ಎಂಬ ಕಾರಣದಿಂದ ಕೇಶಕರ್ತನವನ್ನು ನಿರ್ಬಧಿಸಲಾಗಿರುತ್ತಿತ್ತು. ಬ್ರಹ್ಮಚಾರಿಗೆ ವಿಧಿ ಪೂರ್ವಕವಾಗಿ ಗಡ್ಡ, ಮೀಸೆ, ಕಂಕುಳ ಕೂದಲು, ತಲೆ ಕೂದಲು, ಉಗುರು ಮುಂತಾದವುಗಳ ಅನಗತ್ಯ ಭಾಗದ ನಿವಾರಣೆಗೆ ಅನುಮತಿ ನೀಡುವುದೇ 'ಕೇಶಾಂತ' ಸಂಸ್ಕಾರ. ಗುರುಕುಲ ವಾಸದ ನಂತರ ಅವನು ಮತ್ತೆ ಲೌಕಿಕ ಪ್ರಪಂಚಕ್ಕೆ ಹಿಂದಿರುಗಿದಾಗ ಆ ನಿಯಮಗಳನ್ನು ಅಂತ್ಯಗೊಳಿಸುವ ದೃಷ್ಟಿಯಿಂದ ಆಚರಣೆಯ ಮೂಲಕ ಅವನ ದೇಹ ಶೃಂಗಾರಕ್ಕೆ ಅನುಮತಿ ನೀಡಲಾಗುತ್ತಿತ್ತು. ಕೇಶಾಂತವು ಒಂದು ಪ್ರಧಾನ ಸಂಸ್ಕಾರ.

4.14 ಸಮಾವರ್ತನ

ಭಾಷಾಶಾಸ್ತ್ರದ ಪ್ರಕಾರ 'ಸಮಾವರ್ತ'ನ ಎಂದರೆ ಸಕ್ರಮವಾಗಿ ಹಿಂದಿರುಗುವುದು ಎಂದರ್ಥ. '8ನೇ ವಯಸ್ಸಿನಲ್ಲಿ ಬ್ರಹ್ಮೋಪದೇಶ ಪಡೆದು ವಿದ್ಯಾಭ್ಯಾಸಕ್ಕಾಗಿ ಗುರುವಿನ ಬಳಿಗೆ ಹೋಗಿ ವಟುವು ಬ್ರಹ್ಮಚಾರಿಯಾಗಿ ಅಲ್ಲಿ ಸುಮಾರು 12 ವರ್ಷ ವಿದ್ಯಾಭ್ಯಾಸ ಮಾಡಿ, ಲೌಕಿಕ ಜೀವನಕ್ಕೆ ವಿಧಿಪೂರ್ವಕವಾಗಿ ಹಿಂದಿರುಗುವ ಪ್ರಕ್ರೀಯೆಯೇ 'ಸಮಾವರ್ತನ'[1]. ಮಿದುಳಿನ ಗ್ರಹಣ ಶಕ್ತಿಯು ಪ್ರಜ್ವಲವಾಗಿರುವ ಅವಧಿಯಲ್ಲಿ ವಟುವು ವಿದ್ಯಾಭ್ಯಾಸ ಮಾಡಿ ಯುವಕನಾಗಿರುವ ಅವನಿಂದ ಪ್ರಕೃತಿಯು ಸೃಷ್ಟಿಯನ್ನು ಮುಂದುವರಿಸುವ ಗುರುತರ ಕಾರ್ಯವನ್ನೂ ಸಮಾಜವು ಲೌಕಿಕ ಕಾರ್ಯಗಳನ್ನೂ ಅಪೇಕ್ಷಿಸುತ್ತದೆ, ಜೊತೆಗೆ ತಣಿಸಬೇಕೆಂದೂ ನಿರೀಕ್ಷಿಸುತ್ತದೆ. ಈ ಎಲ್ಲ ಮಹತ್ತರ ಹೊಣೆಗಾರಿಕೆಗಳನ್ನು ಸರಿದೂಗಿಸುವ ನಿಮಿತ್ತವಾಗಿ ಬ್ರಹ್ಮಚರ್ಯ ಮತ್ತು ಸನ್ಯಾಸಗಳ ನಡುವೆ ಗೃಹಸ್ಥಾಶ್ರಮವು ವಿಧಿಸಲ್ಪಟ್ಟಿದೆ. ಗೃಹಸ್ಥಾಶ್ರಮದ ಮೂಲಕ ಲೌಕಿಕ ಜೀವನಕ್ಕೆ ಹಿಂದಿರುಗುವುದು ಅಗತ್ಯ. ಬ್ರಹ್ಮಚರ್ಯದಿಂದ ಲೌಕಿಕಕ್ಕೂ, ಆಚಾರ್ಯರ ಬಳಿಯಿಂದ ಕೌಟುಂಬಿಕ ಜೀವನಕ್ಕೂ ಮತ್ತೆ ಸಕ್ರಮವಾಗಿ ಹಿಂದಿರುಗುವುದು ಎಂದು ಸಮಾವರ್ತನ ಪದದ ಆಶಯ. ವಾಸ್ತವವಾಗಿ ಸಮಾವರ್ತನೆ ನಡೆಯಬೇಕಾದುದು ಮದುವೆಯ ಮನೆಯಲ್ಲಲ್ಲ. ಗುರುವಿನ ಮನೆಯಲ್ಲಿ. ಈಗ ವಿದ್ಯಾಭ್ಯಾಸಕ್ಕಾಗಿ ಗುರುವಿನ ಮನೆಗೆ ಹೋಗುವ ಪದ್ಧತಿ ಇಲ್ಲದ ಕಾರಣ ಮದುವೆಯ ಸಂದರ್ಭದಲ್ಲಿ 'ಸಮಾವರ್ತನ ಕ್ರಿಯೆ' ನಡೆಯುತ್ತದೆ. ಸಮಾವರ್ತನೆಯಾಗದೆ ವಿವಾಹ ಮಾಡಕೂಡದು ಎಂಬ ನಿಯಮವೂ ಇದಕ್ಕೆ ಕಾರಣ.

ಸಮಾವರ್ತನ ದಿವಸ ಅತ್ತಿಯ ಕಡ್ಡಿಯಂಥಹ ವನಸ್ಪತಿಗಳಿಂದ ಹಲ್ಲುಜ್ಜುವಿಕೆ,

---

[1]ಡಾ. ಶ್ರೀ ವತ್ಸ ಎಸ್. ವಟಿ –ಸಂಸ್ಕೃತಿ ಸಂಪದ, ಪುಟ 134

ಬಾಯಿ ಮುಕ್ಕಳಿಸುವಿಕೆ ಮಾಡಿಸಿ ಸ್ನಾನ. 'ಈ ಸ್ನಾನಕ್ಕೆ 'ಸಮಾವರ್ತನ ಸ್ನಾನ' ಎನ್ನುತ್ತಾರೆ. ಬ್ರಹ್ಮಚಾರಿಗೆ ದೇಹಾಲಂಕಾರ ನಿಷೇದ, ಸಮಾವರ್ತನದ ಕಾಲದಲ್ಲಿ ಮತ್ತೆ ಅವನಿಗೆ ಅಧಿಕಾರ ನೀಡಲಾಗುತ್ತದೆ. ತಲೆಗೆ ಹೂಮಾಲೆ, ರುಮಾಲು, ಚಿನ್ನದ ಆಭರಣ ಧರಿಸುತ್ತಾರೆ.

ಸಮಾವರ್ತನದ ಅಂಗವಾಗಿ ಉತ್ತರ ದಿಕ್ಕಿಗೆ ಏಳು ಹೆಜ್ಜೆಗಳಷ್ಟು ನಡೆಯುವ ಸಂಪ್ರದಾಯವೂ ಇದೆ. ಇದು ವಿದ್ಯಾಭ್ಯಾಸ ಮುಗಿಸಿ ಲೋಕಾನುಭವಕ್ಕಾಗಿ ಕಾಶಿಯಂಥ ವಿದ್ಯಾ ನಗರಿಗಳಿಗೆ ಹೋಗಿ ಅಲ್ಲಿ ತನ್ನ ವಿದ್ಯೆಯನ್ನು ಒರೆಗೆ ಹಚ್ಚಿಕೊಂಡು ಬರುವ ಕ್ರಮದ ಸಂಕೇತ. ಇಂದಿನ ವಿವಾಹಗಳ ಕಾಶೀಯಾತ್ರೆಯೂ ಇಂಥ ಪಳೆಯುಳಿಕೆಗಳಲ್ಲಿ ಒಂದು.

4.15 ವಿವಾಹ

ಪ್ರಪಂಚದ ಎಲ್ಲಾ ಜಾತಿ, ಮತ, ದೇಶ ಮತ್ತು ಧರ್ಮಗಳಲ್ಲಿ ಸರ್ವಮಾನ್ಯವಾಗಿರುವ ಹಾಗೂ ಸಮಾಜದ ಮೂಲ ಘಟಕವಾದ ಕುಟುಂಬದ ನಿರ್ಮಾಣಕ್ಕೆ ಕಾರಣವಾಗಿರುವ ವಿವಾಹದ ಸ್ಥಾನ ಅನ್ಯತಮವಾದುದು. ಷೋಡಶ ಸಂಸ್ಕಾರಗಳಲ್ಲಿ ವಿವಾಹ ಸಂಸ್ಕಾರಕ್ಕೆ ಅಗ್ರಸ್ಥಾನ. ಸಮಾಜದಲ್ಲಿ ಸರ್ವೋಚ್ಚಪೀಠ. ಆಶ್ರಮಗಳಲ್ಲಿ ಸರ್ವಶ್ರೇಷ್ಠ ಎಂಬ ಪ್ರಶಂಸೆಗೂ, ಋಷಿಗಳ ಧನ್ಯೋ ಗೃಹಸ್ಥಾಶ್ರಮಃ ಎಂಬ ಉದ್ಗಾರಕ್ಕೂ ಅದು ಪಾತ್ರವಾಗಿದೆ.

ಭಾರತೀಯ ದೃಷ್ಟಿಯಲ್ಲಿ ವಿಶಿಷ್ಟ ಧಾರ್ಮಿಕ ಸಂಸ್ಕಾರಗಳ ಮೂಲಕ ಹೆಣ್ಣನ್ನು ಸಾಮಾಜಿಕ ಮನ್ನಣೆಯೊಂದಿಗೆ ಗಂಡನ ಮನೆಗೆ ಕೊಂಡೆಯ್ಯುವ ವಿಧಿಯೇ ವಿವಾಹ. ವಿವಾಹ ಒಂದು ಪೂರ್ವಬದ್ಧ ಘಟನೆ. "ಋಣಾನುಬಂಧ' ರೂಪೇಣ ಪಶು, ಪತ್ನಿ, ಸುತಾಲಯಃ. ಅವರವರ ಯೋಗ ಭಾಗ್ಯಗಳಂತೆ ಅವರವರಿಗೆ ಪಶು, ಪತ್ನಿ, ಸುತ ಮತ್ತು ಆಲಯಗಳ ಪ್ರಾಪ್ತಿ" ಎಂಬ ನಂಬಿಕೆ ಜನರಲ್ಲಿದೆ.

ಧರ್ಮಪ್ರಜಾ ಸಂಪತ್ತಿ: ಪ್ರಯೋಜನಂ ವಿವಾಹಸ್ಯ!

ಧರ್ಮಶ್ರದ್ಧೆಯುಳ್ಳ ಉತ್ತಮ ಸಂತಾನ ಪ್ರಾಪ್ತಿಯೇ ವಿವಾಹದ ಮುಖ್ಯ ಉದ್ದೇಶ.

ಋಗ್ವೇದದಲ್ಲಿಯ ಎಲೈ ವಧುವೇ ನೀನು ವೀರನಾದ ಪುತ್ರರನ್ನು ಪ್ರಸವಿಸು, ಹೇಇಂದ್ರ, ನೀನು ಈವಧುವನ್ನು ಪುತ್ರವತಿಯನ್ನಾಗಿಯೂ ಸೌಭಾಗ್ಯವತಿಯನ್ನಾಗಿಯೂ ಮಾಡು. ಹೇ ಅಗ್ನಿ ನೀನು ಕೊಟ್ಟಿರುವ ಸತ್ಸಂತಾನದಿಂದ ನೀನು ಅವಿಚ್ಛಿನ್ನ ಸಂತತಿಯುಳ್ಳವನಾಗಿ ಅವಿನಾಶಿತ್ವವನ್ನು ಪಡೆಯುವೆ, ಎನ್ನುವ ಮಾತು ಉತ್ತಮ ಸಂತಾನವನ್ನು ಪಡೆಯುವುದೇ ವಿವಾಹದ ಪ್ರಧಾನ ಉದ್ದೇಶವೆಂದು ಸ್ಪಷ್ಟ. ಪ್ರತಿಯೊಬ್ಬನೂ, ಪ್ರತಿಯೊಬ್ಬಳೂ ಮದುವೆಯಾಗಬೇಕು, ಅದು ಧರ್ಮ. ಕನ್ಯೆಯು ಋತುಮತಿಯಾಗಿ ಪ್ರಾಯಕ್ಕೆ ಬಂದ ಮೂರು ವರ್ಷಗಳಲ್ಲಿ ಅವಳ ತಂದೆಯು ಅವಳಿಗೆ ತಕ್ಕವರನನ್ನು ಹುಡುಕಬೇಕು. ಅದಾಗದಿದ್ದರೆ ಕನ್ಯೆಯೇ ತನಗೆ ಸೂಕ್ತ ವರನನ್ನು

ಆರಿಸಿಕೊಳ್ಳಬಹುದು. ಆದರೆ ತಂದೆಯು ಅಯೋಗ್ಯನೊಬ್ಬನಿಗೆ ವಿವಾಹ ಮಾಡಿಕೊಡುವುದಕ್ಕಿಂತ ಕನ್ಯೆಯು ಅವಿವಾಹಿತಳಾಗಿಯೇ ಉಳಿಯುವುದು. ಶ್ರೇಯಸ್ಕರ[1].

ಗೃಹಸ್ಥಾಶ್ರಮವನ್ನು ಪ್ರವೇಶಿಸುವಾಗ ಆಗಬೇಕಾದ ಸಂಸ್ಕಾರವೇ ವಿವಾಹ. ಪತ್ನಿ ಪುರುಷನ ಅರ್ಧಾಂಗಿ. ಯಜ್ಞವು ಹಿಂದೂ ಜೀವನದ ಕೇಂದ್ರ ಬಿಂದು. ಪತ್ನಿ ಇಲ್ಲದವನು ಯಜ್ಞ ಮಾಡುವಂತಿಲ್ಲ. ಧರ್ಮ, ಅರ್ಥ, ಕಾಮ– ಈ ಮೂರು ಪುರುಷಾರ್ಥಗಳಿಗೆ ಮುಖ್ಯ ಸಾಧನ ಪತ್ನಿಯೇ. ಯಾವ ಮನೆಯಲ್ಲಿ ಹೆತ್ತ ತಾಯಿಯಾಗಲಿ, ಕೈಹಿಡಿದ ಹೆಂಡತಿಯಾಗಲಿ, ಮಗಳು, ಸೊಸೆಯು ಇಲ್ಲವೋ ಅಂತಹ ಮನೆಯಲ್ಲಿ ವಾಸ ಮಾಡುವುದಕ್ಕಿಂತ ಕಾಡಿಗೆ ಹೋಗುವುದೇ ಮೇಲು ಎಂಬ ಲೋಕೋಕ್ತಿ ಇದೆ.

ವಿವಾಹ ಸಂಸ್ಕಾರವು ಇಬ್ಬರ ನಡುವಿನ ಸಂಬಂಧ ಕ್ರಿಯೆಯನ್ನು ಧರ್ಮದ ಚೌಕಟ್ಟಿಗೆ ತರುತ್ತದೆ. ಸತಿಪತಿಗಳೊಂದಾಗುವ ಈ ಧಾರ್ಮಿಕ ಸಂಸ್ಕಾರದಲ್ಲಿ ಅಗ್ನಿಯಂತೆ, ಪೋಷಕವರ್ಗ, ಸಮಾಜವು ಸಾಕ್ಷಿಯಾಗುತ್ತದೆ.

ವಿವಾಹವು ಒಂದು ಧಾರ್ಮಿಕ ಸಂಸ್ಕಾರವಾದರೂ ಇನ್ನೂ ಹಲವು ಆಯಾಮಗಳನ್ನು ಒಳಗೊಂಡಿದೆ. ಧಾರ್ಮಿಕತೆಯು ಒಂದೆಡೆ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ತನ್ನಲ್ಲಿ ಸಮಾವೇಶಗೊಳಿಸಿಕೊಂಡಿದೆಯಾದರೆ, ಇನ್ನೊಂದೆಡೆ ಮಾನವ ಶರೀರ, ಮನಸ್ಸು, ಆರೋಗ್ಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ವ್ಯವಹಾರಗಳ ನಿರ್ವಹಣೆ ಮುಂತಾದ ಜೀವನದ ಎಲ್ಲ ಮುಖಗಳನ್ನು ಒಳಗೊಂಡಿದೆ. ಈ ಕಾರಣಗಳಿಂದಲೇ ವಿವಾಹದ ನಾನಾ ಬಗೆಯ ಪದ್ಧತಿಗಳು, ರೂಢಿಗಳು, ವ್ಯವಸ್ಥೆಗಳು ಬೆಳೆದುಕೊಂಡು ಬಂದಿದೆ. ಬೇರೆ ಬೇರೆ ವರ್ಗದಲ್ಲಿ ಬೇರೆ ಬೇರೆ ರೀತಿಯಲ್ಲಿವೆ. ಅಂತೆಯೇ ಶಿವಳ್ಳಿ ಬ್ರಾಹ್ಮಣರಲ್ಲಿ ಅವರದ್ದೇ ಆದ ಪದ್ಧತಿ ಕ್ರಮಗಳು ಇರುವುದನ್ನು ಕಾಣಬಹುದು.

4.15.1 ವಿವಾಹ –ವಿಧಿಗಳು

ಸಂಸ್ಕಾರಗಳಲ್ಲಿ ವಿವಾಹ ಮಹತ್ವವನ್ನು ಪಡೆದುಕೊಂಡಿದೆ. ಬೇರೆ ಬೇರೆ ವರ್ಗ, ಜಾತಿ, ಪಂಗಡಗಳಲ್ಲಿ ಸಾಕಷ್ಟು ವೈವಿಧ್ಯವಿದೆ. ಶಿವಳ್ಳಿ ಬ್ರಾಹ್ಮಣರಲ್ಲಿ ಕಂಡು ಬರುವ ವಿವಾಹದ ಪದ್ಧತಿಗಳು ವೈಶಿಷ್ಟ್ಯ ಪೂರ್ಣವಾಗಿದೆ. ಪ್ರದೇಶದಿಂದ ಪ್ರದೇಶಕ್ಕೆ ಸ್ವಲ್ಪ ವ್ಯತ್ಯಾಸಗಳಿರುತ್ತವೆ. ಹಿಂದೆ ನಾಲ್ಕು ದಿವಸದ ಮದುವೆಯನ್ನು ಬಹಳ ವಿಜೃಂಭಣೆಯಿಂದ ಎಲ್ಲರೂ ಪಾಲ್ಗೊಳ್ಳುವುದರ ಮೂಲಕ ಸಂತೋಷ, ಉತ್ಸಾಹದಿಂದ ಕ್ರಮಬದ್ಧವಾಗಿ ಮಾಡುತ್ತಿದ್ದರು. ಕುಟುಂಬದವರು, ಊರವರು, ನೆಂಟರಿಷ್ಟರು, ಎಲ್ಲರೂ ಪಾಲ್ಗೊಳ್ಳುತ್ತಿದ್ದರು. ಈಗಿನ ಪರಿಸ್ಥಿತಿಯಲ್ಲಿ ಅದು ಒಂದು ದಿನದ ಮದುವೆಯಾಗಿ ಪರಿವರ್ತನೆಯಾಗಿದೆ. ಪದ್ಧತಿಯಲ್ಲಿ ಆಚರಣೆಯಲ್ಲಿ ಸಂಕ್ಷಿಪ್ತತೆ ಬಂದಿದೆ.

4.15.2 ನಿಶ್ಚಿತಾರ್ಥ ಅಥವಾ ವಾಗ್ದಾನ:

ವಿವಾಹ ಅಂದರೆ ವಿಶೇಷವಾಗಿ ವಹನ ಮಾಡುವುದು ಹೊರುವುದು ಎಂದು

[1] ಕೃಷ್ಣ ಭಟ್ ಪೆರ್ಲ– ಭಾರತೀಯ ವಿವಾಹ ಸಂಸ್ಕಾರ – ಪುಟ 55

ಅರ್ಥ ವೈದಿಕ ವಿವಾಹದಲ್ಲಿ ವಧೂವರರನ್ನು ಆಯ್ಕೆ ಮಾಡುವಾಗ ಅವರ ವಂಶ, ಗೋತ್ರ, ವಯಸ್ಸು, ವಿದ್ಯೆ, ಐಶ್ವರ್ಯ, ಆರೋಗ್ಯ, ವಾಸಸ್ಥಾನ, ಸ್ಥಿತಿಗತಿಗಳನ್ನು ಗಮನಿಸುತ್ತಾರೆ. ಗಂಡು ಹೆಣ್ಣುಗಳ ನಡುವೆ ಶಾರೀರಿಕ, ಮಾನಸಿಕ, ಮತ್ತು ಆಧ್ಯಾತ್ಮಿಕ ಸಾಮರಸ್ಯವಿರಬೇಕೆಂಬುದನ್ನು ನಮ್ಮ ಹಿರಿಯರು ಚೆನ್ನಾಗಿ ಮನಗಂಡಿದ್ದರು. ಶಿವಳ್ಳಿ ಬ್ರಾಹ್ಮಣರಲ್ಲಿ ಜಾತಕ ತಾಳೆ ಬರಬೇಕಾಗಿರುವುದು ಬಹಳ ಮುಖ್ಯ. ಒಂದೇ ನಕ್ಷತ್ರದವರು ಮದುವೆಯಾಗುವಂತಿಲ್ಲ, ಅಂತೆಯೇ ಒಂದೇ ಗೋತ್ರದವರು ಸಹ ಮದುವೆಯಾಗುವಂತಿಲ್ಲ. ಕಾರಣ ಕಷ್ಟಗಳು ಬಂದಾಗ ಒಟ್ಟಿಗೆ ಬರುತ್ತವೆ ಎಂಬ ನಂಬಿಕೆಯಿಂದ. ಜಾತಕ ತಾಳೆ ಹಾಕುವಾಗ ಗಂಡ-ಹೆಂಡತಿಯ ನಡುವಿನ ದಾಂಪತ್ಯ ಜೀವನ, ಸಂತತಿ, ಆರೋಗ್ಯ, ಆಯುಷ್ಯ, ಭಾಗ್ಯವನ್ನು ಗಮನಿಸುತ್ತಾರೆ. ಹೆಣ್ಣಿನಿಂದ ಅತ್ತೆ-ಮಾವ, ಇವರಿಗೂ ಏನಾದರೂ ದೋಷಗಳಿವೆಯೇ ಎಂದು ತುಲನೆ ಮಾಡುತ್ತಾರೆ. ವಾಡಿಕೆಯಂತೆ ಹುಡುಗನಿಗೆ ತಂದೆ –ತಾಯಂದಿರು ಇದ್ದರೆ ಮೂಲನಕ್ಷತ್ರದ ಹುಡುಗಿಯನ್ನು ಸೊಸೆಯಾಗಿ ತರುವುದಕ್ಕೆ ಹಿಂದೇಟು ಹಾಕುತ್ತಾರೆ. ಅತ್ತೆ-ಮಾವರಿಲ್ಲದ ಮನೆಗೆ ಮದುವೆ ಮಾಡಿಕೊಡುವ ಪದ್ಧತಿ ಬಳಕೆಯಲ್ಲಿದೆ. ಹುಡುಗಿಯ ಜಾತಕದಲ್ಲಿ ಷಷ್ಟ-ಅಷ್ಟಮದಲ್ಲಿ ಕುಜಗಳಿದ್ದರೆ, ಹುಡುಗನಲ್ಲಿಯೂ ಅಂತಹ ಗ್ರಹಗತಿ ಇರುವುದನ್ನೇ ಹುಡುಕಿ ಮದುವೆ ಮಾಡುವ ಪದ್ಧತಿ ಹೆಚ್ಚು. ಒಟ್ಟಿನಲ್ಲಿ ಹುಡುಗ ಹುಡುಗಿಯ ಜಾತಕ ತಾಳೆ ಹೊಂದಿದ ಮೇಲೆ ಉಭಯ ಕಡೆಯವರಿಗೆ ಎಲ್ಲಾ ರೀತಿಯಲ್ಲಿ ಸಮ್ಮತವಾದರೆ ನಿಶ್ಚಿತಾರ್ಥದ ವಿಧಿ ನಡೆಯುತ್ತದೆ.

ಗಂಡು ಹೆಣ್ಣುಗಳ ಮದುವೆಯನ್ನು ನಿಶ್ಚಯಿಸುವ ಸಮಾರಂಭವನ್ನು 'ನಿಶ್ಚಯ' ಎಂದು ಕರೆಯುತ್ತಾರೆ. ಕುಟುಂಬದ ಹಿರಿಯರು ಊರಿನ ಹಿರಿಯರು ಈ ಸಮಾರಂಭದಲ್ಲಿ ಉಪಸ್ಥಿತರಿರುತ್ತಾರೆ. ಮದುವೆಯ ಆಮಂತ್ರಣ ಪತ್ರಿಕೆಯ ಕರಡನ್ನು ತಯಾರಿಸುವ ಜವಾಬ್ದಾರಿ ಕುಲಪುರೋಹಿತರದ್ದಾಗಿರುತ್ತದೆ. ಇದು ಹೆಣ್ಣಿನಮನೆಯಲ್ಲಿ ನಡೆಯುವ ಕಾರ್ಯಕ್ರಮ. ಹಿಂದೆ ಮದುವೆಯ ಗಂಡು ಇದರಲ್ಲಿ ಭಾಗವಹಿಸುತ್ತಿರಲಿಲ್ಲ. ಈಗ ಭಾಗವಹಿಸುತ್ತಾನೆ. ಮದುವೆ ಮುಹೂರ್ತ, ಮದುವೆ ನಡೆಯುವ ಸ್ಥಳ, ಒಡವೆ, ವರದಕ್ಷಿಣೆ ಬಗ್ಗೆ ಮಾತುಕತೆ ನಡೆಯುತ್ತದೆ. ವಧುವಿಗೆ ನಿಶ್ಚಿತಾರ್ಥದ ಶುಭ ಸೂಚಕವಾಗಿ ಗಂಡಿನ ಕಡೆಯುವರು ಹೂವು, ಸೀರೆ, ಉಂಗುರ ನೀಡುವ ಕಾರ್ಯಕ್ರಮವಿರುತ್ತದೆ. 'ನಿಶ್ಚಯ' ಎನ್ನುವುದು ಮದುವೆಯನ್ನು ಗಟ್ಟಿಗೊಳಿಸುವ ದೃಢಪಡಿಸುವ ಕಾರ್ಯಕ್ರಮ.

ಕೆಲವು ಕಡೆಗಳಲ್ಲಿ ಹುಡುಗನ ತಂದೆಯು ಹುಡುಗಿಯ ತಂದೆಯಲ್ಲಿ ತನ್ನ ಮಗನಿಗಾಗಿ ಮಗಳನ್ನು ಕೊಡಬೇಕು ಎಂದು ಕೇಳುವ ಮತ್ತು ವಧುವಿನ ತಂದೆ 'ಮಾತಿನಿಂದ ಕೊಟ್ಟಿದ್ದೇನೆ' ಎಂದು ಹೇಳುವ ರೂಡಿಯಿದೆ. ಆಗ ಕುಟುಂಬದವರು ಹತ್ತಿರದ ಸಂಬಂಧಿಕರು ಒಟ್ಟಿಗಿರುತ್ತಾರೆ. ಮದುವೆಯ ಸಂದರ್ಭದಲ್ಲಿ ಯಾರ್ಯಾರ ಆಶೋತ್ತರಗಳು ಏನೆಂದು ಇರುತ್ತವೆ ಎಂದರೆ

ಕನ್ಯಾವರಯತೇ ರೂಪಮ್

ಮಾತಾವಿತ್ತಂ ಪಿತಾಶ್ರುತಮ್

ಬಾಂಧವಾಃ ಕುಲಮಿಚ್ಛಂತಿ

ಮೃಷ್ಟಾನ್ನಮಿತರೇ ಜನಾಃ

ವಧುವಿಗೆ ವರನ ರೂಪಮೆಚ್ಚು, ತಾಯಿಗೆ ಅವನ ಸೌಕರ್ಯದ ಮೇಲೆ ದೃಷ್ಟಿ, ತಂದೆ ಬಯಸುವುದು ವಿದ್ಯೆಯನ್ನು, ಬಂಧುಗಳಿಗೆ ಮನೆತನ ಮುಖ್ಯ, ಮಿಕ್ಕರಿಗೆಲ್ಲ ಅಂದಿನ ಊಟದ ಸ್ವಾದಿಷ್ಟ್ಯ

ಉಡುಪಿ ಕಡೆಗಳಲ್ಲಿ ಹೆಚ್ಚಾಗಿ ಸಂಜೆಯ ಹೊತ್ತು ನಿಶ್ಚಿತಾರ್ಥದ ಕಾರ್ಯಕ್ರಮವನ್ನು ಇಟ್ಟುಕೊಳ್ಳುತ್ತಾರೆ. ಉಳಿದ ಕಡೆಗಳಲ್ಲಿ ಮಧ್ಯಾಹ್ನದ ಹೊತ್ತು ಇಟ್ಟುಕೊಳ್ಳುತ್ತಾರೆ. ಬಹುಶಃ ಅನುಕೂಲಕ್ಕಾಗಿ ಈ ಪದ್ಧತಿಯಿದೆ.

4.15.3 ನಾಂದಿ:

ಮದುವೆಯ ಶುಭ ಮುಹೂರ್ತಕ್ಕೆ ಅಡ್ಡಿ ಬರದಂತೆ ಗಂಡಿನ ಮತ್ತು ಹೆಣ್ಣಿನ ಕಡೆಯವರು ಪ್ರತ್ಯೇಕವಾಗಿ 'ನಾಂದಿ' ಎಂಬ ವಿಧಿಯನ್ನು ಆಚರಿಸುತ್ತಾರೆ. ಒಂದು ವೇಳೆ ಆಶೌಚ ಬಂದರೆ ಗಂಡು ಹೆಣ್ಣಿಗೆ ಆಶೌಚ ಬರುವುದಿಲ್ಲ. ಮದುವೆಯ ಕಾರ್ಯಕ್ರಮವನ್ನು ನಿಲ್ಲಿಸುವ ಅಗತ್ಯವಿರುವುದಿಲ್ಲ. ನಾಂದಿ ಇಟ್ಟ ಮೇಲೆ ಗಂಡು ಮತ್ತು ಹೆಣ್ಣು ಮನೆಯಿಂದ ಹೊರಗೆ ಹೋಗುವಂತಿಲ್ಲ. ಅರಶಿನ ಮತ್ತು ಎಣ್ಣೆ ಬೆರಸಿ ಸ್ನಾನಗೈದು ವಧೂವರರಿಬ್ಬರೂ ಲಕ್ಷ್ಮೀನಾರಾಯಣ ಸ್ವರೂಪರು ಆಗಿರುವುದರಿಂದ ಸೂತಕದ ಅಪವಿತ್ರತೆ ಅವರಿಗೆ ಇಲ್ಲ.

ಮದುವೆಗೆ ಎಂಟು ದಿನ ಮೊದಲು 'ನಾಂದಿ' ಕ್ರಿಯೆ ಹೆಚ್ಚಾಗಿ ನಡೆಯುತ್ತದೆ. ಇದು ವಿವಾಹ ಮಂಗಲೋತ್ಸವದ ಮೊದಲ ಹೆಜ್ಜೆ. ಪುರೋಹಿತರು ಕೆಂಪು ಪಟ್ಟೆನೂಲಿನಲ್ಲಿ ಕಟ್ಟಿದ ಮಂತ್ರ ಪೂತವಾದ ಅರಶಿನದ ತುಂಡನ್ನು ವರನ ಕೈಗೆ ಕಟ್ಟುವರು. ಅದೇ ರೀತಿ ವಧುವಿನ ಮನೆಯಲ್ಲಿ ವಧುವಿನ ಕೈಗೂ ಕಟ್ಟುವರು. ಅನಂತರ ಅವರಿಗೆ ಸೂತಕ ಭಾದಿಸುವುದಿಲ್ಲ. ಸಾಮಾನ್ಯ ಜನರಿಗಿಂತ ಅವರು ಭಿನ್ನರು, ವಧೂವರರು ಪಾರ್ವತಿಪರಮೇಶ್ವರರು ಅಥವಾ ಲಕ್ಷ್ಮೀನಾರಾಯಣರು ಎಂಬ ಸಾಂಕೇತಿಕ ಅರ್ಥವನ್ನು ಸೂಚ್ಯನೆಲೆಯಲ್ಲಿ ಮತ್ತು ಆರೋಗ್ಯಕ್ಕೆ ಧಕ್ಕೆ ಬಾರದಿರಲಿ ಎಂಬ ಅರ್ಥವನ್ನು ವಾಚ್ಯ ನೆಲೆಯಲ್ಲಿ ಸಂಕೇತಿಸುತ್ತದೆ. 'ವಧೂವರರು' ವಿವಾಹವೆಂಬ ಸಮಾರಂಭದ ಕೇಂದ್ರ ಬಿಂದು ಮತ್ತು ಸಾಮಾನ್ಯರಿಗಿಂತ ಭಿನ್ನರು ಎಂಬುದನ್ನು ಪ್ರತ್ಯೇಕಿಸಿ ತೋರಿಸುವ ಪ್ರಕ್ರಿಯೆ ಇದಾಗಿದೆ. ಅವರನ್ನು ಮಾನಸಿಕವಾಗಿ ಸಿದ್ಧಗೊಳಿಸುವ ಕಾರ್ಯವೂ ಇಲ್ಲಿ ಆಗುತ್ತದೆ. ವಿವಾಹವಾಗುವ ತೀರ್ಮಾನಕ್ಕೆ ತಾವು ವಚನ ಬದ್ಧರಾಗಿದ್ದೇವೆ. ಕಟಿ ಬದ್ಧರಾಗಿದ್ದೇವೆ ಎಂಬ ಬದ್ಧತೆಯನ್ನು ಬಾಹ್ಯ ಸಂಕೇತವೊಂದರ ಮೂಲಕ ಇದು ಸೂಚಿಸುತ್ತದೆ.

ವಿವಾಹ ಪೂರ್ವದ ಕ್ರಿಯಾ ಭಾಗವಾಗಿ ವಧುವಿಗೆ ಆಕೆಯ ಮನೆಯಲ್ಲಿ ಮಂಗಲ ಸ್ನಾನದ ಏರ್ಪಾಡು ಆಗುತ್ತದೆ. ಮೈಗೆ ಎಣ್ಣೆ ಹಚ್ಚಿ ಕಲಶಸ್ನಾನ, ಅರಶಿನ ಪೂಸುವುದು ಇತ್ಯಾದಿ ಕ್ರಿಯೆಗಳು ನಡೆಯುತ್ತವೆ. ಇನ್ನೊಂದೆಡೆ ವರನ ಮನೆಯಲ್ಲಿ ವರನಿಗೆ 'ಎಣ್ಣೆ ಹನಿಸುವುದು' ಮತ್ತು ಮಂಗಲ ಕಲಶಸ್ನಾನ ಏರ್ಪಡುತ್ತದೆ. 'ವಧು' ವನ್ನು ಹೆಣ್ಣು ಎನ್ನುವಂತಿಲ್ಲ ಮತ್ತು ವರನನ್ನು ಗಂಡು ಎನ್ನುವಂತಿಲ್ಲ. ಹೀಗೆ ಶಾಬ್ಧಿಕ ಸಂಭೋಧನೆಯಲ್ಲಿಯೂ ಉಪಚಾರದಿ ಕ್ರಿಯೆಗಳ ಮೂಲಕವೂ ಅವರನ್ನು ವ್ಯಕ್ತಿ ಮಟ್ಟದಿಂದ ಉನ್ನತೀಕರಿಸಲಾಗುತ್ತದೆ. ವರನಿಗೆ ಚೌಲ, ಕ್ಷೌರಾದಿಗಳನ್ನು ಮಾಡಿ, ಕುತ್ತಿಗೆಗೆ

ಚಿನ್ನದ ಸರ ತೊಡಿಸಿ ವ್ಯಕ್ತಿ ನೆಲೆಯಿಂದ ಮೇಲ್ಮಟ್ಟಕ್ಕೆ ಏರಿಸಲಾಗುವುದು. ಅನಂತರ ವರನ ಮನೆಯಲ್ಲಿ ಸಮಾವರ್ತನ ಎಂಬ ವಿಧಿ ಏರ್ಪಡುವುದು.

4.15.4 ಸಮಾವರ್ತನ:

ಈ ವಿಧಿಯು ಸ್ನಾತಕನಾದ (ಗುರುಕುಲದಲ್ಲಿ ಕಠಿಣ ಜೀವನ ನಡೆಸಿ ವಿದ್ಯಾಪಾರಂಗತನಾದ) ಬ್ರಹ್ಮಚಾರಿಯು ಗೃಹಸ್ಥಾಶ್ರಮ ಸ್ವೀಕರಿಸಲು ಮಾಡುವ ಒಂದು ವೈದಿಕ ಸಂಸ್ಕಾರವಾಗಿದೆ. ಬ್ರಹ್ಮಚಾರಿಯು ಗೃಹಸ್ಥಾಶ್ರಮವನ್ನು ಉಪೇಕ್ಷಿಸಿ ನೇರವಾಗಿ ಸನ್ಯಾಸಶ್ರಮ ಸ್ವೀಕರಿಸಲು ಕಾಶಿಗೆ ಹೊರಡುತ್ತಾನೆ. ಆಗ ವರನ ಸೋದರ ಮಾವನು ಎದುರಿನಿಂದ ಬಂದು ವರನನ್ನು ತಡೆಯುತ್ತಾರೆ. ಗೃಹಸ್ಥಾಶ್ರಮ ಮುಗಿಸಿ ಪತ್ನಿ ಸಮೇತನಾಗಿ ವೈರಾಗ್ಯ ತಾಳಿ ಅನಂತರ ಕಾಶಿಗೆ ಹೋಗಬಹುದೆಂದೂ ಸೂಚಿಸುತ್ತಾನೆ. ಅಕ್ಕಿ ಬೇಳೆ ಮೊದಲಾದವುಗಳನ್ನು ಗಂಟುಕಟ್ಟಿ, ಒಂದು ಕೋಲಿಗೆ ಸಿಕ್ಕಿಸಿ ಆ ಕೋಲನ್ನು ಹೆಗಲಿಗೇರಿಸಿಕೊಂಡು, ಹಾವುಗೆ ಮೆಟ್ಟಿ, ಕೊರಳಿಗೆ ಸರ ಹಾಕಿ, ಕೊಡೆ ಹಿಡಿದು ವೈರಾಗ್ಯದಿಂದ ಕಾಶಿಯತ್ತ ಪಯಣ ಹೊರಟವನು ಸೋದರ ಮಾವನ ಹಿತೋಪದೇಶವನ್ನು ಕೇಳಿ ಆತನ ಮಾತಿಗೆ ಸಮ್ಮತಿಸಿ ಹಿಂದೆ ಬರುತ್ತಾನೆ. ಮುತ್ತೈದೆಯರು ಅವನನ್ನು ಕುಳ್ಳಿರಿಸಿ ಆರತಿ ಬೆಳಗಿಸಿ ಉಪಚರಿಸುತ್ತಾರೆ.

ವಿವಾಹಕ್ಕಾಗಿ ಮದುಮಗನು ವಧುವಿನ ಮನೆಗೆ ಬ್ಯಾಂಡು ವಾಲಗದ ದಿಬ್ಬಣದೊಂದಿಗೆ ಆಗಮಿಸುತ್ತಾನೆ. (ಈಗ ಕಲ್ಯಾಣ ಮಂಟಪಕ್ಕೆ) ತಲೆಗೆ ವಿಶಿಷ್ಟವಾದ ಮುಂಡಾಸು ಮತ್ತು ಅದರ ಮೇಲಿನಿಂದ ಪ್ರಾದೇಶಿಕವಾಗಿ ಬಾಸಿಂಗ ಕಟ್ಟಲಾಗಿರುತ್ತದೆ. ಅವನನ್ನು ಕೊಡೆ ಹಿಡಿದು ಸೋದರ ಮಾವ, ಸಹೋದರ, ಸಹೋದರಿಯರು, ಭಾವಂದಿರು, ಅಪ್ಪ, ಅಮ್ಮ, ಪುರೋಹಿತರು ಮೊದಲಾಗಿ ಆಪ್ತೇಷ್ಟರು ಮಂಟಪದ ಮುಂಭಾಗಕ್ಕೆ ಕರೆತರುತ್ತಾರೆ. ವಧುವಿನ ಕಡೆಯವರು ಸಕಲ ಮರ್ಯಾದೆಯೊಂದಿಗೆ ಬರಮಾಡಿಕೊಳ್ಳುತ್ತಾರೆ. ಅನಂತರ ವರನಿಗೆ ಮದುಪರ್ಕಗಳನ್ನು ಹುಡುಗಿಯ ಕಡೆಯವರು ಕೊಡುವ ಕಾರ್ಯಕ್ರಮ ನಡೆಯುತ್ತದೆ.

ವಿವಾಹ ಮಂಟಪವನ್ನು ತಳಿರು ತೋರಣ, ಎಳೆಯ ಕಂದುಗಳಿಂದ ಸಿಂಗರಿಸಲಾಗುತ್ತದೆ. ಧಾರಾ ಮಂಟಪವನ್ನು ವಿವಾಹ ಮಂಟಪದ ಕೇಂದ್ರ ಸ್ಥಾನದಲ್ಲಿ ತುಸು ಎತ್ತರದ ಜಾಗದಲ್ಲಿ ಎಲ್ಲರಿಗೂ ಕಾಣುವಂತೆ ನಿರ್ಮಿಸಲಾಗುತ್ತದೆ. ಧಾರಾ ಮಂಟಪಕ್ಕೆ ಮೇಲ್ಕಾಪುಕಟ್ಟಿ ಅದರ ಕೇಂದ್ರ ಸ್ಥಾನದಲ್ಲಿ ಫಲ, ಅಡಿಕೆ ಮತ್ತು ವೀಳ್ಯದೆಲೆಗಳನ್ನು ಕಟ್ಟಿ ನೇತಾಡಿಸಲಾಗುತ್ತದೆ. ಸುತ್ತಲೂ ರಂಗೋಲಿ ಬಿಡಿಸುತ್ತಾರೆ. ಹೀಗೆ ಉನ್ನತೀಕರಿಸಲಾಗುತ್ತದೆ. ವಧುವನ್ನು ವಿವಾಹ ಮಂಟಪಕ್ಕೆ ಕರೆತರುವ ಮುನ್ನ ಧಾರೆಸೀರೆ, ರವಿಕೆಕಣ, ಚಿನ್ನಾಭರಣಗಳನ್ನು ಹರಿವಾಣದಲ್ಲಿಟ್ಟು ವಧುವಿಗೆ ನೀಡುವುದು ಶಿವಳ್ಳಿಯವರಲ್ಲಿ ವಿಶೇಷವಾಗಿ ಕಂಡು ಬರುವ ಸಂಪ್ರದಾಯ. ವಧು ನಮಸ್ಕಾರಪೂರ್ವಕ ಅವುಗಳನ್ನು ಸ್ವೀಕರಿಸಿ ಅನಂತರ ಅವುಗಳನ್ನು ಧರಿಸಿಕೊಂಡು ಧಾರಾ ಮಂಟಪಕ್ಕೆ ಬರುವಳು.

ವಿವಾಹ ಮುಹೂರ್ತ ಸಮೀಪಿಸುತ್ತಿದ್ದಂತೆ ವಧುವನ್ನು ಆಕೆಯ ಸೋದರ ಮಾವನು ವಿವಾಹಮಂಟಪಕ್ಕೆ ಕರೆತರುತ್ತಾರೆ. ಮಂಟಪಕ್ಕೆ ಬಂದು ವಧುವು

ಪೂರ್ವಾಭಿಮುಖವಾಗಿ ಅಕ್ಕಿಯ ರಾಶಿಯ ಮೇಲೆ ನಿಲ್ಲುತ್ತಾಳೆ. ವರನು ಪಶ್ಚಿಮ ಮುಖವಾಗಿ ಅಕ್ಕಿಯ ರಾಶಿಯ ಮೇಲೆ ನಿಲ್ಲುತ್ತಾನೆ. ಅವರಿಬ್ಬರ ನಡುವೆ ಉತ್ತರ ದಕ್ಷಿಣವಾಗಿ ಅಂತರಪಟ ಇರುತ್ತದೆ. ಬಿಳಿ ಬಣ್ಣದ ಅಂತರಪಟವನ್ನು ವಧುವಿನ ಸೋದರ ಮಾವನೂ ವರನ ಸೋದರ ಮಾವನೂ ಇಕ್ಕೆಲಗಳಲ್ಲಿ ಹಿಡಿದು ಮುಹೂರ್ತಕ್ಕಾಗಿ ಕರೆಯುತ್ತಾರೆ. ಮುಹೂರ್ತದ ಶ್ರೇಷ್ಠತೆ, ದಿವ್ಯತೆ ಮತ್ತು ಪಾವಿತ್ರ್ಯವನ್ನು ಇದು ಸೂಚಿಸುತ್ತದೆ. ಎರಡೂ ಕಡೆಯ ಪುರೋಹಿತರು ಮಂಗಲಾಷ್ಟಕ ಪಠಿಸುತ್ತಾರೆ. ತೆರೆ ಸರಿದೊಡನೆ ಮೊದಲು ವಧು ವರನ ಕೊರಳಿಗೆ ಮಾಲೆ ಹಾಕುತ್ತಾಳೆ. ಅನಂತರ ವರ ವಧುವಿನ ಕೊರಳಿಗೆ ಮಾಲೆ ಹಾಕುತ್ತಾನೆ. ಅನಂತರ ಅಕ್ಷತೆಯನ್ನು ಪರಸ್ಪರ ಹಾಕಿಕೊಳ್ಳುವ ಕ್ರಿಯೆಯಿದೆ. ಇಬ್ಬರ ದೇಹ–ಮನಸ್ಸುಗಳನ್ನು ಪಾವಿತ್ರ್ಯಗೊಳಿಸಿಕೊಳ್ಳುವ ಸಾಂಕೇತಿಕತೆ ಇಲ್ಲಿದೆ. ಮುಂದೆ ಪುರೋಹಿತರಿಂದ ವಿವಾಹ ಹೋಮ ನಡೆಯುತ್ತದೆ. ಹೋಮ ಮುಕ್ತಾಯವಾದ ಅನಂತರ ಮುಂದಿನ ಕಾರ್ಯಕ್ರಮ ವಧು ವರರು ಹೋಮ ಕುಂಡಕ್ಕೆ ವಧುವಿನ ಕೈಯನ್ನು ಹಿಡಿದುಕೊಂಡು ವರ ಪ್ರದಕ್ಷಿಣೆ ಬರುವುದು.

ಬಳಿಕ ಪ್ರತ್ಯೇಕವಾಗಿ 'ಲಾಜಹೋಮ' ನಡೆಯುತ್ತದೆ. ಲಾಜ ಎಂದರೆ ಅರಳು ಅಥವಾ ಹೊದಳು. ಭತ್ತವನ್ನು ಹುರಿದಾಗ ಹೊದಳು ಆಗುತ್ತದೆ. ಜೀವನವು ಹೀಗೆ ಭವಿತವೆಂಬ ಬೆಂಕಿಯಲ್ಲಿ ಹುರಿದು ಹೊದಳಾಗಬೇಕೆಂಬ (ಅರಳು) ತತ್ತ್ವವನ್ನು ಇದು ಸೂಚಿಸುತ್ತದೆ. ಅರಳನ್ನು ಪತಿ ಪತ್ನಿ ಇಬ್ಬರೂ ಜೊತೆಯಾಗಿ ಅಗ್ನಿಗೆ ಸಮರ್ಪಿಸಬೇಕು. ವಧೂವರರು ಅಕ್ಕಪಕ್ಕದಲ್ಲಿ ನಿಂತಿದ್ದು, ವರನು ವಧುವಿನ ಬಲಭುಜವನ್ನು ತನ್ನ ತೋಳಿನಿಂದ ಬಳಸಿಕೊಂಡು ಮಂತ್ರಪೂತವಾದ ಲಾಜವನ್ನು ಹೋಮಾಗ್ನಿಗೆ ಅರ್ಪಿಸಬೇಕಾಗುತ್ತದೆ.

4.15.5 ಸಪ್ತಪದಿ

ಶಿವಳ್ಳಿಯವರ ಮದುವೆಯಲ್ಲಿ ಅತ್ಯಂತ ಮುಖ್ಯವಾದ ವಿಧಿಯೆಂದರೆ 'ಸಪ್ತಪದಿ' ತುಳಿಯುವುದು. ವರನ ಕೈ ಹಿಡಿದುಕೊಂಡು ಅಕ್ಕಿಯ ಮೇಲೆ ವಧುವು ಏಳು ಹೆಜ್ಜೆಗಳನ್ನಿಡುವುದೇ 'ಸಪ್ತಪದಿ' ಯಾಗಿದೆ. ಈ ಏಳು ಹೆಜ್ಜೆಗಳನ್ನು ತಾತ್ವಿಕವಾಗಿ ಯೋಗಮಾರ್ಗದ ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಗತ, ವಿಶುದ್ಧಿ, ಆಜ್ಞಾ ಮತ್ತು ಸಹಸ್ರಾರ ಎಂದು ಪರಿಗಣಿಸಲಾಗಿದೆ. ಪುರೋಹಿತರು ಮಂತ್ರವನ್ನು ಉಚ್ಚರಿಸುತ್ತಿದ್ದಂತೆ ವರನು ಅದನ್ನು ಪಠಿಸುತ್ತ ವಧುವನ್ನು ಒಂದೊಂದಾಗಿ ಏಳು ಹೆಜ್ಜೆಗಳನ್ನು ಇಡಿಸುತ್ತಾನೆ. ಪ್ರತಿಯೊಂದು ಹೆಜ್ಜೆಗೂ ಮಂತ್ರೋಚ್ಚಾರಣೆಯಾದ ಬಳಿಕ ಇದರಲ್ಲಿ ನನ್ನನ್ನು ಅನುಸರಿಸು' ಎಂದು ಹೇಳುತ್ತಾನೆ.

ಅನ್ನಕ್ಕಾಗಿ ಮೊದಲ ಹೆಜ್ಜೆಯಿಡು

ಬಲದ ಅಭಿವೃದ್ಧಿಗಾಗಿ ಎರಡನೆಯ ಹೆಜ್ಜೆ

ಧನಾಭಿವೃದ್ಧಿಗಾಗಿ ಮೂರನೆಯ ಹೆಜ್ಜೆ

ಮಮತೆಯ ಅಭಿವೃದ್ಧಿಗಾಗಿ ನಾಲ್ಕನೆಯ ಹೆಜ್ಜೆ

ಸಂತಾನ ಲಾಭಕ್ಕಾಗಿ ಐದನೆಯ ಹೆಜ್ಜೆ

ಅನುಕೂಲವಾದ ಋತು ಕಾಲಗಳಿಗಾಗಿ ಆರನೆಯ ಹೆಜ್ಜೆ

ಚಿರಂತನ ಸ್ನೇಹಕ್ಕಾಗಿ ಏಳನೆಯ ಹೆಜ್ಜೆ

ಎಂದು ವರನು ಹೇಳುತ್ತಾನೆ[1]. ಮುಂದಿನ ಮಂತ್ರದಲ್ಲಿ "ಒಟ್ಟಿಗೆ ಏಳು ಹೆಜ್ಜೆ ನಡೆದು ನಾವು ಗೆಳೆಯರಾಗಿದ್ದೇವೆ. ನಿನ್ನ ಸಖ್ಯವನ್ನು ನಾನು ಉಳಿಸಿಕೊಳ್ಳುತ್ತೇನೆ. ನನ್ನ ಸಖ್ಯವನ್ನು ನೀನು ಬಿಡದವಳಾಗು. ಒಂದಾಗಿ ಇರೋಣ. ಒಂದಾಗಿ ಸಂಕಲ್ಪಿಸೋಣ. ಒಬ್ಬರನೊಬ್ಬರು ಪ್ರೀತಿಸಿ, ಒಬ್ಬರನ್ನು ಒಬ್ಬರು ಹೊಂದಿಕೊಂಡು ಪರಸ್ಪರ ಹಿತವನ್ನು ಬಯಸೋಣ. ಸುಖ ಸಂತೋಷಗಳನ್ನು ಒಟ್ಟಿಗೆ ಅನುಭವಿಸಿ ನಮ್ಮ ಆಕಾಂಕ್ಷೆಗಳನ್ನೂ ವ್ರತಗಳನ್ನೂ, ಮನಸ್ಸುಗಳನ್ನು ಎರಡಿಲ್ಲದಂತೆ ಒಂದು ಮಾಡಿ ಜೀವಿಸೋಣ. ಮಾವ, ಅತ್ತೆ, ನಾದಿನಿ, ಮೈದುನರೊಂದಿಗೆ ಹೊಂದಿಕೊಂಡು ಇರು" ಎಂಬುದನ್ನು ಸೂಚಿಸಲಾಗುತ್ತದೆ. ಲೌಕಿಕದ ಸುಖ ಕಾಮನೆಗಳನ್ನು ಮೀರಿದ, ದೈವಿಕ ನೆಲೆಯ ದಾಂಪತ್ಯವೊಂದರ ಆದರ್ಶವೊಂದು ಇಲ್ಲಿದೆ. ಲೌಕಿಕತೆಯು ಆಧ್ಯಾತ್ಮ ಮೆಟ್ಟಿಲು ಎಂಬುದನ್ನು ಇದು ಸೂಚಿಸುತ್ತದೆ.

ಸಪ್ತಪದಿ ಅಕ್ಕಿಯ ಮೇಲೆ ನಾಣ್ಯ ಇಡುವ ಸಂಪ್ರದಾಯವೂ ಇದೆ. ಮುಂದಿನ ಕಾರ್ಯಕ್ರಮದಲ್ಲಿ ಮುತ್ತೈದೆಯರ ಪಾತ್ರವೇ ಮಹತ್ವದ್ದು. ಗಂಡಿನ ಕಡೆಯವರು ಮಾಡಿಸಿದ ಕಾಲುಂಗುರವನ್ನು ಮದುಮಗಳಿಗೆ ತೊಡಿಸುತ್ತಾರೆ. ಮದುವೆಯ ವಿಧಿಗಳು ಮುಗಿಯುತ್ತ ಬರುತ್ತಿದ್ದಂತೆ ಮುತ್ತೈದೆಯರ ಕಾರ್ಯಗಳು ವಿಜೃಂಭಿಸುತ್ತವೆ. ಧಾರಾ ಮಂಟಪದಲ್ಲಾಗುವ ಉಂಗುರದಾಟದಲ್ಲಿ ಪಾಲ್ಗೊಳ್ಳುವುದರಲ್ಲಿ ಗಂಡು ಹೆಣ್ಣಿನ ಕಡೆಯವರು ಸನ್ನದ್ಧರಾದಾಗ ಪುರೋಹಿತರು ಉಂಗುರವನ್ನು ಮದುಮಗಳ ಮುಂದೆ ಬಿಸಾಡುತ್ತಾರೆ. ಉಂಗುರ ಸಿಕ್ಕ ಪಂಗಡದವರು ಗೆದ್ದ ಪಂಗಡ ಹೀಗೆ ಮೂರು ಸಾರಿ ಉಂಗುರ ಎಸೆಯುವ ಆಟ ಆದ ಮೇಲೆ ವರ ವಧುವಿಗೆ ಉಂಗುರ ತೊಡಿಸುತ್ತಾನೆ.

ವಧು ವರರ ಶಿರದ ಮೇಲೆ ಕನ್ನಡಿಯನ್ನು ಹಿಡಿದು ಕಲಶದಿಂದ ಶಿರೋಧಾರೆ ಮಾಡುವುದು. ಮುಂದಿನ ಕಾರ್ಯಕ್ರಮ ವರನ ಪಾದವನ್ನು ವಧು ತೊಳೆಯುವುದು. ಮುಂದೆ ವಧುವಿನ ವರ ಅರಶಿನ ಹಚ್ಚುವ ಕಾರ್ಯಕ್ರಮ ನಡೆಯುತ್ತದೆ. ಬಾಸಿಂಗ, ಉತ್ತರಿಯಾ, ಮತಿ ಕೋಲನ್ನು (ದಂಡ) ಅನಂತರ ಪುರೋಹಿತರ ಮಾರ್ಗದರ್ಶನದಲ್ಲಿ ವಿಸರ್ಜಿಸುವ ಕಾರ್ಯಕ್ರಮ.

4.15.6 ಗೃಹಪ್ರವೇಶ:

ವರನ ಮನೆಯಲ್ಲಿ ಜರುಗುವ ವಧುವಿನ 'ಗೃಹಪ್ರವೇಶ' ಕಾರ್ಯಕ್ರಮ ಬಹಳ ಪ್ರಾಮುಖ್ಯವನ್ನು ಪಡೆದಿದೆ. ಮನೆಯ ಹೊಸ್ತಿಲ ಹೊರಗೆ ಗಣಪತಿ ಪೂಜೆ ಮಾಡಿ ಅನಂತರ ವರನನ್ನು ಅನುಸರಿಸಿ ವಧುವು ಬಲಗಾಲಿನಲ್ಲಿ ಹೊಸ್ತಿಲ ಮೇಲಿಟ್ಟ ಅಕ್ಕಿಯ ಸೇರನ್ನು ಉರುಳಿಸಿ ಗೃಹಪ್ರವೇಶ ಮಾಡುವಳು. ಹಸಿವನ್ನು ನೀಗಿಸುವ ದಕ್ಷಿಣ ಕನ್ನಡದ ಪ್ರಮುಖ ಆಹಾರ ಸಾಮಾಗ್ರಿಯಾದ ಅಕ್ಕಿಯನ್ನು ಗೃಹಪ್ರವೇಶದ ಮೊದಲು ನವವಧು ಉರುಳಿಸುವುದು ಸಮೃದ್ಧಿಯ ಸಂಕೇತವಾಗಿದೆ. ಅಕ್ಕಿಯನ್ನು ಮನೆಯ ಒಳಗಡೆ ಬೀಳುವಂತೆ ಆಕೆ ಸೇರನ್ನು ಉರುಳಿಸುತ್ತಾಳೆ. ಮುತ್ತೈದೆಯರು ದೀಪ ಹಿಡಿದು ಆರತಿ

[1] ಡಾ.ಪಾ.ನಾ.ಮಯ್ಯ,ಕೋಟದವರು,1995,ಪುಟ-104

ಮಾಡುವ ಕ್ರಮವೂ ಇದೆ. ಆ ದಿನ ವಿಶೇಷವಾಗಿ ಸತ್ಯನಾರಾಯಣ ಪೂಜೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತಾರೆ. ಕುಟುಂಬದವರು, ಹೆಣ್ಣಿನ ಕಡೆಯವರು ಆ ದಿವಸ ವಧೂವರರಿಗೆ ಉಡುಗೊರೆ ನೀಡುವ ಪದ್ಧತಿ ಇದೆ.

ವಿವಾಹದಂತಹ ಒಂದು ಶುದ್ಧ ಲೌಕಿಕ ಕಾರ್ಯಕ್ರಮವನ್ನು ಅಲೌಕಿಕತೆ, ದಿವ್ಯತೆ ಮತ್ತು ಆಧ್ಯಾತ್ಮದ ಔನ್ನತ್ಯಕ್ಕೆ ಏರಿಸಿದ್ದು ಶಿವಳ್ಳಿ ಬ್ರಾಹ್ಮಣರ ಸರಳ ಮತ್ತು ಧಾರ್ಮಿಕ ಜೀವನ ಕ್ರಮದ ವೈಶಿಷ್ಟ್ಯವಾಗಿದೆ.

4.16 ಹಬ್ಬ ಹರಿದಿನಗಳು

ಹಬ್ಬ ಹರಿದಿನಗಳು ಭಕ್ತಿ ಧರ್ಮ ಮತ್ತು ವ್ರತಾಚರಣೆಗೆ ಸಂಬಂಧಿಸಿದ ಶುಭದಿನಗಳು. ಸಂಸ್ಕೃತಿ ಸಂವರ್ಧಕ ದಿನಗಳೂ ಆಗಿವೆ. ಇವುಗಳ ಆಚರಣೆಯು ಪವಿತ್ರವಾಗಿದೆ. 'ಇಹ'ದ ಬದುಕಿಗೂ 'ಪರ'ದ ಚಿಂತನೆಗೂ ಇವು ಸಾಧನೋಪಾಯಗಳು. ಧರ್ಮವೇ ಬಾಳಿನ ಉಸಿರು. ಕರ್ಮದ ಕುಶಲತೆಯೇ ಬಾಳಿನ ತಂತ್ರ. ಜ್ಞಾನಪೂರ್ಣ ಜಗಜ್ಯೋತಿಯ ಅರಿವೇ ತುತ್ತತುದಿ. ಅಂತೆಯೇ ಹಬ್ಬಹರಿದಿನಗಳ ಆಚರಣೆಯೂ ವಿಶಿಷ್ಟವಾಗಿದೆ. ಮಹತ್ವಪೂರ್ಣವಾಗಿದೆ. ಹಬ್ಬಗಳೆಂದರೆ ಕೇವಲ ಉಂಡು, ಉಟ್ಟು, ತೇಗಿ ನಲಿದಾಡುವುದಲ್ಲ. ವ್ರತನಿಯಮಗಳನ್ನು ಎಲ್ಲಾ ದಿನಗಳಲ್ಲಿಯೂ ಆಚರಿಸಲು ಅಸಾಧ್ಯವೂ, ಅವಕಾಶವಿಲ್ಲದಿರುವುದೂ ವಾಸ್ತವವಾದ್ದರಿಂದ ಈ ನಿಯತ ದಿನಗಳಗಲ್ಲಾದರೂ ಕಡ್ಡಾಯವಾಗಿ ದೇಹ ದಂಡನೆಯ ಮೂಲಕ ನಮಗೆ ನಾವೇ ಆತ್ಮ ಸಂಗಾತಿಗಳಾಗುವ ಕೆಲಸ ಮಾಡಬೇಕು. ಇದಕ್ಕಾಗಿ ಸ್ನಾನ, ವಂದನೆ, ಜಪ, ತಪ, ಪೂಜೆಗಳು ಇತ್ಯಾದಿ. ಕೇವಲ ಬಾಹ್ಯ ಶುದ್ಧಿಗಿಂತ ಅಂತಃಶುದ್ಧಿ ಮುಖ್ಯ.

ಮನುಷ್ಯನಿಗೆ ಜನ್ಮಾದಾರಭ್ಯ ಬಂದ ಕೆಲವು ಋಣಗಳಿವೆ. ಅವುಗಳಲ್ಲಿ ದೇವಋಣ, ಋಷಿಋಣ, ಪಿತೃಋಣ ಇತ್ಯಾದಿ. ಇವುಗಳನ್ನು ಸಕಾಲದಲ್ಲಿ ತೀರಿಸಲು ಪ್ರಯತ್ನಿಸುವ ವಿಧಾನಗಳೇ ಹಬ್ಬಹರಿದಿನಗಳೂ ಆಗಿವೆ. ಅತ್ಯಂತ ಪ್ರಾಚೀನ ಕಾಲದಿಂದಲೂ ಹಬ್ಬಹರಿದಿನಗಳನ್ನು ಎಲ್ಲಾ ಜನಾಂಗಗಳವರೂ ವಿವಿಧ ಬಗೆಯಲ್ಲಿ ಆಚರಿಸುತ್ತಾ ಬಂದಿದ್ದಾರೆ. ಕಾಲಕಾಲಕ್ಕೆ ತಕ್ಕಂತೆ ಅನೇಕ ಬದಲಾವಣೆಗಳು ಆಗಿವೆ. ಮೊದಮೊದಲು ಪ್ರಕೃತಿಯ ಶಿಶುವಾಗಿದ್ದ ಮಾನವರು ಪ್ರಕೃತಿಯ ವಿಶಿಷ್ಟ ಶಕ್ತಿಗಳಾದ ಪಂಚ ಭೂತಗಳನ್ನು ತನ್ನ ಶ್ರೇಯಸ್ಸಿಗಾಗಿ ಭಯ, ಭಕ್ತಿಯಿಂದ ಕೊಂಡಾಡಿದನು. ಕಾಲಕ್ರಮೇಣ ಮನುಷ್ಯನ ಬುದ್ಧಿ-ಭಾವಗಳ ವಿಶಿಷ್ಟಶಕ್ತಿಗಳು ಅವನ ಚೇತನವನ್ನು ಅರಳಿಸಿದಂತೆ ಅನೇಕ ಮಾರ್ಪಾಡುಗಳಾದವು. ಸೃಷ್ಟಿಕರ್ತನ ಬಗ್ಗೆ ವಿವಿಧ ಅರಿವು ಮೂಡಿತು. ವೇದ ವೇದಾಂತಗಳು, ಕಾವ್ಯ-ಪುರಾಣಗಳೂ 'ಇಹ'ದ ತಳಹದಿಯಲ್ಲಿ 'ಪರ'ದ ಸುಂದರ ಕಲ್ಪನೆಯನ್ನು ಹಾಕಿ ಧರ್ಮ-ಕರ್ಮಗಳ ಸುಂದರ ಸಾಮರಸ್ಯವನ್ನು ತೋರಿದವು.

ನಾವು ವಾಸಿಸುತ್ತಿರುವ ಪ್ರಪಂಚವು ಧರ್ಮಕ್ಷೇತ್ರವೂ ಹೌದು. ಕರ್ಮಕ್ಷೇತ್ರವೂ ಹೌದು. ಸೃಷ್ಟಿ, ಸ್ಥಿತಿ, ಲಯ ಸೂತ್ರಗಳೆಲ್ಲವೂ ಈ ಧರ್ಮ-ಕರ್ಮಗಳ ಕೇಂದ್ರ ವರ್ತಿಗಳು. ಧರ್ಮ-ಕರ್ಮಗಳ ಪ್ರಾಯೋಗಿಕ ನೆಲೆಯಲ್ಲಿ ರೂಪದಲ್ಲಿ ನೈತಿಕ ನಡತೆಯ ಧಾರ್ಮಿಕ ಶುಚಿಯ, ಪವಿತ್ರ ಕಾಯಕದ ನಿಯಮಗಳು ರೂಪಿತವಾಗಿವೆ. ಧರ್ಮವೆಂದರೆ

ಋಜುಮಾರ್ಗ, ಜೀವನಕಲೆ, ಬಾಳಿನ ಸಾರ್ಥಕತೆಯ ಸೆಲೆ. ಯಾವುದು ಸತ್ಯವೋ, ಯಾವುದು ಋಜುಮಾರ್ಗವೋ, ಯಾವುದು ಒಳ್ಳೆಯದೋ, ಯಾವುದು ಶುದ್ಧ ನ್ಯಾಯವೋ ಅದನ್ನು ಧರ್ಮವು ಪ್ರತಿನಿಧಿಸುತ್ತದೆ. ಧರ್ಮವು ಜೀವನದ ವಿಶ್ವ ನಿಯಾಮಕ. ಕರ್ಮವು ವಿಶ್ವಚಾಲಕ. ಧರ್ಮ ಸೂಕ್ಷ್ಮದ ತತ್ವದ ದೃಷ್ಟಿಯಿಂದಲೇ ಹಬ್ಬ ಹರಿದಿನಗಳನ್ನು ಕುರಿತು ವಿವೇಚಿಸಬೇಕು. ಹಿಂದೂ ಹಬ್ಬ ಹರಿದಿನಗಳು ವ್ಯಷ್ಟಿ-ಸಮಷ್ಟಿಯ ಸಾಮರಸ್ಯ ಸೂತ್ರಗಳು. ಹಬ್ಬ ಹರಿದಿನಗಳಿಗೆ ಆಚಾರ ಮತ್ತು ವಿಚಾರ ಎಂಬ ಎರಡು ಮುಖಗಳುಂಟು. ಇವೆರಡೂ ಒಂದೇ ನಾಣ್ಯದ ಎರಡು ಮುಖಗಳು. ಆಚಾರದಲ್ಲಿ ನಂಬಿಕೆಗೆ ಪ್ರಾಧಾನ್ಯವೂ, ವಿಚಾರದಲ್ಲಿ ಧರ್ಮ ಜಾಗೃತಿಯೂ ಮುಖ್ಯವಾದವುಗಳಾಗಿವೆ. ಇವುಗಳಲ್ಲಿ ಎರಡೂ ಸುಸಂಸ್ಕೃತವಾಗಿರಬೇಕು. ಅವರವರ ಶ್ರೇಷ್ಠ ನಂಬಿಕೆಯೇ ಅವರ ನಾಕ ಇಲ್ಲವೇ ನರಕಗಳಿಗೆ ಕಾರಣ. ಜೀವನದಲ್ಲಿ ಉತ್ತಮ ನಂಬಿಕೆಗಳು ಅಗತ್ಯ. ವಿಚಾರಪೂರ್ವಕವಾದ ನಂಬಿಕೆಗಳು ಅಗತ್ಯ. ನಮ್ಮ ಅನೇಕ ಧಾರ್ಮಿಕ, ನೈತಿಕ ಕ್ರಿಯೆಗಳು ನಮ್ಮ ನಂಬಿಕೆಗಳನ್ನು ಅನುಸರಿಸಿವೆ. ವಿಚಾರಣೀಯವಲ್ಲದ ನಂಬಿಕೆಗಳಿಂದ ಏನೂ ಪ್ರಯೋಜವಿಲ್ಲ. ಅದೊಂದು ಸಂಪ್ರದಾಯದ ಬಂಧನ. ಆಚರಣೆಯ ದೋಷದಿಂದಾಗಿ ಪವಿತ್ರ ಕಾಯಕಗಳಾದ ಹಬ್ಬ-ಹರಿದಿನಗಳ ತತ್ತ್ವವನ್ನು ದೂಷಿಸಬೇಕಾಗಿಲ್ಲ.

4.16.1 ಯುಗಾದಿ

ಚೈತ್ರ ಶುದ್ಧ ಪಾಡ್ಯಮಿಯಂದು ಯುಗಾದಿ ಹಬ್ಬ ಬರುತ್ತದೆ. ಯುಗಾದಿಯಿಂದ ಹಿಂದೂ ವರ್ಷಾರಂಭವಾಗುತ್ತದೆ. ಯುಗಾದಿಯೆಂದರೆ ವರ್ಷದ ಮೊದಲ ದಿನ. ವರ್ಷವನ್ನು ರಥಕ್ಕೂ, ಉತ್ತರಾಯಣ, ದಕ್ಷಿಣಾಯನಗಳನ್ನು ಅದರ ಚಕ್ರಗಳಿಗೂ ಹೋಲಿಸಲಾಗಿದೆ. ಆದ್ದರಿಂದ ವರ್ಷವನ್ನು ಯುಗ ಎಂದು, ಅದರ ಮೊದಲ ದಿನವನ್ನು ಯುಗಾದಿ ಎಂದೂ ರೂಢಿಯಲ್ಲಿ ಕರೆಯುವ ಕ್ರಮ. ಕರ್ನಾಟಕದಲ್ಲಿ ಈ ದಿನ ಆಚರಣೆಯಲ್ಲಿದೆ. ದಕ್ಷಿಣ ಭಾರತದವರು ವಿಶೇಷವಾಗಿ ಚಾಂದ್ರಮಾನ ಪದ್ಧತಿಯ ಪ್ರಕಾರ ಚೈತ್ರ ಶುದ್ಧ ಪ್ರಥಮೆಯಂದು ಯುಗಾದಿ ಆಚರಿಸುವರು. ಶಿವಳ್ಳಿ ಬ್ರಾಹ್ಮಣರು ಸೌರಮಾನ ಪದ್ಧತಿ ಪ್ರಕಾರ ಯುಗಾದಿ ಆಚರಿಸುವರು. ಯುಗಾದಿಯು ಹೊಸ ವರ್ಷದ ಪ್ರಾರಂಭದ ಮೊದಲನೆಯ ದಿನವಾಗಿರುವುದು ಕೇವಲ ಕಾಲಗಣನೆಯ ದೃಷ್ಟಿಯಿಂದ ಮಾತ್ರವಲ್ಲ. ಆಗ ಸೃಷ್ಟಿಯಲ್ಲಿ ಎಲ್ಲಿ ನೋಡಿದಲ್ಲಿ ಗಿಡ-ಮರಗಳ ಚಿಗುರು, ಎಲೆ, ಮೊಗ್ಗು ಹೂವುಗಳ ಲಾಸ್ಯ ನಗು ಕಂಡು ಬರುತ್ತದೆ. ಯುಗಾದಿ ಹಬ್ಬವನ್ನು ಹಿಂದುಗಳೆಲ್ಲರೂ ಆಚರಿಸುವರು. ಶಿವಳ್ಳಿ ಬ್ರಾಹ್ಮಣರು ವಿಶೇಷವಾದ ಮಹತ್ವವನ್ನು ಕೊಡುತ್ತಾರೆ. ಮನೆಯ ಮಂದಿಯೆಲ್ಲ ಅಭ್ಯಂಜನ ಸ್ನಾನ ಮಾಡಿ ಹೊಸ ಬಟ್ಟೆ ಧರಿಸುತ್ತಾರೆ. ಹಿಂದಿನ ದಿವಸ ದೇವರ ಎದುರಿಗೆ ಒಂದು ಹರಿವಾಣದಲ್ಲಿ ಕನ್ನಡಿ ಮತ್ತು ತಾವು ಬೆಳೆಸಿದ ತರಕಾರಿ, ಹಂಪಲುಗಳನ್ನು ಇಡುತ್ತಾರೆ. ಮರುದಿವಸ ಬೆಳಗ್ಗೆ ಸ್ನಾನ ಮಾಡಿ ಮನೆಯ ಯಜಮಾನ ಇಷ್ಟದೇವತಾ ಪೂಜೆ ಮಾಡಿ ಅನಂತರ ಪಂಚಾಗಶ್ರವಣ ಮಾಡುತ್ತಾರೆ. ಆ ವರ್ಷದ ಫಲಗಳನ್ನು ಓದುತ್ತಾರೆ. ಮನೆಯವರೆಲ್ಲರೂ ಪ್ರಾರಂಭದಲ್ಲಿ ದೇವರಿಗೆ ನಮಸ್ಕಾರ ಮಾಡಿ ಮನೆಯ ಹಿರಿಯರಿಗೂ ನಮಸ್ಕರಿಸುತ್ತಾರೆ. ಪಾಯಸ ಸಿಹಿತಿಂಡಿಗಳನ್ನು ಆದಿನ ಮಾಡುತ್ತಾರೆ. ಶಿವಳ್ಳಿಯವರಲ್ಲಿ ಹೆಚ್ಚಾಗಿ ಬೇವು-ಬೆಲ್ಲವನ್ನು ಇಡುವ ಪದ್ಧತಿ ಇಲ್ಲ. ಆದರೆ ಉತ್ತರ

ಕನ್ನಡದವರ ಪ್ರಭಾವದಿಂದ ಈಗೀಗ ಕೆಲವರು ಬೇವು ಬೆಲ್ಲವನ್ನು ಹಂಚುವ ಪದ್ಧತಿಯನ್ನು ರೂಢಿಸಿಕೊಂಡಿದ್ದಾರೆ. ಅನಂತರ ದೇವಸ್ಥಾನಕ್ಕೆ ಹೋಗಿ ಸೇವೆಯನ್ನು ಸಲ್ಲಿಸಿ ದೇವರ ದರುಶನ ಪಡೆಯುತ್ತಾರೆ. ತಾವು ಬೆಳೆಸಿದ ಬೆಳೆಯನ್ನು ದೇವರಿಗೆ ಅರ್ಪಿಸುತ್ತಾರೆ.

4.16.2 ಅಕ್ಷಯ ತೃತೀಯ /ಅಕ್ಷಯ ತದಿಗೆ

ವೈಶಾಖ ಶುಕ್ಲ ತದಿಗೆಯನ್ನು ಅಕ್ಷ ತದಿಗೆ ಎಂದು ಹಿಂದುಗಳು ಆಚರಿಸುವರು ಅಕ್ಷ ತದಿಗೆ ಅಕ್ಷಯ ತೃತೀಯದ ದೇಸಿರೂಪ. ಈ ಪರ್ವದಿನ ಗಂಗಾನದಿಯಲ್ಲಿ ಸ್ನಾನ ಮಾಡುವುದು ಶ್ರೇಷ್ಠ. ಶುಚಿರ್ಭೂತರಾಗಿ ಇಷ್ಟ ದೇವತೆ ಹಾಗೂ ಶ್ರೀಕೃಷ್ಣನನ್ನು ಆರಾಧಿಸುತ್ತಾರೆ. ಅಕ್ಷ ತದಿಗೆಯಲ್ಲಿ ದಾನ ಮಾಡುವುದು ಪ್ರಶಸ್ತ. ದಾನಕ್ಕೆ ಯೋಗ್ಯವಾದ ಕಾಲಗಳಲ್ಲಿ ಅಕ್ಷಯ ತೃತೀಯ ಪರ್ವವು ಶ್ರೇಷ್ಠ ಎನಿಸಿದೆ. ಅಕ್ಷಯ ತೃತೀಯಾದಂದು ಆಚರಿಸುವ ಸ್ನಾನ, ಜಪ, ತಪಸ್ಸು, ತರ್ಪಣ, ದಾನ ಇವೆಲ್ಲವೂ ಅಕ್ಷಯ ಫಲವನ್ನು ನೀಡುತ್ತದೆ. ಈ ದಿವಸದಲ್ಲಿ ಸೋಮವಾರ ಅಥವಾ ಬುಧವಾರ ಹಾಗೂ ರೋಹಿಣಿ ನಕ್ಷತ್ರ ಇವು ಕೂಡಿ ಬಂದರೆ ಅಕ್ಷಯವಾದ ಸುಕೃತದ ಫಲವಾದ ಯೋಗ. ರೋಹಿಣಿ ನಕ್ಷತ್ರ ಕೃಷ್ಣನ ಜನ್ಮ ನಕ್ಷತ್ರವಾಗಿ ಶ್ರೀಕೃಷ್ಣನ ಪೂಜೆ ಶ್ರೇಯಸ್ಕರ.

ವೈಶಾಖೇ ಶುಕ್ಲ ಪಕ್ಷೇತು ತೃತೀಯಾ ರೋಹಿಣೀಯುತಾ
ವಿನಾಪಿರೋಹಿಣೀ ಯೋಗಾತ್ ಪುಣ್ಯಕೋಟಿ ಪ್ರದಸದಾ[1]

ಅಕ್ಷಯತದಿಗೆಯಂದು ಗಂಗಾನದಿ ಸ್ನಾನ ಪುಣ್ಯಪ್ರದ. ಆದರೆ ಎಲ್ಲರಿಗೂ ಈ ಅವಕಾಶವಿರುವುದಿಲ್ಲ. ಆದರೂ ಇರುವಲ್ಲಿಯೇ ತಾವು ಸ್ನಾನ ಮಾಡುವ ನೀರಿನಲ್ಲಿ ಗಂಗೆಯನ್ನು ಆವಾಹನ ಮಾಡಿ ಆರಾಧಿಸಬೇಕು. ಗಂಗಾಪೂಜೆ ಮಾಡಿದರೆ ಎಲ್ಲ ದೇವತೆಗಳ ಪೂಜೆ ಮಾಡಿದಂತೆ.

ತೃತೀಯಾದಂದು ಶ್ರೀಕೃಷ್ಣನನ್ನು ಗಂಧದಿಂದ ಅಲಂಕರಿಸಿ ಅವನಿಗೆ ಜವೆ ಗೋಧಿಯನ್ನು ಸಮರ್ಪಿಸುವವನು ವೈಕುಂಠವನ್ನು ಹೊಂದುತ್ತಾನೆಂದು ನಂಬಿಕೆ.

ಗೃಹಪ್ರವೇಶ, ವಿವಾಹ, ದವಸಧಾನ್ಯಗಳ ದಾನ ಇವುಗಳಿಗೆ ಅಕ್ಷಯ ತೃತೀಯಾ ಶುಭದಿನ. ಈ ದಿನ ಚಿನ್ನ ಖರೀದಿಸಿದರೆ ಅದು ಹೆಚ್ಚುವುದು ಎಂಬ ನಂಬಿಕೆ ಜನರಲ್ಲಿ ಇದೆ. ಆದುದರಿಂದ ಅಕ್ಷಯ ತೃತೀಯಾದಂದು ಸ್ವಲ್ಪವಾದರೂ ಚಿನ್ನವನ್ನು ಜನರು ತೆಗೆದುಕೊಳ್ಳುತ್ತಾರೆ. ಉಡುಪಿಯಲ್ಲಿ ಶಿವಳ್ಳಿ ಬ್ರಾಹ್ಮಣರು ಈ ದಿನದಂದು ಬಹಳ ಶ್ರದ್ಧೆಯಿಂದ ಅಕ್ಷಯ ತೃತೀಯಾವನ್ನು ಆಚರಿಸುತ್ತಾರೆ.

4.16.3 ಪ್ರಥಮ ಏಕಾದಶಿ

ಆಷಾಡ ಶುದ್ಧ ಏಕಾದಶಿಗೆ ಪ್ರಥಮ ಏಕಾದಶೀ, ಶಯನ ಏಕಾದಶೀ ವೈಷ್ಣವ ಏಕಾದಶೀ ಮುಂತಾದ ನಾನಾ ಹೆಸರುಗಳಿವೆ. ಶೈವರಿಗೆ, ವೀರಶೈವರಿಗೆ ಶಿವರಾತ್ರಿಯು ಹೇಗೋ ಹಾಗೇ ವೈಷ್ಣವರಿಗೆ ಪ್ರಥಮ ಏಕಾದಶಿಯು ಪವಿತ್ರವಾಗಿದೆ. ಪುರಾಣಗಳ ಪ್ರಕಾರ ಶ್ರೀ ಹರಿಯು ಆಷಾಡ, ಶುಕ್ಲ ಏಕಾದಶಿಯಿಂದ ನಾಲ್ಕು ತಿಂಗಳುಗಳ ಕಾಲ ಅಖಂಡ ನಿದ್ರೆಯಲ್ಲಿ ಇರುತ್ತಾನೆ. ಏಕಾದಶಿಯಂದು ಮಲಗಿದ ಶ್ರೀಹರಿ ನಾಲ್ಕು ತಿಂಗಳ ನಂತರ ಕಾರ್ತಿಕ ಶುದ್ಧ 'ಪ್ರಭೋಧಿನಿ ಏಕಾದಶಿ' ಯಂದು ನಿದ್ರೆ ತ್ಯಜಿಸುತ್ತಾನೆ. ಈ ಆಷಾಡ ಶುದ್ಧ ಏಕಾದಶಿಯಿಂದ ಕಾರ್ತಿಕ ಶುದ್ಧ ಏಕಾದಶಿಯವರೆಗೆ ಸಾಧು ಸಂತರು

ಚಾತುರ್ಮಾಸ ಅನುಷ್ಠಾನವನ್ನು ಆಚರಿಸುತ್ತಾರೆ. ಈ ನಾಲ್ಕು ತಿಂಗಳು ಅವರು ಒಂದೇ ಸ್ಥಳದಲ್ಲಿ ನೆಲೆಸಿ, ಧ್ಯಾನ, ಚಿಂತನ, ಅನುಷ್ಠಾನ ಮಗ್ನರಾಗಿರುತ್ತಾರೆ. ಆಷಾಢದಲ್ಲಿ ಶಾಖ ಪದಾರ್ಥಗಳನ್ನೂ, ಶ್ರಾವಣದಲ್ಲಿ ದಧಿಯನ್ನೂ, ಭಾದ್ರಪದದಲ್ಲಿ ಕ್ಷೀರವನ್ನೂ, ಆಶ್ವಯುಜದಲ್ಲಿ ದ್ವಿದಳ ಧಾನ್ಯಗಳನ್ನು ವರ್ಜಿಸಬೇಕು. ಇದನ್ನು ಉಡುಪಿ ಮಠದ ಸ್ವಾಮಿಗಳೂ ಚಾಚೂ ತಪ್ಪದೆ ಪಾಲಿಸುತ್ತಾರೆ. ಏಕಾದಶಿಯಂದು ಪೂರ್ತಿ ಉಪವಾಸ, ಜಾಗರಣೆ, ವಿಷ್ಣುನಾಮಸ್ಮರಣೆ, ಹರಿಕೀರ್ತನೆಯಲ್ಲಿದ್ದು ದ್ವಾದಶಿಯಂದು ವಿಷ್ಣುವನ್ನು ಪೂಜಿಸಿ ಪಾರಣೆ ಮಾಡಿ, ತ್ರಯೋದಶಿಯಂದು ಪೂಜೆ ಸಮಾಪ್ತಿಗೊಳಿಸುತ್ತಾರೆ. ಶಿವಳ್ಳಿ ಬ್ರಾಹ್ಮಣರಲ್ಲಿ ಏಕಾದಶಿಯನ್ನು ಶ್ರದ್ಧೆಯಿಂದ ಸಂಪ್ರದಾಯಸ್ಥರು ಈಗಲೂ ಆಚರಿಸಿಕೊಂಡು ಬರುತ್ತಿದ್ದಾರೆ.

4.16.4 ನಾಗರಪಂಚಮಿ

ಶ್ರಾವಣ ಮಾಸದ ಶುದ್ಧ ಪಂಚಮಿ ನಾಗರ ಪಂಚಮಿ ಎಂದೇ ಪ್ರಸಿದ್ಧ. ತುಳುವರು ಆಟಿ ತಿಂಗಳ ಅಮವಾಸ್ಯೆ ಕಳೆದು ಐದನೇ ದಿನಕ್ಕೆ ಈ ಹಬ್ಬವನ್ನು ಆಚರಿಸುತ್ತಾರೆ. ನಾಗರ ಪಂಚಮಿಯಿಂದಲೇ ಮುಂದಿನ ಹಬ್ಬಗಳು ಪ್ರಾರಂಭ. ನಾಗಶಿಲೆ ಅಥವಾ ನಾಗನಕಲ್ಲನ್ನು ಮರದ ಬುಡದಲ್ಲಿ ಇಟ್ಟು ಪೂಜಿಸುವ ಕ್ರಮಕ್ಕೆ ಪ್ರಾಚೀನತೆ ಇದೆ. ನಾಗ–ವೃಕ್ಷ ಅವಳಿ ಚೇತನಗಳೆಂಬ ಒಂದು ಒಡಂಬಡಿಕೆಯೇ 'ನಾಗಬನ'ಗಳ ಕಲ್ಪನೆಗೆ ಇಂಬು ಕೊಡುತ್ತದೆ. ಸದಾ ತಂಪನ್ನು ಬಯಸುವ, ತಂಪನ್ನಾಶ್ರಯಿಸಿ ಮರದ ಬುಡಗಳಲ್ಲಿ, ಹುತ್ತಗಳಲ್ಲಿ ವಾಸಿಸುವ ಪ್ರಾಣಿ ನಾಗ, 'ತುಳುವರಿಗೆ ಕಣ್ಣಿಗೆ ಕಾಣುವ ಆರಾಧ್ಯ ದೇವರು'. ಮನೆಗೊಂದು, ಕುಟಂಬಕ್ಕೊಂದು, ಊರಿಗೊಂದು ಎಂಬಂತೆ ನಾಗಬನಗಳು ಎಲ್ಲೆಡೆ ಇವೆ. ನಾಗ ಭಯದಿಂದ ನಾಗಬನಗಳು ಉಳಿದುಕೊಂಡು ಬಂದಿವೆ. ನಾಗಬನಗಳಲ್ಲಿ ಅಪೂರ್ವವೃಕ್ಷ ಜಾತಿಗಳು ಹಾಗೂ ಔಷಧೀಯ ಗಿಡ–ಬಳ್ಳಿಗಳಿದ್ದು ಹಕ್ಕಿಗಳೂ ಕೂಡ ಆಶ್ರಯ ಪಡೆಯುತ್ತದೆ. ಇಲ್ಲಿರುವ ಹುತ್ತ ಅಂತರ್ಜಲ ಸಂಗ್ರಹಾಲಯವೂ ಹೌದು. ನಮ್ಮ ಪೂರ್ವಜರು ಪರಿಸರವನ್ನು ಒಂದು ನಂಬಿಕೆಯ ಆಧಾರದಲ್ಲಿ ಉಳಿಸಿಕೊಂಡು ಬಂದಿದ್ದಾರೆ.

ನಾಗಬನಕ್ಕೆ ನಾಗ ಪಂಚಮಿಯಂದು ಶ್ರದ್ಧೆಯಿಂದ ಹೋಗಿ ಸೀಯಾಳ, ಹಾಲು ಎರೆದು ನಾಗನಿಗೆ ತನು ಎರೆಯುವ, ಪೂಜೆ, ತಂಬಿಲ ಕೊಡುವ ಪದ್ಧತಿ ನಿರಂತರವಾಗಿ ನಡೆಯುತ್ತಾ ಬಂದಿದೆ.

ನಾಗ ಪ್ರಕೃತಿಯ ಅಧಿದೇವತೆ. ನಾಗಪೂಜೆಯೆಂದರೆ ಅಕ್ಷರಶಃ ನಿಸರ್ಗಪೂಜೆ. ಬನಗಳು ಸರ್ಪದಂತಹ ಜೀವಿಗಳಿಗೆ ರಕ್ಷಣೆಯಾದರೆ, ಬನಕ್ಕೆ ಸರ್ಪಗಳು ಕಾವಲು.

- ನಾಗಪೂಜೆಯ ಉದ್ದೇಶ ಸಂತಾನ, ಕೃಷಿಸಮೃದ್ಧಿ, ಚರ್ಮವ್ಯಾಧಿಗಳ ನಿವಾರಣೆ, ಸಂಪತ್ತು ಮತ್ತು ಆಯುರಾರೋಗ್ಯದ ನಿರೀಕ್ಷೆಯೇ ಆಗಿರುವುದು ಕಂಡು ಬರುತ್ತದೆ.
- ತುಳುನಾಡು ಕಾಡುಗಳಿಂದ ಆವೃತವಾದ ಪ್ರದೇಶವಾಗಿತ್ತು. ಜನರ ಸಂಖ್ಯೆ ಹೆಚ್ಚಾಗುತ್ತಾ ಹೋದ ಹಾಗೆ ಮತ್ತು ಕೃಷಿಯನ್ನೇ ಹೆಚ್ಚಾಗಿ ನಂಬಿಕೊಂಡು ಬಂದಕಾರಣ ಮರಗಿಡಗಳನ್ನು ಕಡಿದು ಕೃಷಿ ಮಾಡತೊಡಗಿದರು. ವಾಸ್ತವವಾಗಿ ಜನವಸತಿ ಈ ನಾಡಿನಲ್ಲಿ ಕಡಿಮೆ ಇದ್ದಾಗ ಎಲ್ಲಾ ಕಡೆ ಮರಗಿಡಗಳು ಬೆಳೆದು

ಕಾಡು ಆವರಿಸಿತ್ತು. ಹಾವುಗಳು ವಾಸವಾಗಿದ್ದವು. ಅದರ ಸಂಚಾರದ ಪ್ರದೇಶ ಎಲ್ಲಾ ಕಡೆ ಇತ್ತು. ಕಾಡನ್ನು ಕಡಿದು ಕೃಷಿಯನ್ನು ಮಾಡಿದ ಕಾರಣ ನಾಗರ ಹಾವಿಗೆ ವಾಸಮಾಡಲು ಬನಗಳನ್ನು ಜನರು ನಿರ್ಮಿಸಿ ಅಲ್ಲಿ ನಾಗ ಉಪದ್ರವ ಕೊಡಬಾರದೆಂಬ ಉದ್ದೇಶದಿಂದ ಆರಾಧನೆ ಮಾಡುವ ಪದ್ಧತಿ ಬಂದಿರಬೇಕು.

- ಶಿವಳ್ಳಿ ಬ್ರಾಹ್ಮಣರೂ ಸಹ ನಾಗನ ಆರಾಧನೆಯನ್ನು ಮಾಡುತ್ತಾರೆ. ಮನೆಯ ಒಳಗಿರುವ ಪೂಜಾಕೋಣೆಯಲ್ಲಿ ಬೆಳ್ಳಿಯಿಂದ ಮಾಡಿದ 'ನಾಗರಹೆಡೆ' ಯನ್ನು ಇಟ್ಟು ನಿತ್ಯ ಪೂಜೆಯೊಂದಿಗೆ ಅದಕ್ಕೂ ಪೂಜೆ ಮಾಡುತ್ತಾರೆ. ದಿನಂಪ್ರತಿ ಹಾಲನ್ನು ಎರೆಯುತ್ತಾರೆ. ನಾಗರ ಪಂಚಮಿಯ ದಿವಸ ವಿಶೇಷವಾಗಿ ಆರಾಧನೆ ಮಾಡುತ್ತಾರೆ. ಕುಟುಂಬದ ಹಿರಿಯರ ಜಾಗದಲ್ಲಿರುವ ನಾಗಬನಕ್ಕೆ ಅಥವಾ ತಮ್ಮ ಮನೆಯ ಜಾಗದಲ್ಲಿರುವ ನಾಗ ಬನಕ್ಕೆ ಹೋಗಿ, ಅಲ್ಲಿ ಸ್ವಚ್ಛಮಾಡಿ ಸ್ಥಳ ಶುದ್ಧಿ ಮಾಡಿ, ನಾಗನ ಕಲ್ಲಿಗೆ ಜಲ, ಸೀಯಾಳ, ಹಾಲಿನಿಂದ ಅಭಿಷೇಕ ಮಾಡುತ್ತಾರೆ. ಅನಂತರ ಅರಸಿನವನ್ನು ನಾಗನ ಕಲ್ಲಿಗೆ ಹಚ್ಚುತ್ತಾರೆ. ಅಲಂಕಾರ ಮಾಡಿದ ನಂತರ ಶಾಸ್ತ್ರೋಕ್ತವಾಗಿ ನಾಗನ ಆರಾಧನೆ ಮಾಡಿ ಪೂಜೆ ಮಾಡುತ್ತಾರೆ. ತುದಿ ಇರುವ ಎಲೆಯಲ್ಲಿ ಅಕ್ಕಿ, ಹೊದ್ದೊಳು(ಅರಳು), ತೆಂಗಿನಕಾಯಿ, ಬಾಳೆಹಣ್ಣು, ಸಮರ್ಪಣೆಗೆ ಇಡುತ್ತಾರೆ. ಪೂಜೆ ಆದ ಅನಂತರ ಸಮರ್ಪಣೆಗೆ ಇಟ್ಟದ್ದನ್ನೇ ಪ್ರಸಾದವಾಗಿ ಸ್ವೀಕರಿಸುತ್ತಾರೆ. ಆದಿವಸ ಮನೆಯಲ್ಲಿ ವಿಶೇಷವಾಗಿ ಹಳದಿ ಎಲೆಯನ್ನು ಉಪಯೋಗಿಸಿ ತಯಾರಿಸಿದ ತಿಂಡಿಯನ್ನು ಮಾಡುತ್ತಾರೆ.

4.16.5 ಉಪಾಕರ್ಮ

'ಸಿದ್ಧತೆ' 'ಯಜ್ಞೋಪವೀತ ಬದಲಾಯಿಸಿ ಹಾಕಿ ಕೊಳ್ಳುವ ವಿಧಿ' ಮುಂತಾದ ಅರ್ಥನಿಷ್ಪತ್ತಿ. ಉಪಾಕರ್ಮವು ಒಂದು ಧಾರ್ಮಿಕ ವಿಧಿಯಾಗಿ ಕಟ್ಟುಪಾಡಾಗಿ ಯಜ್ಞೋಪವೀತ ಧರಿಸುವ ಸಂಪ್ರದಾಯವುಳ್ಳ ವರ್ಗಕ್ಕೆ ವಿಶಿಷ್ಟ ಆಚರಣೆ. ಶ್ರಾವಣ ಮಾಸದ ಹುಣ್ಣಿಮೆಯಂದು ಹಾಗೂ ಶ್ರಾವಣ ಮಾಸದಲ್ಲಿ ಸನ್ನಿಹಿತವಾಗುವ ಶ್ರವಣ ನಕ್ಷತ್ರದಂದು ಉಪಾಕರ್ಮ ನಡೆಯುತ್ತದೆ. ಋಗ್ವೇದ, ಯಜುರ್ವೇದ ಸಾಮವೇದ, ಶಾಖೆಗಳವರಿಗೆ ಪ್ರತ್ಯೇಕ ದಿನಗಳಂದು ಸ್ವೀಕಾರ ಇದೆಯಾದರೂ ಉಪಾಕರ್ಮ ವಿಧಿಯ ಉದ್ದೇಶ ಹಾಗೂ ನಿರ್ವಹಣೆಯು ಬಹುತೇಕ ಸಮಾನವಾಗಿಯೇ ಇದೆ. ಉಪನಯನವಾದ ನಂತರ ಪ್ರಥಮ ಉಪಾಕರ್ಮದಲ್ಲಿ ಬ್ರಹ್ಮಚಾರಿ ವಿಶೇಷವಾಗಿ ಸಪ್ತಋಷಿಪೂಜೆ ನಡೆಸುತ್ತಾರೆ.

ಪುಣ್ಯಾಹ, ಸಪ್ತಋಷಿಗಳ ಪೂಜೆ, ಬಳಿಕ ಉಪಾಕರ್ಮ ಹೋಮವನ್ನು ದಧಿ ಹಾಗು ಸತ್ತುಗಳ ಮಿಶ್ರಣದ ದ್ರವ್ಯದಿಂದ ಹಾಗೂ ಉತ್ಸರ್ಜನ ಹೋಮವನ್ನು ಚರು ದ್ರವ್ಯದಿಂದಲೂ ನಡೆಸಲಾಗುತ್ತದೆ. ಪ್ರಧಾನ ಹೋಮದ ಬಳಿಕ ಹೋಮ ದ್ರವ್ಯದ ಶೇಷಭಾಗವಾದ ದಧಿ ಸತ್ತು ಸ್ವೀಕರಿಸಿ ನೂತನ ಯಜ್ಞೋಪವೀತ ಧಾರಣೆ ಬಳಿಕ ಬ್ರಹ್ಮಯಜ್ಞ, ದೇವ ಋಷಿ, ಆಚಾರ್ಯ,ಪಿತೃತರ್ಪಣ ಕೊಡುವುದು. ಉತ್ಸರ್ಜನೆಯಿಂದ ಮರಳಿ ಹೊಸದಾಗಿ ಆರಂಭಿಸುವುದಕ್ಕೆ ಸಿದ್ಧತೆಯಾಗಿಯೂ ಮಾನಸಿಕ, ದೈಹಿಕ ಶುದ್ಧಿಗಾಗಿಯೂ ಈ ಕ್ರಿಯೆ ನಡೆಯುತ್ತದೆ. ಉಪಾಕರ್ಮ ಜ್ಞಾನದ ಉತ್ಕರ್ಷಕ್ಕಾಗಿ ಉಪಶ್ರುತವಾದ ವಿಧಿ.

4.16.6 ಅಷ್ಟಮಿ

ಶ್ರೀಕೃಷ್ಣ ಜನ್ಮಾಷ್ಟಮಿ ಹಿಂದುಗಳೆಲ್ಲರ ಮನೆ ಮನೆಗಳಲ್ಲಿ ಆಚರಿಸಲ್ಪಡುತ್ತದೆ. ಉಡುಪಿಯಲ್ಲಿ ಇದು ಬಹಳ ವೈಭವದ ಹಬ್ಬ. ಶ್ರಾವಣ ಮಾಸದ ಕೃಷ್ಣಪಕ್ಷದ ಅಷ್ಟಮಿಯ ರೋಹಿನಿ ನಕ್ಷತ್ರದಲ್ಲಿ ಮಧ್ಯರಾತ್ರಿ ಕೃಷ್ಣನ ಜನನ. ಆ ದಿವಸ ಕೃಷ್ಣನಿಗೆ ಹಾಲಿನಿಂದ ಅರ್ಘ್ಯ ಕೊಡುವುದು ಈ ಪೂಜೆಯ ವಿಶೇಷ. ಶಿವಳ್ಳಿ ಬ್ರಾಹ್ಮಣರು ಹೆಚ್ಚಾಗಿ ಕೃಷ್ಣನ ಪ್ರತೀಕವಾಗಿ ಶಾಲಗ್ರಾಮವನ್ನು ಇಟ್ಟು ಅದಕ್ಕೆ ಅರ್ಘ್ಯವನ್ನು ಕೊಡುತ್ತಾರೆ. ಶಿವಳ್ಳಿಯವರಲ್ಲಿ ವಿಶೇಷವಾಗಿ ಈ ದಿವಸ 'ಮೂಡೆ' ಕಡುಬನ್ನು ಕೃಷ್ಣನಿಗೆ ಅರ್ಪಿಸುತ್ತಾರೆ. ಅದರೊಟ್ಟಿಗೆ (ಓಟೆ) ಹುಣಸೆ ಹುಳಿಯ ಚಟ್ನಿ, ಮತ್ತು ಬೆಲ್ಲ, ಏಲಕ್ಕಿ, ದ್ರಾಕ್ಷಿ, ಗೇರುಬೀಜ, ತೆಂಗಿನ ಕಾಯಿಯಿಂದ ಮಾಡಿದ ಕಜ್ಜಾಯವನ್ನು ಸಮರ್ಪಿಸುತ್ತಾರೆ. ಎಳ್ಳುಂಡೆ, ಚಕ್ಕುಲಿ, ಕೋಡುಬಳೆ, ತಯಾರಿಸುವ ಕ್ರಮವೂ ಇದೆ. ಮನೆಯವರೆಲ್ಲ ಉಪವಾಸವಿದ್ದು ರಾತ್ರಿ ಸ್ನಾನ ಮಾಡಿ ಮಡಿ ಬಟ್ಟೆಯಲ್ಲಿದ್ದು ಕೃಷ್ಣನ ಮೂರ್ತಿಗೆ ಅಥವಾ ಪ್ರತೀಕವಾದ ಶಾಲಗ್ರಾಮಕ್ಕೆ ಅರ್ಘ್ಯವನ್ನು ಹಿರಿಯರಾದಿಯಾಗಿ ಎಲ್ಲರೂ ಬಿಡುತ್ತಾರೆ. ಕೃಷ್ಣನ ಕುರಿತು ಭಜನೆ, ನಡೆಯುತ್ತದೆ. ಮುತ್ತೈದೆಯರು ಶೋಭಾನ ಹಾಡು ಹಾಡುತ್ತಾರೆ. ಕೃಷ್ಣನ ಲೀಲೆಯನ್ನು ಹಾಡಿನಲ್ಲಿ ಕೊಂಡಾಡುತ್ತಾರೆ. ಕೃಷ್ಣನು ನಂದಗೋಪ ಯಶೋದೆಯರ ಮಡಿಲಲ್ಲಿ ಗೋಕುಲದಲ್ಲಿ ಬೆಳೆದುದದರಿಂದ ಗೋಕುಲಾಷ್ಟಮಿ ಎಂದೂ ಈ ಹಬ್ಬಕ್ಕೆ ಹೆಸರಿದೆ. ಅಷ್ಟಮಿಯ ರಾತ್ರಿ ಮಕ್ಕಳು ಕೈಗೆ ಮದರಂಗಿ ಹಾಕುವ ಪದ್ಧತಿ ಕೆಲವು ಕಡೆ ಇದೆ. ಅಂತೆಯೇ ಮನೆಯವರೆಲ್ಲರೂ ಸೇರಿ ಚೆನ್ನೆಯಾಟವಾಡುವ ಕ್ರಮ ಕೆಲವು ಕಡೆ ಇದೆ. ಹಬ್ಬಗಳ ಆಚರಣೆಗಳಲ್ಲಿ ಪ್ರಾದೇಶಿಕ ವ್ಯತ್ಯಾಸಗಳಿವೆ.

* ಶ್ರೀಕೃಷ್ಣ ನಮ್ಮ ಮನೆಗೆ ಬರಲಿ ಎಂದು ಆಶಿಸಿ ಅವನ ಹೆಜ್ಜೆ ಗುರುತಿನ ರಂಗವಲ್ಲಿ ಹಾಕುತ್ತಾರೆ.

* ಭಾಗವತ ಪಠನ, ಕೃಷ್ಣ ಕಥಾ ಪ್ರಸಂಗಗಳ ಕುರಿತು ಭಜನೆ.

ವಿಷ್ಣು ಸ್ತೋತ್ರ, ವಿಷ್ಣು ಸಹಸ್ರನಾಮ, ಕೃಷ್ಣಸ್ತೋತ್ರ, ಅಷ್ಟೋತ್ತರ, ವೆಂಕಟೇಶ್ವರ ಸ್ತೋತ್ರವನ್ನು ಮನೆಯ ಹಿರಿಯರು ಅಥವಾ ಅರ್ಚಕರು ಪಠಿಸುತ್ತಾರೆ.

* ಹೆಸರು ಉಂಡೆ, ಗುಂಡಿಟ್ಟು ಲಾಡು, ಚಕ್ಕುಲಿ, ಕೋಡುಬಳೆ, ಕೊಬ್ಬರಿಮಿಠಾಯಿ,

ಕಡಲೆಉಂಡೆ, ಮುಂತಾದ ಭಕ್ಷ್ಯವನ್ನು ಮಾಡುತ್ತಾರೆ.

* ಚಂದ್ರನಿಗೂ, ಅರ್ಘ್ಯ ಬಿಡುವ ಕ್ರಮವಿದೆ.

* ಚಂದ್ರದರ್ಶನ ಆದ ಅನಂತರ ಹೆಚ್ಚಾಗಿ ಅರ್ಘ್ಯಬಿಡುವುದು ಮತ್ತು ಪೂಜೆ ಮಾಡುವ

ಪದ್ಧತಿ ರೂಢಿಯಲ್ಲಿದೆ.

4.16.7 ಗಣೇಶ ಚತುರ್ಥಿ

ಭಾದ್ರಪದ ಶುದ್ಧ ಚತುರ್ಥಿ ಹಿಂದೂಗಳಿಗೆ ಗಣಪತಿಯ ಹಬ್ಬದ ದಿನ. ವಿಘ್ನವಿನಾಶ ಹಾಗೂ ಸಿದ್ಧಿಬುದ್ಧಿಗಳ ಅಭೀಷ್ಟದಾಯಕ ಶಕ್ತಿಯ ಆದಿದೈವ ಶ್ರೀ ಗಣಪತಿ. 'ಕಲೌದುರ್ಗಿವಿನಾಯಕೌ'. ಕಲಿಯುಗದಲ್ಲಿ ಗಣಪತಿ ಹಾಗೂ ದುರ್ಗಿಯರು ಶೀಘ್ರ

ವರವನ್ನು ನೀಡುವ ದೇವತೆಗಳು. ಯಾವ ಶುಭ ಕಾರ್ಯವೇ ಆಗಲಿ ಅದು ಗಣೇಶನ ಪೂಜೆಯೊಂದಿಗೇ ಪ್ರಾರಂಭವಾಗುತ್ತದೆ. ಶ್ರೀ ಗಣೇಶನ ಪೂಜೆ ಮಾಡದೇ ಹೋದರೆ, ಬೇರೆ ಯಾವ ದೇವತೆಗಳ ಪೂಜೆಯೂ ಸಫಲವಾಗುವುದಿಲ್ಲ, ಫಲ ನೀಡುವುದಿಲ್ಲವೆಂಬ ನಂಬಿಕೆ. ಧಾರ್ಮಿಕವಾಗಿ ಅಸಂಖ್ಯ ದೇವಿ ದೇವತೆಗಳ ಮಧ್ಯದಲ್ಲಿ ಅಗ್ರ ಸ್ಥಾನವನ್ನು ಗಣಪತಿ ಪಡೆದಿದ್ದಾನೆ.

ಋಗ್ವೇದದಲ್ಲಿ ಗಣಪತಿಯ ವರ್ಣನೆ ಹೀಗಿದೆ.

ಗಣಾನಾಂತ್ವಾ ಗಣಪತಿಗ್ಂ ಹವಾಮಹೇ ಕವಿಂ ಕವೀನಾಮುಪಶ್ರವಸ್ಥಮಂ ಜೇಷ್ಠ
ರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತ ಆನಃ ಶೃಣ್ವನ್ನೂ ತಿಭಿಸ್ಸೀದ ಸಾಧನಂ.
ಈ ಮಂತ್ರದ ವ್ಯಾಖ್ಯೆ ಐತರೇಯ ಬ್ರಾಹ್ಮಣದಲ್ಲಿ ಹೀಗಿದೆ–
ಗಣಾನಾತ್ವಾಂ ಗಣಪತಿ ಹವಾಮಹೇ ಇತಿ ಬ್ರಾಹ್ಮಣಸ್ವತ್ಯಂ ಬ್ರಹವೈ
ಬೃಹಸ್ಪತಿರ್ಬಹ್ಮಣ್ಯೈ ವೈನಂ ತದ್ ಭಿಷಹ್ಯತಿ' ।

ಶ್ರೀ ಗಣೇಶನ ವಿಶೇಷತೆಯೆಂದರೆ ಅನಂತ ರೂಪಗಳು. ಪಂಚಮುಖಿಗಣಪತಿ, ಶಕ್ತಿಗಣಪತಿ, ವಿದ್ಯಾಗಣಪತಿ, ಸಿದ್ಧಿವಿನಾಯಕ ಸಂಕಷ್ಟಹರ ಗಣಪತಿ, ಹೇರಂಬ ಗಣಪತಿ, ದ್ವಿಜಗಣಪತಿ, ಬಾಲಗಣಪತಿ, ಮುಂತಾದ ಪ್ರಸಿದ್ಧ ರೂಪಗಳನ್ನು ಹೊಂದಿರುವುದರಿಂದ ಇವನನ್ನು ವಿಶ್ವರೂಪೀ ಎನ್ನುತ್ತಾರೆ.

ಗಣೇಶ ಹಬ್ಬದಲ್ಲಿ ಗಣಪತಿಯ ವಿಗ್ರಹದ ಪ್ರತಿಷ್ಠೆ, ಗಣಪತಿ ಹೋಮ, ಗಣಪತಿ ವಿಗ್ರಹದ ವಿಸರ್ಜನೆ ಇವುಗಳು ಮುಖ್ಯವಾದ ಅಂಶಗಳಾಗಿವೆ. ಚೌತಿಯ ದಿವಸದಂದು ವಿಧಿಯುಕ್ತವಾಗಿ ಮನೆಗಳಲ್ಲಿ, ಸಾರ್ವಜನಿಕ ಸಂಸ್ಥೆಗಳ ಆಶ್ರಯದಲ್ಲಿ ಗಣೇಶ ವಿಗ್ರಹವನ್ನು ಪ್ರತಿಷ್ಠೆ ಮಾಡುತ್ತಾರೆ. ಆ ದಿವಸ ಅನೇಕ ಮಂದಿಯ ಮನೆಗಳಲ್ಲಿ, ಗಣಪತಿಯ ದೇಗುಲಗಳಲ್ಲಿ, ಆರಾಧನಾ ಸ್ಥಳಗಳಲ್ಲಿ ಶ್ರೀ ಮಹಾಗಣಪತಿ ಹೋಮವನ್ನು ಮಾಡುತ್ತಾರೆ. ಒಂದು ತೆಂಗಿನ ಕಾಯಿಯಿಂದ ಸಹಸ್ರ ತೆಂಗಿನ ಕಾಯಿಯ ತನಕ ಹೋಮ ಕುಂಡಕ್ಕೆ ವಿಶೇಷ ಹೂ ಅರ್ಪಿಸಿ ಶ್ರೀ ಗಣೇಶನ ಆರಾಧನೆ ನಡೆಸುತ್ತಾರೆ. ಹೋಮಕ್ಕೆ ಮೋದಕ, ಅವಲಕ್ಕಿ, ಅರಳು, ಅರಳಿನ ಹುಡಿ, ಕಬ್ಬು, ತಿಲ (ಎಳ್ಳು), ತೆಂಗಿನಕಾಯಿ ಬಾಳೆಹಣ್ಣು ತ್ರಿಮಧುರದಲ್ಲಿ ಕಲಸಿ ಅಷ್ಟದ್ರವ್ಯವನ್ನು ಅರ್ಪಿಸುತ್ತಾರೆ. ಪಂಚಕಜ್ಜಾಯ, ಅಪ್ಪ, ಕಡುಬು, ಮೋದಕ, ಬಾಳೆಹಣ್ಣು, ಗಣಪತಿ ದೇವರಿಗೆ ತುಂಬ ಪ್ರಿಯವಾದ ನೈವೇದ್ಯಗಳು.

ಗಣಪತಿಯನ್ನೇ ಆರಾಧಿಸುವ 'ಗಾಣಪತ್ಯ' ಎಂಬ ಪಂಥವೂ ನಮ್ಮ ದೇಶದಲ್ಲುಂಟು. 'ಗರಿಕೆ' ಗಣಪತಿಗೆ ಪ್ರಿಯ. ಮಾನವನ ಜೀವಿತದಲ್ಲಿ ಎಲ್ಲಾ ಪ್ರತಿಷ್ಠೆ ಪ್ರಶಸ್ತಿ, ಏನೇ ಆಗಲಿ ಸುಖ ಸಂತೋಷಗಳು ಎಷ್ಟೇ ಇರಲಿ ಇವೆಲ್ಲ ಕೊನೆಗೆ ಮೂಲಭೂತವಾದ ಪಂಚಭೂತ ತತ್ವಗಳಲ್ಲಿ ಲೀನವಾಗಬೇಕೆಂಬುದನ್ನು ಆಧ್ಯಾತ್ಮಿಕವಾಗಿ ಗಣೇಶ ಉತ್ಸವ ಸೂಚಿಸುತ್ತದೆ.

ನಾಟಕಕಾರ ಭವಭೂತಿ ತನ್ನ 'ಮಾಲತೀಮಾಧವ' ನಾಟಕದ ನಾಂದೀ ಶ್ಲೋಕದಲ್ಲೇ ಗಣಪತಿಗೆ ಪ್ರಾರ್ಥನೆ ಸಲ್ಲಿಸುತ್ತಾನೆ.

ಸಾನಂದಂ ನಂದಿ ಹಸ್ತಾಹತಮುರಜರವಾಹೂತ ಕೌಮಾರ ಬಹಿರ್
ತ್ರಾಸಾನ್ನಾಸಾಗ್ರರಂದ್ರಂ ವಿಶತಿ ಫಣಿಪತೌ ಭೋಗಸಂಕೋಚಭಾಜಿ।

1. ಸಂಪಟೂರು ವಿಶ್ವನಾಥ್, ಹಬ್ಬಗಳು ಮತ್ತು ದಿನಾಚರಣೆಗಳು –2007 ಪುಟ 88
ತ್ರಿಮಧುರ =ಬೆಲ್ಲ, ಜೇನು, ತುಪ್ಪ

ಗಂಡೋಡ್ಡೀನಾಲಿಮಾಲಾ ಮುಖರಿತ ಕಶುಭಸ್ತಾಂಡವೇ ಶೂಲಪಾಣೇಃ
ವೈನಾಯಕ್ಯಶ್ಚಿರಂವೋ ವದನವಿಧುತಯಃ ಪಾತು ಚೀತ್ಕಾರವತ್ಯಃ[1] ।
ಯಕ್ಷಗಾನ ಕವಿಗಳಿಗಂತೂ ಗಣಪತಿ ತುಂಬ ಆಪ್ತನಾದವ. ಗಣಪತಿಗೆ ಆರತಿ ಎತ್ತದೆ ಯಕ್ಷಗಾನ ಆರಂಭವಾಗುವುದೇ ಇಲ್ಲ.

ಗಜಮುನದವಗೆ ಗಣಪಗೆ –ಚೆಲ್ವ
ತ್ರಿಜಗವಂದಿತನಿಗಾರತಿಯೆತ್ತಿರೆ[2]॥

ಶಿವಳ್ಳಿಯವರಲ್ಲಿ ಆವೆ ಮಣ್ಣಿನಿಂದ ಗಣಪತಿಯನ್ನು ಮಾಡಿ ಪೂಜಿಸುವುದು ವಿರಳ. ಕೆಲವರಲ್ಲಿ ಕುಲದೇವರಾಗಿ ಗಣಪತಿಯೇ ಇದ್ದರೆ ವಿಜ್ರಂಭಣೆಯಿಂದ ಗಣಪತಿ ಪೂಜೆ ಮಾಡುತ್ತಾರೆ. ಗಣಹೋಮ, ಪಂಚಾಮೃತ ಪೂರ್ವಕ ಅಭಿಷೇಕ, ಅಥರ್ವಶೀರ್ಷಾ ಅಭಿಷೇಕ, ಅಷ್ಟೋತ್ತರ, ಸಹಸ್ರನಾಮಗಳನ್ನು ಉಚ್ಚರಿಸಿ ಪೂಜೆ ಮಾಡುತ್ತಾರೆ. ಬೇರೆ ವರ್ಗದವರಂತೆಯೇ ಶಿವಳ್ಳಿ ಬ್ರಾಹ್ಮಣರಲ್ಲಿಯೂ ಶ್ರದ್ಧೆಯಿಂದ 'ಚೌತಿ'ಯ ಆಚರಣೆ ಮಾಡುತ್ತಾರೆ. ವಿಶೇಷವಾಗಿ ಚಕ್ಕುಲಿ, ಎಳ್ಳುಂಡೆ, ಗೋಧಿಹುಡಿಯ ಉಂಡೆ, ಕಡುಬು, ಮೋದಕ, ಅಪ್ಪವನ್ನು ಸಮರ್ಪಣೆಗೆ ಇಡುತ್ತಾರೆ.


4.16.8 ಮಹಾಲಯ ಅಮವಾಸ್ಯೆ

ಭಾದ್ರಪದ ಬಹುಳ ಪಾಡ್ಯದಿಂದ ಅಮವಾಸ್ಯೆಯವರೆಗೂ ಪಿತೃಪಕ್ಷ. ಪಿತೃಗಳ ಋಣ ತೀರಿಸಲೆಂದು ಪಿತೃಗಳನ್ನು ಸ್ಮರಿಸಿ ಸೇವೆ ಕೈಗೊಳ್ಳುವ ದಿನಗಳು. ಇದು ಒಂದು ಧಾರ್ಮಿಕ ಸಂಪ್ರದಾಯ. ತೀರಿಕೊಂಡ ಪಿತೃಗಳ ಮೇಲಿನ ಪ್ರೀತಿಗಾಗಿ ಮತ್ತು ಅವರ ಅನುಗ್ರಹಕ್ಕಾಗಿ ಆಚರಿಸುವ ವಿಧಿ. ಪಿತೃಗಳ ಆಶೀರ್ವಾದ ಯಾವ ಕಾಲಕ್ಕೂ ಬೇಕು. ಎಲ್ಲಾ ವರ್ಗದ ಜನರೂ ತಮ್ಮ ಪಿತೃಗಳ ಋಣ ತೀರಿಸಲು ತಮ್ಮದೇ ಆದ ವಿಧಿ ವಿಧಾನಗಳಲ್ಲಿ ಪಿತೃಗಳ ಸೇವೆ ಮಾಡುತ್ತಾರೆ. ಬ್ರಾಹ್ಮಣರು ಶ್ರಾದ್ಧ ಮಾಡಿ ಪಿತೃಗಳಿಗೆ ಪಿಂಡ ಪ್ರಧಾನ ಮಾಡುವರು. ಮಹಾಲಯ ಪಕ್ಷ ಪಿತೃಗಳಿಗೆ ತರ್ಪಣಾದಿಗಳನ್ನು ನೀಡಲು ಪ್ರಶಸ್ತ ಸಮಯವಾಗಿದೆ. ಈ ಸಮಯದಲ್ಲಿ ಗಂಡಸರು ಕ್ಷೌರ ಮಾಡಿಸಿಕೊಳ್ಳುವುದಿಲ್ಲ. ಉಗುರುಗಳನ್ನು ಕತ್ತರಿಸಿಕೊಳ್ಳುವುದಿಲ್ಲ. ಇಂತಹ ದೀಕ್ಷೆ ಹಲವರು ಕೈಗೊಳ್ಳುವರು. ಬ್ರಾಹ್ಮಣರಲ್ಲಿ ಪುರೋಹಿತರಿಗೆ ಪಾಯಸದ ಭೋಜನ ಮಾಡಿಸಿದರೆ ಗತಿಸಿದ ಪಿತೃಗಳಿಗೆ ಸದ್ಗತಿ ದೊರೆತು ಸಂತೃಪ್ತಿಯಾಗುವುದೆಂಬ ನಂಬಿಕೆ ಇದೆ.

ಸಾಮಾನ್ಯವಾಗಿ ನಮ್ಮನ್ನಲಿದ ಹಿರಿಯರನ್ನು ಆಪ್ತರನ್ನು ನಮ್ಮ ದಿನನಿತ್ಯದ ಕಷ್ಟ ಕೋಟಲೆಗಳ ನಡುವೆ ಸ್ಮರಿಸಲು ಸಾಧ್ಯವಾಗದಿರುವುದೇ ಹೆಚ್ಚು. ಹೀಗಾಗಿ ಕೊನೆಯ ಪಕ್ಷ ವರ್ಷಕ್ಕೊಮ್ಮೆ ಪಿತೃ ಪಕ್ಷದಲ್ಲಿ ಅಥವಾ ಮಹಾಲಯ ಅಮವಾಸ್ಯೆಯಂದು ಅವರನ್ನು ಸ್ಮರಿಸಿ ತಿಲ (ಎಳ್ಳು) ತರ್ಪಣವನ್ನು, ಜಲತರ್ಪಣವನ್ನು, ಪಿಂಡ ದಾನವನ್ನು ಮಾಡಿ ಸ್ಮರಿಸುವುದು ನಮ್ಮ ಕರ್ತವ್ಯವೂ ಹೌದು.

ಶ್ರಾದ್ಧದ ಕ್ರಮದಲ್ಲಿ ಪಿಂಡ ಹಾಕುವುದು. ಎಡಕಡೆಗೆ 3 ಪಿಂಡದ ಬದಲು ಆರು ಪಿಂಡಗಳು. ಬಲಬದಿಗೆ 3 ಪಿಂಡದ ಬದಲು 6 ಪಿಂಡಗಳು ಒಟ್ಟು ಮಹಾಲಯ ಅಮವಾಸ್ಯೆಯ ದಿವಸ ಕ್ರಿಯೆ ಹಿಡಿಯುವವ 12 ಪಿಂಡಗಳನ್ನು ಇಡಬೇಕು. ಈ 12 ಪಿಂಡಗಳ ಸುತ್ತ ದಕ್ಷಿಣದಿಂದ ಪ್ರಾರಂಭಿಸಿ ಅಪ್ರದಕ್ಷಿಣೆಕಾರದಲ್ಲಿ ಸತ್ತಿರುವ ಕುಟುಂಬದ

[1]ಡಾ. ನರಸಿಂಹ ಮೂರ್ತಿ ಎಚ್.ವಿ.–ನಮ್ಮ ಹಬ್ಬಗಳು –2002 , ಪುಟ 66
[2]ಡಾ. ನರಸಿಂಹಮೂರ್ತಿ ಎಚ್. ವಿ., ನಮ್ಮ ಹಬ್ಬಗಳು 2002, ಪುಟ 70


ಸರ್ವೋದ್ದಿಷ್ಟ ಪಿಂಡ
ತಂದೆಯ ಪಿಜ್ಜ
ಪಿಜ್ಜ
ತಾಯಿಯ ತಂದೆಯ ಅಜ್ಜ
ತಾಯಿಯ ತಂದೆಯ ಅಜ್ಜಿ
ತಂದೆಯ ತಾಯಿಯ ಅಜ್ಜಿ
ಅಜ್ಜ
ತಾಯಿಯ ತಂದೆಯ ತಂದೆ
ತಾಯಿಯ ತಂದೆಯ ತಾಯಿ
ತಾಯಿ
ತಂದೆ
ತಾಯಿಯ ತಂದೆ
ತಾಯಿಯ ತಾಯಿ
ಮೃತಪಟ್ಟಿರುವ ಕುಟುಂಬದವರ ಬಗ್ಗೆ ಪಿಂಡ
೩೨ ಪಿಂಡಗಳು

ಸದಸ್ಯರ ಬಗ್ಗೆ ಪಿಂಡ ಇಡಬೇಕು. ಬಲಬದಿಯ ತುದಿಯಲ್ಲಿ ಸರ್ವೋದಿಷ್ಠ ಪಿಂಡವನ್ನು ಇಡಬೇಕು. ಆಚಾರ್ಯ, ಗುರುಪತ್ನಿ, ಜ್ಞಾತಿ, ಸ್ವಾಮಿ, ಅವರ ಪತ್ನಿ ಹೀಗೆ 32 ಪಿಂಡವನ್ನು ಬಲ ಬದಿಯ ಕೆಳಗೆ ಇಡಬೇಕು.

ಪಿಂಡ ಪ್ರಧಾನ ಆದ ಅನಂತರ ಕೊನೆಗೆ ಎಳ್ಳು ಮತ್ತು ನೀರಿನಿಂದ ತರ್ಪಣವನ್ನು ಕೊಡುತ್ತಾರೆ. ಪ್ರಾರಂಭದಲ್ಲಿ ತಂದೆ ಬಳಗದವರಿಗೆ, ತಾಯಿಯ ಬಳಗದವರಿಗೆ, ದೊಡ್ಡಪ್ಪ, ದೊಡ್ಡಮ್ಮ, ಚಿಕ್ಕಪ್ಪ, ಚಿಕ್ಕಮ್ಮ, ಇವರಿಗೆ ತರ್ಪಣ ಬಿಡುತ್ತಾರೆ. ಅನಂತರ ತಂದೆಯ ತಂಗಿ, ಗಂಡ, ಸೋದರಮಾವ, ಅತ್ತೆಯರಿಗೆಲ್ಲ ತರ್ಪಣ, ಹೆಂಡತಿಯ ತಂದೆ, ತಾಯಿಯರಿಗೆ ತರ್ಪಣ ಬಿಡುತ್ತಾರೆ. ಆಚಾರ್ಯ ಮತ್ತು ಬಳಗದವರಿಗೆ ತರ್ಪಣ. ಕೊನೆಗೆ ಯಮ ತರ್ಪಣ ಬಿಡುತ್ತಾರೆ. ಹೀಗೆ ಮಹಾಲಯ ಅಮವಾಸ್ಯೆಯನ್ನು ಶಿವಳ್ಳಿ ಬ್ರಾಹ್ಮಣರು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ.

4.16.9 ಅನಂತವ್ರತ

ಭಾದ್ರಪದ ಶುಕ್ಲ ಚತುರ್ದಶೀ ತಿಥಿಯಲ್ಲಿ ಅನಂತ ವ್ರತಕ್ಕೆ ಬೇಕಾದ ತುಲಸೀಪತ್ರ, ಪುಷ್ಪಫಲಾದಿಗಳನ್ನು ಸಂಗ್ರಹಿಸಿಕೊಂಡು ದೇವರ ಮುಂದೆ ಮಂಟಪ, ತೋರಣ, ಫಲ, ಮೇಲ್ಕಟ್ಟು ಮೊದಲಾದವುಗಳಿಂದ ಶೃಂಗರಿಸಿ ಸ್ನಾನ ಮಾಡಿ ದೇವರ ನಿರ್ಮಾಲ್ಯ ವಿಸರ್ಜನ ಅಭಿಷೇಕಾದಿಗಳನ್ನಾಚರಿಸಿ ಯಮುನಾ ಪೂಜೆಗಾಗಿ ಪುಣ್ಯನದಿ, ಸರೋವರ, ಕೆರೆ ಅಥವಾ ಬಾವಿಯ ಬಳಿಗೆ ಗಂಧ, ಕುಂಕುಮ, ಪುಷ್ಪ, ಪತ್ರ, ದೂಪ, ದೀಪ ಫಲಾದಿಗಳನ್ನು ಸಂಗ್ರಹಿಸಿಕೊಂಡು ಹೋಗಿ ಮಂತ್ರ ವಿಧಾನದಿಂದ ಯಮುನಾ ದೇವಿಯನ್ನರ್ಚಿಸಿ ಕಲಶ ಪೂರಣ ಮಾಡಿ, ವಾದ್ಯಘೋಷ ಮಂತ್ರ ಘೋಷಗಳಿಂದ ಆ ಕಲಶವನ್ನು ತಂದು, ಮಂಟಪ ಮಧ್ಯದಲ್ಲಿ ಪದ್ಮಾ ಮಂಡಲದಲ್ಲಿಟ್ಟು, ಸಪ್ತಫಣಾಲಂಕೃತ ದರ್ಭಮಯ ಶೇಷಾಕೃತಿಯನ್ನು ಆ ಕಲಶದ ಮೇಲಿಟ್ಟು ಅದರ ಮೇಲೆ ಶಾಲಗ್ರಾಮವನ್ನಿಟ್ಟು, ಆಸನ ಪ್ರಾಣಾಯಾಮಗಳನ್ನು ಮಾಡಿ ಅನಂತನಾಮಕ ಶೇಷನ ಮೇಲೆ ಶಯನ ಮಾಡಿದ ಕೌಂಡಿನ್ಯ ಮುನಿವರದನಾದ ಅನಂತ ನಾಮಕನಾದ ಪದ್ಮನಾಭ ಮೂರ್ತಿಯನ್ನು ಧ್ಯಾನಿಸುತ್ತಾ ಪೂಜಿಸಬೇಕು.

ಪೂಜಾನಂತರದಲ್ಲಿ ಪೂಜಕನು ಸಂಕಲ್ಪ ಪುರಸ್ಸರವಾಗಿ ಬ್ರಾಹ್ಮಣ, ಸುವಾಸಿನಿಯರ ಭೋಜನ ಮಾಡಿಸಿ ಯಥಾಶಕ್ತಿ ತಾಂಬೂಲ ದಕ್ಷಿಣೆಕೊಟ್ಟು, ಅವರಿಂದ ಮಂತ್ರಾಕ್ಷತೆ ಸ್ವಸ್ತಿ ವಾಚನ ಮಾಡಿಸಿ, ಬ್ರಾಹ್ಮಣ ಆಜ್ಞೆಯಿಂದ ಶ್ರೀಮದನಂತ ಪ್ರಸಾದವನ್ನು ಬಂಧು ಮಿತ್ರರೊಡನೆ ಸ್ವೀಕರಿಸಿ, ತಾನು ಶುದ್ಧನಾಗಿಯೇ ಇದ್ದು ಅಪರಾಹ್ನದಲ್ಲಿ ಶ್ರೀ ಮದನಂತ ವ್ರತಕಥಾ ಪುರಾಣ ಶ್ರವಣಮಾಡಿ, ಯಥಾವಿಧಿ ರಾತ್ರಿಪೂಜೆ, ನಾಮಸಂಕೀರ್ತನಾದಿಗಳನ್ನಾಚರಿಸಿ, ಮರುದಿನಫಲಸಮರ್ಪಣ ಪೂರ್ವಕ ಪೂಜೆ ಮಾಡಿ ಕಲಶ ವಿಸರ್ಜನ ಮಾಡಬೇಕು.

ಈ ವ್ರತದಲ್ಲಿ 14ಕ್ಕೆ ಮಹತ್ವವಿದೆ. ಮಂಡಲದಲ್ಲಿ 14 ಕಲಶಗಳನ್ನು ಇಟ್ಟು ಪೂಜಿಸುತ್ತಾರೆ. ದೇವರ ಪೂಜಾ ಸಾಮಗ್ರಿಗಳು 14 ಸಂಖ್ಯೆಯಲ್ಲಿರಬೇಕು. ದೇವರ ಮುಂದೆ 14 ಗಂಟುಗಳನ್ನು ಹಾಕಿದ ಅರಿಶಿನ ಕುಂಕುಮದಲ್ಲಿ ನೆನಸಿದ ದಾರದ ಎಳೆಗಳನ್ನು ಇಟ್ಟು ಪೂಜಿಸುತ್ತಾರೆ. ಹಿಂದೆ ಮನೆಯವರೇ ಸ್ವತಃ ದಾರ ತಯಾರಿಸುತ್ತಿದ್ದರು. ಪೂಜೆಯ ಬಳಿಕ ಪರಮಾತ್ಮ ಸ್ವರೂಪಿ ಈ ದಾರವನ್ನು ಕೈಗೆಕಟ್ಟಿಕೊಳ್ಳುವುದು ರೂಢಿ. ದೇವರಿಗೆ 14 ರೀತಿಯ ನೈವೇದ್ಯ ಸಮರ್ಪಿಸಬೇಕು.

ಮಹಾವಿಷ್ಣುವು ಪದ್ಮಾನಾಭನಾಗಿ ಅನಂತ ಅಂದರೆ ಸಹಸ್ರ ಹೆಡೆಯ ನಾಗನಲ್ಲಿ ಲೀನನಾದ ದಿನವೆಂದೂ ಹೇಳುತ್ತಾರೆ.

ವ್ರತ ಹಿಡಿದ ಶಕ್ತರು (ಅನುಕೂಲಸ್ಥರು) ಗೋವನ್ನು ಅನಂತ ಪದ್ಮನಾಭ ವ್ರತದ ದಿನ ದಾನ ಮಾಡುತ್ತಾರೆ. ವ್ರತವನ್ನು ಆಚರಿಸುವವರು ಪ್ರತಿ ಸಂವತ್ಸರದಲ್ಲಿಯೂ ಹದಿನಾಲ್ಕು ಗಂಟುಗಳನ್ನು ಹಾಕಿದ ಹೊಸ ದಾರವನ್ನು ಕೈಗೆ ಕಟ್ಟಿಕೊಳ್ಳುತ್ತಾರೆ. ಹದಿಮೂರು ವರ್ಷಗಳ ವ್ರತಾಚರಣೆಯ ಅನಂತರ ಹದಿನಾಲ್ಕನೆಯ ವರುಷ 'ಉದ್ಯಾಪನೆ' ಮಾಡಿ ಪುನಃ ವ್ರತವನ್ನಾಚರಿಸಿಕೊಂಡು ಬರುವುದು ಪದ್ಧತಿ. ಈ ಅನಂತವ್ರತವನ್ನು ನಿಷ್ಠೆ, ಶ್ರದ್ಧೆಯಿಂದ ಮಾಡಿದರೆ ಸಕಲ ಕಷ್ಟಗಳು ಪರಿಹಾರವಾಗಿ ಇಷ್ಟಾರ್ಥಗಳೆಲ್ಲ ಸಿದ್ಧಿಸುವುವು ಎಂಬ ನಂಬಿಕೆ. ಅಂತೆಯೇ 'ಸಂತಾನ ಅಭಿವೃದ್ಧಿಗಾಗಿ ಈ ವ್ರತವನ್ನು ಮಾಡುತ್ತಾರೆ. ಶಿವಳ್ಳಿ ಬ್ರಾಹ್ಮಣರು ವಂಶಪಾರಂಪರ್ಯವಾಗಿ ಈ ವ್ರತವನ್ನು ಭಕ್ತಿ ಶ್ರದ್ಧೆಯಿಂದ ಆಚರಿಸಿಕೊಂಡು ಬರುತ್ತಿದ್ದಾರೆ.

4.16.10 ನವರಾತ್ರಿ

ನವರಾತ್ರಿ ಹಬ್ಬವನ್ನು ಪ್ರತಿವರ್ಷವೂ ಆಶ್ವಯುಜ ಮಾಸದಲ್ಲಿ ಹಿಂದೂಗಳು ವೈಭವದಿಂದ ಆಚರಿಸುತ್ತಾರೆ. ನವರಾತ್ರಿಯು ಆಶ್ವಯುಜ ಶುಕ್ಲಪ್ರತಿಪದ್ (ಪಾಡ್ಯಮಿ) ಯಿಂದ ದಶಮಿಯ ತನಕ ಆಚರಿಸಲ್ಪಡುವ ಪವಿತ್ರವೂ ಮಹಿಮೆಯಿಂದ ಕೂಡಿದುದೂ ಆದ ಹಬ್ಬವಾಗಿದೆ. ಒಂಬತ್ತು ರಾತ್ರಿಗಳ ಪರ್ಯಂತ ಆಚರಿಸಲ್ಪಡುವ ಹಬ್ಬವಾಗಿರುವುದರಿಂದ ಇದಕ್ಕೆ 'ನವರಾತ್ರಿ' ಎಂಬ ಹೆಸರು ಬಂದಿರುತ್ತದೆ. ಅಂತೆಯೇ ದಶ ಎಂದರೆ ಹತ್ತು, ಅಹರ ಎಂದರೆ ಹಗಲು. ಹತ್ತು ಹಗಲುಗಳಲ್ಲೂ ಸಹ ಆಚರಿಸ್ಪಡುವ ಹಬ್ಬವೇ ದಶಹರ ಅಥವಾ ದಸರಾಹಬ್ಬ. ಅಶ್ವಯುಜ ಶುಕ್ಲ ಪಾಡ್ಯದಂದು ಆರಂಭವಾದ ನವರಾತ್ರಿ ಹಬ್ಬದ ಸಂಬಂಧ ಒಂಬತ್ತು ರಾತ್ರಿಗಳು ಕಳೆದ ನಂತರ ಬರುವ ಹತ್ತನೇ ದಿವಸ 'ದಶಮಿ' ಇದನ್ನು ವಿಜಯ ದಶಮಿ ಎನ್ನುತ್ತಾರೆ. ವಿಜಯದಶಮಿಯ ದಿವಸ ವೈಭವದ ಮೆರವಣಿಗೆ ಸಂತೋಷದ ಸಾಂಸ್ಕೃತಿಕ ಹಾಗೂ ಧಾರ್ಮಿಕವಾದ ಅನೇಕ ಚಟುವಟಿಕೆಗಳು ನಡೆಯುತ್ತದೆ. ನವರಾತ್ರಿ ಹಬ್ಬದ ಒಂಬತ್ತು ದಿನಗಳಲ್ಲಿಯೂ ಶಕ್ತಿದೇವಿ ಜಗನ್ಮಾತೆಯನ್ನು ಆರಾಧಿಸುತ್ತಾರೆ. ಜಗದೀಶ್ವರಿಯನ್ನು ಭಕ್ತಿ ಶ್ರದ್ಧೆಗಳಿಂದ ಕೂಡಿ ಆರಾದಿಸುವ ಹಬ್ಬವೇ 'ನವರಾತ್ರಿ' ಹಬ್ಬವಾಗಿರುತ್ತದೆ. ದೇವಿಯನ್ನು ದುರ್ಗಾ, ಚಾಮುಂಡಿ, ಲಲಿತಾ, ಭುವನೇಶ್ವರೀ, ಭಗವತಿ ಎಂದು ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಇರುವ ಏಕಮೇವಾ ದ್ವಿತೀಯವಾದ ಪರಮಾತ್ಮ ಶಕ್ತಿಯು ವಿವಿಧ ರೂಪಗಳಲ್ಲಿ ಪ್ರಕಟಗೊಂಡಿದ್ದು, ನವರಾತ್ರಿ ವೇಳೆಯಲ್ಲಿ ವಿಶೇಷವಾದ ರೀತಿಯಲ್ಲಿ ವಿಧಿಯುಕ್ತವಾಗಿ ದೇವಿಯ ವಿವಿಧ ರೂಪಗಳ ಆರಾಧನೆ ನಡೆಯುತ್ತದೆ. ನವರಾತ್ರಿಯ ವೇಳೆ ಮಾಡುವ ಪೂಜೆ, ಪಾರಾಯಣಾದಿ ವಿಚಾರಗಳಿಗೆ ಶಾಸ್ತ್ರೋಕ್ತವಾದ ವಿಧಿ ನಿಯಮಗಳು ಇದ್ದು ಎಲ್ಲವನ್ನೂ ಕ್ರಮ ಪ್ರಕಾರವಾಗಿಯೇ ನಡೆಸಬೇಕಾಗುವುದು ನವರಾತ್ರಿ ಆಚರಣೆಯ ಮುಖ್ಯ ಅಂಶ.

ಶಿವಳ್ಳಿ ಬ್ರಾಹ್ಮಣರಲ್ಲಿಯಲ್ಲಿಯೂ 'ನವರಾತ್ರಿ' ಪೂಜೆಯನ್ನು ಮಾಡುತ್ತಾರೆ. ದೇವಿ ಕುಲದೇವತೆಯಾಗಿದ್ದರೆ ಅಂತಹವರ ಮನೆಯಲ್ಲಿ ಪ್ರತೀವರ್ಷವೂ ಪೂಜೆಯನ್ನು ಮಾಡುತ್ತಾರೆ. ಒಂಬತ್ತು ದಿವಸವೂ ದೇವಿಯಪೂಜೆ, ದೇವಿಭಾಗವತ, ಶ್ರೀ

ದುರ್ಗಾಸಪ್ತಶತೀ, ಲಲಿತಸಹಸ್ರನಾಮ ಸ್ತೋತ್ರಗಳನ್ನು ಅನುಕೂಲಕ್ಕೆ ತಕ್ಕಂತೆ ಪಾರಾಯಣ ಮಾಡುತ್ತಾರೆ. ಜಪ, ತಪ, ಉಪವಾಸಾದಿವ್ರತ ನಿಯಮಗಳು ವಿಧಿಯುಕ್ತವಾಗಿ ಆಚರಿಸಲ್ಪಡುತ್ತದೆ. ಒಂಬತ್ತು ದಿವಸದ ಆರಾಧನೆಯಲ್ಲಿ ನಿತ್ಯಬ್ರಾಹ್ಮಣ ಒಬ್ಬ ಇರಲೇ ಬೇಕು. ಕೆಲವು ಮನೆಗಳಲ್ಲಿ ಹಗಲು, ಕೆಲವು ಮನೆಗಳಲ್ಲಿ ರಾತ್ರಿ ನವರಾತ್ರಿ ಪೂಜೆ ಜರುಗುತ್ತದೆ. ಅದು ರೂಢಿ ಮಾಡಿಕೊಂಡಂತೆ. ಪ್ರತೀ ದಿವಸದ ಪೂಜೆಗೆ ಊರಿನ ಜನರಿಗೆ ಮತ್ತು ಸಂಬಂಧಿಕರಿಗೆ ಅನುಕೂಲಕ್ಕೆ ತಕ್ಕಂತೆ ಆಹ್ವಾನ ನೀಡುತ್ತಾರೆ. ಆಹ್ವಾನಿತರು ಪೂಜೆಯಲ್ಲಿ ಪಾಲ್ಗೊಂಡು ಕೃತಾರ್ಥರಾಗುತ್ತಾರೆ.

ಆಶ್ವಯುಜ ಶುಕ್ಲ ಪಾಡ್ಯದಂದು ಆರಂಭವಾಗುವ ನವರಾತ್ರಿ ಪೂಜೆಯನ್ನು ಸಪ್ತಮಿ, ಅಷ್ಟಮಿ, ಮತ್ತು ನವಮಿಯ ತಿಥಿಗಳಂದು ವಿಶೇಷಪೂಜೆ. ಐದನೇ ದಿನವಾದ ಪಂಚಮಿಯಂದು ದೇವಿಯನ್ನು ಲಲಿತಾ ಎಂದು ಗೌರವಿಸಿ ಪೂಜಿಸುತ್ತಾರೆ. ಆದಿನವನ್ನು 'ಲಲಿತಾ ಪಂಚಮಿ' ಎಂದೂ ಕರೆಯುತ್ತಾರೆ. ದುರ್ಗಾಸಪ್ತಮಿ, ದುರ್ಗಾಷ್ಟಮಿ ಮತ್ತು ಮಹಾನವಮಿಗಳೆಂಬ ಮೂರುದಿನ ವಿಶೇಷ ಆರಾಧನೆ ಮಾಡುತ್ತಾರೆ. ಒಂಬತ್ತನೆಯ ದಿವಸ ಪೂಜೆ ಆದ ಅನಂತರ ತಿರುಪತಿಗೆ 'ಮುಡಿಪು' ಕಟ್ಟುವ ಕ್ರಮವನ್ನು ಶಿವಳ್ಳಿಯಲ್ಲಿ ಕೆಲವರು ಇಟ್ಟುಕೊಂಡಿದ್ದಾರೆ. ಅದಿವಸ ಕುಟುಂಬದವರೆಲ್ಲ ಒಟ್ಟಿಗೆ ಸೇರಿ ತಮ್ಮ ಕಾಣಿಕೆಯನ್ನು ತಿರುಪತಿಗೆ ಸಲ್ಲುವಂತೆ ಕಾಣಿಕೆ ಡಬ್ಬದಲ್ಲಿ ಹಾಕುತ್ತಾರೆ.

4.16.11 ದೀಪಾವಳಿ

ದೀಪಾವಳಿ ಎಂದರೆ ಸಡಗರ ಸಂಭ್ರಮ. ನೆಲಮುಗಿಲು ತುಂಬ ಬೆಳಕಿನ ಚಿತ್ತಾರ. ಮಕ್ಕಳಿಗೆ ಮೋಜು, ಹಿರಿಯರಿಗೆ ಹರ್ಷ. ಕತ್ತಲೆ ಅಜ್ಞಾನದ ಸಂಕೇತ, ಬೆಳಕು ಜ್ಞಾನದ ಸಂಕೇತ. ಜನತೆಯಲ್ಲಿರುವ ಅಜ್ಞಾನವು ದೂರವಾಗಿ ಜ್ಞಾನಾರ್ಜನೆ ಬೆಳಗಲಿ ಎಂಬುದನ್ನು ಸೂಚಿಸುವುದೇ ದೀಪಾವಳಿ ಹಬ್ಬ.

ಆಶ್ವಯುಜ ಕೃಷ್ಣ ತ್ರಯೋದಶಿಯಿಂದ ಕಾರ್ತಿಕಶುದ್ಧ ತದಿಗೆಯವರೆಗೆ ಈ ಹಬ್ಬದ ಆಚರಣೆ. ಬೆಳಕಿನ ಹಬ್ಬವೆಂದು ವಿಜೃಂಭಣೆಯಿಂದ ಆಚರಿಸುತ್ತಾರೆ. ತ್ರಯೋದಶಿಯಂದು ಸಂಜೆಗೆ ಜಲಪೂಜೆ ನಡೆಯುತ್ತದೆ. ಮಹಿಳೆಯರು ಸ್ನಾನದ ಹಂಡೆಯನ್ನು ತೊಳೆದು ಜೇಡಿಯಿಂದ ಚಿತ್ತಾರ ಬರೆದು ಹಂಡೆಯ ಕಂಠಕ್ಕೆ ಹೂಮಾಲೆಗಳನ್ನು, ನೂರ್ತೊಂಗು ಗಿಡದ ಬಳ್ಳಿಯನ್ನು ಕಟ್ಟಿ ಸಿಂಗರಿಸುತ್ತಾರೆ. ಆ ಬಳಿಕ ಜಲಪೂಜೆ ನಡೆಸಿ ಶಂಖ, ಜಾಗಟೆಯ ನಿನಾದದೊಂದಿಗೆ ಹಂಡೆಗೆ ನೀರು ತುಂಬಿಸುತ್ತಾರೆ. ಚತುರ್ದಶಿಯಂದು ಮುಂಜಾನೆ ಮನೆಯ ಹಿರಿಯ ಹೆಂಗಸು ತಲೆಗೆ ನೀರನ್ನು ಹಾಕುತ್ತಾರೆ. ಅದಕ್ಕಿಂತ ಮುಂಚೆ ಮನೆಯ ಹಿರಿಯವಳು ದೇವರ ಎದುರುನಲ್ಲಿ ಒಬ್ಬೊಬ್ಬರನ್ನೇ ಕುಳ್ಳಿರಿಸಿ 'ಗರಿಕೆ' ಹುಲ್ಲನ್ನು ದೇವರ ಎದುರು ಇಟ್ಟಿರುವ ಎಣ್ಣೆಗೆ ಅದ್ದಿ ಹಣೆ, ತಲೆ ಮತ್ತು ನೆಲಕ್ಕೆ ಮೂರು ಸಾರಿ ಸ್ವಲ್ಪ ಎಣ್ಣೆಯನ್ನು ಹಾಕುತ್ತಾಳೆ. ಅನಂತರ ತಲೆಗೆ ಚೆನ್ನಾಗಿ ಎಣ್ಣೆಯನ್ನು ಹಾಕುತ್ತಾರೆ. ಮನೆಯ ಎಲ್ಲಾ ಸದಸ್ಯರಿಗೆ ಹಾಕಲಾಗುತ್ತದೆ. ಅನಂತರ ಹಿಂದಿನ ದಿವಸವೇ ಹಂಡೆಯಲ್ಲಿ ತುಂಬಿಸಿಟ್ಟ ನೀರಿನಿಂದ ಸ್ನಾನ ಮಾಡುತ್ತಾರೆ. ಬಳಿಕ ಪಚ್ಚೆ ಹೆಸರಿನ ಪಾನಕ ಕುಡಿಯುತ್ತಾರೆ. ದೋಸೆ, ಸಿಹಿ ಅವಲಕ್ಕಿ, ಚಟ್ನಿ, ಸಾಂಬಾರು ಮುಂತಾದವುಗಳನ್ನು ಹಬ್ಬದ ಪ್ರಯುಕ್ತ ಮಾಡಿ ಸಂಭ್ರಮದಿಂದ ಬೆಳಗ್ಗೆ ತಿನ್ನುತ್ತಾರೆ. ಶಿವಳ್ಳಿಯವರಲ್ಲಿ ದೊಡ್ಡ

ಹಿಡುವಳಿಯವರು ಭೂಮಸೂದೆ ಬರುವವರೆಗೆ ತಮ್ಮ ಗೇಣಿದಾರರನ್ನು ಈ ದಿವಸ ಮನೆಗೆ ಬರಮಾಡಿಕೊಂಡು, ಹೊಟ್ಟೆತುಂಬಾ ದೋಸೆ, ಸಿಹಿಅವಲಕ್ಕಿ ತಿನ್ನಲು ಹಂಚುತ್ತಿದ್ದರು. ತಲೆಗೆ ಚೆನ್ನಾಗಿ ಎಣ್ಣೆಯನ್ನು ಸುರಿಯುತ್ತಿದ್ದರು. ಈಗ ಆ ಪದ್ಧತಿ ಇಲ್ಲ. ಚತುದರ್ಶಿಯಂದು ಈ ಆಚರಣೆ ಸಡಗರ ನಡೆಯುತ್ತದೆ. ಇದನ್ನು ನರಕ ಚತುದರ್ಶಿಯೆಂದು ಕರೆಯುತ್ತಾರೆ. ಹಿಂದೆ ಈ ಚತುದರ್ಶಿಯಂದು ಪ್ರಾಗ್ಜೋತಿಷಪುರದ ಅರಸನಾದ ನರಕಾಸುರನನ್ನು ಕೊಂದು ಶ್ರೀಕೃಷ್ಣ ಹದಿನಾರು ಸಾವಿರ ಕನ್ಯೆಯರನ್ನು ಬಿಡುಗಡೆಗೊಳಿಸಿದ ವಿಜಯೋತ್ಸವದ ಸಂಕೇತವಾಗಿ ಈಗಲೂ ತೈಲಾಭ್ಯಂಜನ ಮಾಡಲಾಗುತ್ತದೆ. ಅಮವಾಸ್ಯೆಯಂದು ಲಕ್ಷ್ಮೀಪೂಜೆ. ಪಾಡ್ಯದಂದು ಬಲೀಂದ್ರಪೂಜೆ ನಡೆಯುತ್ತದೆ. ಶಿವಳ್ಳಿಯವರು ಕೆಲವು ಕಡೆ (ಬೆಳ್ತಂಗಡಿ ತಾಲೂಕಿನಲ್ಲಿ) ಹಾಲೆ ಮರದಿಂದ ಬಲೀಂದ್ರನನ್ನು ಮಾಡಿ ಸಿಂಗರಿಸಿ ಪೂಜಿಸುತ್ತಾರೆ. ಗದ್ದೆ ಕೃಷಿ ಮಾಡುತ್ತಿದ್ದ ಸಂದರ್ಭದಲ್ಲಿ ಬಿದಿರಿನ ಕೋಲುಗಳಿಗೆ ಬಿಳಿ ಅರಿವೆ ಸುತ್ತಿ ಎಣ್ಣೆಯಲ್ಲಿ ಅದ್ದಿ ಉರಿಸಿ ಅವರವರ ಗದ್ದೆಯ ಮೂಲೆಯಲ್ಲಿ ನೆಡುತ್ತಿದ್ದರು. ಬಲೀಂದ್ರ ಮರವನ್ನು ಸಿಂಗರಿಸಿ, ಅವಲಕ್ಕಿ, ಬೆಲ್ಲ, ಬಾಳೆಹಣ್ಣು, ವೀಳ್ಯವಿಟ್ಟು, ಕೈಮುಗಿದು ಬಲೀಂದ್ರನನ್ನು ಕರೆಯುತ್ತಾ ಬಲೀಂದ್ರ ಪೂಜೆಯನ್ನು ಮಾಡುತ್ತಾರೆ. ಗೋಪೂಜೆಯ ದಿವಸ ದನಕರುಗಳನ್ನು ಸ್ನಾನ ಮಾಡಿಸಿ ಎಣ್ಣೆ ಹಚ್ಚಿ ಕೊಂಬುಗಳಿಗೆ ಬಣ್ಣ ಬಳಿಯುತ್ತಾರೆ. ರಾತ್ರಿ ತುಳಸೀ ಕಟ್ಟೆಯ ಹತ್ತಿರ ಪೂಜೆ ಮಾಡಿ ಒಂದು ಗೆರಸೆಯಲ್ಲಿ ಭತ್ತ, ಅವಲಕ್ಕಿ, ದೋಸೆಯನ್ನು ಇಟ್ಟುಕೊಂಡು ಮನೆಯವರು ಹಟ್ಟಿಗೆ ಹೋಗುತ್ತಾರೆ. ದನಕರುಗಳ ಕಾಲು ತೊಳೆದು ಕುಂಕುಮ ಹಚ್ಚಿ ಕೊರಳಿಗೆ ಹೂಹಾರ ಹಾಕಿ ಆರತಿ ಬೆಳಗುತ್ತಾರೆ. ಬಳಿಕ ಗೆರೆಸೆಯಲ್ಲಿ ಕೊಂಡೊಯ್ದು ವಸ್ತುಗಳನ್ನು ಅವುಗಳಿಗೆ ತಿನ್ನಿಸುತ್ತಾರೆ. ಹೆಚ್ಚಾಗಿ ಅರಸಿನ ಹಾಕಿದ ದೋಸೆ, ಸಿಹಿ ಅವಲಕ್ಕಿ, ಬಾಳೆಹಣ್ಣು ಮುಂತಾದವುಗಳನ್ನು ದನಕರುಗಳಿಗೆ ಕೊಡುತ್ತಾರೆ.

* ಹೊಸ ಮದುಮಗ ಆ ವರ್ಷದ ದೀಪಾವಳಿಗೆ ಹೆಣ್ಣು ಕೊಟ್ಟ ಮಾವನ ಮನೆಗೆ ಬರುವುದು ರೂಢಿ, ಅಭ್ಯಂಜನ ಸ್ನಾನ ಮಾಡಿ, ಹೊಸ ಬಟ್ಟೆ ಉಟ್ಟು, ಉಡುಗೊರೆಯನ್ನು ಅತ್ತೆ ಮಾವರಿಂದ ಪಡೆಯುತ್ತಾನೆ.

* ದೀಪಾವಳಿಯ ಅಭ್ಯಂಜನ ಸ್ನಾನ ಪವಿತ್ರವಾದುದು. 'ಕಾವೇರಿಮಹಿಮಾ' ದಲ್ಲಿ ತೈಲೇ ಲಕ್ಷ್ಮೀಃ ಜಲೇ ಗಂಗಾಃ ಎಂದು ಹೇಳಿದೆ. ಲಕ್ಷ್ಮೀಯು ತೈಲರೂಪಿ, ಲಕ್ಷೀಕಟಾಕ್ಷ ಮತ್ತು ಗಂಗೆಯ ಕರುಣೆ ಪ್ರಾಪ್ತವಾಗುತ್ತದೆ.

ಪ್ರಬಲವಾದ ಅಸುರ ಚಕ್ರವರ್ತಿ ಬಲಿಯನ್ನು ವಿಷ್ಣು ವಾಮನಾವತಾರವನ್ನೆತ್ತಿ ದಮನಮಾಡಿ ಪಾತಾಳಕ್ಕೆ ತುಳಿದದ್ದು ಬಲಿಪಾಡ್ಯಮಿಯ ಹಿನ್ನೆಲೆಯ ಕಥೆ. ಆದಿನ ನೀಡಿದ ದಾನ ಅಕ್ಷಯ ಫಲಪ್ರದ ಎನಿಸಿದೆ.

ಬಲಿಪ್ರತಿಪದಾ ಶಬ್ದಕ್ಕೆ ಪರ್ಯಾಯವಾಗಿ 'ದ್ಯೂತಪ್ರತಿಪದಾ' ಎಂಬ ಶಬ್ದವೂ ಬಳಕೆಯಲ್ಲಿದೆ.ಈ ಹಬ್ಬವನ್ನು ಆಚರಿಸುವವರಿಗೆ ಬ್ರಹ್ಮಾ ಪುರಾಣದಲ್ಲಿ–ಆದಿನ ದೇವೀಪಾರ್ವತಿಯು ಭಗವಾನ್ ಶಂಕರನನ್ನು ಪಗಡೆಯ ಆಟದಲ್ಲಿ ಸೋಲಿಸಿ ನಲಿದು ಹಿಗ್ಗಿದಳಂತೆ, ಸೋತ ಶಂಕರ ಖಿನ್ನನಾದನೆಂದು ವಿವರಣೆಯಿದೆ. ಆ ದಿನ ಜೂಜಿನಲ್ಲಿ ಗೆದ್ದವರು ಆ ವರ್ಷವಿಡೀ ಸುಖವಾಗಿರುವರಂತೆ, ಸೋತವರು ನರಳುವರಂತೆ. ವರ್ಷವಿಡೀ ಸುಖ ಅನುಭವಿಸುವ ಆಮಿಷದಿಂದ ಹೆಚ್ಚು ಹೆಚ್ಚು ಹಣವನ್ನು ಪಣವಾಗಿ

ಒಡ್ಡುವ ಪ್ರವೃತ್ತಿಯನ್ನು ಜನರಲ್ಲಿ ಈಗಲೂ ಕಾಣಬಹುದು. ಪುರಾಣ ಕರ್ತನ ಉದ್ದೇಶ ಬಹುಶಃ ಆ ದಿನ ವಿನಾ ವರ್ಷದ ಇತರ ದಿನಗಳಲ್ಲಿ ಜನ ಜೂಜಾಡಬಾರದೆಂದು ಇದ್ದಿರಬಹುದು.

4.16.12 ಉತ್ಥಾನ ದ್ವಾದಶಿ/ತುಳಸಿ ಪೂಜೆ

ಕಾರ್ತಿಕ ಮಾಸದ ಹನ್ನೆರಡನೆಯ ದಿನ ಉತ್ಥಾನ ದ್ವಾದಶಿ ತುಳಸಿಹಬ್ಬವೆಂದು ಆಚರಣೆ. ಉತ್ಥಾನ ಎಂದರೆ ಮೇಲಕ್ಕೆ ಏಳು, ಎದ್ದು ನಿಲ್ಲು ಎಂಬ ಅರ್ಥ. ಉತ್ಥಾನ ದ್ವಾದಶಿಯಂದು ಮನೆಯಂಗಳದ ತುಳಸಿ ಸನ್ನಿಧಾನದಲ್ಲಿ ಭಗವಂತ ಗೋವಿಂದನನ್ನು ಹಾಲೆರೆದು 'ಏಳಯ್ಯ' ಎಂದು ಭಿನ್ನವಿಸಿಕೊಳ್ಳುವುದು ವೈದಿಕ ವಿಧಿಯಾಚರಣೆಯ ವಿಧಾನ.

ನರಕ ಚತುದರ್ಶಿಯಂದು ನರಕಾಸುರನ ವಧೆಯ ಅನಂತರ ಎಣ್ಣೆ ಸ್ನಾನ ಮಾಡಿದ ಭಗವಂತ ನಿದ್ದೆ ಮಾಡುತ್ತಾನಂತೆ. ಉತ್ಥಾನ ದ್ವಾದಶಿಯಂದು ದೇವತೆಗಳೆಲ್ಲ ಬಂದು ಎಬ್ಬಿಸುತ್ತಾರಂತೆ ಎಂಬ ಕಥೆ ಜನಜನಿತ. ಅಂದು ತುಳಸಿ ಕಟ್ಟೆಯಲ್ಲಿ ವಿಶೇಷ ಸಾನಿಧ್ಯವೆಂದು ನಂಬಿಕೆ. ತುಳಸಿ ಸಾನಿಧ್ಯ ಪ್ರತಿಯೋರ್ವ ಹಿಂದುವಿನ ಮನೆಯಂಗಳದಲ್ಲಿ ಪಶ್ಚಿಮಾಭಿಮುಖವಾಗಿದೆ. ಬೆಳಿಗ್ಗೆ ಎದ್ದು ಸ್ನಾನ ತೀರಿಸಿ ತುಳಸಿ ಕಟ್ಟೆಗೆ ನೀರೆರೆದು ತುಳಸಿದಳಕ್ಕೆ ನೀರು ಹಾಕಿ ತೀರ್ಥದಂತೆ ಸೇವಿಸುವ ಪದ್ಧತಿ ಇಂದಿಗೂ ಚಾಲ್ತಿಯಲ್ಲಿದೆ. ಸೂತಕದಂತಹ ಶೌಚಗಳ ಶುದ್ಧಿಕರಣ ಮನೆಯ ತುಳಸಿಕಟ್ಟೆಯ ಮುಂದೆಯೇ ನಡೆಯುವುದು 7ನೇ ಶತಮಾನದ್ದೆಂದು ಹೇಳಲಾಗುವ ಬ್ರಹ್ಮವೈವಸ್ವತ ಪುರಾಣದಲ್ಲಿ ಮೊದಲ ಬಾರಿಗೆ ತುಳಸಿಯ ಉಲ್ಲೇಖವಿದೆ ಎನ್ನುತ್ತಾರೆ. ಪ್ರೊ. ಶ್ರೀಪತಿ ತಂತ್ರಿಯವರು. ಸಮುದ್ರ ಮಥನ ಕಾಲದಲ್ಲಿ ತುಳಸಿ ಹುಟ್ಟಿಕೊಂಡಿತ್ತೆಂಬ ಕಥೆಯೂ ಇದೆ.

ವೈಷ್ಣವ ಪಂಥದಿಂದಾಗಿ ತುಳಸಿಯ ಪ್ರಾಧಾನ್ಯ ಹೆಚ್ಚುತ್ತಾ ಕೃಷ್ಣನ ಬೃಂದಾವನ, ಅಲ್ಲಿಯ ತುಳಸಿವನ, ಅಲ್ಲಿ ವಿವರಿಸುವ ಕೃಷ್ಣ, ಮುಂತಾದವು ತುಳಸಿಗೆ ಮಹತ್ವವನ್ನು ನೀಡಿದವು. ತುಳಸಿಕಟ್ಟೆ ಅಥವಾ ತುಳಸಿವೃಂದಾವನ ಮನೆಯ ಮನುಷ್ಯನ ಜೀವನದ ಅವಿಭಾಜ್ಯ ಅಂಗವಾಯಿತು. ಅತಿಹೆಚ್ಚು ಆಮ್ಲಜನಕವನ್ನು ಹೊರಗೆಡಹುವ ತುಳಸಿ ಔಷಧೀಯ ಸಸ್ಯವೂ ಹೌದು. ವಿವಿಧ ರೋಗಹರ ಗುಣಗಳುಳ್ಳ ತುಳಸಿ ಮನೆಯಂಗಳದಲ್ಲಿ ಮನೆಮುಂದೆ ಇದ್ದರೆ ಉತ್ತಮ ಪರಿಸರ ನಿರ್ಮಾಣವಾಗುವುದು ಸಹಜ.

ಶಿವಳ್ಳಿ ಬ್ರಾಹ್ಮಣರಲ್ಲಿ ಉತ್ಥಾನ ದ್ವಾದಶಿಯಂದು ಮನೆಯಂಗಳದಲ್ಲಿ ತುಳಸಿ ಕಟ್ಟೆಗೆ ದೀಪ ಹಚ್ಚಿಟ್ಟು ನೆಲ್ಲಿಮರದ ಚಿಕ್ಕ ಕೊಂಬೆಯನ್ನು ತುಳಸಿ ಗಿಡದ ಹತ್ತಿರ ನೆಡುತ್ತಾರೆ. ತುಳಸಿಪೂಜೆಯನ್ನು ಮಾಡಿ, ದೇವರಿಗೆ ಮಾಡಿದ ದೋಸೆಯನ್ನು ಮತ್ತು ಸಿಹಿ ಅವಲಕ್ಕಿ, ಹಾಲು, ಬೆಲ್ಲವನ್ನು ಸಮರ್ಪಣೆ ಮಾಡುತ್ತಾರೆ. ತುಳಸಿ ಕಟ್ಟೆಯ ಹತ್ತಿರ ತಟ್ಟೆಯಲ್ಲಿ ಸಾಲಿಗ್ರಾಮವನ್ನು ಇಟ್ಟು ಅದಕ್ಕೆ ಪೂಜೆ ಮಾಡಿದ ಅನಂತರ ಮನೆಯವರೆಲ್ಲ ಮಡಿಯಲ್ಲಿ ಅರ್ಘ್ಯವನ್ನು ಬಿಡುವ ಪದ್ಧತಿ ಇದೆ.

4.16.13 ಸಂಕ್ರಾಂತಿ

ಜಗತ್ತಿಗೇ ಕಣ್ಣಾದ ಸೂರ್ಯನ ಚಲನೆಯ ಹಬ್ಬ ಸಂಕ್ರಮಣ ಅಥವಾ ಸಂಕ್ರಾಂತಿ. ಸಂಸ್ಕೃತದಲ್ಲಿ 'ಕ್ರಮಣ' ಎಂದರೆ ಹೆಜ್ಜೆ ಇಡುವಿಕೆ ಎಂದರ್ಥ. 'ಸಂಕ್ರಮಣ' ಅಂದರೆ ಚೆನ್ನಾಗಿ ಹೆಜ್ಜೆ ಇಡುವಿಕೆ. ಸೂರ್ಯನು ಒಂದು ರಾಶಿಯಲ್ಲಿ ತನ್ನ ಇರವನ್ನು

ಮುಗಿಸಿ ಇನ್ನೊಂದು ರಾಶಿಗೆ ಹೆಜ್ಜೆ ಇಡುವುದೇ ಸಂಕ್ರಮಣ ಅಥವಾ ಸಂಕ್ರಾಂತಿ. ಆದ್ದರಿಂದ ಸೂರ್ಯನ ಚಲನೆಯ ಹಬ್ಬ ಈ ಸಂಕ್ರಾಂತಿ.

ವರ್ಷಕ್ಕೆ ಹನ್ನೆರಡು ಸಂಕ್ರಾಂತಿ. ಆದರೆ ಇವುಗಳಲ್ಲಿ ಪ್ರಮುಖವಾದವು ಎರಡು ಮಾತ್ರ.ಸೂರ್ಯನು ಮಿಥುನ ರಾಶಿಯನ್ನು ಬಿಟ್ಟು ಕರ್ಕಾಟಕ ರಾಶಿಯನ್ನು ಪ್ರವೇಶಿಸುವ 'ಕರ್ಕಾಟಕ ಸಂಕ್ರಮಣ' ಮತ್ತು ಧನುರಾಶಿಯನ್ನು ಬಿಟ್ಟು ಮಕರರಾಶಿಯನ್ನು ಸಂಕ್ರಮಿಸುವ 'ಮಕರ ಸಂಕ್ರಮಣ'. ಇವು ಸೂರ್ಯನ ಪಯಣಕ್ಕೆ ಸಂಬಂಧಿಸಿದ ದಕ್ಷಿಣಾಯನ' ಮತ್ತು ಉತ್ತರಾಯಣವನ್ನು ಸೂಚಿಸುವುದರಿಂದ ಇವೆರಡಕ್ಕೆ ಹೆಚ್ಚಿನ ಮಹತ್ತ್ವ. ಉತ್ತರಾಯಣವನ್ನು 'ದೇವಯಾನ ಮತ್ತು ದಕ್ಷಿಣಾಯನವನ್ನು 'ಪಿತೃಯಾನ' ಎಂದು ಕರೆಯುತ್ತಾರೆ.

ಚಳಿಗಾಲದಲ್ಲಿ ಹಗಲು ಕಡಿಮೆ, ರಾತ್ರಿ ಹೆಚ್ಚು. ಶೀತವೂ ಹೆಚ್ಚು. ಹೀಗಾಗಿ ಈ ಸಮಯದಲ್ಲಿ ಜೀವ ಲೋಕವೆಲ್ಲ ಕುಗ್ಗುವುದು. ಸಂಕ್ರಾಂತಿಯ ಈ ಸ್ಥಿತಿ ಮುಗಿದು ಮತ್ತೆ ಹಗಲು ಹೆಚ್ಚಾಗಿ ರಾತ್ರಿ ಕಡಿಮೆಯಾಗಿ, ಶೀತಕಡಿಮೆಯಾಗಿ, ಶಾಖ ಹೆಚ್ಚಿ ಜೀವ ಲೋಕವು ಹಿಗ್ಗುವುದನ್ನು ಸೂಚಿಸುತ್ತದೆ. ಈ ಸಂತೋಷವನ್ನು ವ್ಯಕ್ತಗೊಳಿಸುವುದೇ ಈ ಹಬ್ಬದ ಸಂಭ್ರಮಗಳ ಅರ್ಥ.

ಮಕರ ಸಂಕ್ರಾಂತಿಯ ಇನ್ನೊಂದು ಹೆಸರು ಉತ್ತರಾಯಣ ಪುಣ್ಯಕಾಲ. ಇಡೀ ಉತ್ತರಾಯಣವೇ ದೇವತೆಗಳಿಗೆ ಪ್ರಿಯವಾದದ್ದು. ದೇವಕಾರ್ಯ, ಶುಭಕಾರ್ಯಗಳಿಗೆ ಪ್ರಶಸ್ತವಾದದ್ದು. ಇಂತಹ ಉತ್ತರಾಯಣವನ್ನು ಪ್ರಾರಂಭಿಸುವ ದಿನವಾದ ಮಕರ ಸಂಕ್ರಾಂತಿಗೆ ವಿಶೇಷವಾದ ಮಾನ್ಯತೆಯು ಸಹಜವಾಗಿಯೇ ಇದೆ. ಈ ದಿನ ಶ್ರದ್ಧಾ ಭಕ್ತಿಗಳಿಂದ ಮಾಡುವ ಸ್ನಾನ, ಧ್ಯಾನ, ಹೋಮ, ಪೂಜೆ, ತರ್ಪಣ, ಶ್ರಾದ್ಧಾ ಮುಂತಾದವುಗಳಿಗೆ ಅತ್ಯಂತ ಹೆಚ್ಚಿನ ಫಲವುಂಟೆಂದು ನಂಬಿಕೆ.

4.16.14 ಶಿವರಾತ್ರಿ

ಮಹಾಶಿವರಾತ್ರಿಯಂದು ನಡುರಾತ್ರಿ ಜಗತ್ತಿನ ತಂದೆಯೆನಿಸಿದ ಪರಶಿವನು ಸ್ವಯಂಭುವಾಗಿ ಲಿಂಗರೂಪದಿಂದ ಉದ್ಭವಿಸಿದನೆಂದು ಪ್ರತೀತಿ. ಇದಲ್ಲದೆ ಶಿವರಾತ್ರಿ ಶಿವನು ಹಾಲಾಹಲ ವಿಷ ಕುಡಿದ ದಿನವೆಂತಲೂ, ತಾಂಡವನೃತ್ಯ ಮಾಡಿದ ದಿನವೆಂದೂ ಹೇಳಿಕೆ ಇದೆ. ಅಂದು ಶಿವಾಲಯಗಳಲ್ಲಿ, ಗೋಕರ್ಣ, ಕಾಶೀ, ರಾಮೇಶ್ವರ ಮುಂತಾದ ತೀರ್ಥಕ್ಷೇತ್ರಗಳಲ್ಲಿ ಜನರು ಪೂಜೆ ಪುರಸ್ಕಾರಗಳಲ್ಲಿ ಮಗ್ನರಾಗಿರುತ್ತಾರೆ. ಕರ್ನಾಟಕದ ಗೋಕರ್ಣದ ಮಹಾಬಲೇಶ್ವರ ರಥೋತ್ಸವ ನಡೆಯುವುದು ಶಿವರಾತ್ರಿಯಂದೇ.

ಶಿವರಾತ್ರಿಯ ದಿನ ಅರುಣೋದಯಕ್ಕೆ ಎದ್ದು, ಸ್ನಾನಮಾಡಿ, ಶುಭ್ರ ವಸ್ತ್ರವನ್ನುಟ್ಟು, ಸಮಸ್ತ ಪಾಪ ನಿವಾರಣೆಗಾಗಿ, ಜ್ಞಾನ ಮೋಕ್ಷ ಪ್ರಾಪ್ತಿಗಾಗಿ ಶಿವರಾತ್ರಿ ವ್ರತ ಆಚರಿಸುತ್ತೇವೆ[1]ಎಂದು ಸಂಕಲ್ಪ ಮಾಡುತ್ತಾರೆ. ಶಿವಾಲಯಕ್ಕೆ ಹೋಗಿ ರುದ್ರಾಭಿಷೇಕ, ಪೂಜೆ, ಹರಿಕಥೆ, ಸತ್ಸಂಗಾದಿಗಳಲ್ಲಿ ಮಗ್ನರಾಗುತ್ತಾರೆ. ಕೊನೆಯಲ್ಲಿ 'ನಾನಾ ವಿಧದ ಪಾಪಕರ್ಮಗಳಿಂದ ಭವ ಬಂಧನದಲ್ಲಿ ಸಿಲುಕಿದ ನನ್ನನ್ನು ಲೋಕಕ್ಕೆ ಸುಖವನ್ನು ಕೊಡುವ ಸ್ವಾಮಿಯಾದ ನೀನು ಉದ್ಧರಿಸು'[2] ಎಂದು ಬೇಡಿಕೊಳ್ಳುತ್ತಾರೆ. ಸರ್ವಪಾಪಗಳನ್ನು ದೂರ ಮಾಡುವ ಈ ವ್ರತವನ್ನು ಯಾರು ಬೇಕಾದರೂ

[1]ಡಾ. ಎಚ್. ವಿ. ನರಸಿಂಹಮೂರ್ತಿ, ನಮ್ಮ ಹಬ್ಬಗಳು, 2002 , ಪುಟ 127

[2]ಡಾ. ಎಚ್. ವಿ. ನರಸಿಂಹಮೂರ್ತಿ, ನಮ್ಮ ಹಬ್ಬಗಳು, 2002, ಪುಟ 127

ಮಾಡಬಹುದು. ಜಾತಿ-ಮತಗಳನ್ನು ಮೀರಿದ ಮಹಾವ್ರತ ಇದು. ಅನನ್ಯ ಭಕ್ತಿಯಿಂದ ಧ್ಯಾನಿಸಿ, ಜಾಗರಣೆ, ಉಪವಾಸ, ಅರ್ಚನೆ ಶಿವಸಂಕೀರ್ತನೆಗಳನ್ನು ಮಾಡುವುದರ ಮೂಲಕ ಶಿವರಾತ್ರಿಯನ್ನು ಕಳೆಯುತ್ತಾರೆ. ಶಿವನು ಅಭಿಷೇಕ ಪ್ರಿಯನು. ಅಭಿಷೇಕದಿಂದ ತೃಪ್ತಿ ಪಡಿಸಿದಾಗ ಪಶುಪತಿ ನಮ್ಮಲ್ಲಿರುವ ಪಶುತ್ವವನ್ನು ದೂರ ಮಾಡಿ ಭಕ್ತನು ನೀಡಿದ ಅಲ್ಪವನ್ನೇ ಕಲ್ಪವೆಂದು ಭಾವಿಸಿ, ಇಷ್ಟಾರ್ಥವನ್ನು ನೆರವೇರಿಸಿ ಕೊಡುತ್ತಾನೆಂದು ಭಕ್ತರ ನಂಬಿಕೆ.

ಭಕ್ತರಿಗೆ ಕಲ್ಯಾಣವನ್ನುಂಟುಮಾಡುವುದರಿಂದ ಆತ ಶಂಕರ ಕಾಮವನ್ನು ನಿಗ್ರಹಿಸಿದ ಕಾಮಾರಿ, ಅವನ ಕೈಯಲ್ಲಿರುವ ತ್ರಿಶೂಲ ಸತ್ತ್ವ-ರಜ ತಮೋಗುಣಗಳಿಗೂ, ಡಮರುಗ ಶಬ್ದ ಬ್ರಹ್ಮಕ್ಕೂ, ಗಂಗೆ ಅಮೃತಕ್ಕೂ, ಗಜಚರ್ಮ ಗರ್ವ ನಿಗ್ರಹಕ್ಕೂ, ವಿಭೂತಿ ಪರಿಶುದ್ಧತೆಗೂ, ಹಣೆಗಣ್ಣು ಜ್ಞಾನಕ್ಕೂ, ಚಂದ್ರ ಆನಂದಕ್ಕೂ ಸಂಕೇತಗಳಾಗಿವೆ[1].

4.17 ಪೂಜೆಗಳು

'ಪುರುಷಾರ್ಥಾಃ ಜಾಯಂತೇ ಅನಯಾ ಇತಿಪೂಜಾ' ಧರ್ಮಾರ್ಥ ಕಾಮ ಮೋಕ್ಷಗಳೆಂಬ ಪುರುಷಾರ್ಥಗಳು ಯಾವುದರಿಂದ ಹುಟ್ಟುತ್ತವೋ ಅದು ಪೂಜೆ. ಸ್ನಾನ, ಸಂಧ್ಯಾವಂದನ, ಜಪ, ಹೋಮ, ದೇವಪೂಜೆ, ಆತಿಥ್ಯ ಇವಾರು ದಿನನಿತ್ಯ ಮಾಡಬೇಕಾದ ಕೆಲಸಗಳು. ಪೂಜೆಯನ್ನು ತನ್ನ ತನ್ನಾತ್ಮದ, ಶ್ರುತಿ ಸ್ಮೃತಿ ಪುರಾಣೋಕ್ತ ಫಲಪ್ರಾಪ್ತಿಗಾಗಿ, ತನ್ನ ಕುಟುಂಬ ಪರಿವಾರ, ದ್ವಿಪದ, ಚತುಷ್ಪದ ಸಹಿತ ಎಲ್ಲರ ಕ್ಷೇಮ ಸ್ಥೈರ್ಯ, ಆಯುರಾರೋಗ್ಯ, ಐಶ್ವರ್ಯಾಭಿವೃದ್ಧಿಗಾಗಿ, ಸಮಸ್ತಾಭ್ಯುದಯಕ್ಕಾಗಿ, ಹಾಗೂ ದೇವತಾ ಪ್ರೀತರ್ಥವಾಗಿ ಮಾಡುವುದಾಗಿದೆ. ತನ್ನ ಹಾಗೂ ಪರಿವಾರದ ಭದ್ರತೆ, ಅಭಿವೃದ್ಧಿ, ಆನಂದದ ಮೇಲೆ ಗೃಹಸ್ಥನಿಗೆ ಎಂತಹ ಉದಾತ್ತ ಭಾವನೆಯಿದೆ, ಹೊಣೆಗಾರಿಕೆಯಿದೆ, ಅದನ್ನು ನಿರ್ವ್ಯಾಜ ಪ್ರೇಮದಿಂದ ಹೇಗೆ ಮಾಡುತ್ತಾನೆಂಬುದನ್ನು ಇದರಿಂದ ತಿಳಿಯಬಹುದು. ಪೂಜೆಗಳು ಹೆಚ್ಚಾಗಿ ಮನೆಯಲ್ಲೇ ದೇವರ ಕೋಣೆಯಲ್ಲಿ ನಡೆಯುತ್ತದೆ. ಕೆಲವೆಡೆ ಮನೆಯ ಹೊರಗೆ ಅಂಗಳದಲ್ಲಿ ಚಿಕ್ಕಗುಡಿಯನ್ನು ನಿರ್ಮಿಸಿ ಅಲ್ಲಿ ಪೂಜೆ ನಡೆಯುತ್ತದೆ. ಒಂದೇ ಮನೆಯವರು ಬೇರೆ ಬೇರೆ ಮನೆಮಾಡಿ ಕುಳಿತಾಗ, ತಲೆಮಾರಿನ ಹಿರಿಯ ಮನೆಯಲ್ಲಿ ನಿತ್ಯಪೂಜೆ ನಡೆಯುತ್ತದೆ. ಪಾಲುದಾರರೂ ಪ್ರತ್ಯೇಕ ಪೂಜಿಸುವ ಪದ್ಧತಿಯೂ ಇದೆ. ಪೂಜೆಯಲ್ಲಿ ಸ್ಥಳಶುದ್ಧಿ, ಆಸನಶುದ್ಧಿ, ಪರಿಕರಗಳಶುದ್ಧಿ, ಪೂಜಾವಸ್ತುಗಳ ಶುದ್ಧಿ, ಪತ್ರಪುಷ್ಪಾದಿಗಳಶುದ್ಧಿ, ಪೂಜಕನ ದೇಹಶುದ್ಧಿ, ವಸನಶುದ್ಧಿ, ಹೃದಯಶುದ್ಧಿ, ಮನಃಶುದ್ಧಿ, ಆತ್ಮಶುದ್ಧಿ ಇವು ಬಹಳ ಮುಖ್ಯ. ಶ್ರದ್ಧಾ ಭಕ್ತಿಗಳಿಂದ ಕೂಡಿದ, ನಿರ್ಮಲಾಂತ ಕರಣದಿಂದ ಮಾಡಿದ ಪೂಜೆ ಇಷ್ಟಾರ್ಥ ಪ್ರದಾಯಕವಾಗಿದೆ.

---

[1] ಡಾ. ನರಸಿಂಹಮೂರ್ತಿ ಎಚ್. ವಿ., ನಮ್ಮ ಹಬ್ಬಗಳು, 2002, ಪುಟ 128

4.17.1 ತ್ರಿಕಾಲಪೂಜೆ

ದುರ್ಗೆಯು ಮಹಾಕಾಲೀ, ಮಹಾಲಕ್ಷ್ಮೀ, ಮಹಾಸರಸ್ವತೀ ರೂಪಿಣಿಯಾಗಿದ್ದಾಳೆ. ಸೃಷ್ಟಿ, ಸ್ಥಿತಿ, ಲಯಕಾರಿಣಿ. ಸಕಲದೇವ ದೇವಿಯರ ಜನನಿಯಾದ ಇವಳನ್ನಾರಾಧಿಸಿದರೆ ಮತ್ತೆ ಎಲ್ಲಾ ದೇವತೆಗಳನ್ನು ಪೂಜಿಸಿದಂತಯೇ ಎಂದು ಎಲ್ಲರ ನಂಬಿಕೆ. ಈ ದುರ್ಗಾ ಪೂಜೆಯಲ್ಲಿ ಮಾಂತ್ರಿಕ, ತಾಂತ್ರಿಕವೆಂದು ಎರಡು ವಿಧ. ಮಾಂತ್ರಿಕ ವಿಧಿಗೇ ಹೆಚ್ಚಿನ ಪ್ರಾಶಸ್ತ್ಯ. ತಾಂತ್ರಿಕ ವಿಧಿ ಕೇರಳದಿಂದ ಬಂತೆಂದು ಹೇಳುತ್ತಾರೆ. ದುರ್ಗೆಯ ಪ್ರತೀಕವಾದ ದೀಪದಲ್ಲೇ ಪ್ರತಿಷ್ಠೆ ಮಾಡುವುದು ಕ್ರಮ. ಸರ್ವಾಂಗ ಶುದ್ಧಿಯ ಮೂಲಕ ದೇಹವನ್ನು ಪವಿತ್ರೀಕರಿಸಿ ಅರ್ಚಕನು ಧ್ಯಾನಾವಾಹನಾದಿಗಳಿಂದ ಆರಾಧನೆ ಮಾಡುವುದು ಪದ್ಧತಿ. ತ್ರಿಕಾಲ ಪೂಜೆಯಲ್ಲಿ ಪುಷ್ಪಾಂಜಲಿ, ನಮಸ್ಕಾರ, ಸಪ್ತಶತೀಪಾರಾಯಣ, ನೈವೇದ್ಯ ಇವು ಮುಖ್ಯವಾಗಿದೆ. ದುರ್ಗಾಪೂಜೆಗೆ ಕೇಪುಳದ ಹೂ ಬೇಕೇ ಬೇಕು. ತ್ರಿಕಾಲಪೂಜೆಯನ್ನು ವರ್ಷಕ್ಕೊಮ್ಮೆ ಮಾಡುತ್ತಾರೆ. ಈ ಪೂಜೆ ಮಾಡಲು ಶರತ್ಕಾಲವೇ ಪ್ರಶಸ್ತವಾಗಿದೆ. ಅಷ್ಟಮಿ, ನವಮಿ, ಚತುರ್ದಶಿ(ಶುಕ್ಲ ಪಕ್ಷ) ತಿಥಿಗಳು ಯೋಗ್ಯ. ವಾರಗಳಲ್ಲಿ ಶುಕ್ರವಾರ ಶ್ರೇಷ್ಠ. ವರ್ಷದಲ್ಲಿ ನಿಶ್ಚಿತ ದಿನ ಮಾಡುವ ಕ್ರಮವೂ ಇದೆ.

4.17.2 ದುರ್ಗಾ ನಮಸ್ಕಾರ

ಹನ್ನೆರಡು ದಿನ ರಾತ್ರಿ ಬಿಡದೆ ಮಾಡುವ ಪೂಜೆ ದುರ್ಗಾಪೂಜೆ ಪ್ರತಿದಿನವೂ 'ಜಾತ ವೇದಸೇ ಎನ್ನುವ ಮೂಲ ಮಂತ್ರೋಚ್ಚಾರಣ ಪೂರಕ ನೂರೆಂಟು ನಮಸ್ಕಾರ ಹಾಕಲೇಬೇಕು. ಮನೋವಾಕ್ಕಾಯಗಳಿಂದ ಪರಮಾತ್ಮನಿಗೆ ನಮ್ಮನ್ನು ಸಮರ್ಪಿಸುವುದು ಎಂದು ನಮಃ ಶಬ್ದದ ಅರ್ಥ. ಒಂದಾವರ್ತಿ ಸಪ್ತಶತೀ ಪಾರಾಯಣ ಮಾಡಬೇಕು. ನಾಲ್ಕು ಸೇರು ಅಕ್ಕಿಯ ನೈವೇದ್ಯ ಇಡಬೇಕು. ಪ್ರತಿದಿನ ದುರ್ಗಾಷ್ಟೋತ್ತರ ಮತ್ತು ಲಲಿತಾ ಸಹಸ್ರನಾಮ. ಒಟ್ಟು 1108 ಪುಷ್ಪಾಂಜಲಿ ಮಾಡಬೇಕು. ಸಾಮಾನ್ಯವಾಗಿ ವರ್ಷಕ್ಕೊಮ್ಮೆ ಈ ಪೂಜೆ ಮಾಡುತ್ತಾರೆ. ಈ ಪೂಜೆ ಮಾಡಲು ಆಷಾಢ ಮಾಸವೇ ಪ್ರಶಸ್ತವಾಗಿದೆ. ಈ ತಿಂಗಳು ಎಲ್ಲಾ ದೇವಾಧಿ ದೇವತೆಗಳು ನಿದ್ರಿಸಿರುವುದರಿಂದ ಲೋಕದಲೆಲ್ಲಾ ಭೂತ ಪ್ರೇತ ಪಿಶಾಚಿಗಳು ಸಂಚರಿಸುವ ಕಾಲ ಎಂಬ ನಂಬಿಕೆ. ಇವು ತಮ್ಮ ಮನೆಗಳನ್ನು ಪ್ರವೇಶಿಸಿ ಬಾಧಿಸದಂತೆ ತಡೆಯುವುದಕ್ಕಾಗಿಯೇ ಈ ಹನ್ನೆರಡು ದಿನ ದುರ್ಗಾರಾಧನೆ ನಡೆಸುವ ಉದ್ದೇಶ. ಹನ್ನೆರಡನೆಯ ದಿನ ಉತ್ಥಾನ. ಇದಕ್ಕೆ ಶುಕ್ರವಾರ ಯೋಗ್ಯದಿನ. ಈಗೀಗ ಹನ್ನೆರಡು ದಿನ ಪೂಜೆ ಮಾಡುವುದಿಲ್ಲ. ಅರ್ಚಕರ ಸಮಯದ ಅಭಾವದಿಂದಾಗಿ ಒಂದು ದಿನದ ತ್ರಿಕಾಲ ಪೂಜೆ ಮಾಡುತ್ತಾರೆ. ದುರ್ಗಾ ನಮಸ್ಕಾರ ಪೂಜೆಯಲ್ಲಿ ವಿಶೇಷವಾಗಿ ಕೇಪುಳದ ಹೂವನ್ನು ಪೂಜೆಗೆ ಬಳಸುತ್ತಾರೆ.

ದುರ್ಗಾಪೂಜೆಯನ್ನು ನಿರಂತರವಾಗಿ ಹನ್ನೆರಡು ದಿವಸ ನಡೆಸಬೇಕು ನಡುವೆ ಸೂತಕಾದಿಗಳು ಬಂದರೆ ಪುನಃ ಆರಂಭದಿಂದಲೇ ಹನ್ನೆರಡುದಿನ ನಮಸ್ಕಾರ ಹಾಕಬೇಕು. ಅಂದರೆ ನಿರಂತರವಾಗಿಹನ್ನೆರಡು ದಿನ ಪೂಜೆ ನಡೆಯಲೇ ಬೇಕು. ಇದೇ ಇದರ ವೈಶಿಷ್ಟ್ಯ. ಈ ಪೂಜೆ ಶಕ್ತಿಪ್ರದ. ದೀಪಕ್ಕೆ ತುಪ್ಪಯಾ ಎಳ್ಳೆಣ್ಣೆ ವಿಶೇಷ. ಜಾತ ವೇದಸೇ ಮೂಲಮಂತ್ರವಲ್ಲದೆ, ಬಾಲಾಸರಸ್ವತಿ, ವನದುರ್ಗೆ ಮತ್ತು ಸ್ವಯಂವರ ಪಾರ್ವತಿ ಮೂಲ ಮಂತ್ರಗಳಿಂದ, ದ್ವಾದಶಾಕ್ಷರೀ ಮೂಲಮಂತ್ರದಿಂದ ಸರ್ವಮಂಗಲ

ಮಾಂಗಲೇ ಭುವನೇಶ್ವರೀ ಮೂಲ ಮಂತ್ರದಿಂದ, ಶೂಲಿನೀ ದುರ್ಗಾಮಂತ್ರದಿಂದ, ಸರ್ವಾಬಾಧ ಪ್ರಶಮನಂ ಎಂಬ ಸಪ್ತಶತಿಯಲ್ಲಿ ಬರುವ ಶ್ಲೋಕದಿಂದಲೂ ನಮಸ್ಕಾರ ಹಾಕಬಹುದು. ಪುಷ್ಪಾಂಜಲಿಗೆ ಬೆಳಿಗ್ಗೆ ಬಿಲ್ವಪತ್ರೆ, ಮಧ್ಯಾಹ್ನಕ್ಕೆ ತುಳಸಿ, ರಾತ್ರಿಗೆ ಕೇಪುಳದ ಹೂ ಉಪಯೋಗಿಸುವುದು ರೂಢಿ.

ದುರ್ಗಾ ಪೂಜೆ ಮಾಡುವಾಗ ಪಶ್ಚಿಮಾಭಿಮುಖವಾಗಿ ಕುಳಿತು ಪೂಜೆ ಮಾಡುತ್ತಾರೆ. ಇದನ್ನು ಹಗಲು ಮಾಡುವ ಕ್ರಮವಿಲ್ಲ.

ಪ್ರತ್ಯಕ್ಷಂದೇವತಾ ಸೂರ್ಯೋಜಗಚ್ಚಕ್ಷು ರ್ದಿವಾಕರಃ

ತಸ್ಮಾದಭ್ಯಧಿಕಾ ಕಾಚಿದ್ದೇವತಾ ನಾಸ್ತಿ ಶಾಶ್ವತೀ

ಕಣ್ಣಿಗೆ ಕಾಣುವ, ಸೂರ್ಯನಿಗಿಂತ ದೊಡ್ಡ ದೇವರು ಬೇರೆ ಇಲ್ಲ. ಸೂರ್ಯನು ರಾತ್ರಿಯಲ್ಲಿ ಪಶ್ಚಿಮದಲ್ಲಿರುತ್ತಾನೆ, ಹೀಗಾಗಿ ಅವನಿಗೆ ಇದಿರಾಗಿಯೇ ಕುಳಿತು ಪೂಜೆ ಮಾಡಲು ಕಾರಣ ದುರ್ಗಾರಾಧನೆಯಲ್ಲಿ ದೀಪದಲ್ಲೇ ದುರ್ಗೆಯನ್ನು ಆವಾಹಿಸಲಾಗುತ್ತದೆ. ಅಗ್ನಿಯು ಸೂರ್ಯ ಶಕ್ತ್ಯಾತ್ಮಕವಾಗಿದೆ. ಸೂರ್ಯನು ರಾತ್ರಿಯಲ್ಲಿ ತನ್ನ ಶಕ್ತಿಯನ್ನು ಅಂದರೆ ತೇಜಸ್ಸನ್ನು ಅಗ್ನಿಗೆ ಕೊಡುತ್ತಾನೆ. ಸೂರ್ಯ ಮಾಡುವ ಕೆಲಸವನ್ನು ರಾತ್ರಿಯಲ್ಲಿ ಅಗ್ನಿ ಮಾಡುತ್ತದೆ. ಸೂರ್ಯೋದಯವಾದಾಗ ಅಗ್ನಿಯಿಂದ ತನ್ನ ಶಕ್ತಿಯನ್ನು ಸೂರ್ಯನು ಪಡೆಯುತ್ತಾರೆ. ಸೂರ್ಯನಿಗೂ ದೀಪಕ್ಕೂ ಅಭೇದ ಕಲ್ಪನೆ ಮಾಡಲಾಗಿರುವುದರಿಂದ ಪಶ್ಚಿಮಾಭಿಮುಖವಾಗಿ ಕುಳಿತು ಪೂಜೆ ಮಾಡಲು ಕಾರಣ.

4.17.3 ದುರ್ಗಾಪೂಜೆ : ಕೇವಲ ಒಂದು ಹೊತ್ತು ಪೂಜೆ ಮಾಡುವುದು. ದುರ್ಗಾ ನಮಸ್ಕಾರದ ಒಂದು ದಿನದ ಪೂಜೆಯಂತೆಯೇ ಈ ಪೂಜೆ ನಡೆಯುತ್ತದೆ. ದುರ್ಗೆ ಅಗ್ನಿತತ್ವಾತ್ಮಕಿ. ಓಂಜಾತವೇದಸೇ ... ನಾವೇವ ಸಿಂಧುಂದುಂತಾತ್ಯಗ್ನಿ :ತಾಮಗ್ನಿವರ್ಣಾತಪಸಾ ಜ್ವಲಂತೀಂ... ಅಗ್ನೇತ್ವಂ ಪಾರಮಾನ ವ್ಯೋ ಅಸ್ಮಾನ್......ಚಿದಗ್ನಿ ಕುಂಡ ಸಂಭೂತಾ ಇತ್ಯಾದಿ ಮಂತ್ರಗಳಿಂದ ಸ್ಪಷ್ಟವಾಗುತ್ತದೆ. ಹಾಗಾಗಿ ದೀಪ ಜ್ಯೋತಿಯು ದುರ್ಗಾರಾಧನೆಗೆ ಮುಖ್ಯ. ಶಿವಳ್ಳಿಯವರಲ್ಲಿ ತ್ರಿಕಾಲಪೂಜೆ, ದುರ್ಗಾ ನಮಸ್ಕಾರಗಳು, ಮತ್ತು ದುರ್ಗಾಪೂಜೆ ವಿಶೇಷ ವೃತ, ಆಚರಣೆ, ಉಪವಾಸದ ಮೂಲಕ ನಡೆಯುತ್ತದೆ.

4.18 ಶಿವಳ್ಳಿಬ್ರಾಹ್ಮಣರು– ಭೂತಾರಾಧನೆ

* ದಕ್ಷಿಣಕನ್ನಡದಲ್ಲಿ ಭೂತಸ್ಥಾನಗಳನ್ನು ದೈವಸ್ಥಾನಗಳೆಂದು ಕರೆಯುತ್ತಾರೆ.

ಇವುಗಳಿಗೆ ಸಂಬಂಧಪಟ್ಟ ಆರಾಧನೆಯನ್ನು ಭೂತಾರಾಧನೆ ಎಂದು ಕರೆಯುತ್ತಾರೆ. ಭೂತಾರಾಧನೆ ಜಿಲ್ಲೆಯ ವಿಶಿಷ್ಟ ಧಾರ್ಮಿಕ ಪರಂಪರೆ. ಪ್ರಾಚೀನಕಾಲದಿಂದಲೂ ಕೃಷಿ ಪ್ರಧಾನ ಸಾಮಾಜಿಕ ವ್ಯವಸ್ಥೆಯ ಭಾಗವಾಗಿ ಭೂತಾರಾಧನೆ ಬೆಳೆದು ಬಂದಿದೆ.

ಡಾ. ಚಿನ್ನಪ್ಪ ಗೌಡರು ಭೂತಗಳ ಪರಿಕಲ್ಪನೆಯನ್ನು ವಿವರವಾಗಿ ಚರ್ಚಿಸುತ್ತಾ “ಪ್ರಾಚೀನ ಕಾಲದ ತುಳುನಾಡಿನ ಬೌಗೋಳಿಕ ಪರಿಸ್ಥಿತಿ, ಪ್ರಾಕೃತಿಕ ವಿಕೋಪಗಳು,

ಹುಟ್ಟು ಮತ್ತು ಸಾವುಗಳ ಆಚೆಯ ಜಗತ್ತಿನ ಕುರಿತಾದ ನಂಬಿಕೆ, ಸತ್ತವರನ್ನು ಮತ್ತೆ ಬರಮಾಡಿಕೊಂಡು ನೋಡುವ ಬಯಕೆ, ದುಷ್ಟ ಪ್ರಾಣಿಗಳ ಬಗೆಗಿನ ಭಯ ಮತ್ತು ಅದೇ ಭಯದಿಂದ ಹುಟ್ಟಿಕೊಂಡ ಆರಾಧನೆಯ ಮನೋಭಾವ ಆಕಸ್ಮಿಕವೂ ಅಸಹಜವೂ ಆದ ಸಾವನ್ನು ಸಾಂಸ್ಕೃತಿಕ ವೀರರು ಹೊಂದಿದ ಮೇಲೆ ಅಂತಹ ವೀರರನ್ನು ಮಧ್ಯಂತರ ಜಗತ್ತಿಗೆ ಬರಮಾಡಿಕೊಂಡು ನಡೆಯುವ ವೀರಾರಾಧನೆ"[1] ಎಂದು ಭೂತಾರಾಧನೆಯ ಸಂಕೀರ್ಣ ಸ್ವರೂಪವನ್ನು ತಿಳಿಸುತ್ತಾರೆ.

"ಭೂತಗಳು ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸುತ್ತದೆ. ಕಾಲಕಾಲಕ್ಕೆ ಮಳೆಯನ್ನು ಸುರಿಸಿ ಜನರ ದುಡಿಮೆಗೆ ತಕ್ಕ ಪ್ರತಿಫಲವನ್ನು ನೀಡುತ್ತದೆ. ಮೇವನ್ನು ಒದಗಿಸಿ ಪ್ರಾಣ ಸಂಪತ್ತನ್ನು ಹೆಚ್ಚಿಸುತ್ತದೆ. ಕುಟುಂಬ, ಗ್ರಾಮ, ಮಾಗಣೆ ಮತ್ತು ಸೀಮೆಯೊಳಗಿನ ಜನರ ಆರೋಗ್ಯವನ್ನು ಕಾಪಾಡುತ್ತದೆ. ಹೆತ್ತವರಂತೆ ಭಕ್ತರನ್ನು ಮಮತೆಯಿಂದ ಸಲಹುತ್ತದೆ. ನ್ಯಾಯವನ್ನು ಎತ್ತಿಹಿಡಿದು ಅನ್ಯಾಯವನ್ನು ತುಳಿದು ಸೂರ್ಯ-ಚಂದ್ರರು ಲೋಕವನ್ನು ಬೆಳಗಾಗುವವರೆಗೆ ಸತ್ಯವನ್ನು ಬೆಳಗುತ್ತದೆ. ಈ ಬಗೆಯ ನಂಬಿಕೆಗಳು ಸಾರ್ವತ್ರಿಕವಾಗಿವೆ."[2]

ದೇವ ಹಾಗೂ ದೈವಸ್ಥಾನಗಳು ಹಮ್ಮಿಕೊಳ್ಳುವ ಆಚರಣೆಗಳಲ್ಲಿ ಸಮಷ್ಟಿಯ ಕಲ್ಯಾಣ ಪ್ರಮುಖ ಆಶಯವಾಗಿರುತ್ತದೆ. ಈ ಸಾಮುದಾಯಿಕ ಆಚರಣೆಗಳಲ್ಲಿ ಪಾಲ್ಗೊಳ್ಳುವ ವಿವಿಧ ಜಾತಿಗಳಲ್ಲಿ ಅಂತರ್ಗತವಾಗಿ ಒಂದು ಶ್ರೇಣಿಕರಣ ವ್ಯವಸ್ಥೆಯ ಏರ್ಪಾಟಾಗಿರುತ್ತದೆ. ಈ ವ್ಯವಸ್ಥೆಯ ಮೇಲ್ತುದಿಯಲ್ಲಿ ಬ್ರಾಹ್ಮಣನಿದ್ದರೆ, ಕೆಳತುದಿಯಲ್ಲಿ ಶೋಷಿತ ಪ್ರತಿನಿಧಿಯಾಗಿ ಕೊರಗ, ನಲಿಕೆಯವರಿರುತ್ತಾರೆ.

ಬ್ರಾಹ್ಮಣ ಆಗಮೋಕ್ತ ಪೂಜಾವಿಧಿಯ ನೇತಾರನಾಗಿ, ಅರ್ಚಕನಾಗಿ, ಮುಕ್ತೇಸರನಾಗಿ, ಆಶೀರ್ವಚನ, ಮಂತ್ರ ಪಠನ ಮುಂತಾದವುಗಳಿಂದ ದೇವರ ಮಧ್ಯವರ್ತಿಯಂತೆ ವರ್ತಿಸಿದರೆ, ಕೊರಗ ನಲಿಕೆಯವರು ಡೋಲು ಬಡಿಯುವುದರ ಮೂಲಕ ವಿಶಿಷ್ಟ ಆವರಣ ನಿರ್ಮಿಸುತ್ತಾ ಆರಾಧನ ಕೇಂದ್ರದಿಂದ ಸಾಕಷ್ಟು ಹೊರಗೆ ಉಳಿಯುತ್ತಾನೆ.

ಕೋಲದ ಮುಹೂರ್ತ ನೋಡಲು ಬ್ರಾಹ್ಮಣ, ಪಾತ್ರಿ ಬ್ರಾಹ್ಮಣೇತರ, ಭೂತದ ವೇಷಕಟ್ಟಿ ನಲಿಕೆ ಮಾಡುವವರು ಪಂಬದ, ನಲಿಕೆಯವರು, ದೀವಟಿಕೆ ಹಿಡಿಯಲು ಮಡಿವಾಳ, ದೈವಾವೇಶಕ್ಕೆ ಬೇಕಾದ ವಿಶಿಷ್ಟ ಆವರಣ ನಿರ್ಮಿಸಲು ವಾದ್ಯ ನುಡಿಸುವವ ದೇವಾಡಿಗ, ಡೋಲು ಬಾರಿಸಲು ಕೊರಗ ಹೀಗೆ ಸಮಾಜದ ವಿವಿಧ ಶ್ರೇಣಿಯಲ್ಲಿರುವ ಜನ ಭೂತಾರಾಧನೆಯಲ್ಲಿ ಭಾಗವಹಿಸುತ್ತಾರೆ. ನರ್ತಿಸುವ ಭೂತ ಒಟ್ಟಾರೆ ಇಡೀ ಆವರಣ ವಿಶಿಷ್ಟ ಎನಿಸುತ್ತಾನೆ. ದೈವಕೊಟ್ಟ ಪ್ರಸಾದವನ್ನು ಬ್ರಾಹ್ಮಣನೂ ನಮ್ರತೆಯಿಂದ ಸ್ವೀಕರಿಸುತ್ತಾನೆ. ಭೂತಕೋಲದಲ್ಲಿ ಭೂತಾವೇಶಗೊಂಡ ಸಮಾಜದ ಹಿಂದುಳಿದ ಜಾತಿಯ ವ್ಯಕ್ತಿ, ಶಕ್ತಿಯಾಗಿ ಪರಿಣಮಿಸುತ್ತಾನೆ.

---

1. ಡಾ. ಚಿನ್ನಪ್ಪ ಗೌಡ ಭೂತಾರಾಧನೆ 1990-ಪುಟ- 251

2. ಡಾ. ಚಿನ್ನಪ್ಪ ಗೌಡ ಭೂತಾರಾಧನೆ 1990 ಪುಟ-10

ಹಿರಿಯರು ಸಮಾಜದ ಬಹು ಜನರಿಗೆ ಹಿತವಾದ ಭೂತಾರಾಧನೆಯನ್ನು ಪ್ರಾರಂಭದ ಹಂತದಲ್ಲಿ ಮಿತವಾಗಿ ಅಂಗೀಕರಿಸಿದ್ದರು. ಊಟಕ್ಕೆ ಮಾಡಿದ ಕುಚ್ಚಲಕ್ಕಿಯ ಅನ್ನವನ್ನು ಅವುಗಳಿಗೆ ಬಡಿಸುತ್ತಿದ್ದರು. ಕಬ್ಬಿಣದ ಸೌಟಿಗೆ ಬಟ್ಟೆಯ ಬತ್ತಿಹಾಕಿ ಆರತಿ ತೋರಿಸುತ್ತಿದ್ದರು. ಕೆಲವೊಮ್ಮೆ ತೆಂಗಿನ ಮರದ ತೆಪ್ಪರಿಗೆ ಸೂಟೆ ಆರತಿಯಾಗುತ್ತಿತ್ತು. ದಿನನಿತ್ಯ ಕುಳಿತುಕೊಳ್ಳುವ ಮರದ ಮಣೆಯಲ್ಲಿ ಸ್ವಸ್ತಿಕೆಯಿಟ್ಟು ಕೈಮುಗಿಯುತ್ತಿದ್ದರು. ಸಾರ್ವಜನಿಕವಾಗಿ ನಡೆಯುವ ಕೋಲಗಳಿಗೆ ಕೂಡ ಶಿವಳ್ಳಿ ಬ್ರಾಹ್ಮಣರು ನಿಯಮಿತ ಅವಧಿಗೆ ಮಾತ್ರ ಹೋಗುತ್ತಿದ್ದರು. ಭೂತದ ಕೋಲದ ಚಪ್ಪರಕ್ಕೆ ಕಾಲಿಡುವ ಕ್ರಮವಿರಲಿಲ್ಲ. ಪ್ರತ್ಯೇಕ ಸ್ಥಳದಲ್ಲಿ ಕುಳಿತುಕೊಳ್ಳುವ ವ್ಯವಸ್ಥೆಯಿತ್ತು. ಕೋಳಿ ಕಡಿಯುವ (ಬಾರಣೆ) ಹೊತ್ತಿಗೆ ಶಿವಳ್ಳಿ ಬ್ರಾಹ್ಮಣರು ಯಾವ ಅಗತ್ಯಕ್ಕೂ ಅಲ್ಲಿ ಇರುತ್ತಿರಲಿಲ್ಲ. ದೈವಗಳ ಪ್ರಸಾದವನ್ನು ಮನೆಯ ಒಳಗೆ ತರುತ್ತಿರಲಿಲ್ಲ.

* ಉಡುಪಿಯ ಶ್ರೀ ಸೋದೆ ಮಠಾದೀಶ ಶ್ರೀ ವಾದಿರಾಜ ಸ್ವಾಮಿಯವರು ತನ್ನ ಪರಿಚಾರಕ ನಾರಳಮಠದ ನಾರಾಯಣಾಚಾರ್ಯನು ಮಾಡಿದ ತಪ್ಪಿಗೆ 'ಭೂತವಾಗು' ಎಂದು ಶಪಿಸುತ್ತಾರೆ. ಆದರೆ ಅವರು ಭೂತಗಳಿಗೆ ರಾಜನಾಗುವಂತೆ ಮಾಡುತ್ತಾರೆ. ಇದು ಶಿವಳ್ಳಿ ಬ್ರಾಹ್ಮಣರು ಭೂತಾರಾಧನೆಯತ್ತ ಒಲವು ತೋರಿಸಿ ಸಾಮಾನ್ಯ ಜನರ ವಿಶ್ವಾಸಕ್ಕೆ ಪಾತ್ರರಾಗಲು ಅವಕಾಶ ಮಾಡಿಕೊಟ್ಟಿತು. ಕಾಲಾನು ಕ್ರಮದಲ್ಲಿ ಭೂತರಾಜರೊಂದಿಗೆ ಇನ್ನಿತರ ಭೂತಗಳನ್ನು ಆರಾಧಿಸುವ ಪರಿಪಾಠ ಬೆಳೆದು ಬಂದಿರಬಹುದು.

ಕಲ್ಲುರ್ಟಿ, ಕಲ್ಕುಡ ಪೊಸಭೂತಗಳ ಪಾಡ್ದನಗಳಲ್ಲೂ ಉಬಾರು (ಉಪ್ಪಿನಂಗಡಿ) ವೈಲಾಯರ ಹೆಸರು ಬರುತ್ತದೆ. ಕಲ್ಲುರ್ಟಿ ಕಲ್ಕುಡವನ್ನು ಶಾಂತಿಭಾವದಿಂದ ನಂಬಿದವರಿಗೆ ಇಂಬು ಕೊಡುವಂತೆ ಮಾಡಿದವರು ಉಬಾರು ವೈಲಾಯರು. ಅವರು ತನ್ನ ಮಂತ್ರ ಶಕ್ತಿಯಿಂದ ಭೂತಗಳನ್ನು ತೆಂಗಿನ ಕಾಯಿಯಲ್ಲಿ ಆಕರ್ಷಣೆ ಮಾಡಿತಂದು ಉಪ್ಪಿನಂಗಡಿಯಲ್ಲಿ ಸ್ಥಾಪನೆ ಮಾಡಿ ಭಕ್ತಿಪೂರ್ವಕ ಪೂಜಿಸಿದರು. ಈ ಘಟನೆಯನ್ನು ಪಾಡ್ದನದಲ್ಲಿ ವೈಲಾರ್ ಅಂಚನೆ ಉಬಾರ್‌ಗ್ ಕೊಂಡತ್ತರ್, ಜಪಜಾವರ ಕೊಟ್ಯ ಕಟ್ಯೆರ್. ಹಂಚಿ ಪಾಡಾಯೆರ್, ಮುಗ್ಗಿ ದೀಪಾಯೆರ್, ನೇಮ ಮಲ್ತ್‌ದ್ ಮನೆದೇವೆರ್, ಕುಲಸಾಮಿ ದೈವಂದ್ ನಂಬಿಯೆರ್, ಪೂಪೂಜನೆ ಕರಿತ್ತೊಂದು ಬತ್ತೆರ್' ಎಂದು ಹೇಳಲಾಗಿದೆ. ಮಾರೂರು ಖಂಡಿಗ ಅಸ್ರಣ್ಣರು ಕೊಡಮಣಿತ್ತಾಯ ದೈವದ ಪಾಡ್ದನದಲ್ಲಿ ಉಲ್ಲೇಖಿತರಾಗಿದ್ದಾರೆ.

* ಸುಪ್ರಸಿದ್ದ ಶಿಬರೂರು ಕೊಡಮಣಿತ್ತಾಯ ದೈವಸ್ಥಾನದಲ್ಲಿ ಶಿಬರೂರಾಯರು ಮುಖ್ಯಸ್ಥರು.

*ತುಳುನಾಡಿನ ಅನೇಕ ಸುಪ್ರಸಿದ್ಧ ಭೂತಾಲಯಗಳಲ್ಲಿ ಶಿವಳ್ಳಿ ಬ್ರಾಹ್ಮಣ ಮುಖಂಡರು ಮೊಕ್ತೇಸರರಾಗಿಯೂ ಮುದಿಪುನ ಮಧ್ಯಸ್ಥರಾಗಿಯೂ, ಶುದ್ಧ ಮುದ್ರಿಕೆಯ ಪುರೋಹಿತರಾಗಿಯೂ ಇದ್ದಾರೆ.[1]

---

1. ಗುರುಪ್ರಸಾದ ಭಟ್ಟ ಪು–ಶಿವಳ್ಳಿ ಬ್ರಾಹ್ಮಣರು ಸಂಪುಟ 2 ಪಾಡ್ದನಗಳಲ್ಲಿ ಶಿವಳ್ಳಿ ಬ್ರಾಹ್ಮಣರ ಕುಲನಾಮಗಳು –, 2005 ಪು.–233

* ಭೂತಗಳಲ್ಲೂ ರಾಜಸ-ತಾಮಸ-ನೀಚ ಎಂಬ ಒಳ ವಿಭಜನೆಗಳು ಇದ್ದರೂ ಬ್ರಾಹ್ಮಣರ ಸಂಪರ್ಕದಿಂದ ದೈವಸ್ಥಾನಗಳಲ್ಲಿ ಭೂತಗಳ ಆರಾಧನೆ ವೈದಿಕ ಕ್ರಮದಲ್ಲಿ ನಡೆಯುತ್ತದೆ. ರಕ್ತ ಬಲಿ ಕೊಡುವುದನ್ನು ಬ್ರಾಹ್ಮಣರು ಪಾಲಿಸದೆ ಇರುವುದರಿಂದ ಪರ್ಯಾಯವಾಗಿ, ಕೆಂಪು ಬಣ್ಣದ ಓಕುಳಿ ನೀರಿನ ಬಳಕೆ. ನಿಜವಾದ ಕೋಳಿಯ ಬದಲು ಹಿಟ್ಟಿನ ಕೋಳಿ, ಕುಂಬಳ ಕಾಯಿಯನ್ನು ಮಾಂಸದ ತುಂಡಿನ ಸಂಕೇತ ಎಂದು ಭಾವಿಸಿ ತಮ್ಮ ಭೂತಾರಾಧನೆಯನ್ನು ಸಾಧ್ಯವಾದಷ್ಟು ಸಾತ್ವಿಕ ಪೂಜೆಯತ್ತ ಪರಿವರ್ತಿಸಿದರು. ರಕ್ತಹಾರ ಅನಿವಾರ್ಯವೇ ಎನಿಸಿದಾಗ ಅಂತಹ ಉಗ್ರಭೂತಗಳಿಂದ ರಕ್ಷಿಸಿಕೊಳ್ಳಲು ಬೆಳ್ತಂಗಡಿ, ಪುತ್ತೂರು, ಸುಳ್ಯ ತಾಲೂಕಿನಲ್ಲಿ ಗೌಡರಿಂದ ಕೋಳಿ ಬಲಿ ಕೊಡಿಸುತ್ತಾರೆ. ಅಂತೆಯೇ ಕೆಲವು ಕಡೆ ಭೂತಾರಾಧನೆಗೆ ವಾದ್ಯ ನುಡಿಸಲು ಬರುವ ದೇವಾಡಿಗರಿಂದ ಬಲಿಕೊಡಿಸುತ್ತಾರೆ.

* ಜನಪದ ಮನೋಧರ್ಮದಿಂದ ಹುಟ್ಟಿದ್ದ ಭೂತಾರಾಧನೆಗೆ ಬ್ರಾಹ್ಮಣರು ಅನಿವಾರ್ಯ ಅಂಗವೇನೂ ಅಲ್ಲ. ಬ್ರಾಹ್ಮಣರು ತಮಗಿರುವ ವಿಶಿಷ್ಟ ಸ್ಥಾನಮಾನದಿಂದ ಭೂತಾರಾಧನೆಯಲ್ಲೂ ಮುಖ್ಯ ಪಾತ್ರ ವಹಿಸುತ್ತಾರೆ. ಕೋಲದ ಪಂಚಾಗ ಬದ್ಧ ಮುಹೂರ್ತನೋಡುವವರು ಬ್ರಾಹ್ಮಣರು.

* ಶಿವಳ್ಳಿ ಬ್ರಾಹ್ಮಣರು ಪಂಜುರ್ಲಿ, ಕಲ್ಕುಡ, ರಕ್ತೇಶ್ವರಿ ಮುಂತಾದ ದೈವಗಳನ್ನು ಆರಾಧನೆ ಮಾಡುವಾಗ, ಕೋಲ, ತಂಬಿಲ ಕೊಡುವಾಗ ರಕ್ತಾ ಹಾರ ಕೊಡುವುದಿಲ್ಲ. ಒಂದು ವೇಳೆ ಬೇರೆಯವರ ಭೂಮಿ ತೆಗೆದು

ಕೊಂಡಾಗ ಶತಮಾನದಿಂದ ರಕ್ತಾಹಾರ ನೀಡುತ್ತಿದ್ದರೆ ಪುನಃ ಪ್ರತಿಷ್ಠೆ ಮಾಡಿ, ಪ್ರಾರ್ಥನೆಮಾಡಿ, ಸಿಯಾಳ, ಅವಲಕ್ಕಿ, ಹೊದ್ದೊಳು, ಕುಂಬಳಕಾಯಿಯಂತಹ ಸಾತ್ವಿಕ ಆಹಾರವನ್ನೇ ಕೊಡುತ್ತಾರೆ.

* ಶಿವಳ್ಳಿ ಬ್ರಾಹ್ಮಣರ ಭೂತಾರಾಧನೆ ಸಾಮಾನ್ಯವಾಗಿ ಕೃಷಿಪ್ರಧಾನ ಸಾಮಾಜಿಕ ವ್ಯವಸ್ಥೆಗೆ ಹೊಂದಿಕೊಂಡಿರುತ್ತದೆ.

* ಜಾನುವಾರಗಳಿಗೆ ಸಂಬಂಧಪಟ್ಟು 'ಗುಳಿಗ' ಭೂತದಕಲ್ಲು ಹಟ್ಟಿಯ ಹತ್ತಿರವೇ ಹೆಚ್ಚಾಗಿ ಇರುತ್ತದೆ. ಅದಕ್ಕೆ ದಿನಂಪ್ರತಿ ಹಾಲು ಎರೆಯುವ ಪದ್ಧತಿ ಇದೆ.

ಕುಟುಂಬ ದೈವಗಳಿಗೆ ದೀಪಾವಳಿಯ ದಿವಸ ಮನೆಯ ಒಳಗೇ ತಂಬಿಲವನ್ನು ಕೊಡುತ್ತಾರೆ. ಶಿವಳ್ಳಿ ಬ್ರಾಹ್ಮಣರು ವೈದಿಕ ಪದ್ಧತಿಯಲ್ಲೇ ಭೂತಗಳನ್ನು ಆರಾಧನೆ ಮಾಡುತ್ತಾರೆ. ಹೋಮ ಮಾಡಿ ಮಂತ್ರದ ಮೂಲಕ ಭೂತವನ್ನು ಆರಾಧಿಸಿ ಅನಂತರ ಸಾತ್ವಿಕ ರೀತಿಯಲ್ಲಿ ತಂಬಿಲವನ್ನು ಕೊಡುತ್ತಾರೆ.

ಹಿಂದೆ ಕೋಲ ನಡೆಯುತ್ತಿದ್ದ ಭೂತಕ್ಕೆ ಈಗೀಗ ಕೋಲವನ್ನು ನಿಲ್ಲಿಸಿ ವರ್ಷಕ್ಕೆ ಎರಡು ಸಾರಿ ತಂಬಿಲವನ್ನು ಮಾತ್ರ ಕೊಡುವ ಪದ್ದತಿ ಹೆಚ್ಚಿನ ಕಡೆಯಲ್ಲಿ ಶಿವಳ್ಳಿಯರಲ್ಲಿ ಕಂಡು ಬರುತ್ತಿದೆ.

ಕೊಕ್ಕಡ ದೇವಸ್ಥಾನದಲ್ಲಿ ದೈವದ ಆವೇಶ ಶಿವಳ್ಳಿ ಬ್ರಾಹ್ಮಣರ ಮೈಮೇಲೆ ಬರುವುದನ್ನು ಕಾಣಬಹುದು.

ಮನೆಯಲ್ಲಿ ನಡೆಯುವ ಪ್ರತಿಯೊಂದು ಶುಭಕಾರ್ಯಕ್ಕೂ ಮೊದಲು ದೈವ ವಂದನೆ ಮುಖ್ಯ. ಬ್ರಾಹ್ಮಣ ಮತ್ತು ಬಂಟರು ಮುಕ್ತೇಸರರಾಗಿರುವ ದೈವಸ್ಥಾನಗಳು ರಚನೆ ಮತ್ತು ವಿನ್ಯಾಸದಲ್ಲಿ ಇತರ ಗುಡಿಗಳಿಂದ ಆಡಂಬರವಾಗಿದೆ, ವೈಭವಯುತವಾಗಿದೆ. ಅದಕ್ಕೆ ಆಯಾಮ ವರ್ಗದ ಆರ್ಥಿಕ ಸ್ಥಿತಿಗತಿಗಳು ಮತ್ತು ಇತಿಮಿತಿಗಳೇ ಕಾರಣ.

"ಇಂತಹ ಜಾತಿನಿಷ್ಠ ಜಮೀನ್ದಾರೀ ಪದ್ಧತಿಯ ಉತ್ಪನ್ನ ಎಂದು ಭೂತಾರಾಧನೆಯನ್ನು ವಿವರಿಸುತ್ತಾ ಭೂಮಿಯ ಒಡೆತನದಂತಹ ಆರ್ಥಿಕ ವಿಷಯಕ್ಕೂ ರಾಜಕೀಯ ಆಡಳಿತದ ಅಧಿಕಾರಕ್ಕೂ ನೇರವಾದ ಸಂಬಂಧವಿದೆ. ರಾಜಕೀಯ ಅಧಿಕಾರವನ್ನು ಮತ್ತು ಭೂಮಿಯ ಮೇಲಿನ ಒಡೆತನವನ್ನು ವಂಶ ಪಾರಂಪರ್ಯವಾಗಿ ಉಳಿಸಿಕೊಂಡು ಬರಲು ಸಹಾಯಕವಾಗುವಂತೆ ಭೂತಾರಾಧನೆಯಂತಹ ಒಂದು ವ್ಯವಸ್ಥೆಯನ್ನು ರೂಪಿಸಿ, ಪೋಷಿಸುತ್ತಾ ಬಂದಿದ್ದಾರೆ. ಶ್ರೇಣೀಕೃತ ಸಮಾಜ ಭೂಮಿಯ ಮೇಲಿನ ಒಡೆತನ, ರಾಜಕೀಯ ಆಡಳಿತಾತ್ಮಕ ಅಧಿಕಾರ–ಇಂತಹ ಸಮಾಜ ಶಾಸ್ತ್ರೀಯ ಶಕ್ತಿಗಳು ಭೂತಾರಾಧನೆಯನ್ನು ಒಂದು ಸಾಮಾಜಿಕ ಪದ್ಧತಿಯಾಗಿ (Social System)ರೂಪಿಸಿರುವುದು ಕಂಡು ಬರುತ್ತದೆ[1].

4.19 ಶಿವಳ್ಳಿ ಬ್ರಾಹ್ಮಣರಲ್ಲಿ ಸಾವಿನ ಕುರಿತಾದ ಆಚರಣೆಗಳು

ಜೀವನಾವರ್ತನದ ಅಂತಿಮ ಘಟ್ಟ ಸಾವು. ಶಿವಳ್ಳಿಯವರಲ್ಲಿ ಸತ್ತವರು ಪ್ರೇತವಾಗುತ್ತಾರೆ. ಪ್ರೇತಾತ್ಮಕ್ಕೆ ಸದ್ಗತಿ ದೊರಕಲು ಮತ್ತು ಅದರಿಂದ ತಮ್ಮ ಕುಟುಂಬದವರನ್ನು ರಕ್ಷಿಸಲು ನಿರ್ದಿಷ್ಟ ವಿಧಿಗಳನ್ನು ಮಂತ್ರೋಕ್ತ ಹಾಗೂ ಶಾಸ್ತ್ರ ಬದ್ಧವಾಗಿ ಮಾಡುತ್ತಾರೆ. ಹೆಚ್ಚಾಗಿ ಕುಲಪುರೋಹಿತರು ಅಪರ ಕ್ರಿಯೆಯಲ್ಲಿ ಮುಂದಾಳುತನ ವಹಿಸುತ್ತಾರೆ. ಅವರ ನಿರ್ದೇಶನದಂತೆ ಅಪರ ಕಾರ್ಯಗಳು ಜರುಗುತ್ತದೆ. ಪ್ರೇತಾತ್ಮವನ್ನು ಪಿತೃ ದೇವತೆಯಾಗಿ ರೂಪಾಂತರಿಸುವ ಪ್ರಕ್ರಿಯೆ ನಡೆಯುತ್ತದೆ.

ಶಿವಳ್ಳಿ ಬ್ರಾಹ್ಮಣರಲ್ಲಿ ಸತ್ತ ವ್ಯಕ್ತಿಯ ದೇಹವನ್ನು ಅಂದರೆ ಶವವನ್ನು ದಹನ ಮಾಡುತ್ತಾರೆ. ಚಿಕ್ಕ ಪ್ರಾಯದಲ್ಲಿ ಸತ್ತರೆ ಹೂಳುತ್ತಾರೆ. ವ್ಯಕ್ತಿಗೆ ಸಾವು ಸಮೀಸುತ್ತಿದ್ದಂತೆ ಕುಟುಂಬದ ಸದಸ್ಯರು ಗಂಗಾ ಜಲವನ್ನು ಬಾಯಿಗೆ ಬಿಡುತ್ತಾರೆ. ಶಿವಳ್ಳಿಯವರ ಹೆಚ್ಚಿನವರ ಮನೆಯಲ್ಲಿ ಗಂಗಾ ಜಲವನ್ನು ತಾಮ್ರದ ಪಾತ್ರೆಯಲ್ಲಿ ಸಂಗ್ರಹಿಸಿ ಇಟ್ಟಿರುತ್ತಾರೆ. ಅದನ್ನೇ ಒಡೆದು ಸತ್ತ ವ್ಯಕ್ತಿಯ ಬಾಯಿಗೆ ತೀರ್ಥದ ರೂಪದಲ್ಲಿ ಹಾಕುತ್ತಾರೆ. ವ್ಯಕ್ತಿಯ ಪ್ರಾಣ ಪಕ್ಷಿ ಹಾರಿದ್ದರೂ ಸಾಂಕೇತಿಕವಾಗಿ ಗಂಗಾ ಜಲವನ್ನು ಬಾಯಿಗೆ ತೀರ್ಥರೂಪದಲ್ಲಿ ಚಮಚದ ಮೂಲಕ ಹಾಕುತ್ತಾರೆ. ಹೆಣವನ್ನು ಉತ್ತರ ದಕ್ಷಿಣ ದಿಕ್ಕಾಗಿ ಮಲಗಿಸುತ್ತಾರೆ. ದಕ್ಷಿಣ ದಿಕ್ಕಿಗೆ ತಲೆ ಇರಬೇಕು. ಕಾಲು ಉತ್ತರ ದಿಕ್ಕಿಗೆ ಇರಬೇಕು. ದುಷ್ಟಶಕ್ತಿಗಳು ದೇಹವನ್ನು ಪ್ರವೇಶಿಸಬಾರದು ಎಂಬ ಉದ್ದೇಶದಿಂದ ಮೂಗಿನ ಹೊಳ್ಳೆಗೆ

1. ಡಾ. ಕೆ. ಚಿನ್ನಪ್ಪ ಗೌಡ ಭೂತಾರಾಧನೆ 1990 ಪುಟ 194

ಹತ್ತಿ ಇಡುತ್ತಾರೆ. ತಲೆಯ ಭಾಗದಲ್ಲಿ ಹಾಗೂ ಕಾಲಿನ ಭಾಗದಲ್ಲಿ ದೀಪ ಇಡುತಾರೆ. ಭತ್ತವನ್ನು ಎಲೆಯ ಮೇಲೆ ಹಾಕಿ ದೀಪ ಇಡುವ ಪದ್ಧತಿ ಶಿವಳ್ಳಿಯವರಲ್ಲಿದೆ.

ನೆರೆಕರೆಯ ಹಿರಿಯರು ಎರಡು ಬಿದಿರಿನ ಗಳವನ್ನು ಸೀಳಿ ಚಿಕ್ಕ ಏಣಿ ಹಾಗೆ ಮಾಡಿ ಶವವನ್ನು ಹೊರುವ ಸಾಧನವಾದ 'ಚಟ್ಟ' ವನ್ನು ತಯಾರಿಸುತ್ತಾರೆ. ಮನೆಯ ಹೊರಗೆ ಅಂಗಳದಲ್ಲಿ ಚಟ್ಟದ ಮೇಲೆ ಹೆಣವನ್ನು ಮಲಗಿಸುತ್ತಾರೆ. ಹೆಣವನ್ನು ಅನಂತರ ಸ್ನಾನ ಮಾಡಿಸುತ್ತಾರೆ. ಹೆಣದ ಮೇಲೆ ಹೊಸ ಬಟ್ಟೆಯನ್ನು ಹಾಕುತ್ತಾರೆ. ಹೆಣದ ಮೈಯಲ್ಲಿರುವ ಆಭರಣವನ್ನೆಲ್ಲಾ ತೆಗೆಯುತ್ತಾರೆ. ಮುತ್ತೈದೆಯ ಸಾವಾಗಿದ್ದರೆ ಕರಿಮಣಿಯನ್ನು ಹೆಣದ ಕುತ್ತಿಗೆಯಲ್ಲಿಯೇ ಹೆಚ್ಚಿನವರು ಬಿಡುತ್ತಾರೆ.

ಶವ ಸಂಸ್ಕಾರದ ವಿಧಿಯನ್ನು ನಿರ್ವಹಿಸುವ ಹೊಣೆ ಕುಲಪುರೋಹಿತರಿಗೆ ಸೇರಿದ್ದ ಕಾರಣ, ಅದಕ್ಕೆ ಬೇಕಾಗುವ ಎಲ್ಲಾ ಪರಿಕರಗಳನ್ನು ಅವರು ತಯಾರು ಮಾಡಿಕೊಳ್ಳುತ್ತಾರೆ. ಹರಿಜನ ವರ್ಗದವರು ಶವ ಸುಡಲು ಬೇಕಾದ ಕಟ್ಟಿಗೆಯನ್ನು ರಾಶಿ ಹಾಕುತ್ತಾರೆ. ಹೆಣ ಪೂರ್ತಿ ಸುಡುವವರೆಗೆ ಅವರಿಗೆ ಜವಾಬ್ದಾರಿಯಿದೆ. 'ಕಾಷ್ಠ'ವನ್ನು ಉತ್ತರ ದಕ್ಷಿಣವಾಗಿ ತಯಾರಿಮಾಡಿರುತ್ತಾರೆ.

ಹೆಣವನ್ನು ಸುಡಲು ನಿರ್ಧರಿಸಿದ ಸ್ಥಳಕ್ಕೆ ಚಟ್ಟ ಮೇಲೆ ಇಟ್ಟು ಹೆಣವನ್ನು ಹೊತ್ತುಕೊಂಡು ಹೋಗುತ್ತಾರೆ. ಚಟ್ಟದ ಮುಂಭಾಗದಲ್ಲಿ ಕ್ರಿಯೆ ಹಿಡಿಯುವ ಜೇಷ್ಠ ಪುತ್ರ ಹೊರುತ್ತಾನೆ. ಸಂಬಂಧಿಕರು ಕೈ ಜೋಡಿಸುತ್ತಾರೆ. ಶವ ದಹನಕ್ಕೆ ಬೇಕಾದ ಅಗ್ನಿಯನ್ನು ಮೃತರ ಉಳಿದ ಮಕ್ಕಳು ಅಥವಾ ರಕ್ತ ಸಂಬಂಧಿಗಳು ಮಡಕೆಯಲ್ಲಿ ಹಿಡಿದುಕೊಂಡು ಮುಂದೆ ಹೋಗುತ್ತಾರೆ. ಮನೆಯ ಅಂಗಣದಿಂದ ಶವದಹನದ ಜಾಗದವರೆಗೆ ಶವಯಾತ್ರೆಯಾಗುವಾಗ ಇತರರು ಜಾಗೃತೆ ವಹಿಸುತ್ತಾರೆ. ಶಿಷ್ಟಾಚಾರದಂತೆ ಸರಿಯಾದ ಅರ್ಧಭಾಗದಲ್ಲಿ ಶವವನ್ನಿಟ್ಟು ಹೆಗಲು ಬದಲಾಯಿಸಿಕೊಂಡು ಮುಂದುವರಿಯುತ್ತಾರೆ. ಅಪರ ಕ್ರಿಯೆಗೆ ಬೇಕಾದ ಎಳ್ಳು, ದರ್ಭೆ, ಮುಂತಾದ ಸಾಮಗ್ರಿಗಳನ್ನು ಕೊಂಡೊಯ್ಯುತ್ತಾರೆ. ಶವಕ್ಕೆ ಸುಡುವ ಮುಂಚಿನ ಕ್ರಿಯೆಗಳನ್ನು ಮಾಡಿದ ನಂತರ ಕ್ರಿಯೆ ಹಿಡಿದ ಜ್ಯೇಷ್ಠಪುತ್ರ ಹೆಣಕ್ಕೆ ಅಪ್ರದಕ್ಷಿಣೆ ಬಂದು ಅಗ್ನಿ ಸ್ಪರ್ಶ ಮಾಡುತ್ತಾನೆ.

ಮೃತಪಟ್ಟ ಗಂಡನ ದೇಹವನ್ನು ಹೊರಗೆ ತೆಗೆದುಕೊಂಡು ಹೋದಾಗಲೇ ಮೃತಪಟ್ಟ ವ್ಯಕ್ತಿಯ ಪತ್ನಿಯ ಮುತ್ತೈದೆಯ ಸಂಕೇತವಾದ ಬಳೆ, ಮಂಗಳಸೂತ್ರ, ಕುಂಕುಮವನ್ನು ಅಳಿಸಿ ಹಾಕುತ್ತಾರೆ. ಅನಂತರ ಆಕೆ ಸ್ನಾನ ಮಾಡಿ ಬರಬೇಕು. ಮುಂದೆ ಸೂತಕ ಕಳೆಯುವವರೆಗೆ ರಂಗೋಲಿ, ತಳಿರುತೋರಣ, ಹೂ ಮುಂತಾದ ಶುಭ ಸೂಚಕ ವಸ್ತುಗಳು ಮನೆಯ ಪರಿಸರದಲ್ಲಿ ಇರುವುದಿಲ್ಲ.

ಹೆಣ ಸುಡುವಾಗ ಹನಿ ಮಳೆ ಬಂದರೆ ಒಳ್ಳೆಯದು ಎಂಬ ನಂಬಿಕೆ ಇದೆ. ಮೃತ ವ್ಯಕ್ತಿಯ ಮದುವೆಯ ಸಂದರ್ಭದ ಗೃಹ್ಯಾಗ್ನಿಯನ್ನೇ ಚಿತೆಗೆ ಉಪಯೋಗಿಸಿಬೇಕೆಂಬ ನಂಬಿಕೆ ಶಿವಳ್ಳಿಯವರಲ್ಲಿದೆ. ಆದರೆ ಈಗ ಗೃಹ್ಯಾಗ್ನಿ ಉಪಾಸನೆ ಇಲ್ಲದೇ ಇರುವುದರಿಂದ ದೈನಿಕ ಅಡುಗೆಯಲ್ಲಿ ಬಳಸುವ ಕೆಂಡವನ್ನೇ ಉಪಯೋಗಿಸುತ್ತಾರೆ.

ಮಾವಿನ ಮರಕ್ಕೆ ಬೇಗ ಬೆಂಕಿ ಹತ್ತಿಕೊಳ್ಳುವುದರಿಂದ ಮಾವಿನ ಮರವನ್ನೇ ಕಾಷ್ಠ ತಯಾರಿಸಲು ಬಳಸುತ್ತಾರೆ.

ಮೃತರ ರಕ್ತ ಸಂಬಂಧಿಗಳು ಶವಕ್ಕೆ ಅಪ್ರದಕ್ಷಿಣೆ ಬಂದು ಒಂದೊಂದು ಸೌದೆ ಕೊಳ್ಳಿಯನ್ನು ಚಿತೆಗೆ ಹಾಕುತ್ತಾರೆ. ಹೆಣ ಪೂರ್ತಿ ಸುಡುವವರೆಗೆ ಸಂಬಂಧಿಕರೂ ಚಿತೆಯ ಬಳಿಯೇ ಇರುತ್ತಾರೆ. ಕೆಲವೊಮ್ಮೆ ಹೆಣದ ತಲೆ ಬುರುಡೆ ಒಡೆದು ಸಿಡಿಯುವುದಿದೆ. ಶವ ದಹನದ ಅನಂತರ ಮನೆಯನ್ನು ಶುದ್ಧ ಮಾಡುತ್ತಾರೆ. ಹೆಣ ಸುಡಲು ಹೋದವರು ಸ್ನಾನ ಮಾಡಿಮನೆಯ ಒಳಕ್ಕೆ ಬರುತ್ತಾರೆ.

ನಾಲ್ಕನೇ ದಿವಸ ಶವ ದಹನದ ಸ್ಥಳದಿಂದ ಅಸ್ತಿ ಸಂಚಯ ಮಾಡುತ್ತಾರೆ. ವ್ಯಕ್ತಿ ಮೃತ ಪಟ್ಟ ಹತ್ತು ದಿನಗಳು ಆಗುವವರೆಗೆ ಕೆರೆ ಅಥವಾ ಹೊಳೆ ಬದಿಯಲ್ಲಿ ಧರ್ಮೋದಕ, ಕೇಶೋದಕ ಮತ್ತು ತ್ರಿಲೋದಕ ಕ್ರಿಯೆಯನ್ನು ಮಾಡುತ್ತಾರೆ. ಹತ್ತನೇ ದಿವಸದ ಧರ್ಮೋದಕ. ಪ್ರೇತಾತ್ಮಕ್ಕೆ ನಿತ್ಯ ಶ್ರಾದ್ಧ ವಿಧಿ ಇರುತ್ತದೆ. ಅಕ್ಕಿಯ ಹಿಟ್ಟಿನಿಂದ ಮಾಡಿದ ಪಿಂಡವನ್ನು ಎಳ್ಳುನೀರಿನ ಮೂಲಕ ಪ್ರೇತಾತ್ಮಕ್ಕೆ ಅರ್ಪಿಸುವುದು. ಹನ್ನೊಂದು ದಿವಸದ ವರೆಗಿನ ನಿತ್ಯ ಶ್ರಾದ್ಧ ವಿಧಿಗಳಲ್ಲಿ ಬೆಳ್ತಿಗೆ ಅಕ್ಕಿಯ ಹಿಟ್ಟಿನಿಂದ ಪಿಂಡ ಪ್ರದಾನ ಮಾಡುತ್ತಾರೆ. ಪ್ರತಿದಿನ ಒಂದೊಂದು ಅವಯವ ಸೇರಿಸಿ ಮೃತ ವ್ಯಕ್ತಿಗೆ ಮರುಹುಟ್ಟು ಕಲ್ಪಿಸುವ ಕ್ರಿಯೆ ಇದಾಗಿದೆ. 12ನೇ ದಿವಸ ನಡೆಯುವ ಸಪಿಂಡೀಕರಣ ಶ್ರಾದ್ಧದಲ್ಲಿ ಅಕ್ಕಿಯ ಹಿಟ್ಟಿನ ಬದಲು 'ಅನ್ನ'ದ ಪಿಂಡವನ್ನು ಇಡುತ್ತಾರೆ. ಶ್ರಾದ್ಧ ಮಾಡುವವರು ಅನ್ನವನ್ನು ಒಂದು ತುದಿ ಎಲೆಗೆ ಹಾಕಿ ಎಳ್ಳು, ತುಪ್ಪ, ಹಾಲು, ಮೊಸರು, ಬಾಳೆಹಣ್ಣು, ಬೆಲ್ಲ ಹಾಕಿ ಪುರೋಹಿತರ ಮಾರ್ಗದರ್ಶನದಲ್ಲಿ ಪಿಂಡ ತಯಾರಿಸುತ್ತಾರೆ.

- ಪಿಂಡದ ಸುತ್ತ ಬಲಿಹರಣ ಹಾಕಲು ಉಳಿದ ಅನ್ನದಲ್ಲಿ ಸ್ವಲ್ಪ ಬಳಸುತ್ತಾರೆ. ಕುಲದೇವರು, ಬ್ರಾಹ್ಮಣರಿಗೆ ಪೂಜೆ, ಪ್ರೇತಾತ್ಮಕ್ಕೆ ತರ್ಪಣ ನಡೆಯುತ್ತದೆ. ಅಪರ ಕ್ರಿಯೆ ಮಾಡುವಾಗ ಜನಿವಾರ ಎಡ ಬದಿಗಿರಬೇಕು.
- ಸಾವು ಘಟಿಸಿದ ಮನೆಯ ಬಟ್ಟೆ ಬರೆಗಳನ್ನು ಶುದ್ಧಗೊಳಿಸುವ ಮಡಿವಾಳ. ಆತ ಮನೆಯಲ್ಲಿರುವ ಎಲ್ಲಾ ಬಟ್ಟೆ ಬರೆಗಳನ್ನು ಒಗೆದು ಸ್ವಚ್ಛ ಮಾಡ ಬೇಕಾಗುತ್ತದೆ. ಅದಕ್ಕೆ ಪ್ರತಿಯಾಗಿ ಆತನಿಗೆ ಅಕ್ಕಿ ತೆಂಗಿನಕಾಯಿ, ಹೊಸಬಟ್ಟೆ ಎಣ್ಣೆ ಮತ್ತು ಹಣವನ್ನು ಮರ್ಯಾದೆಯ ರೂಪದಲ್ಲಿ ನೀಡುತ್ತಾರೆ. ಸತ್ತ ದಿವಸ ವ್ಯಕ್ತಿ ಧರಿಸಿದ ಬಟ್ಟೆಯನ್ನು ಆತನಿಗೆ ನೀಡುತ್ತಾರೆ. ಅಂತೆಯೇ ನಿತ್ಯದಲ್ಲಿ ಸತ್ತ ವ್ಯಕ್ತಿ ಧರಿಸುತ್ತಿರುವ ಬಟ್ಟೆಗಳನ್ನು ಆತನಿಗೆ ನೀಡುತ್ತಾರೆ.
- ಸತ್ತ ವ್ಯಕ್ತಿಯನ್ನು ಸುಡಲು ಮಾವಿನ ಮರದ ಕಟ್ಟಿಗೆಯನ್ನು ತಯಾರು ಮಾಡುವ ಜವಾಬ್ದಾರಿ ಹರಿ ಜನರಿಗೆ ಸೇರಿದ್ದು. ಮಾವಿನ ಮರದ ತುಂಡಿನಿಂದ ಆತ ಕಾಷ್ಠವನ್ನು ತಯಾರು ಮಾಡಬೇಕು. ಅದಕ್ಕೆ ಪ್ರತಿಯಾಗಿ ಆತನಿಗೆ ಅಕ್ಕಿ, ತೆಂಗಿನಕಾಯಿ, ಹೊಸಬಟ್ಟೆ, ಎಣ್ಣೆ ಮತ್ತು ಹಣವನ್ನು ಮರ್ಯಾದೆಯ ರೂಪದಲ್ಲಿ ನೀಡುತ್ತಾರೆ.
- ಕ್ರಿಯೆ ಹಿಡಿಯುವವರ ತಲೆ ಕೂದಲು, ಮೀಸೆಯನ್ನು ಕೌರಿಕ ತೆಗೆಯುತ್ತಾನೆ. ಆತನಿಗೂ ಮಡಿವಾಳ ಮತ್ತು ಹರಿಜನರಿಗೆ ಕೊಟ್ಟ ಹಾಗೆಯೇ ಮರ್ಯಾದೆಯ ರೂಪದಲ್ಲಿ ಅಕ್ಕಿ, ತೆಂಗಿನ ಕಾಯಿ, ಎಣ್ಣೆ, ಹೊಸಬಟ್ಟೆ, ಹಣವನ್ನು ನೀಡುತ್ತಾರೆ.

4.19.1 ಸಪಿಂಡೀಕರಣ:

ವ್ಯಕ್ತಿಯೊಬ್ಬ ಸತ್ತ 12ನೆಯ ದಿವಸ ಮಾಡುವ ಪಿಂಡ ಪ್ರದಾನವಾದ ಶ್ರಾದ್ಧ ವಿಧಿಯನ್ನು 'ಸಪಿಂಡೀಕರಣ' ಎನ್ನುವರು. ಸತ್ತ ವ್ಯಕ್ತಿ ಮರಣ ಹೊಂದಿದ ಕ್ಷಣದಿಂದಲೇ ಪ್ರೇತನಾಗುತ್ತಾನೆ. ಈ ಪ್ರೇತಾವಸ್ಥೆಯಿಂದ ಪಿತೃಗಳ ಹಂತಕ್ಕೆ ರೂಪಾಂತರಗೊಳಿಸುವ ಕ್ರಿಯೆಯನ್ನು ಅಂತ್ಯಕ್ರಿಯೆ ಎಂದು ಕರೆಯುವರು. ಆದ್ದರಿಂದ ಬ್ರಾಹ್ಮಣರ ಅಂತ್ಯಸಂಸ್ಕಾರ ವಿಧಿಗಳಲ್ಲಿ ಈ ಶ್ರಾದ್ಧವಿಧಿ ಮಹತ್ವದ ಘಟ್ಟ. ಸ್ಥೂಲ ಶರೀರವನ್ನು ಅಗ್ನಿಗೆ ವಿಸರ್ಜಿಸಿ ಸೂಕ್ಷ್ಮ ಶರೀರಿಯಾದ ಮೃತ ವ್ಯಕ್ತಿಯ ಪ್ರೇತವನ್ನು ಪಿತೃಗಳ ಸ್ಥಾನದಲ್ಲಿ ನಿಲ್ಲಿಸುವ ಪ್ರಕ್ರೀಯೆಯನ್ನೇ ಸಪಿಂಡೀಕರಣ ಎನ್ನುತ್ತಾರೆ.

ಪ್ರೇತವನ್ನು ಪಿತೃಗಳೊಂದಿಗೆ ಸಮೀಕರಿಸುವ ಉದ್ದೇಶ ಇಲ್ಲಿದೆ. "ಯಾವ ವ್ಯಕ್ತಿಯನ್ನು ಉದ್ದೇಶಿಸಿ ಶ್ರಾದ್ಧವಾಗುತ್ತದೆಯೋ ಆತ ಗಂಡಾಗಲಿ ಹೆಣ್ಣಾಗಲಿ ಶ್ರಾದ್ಧಕ್ಕೆ ಆಹ್ವಾನಿತರಾಗುವವರು ವಸು, ರುದ್ರ ಮತ್ತು ಆದಿತ್ಯರು. ಇವರು ಕ್ರಮವಾಗಿ ತಂದೆ ತಾಯಿ, ಅಜ್ಜ ಅಜ್ಜಿ, ಮತ್ತು ಮುತ್ತಾದ ಮುತ್ತಜ್ಜಿಯನ್ನು ಪ್ರತಿನಿಧಿಸುತ್ತಾರೆ. ಈ ಮೂರು ಪೀಳಿಗೆಯನ್ನು ದಾಟಿ ನಾಲ್ಕನೆಯ ಪೀಳಿಗೆಯ ವ್ಯಕ್ತಿ ಸತ್ತಾಗ ಹೊಸದಾಗಿ ಸತ್ತ ವ್ಯಕ್ತಿಯನ್ನು ಮೂವರು ಪಿತೃಗಳೊಂದಿಗೆ ವಿಲೀನಗೊಳಿಸಿ ಅತ್ಯಂತ ಹಿರಿಯರನ್ನು ಕೈ ಬಿಟ್ಟು ಹೊಸದಾಗಿ ಸತ್ತ ವ್ಯಕ್ತಿಯನ್ನು ವಸು ಎಂದು ಪರಿಗಣಿಸಲಾಗುತ್ತದೆ. ಸಪಿಂಡೀಕರಣ ಶ್ರಾದ್ಧ ಎಂಬ ವಿಧಿ ಈ ರೀತಿ ಪಿತೃಗಳ ಸಂಖ್ಯೆ ಯಾವಾಗಲೂ ಮೂರರಲ್ಲಿಯೇ ಇರುವಂತೆ ಮಾಡುತ್ತದೆ. ಈ ರೀತಿ ಪಿತೃ ಸ್ಥಾನದಿಂದ ಬಿಡುಗಡೆಯಾದ ಆತ್ಮ ವಂಶದಲ್ಲಿ ಹೊಸದಾಗಿ ಜನ್ಮ ತಳೆಯುತ್ತದೆ ಎಂದು ಭಾವಿಸಲಾಗುತ್ತದೆ.

ವ್ಯಕ್ತಿ ಸತ್ತ 13ನೆಯ ದಿನದ ಬ್ರಾಹ್ಮಣ ಭೋಜನದ ಆರಾಧನೆಯನ್ನು ಶ್ರವಣಾರಾಧನೆ ಎಂದು ಕರೆಯುತ್ತಾರೆ. 13 ಜನ ಬ್ರಾಹ್ಮಣರಿಗೆ ವಿವಿಧ ಬಗೆಯ ದಾನವನ್ನು ನೀಡುವ ಕಾರ್ಯಕ್ರಮವಿದು. ಕುಲಪುರೋಹಿತರಿಗೇ ಗೋದಾನವನ್ನು ಸಾಮಾನ್ಯವಾಗಿ ಕೊಡುವ ರೂಢಿ. ಬ್ರಾಹ್ಮಣರ ಆರಾಧನೆಯ ಜೊತೆಗೆ ಮಹಾವಿಷ್ಣುವಿನ ಆರಾಧನೆಯನ್ನು ಮಾಡಿ ಪ್ರೇತದ ಪರವಾಗಿ ಯಮ ಲೋಕದಲ್ಲಿ ವಾದಿಸಲು ಸಹಕಾರಿಯಾಗುವಂತೆ ಮಾಡುತ್ತಾರೆ ಎಂಬ ನಂಬಿಕೆ ಈ ಶ್ರವಣ ಕಾರ್ಯಕ್ರಮದಲ್ಲಿದೆ. ಸಪಿಂಡೀಕರಣ ಮತ್ತು ಮಾರನೇ ದಿನ ನಡೆಯುವ ವೈಕುಂಠ ಸಮಾರಾಧನೆಯನ್ನೇ 'ಬೊಜ್ಜದೂಟ' ಎಂದು ವಾಡಿಕೆಯಲ್ಲಿ ಕರೆಯುವುದು. ವೈಯ್ಯಕ್ತಿಕ ನೆಲೆಯ ಅಂತ್ಯ ಸಂಸ್ಕಾರದ ವಿಧಿಗಳು 12 ಮತ್ತು 13 ರಂದು ಸಾಮಾಜಿಕ ಆಯಾಮವನ್ನು ಪಡೆದುಕೊಳ್ಳುತ್ತದೆ. ಮೃತರ ಆತ್ಮಕ್ಕೆ ಶಾಂತಿ ಕೋರಲು ಸಮಾಜ ಬಾಂಧವರು ಆದಿನ ಸೇರುತ್ತಾರೆ. ತಂದೆಯ ಬೊಜ್ಜವನ್ನು ಊರಿನಲ್ಲಿ ಮಾಡದೆ ಗೋಕರ್ಣದಲ್ಲಿ ಮಾಡಿದರೆ ಸಮಾಜದ ಅನಾದರಕ್ಕೆ ಗುರಿಯಾಗಬೇಕಾಗುತ್ತದೆ. ಅಸಹಜ ಅಥವಾ ಅಕಾಲಿಕ ಸಾವಾದವರ ಉತ್ತರ ಕ್ರಿಯೆಯನ್ನು ಮಾತ್ರ ಗೋಕರ್ಣ ಮತ್ತು ಉಪ್ಪಿನಂಗಡಿಯಲ್ಲಿ ಮಾಡಲು ಸಮಾಜದ ಸಮ್ಮತಿ ಇದೆ. ಆದರೆ ಇತ್ತೀಚಿನ ಆಧುನಿಕ ಶಿಕ್ಷಣ ಪಡೆದ ಉದ್ಯೋಗಿಗಳು ಆರ್ಥಿಕ ಮತ್ತು ಸಮಯದ ಉಳಿತಾಯದ ದೃಷ್ಟಿಯಿಂದ ಅಂತೆಯೇ ಪುರೋಹಿತರ ಅಭಾವದಿಂದ ಉಪ್ಪಿನಂಗಡಿ ಮತ್ತು ಗೋಕರ್ಣವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

4.19.2 ಶ್ರಾದ್ಧ:

ಶ್ರದ್ಧೆಯಿಂದ ಮಾಡುವ ಕ್ರಿಯೆಗೆ 'ಶ್ರಾದ್ಧ' ಎನ್ನುವರು. ಮೃತ ವ್ಯಕ್ತಿಯ ಸತ್ತ ದಿವಸದ ತಿಥಿ ಮತ್ತು ಘಳಿಗೆಯನ್ನು ಅವಲಂಬಿಸಿ ವರ್ಷಂಪ್ರತಿ ಶ್ರದ್ಧೆಯಿಂದ ಮಾಡುವ ಕ್ರಿಯೆ. "ಶ್ರಾದ್ಧ ಕ್ರಿಯೆ ಮಾಡುವಾಗ ಒಂದು ಆವರಣ ನಿರ್ಮಿತವಾಗಿರುತ್ತದೆ. ಈ ವಾತಾವರಣದಿಂದ ಶ್ರಾದ್ಧ ಕ್ರಿಯೆ ಮುಗಿಯುವವರೆಗೂ ಪಾಲ್ಗೊಂಡ ಯಾರೂ ಹೊರಗೆ ಹೋಗುವ ಹಾಗಿಲ್ಲ. ಎಲೆ ಹೊರಗೆ ಇಡಲು ಬಂದಾಗ ಪುನಃ ಆ ಆವರಣಕ್ಕೆ ಪ್ರವೇಶ ಮಾಡಬೇಕಾದರೆ ಬೆರಳಿಗೆ ಹಾಕಿಕೊಳ್ಳುವ ಪವಿತ್ರ, ಆಚಮನದ ನೀರು ಎಲ್ಲವೂ ಬೇರೆಯಾಗಬೇಕಾಗುತ್ತದೆ. ಶ್ರಾದ್ಧ ಸಂದರ್ಭದಲ್ಲಿ ಪಿತೃಗಳ ಪ್ರಸಾದವನ್ನು ಮನೆಯ ಸೊಸೆಗೆ ಅವಳು ಗರ್ಭವತಿಯಾಗುವಳೆಂದು ಆಶಿಸಿಕೊಡುವ ಪದ್ಧತಿ ಶ್ರಾದ್ಧದ ಪರಿಕಲ್ಪನೆಯ ಹಿಂದಿರುವ ವಂಶಾಭಿವೃದ್ಧಿಯ ಅಥವಾ ಮರುಹುಟ್ಟಿನ ಆಶಯವನ್ನು ಧ್ವನಿಸುವಂತಹದೇ ಆಗಿದೆ"[1].

ಪಿತೃ ಆರಾಧನೆ ಮಾಡುವಾಗ ಜನಿವಾರವನ್ನು ಎಡಕ್ಕೆ ಮಾಡಿಕೊಂಡು ಕ್ರಿಯೆಯನ್ನು ಮಾಡಬೇಕು. ಮನೆದೇವರನ್ನು ಪುರೋಹಿತರ ಮಾರ್ಗದರ್ಶನದ ಜೇಷ್ಠ ಪುತ್ರ ಪೂಜಿಸಿ ಆರಾಧಿಸುತ್ತಾರೆ. ದೇವರನ್ನು ಮತ್ತು ಬ್ರಾಹ್ಮಣರನ್ನು ಪೂಜಿಸುವಾಗ ಜನಿವಾರ ಬಲ ಬದಿಗಿರಬೇಕು. ಅಕ್ಷತೆ, ತುಳಸಿ, ಗಂಧಗಳಿಂದ ಪೂಜಿಸುತ್ತಾರೆ. ಪಿತೃಗಳನ್ನು ಆರಾಧಿಸುವಾಗ ಎಳ್ಳನ್ನು ಬಳಸುತ್ತಾರೆ. ಅಂತೆಯೇ ಜನಿವಾರವನ್ನು ಎಡಬದಿಗೆ ಮಾಡಿಕೊಳ್ಳಬೇಕು. ವಸು–ರುದ್ರ–ಆದಿತ್ಯ ರೂಪದಲ್ಲಿ ಒಂದೊಂದಾಗಿ ಪಿಂಡವನ್ನು ಇಡುವಾಗಲೂ ವೀರ ಮಂಡಿಯ ಭಂಗಿಯಲ್ಲಿರಬೇಕು. ಶಿವಳ್ಳಿಯವರಲ್ಲಿ ದೇವರಿಗೆ ಅರ್ಪಿಸಿದ ಅನ್ನವನ್ನೇ ಶೇಷಾನ್ನವಾಗಿ ಪ್ರಸಾದದ ರೂಪದಲ್ಲಿ ಶ್ರಾದ್ಧ ಕ್ರಿಯೆಯನ್ನು ಮಾಡಿದವರಿಗೆ ಊಟದ ಸಂದರ್ಭದಲ್ಲಿ ಬಡಿಸುತ್ತಾರೆ. ಶ್ರಾದ್ಧ ಕ್ರಿಯೆ ಮುಗಿದ ಮೇಲೆ ಮೃತ ವ್ಯಕ್ತಿಯ ಗಂಡು ಮಕ್ಕಳು ಮತ್ತು ಹೆಣ್ಣುಮಕ್ಕಳು ಎಲೆಯನ್ನು ಅಂಗಳದಲ್ಲಿ ಇಡುವ ಪದ್ಧತಿ ಇದೆ. ಆ ಪ್ರದೇಶವನ್ನು ಸೆಗಣಿ ನೀರಿನಿಂದ ಸಾರಿಸಿರಬೇಕು. ಹೀಗೆ ಎಲೆ ಹೊರಗೆ ಇಟ್ಟಾಗ ಯಾರ ಎಲೆಯ ಆಹಾರವನ್ನು ಕಾಗೆ ಬಂದು ಮೊದಲು ಮುಟ್ಟುತ್ತದೋ ಅವರಿಗೂ ಮೃತ ವ್ಯಕ್ತಿಗೂ ಅನ್ಯೋನ್ಯ ಪ್ರೀತಿ ಇದೆ ಎಂದು ಭಾವಿಸಲಾಗುವುದು. ಎಲೆಯನ್ನು ನಾಯಿ, ಬೆಕ್ಕು, ಮುಂತಾದ ಪ್ರಾಣಿಗಳು ಮುಟ್ಟದಂತೆ ನೋಡಿಕೊಳ್ಳಬೇಕಾಗುತ್ತದೆ.

---

[1]ಡಾ. ಪಾ.ನ. ಮಯ್ಯ – ಕೋಟದವರು– 1995–ಭಾಗ–2, ಪುಟ–143
ಒಂದು ಮಂಡಿಯನ್ನು ಮಡಸಿ ಅದರ ಮೇಲೆ ಕೂತು ಇನ್ನೊಂದು ಮಂಡಿಯನ್ನು ಲಂಬವಾಗಿ ನಿಲ್ಲಿಸಿ ಕುಳಿತುಕೊಳ್ಳುವುದನ್ನು ವೀರಮಂಡಿ ಎಂದು ಕರೆಯುತ್ತಾರೆ.

ಕಾಶಿಯಲ್ಲಿ ಸಾವನಪ್ಪಿದವರು ಅಥವಾ ಅಲ್ಲಿ ಶವದಹನಕ್ಕೆ ಒಳಗಾದವರಿಗೆ ಪುನರ್ಜನ್ಮವಿಲ್ಲ ಎಂಬ ನಂಬಿಕೆಯಿದೆ. ಅಲ್ಲಿ ಯಾರ ಅಸ್ತಿ ವಿಸರ್ಜನೆ ಮಾಡಿದ್ದೇವೋ ಅವರು ಕೂಡಾ ಜನನ–ಮರಣ ಚಕ್ರಗಳಿಂದ ಬಿಡುಗಡೆ ಹೊಂದಿದ್ದಾರೆ ಎಂಬ ನಂಬಿಕೆಯಿದೆ. ಸಂನ್ಯಾಸ ದೀಕ್ಷೆ ತೆಗೆದು ಕೊಂಡವರು ತಾವು ಬದುಕಿದ್ದಾಗಲೇ ಉತ್ತರ ಕ್ರಿಯೆಯನ್ನು ಮಾಡಿಕೊಳ್ಳುವ ಪದ್ಧತಿ ಇದೆ. ಈ ಬಗೆಯ ಕ್ರಿಯಾವಿಧಿಯನ್ನು ಮಾಡಿಕೊಂಡವರಿಗೆ ಅವರು ಸತ್ತ ನಂತರ ಇನ್ನೊಮ್ಮೆ ಉತ್ತರ ಕ್ರಿಯೆ ಮಾಡಬೇಕಾಗಿಲ್ಲ. ಬ್ರಹ್ಮಚಾರಿ ಅಥವಾ ಬ್ರಹ್ಮಚಾರಿಣಿ ಸತ್ತರೆ 'ನಾರಾಯಣ ಬಲಿ' ಎಂಬ ಮೋಕ್ಷ ಸಾಧಕ ಉದ್ದೇಶದ ಸರಳವಾದ ಆಚರಣೆ ಇದೆ.

ಶ್ರಾದ್ಧದ ಊಟ ಸರಳವಾಗಿರುತ್ತದೆ. ಮುಖ್ಯವಾಗಿ ಪಿತೃದೇವತೆಗಳ ಆರಾಧನೆ ಶ್ರಾದ್ಧವಾದುದರಿಂದ ಇಲ್ಲಿ ನೆಂಟರಿಷ್ಟರೇ ಪ್ರಧಾನ ಅತಿಥಿಗಳಾಗಿರುತ್ತಾರೆ. ಶ್ರಾದ್ಧದ ಊಟದ ಹೇಳಿಕೆ ಕೂಡಾ ಅಷ್ಟಕ್ಕೆ ಸೀಮಿತವಾಗಿರುತ್ತದೆ. ಬದುಕ್ಕಿದ್ದ ಹಿರಿಯರು ರಕ್ತ ಸಂಬಂಧಿಗಳಾದರೂ ಕಿರಿಯರ ಶ್ರಾದ್ಧದ ಊಟಕ್ಕೆ ಬರುವುದಿಲ್ಲ. ಬಂದರೆ ಆಯುಷ್ಯ ಕಡಿಮೆಯಾಗುತ್ತದೆ ಎಂಬ ನಂಬಿಕೆ. ಶ್ರಾದ್ಧದಂತಹ ಆಚರಣೆಗಳು ಅಡುಗೆ ವೃತ್ತಿಯವರಿಗೂ ನಿರಂತರವಾದ ಉದ್ಯೋಗವನ್ನು ಕೊಡುತ್ತದೆ. ಕುಲಪುರೋಹಿತರಿಗೂ ದಾನ–ದಕ್ಷಿಣೆಯ ಜೊತೆಗೆ ಶಿಷ್ಯರ ಮೇಲಿನ ಹಿಡಿತವನ್ನು ಸಾಧಿಸಲು ಸಾಧ್ಯವಾಗುತ್ತದೆ. ಬ್ರಾಹ್ಮಣರ ಸಾವಿನ ಕುರಿತಾದ ಆಚರಣೆಗಳಿಗೆ ಸಾಮಾಜಿಕ ಮುಖವಿರುವುದರಿಂದ ಶ್ರಾದ್ಧದ ಊಟದ ನೆಪದಲ್ಲಾದರೂ ಸಮಾಜದಲ್ಲಿ ಒಟ್ಟು ಸೇರುವ ಅವಕಾಶವಿದೆ.

ಪರ ಊರಿನಲ್ಲಿ ನೆಲೆಸಿರುವ ಶಿವಳ್ಳಿ ಬ್ರಾಹ್ಮಣರು ತಮ್ಮ ಹಿರಿಯರ ಶ್ರಾದ್ಧ ಕಾರ್ಯಗಳಿಗಾಗಿ ಊರಿಗೆ ಬಂದು ಹೋಗುವ ಪರಿಪಾಠವಿದೆ. ಹೆಚ್ಚಾಗಿ ತಂದೆ, ತಾಯಿಗಳ ಶ್ರಾದ್ಧವನ್ನು ಮಕ್ಕಳು ಒಟ್ಟಿಗೆ ಸೇರಿಯೇ ಮಾಡುವುದು ಪದ್ಧತಿ.

ಅಧ್ಯಾಯ ಐದು– ಸಾಮಾಜಿಕ ಅಧ್ಯಯನ

5.1 ಹಿರಿಯರ ಸ್ಥಾನಮಾನಗಳು

ಎಲ್ಲಾ ವರ್ಗಗಳಲ್ಲಿ ಇರುವಂತೆ ಶಿವಳ್ಳಿ ಬ್ರಾಹ್ಮಣರಲ್ಲೂ ಹಿರಿಯರಿಗೆ ಹೆಚ್ಚಿನ ಸ್ಥಾನಮಾನಗಳು ಇರುವುದು ಕಂಡುಬರುತ್ತದೆ. ಹಿರಿಯರ ಅನುಭವಕ್ಕೆ ಗೌರವ, ಪ್ರಾಯಕ್ಕೆ ಮಹತ್ವ, ಅವರ ಮಾತಿಗೆ ಹೆಚ್ಚಿನ ಮಾನ್ಯತೆ ಕೊಡುವುದು ಕಂಡುಬರುತ್ತದೆ. ಮನೆಯಲ್ಲಿ ನಡೆಯುವ ಧಾರ್ಮಿಕಆಚರಣೆ, ಪೂಜೆಪುರಸ್ಕಾರ, ಸಮಾರಂಭ, ಹಬ್ಬಹರಿದಿನಗಳಲ್ಲಿ ಹಿರಿಯರ ಮುಂದಾಳುತನದಲ್ಲೇ ಎಲ್ಲಾ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮನೆ ಮತ್ತು ಕುಟುಂಬದ ಒಳಗೆ ಎಂತಹ ಸಮಸ್ಯೆಗಳ ಪರಿಹಾರದಲ್ಲಿ, ಆಗುಹೋಗುಗಳಲ್ಲಿ ಹಿರಿಯರ ಮಾತೇ ಅಂತಿಮ.

ಯಜ್ಞಯಾಗ, ಪೂಜೆಗಳನ್ನು ಮಾಡಿದಾಗ ಹಿರಿಯರನ್ನು ಆಯ್ಕೆಮಾಡಿ ದಕ್ಷಿಣೆಯನ್ನು ಕೊಡುತ್ತಾರೆ. ಅಂತೆಯೇ ಶುಭ, ಅಪರಕ್ರಿಯೆಗಳಲ್ಲಿ ಹಿರಿಯರಿಗೆ ದಾನ ಕೊಡುವ ಪದ್ದತಿ. ವ್ಯಕ್ತಿಯ ದಫನ ಕ್ರಿಯೆಗೆ ಮನೆಯ ಹಿರಿಯರೇ ಹೋಗುವ ಪದ್ದತಿ.

* ಶಿವಳ್ಳಿ ಬ್ರಾಹ್ಮಣರ ಎಲ್ಲಾ ಪಂಗಡಗಳಲ್ಲೂ ಲೌಕಿಕರು ಮತ್ತು ವೈದಿಕರೆಂಬ ಭೇದಗಳು ಹಿಂದೆ ಇದ್ದವು. ಲೌಕಿಕರು ದಾನ, ದಕ್ಷಿಣೆ ತೆಗೆದುಕೊಳ್ಳುತ್ತಿರಲಿಲ್ಲ. ಅವರ ಮುಖ್ಯಸ್ಥರು ಗಡ್ಡಮೀಸೆ ಬೆಳೆಯಿಸಿ ರಾಜ ಠೀವಿಯಲ್ಲಿರುತ್ತಿದ್ದರು. ಅವರಿಗೆ ದೇವರ ಪೂಜೆಯಲ್ಲಿ ಆಸಕ್ತಿ ಕಡಿಮೆ. ಗೃಹಸ್ಥರಿಗೂ ವೈದಿಕರಿಗೂ ನೆಂಟಸ್ತಿಕೆಯಾಗುವುದು ಕಡಿಮೆಯಿತ್ತು. ಪಂಕ್ತಿಭೇದವಿರಲಿಲ್ಲ. ಅವರ ಹೆಸರಿನಲ್ಲಿ ಅಂತ್ಯದಲ್ಲಿ 'ಅಯ್ಯ' ಎಂಬ ಪದವಿ ಇರುತ್ತಿತ್ತು. ವೆಂಕಟರಮಣಯ್ಯ, ಶಿವಯ್ಯ ಇತ್ಯಾದಿ. ಕೆಲವು ಕಡೆ ಇವರನ್ನು ರಾಯರು ಎಂದು ಕರೆಯುತ್ತಿದ್ದರು. ಆದರೆ ಈ ಪ್ರಭೇದ ಈಗ ಮಾಯವಾಗಿದೆ.

* ಉಪನಯನದಲ್ಲಿ ಉಡುಗೊರೆ, ಭಿಕ್ಷೆ ನೀಡುವುದು ಮೊದಲು ಹುಡುಗನ ಮಾವ ಅನಂತರ ಹಿರಿಯರು, ಮದುವೆ ಸಂದರ್ಭದಲ್ಲಿ ಹುಡುಗಿಯನ್ನು ದಾರೆಮಂಟಪಕ್ಕೆ ಕರೆದುಕೊಂಡು ಬರುವುದು ಹುಡುಗಿಯ ಮಾವ ಅಥವ ಭಾವ.

* ಮದುವೆಯಾದ ಹೊಸದರಲ್ಲಿ ಮದುಮಕ್ಕಳು ಹಿರಿಯರ ಮನೆಗೆ ಹೋಗಿ ಕಾಲಿಗೆ ಎರಗಿ ಆಶೀರ್ವಾದ ಪಡೆಯುವ ಪದ್ದತಿ ಇದೆ.

* ಸಮಾರಂಭಕ್ಕೆ ಹೇಳಿಕೆ (ಆಹ್ವಾನ) ಕೊಡುವುದು ಮೊದಲು ಹಿರಿಯರಿಗೆ ಅನಂತರ ಕುಟುಂಬದ ಸದಸ್ಯರಿಗೆ. ಪುಣ್ಯಕಾರ್ಯದಲ್ಲಿ ಹಿರಿಯರೇ ಪೂಜೆಗೆ ಕುಳಿತುಕೊಳ್ಳುವುದು.ಕಾರಣ ಅವರು ಪೂಜೆ ಮಾಡಿದರೆ ಅವರಿಗೂ ಅಂತೆಯೇ ಮನೆಯಲ್ಲಿರುವ ಅವರಿಂದ ಕಿರಿಯರೆಲ್ಲರಿಗೂ ಪುಣ್ಯ ಲಭ್ಯವಾಗುತ್ತದೆ ಎಂಬ ನಂಬಿಕೆ. ಕಿರಿಯರು ಪೂಜೆಗೆ ಕುಳಿತರೆ ಅವರಿಂದ ಕಿರಿಯರಿಗೆ ಮಾತ್ರವೇ ಪುಣ್ಯ ಲಭ್ಯವಾಗುವುದು ಹಿರಿಯರಿಗಿಲ್ಲ ಎಂಬ ನಂಬಿಕೆಯಿಂದ ಹಿರಿಯರೇ ಹೆಚ್ಚಾಗಿ ಶುಭ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಾರೆ.

* ಗಂಡ ಊಟ ಮಾಡಿದ ಎಲೆಯಲ್ಲಿ ಮಡದಿ ಊಟ ಮಾಡುವ ಪದ್ಧತಿ ಈಗಲೂ ಅಪರೂಪಕ್ಕೆ ಕೆಲವು ಮನೆಗಳಲ್ಲಿ ಇವೆ.

* ಶಿವಳ್ಳಿಯವರಲ್ಲಿ ಸತ್ತ 11ನೇ ದಿವಸ ವ್ಯಕ್ತಿ ಬಳಸುತ್ತಿದ್ದ ವಸ್ತುಗಳನ್ನು ಸಾಂಕೇತಿಕವಾಗಿ ಪ್ರಾಯದ ವ್ಯಕ್ತಿಗೆಕೊಟ್ಟು, ಊಟ ಬಡಿಸಿ ಕಳುಹಿಸುವ ಪದ್ಧತಿ ಇದೆ. ಅಲ್ಲಿಯೂ ಸಹಾ ಹಿರಿಯರನ್ನೇ ಆಯ್ಕೆಮಾಡುತ್ತಾರೆ. ಪ್ರೇತಕ್ಕೆ ಕುಳಿತುಕೊಳ್ಳುವ ವ್ಯಕ್ತಿಗಳೇ ಕೆಲವರು ಇದ್ದಾರೆ. ಹೆಚ್ಚಾಗಿ ಅವರು ಬಡವರಾರುತ್ತಾರೆ. ಪುತ್ತೂರು ತಾಲೂಕಿನಲ್ಲಿ ಅಂತಹ ವ್ಯಕ್ತಿಗಳು ಇದ್ದಾರೆ.

* ಶಿವಳ್ಳಿ ಬ್ರಾಹ್ಮಣರಲ್ಲಿ ಹಿಂದೆ ಊರಿನ ಪುರೋಹಿತರು, ಪಟೇಲರು, ಶಾನುಭೋಗರು, ವಯೋವೃದ್ಧರು ಜಾತಿಯ ಆಗು-ಹೋಗುಗಳ ಬಗ್ಗೆ ಸಮಸ್ಯೆಗಳ ಬಗ್ಗೆ ಚರ್ಚಿಸಿ ತೀರ್ಮಾನಿಸುತ್ತಿದ್ದರು. ತಮ್ಮ ಸಮಾಜ ಬಾಂಧವರಿಗೆ ಯಾರೇ ಅನ್ಯಾಯ ಮಾಡಿದರೂ ಪಂಚಾಯಿತಿ ಸೇರಿಸಿ ತೀರ್ಮಾನ ಮಾಡಿ ನ್ಯಾಯ ಒದಗಿಸುತ್ತಿದ್ದರು. ಸಮಾಜದಿಂದ ಬೇರೆಯಾರಿಗೂ ಅನ್ಯಾಯವಾದರೂ ನ್ಯಾಯದ ತಕ್ಕಡಿ ಒಂದೇ ರೀತಿ ತೂಗುತ್ತಿತ್ತು. ಹಿಂದೆ ಸಾಮೂಹಿಕ ಪೂಜಾಕಾರ್ಯಗಳು, ಉಪನಯನ, ದೇವರಿಗೆ ಸೇವೆಗಳು ಆಗುತ್ತಿದ್ದ ಸಂದರ್ಭದಲ್ಲಿ ಹಿರಿಯರೇ ಮುಂದಾಳುತನ ವಹಿಸಿ ಕಾರ್ಯಕ್ರಮ ಸುಸೂತ್ರವಾಗಿ ಜರುಗುವಂತೆ ಜವಾಬ್ದಾರಿ ವಹಿಸಿಕೊಳ್ಳುತ್ತಿದ್ದರು. ಕಿರಿಯರು ಅವರ ಮಾತಿಗೆ ಬೆಲೆ ಕೊಡುತ್ತಿದ್ದರು. ಆದೇಶವನ್ನು ಪಾಲಿಸುತ್ತಿದ್ದರು.

* ಮನೆಯ ಯಜಮಾನಿಕೆ ಹಿರಿಯರೇ ವಹಿಸಿಕೊಳ್ಳುವುದು.

* ಭೂಮಿಯನ್ನು ಪಾಲುಮಾಡುವಾಗ ಹಿರಿಯರಿಗೆ ಸ್ವಲ್ಪ ಹೆಚ್ಚು ಭೂಮಿಯನ್ನು ಕೊಡುವ ಪದ್ಧತಿ ಇದೆ. ಹಿರಿಯರೇ ಹೆಚ್ಚಾಗಿ ಮನೆಯ ಜವಾಬ್ದಾರಿ ಮತ್ತು ಆಗುಹೋಗುಗಳನ್ನು ನೋಡಿಕೊಳ್ಳುತ್ತಿರುವುದರಿಂದ ಅವರಿಗೆ ಹೆಚ್ಚಿನ ಮಹತ್ವ ನೀಡುತ್ತಾರೆ.

* ಶುಭಕಾರ್ಯಗಳಲ್ಲಿ ಮಂತ್ರಾಕ್ಷತೆಯನ್ನು ಮನೆಯ ಹಿರಿಯರೇ ಪ್ರಾರಂಭದಲ್ಲಿ ಪಡೆದುಕೊಂಡು ಅನಂತರ ಉಳಿದವರಿಗೆ ಮಂತ್ರಾಕ್ಷತೆ ಹಾಕಿ ಆಶೀರ್ವಾದ ಮಾಡುತ್ತಾರೆ.

* ಕೌಟುಂಬಿಕ ಮತ್ತು ಧರ್ಮದ ಜಿಜ್ಞಾಸೆಯ ಸಂದರ್ಭಗಳಲ್ಲಿ ಹಿರಿಯರ ತೀರ್ಮಾನವೇ ಅಂತಿಮ.

* ಉಪನಯನ, ಮದುವೆ ಮುಂತಾದ ಶುಭಕಾರ್ಯಗಳಲ್ಲಿ ಹಿರಿಯರೇ ಮೊದಲು ಆಶೀರ್ವಾದ ಮಾಡಿ ಉಡುಗೂರೆಯನ್ನು ಕೊಡುವುದು.

* ಮನೆಯಲ್ಲಿ ಯಾರಾದರೂ ಸಾವನಪ್ಪಿದರೆ ಹಿರಿಯರೇ ಹೆಣಕ್ಕೆ ಗಂಗಾ ಜಲವನ್ನು ಮೊದಲು ಅರ್ಪಿಸುವುದು.

* ಯಜ್ಞಯಾಗ, ಹವನಗಳನ್ನು ಮಾಡುವಾಗ ಹಿರಿಯರೇ ಪೂಜೆ, ಕ್ರಿಯೆಗಳನ್ನೂ ಮಾಡುವುದು.

* ವಿವಾಹದ ಸಂದರ್ಭದಲ್ಲಿ ಹಿರಿಯರ ಸಮ್ಮುಖದಲ್ಲಿ ಕಾರ್ಯಕ್ರಮಗಳಲ್ಲಿ ಜರುಗುವುದು, ನಿಶ್ಚಿತಾರ್ಥದಿಂದ ಹಿಡಿದು ಮದುವೆಯವರೆಗೂ ಹಿರಿಯರ ಅಭಿಪ್ರಾಯದಂತೆ ಕಾರ್ಯಕ್ರಮಗಳು ನಡೆಯುವುದು.

5.2 ಶಿವಳ್ಳಿ ಬ್ರಾಹ್ಮಣ ಮಹಿಳೆಯ ಸ್ಥಿತಿಗತಿ

ಭಾರತ ದೇಶದ ಮಹಿಳೆಯರ ಸಂಪ್ರದಾಯ, ಸ್ಥಾನಮಾನಗಳು, ನಡೆನುಡಿಗಳು, ನಡಾವಳಿಗಳು ಎಲ್ಲಾ ಕಾಲದಲ್ಲಿಯೂ ಒಂದೇ ರೀತಿಯಾಗಿರಲಿಲ್ಲ. ಆಕೆಯು ವೈಭವದ ತುತ್ತುತುದಿಯಲ್ಲಿಯೂ ಇದ್ದಳು. ಅವಿದ್ಯೆಯ ಅಂಧಕಾರದಲ್ಲಿದ್ದು ಶೋಷಣೆ, ಅವಗಣನೆಗೆ ಒಳಗಾಗಿಯೂ ಇದ್ದಳು. ಧಾರ್ಮಿಕ, ಸಾಮಾಜಿಕ, ಚಾರಿತ್ರಿಕ ಕಾರಣದಿಂದಾಗಿ ಆಕೆಯ ಸ್ಥಾನಮಾನಗಳಲ್ಲಿ ಏರಿಳಿತಗಳಾಗಿದ್ದುದರಿಂದ ಆಕೆ ಎಲ್ಲಾ ಕಾಲಗಳಲ್ಲಿಯೂ ಒಂದೇ ರೀತಿಯಲ್ಲಿ ಇದ್ದಳು ಎನ್ನಲಾಗುವುದಿಲ್ಲ. ಈ ಮಾತು ಭಾರತೀಯ ಮಹಿಳೆಯರಿಗೆ ಅನ್ವಯಿಸುವಂತೆ ಕರಾವಳಿ ಕರ್ನಾಟಕದ ಶಿವಳ್ಳಿ-ಬ್ರಾಹ್ಮಣ ಮಹಿಳೆಯರಿಗೂ ಅನ್ವಯಿಸುತ್ತದೆ.

ವೇದ ಕಾಲದಲ್ಲಿ ಬ್ರಹ್ಮೋಪದೇಶ, ವಿದ್ಯಾಭ್ಯಾಸವನ್ನು ಪಡೆದ ಮಹಿಳೆ ಬ್ರಹ್ಮವಾದಿನಿಯಾಗಿಯೂ ಹೆಸರು ಗಳಿಸಿದ್ದಳು. ಲೋಪಾಮುದ್ರಾ, ವಿಶ್ವವಾರಾಸಿಕತಾ ಮುಂತಾದ ಇಪ್ಪತ್ತೇಳು ಮಂತ್ರ ದ್ರಷ್ಟಾರರಾದ ಮಹಿಳೆಯರು ವೇದಕಾಲದ ಋಷಿಗಳಷ್ಟೇ ಪ್ರಖ್ಯಾತರು. ಮೈತ್ರೇಯೀ, ಗಾರ್ಗಿ, ಆತ್ರೇಯೀ ಮುಂತಾದವರು ಉಪನಿಷತ್ಕಾಲದಲ್ಲಿ ಋಷಿಗಳೊಂದಿಗೆ ವಿದ್ವತ್ ಸಭೆಗಳಲ್ಲಿ ಚರ್ಚಿಸುತ್ತಿದ್ದರು. ಇಪ್ಪತ್ತೊಂದು ದಿವಸಗಳ ಸಮಯ ವಾದವಿವಾದ ನಡೆದಾಗ ನಿರ್ಣಾಯಕಗಳಾಗಿ ಅಧ್ಯಕ್ಷ ಸ್ಥಾನ ವಹಿಸಿದ್ದು ಮಂಡನಮಿತ್ರರ ವಿದುಷಿ ಪತ್ನಿ ಉಭಯಭಾರತಿ. ಇದರಿಂದ ವೇದಕಾಲದಿಂದ ಮಧ್ಯ ಕಾಲದವರೆಗೆ ಮಹಿಳೆ ಜ್ಞಾನಾರ್ಜನೆಯಲ್ಲಿ ಗಂಡಸಿಗೆ ಸರಿಸಾಟಿಯಾಗಿದ್ದಳು ಎಂಬ ವಿಚಾರ ಮನದಟ್ಟಾಗುತ್ತದೆ.

ಭಾರತದ ಇತಿಹಾಸದಲ್ಲಿ ಮಧ್ಯಕಾಲದಿಂದೀಚೆಗೆ ಮಹಿಳೆಯರ ಸ್ಥಾನಮಾನಗಳಲ್ಲಿ ಸಾಕಷ್ಟು ಬದಲಾವಣೆಗಳಾದವು. ಆಕೆ ಶೋಷಣೆಗೆ ಒಳಗಾಗಿ ಅಜ್ಞಾನ, ಅವಿದ್ಯೆ, ಬಾಲ್ಯವಿವಾಹ, ವಿಧವಾಮುಂಡನ, ಸತೀ ಪದ್ಧತಿ, ಮುಂತಾದ ಅನಿಷ್ಟ ಪದ್ಧತಿಗಳು ಜಾರಿಗೆ ಬಂದು ಆಕೆಯ ಸ್ಥಾನಮಾನ ಅಡುಗೆ ಮನೆಗೆ ಮತ್ತು ಮಕ್ಕಳ ಲಾಲನೆ ಪೋಷಣೆಗೆ ಸೀಮಿತವಾದಳು. ಕಟ್ಟುಪಾಡುಗಳ ನೆಪದಲ್ಲಿ ಎಲ್ಲಾ ಅವಕಾಶಗಳಿಂದ ವಂಚಿತಳಾದಳು.

ನಮ್ಮ ಪೂರ್ವಜರು ಬುದ್ಧಿವಂತೆಯಾದ ಹೆಣ್ಣುಮಕ್ಕಳನ್ನು ಪಡೆಯಲಿಕ್ಕೆ ಇಚ್ಚಿಸುತ್ತಿದ್ದರು. 'ಅಥಯ ಇಚ್ಚೇತ್ ದುಹಿತಾ ಮೇ ಪಂಡಿತಾ ಜಾಯೇತ, ಕನ್ಯೇಯಂ ಕುಲಜೀವಿತಂ, ನಿತ್ಯಂ ನಿವಸತೇ ಲಕ್ಷ್ಮೀ ಕನ್ಯಾಕಾಸು ಪ್ರತಿಷ್ಠಿತಾ. (ನನಗೆ ವಿದ್ಯಾವಂತೆಯಾಗುವ ಹುಡುಗಿ ಹುಟ್ಟಲಿ, ಕನ್ಯೆಯು ಕುಲದ ಉಸಿರು, ಕನ್ಯೆಯಿದ್ದಲ್ಲಿ ನಿತ್ಯವೂ ಲಕ್ಷ್ಮೀ ಸಾನಿಧ್ಯವಿರುತ್ತದೆ) ಮುಂತಾದ ನುಡಿಗಟ್ಟುಗಳು ಪ್ರಚಾರದಲ್ಲಿ ಬಂದಿವೆ. ಮನು, ಒಬ್ಬಳು ತಾಯಿ ನೂರು ತಂದೆಯರಿಗೆ ಸಮಾನಳು ಎಂದು ಹೇಳಿದ್ದಾನೆ. ಹೆಣ್ಣನ್ನು ಮಾತೆ, ದೇವಿ ಎಂದು ಗೌರವಿಸಿದ ಸಂಸ್ಕೃತಿ ನಮ್ಮದು. 'ಮಾತೃ ದೇವೋ ಭವ' ಎಂದು ತಾಯಿಯನ್ನು ಮೊದಲ ದೇವರನ್ನಾಗಿ ಮಾಡಿದ್ದೂ ನಮ್ಮ ಸಂಸ್ಕೃತಿ. ಗಂಡಸು ಪರಿಪೂರ್ಣತೆಯನ್ನು ಹೊಂದುವುದೂ ಹೆಂಡತಿಯಿಂದ ಎಂಬುದನ್ನು 'ವಾಗಾರ್ಥಾವಿವ ಸಂಪೃಕ್ತೌ' ಎಂಬ ಮಾತು ದೃಢೀಕರಿಸುತ್ತದೆ.

ಸಂಸ್ಕೃತಿ ಆಚರಣೆಗಳ ರಕ್ಷಕಳೂ ಪ್ರಚಾರಕಳೂ ಆಗಿ ಮೆರೆದ ಬ್ರಾಹ್ಮಣ ಮಹಿಳೆ ಸಂಪ್ರದಾಯವನ್ನು, ಪಾರಂಪರಿಕ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ಬೋಧಿಸುವ ಕಾರ್ಯದಲ್ಲಿಯೂ ಮಹತ್ತರವಾದ ಪಾತ್ರವಹಿಸಿದ್ದಳು. ಗಂಡನ ನಿತ್ಯ ನೈಮಿತ್ತಿಕ ಧರ್ಮಾಚರಣೆಗಳಲ್ಲಿ ಯಾಗ, ಯಜ್ಞ, ಪೂಜಾದಿಗಳ ಕಾರ್ಯಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ, ಅದಕ್ಕೆ ಬೇಕಾದ ವ್ಯವಸ್ಥೆಗಳನ್ನು ಮಾಡುವುದರಲ್ಲಿ, ಅತಿಥಿಸತ್ಕಾರಗಳಲ್ಲಿ, ಗಂಡ ಶಿಷ್ಯರಿಗೆ ವಿದ್ಯಾಭ್ಯಾಸ ಮಾಡಿಸುವಾಗ ಗುರು ಪತ್ನಿಯಾಗಿ ವಿದ್ಯಾರ್ಥಿಗಳ ಪಾಲನೆ ಪೋಷಣೆಗಳಲ್ಲಿ –ಹೀಗೆ ಜವಾಬ್ದಾರಿಗಳಲ್ಲಿ ಭಾಗವಹಿಸಿ ಸನಾತನ ಸಂಸ್ಕೃತಿಯ ಶ್ರೋತ ಅವಿಚ್ಛಿನ್ನವಾಗಿ ಹರಿದು ಬರುವಂತೆ ಶ್ರಮಿಸಿದಳು–ಬ್ರಾಹ್ಮಣ ಮಹಿಳೆ.

ಇಷ್ಟೆಲ್ಲ ಜವಾಬ್ದಾರಿಗಳನ್ನು ನಿರ್ವಹಿಸಿದ್ದ ಬ್ರಾಹ್ಮಣ ಮಹಿಳೆ ಮಧ್ಯಕಾಲದಿಂದೀಚೆಗೆ ಬಾಲ್ಯವಿವಾಹ ಮುಂತಾದ ಅನಿಷ್ಟ ಪದ್ಧತಿಗಳಿಗೆ ಗುರಿಯಾಗಿ ವಿದ್ಯಾಭ್ಯಾಸದಿಂದ ವಂಚಿತಳಾಗಿ ತನ್ನ ಹಿರಿಮೆ–ಗರಿಮೆಗಳನ್ನು ಕಳೆದುಕೊಂಡಳು. ಧರ್ಮಕಾರ್ಯಗಳಲ್ಲಿ ಪತಿಗೆ ಪರಿಚಾರಿಕೆಯಾಗಿ ಕೆಲಸ ಮಾಡುವುದು ಮತ್ತು ಕುಟುಂಬದ ಪಾಲನೆ ಪೋಷಣೆ ಮಾಡುವುದು ಮಾತ್ರವೇ ಅವಳ ಜವಾಬ್ದಾರಿ ಎನ್ನುವಷ್ಟರ ಮಟ್ಟಿಗೆ ಆಕೆಯ ಸ್ಥಾನಮಾನಗಳು ಕುಂದಿಹೋದವು.

ಇತ್ತೀಚಿನವರೆಗೆ ಬ್ರಾಹ್ಮಣರಲ್ಲಿ ಗಂಡಸಿಗೂ–ಹೆಂಗಸಿಗೂ ಮದುವೆ ಸಮಯದಲ್ಲಿ ವಯಸ್ಸಿನಲ್ಲಿ ಹೆಚ್ಚಿನ ಅಂತರ ಇರುವುದನ್ನು ಗಮನಿಸಬಹುದು. ಅಕಾಲದಲ್ಲಿ ಗಂಡ ಸಾವನ್ನು ಅಪ್ಪಿದಾಗ ಹುಡುಗಿಗೆ ಹೆಚ್ಚು ಪ್ರಾಯವಾಗಿರುವುದಿಲ್ಲ. ಆದರೆ ಎರಡನೆಯ ಮದುವೆಯಾಗುವ ಅವಕಾಶವಿರಲಿಲ್ಲ. ಜೀವನ ಪರಿಯಂತ ಆಕೆ ವಿಧವೆಯಾಗಿಯೇ ಇರಬೇಕು. ಅದು ಮಾತ್ರವಲ್ಲದೆ ಆಕೆ ಯಾವುದೇ ಶುಭ ಕಾರ್ಯದಲ್ಲಿ ಭಾಗವಹಿಸುವಂತಿಲ್ಲ. ಕಟ್ಟುಪಾಡು, ಸಂಪ್ರಾದಾಯದ ಹಿನ್ನಲೆಯಲ್ಲಿ ಆಕೆಯನ್ನು ಕೀಳಾಗಿ ಕಾಣಲಾಗುತ್ತಿತ್ತು. ತಲೆ ಕೂದಲನ್ನು ತೆಗಿಸಿ, ಕುಂಕುಮ ಬೊಟ್ಟನ್ನು ಅಳಿಸಿ, ಕಾವಿ ಅಥವಾ ಕೆಂಪು ಬಟ್ಟೆಯನ್ನು ಉಡಿಸಿ ಆಕೆಗೆ ಮುತ್ತೈದೆಯರಿಗೆ ಇರುವ ಸ್ವಾತಂತ್ರ್ಯವನ್ನು ಕೊಡುತ್ತಿರಲ್ಲಿಲ್ಲ. ಆಕೆ ಮಡಿಯಲ್ಲಿ ಇದ್ದು ಕೊಂಡು, ದೇವರ ನಾಮ ಸ್ಮರಣೆ ಮಾಡುತ್ತಾ, ಒಂದರ್ಥದಲ್ಲಿ ವಾನಪ್ರಸ್ಥ ಜೀವನವನ್ನು ನಡೆಸುವ ಸ್ಥಿತಿ ಇತ್ತು. ಕುಟುಂಬದ ಗೌರವ ಮತ್ತು ಆಕೆಯ ಶೀಲವನ್ನು ಕಾಪಾಡಿಕೊಂಡು ಬರಬೇಕಿತ್ತು ಅಲ್ಲದೆ ಪರಪುರುಷರು ಆಕೆಯನ್ನು ಕಂಡು ಮೋಹಿತರಾಗಬಾರದು ಎನ್ನುವುದಕ್ಕೊ ಏನೋ ಆಕೆಯನ್ನು ವಿರೂಪಗೊಳಿಸಿರುವುದು ಕಂಡು ಬರುತ್ತದೆ. ಆದರೆ ಹೆಂಡತಿ ಸತ್ತರೆ ಗಂಡ ಜೀವನ ಪರ್ಯಂತ ವಿಧುರನಾಗಿ ಇರುವುದು ಕಡಿಮೆ. ಇನ್ನೊಂದು ಮದುವೆಯಾಗುತ್ತಾನೆ. ಅಂತೆಯೇ ಮೊದಲ ಪತ್ನಿಯಲ್ಲಿ ಗಂಡು ಸಂತತಿ ಇಲ್ಲದಿದ್ದರೆ ಇನ್ನೊಂದು ಮದುವೆಯಾಗುವ ಸ್ಥಿತಿಯು ಇತ್ತು. ಅದಕ್ಕೆ ಕೊಡುವ ಕಾರಣ. ಗಂಡು ಸಂತತಿ ವಂಶೋದ್ಧಾರಕ. ತಾನು ಸತ್ತ ನಂತರ ಪಿಂಡ ಇಡಲು ಮಗ ಬೇಕೆಂದು. ಬೇರೆಬೇರೆ ಕಾರಣಕ್ಕಾಗಿ ಗಂಡಸರು ಎಷ್ಟೂ ಬೇಕಾದರೂ ಮದುವೆಯಾಗಬಹುದಿತ್ತು. ವಿಧವಾ ವಿವಾಹ ಪದ್ಧತಿ ಹಿಂದಿನ ಕಾಲದಲ್ಲಿ ಇರಲಿಲ್ಲ. ಆಕೆ ಸಮಾಜದಲ್ಲಿ ತಿರಸ್ಕಾರಕ್ಕೆ ಒಳಗಾಗುತ್ತಿದ್ದಳು. ವಿಧವೆಯನ್ನು ಯಾರದರೂ ಮದುವೆಯಾದರೆ ಅದು ಅಕ್ಷಮ್ಯ ಅಪರಾಧವಾಗುತ್ತಿತ್ತು. ಆತನಿಗೂ ಸಮಾಜದಲ್ಲಿ ಗೌರವ ಅಷ್ಟಕಷ್ಟೇ.

ಬ್ರಿಟೀಷರ ಆಗಮನದ ಅನಂತರ ಶಿಕ್ಷಣವನ್ನು ಪಡೆದ ಕಾರಣ ಬಾಲ್ಯ ವಿವಾಹಕ್ಕೆ ವಿರೋಧಿಸಿದರು. ವಿಧವೆಯವರನ್ನು ಮದುವೆಯಾಗುವ ಮನಸ್ಸನ್ನು ತೋರಿದರು. ಪ್ರಾರಂಭದಲ್ಲಿ ಸ್ವಲ್ಪ ವಿರೋಧವಿದ್ದರೂ ಅನಂತರದ ದಿನಗಳಲ್ಲಿ ಸಮಾಜದ ಕುಟುಂಬದ ಹಿರಿಯರು ಒಪ್ಪಿಕೊಂಡರು. ಆಕಾಲದಲ್ಲಿ 'ಆರ್ಯಸಮಾಜ'ದಪ್ರಭಾವವಿತ್ತು. ಹೊಸ ಆಲೋಚನೆ ಚಿಂತನೆಗಳಿಗೆ ಜನರು ಮನಸ್ಸನ್ನು ತೆರೆದು ಕೊಂಡರು. ವಿಧುರ–ವಿಧವೆಯನ್ನು ಅಂತೆಯೇ ವಿಧವೆಯಾದವಳು ಇನ್ನೊಬ್ಬ ಗಂಡಸನ್ನು ಮದುವೆಯಾಗುವ ಪರಿ ಈಗೀಗ ಹೆಚ್ಚಾಗಿದೆ. ತನ್ನ ಬಾಳಿನ ಭದ್ರತೆಗೆ, ಆಶ್ರಯಕ್ಕೆ ಮುಂತಾದ ಹಲವು ವಿಚಾರಗಳ ಹಿನ್ನಲೆಯಲ್ಲಿ ಗಂಡ ತೀರಿದ ನಂತರ ಚಿಕ್ಕ ಮಕ್ಕಳಿದ್ದರೂ ಇಬ್ಬರ ಒಪ್ಪಿಗೆಯ ಮೇರೆಗೆ ಮದುವೆಯಾಗುವುದು ಈಗೀಗ ಸರ್ವೆ ಸಾಮಾನ್ಯವಾಗಿದೆ. ಗಂಡಸರ ಕೆಟ್ಟ ದೃಷ್ಟಿ ಬೀಳದಿರಲಿ ಎಂಬ ಕಾರಣದಿಂದ ಉದ್ಯೋಗಸ್ಥ ಮಹಿಳೆ ವಿಧವೆಯಾದರೆ ಮಾಂಗಲ್ಯ ತೆಗೆಯುವ ಕ್ರಮ ಈಗ ಚಾಲ್ತಿಯಲಿಲ್ಲ. ಕುಂಕುಮ ಮತ್ತು ಜಡೆಗೆ ಹೂ ಮುಡಿಯುವ ಪದ್ಧತಿಯೂ ಇದೆ. ಹಿಂದೆ ವಿಧವೆಯಾದವರು ಹಣೆಗೆ ಕಪ್ಪು ಬೊಟ್ಟು ಇಟ್ಟು ಕೊಳ್ಳುವುದು ಕಡ್ಡಾಯವಾಗಿತ್ತು. ಈಗ ಅದು ಇಲ್ಲ.

ಆಧುನಿಕ ಕಾಲದಲ್ಲಿ ವಿದ್ಯಾಭ್ಯಾಸ ಹಾಗೂ ಸಾರ್ವಜನಿಕ ಕ್ಷೇತ್ರದಲ್ಲಿ ಆಕೆಯ ಸಾಧನೆಗಳಿಂದ ಗೌರವ ಘನತೆಗಳ ಮೆಟ್ಟಿಲುಗಳನ್ನು ಏರುತ್ತಿದ್ದಾಳೆ. ಸಾಧನೆ ಮಾಡುತ್ತಿದ್ದಾರೆ. ಆರ್ಥಿಕವಾಗಿ ಕುಟುಂಬಕ್ಕೆ ಸಹಕಾರಿಯಾಗುತ್ತಿದ್ದಾಳೆ. ಆದರೆ ಪ್ರಾಚೀನಕಾಲದ ಪರಂಪರಾಗತ ಮೌಲ್ಯಗಳ ಕುಸಿತದಿಂದಾಗಿ ಸನಾತನತೆಯ ಕೊಂಡಿಗಳನ್ನು ಕಳಚಿಕೊಳ್ಳುತ್ತಿರುವುದರಿಂದ ಆಕೆ ಅಲ್ಲಿಯೂ ಇಲ್ಲ ಇಲ್ಲಿಯೂ ಇಲ್ಲದ ಸ್ಥಿತಿ ಆಗಿದೆ. ಅನೇಕ ಒತ್ತಡ, ಉದ್ವೇಗ, ಹತಾಶೆಗಳಿಗೆ ಗುರಿಯಾಗಿದ್ದಾಳೆ. ಘಟ್ಟದ ಮೇಲಿನ ಇತರ ಪ್ರದೇಶಗಳ ಬ್ರಾಹ್ಮಣ ಮಹಿಳೆಯಂತೆ ನಿತ್ಯ ಪೂಜಾಕಾರ್ಯಗಳನ್ನು ಮಾಡುತ್ತಿಲ್ಲ. ಪರ್ವ ದಿನಗಳಲ್ಲಿಯೂ ವ್ರತಗಳನ್ನು ಆಚರಿಸುವ ಮಹಿಳೆಯರ ಸಂಖ್ಯೆ ಕಡಿಮೆಯಾಗುತ್ತಿದೆ. ಆದರೆ ನಾವು ಗಮನಿಸಬೇಕಾದ ಅಂಶ ಶಿವಳ್ಳಿ ಬ್ರಾಹ್ಮಣರಲ್ಲಿ ಹೆಚ್ಚಿನವರು ವೈದಿಕ ಬ್ರಾಹ್ಮಣರು ಯಜನ–ಯಾಜನ, ಅಧ್ಯಯನ–ಅಧ್ಯಾಪನ, ದಾನ–ಪರಿಗ್ರಹ ಎಂಬ ಆರು ವಿಧದ ಆಚರಣೆಗಳ ಅಧಿಕಾರವುಳ್ಳವರು. ಇವರು ಸಾಂಪ್ರದಾಯಕವಾಗಿ ಹೆಚ್ಚಿನವರು ಹೊರಗೆ ಹೋಗಿ ಕೆಲಸ ಮಾಡುವವರಲ್ಲ. ವೈದಿಕ ಅಗ್ನಿ ಹೋತ್ರಾದಿ ವಿಧಿಗಳನ್ನು ಯಜ್ಞ ಯಾಗಾದಿ ಕಾರ್ಯಗಳನ್ನೂ ಪತಿ ಪತ್ನಿ ಇಬ್ಬರೂ ಒಟ್ಟಿಗೆ ಕುಳಿತು ಕೊಂಡು ಮಾಡುವುದರಿಂದ ಗೃಹಿಣಿ ಪ್ರತ್ಯೇಕವಾಗಿ ಆಚರಣೆಗಳನ್ನು ಮಾಡುವ ಸಂಪ್ರದಾಯ ದಕ್ಷಿಣ ಕನ್ನಡದ ಶಿವಳ್ಳಿ ಬ್ರಾಹ್ಮಣರಲ್ಲಿ ಬೆಳೆದು ಬಂದಿಲ್ಲ. ಇತರ ಕಡೆಗಳಲ್ಲಿ ವೈದಿಕ ಬ್ರಾಹ್ಮಣರ ಸಂಖ್ಯೆ ತುಂಬ ಕಡಿಮೆಯಿದ್ದು ಲೌಕಿಕ ಬ್ರಾಹ್ಮಣರ ಸಂಖ್ಯೆ ಅಧಿಕವಾದುದರಿಂದ, ಸಾರ್ವಜನಿಕ ಸೇವಾಕರ್ತವ್ಯಗಳ ಕಡೆಗೆ ಒಲವು ಜಾಸ್ತಿಯಿರುವುದರಿಂದ, ಅವರಿಗೆ ನಿತ್ಯ ನೈಮಿತ್ತಿಕ ಆಚರಣೆಗಳ ಕಡೆಗೆ ಗಮನ ಕೊಡಲಿಕ್ಕೆ ಸಾಧ್ಯವಿಲ್ಲದರಿಂದಲೂ ದೈನಂದಿನ ಹಾಗೂ ಪರ್ವಕಾಲಗಳ ಪೂಜಾಕಾರ್ಯಗಳನ್ನು ಮಾಡುವ ಜವಾಬ್ದಾರಿ ಹೆಣ್ಣುಮಕ್ಕಳ ಪಾಲಿಗೆ ಬಂದಿರಬಹುದು. ಆದರೂ ಹಿಂದಿನ ಕಾಲದಲ್ಲಿದ್ದಷ್ಟು ಶ್ರದ್ಧೆ, ಹಾಡುಗಳ ಪಠಣ, ವ್ರತಗಳು ಶಿವಳ್ಳಿ ಬ್ರಾಹ್ಮಣರಲ್ಲಿ ಕಡಿಮೆಯಾಗುತ್ತಿರುವುದನ್ನು ಗಮನಿಸಬಹುದು.

ಮಾಧ್ವ ಸಂಪ್ರದಾಯದ ಶಿವಳ್ಳಿ ಬ್ರಾಹ್ಮಣ ಮಹಿಳೆಯ ಅತ್ಯಂತ ಶ್ರೇಷ್ಠ ಆಚರಣೆಯೆಂದರೆ ದಿನನಿತ್ಯ 'ಲಕ್ಷ್ಮೀಶೋಭಾನೆ' ಪದಹಾಡುವುದು. ಮಹಿಳೆಯರಿಗೆ ಇದು ವೇದದಷ್ಟೇ ಪವಿತ್ರ. ಇದನ್ನು 'ನಾರೀ ವೇದಾಂತ' ಎಂದೂ ಕರೆಯುತ್ತಾರೆ. ಹಿಂದಿನ ಕಾಲದಲ್ಲಿ ಹೆಚ್ಚಿನ ಹೆಂಗಸರು ಹಾಡುತ್ತಿದ್ದರು. ಆದರೆ ಈಗ ಹಾಡುವ ಪದ್ಧತಿ ಮರೆಯಾಗುತ್ತಿದೆ. ಈಗ ಮದುವೆ ಮಂಟಪಗಳಲ್ಲಿ ಕರಿಮಣಿ ಕಟ್ಟುವಾಗ ಶೋಭಾನೆ ಸೊಲ್ಲು ಕೇಳುವುದು ವಿರಳ. ಉಡುಪಿ ಕಡೆ ಸ್ವಲ್ಪಮಟ್ಟಿಗೆ ಶೋಭಾನೆ ಹಾಡುವ ಪದ್ಧತಿ ಉಳಿದುಕೊಂಡಿದೆ. ಮಠಗಳಲ್ಲಿ, ದೇವಾಲಯಗಳಲ್ಲಿ, ಮಹಿಳಾ ಮಂಡಲಿಗಳಲ್ಲಿ ಹಾಡುವ ಪದ್ಧತಿ ಇರುವುದರಿಂದ ವ್ಯಷ್ಟಿಯಿಂದ ಸಮಷ್ಟಿ ಕಡೆಗೆ ಸಾಗುತ್ತಿದೆ.

ವರ್ತಮಾನಕಾಲದಲ್ಲಿ ಮಹಿಳೆ ವಿದ್ಯಾಭ್ಯಾಸ ಪಡೆಯುತ್ತಾ ಹೋದಂತೆ ಪರಂಪರಾಗತ ಸಂಸ್ಕಾರ, ಪದ್ಧತಿ, ಪರಂಪರೆಯನ್ನು ಬಿಡುತ್ತಾ ಬರುತ್ತಿರುವುದನ್ನು ಕಾಣುತ್ತೇವೆ. ಮಹಿಳೆ ಹಿಂದಿನಕಾಲದಂತೆ ಮನೆಯ ಒಳಗೇ ಸೀಮಿತವಾಗಿಲ್ಲ. ಪ್ರಪಂಚದ ಜ್ಞಾನ ಅವಳಿಗಿದೆ. ಹೆಚ್ಚಿನ ಕ್ಷೇತ್ರದಲ್ಲಿ ಆಕೆ ಪ್ರಗತಿಯನ್ನು ಕಾಣುತ್ತಿದ್ದಾಳೆ. ಗಂಡಿಗೆ ಸರಿಸಾಟಿಯಾಗಿ ನಿಲ್ಲುವ ಸಾಮರ್ಥ್ಯವನ್ನು ಹೊಂದಿದ್ದಾಳೆ. ಶೈಕ್ಷಣಿಕವಾಗಿ ಮಹಿಳೆ ಮುಂದುವರಿದಿದ್ದಾಳೆ. ಆದರೆ ಸಾಂಪ್ರದಾಯಿಕ ಆಚರಣೆಯಲ್ಲಿ ಚ್ಯುತಿ ಆಗುತ್ತಿರುವುದನ್ನು ವರ್ತಮಾನಕಾಲದಲ್ಲಿ ಕಾಣಬಹುದು.

ಬ್ರಾಹ್ಮಣ ವರ್ಗದಲ್ಲಿ ಪುರುಷರಿಗಿರುವಷ್ಟು ಪ್ರಾಧ್ಯಾನ್ಯತೆ ಸ್ತ್ರೀಯರಿಗಿಲ್ಲ. ಗಂಡು ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಿಸುವಷ್ಟು ಹೆಣ್ಣು ಮಕ್ಕಳಿಗೆ ಹಿಂದಿನ ಕಾಲದಲ್ಲಿ ಕೊಡಿಸುತ್ತಿರಲಿಲ್ಲ. ಎಷ್ಟಾದರೂ ಹೆಣ್ಣು ಮದುವೆಯಾದ ಅನಂತರ ಗಂಡನ ಮನೆಗೆ ಹೋಗುವವಳು ಎಂಬ ಒಂದು ಅಭಿಪ್ರಾಯವಾದರೆ, ಹೆಣ್ಣು ಮಕ್ಕಳು ಹಿಂದೆ ಮನೆಯಿಂದ ಹೊರಗೆ ಹೋಗಿ ದುಡಿಯುವ ಪದ್ಧತಿ ಇರಲಿಲ್ಲ. ಮನೆಯಲ್ಲಿ ಹಿರಿಯರ, ಮಕ್ಕಳ ಪೋಷಣೆ, ಪಾಲನೆ ಮಾಡುವುದು ಅವಳ ಕರ್ತವ್ಯವಾಗಿತ್ತು. ತಂದೆ ತಾಯಿಗಳ, ಗಂಡನ ಆಸರೆಯಲ್ಲಿಯೇ ಬದುಕುವ ಸ್ಥಿತಿ ಅವಳದ್ದಾಗಿತ್ತು. ಪುರುಷ ಪ್ರಧಾನವಾದ ಸಮಾಜ ಬ್ರಾಹ್ಮಣರದ್ದು ಆಗಿರುವುದರಿಂದ ಹೆಣ್ಣು ಮಕ್ಕಳಿಗೆ ಹೆಚ್ಚಿನ ಸ್ವಾತಂತ್ರ್ಯಕೊಡುತ್ತಿರಲಿಲ್ಲ. ಒಂದು ವೇಳೆ ಸ್ವಾತಂತ್ರ್ಯ, ಶಿಕ್ಷಣ ಕೊಟ್ಟರೂ ಎಲ್ಲಿ ಆಕೆ ದುರುಪಯೋಗ ಮಾಡಿಕೊಳ್ಳುತ್ತಾಳೋ ಎಂಬ ಹೆದರಿಕೆ ಗಂಡಸರಿಗಿತ್ತು.

ಶಿವಳ್ಳಿಯವರಲ್ಲಿ ಜಾತಕಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಡುವುದರಿಂದ ಹೆಣ್ಣುಮಕ್ಕಳು ಪ್ರಾಯಕ್ಕೆ ಬಂದರೂ ಜಾತಕದ ಹೊಂದಾಣಿಕೆಯಲ್ಲೇ ಹೆಚ್ಚಿನ ಕಾಲ ಕಳೆಯುತ್ತಿದ್ದರು. ಜಾತಕ ಹೊಂದಾಣಿಕೆಯಾಗಿ ಹುಡುಗನನ್ನು ಬೇರೆ ಬೇರೆ ಕಾರಣಗಳಿಂದ ಮದುವೆಯಾಗಲು ಮನಸ್ಸಿಲ್ಲದಿದ್ದರೂ ಅನಿವಾರ್ಯವಾಗಿ ಮದುವೆಗೆ ಒಪ್ಪಬೇಕಾಗುತ್ತಿತ್ತು. ಹಿಂದೆ ಹಿರಿಯರ ಅಭಿಪ್ರಾಯವೇ ಅಂತಿಮವಾಗಿತ್ತು. ಈಗೀಗ ಹೆಣ್ಣುಮಕ್ಕಳೂ ವಿದ್ಯಾವಂತರಾಗುತ್ತಿರುವುದರಿಂದ ತಮಗೆ ಹೊಂದಿಕೆಯಾಗುವ ಹುಡುಗನನ್ನು ಆಯ್ಕೆ ಮಾಡುವ ಮನಸ್ಸನ್ನು ಹೊಂದುತ್ತಾರೆ. ಹೆಚ್ಚಿನ ಸಂದರ್ಭದಲ್ಲಿ ಜಾತಿಯ ಒಳಗೇ ಆಯ್ಕೆ ಮಾಡುತ್ತಾರೆ. ಕೆಲವು ಸಾರಿ ವಿದ್ಯಾವಂತ, ಉದ್ಯೋಗಸ್ಥ, ಮಹಿಳೆಯರು ತಮಗೆ ಒಪ್ಪಿದವರನ್ನು ಮೆಚ್ಚಿ ಮದುವೆಯಾಗುವ ಕ್ರಮವೂ ಇದೆ. ಒಂದೇ ಸಂಸ್ಥೆಯಲ್ಲಿ ದುಡಿಯುವವರನ್ನು, ಉದ್ಯೋಗಸ್ಥರನ್ನು, ಒಂದೇ ವೃತ್ತಿಯವರನ್ನು, ಸಮಾನ

ಮನೋಧರ್ಮದವರನ್ನು ಮದುವೆಯಾಗುವ ಕ್ರಮ ಪೇಟೆಪಟ್ಟಣಗಳಲ್ಲಿ ಇಂತವರ ಸಂಖ್ಯೆ ಹೆಚ್ಚಿದೆ. ಇದರಿಂದಾಗಿ ಕೆಲವು ಸಾರಿ ತಾವು ಆಯ್ಕೆಮಾಡಿಕೊಂಡಿರುವ ಹುಡುಗ ಅಥವಾ ಹುಡುಗಿ ಅನ್ಯ ಜಾತಿಯವಳು ಆಗಿರಬಹುದು. ಅಂತರ್ಜಾತಿಯ ಮದುವೆಯನ್ನು ಹಿರಿಯರು ಅಷ್ಟಾಗಿ ಒಪ್ಪುತ್ತಿಲ್ಲ. ಆದರೂ ಇಂತಹ ಮದುವೆಗಳು ಅಲ್ಲಲ್ಲಿ ಆಗುತ್ತಿವೆ.

ಈಗ ಗಂಡು ಮಕ್ಕಳಿಗೂ ಹೆಣ್ಣು ಮಕ್ಕಳಿಗೂ ಪಿತ್ರಾರ್ಜಿತ ಭೂಮಿಯಲ್ಲಿ ಸಮಾನ ಹಕ್ಕಿನ ಕಾನೂನು ಬಂದ ಅನಂತರದಲ್ಲಿ ಇಬ್ಬರೂ ಸಮಾನರು. ಗಂಡಿನಷ್ಟೇ ಹೆಣ್ಣಿಗೂ ಭೂಮಿಯಲ್ಲಿ ಹಕ್ಕಿದೆ. ಇದರಿಂದಾಗಿ ಗಂಡು-ಹೆಣ್ಣನ್ನು ಸಮಾನವಾಗಿ ನೋಡುವ ಪರಿಪಾಠ ಬೆಳದುಕೊಂಡು ಬಂದಿದೆ. ಇಬ್ಬರಿಗೂ ಒಳ್ಳೆಯ ಶಿಕ್ಷಣವನ್ನು ಕೊಡಿಸುವುದು, ಒಂದೇ ರೀತಿಯಲ್ಲಿ ಇಬ್ಬರನ್ನೂ ಪೋಷಿಸುವುದನ್ನು ಕಾಣುತ್ತೇವೆ. ಇದರಿಂದ ಸ್ತ್ರೀಯರಲ್ಲೂ ಆತ್ಮ ಸ್ಥೈರ್ಯ ಬೆಳೆದಿದೆ. ತಾನೂ ಪುರುಷನಿಗೆ ಸಮಾನ ಎಂಬ ಮನೋಭಾವ ಬೆಳೆದಿದೆ. ಹಿಂದೆ ಶಿವಳ್ಳಿಯವರಲ್ಲಿ 'ಕೊಟ್ಟ ಹುಡುಗಿ ಕುಲದಿಂದ ಹೊರಕ್ಕೆ' ಎಂಬ ಮನೋಭಾವವಿತ್ತು. ಆಕೆಗೆ ಭೂಮಿಯಲ್ಲಿ ಯಾವ ಪಾಲೂ ಇರಲಿಲ್ಲ. ಈಗ ಹಾಗಲ್ಲ. ಆಕೆಗೂ ಸರಿ ಪಾಲು ಇದೆ. ಭೂಮಿಯನ್ನೇ ತೆಗೆದು ಕೊಳ್ಳದಿದ್ದರೂ ಅದಕ್ಕೆ ಸರಿಸಮಾನವಾದ ಮೌಲ್ಯವನ್ನು ತೆಗೆದುಕೊಳ್ಳುತ್ತಾರೆ. ತಂದೆ-ತಾಯಿಯ ಮನೆಯಲ್ಲಿ ಆಕೆಗೂ ಹಕ್ಕು ಇರುವುದನ್ನು ಕಾಣುತ್ತೇವೆ. ಅಂತೆಯೇ ಅಣ್ಣ ತಮ್ಮಂದಿರು ಹಿಂದಿಗಿಂತ ಹೆಚ್ಚು ಆತ್ಮೀಯತೆಯಿಂದ ಆಕೆಯನ್ನು ನೋಡಿಕೊಳ್ಳುತ್ತಾರೆ. ಕೆಲವು ಸಾರಿ ಸಮಾನ ಹಕ್ಕಿನಿಂದಾಗಿ ಗಂಡು ಮಕ್ಕಳೊಂದಿಗೆ ಮನಸ್ತಾಪವೂ ಆಗುವುದೂ ಇದೆ. ಒಟ್ಟಾಗಿ ಹಿಂದಿನ ಕಾಲಕ್ಕಿಂತ ಹೆಚ್ಚಾಗಿ ಸ್ತ್ರೀಗೆ ಈಗ ಪ್ರಾಧಾನ್ಯತೆ ಕೊಡುವುದನ್ನು ಕಾಣಬಹುದು. ಅಂತೆಯೇ ಶಿವಳ್ಳಿ ಬ್ರಾಹ್ಮಣ ಸ್ತ್ರೀಯೂ ಎಲ್ಲಾ ಕ್ಷೇತ್ರದಲ್ಲೂ ಸಾಧನೆ ಮಾಡುವುದನ್ನು ಕಾಣುತ್ತೇವೆ. ಗಂಡು ಮಕ್ಕಳಿಗೆ ಸರಿಸಮಾನಳಾಗಿ ನಿಲ್ಲುವ ಸಾಮರ್ಥ್ಯವನ್ನು ಹೊಂದಿದ್ದಾಳೆ.

5.3 ಸಾಮಾಜಿಕ ಸ್ಥಾನಮಾನಗಳು

ತುಳುನಾಡಿನಲ್ಲಿ ಬ್ರಾಹ್ಮಣರಿಗೆ ವಿಶೇಷವಾದ ಸ್ಥಾನಮಾನಗಳಿವೆ, ಮರ್ಯಾದೆಯಿದೆ. ಅವರ ಆಚಾರ ವಿಚಾರ, ವಿದ್ಯೆ, ಧಾರ್ಮಿಕ ಕಾರ್ಯಗಳಲ್ಲಿ ಶ್ರದ್ಧೆಯಿಂದ ಭಾಗವಹಿಸುವಿಕೆ ಇಲ್ಲಿಯ ಜನರೊಂದಿಗೆ ಅನ್ಯೋನ್ಯತೆಯಿಂದ ಬಾಳುವ ಕ್ರಮದಿಂದ, ಮರ್ಯಾದೆ ಗೌರವಗಳು ಇವೆ. ಅದರಲ್ಲಿ ಶಿವಳ್ಳಿ ಬ್ರಾಹ್ಮಣರು ತುಳುನಾಡಿನ ಜನರೊಂದಿಗೆ ಹೆಚ್ಚಿನ ಸಂಪರ್ಕವನ್ನು ಹೊಂದಿರುವುದನ್ನು ಕಾಣಬಹುದು. ವಿಶೇಷವಾಗಿ ಧಾರ್ಮಿಕ ಕ್ಷೇತ್ರದಲ್ಲಿ. ಹಲವು ಶತಮಾನಗಳಿಂದ ದಕ್ಷಿಣಕನ್ನಡದ ಹೆಚ್ಚಿನ ದೇವಸ್ಥಾನಗಳಲ್ಲಿ ಅರ್ಚಕರಾಗಿರುವವರು ಶಿವಳ್ಳಿಬ್ರಾಹ್ಮಣರು. ಅದಕ್ಕೆ ಪಂಚಾಯತನ ಪೂಜೆಯನ್ನು ಹಿಂದಿನಿಂದಲೂ ಶಿವಳ್ಳಿ ಬ್ರಾಹ್ಮಣ ಮಾಡಿಕೊಂಡು ಬಂದಿರುವ ಕಾರಣವಾಗಿರಬಹುದು. ಉಡುಪಿಯ ಶಿವಳ್ಳಿಗ್ರಾಮದಿಂದ ತುಳುನಾಡಿನ ಎಲ್ಲಾ ಕಡೆಯ ದೇವಾಸ್ಥಾನದಲ್ಲಿ ಅರ್ಚಕ ವೃತ್ತಿಗೆ ಇವರು ನೇಮಕಗೊಂಡು, ರಾಜರಿಂದಲೂ ಸಹಾಯ, ರಕ್ಷಣೆ, ಉಂಬಳಿಯನ್ನು ಪಡೆದು ಜನರಲ್ಲಿ ಧಾರ್ಮಿಕ ಶ್ರದ್ಧೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಅಂತೆಯೇ ಇಲ್ಲಿಯ ತುಳು ಜನರ ವಿಶ್ವಾಸ ಗಳಿಸಿ ಅವರೊಟ್ಟಿಗೆ ತಾವು ಒಂದಾಗಿ ಜನರ

ಗೌರವವನ್ನು ಗಳಿಸಿಕೊಂಡಿದ್ದಾರೆ. ದೇವರಪೂಜೆ, ದೈವದ ಆರಾಧನೆ, ತಂಬಿಲ, ಗಣಹೋಮ, ಸತ್ಯನಾರಾಯಣ ಪೂಜೆ ಮುಂತಾದ ಧಾರ್ಮಿಕ ಆಚರಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅಂತೆಯೇ ತುಳು ಜನರ ಧಾರ್ಮಿಕ ಆಚರಣೆಯಲ್ಲಿ ತಾವು ಪೂಜಾ ಕೈಂಕರ್ಯವನ್ನು ಮಾಡುತ್ತಾ ಬಂದಿದ್ದಾರೆ. ಅವರ ವಿಶ್ವಾಸವನ್ನು ಗಳಿಸಿದ್ದಾರೆ. ಅದರೊಂದಿಗೆ ಕೆಲವರು ಜ್ಯೋತಿಷ್ಯ ಹೇಳುವ ಕಾರಣ ಮತ್ತು ತುಳು ಜನರೊಂದಿಗೆ ಬೆರೆತು ಹೋಗಿದ್ದಾರೆ. ಅವರ ಮಾತಿನ ಮೇಲೆ ವಿಶ್ವಾಸ ತುಳು ಜನರು ಇಟ್ಟಿದ್ದಾರೆ.

ದೇವಸ್ಥಾನದ ಪೂಜೆಗೆ ಬಂದವರು ಉಂಬಳಿಯನ್ನು ಪಡೆದ ಭೂಮಿಯನ್ನು ಇಲ್ಲಿಯ ತುಳು ಜನರಿಗೆ ಗೇಣಿಗೆ ಕೊಟ್ಟು ತಮ್ಮ ಜೀವನವನ್ನು ನಿರ್ವಹಿಸಿಕೊಳ್ಳುತ್ತಿದ್ದರು. ಈ ಕಾರಣದಿಂದಲೂ ಇಲ್ಲಿಯವರೊಂದಿಗೆ ಸಾಮರಸ್ಯದ ಜೀವನವನ್ನು ನಡೆಸಿಕೊಂಡು ಬಂದರು. ಧಾರ್ಮಿಕ ಕಾರ್ಯಗಳನ್ನು ಇವರೇ ಮಾಡುತ್ತಿದ್ದ ಕಾರಣ ಜನರು ಇವರ ಮೇಲೆ ವಿಶ್ವಾಸ ಇಟ್ಟುಕೊಂಡಿದ್ದರು.

ತೋಟದ ಮತ್ತು ಗದ್ದೆಯ ಕೆಲಸಕ್ಕೆ ತುಳುವರು ಬ್ರಾಹ್ಮಣರಲ್ಲಿ ದುಡಿಯುವುದು ಅನಿವಾರ್ಯವಾಗಿತ್ತು. ಕಾರಣ ನೇಗಿಲು ಹಿಡಿಯುವುದು ಶಿವಳ್ಳಿ ಬ್ರಾಹ್ಮಣರಲ್ಲಿ ನಿಷಿದ್ಧವಾಗಿತ್ತು. ಪ್ರಾಚೀನ ಕಾಲದಿಂದಲೂ ನಾಗಾರಾಧನೆ, ಭೂತಾರಾಧನೆ ತುಳುವರಲ್ಲಿ ಇದ್ದ ಕಾರಣ ಮಂತ್ರಯುಕ್ತವಾಗಿ ವೈದಿಕ ಕ್ರಮದಲ್ಲಿ ಶಿವಳ್ಳಿ ಬ್ರಾಹ್ಮಣ ಅರ್ಚನೆ ಮಾಡಿಕೊಂಡು ಬಂದುದರಿಂದ ಪ್ರೀತಿಗೆ ಪಾತ್ರರಾದರು. ದೇವಸ್ಥಾನದಲ್ಲಿ ಪೂಜೆ ಮಾಡುವ ಶಿವಳ್ಳಿಬ್ರಾಹ್ಮಣರೇ ತುಳು ಜನರ ಮನೆಯಲ್ಲೂ ಪೂಜೆ ಮಾಡಿದರೆ ಒಳ್ಳೆಯದೆಂಬ ನಂಬಿಕೆ ಇದ್ದುದರಿಂದಲೂ ಗೌರವಕ್ಕೆ, ಆದರ ಆತಿಥ್ಯಕ್ಕೆ ಪಾತ್ರರಾದರು. ಧಾರ್ಮಿಕ ಕ್ಷೇತ್ರದ ಯಾವುದೇ ಕಾರ್ಯಕ್ಕೆ ಶಿವಳ್ಳಿ ಬ್ರಾಹ್ಮಣರ ಮುಂದಾಳತ್ವವನ್ನು ಒಪ್ಪಿಕೊಂಡರು. ದೇವಾಸ್ಥಾನಗಳಲ್ಲಿ ಮುಕ್ತೇಸರರಾಗಿ, ಭೂತಕೋಲ ನಡೆಯುವಲ್ಲಿ ನುಡಿ ಹೇಳುವವರಾಗಿ, ಊರಿನ ಜನರ ನಡುವೆ ರಾಜಿ ಪಂಚಾಯಿತೆಯವರಾಗಿ, ದೇವಾಸ್ಥಾನದ ಸ್ಥಾಪನೆ, ಬ್ರಹ್ಮಕಲಕೋತ್ಸವಗಳಲ್ಲಿ ಮುಂದಾಳತ್ವ ವಹಿಸಿಕೊಳ್ಳುತ್ತಿರುವ ಕಾರಣ ಸಾಮಾಜಿಕ ಗೌರವಕ್ಕೆ ಪಾತ್ರರಾಗುತ್ತಿದ್ದಾರೆ.

* ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ ಶಿವಳ್ಳಿ ಬ್ರಾಹ್ಮಣರಲ್ಲಿ ಕೆಲವರು ದೊಡ್ಡ ಹಿಡುವಳಿದಾರರಾಗಿದ್ದರು. ಅಂತೆಯೇ ಊರಪಟೇಲ, ಶಾನುಭೋಗ ಮುಂತಾದ ಹುದ್ದೆಯಲ್ಲಿ ಇದ್ದು ಊರಿನ ಭೂಮಿಯ ತೀರ್ವೆಯನ್ನು ಸರಕಾರಕ್ಕೆ ವಸೂಲಿ ಮಾಡಿಕೊಡುವ ಜವಾಬ್ದಾರಿಯನ್ನು ಹೊಂದಿದ್ದರು. ಆದುದರಿಂದ ಊರಿನ ಜನರ ಮೇಲೆ ಇವರ ಹಿಡಿತವೂ ಇತ್ತು.

* ತುಳುನಾಡಿನಲ್ಲಿ ಹಿಂದಿನ ಕಾಲದಿಂದಲೂ ದೊಡ್ಡ ಹಿಡುವಳಿಗಾರರಾಗಿ ಬಂಟ ಜನಾಂಗದವರು ಇದ್ದರು. ಶಿವಳ್ಳಿ ಬ್ರಾಹ್ಮಣರು ತುಳುನಾಡಿಗೆ ಬಂದ ಆರಂಭದಿಂದ ಹಲವು ರೀತಿಯಲ್ಲಿ ಬಂಟರು ಶಿವಳ್ಳಿಯವರಿಗೆ ಸಹಾಯ ಮಾಡಿದ್ದಾರೆ. ಬಂಟ ಜನಾಂಗಕ್ಕೆ ತುಳುನಾಡಿನ ತುಳು ಜನರ ಮೇಲೆ ಹೆಚ್ಚಿನ ಹಿಡಿತವಿದ್ದುದರಿಂದ ಶಿವಳ್ಳಿಯವರಿಗೆ ಪ್ರಯೋಜನವಾಯಿತು. (ಪು. ಶ್ರೀನಿವಾಸ ಭಟ್ ಕಟೀಲು)

ವ್ಯವಹಾರಿಕವಾಗಿ ಶಿವಳ್ಳಿ ಬ್ರಾಹ್ಮಣರು ನೇರ ಸ್ವಭಾವದವರು. ಹಿಂದೆ ಕೂಡು ಕುಟುಂಬವನ್ನೇ ಹೆಚ್ಚು ನೆಚ್ಚಿಕೊಂಡಿದ್ದರು. ಹಿಂದಿನಂತೆ ಈಗಲೂ ನೆರೆಕರೆಯವರೊಂದಿಗೆ

ಅನ್ಯೋನ್ಯವಾಗಿ ಬಾಳುತ್ತಿದ್ದಾರೆ. ಯಾವುದೇ ಗಲಾಟೆ ತಂಟೆಗಳಿಗೆ ಹೋಗುವವರಲ್ಲ. ತುಳುನಾಡಿನ ಉಳಿದ ವರ್ಗದವರಿಗೆ ಇವರ ಮೇಲೆ ಅತಿಯಾದ ಪ್ರೀತಿ, ವಿಶ್ವಾಸ. ಮನೆಯ ಹಿರಿಯರಿಗೆ ವಿಶೇಷವಾದ ಗೌರವವನ್ನು ಕುಟುಂಬದ ಉಳಿದ ಸದಸ್ಯರು ಕೊಡುತ್ತಾರೆ. ಮದುವೆ, ಹಬ್ಬಹರಿದಿನ, ಪೂಜೆ, ಪುರಸ್ಕಾರಗಳ ಸಂದರ್ಭದಲ್ಲಿ ಹಿರಿಯರ ಮಾರ್ಗದರ್ಶನದಲ್ಲಿಯೇ ಕಾರ್ಯಗಳು ಜರುಗುವುದು. ಊರಲ್ಲಿ ಜರುಗುವ ಧಾರ್ಮಿಕ ಕಾರ್ಯಗಳಲ್ಲಿ ಇವರು ಮುಂದಾಳುತನವನ್ನು ವಹಿಸುವುದು ಕಂಡುಬರುತ್ತದೆ. ದೇವಸ್ಥಾನದ ಉತ್ಸವ, ಜಾತ್ರೆ, ಜೀರ್ಣೋದ್ಧಾರ ಮುಂತಾದ ವಿಶೇಷ ಸಂದರ್ಭಗಳಲ್ಲೂ ಇವರ ಮುಂದಾಳುತನದಲ್ಲಿಯೇ ಕಾರ್ಯಕ್ರಮಗಳು ಜರುಗುತ್ತವೆ. ದೇವಸ್ಥಾನದಲ್ಲಿ ಪ್ರತೀ ವರ್ಷ ಜರುಗುವ ಜಾತ್ರೋತ್ಸವ ಸಂದರ್ಭದಲ್ಲಿ 'ತಂತ್ರಿ' ಸ್ಥಾನವನ್ನು ವಹಿಸುವವರು ಶಿವಳ್ಳಿಯವರೇ. ಹಲವು ದೇವಸ್ಥಾನಗಳಲ್ಲಿ ವಂಶಪಾರಂಪರ್ಯವಾಗಿ ನಿರ್ದಿಷ್ಟ ಕುಲದವರಿಗೆ ಈ 'ತಂತ್ರಿ' ಸ್ಥಾನ. ಅವರ ಮಾರ್ಗದರ್ಶನದಲ್ಲಿ ಜಾತ್ರೆ ಜರುಗುವುದು.

ಶಿವಳ್ಳಿ ಬ್ರಾಹ್ಮಣರು ಪೂಜೆ, ಯಾಗ, ಯಜ್ಞ ಮಾಡುವುದರೊಂದಿಗೆ ಕೃಷಿಯನ್ನು ಅವಲಂಭಿಸಿರುತ್ತಾರೆ. ಕೂಲಿ ಆಳುಗಳೊಂದಿಗೆ ಅನ್ಯೋನ್ಯವಾಗಿರುತ್ತಾರೆ. ಮನೆಯಲ್ಲಿ ತಮಗೆ ಮಾಡಿದ ಆಹಾರವನ್ನೇ ಅವರಿಗೂ ನೀಡುತ್ತಾರೆ. ದುಡಿಯುವವರೊಂದಿಗೆ ಅನ್ಯೋನ್ಯ ಸಂಬಂಧವಿದೆ. ಕೂಲಿ ಆಳುಗಳ ಮನೆಯಲ್ಲಿ ಜರುಗುವ ಶುಭ ಮತ್ತು ಅಶುಭ ಕಾರ್ಯಗಳ ಸಂದರ್ಭದಲ್ಲಿ ತಮ್ಮಿಂದ ಕೈಲಾದಷ್ಟು ಸಹಾಯವನ್ನು ಮಾಡುತ್ತಾರೆ. ಶಿವಳ್ಳಿಯವರು ಭತ್ತ, ಅಡಿಕೆ, ತೆಂಗು, ಕೊಕ್ಕೊ, ಬಾಳೆ, ತರಕಾರಿ, ಹಣ್ಣು ಮುಂತಾದ ಕೃಷಿಯನ್ನು ಜೀವನೋಪಾಯಕ್ಕಾಗಿ ಮಾಡುತ್ತಾರೆ.

ವೈದಿಕ ವೃತ್ತಿ ಮತ್ತು ಕೃಷಿಯನ್ನೇ ಅವಲಂಭಿಸಿಕೊಂಡಿದ್ದ ಕಾರಣ ಶಿವಳ್ಳಿ ಬ್ರಾಹ್ಮಣರು ಈ ಶತಮಾನದ ಆದಿಯಲ್ಲಿ ಅಷ್ಟಾಗಿ ಆರ್ಥಿಕವಾಗಿ ಸದೃಢರಾಗಿರಲಿಲ್ಲ. ಇಂದಿನ ಪೀಳಿಗೆಯವರು ಬೇರೆ ಬೇರೆ ವೃತ್ತಿ ಹಾಗೂ ಕಸುಬನ್ನು ಆಯ್ಕೆ ಮಾಡಿಕೊಂಡ ಕಾರಣ ಈಗೀಗ ಸದೃಢರಾಗುತ್ತಾ ಬರುತ್ತಿದ್ದಾರೆ. ಮೀಸಲಾತಿಯಿಂದ ಸರಕಾರಿ ಉದ್ಯೋಗ ಸಿಗುವುದು ಕಷ್ಟಸಾಧ್ಯವಾದುದರಿಂದ ಖಾಸಗಿ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅಲ್ಲಿ ತಮ್ಮ ಕಠಿಣ ಪರಿಶ್ರಮ, ಬುದ್ಧಿವಂತಿಕೆಯಿಂದ ಉನ್ನತ ಹುದ್ದೆಯನ್ನು ಅಲಂಕರಿಸಿದ್ದಾರೆ. ಆರ್ಥಿಕವಾಗಿಯೂ ಸದೃಢರಾಗಿದ್ದಾರೆ. ಧಾರ್ಮಿಕ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದು ಜನರ ಗೌರವ, ಪ್ರೀತಿ, ಆದರಕ್ಕೆ ಪಾತ್ರರಾಗಿದ್ದಾರೆ. ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಡುವುದರಿಂದ ಶೈಕ್ಷಣಿಕವಾಗಿಯೂ ಸಾಧನೆ ಮಾಡುತ್ತಿದ್ದಾರೆ.

5.4 ಗೃಹಣಿಯರ ಕರ್ತವ್ಯ

ಮನೆಯ ಗೌರವ ಮರ್ಯಾದೆಯನ್ನು ಕಾಪಾಡಿಕೊಂಡು ಗೃಹದಲ್ಲಿ ಶಾಂತಿ, ನೆಮ್ಮದಿಗಳನ್ನು ತರಲು ಆಜೀವ ದುಡಿದು ಮುತ್ತೈದೆಯಾಗಿದ್ದು ಕೊಂಡು ಬದುಕನ್ನು ಸಾಗಿಸುತ್ತಿರುವವರು ಶಿವಳ್ಳಿ ಸ್ತ್ರೀಯರು. ಗಂಡನಿಗೆ ಪೂರಕವಾಗಿ ಜೀವನ ನಡೆಸುತ್ತಾ ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳುತ್ತಾ ಪತಿಯೇ ಪ್ರತ್ಯಕ್ಷ ದೇವರೆಂದು ಭಾವಿಸುತ್ತಾ ಇಹ ಲೋಕದಲ್ಲಿ ಧನ್ಯತಾಭಾವ ಹೊಂದುತ್ತಾ ಜೀವಿಸುತ್ತಿರುವವಳು. ಬ್ರಾಹ್ಮಣ ಮಹಿಳೆ ಮನೆಯನ್ನು ಶುಭ್ರವಾಗಿ ಸ್ವಚ್ಛವಾಗಿ ಇಟ್ಟುಕೊಳ್ಳುತ್ತಾ, ಸರಿಯಾದ ರೀತಿಯಲ್ಲಿ ಮನೆಯನ್ನು ಅಲಂಕರಿಸುತ್ತಾ ಅಂತೆಯೇ ಮೂರು ಹೊತ್ತು ಸಮಯಕ್ಕೆ

ಸರಿಯಾಗಿ ಊಟವನ್ನು ತಯಾರುಮಾಡಿ ಬಡಿಸುವ ಕರ್ತವ್ಯ ಪತ್ನಿಯದ್ದಾಗಿರುತ್ತದೆ. ದೇವತಾ ಪೂಜೆಯಲ್ಲಿ ಗಂಡನಿಗೆ ಸಹಕಾರಿಯಾಗಿರಬೇಕು. ತನ್ನ ಅತ್ತೆ ಮಾವಂದಿರೊಂದಿಗೆ, ಆಳು ಕಾಳುಗಳೊಂದಿಗೆ, ಗಂಡನ ಅಕ್ಕ ತಂಗಿಯರೊಂದಿಗೆ, ತಮ್ಮಂದಿರೊಂದಿಗೆ ಯುಕ್ತವಾದ ರೀತಿಯಲ್ಲಿ ನಡೆದುಕೊಳ್ಳುತಾ ರುಚಿ, ಶುಚಿಯಾದ ಅಡುಗೆಯನ್ನು ತಯಾರು ಮಾಡಬೇಕು. ಕೆಟ್ಟ ಮಾತುಗಳನ್ನು ಆಡಬಾರದು. ಗಂಡನ ಜೊತೆ ವ್ರತ– ಉಪವಾಸವನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಬೇಕು. ಗೃಹಕೃತ್ಯಗಳನ್ನೆಲ್ಲಾ ಒಪ್ಪವಾಗಿ ಮಾಡಬೇಕು. ದನ–ಕರುಗಳ ಪೋಷಣೆ, ಹಾಲು ಕರೆಯುವುದು, ಮೊಸರುಕಡೆದು ಬೆಣ್ಣೆ ತೆಗೆಯುವ ಕಾಯಕದಲ್ಲಿ ಮಗ್ನವಾಗಿರಬೇಕು. ಗುರು ಹಿರಿಯರ ಸೇವೆ, ಅತಿಥಿ–ಅಭ್ಯಾಗತರ ಬಗ್ಗೆ ಗೌರವ, ಮಕ್ಕಳ ಬಗ್ಗೆ ಪ್ರೀತಿ, ಕಾಳಜಿ, ಗಂಡನ ಬಗ್ಗೆ ಪೂಜ್ಯ ಭಾವ ಉಳ್ಳವರಾಗಿರಬೇಕು. ಸಕಲ ರೀತಿಯಲ್ಲೂ ಗಂಡನ ಅನುವರ್ತಿಯಾಗಿರಬೇಕು. ಗೃಹಕೃತ್ಯದ ಕಾರ್ಯವಲ್ಲದೆ ಧಾರ್ಮಿಕ ಕಾರ್ಯಗಳಲ್ಲೂ ಸಹಕಾರವನ್ನು ಮಡದಿ ಮಾಡುತ್ತಿರಬೇಕು. ಇದನ್ನೆಲ್ಲ ಚಾಚು ತಪ್ಪದೇ ಮಾಡುತ್ತಿರುವವಳು ಶಿವಳ್ಳಿ ಬ್ರಾಹ್ಮಣ ಗೃಹಿಣಿ.

ಗಂಡು ಒಂಟಿಯಾಗಿ ಜೀವನ ಪರ್ಯಂತ ಬಾಳಲು ಸಾಧ್ಯವಿಲ್ಲ. ಪ್ರಾಯಕ್ಕೆ ಬಂದಾಗ ಅಂದರೆ ಮದುವೆಯ ವಯಸ್ಸಿನಲ್ಲಿ ಸಹಜವಾಗಿಯೇ ಆತ ಸಂಸಾರಸ್ಥನಾಗುತ್ತಾನೆ. ಭಾರತೀಯ ಸಂಸ್ಕೃತಿಯಲ್ಲಿ ಮದುವೆಗೆ ವಿಶೇಷವಾದ ಪ್ರಾಧಾನ್ಯತೆಯಿದೆ. ಜೀವನ ಪರ್ಯಂತ ಗಂಡ–ಹೆಂಡತಿ ಒಟ್ಟಿಗೆ ಬಾಳುತ್ತಾ ಸುಖ–ದುಃಖ, ಲಾಭ–ನಷ್ಟಗಳಲ್ಲಿ ಒಬ್ಬರಿಗೊಬ್ಬರು ಕೈ ಜೋಡಿಸುತ್ತಾ ಬಾಳುವುದನ್ನು ಕಾಣುತ್ತೇವೆ. ಒಂದು ಮನೆಗೆ ಶೋಭೆ ತರುವುದು ಆ ಮನೆಯಲ್ಲಿ ಹೆಂಗಸು ಇದ್ದಾಗ ಮಾತ್ರ. ಗಂಡನ ಬೇಕು ಬೇಡಗಳಿಗೆ ಸ್ಪಂದಿಸುತ್ತಾ, ಇಹಲೋಕದಲ್ಲಿ ಧನ್ಯತಾಭಾವ ಹೊಂದುತ್ತಾ ಜೀವಿಸುತ್ತಿರುವವಳು ಬ್ರಾಹ್ಮಣ ಮಹಿಳೆ. ಶಿವಳ್ಳಿ ಬ್ರಾಹ್ಮಣ ಮಹಿಳೆಯರೂ ಇದಕ್ಕೆ ಹೊರತಾಗಿಲ್ಲ. ಬ್ರಾಹ್ಮಣ ಮಹಿಳೆಗೆ ಕೆಲವು ಜವಾಬ್ದಾರಿಗಳೂ ಇದೆ.

5.4.1 ಧಾರ್ಮಿಕವಾಗಿ

ಶಿವಳ್ಳಿ ಬ್ರಾಹ್ಮಣರು ವಿಶೇಷವಾಗಿ ಪೂಜೆ ಪುರಸ್ಕಾರಗಳಿಗೆ ಮಹತ್ವಕೊಡುವುದರಿಂದ ಗಂಡನ ಧಾರ್ಮಿಕ ಕೆಲಸಗಳಲ್ಲಿ ಆಕೆ ಕೈ ಜೋಡಿಸುವುದು ಅನಿವಾರ್ಯ. ಬೆಳಿಗ್ಗೆ ಪ್ರಾತಃ ಕಾಲದಲ್ಲಿ ಎದ್ದು ಸ್ನಾನಾದಿಗಳನ್ನು ಪೂರೈಸಿ, ಕುಂಕುಮವನ್ನು ಹಣೆಗೆ ಧರಿಸಿ, ಹೊಸ್ತಿಲು ನಮಸ್ಕಾರ ಮಾಡಿ ತುಳಸಿ ಕಟ್ಟೆ ಪ್ರದಕ್ಷಿಣೆ ಬಂದು, ಗಂಡನ ಪೂಜೆಗೆ ಪೂರಕವಾದ ಪರಿಕರಗಳನ್ನು ಅಣಿಗೊಳಿಸುವುದು ಆಕೆಯ ಕರ್ತವ್ಯ. ಹೂ ಕೊಯ್ಯುವುದು, ದೇವರ ಪಾತ್ರೆಗಳನ್ನು ಸ್ವಚ್ಛಗೊಳಿಸುವುದು, ದೇವರ ಸಮರ್ಪಣೆಗೆ ಬೇಕಾದ ಹಾಲು, ಬಾಳೆಹಣ್ಣು ಬೆಲ್ಲ, ಮುಂತಾದವುಗಳನ್ನು ತಂದು ದೇವರ ಕೋಣೆಯಲ್ಲಿ ಇಡುವುದು, ಆರತಿಗೆ ಎಣ್ಣೆ ಬತ್ತಿಯನ್ನು ಹಾಕಿಡುವುದು ಮುಂತಾದ ದೇವರ ಪೂಜೆಗೆ ಪೂರಕವಾಗಿ ಕೆಲಸವನ್ನು ಮಾಡುತ್ತಾಳೆ. ಪೂಜೆಯಾದ ಅನಂತರದಲ್ಲಿಯೇ ಮುಂದಿನ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾಳೆ.

5.4.2 ಮಕ್ಕಳ ಲಾಲನೆ ಪಾಲನೆ

ಮಕ್ಕಳ ಲಾಲನೆ ಪಾಲನೆಯಲ್ಲಿ ಮಹಿಳೆ ಪಾತ್ರ ಬಹಳ ಮುಖ್ಯ. ಬೆಳಗ್ಗಿನ ಹೊತ್ತು ಮಕ್ಕಳನ್ನು ಎಬ್ಬಿಸಿ, ಪಾತ್ರಃ, ವಿಧಿಗಳನ್ನು ಪೂರೈಸಿ, ಶ್ಲೋಕಗಳನ್ನು ಹೇಳಿಸಿ ಅಧ್ಯಯನಕ್ಕೆ ಅಣಿಗೊಳಿಸುವುದು. ಬ್ರಾಹ್ಮಣರಲ್ಲಿ ಬೆಳಗ್ಗಿನ ಹೊತ್ತೇ ಸ್ನಾನ ಮಾಡುವ ಪದ್ಧತಿ ಇರುವುದರಿಂದ ಮಕ್ಕಳಿಗೆ ಸ್ನಾನ ಮಾಡಿಸಿ, ತಿಂಡಿಯನ್ನು ತಿನ್ನಿಸಿ ಶಾಲೆಗೆ ಹೋಗುವವರೆಗಿನ ಜವಾಬ್ದಾರಿ ಮಹಿಳೆಯದ್ದು. ಹೆಣ್ಣು ಮಕ್ಕಳಿದ್ದರೆ ಅವರ ತಲೆಯನ್ನು ಬಾಚುವ ಕೆಲಸವನ್ನು ಈಕೆಯೇ ಮಾಡುತ್ತಾಳೆ. ಮನೆಯವರ ಬಟ್ಟೆ ಬರೆಗಳನ್ನು ಒಗೆದು ಒಣಗಿಸಿ ಸಿದ್ದಗೊಳಿಸುವವಳೂ ಮಹಿಳೆಯೇ.

5.4.3 ಗೃಹಕೃತ್ಯ:

ಮನೆಯಲ್ಲಿ ಮಹಿಳೆಯೊಬ್ಬಳು ಇಲ್ಲದಿದ್ದರೆ ಮನೆ ಅಸ್ತವ್ಯಸ್ತವಾಗಿರುವುದು ಸಹಜ. ಬೆಳಗ್ಗೆ ಎದ್ದು ಹಟ್ಟಿಗೆ ಹೋಗಿ ಹಾಲು ಕರೆಯುವುದು, ಮನೆಯವರಿಗೆ ಚಹಾ ಕಾಫಿ, ಮಾಡಿಕೊಡುವುದು, ಬೆಳಗ್ಗಿನ ಉಪಾಹಾರ ತಯಾರಿಸುವುದು, ಮಧ್ಯಾಹ್ನ ಹೊತ್ತಿಗೆ ಅಡುಗೆಯನ್ನು ತಯಾರಿಸುವುದು, ಮನೆಯನ್ನು ಸ್ವಚ್ಛಗೊಳಿಸುವುದು, ಮುಂತಾದವುಗಳನ್ನು ಗೃಹಿಣಿಯೇ ಮಾಡಬೇಕಾಗುತ್ತದೆ. ಮನೆಗೆ ಅತಿಥಿ, ನೆಂಟರಿಷ್ಟರು ಬಂದಾಗ ವಿಶೇಷವಾದ ಅಡುಗೆಯನ್ನು ಮಾಡಿ, ಊಟದ ಸಮಯದಲ್ಲಿ ಮಣೆ ಇಟ್ಟು ಎಲೆ ಹಾಕಿ, ಆಹಾರವನ್ನು ಬಡಿಸಿ ತೃಪ್ತಿಯಾಗುವಷ್ಟು ಊಟವನ್ನು ಬಡಿಸುವ ಜವಾಬ್ದಾರಿ ಗೃಹಿಣಿಯದ್ದು. ಬ್ರಾಹ್ಮಣರಲ್ಲಿ ಶುದ್ಧತೆಗೆ ಮಹತ್ವವಿರುವುದರಿಂದ ಊಟವಾದ ಮೇಲೆ, ಊಟ ಮಾಡಿದ ಸ್ಥಳಕ್ಕೆ ಸೆಗಣಿ ಸಾರಿಸಬೇಕಾಗುತ್ತದೆ. ಮನೆಯಲ್ಲಿ ಹಿರಿಯರಿದ್ದರೆ ಅವರ ಎಲ್ಲಾ ಜವಾಬ್ದಾರಿಯನ್ನು ಗೃಹಿಣಿಯೇ ಹೊರಬೇಕಾಗುತ್ತದೆ. ಅವರ ಉಪಚಾರವನ್ನು ಈಕೆಯೇ ಮಾಡಬೇಕು. ಒಟ್ಟಾಗಿ ಸಂಸಾರ ಚೆನ್ನಾಗಿ ಸುಸೂತ್ರವಾಗಿ ನಡೆಯಬೇಕಾದರೆ ಮಹಿಳೆಯ ಪಾತ್ರ ಮುಖ್ಯ.

5.4.4 ವಿಶೇಷ ಕಾರ್ಯಗಳು:

ಮನೆಯಲ್ಲಿ ಆಚರಿಸುವ ವಿಶೇಷ ಕಾರ್ಯಗಳಲ್ಲಿ ಗೃಹಿಣಿಯ ಪಾತ್ರ ಮಹತ್ವ. ವಾರ್ಷಿಕವಾಗಿ ಜರುಗುವ ಹಬ್ಬಗಳು ಪೂಜೆ ಪುರಸ್ಕಾರಗಳಲ್ಲಿ ಆಕೆ ಭಾಗಿಯಾಗಲೇ ಬೇಕಾಗುತ್ತದೆ. ಮನೆಯಲ್ಲಿ ಜರಗುವ ಉಪನಯನ, ಮದುವೆ ಮುಂತಾದ ಶುಭ ಕಾರ್ಯಗಳಲ್ಲಿ, ಅಂತೆಯೇ ಉತ್ತರಕ್ರಿಯೆ, ಶ್ರಾದ್ಧ ಮುಂತಾದ ಅಪರ ಕಾರ್ಯಗಳ ಸಮಯದಲ್ಲಿ ಆಕೆಗೆ ಜವಾಬ್ದಾರಿ ಹೆಚ್ಚು. ದೀಪಾವಳಿ, ಅಷ್ಟಮಿ, ಚೌತಿ, ಯುಗಾದಿ, ನಾಗರಪಂಚಮಿ, ಮುಂತಾದ ವಾರ್ಷಿಕ ಆವರ್ತನದ ಸಂದರ್ಭದಲ್ಲಿ ಹಬ್ಬಕ್ಕೆ ಬೇಕಾಗಿರುವ ವಿಶೇಷ ಭಕ್ಷ್ಯವನ್ನು ಈಕೆಯೇ ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ಗೃಹಿಣಿ ಮನೆಯಲ್ಲಿ ಚಟುವಟಿಕೆಯಲ್ಲಿ ಇರುತ್ತಾಳೆ.

1. ಪ್ರಾತಃ ಕಾಲ ಸ್ನಾನ ಮತ್ತು ತುಳಸಿಪೂಜೆ, ಗಂಡಸರಿಗೆ ಪೂಜೆಗೆ ಅಣಿ ಮಾಡುವುದು.
2. ಅಡುಗೆ–ಊಟದ ವ್ಯವಸ್ಥೆ, ಮಣೆ ಹಾಕಿ, ನೀರು ಆಹಾರ ಬಡಿಸುವುದು.

3. ಊಟವಾದ ಮೇಲೆ ಗೋಮಯ ಹಾಕಿ ಶುದ್ಧಗೊಳಿಸುವುದು.
4. ಮನೆಯನ್ನು ಒಪ್ಪ ಓರಣವಾಗಿ ಇಡುವುದು.
5. ಎಲ್ಲರ ಊಟವಾದ ಮೇಲೆ ಊಟ ಮಾಡಿ, ಪಾತ್ರೆಗಳನ್ನು ಸ್ವಚ್ಛಗೊಳಿಸಿ ಇಡುವುದು.
6. ಮಧ್ಯಾಹ್ನ ಸ್ವಲ್ಪ ವಿಶ್ರಾಂತಿ, ಸಂಜೆ ಹೆಣ್ಣು ಮಕ್ಕಳಿಗೆ ಜಡೆ ಬಾಚಿ, ಹೂ ಮುಡಿಸಿ, ತಾನು ಅಲಂಕರಿಸಿಕೊಳ್ಳುವುದು.
7. ಸಂಜೆಗೆ ಸ್ನಾನ ಗೃಹದಲ್ಲಿ ನೀರು ತುಂಬಿಸುವುದು. ದೇವರಿಗೆ ದೀಪ ಹಚ್ಚುವುದು, ಹಾಲು ಕರೆಯುವುದು ಮುಂತಾದವುಗಳನ್ನು ದಿನನಿತ್ಯ ಗೃಹಿಣಿ ಮಾಡಬೇಕಾಗುತ್ತದೆ.

5.5 ಶಿವಳ್ಳಿ ಬ್ರಾಹ್ಮಣರ ದೈನಂದಿನ ಉಡುಗೆ ತೊಡುಗೆಗಳು

ಶತಮಾನದ ಆರಂಭ ದಶಕಗಳಲ್ಲಿ ಶಿವಳ್ಳಿ ಬ್ರಾಹ್ಮಣರಲ್ಲಿ ಗಂಡಸರು ಪ್ರಮುಖ ವಸ್ತ್ರ ಕೌಪೀನ ಮತ್ತು ಪಾಣಿ ಪಂಚೆಯಾಗಿತ್ತು. ಪಾಣಿ ಪಂಚೆಯಂತಹ ಬಟ್ಟೆ ಹತ್ತಿಯಿಂದ ಮಾಡಲ್ಪಟ್ಟಿದ್ದು ಸ್ನಾನದ ಸಂದರ್ಭದಲ್ಲಿ ಉಪಯೋಗಿಸುತ್ತಿದ್ದರು. ಮೈಯಿ ಮತ್ತು ತಲೆಯನ್ನು ಒರೆಸಲು ಇದು ಸಹಕಾರಿ. ಕೌಪೀನ ಸಾಮಾನ್ಯವಾಗಿ ಗಂಜಿ ಹಾಕಿದ ಒರಟು ಬಟ್ಟೆಯಿಂದ ಮಾಡಿದ್ದಾಗಿದ್ದು ಸೊಂಟಕ್ಕೆ ಸುತ್ತಿರುವ ಪಟ್ಟೆಯ ನೂಲಿನ ಅಥವಾ ಬೆಳ್ಳಿಯ ಉಡಿದಾರದ ಸಹಾಯದಿಂದ ಬಿಗಿದುಕೊಳ್ಳುತ್ತಿದ್ದರು. ದಿನವಿಡೀ ಮನೆಯಲ್ಲಿ ಪಾಣಿ ಪಂಚೆಯಲ್ಲಿಯೇ ಇರುತ್ತಿದ್ದರು. ಮೈಗೆ ಯಾವ ಬಟ್ಟೆಯನ್ನು ಹಾಕಿಕೊಳ್ಳುತ್ತಿರಲಿಲ್ಲ. ಹೊರಗಡೆ ಹೋಗುವಾಗ ಮೈಮೇಲೆ ಬಟ್ಟೆಯನ್ನು ಹೊದೆದುಕೊಳ್ಳುತ್ತಿದ್ದರು. ಎಳೆ ವಸ್ತ್ರವನ್ನು (ನೂಲಿನ ಎಳೆ ಇರುವಂತಹದ್ದು) ಉಡಲು ಮತ್ತು ಮುಂಡಾಸು ಕಟ್ಟಲು ಬಳಸುತ್ತಿದ್ದರು. ಹೆಚ್ಚಾಗಿ ಅಂಗಿಯನ್ನು ಧರಿಸುತ್ತಿರಲಿಲ್ಲ. ಈಗಲೂ ಸಹ ದೇವಸ್ಥಾನದಲ್ಲಿ ಪೂಜೆ ಮಾಡುವ ಅರ್ಚಕರಲ್ಲಿ ಕೆಲವರು ಅಂಗಿ ಧರಿಸುವುದಿಲ್ಲ. ಮೈಮೇಲೆ ಹಾಕುವ ಬೈರಾಸು ವಸ್ತ್ರ ಅಂಚಿನಲ್ಲಿ ಸ್ವಲ್ಪ ಜರಿ ಇರುವ ಬಟ್ಟೆ, ಕೈಯಿರುವ ಬನೀಯನು, ಕೆಲವರು ಪೇಟೆಗೆ ಸಮಾರಂಭಕ್ಕೆ ಹೋಗುವಾಗ ಕುತ್ತಿಗೆ ಇಲ್ಲದ ಜುಬ್ಬ ಧರಿಸುತ್ತಿದ್ದರು. ಶಿವಳ್ಳಿ ಬ್ರಾಹ್ಮಣರಲ್ಲಿ ಈ ಶತಮಾನದ ಪೂರ್ವಾರ್ಧದಲ್ಲಿ ಬಳಸುತ್ತಿದ್ದ ಬಟ್ಟೆ.

ಶಿವಳ್ಳಿ ಬ್ರಾಹ್ಮಣ ಹೆಂಗಸರು ದೈನಂದಿನ ಸಂದರ್ಭದಲ್ಲಿ ಹೆಚ್ಚಾಗಿ ಸಣ್ಣ ಸೀರೆಯನ್ನು ಉಡುತ್ತಿದ್ದರು. ರವಿಕೆಯ ಬಟ್ಟೆಗೆ ಕಣ ಎನ್ನುತ್ತಾರೆ. ದೈನಂದಿನ ಸಂದರ್ಭಗಳಲ್ಲಿ ವಯಸ್ಸಾದ ಹೆಂಗಸರು ರವಿಕೆ ಹಾಕದೆ ಇರುವ ಸಂದರ್ಭ ಹಿಂದೆ ಹೆಚ್ಚಾಗಿತ್ತು. ಬ್ರಾಹ್ಮಣ ಹೆಂಗಸು ಒಳಉಡುಪುಗಳಾದ ಲಂಗ–ಬಾಡಿಗಳನ್ನು ಧರಿಸಿದರೆ ಅಪಹಾಸ್ಯಕ್ಕೀಡಾಗ ಬೇಕಾಗಿತ್ತು. ದಿವಸಕ್ಕೆ ಮೂರು–ನಾಲ್ಕು ಬಾರಿ ಸ್ನಾನ ಮಾಡುವ ವಿಧವೆಯರ ಪಾಲಿಗೆ ನಾರಿನ ಕೆಂಪು ಸೀರೆಯೇ ಪ್ರಮುಖ ಮಡಿ ಬಟ್ಟೆಯಾಗಿತ್ತು. ಅದು ಅಲ್ಲದೇ ವೃದ್ಧ ವಿಧವೆಯವರು ಏಕ ವಸ್ತ್ರಧಾರಿಗಳಾಗಿರುತ್ತಿದ್ದರು. ಅನಂತರ ರೇಶ್ಮೆ ಬಟ್ಟೆಗಳನ್ನು ಉಡಲು ಪ್ರಾರಂಭಿಸಿದರು.

ಈಗ ನವೀನ ವಿನ್ಯಾಸದ ಅನೇಕ ಬಟ್ಟೆಬರೆಗಳನ್ನು ದೈನಂದಿನ ಸಂದರ್ಭಗಳಲ್ಲಿ ಕಾಣಬಹುದು. ಗಂಡಸರು ಪಂಚೆ, ಬನಿಯನ್, ಲುಂಗಿ, ಪ್ಯಾಂಟ್, ಅಂಗಿ, ಟೀ ಶರ್ಟ್,

ಜುಬ್ಬಾ ಮುಂತಾದವುಗಳನ್ನೂ ಹೆಂಗಸರು ಮ್ಯಾಕ್ಸಿ, ನೈಟಿ, ವಾಯಿಲ್ ಸೀರೆ, ಚೂಡಿದಾರ, ಮುಂತಾದವುಗಳನ್ನು ಧರಿಸುತ್ತಾರೆ. ಹೊಸ ತಲೆಮಾರಿನವರು ಪ್ಯಾಂಟ್ ಧರಿಸುವುದು ಇದೆ. ಸಂಸ್ಕೃತಿ, ಹೊಸ ವಿನ್ಯಾಸ, ಮತ್ತು ಅಭಿರುಚಿಗೆ ತಕ್ಕಂತಹ, ಅಂತೆಯೇ ಹವಾಮಾನಕ್ಕೆ ತಕ್ಕಂತಹ ಬಟ್ಟೆಗಳನ್ನು ಧರಿಸುತ್ತಾರೆ. ಈ ಶತಮಾನದ ಆರಂಭದಲ್ಲಿ ಪಾದರಕ್ಷೆಯನ್ನು ಧರಿಸುತ್ತಿರಲಿಲ್ಲ. ವಿಶೇಷವಾಗಿ ದೇವಸ್ಥಾನಕ್ಕೆ ಹೋಗುವಾಗ ಬರಿಗಾಲಲ್ಲೇ ಹೋಗುತ್ತಿದ್ದರು. ದೂರದ ಊರಿಗೆ ಪ್ರಯಾಣ ಮಾಡುವಾಗ ಮಾತ್ರ ಗಂಡಸರು–ಚರ್ಮದ ಚಪ್ಪಲಿ ಧರಿಸುತ್ತಿದ್ದರು. ಅದನ್ನು 'ಜೋಡು' ಎಂದು ಕರೆಯುತ್ತಿದ್ದರು. ಆದರೆ ಕಾಲಾನಂತರ ಚಪ್ಪಲಿಯ ಬಳಕೆ ಸಾಮಾನ್ಯವಾಯಿತು. ಈಗೀಗ ಮನೆಯ ಒಳಗೂ ಚಪ್ಪಲಿ ಧರಿಸುವವರೂ ಇದ್ದಾರೆ.

ಶಿವಳ್ಳಿ ಬ್ರಾಹ್ಮಣರ ದೈನಂದಿನ ಆಭರಣಗಳು ಸರಳವಾಗಿದ್ದವು. ಹೆಂಗಸರು ಕಾಲಿಗೆ ಕಾಲುಂಗರ, ಕಾಲುಗೆಜ್ಜೆ, ಮೂಗಿಗೆ ಮೂಗುತಿ, ಕಿವಿಗೆ ನತ್ತನ್ನು, ಕೈಗೆ ಬಳೆ ಹಾಕಿಕೊಳ್ಳುತ್ತಿದ್ದರು. ಮದುವೆಯಾದವರು ಕರಿಮಣಿ, ಕೈಗೆ 'ಕುಪ್ಪಿ ಬಳೆ' ಧರಿಸುತ್ತಿದ್ದರು. ಚಿನ್ನದ ಆಭರಣಕ್ಕಿಂತ ಬೆಳ್ಳಿಯ ಆಭರಣ ಹೆಚ್ಚಿರುತ್ತಿತ್ತು. ಅದಕ್ಕೆ ಬಡತನವೇ ಕಾರಣವಾಗಿತ್ತು.

5.5.1 ಶಿವಳ್ಳಿ ಬ್ರಾಹ್ಮಣರ ವಿಶೇಷ ಸಂದರ್ಭದ ಉಡುಗೆ– ತೊಡುಗೆಗಳು

ಮದುವೆ ಮತ್ತು ಬಯಕೆಯಂತಹ ಜೀವನಾವರ್ತನದ ವಿಶೇಷ ಸಂದರ್ಭಗಳಲ್ಲಿ ಉಡುಗೆ–ತೊಡುಗೆಗಳಲ್ಲಿ ಸಂಭ್ರಮ, ಸಂತೋಷ ಎದ್ದು ಕಾಣುತ್ತದೆ. ಮದುವೆ ಸಂದರ್ಭದಲ್ಲಿ ಗಂಡಿನ ಕಡೆಯವರು ಕೊಡುವ 'ಧಾರೆ ಸೀರೆ' ಮಹತ್ವವನ್ನು ಪಡೆದಿದೆ. ಅಂತೆಯೇ ಹೆಣ್ಣಿನ ಕಡೆಯವರೂ ಮದುಮಗನಿಗೆ ಮಾರ್ಯಾದೆಯ ಸೂಚಕವಾಗಿ ರೇಶ್ಮೆ ಪಂಚೆ, ಮತ್ತು ಶಾಲು ನೀಡುತ್ತಾರೆ. ಮದುವೆ ಮತ್ತು ಉಪನಯನದ ಸಂದರ್ಭದಲ್ಲಿ ಆಚರಣೆಯ ಭಾಗವಾಗಿ ಸಂಬಂಧಿಕರಿಗೆ ಸೀರೆ–ರವಿಕೆಕಣ, ವೇಷ್ಟಿ, ಶಾಲು, ಅಂಗಿ ಬಟ್ಟೆಯನ್ನು ಕೊಡುವ ಸಂಪ್ರದಾಯವಿದೆ. ಬಯಕೆಯಂತಹ ಸಂದರ್ಭದಲ್ಲಿ ತಲೆಕೂದಲನ್ನು ಶೃಂಗಾರ ಮಾಡಿ, ಜಡೆತುಂಬಾ ಮಲ್ಲಿಗೆ ಹೂವನ್ನು ಮುಡಿಸಿ ಸಾಕಷ್ಟು ಉಡುಗೆ ತೊಡುಗೆಗಳನ್ನು ತೊಡಿಸಿ ಶೃಂಗಾರ ಮಾಡುತ್ತಾರೆ. ಈ ಸಂದರ್ಭದಲ್ಲಿ 'ಜಲ್ಲಿಚಿನ್ನ' ಎಂಬ ವಿಶಿಷ್ಟ ಬಗೆಯ ಚಿನ್ನದ ಆಭರಣವನ್ನು ಜಡೆಗೆ ಜೋಡಣೆ ಮಾಡುತ್ತಾರೆ. ಸಾವಿನ ಬಗ್ಗೆ 7ನೇ ದಿವಸ ನಡೆಯುವ ಸ್ನಾನ ಕಾರ್ಯದಲ್ಲಿ ದಹನದ ದಿವಸ ಬಂದ ನೆಂಟರಿಷ್ಟರಿಗೆ ಬೈರಾಸು ಕೊಡುತ್ತಾರೆ. 13ನೇ ದಿವಸ ಶ್ರವಣ ಆರಾಧನೆಯಲ್ಲಿ ಭಾಗಿಯಾದವರಿಗೆ ಹೊಸ ಬಟ್ಟೆ ಶಾಲು ಕೊಡುವ ಕ್ರಮವಿದೆ. ಜೀವನಾವರ್ತನದ ಸಂತೋಷ, ಮತ್ತು ದುಃಖದ ಸಂದರ್ಭದಲ್ಲಿ ಹೊಸ ವಸ್ತ್ರ ದಾನ ಮಾಡುವ ಕ್ರಮವಿದೆ. ವಾರ್ಷಿಕ ಆವರ್ತನದಲ್ಲಿ ಮನೆಯವರ ಆರ್ಥಿಕ ಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಉಡುಗೆ–ತೊಡುಗೆಯನ್ನು ಹಂಚುವ ಕ್ರಮವಿದೆ.

ಭೌಗೋಳಿಕ ಕಾಲದ ಸ್ಥಿತಿಗೆ ಅನುಗುಣವಾಗಿ, ಕಡುಬೇಸಿಗೆಯಲ್ಲಿ ಆದಷ್ಟು ಕಡಿಮೆ ಬಟ್ಟೆ ಧರಿಸುತ್ತಾರೆ. ಸಾಮಾನ್ಯವಾಗಿ ಸೆಕೆಯಿಂದ ರಕ್ಷಣೆ ಪಡೆಯಲು ಹತ್ತಿ ಬಟ್ಟೆಯನ್ನು ಧರಿಸುತ್ತಾರೆ. ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತ ಹೋದ ಹಾಗೆ ಈಗೀಗ

ಶುಭಕಾರ್ಯಗಳಿಗೆ ಗಂಡಸರು ರೇಶ್ಮೆ ವೇಷ್ಟಿ ಶಾಲನ್ನು ಧರಿಸುತ್ತಾರೆ. ಮದುವೆ ಉಪನಯನ ಸೀಮಂತ ನಿಶ್ಚಯ ಮುಂತಾದ ಶುಭ ಕಾರ್ಯಗಳಿಗೆ ಹೆಂಗಸರು ರೇಶ್ಮೆ ಸೀರೆಯನ್ನು ಉಡುತ್ತಾರೆ. ಆರ್ಥಿಕ ಪರಿಸ್ಥಿತಿ, ಶಿಕ್ಷಣ, ಪೇಟೆಯ ಸಂಪರ್ಕ, ಮುಂತಾದ ಕಾರಣದಿಂದಾಗಿ ಉಡುಗೆ ತೊಡುಗೆಯಲ್ಲೂ ಈಗ ವ್ಯತ್ಯಾಸವಾಗುತ್ತಿದೆ. ಹುಡುಗಿಯರು ಸಹಾ ಪ್ಯಾಂಟು, ಚೂಡಿದಾರ, ಫ್ರಾಕ್, ಧರಿಸುತ್ತಾರೆ. ಅಂದರೆ ಹೊಸ ಸಂಸ್ಕೃತಿಗೆ ತಮ್ಮನ್ನು ತೆರೆದುಕೊಳ್ಳುತ್ತಿದ್ದಾರೆ. ಶಾಲೆ ಮೈಲಿಗೆ, ಸಂತೆ ಮೈಲಿಗೆ, ಸಂದರ್ಭದಲ್ಲಿ ಹಾಕಿಕೊಳ್ಳುವ ಬಟ್ಟೆ ಬರೆಗಳನ್ನು ಪ್ರತ್ಯೇಕವಾಗಿ ಬಳಸಿ, ಪ್ರತ್ಯೇಕವಾದ ಒಂದು ಕಡೆ ಇಡುತ್ತಿದ್ದ ಕಾಲವಿತ್ತು. ಈಗ ಅದು ಮಾಯವಾಗಿದೆ. ಈಗೀಗ ಸೌಲಭ್ಯ, ಅನುಕೂಲ, ಆರ್ಥಿಕ ಇತಿ–ಮಿತಿ, ಪ್ರತಿಷ್ಠೆಗಳಿಗೆ ಅವಲಂಬಿಸಿಕೊಂಡು ಉಡುಗೆ–ತೊಡುಗೆಗಳ ಬಳಕೆಯಿದೆ.

5.5.2 ವಿವಾಹ ಕಾಲದ ಉಡುಗೆ–ತೊಡುಗೆ

ಶಿವಳ್ಳಿ ಬ್ರಾಹ್ಮಣರಲ್ಲಿ ಶುಭ ಕಾರ್ಯಗಳಲ್ಲಿ ಅದರಲ್ಲೂ ವಿವಾಹ ಸಂದರ್ಭದಲ್ಲಿ ರೇಷ್ಮೆ ಬಟ್ಟೆಗಳನ್ನು ಉಡುವುದು ಈಗಿನ ಪದ್ಧತಿ. ಗಂಡಸರು ರೇಷ್ಮೆಯ ವೇಷ್ಟಿಯನ್ನು ಉಡುತ್ತಾರೆ. ರೇಷ್ಮೆ ಬಟ್ಟೆಯಲ್ಲಿ ಹೊಲಿಸಿದ ಅಂಗಿಯನ್ನು ಧರಿಸುತ್ತಾರೆ. ಮತ್ತು ಹೆಗಲಿಗೆ ಜರತಾರಿ ಶಾಲನ್ನು ಹಾಕಿಕೊಳ್ಳುತ್ತಾರೆ. ಹೊಸ ಪೀಳಿಗೆಯವರು ಕುರ್ತಾ, ಜುಬ್ಬಾ, ಪ್ಯಾಂಟ್ ಮುಂತಾದ ನವೀನ ರೀತಿಯ ಬಟ್ಟೆ ಬರೆಗಳನ್ನು ಧರಿಸುತ್ತಾರೆ. ಹತ್ತಿಯ ಬಟ್ಟೆ, ಟೆರಿಕಾಟ್, ಸಾದಾ ಬಟ್ಟೆಯನ್ನು ಧರಿಸುವವರೂ ಇದ್ದಾರೆ. ಅವರವರ ಅಭಿರುಚಿ ಮತ್ತು ಆರ್ಥಿಕ ಸ್ಥಿತಿಗೆ ಅನುಗುಣವಾಗಿ ಬಟ್ಟೆ ಬರೆಗಳನ್ನು ಧರಿಸುತ್ತಾರೆ. ಕುತ್ತಿಗೆಗೆ ಸರ, ಕೈಬೆರಳಿಗೆ ಉಂಗುರವನ್ನೂ ಧರಿಸುತ್ತಾರೆ. ನವರತ್ನ ಉಂಗುರವನ್ನು ಧರಿಸುವುದು ವಿಶೇಷ.

ಶಿವಳ್ಳಿ ಬ್ರಾಹ್ಮಣರ ಹೆಂಗಸರು ಶುಭಕಾರ್ಯಗಳಲ್ಲಿ ಅದರಲ್ಲೂ ಮದುವೆ ಸಮಾರಂಭಗಳಲ್ಲಿ ಉಡುಪಿಗೆ ಹೆಚ್ಚಿನ ಮಹತ್ವವನ್ನು ಕೊಡುತ್ತಾರೆ. ಹೆಚ್ಚಾಗಿ ರೇಷ್ಮೆ ಸೀರೆಯನ್ನು ಉಡುತ್ತಾರೆ. ಮದುವೆ ಮುಹೂರ್ತಕ್ಕೆ ಮುಂಚೆ ಒಂದು ಸೀರೆಯನ್ನು ಉಟ್ಟರೆ, ಮೂಹೂರ್ತಕ್ಕೆಂದೇ ರೇಷ್ಮೆ ಸೀರೆಯನ್ನು ಉಡುವ ಪದ್ಧತಿ ಶಿವಳ್ಳಿಯವರಲ್ಲಿ ಇದೆ. ಮದುವೆ ಸಮಾರಂಭಕ್ಕೆ ಉಡುವ ಸೀರೆ ಹೆಚ್ಚು ಬೆಲೆಯದ್ದು ಆಗಿರುತ್ತದೆ. ಅಂತೆಯೇ ಬಂಗಾರದ ಆಭರಣಗಳಲ್ಲಿ ವಿಶೇಷವಾಗಿ ಅರಿಮಣಿ, ಕೊತ್ತಂಬರಿ, ಅವಲಕ್ಕಿಸರ, ವಂಕಿ, ಸೊಂಟಪಟ್ಟಿ, ಕಾಫಿ ಬೀಜಾಕಾರದ ಸರ, ಮಲ್ಲಿಗೆ ಸರ, ಚಕ್ರಸರ, ಮಾವಿನ ಆಕಾರದ ಸರಗಳನ್ನು ಧರಿಸುತ್ತಾರೆ. ಶ್ರೀಮಂತ ವರ್ಗದವರು ವಜ್ರದಿಂದ ತಯಾರಿಸಿದ ಉಂಗುರ, ಕಿವಿಯ ಆಭರಣ, ಕುತ್ತಿಗೆಯ ಆಭರಣ, ಬಳೆಗಳನ್ನು ಧರಿಸುತ್ತಾರೆ.

5.5.3 ಪೂಜಾ ಕಾಲದಲ್ಲಿ

ಶಿವಳ್ಳಿ ಬ್ರಾಹ್ಮಣರು ಪೂಜೆ ಪುರಸ್ಕಾರಗಳಿಗೆ ಹೆಚ್ಚಿನ ಮಹತ್ವ ನೀಡುತ್ತಾರೆ. ಮಡಿಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ತುಳುನಾಡಿನ ಹೆಚ್ಚಿನ ದೇವಸ್ಥಾನದಲ್ಲಿ ಅರ್ಚಕ ವೃತ್ತಿಯನ್ನು ಮಾಡುವವರು ಶಿವಳ್ಳಿ ಬ್ರಾಹ್ಮಣರೇ ಆಗಿರುವುದರಿಂದ ದೇವಸ್ಥಾನದಲ್ಲಿ

ಸ್ನಾನ ಮಾಡಿ ಒದ್ದೆ ಬಟ್ಟೆಯಲ್ಲಿಯೇ ಇರುತ್ತಾರೆ. ಮನೆಗಳಲ್ಲಿ ನಿತ್ಯವೂ ಕುಲದೇವರಿಗೆ ಪೂಜೆ ಮಾಡುವಾಗ ತಣ್ಣೀರಿನಲ್ಲಿ ಸ್ನಾನ ಮಾಡಿಕೊಂಡು ಒದ್ದೆ ಬಟ್ಟೆಯಲ್ಲಿ ದೇವರ ಪೂಜೆಯನ್ನು ಮಾಡುತ್ತಾರೆ. (ಬಟ್ಟೆಯಲ್ಲಿರುವ ನೀರನ್ನು ಹಿಂಡಿಕೊಳ್ಳುತ್ತಾರೆ) ಕೆಲವು ಸಂದರ್ಭದಲ್ಲಿ ರೇಶ್ಮೆಯಿಂದ ತಯಾರಿಸಿದ ಬೇರೆ ಬೇರೆ ಬಣ್ಣದ ಬಟ್ಟೆಯನ್ನು ಉಡುವ ಪದ್ಧತಿಯೂ ಇದೆ. ರೇಶ್ಮೆ ಬಟ್ಟೆಗೆ ಮೈಲಿಗೆ ಇಲ್ಲ ಎಂಬ ಕಾರಣಕ್ಕಾಗಿ.

ಶಿವಳ್ಳಿ ಬ್ರಾಹ್ಮಣರಲ್ಲಿ ಹೆಂಗಸರೂ ಸಹಾ ವ್ರತ ಆಚರಣೆಯ ಸಂದರ್ಭದಲ್ಲಿ ಒದ್ದೆ ವಸ್ತ್ರವನ್ನು ಉಡುತ್ತಾರೆ. ಪೂಜೆ ಜರುಗುವ ಸಂದರ್ಭದಲ್ಲಿ ರೇಶ್ಮೆಯಿಂದ ತಯಾರಿಸಿದ ಸೀರೆಯನ್ನು ಉಡುತ್ತಾರೆ. ಪೂಜೆಗಾಗಿಯೇ ಪ್ರತ್ಯೇಕವಾದ ಬಟ್ಟೆ ಕೆಲವರ ಮನೆಯಲ್ಲಿ ಇರುತ್ತದೆ. ಪೂಜೆ ಸಂದರ್ಭದಲ್ಲಿ ಮಾತ್ರ ಅದನ್ನು ಉಡುತ್ತಾರೆ. ವಯಸ್ಸಾದ ವಿಧವೆಯರು ನಾರಿನ ಕೆಂಪು ಸೀರೆಯನ್ನೇ ಪ್ರಮುಖ ಮಡಿ ಬಟ್ಟೆಯಾಗಿ ಉಡುತ್ತಾರೆ. ಅದೂ ಅದಲ್ಲದೆ ವೃದ್ಧ ವಿಧವೆಯವರು ಏಕ ವಸ್ತ್ರಧಾರಿಗಳಾಗಿರುತ್ತಾರೆ. ಅವರು ಲಂಗ ಮತ್ತು ರವಕೆಯನ್ನು ಧರಿಸುವ ಪದ್ಧತಿ ಇಲ್ಲ.

ವರ್ತಮಾನದಲ್ಲಿ ಶಿವಳ್ಳಿ ಬ್ರಾಹ್ಮಣರಲ್ಲಿ ಉಳಿದವರಂತೆ ಉಡುಗೆ ತೊಡುಗೆಗಳಲ್ಲಿ ಬದಲಾವಣೆಯಾಗಿರುವುದನ್ನು ಕಾಣುತ್ತೇವೆ.

5.6 ಶಿವಳ್ಳಿ ಬ್ರಾಹ್ಮಣರ ವೈಶಿಷ್ಟ್ಯಗಳು

ಜನಾಂಗವಾಗಲೀ, ಪಂಗಡವಾಗಲೀ, ಜಾತಿಯಾಗಲೀ ತಮ್ಮ ಅನನ್ಯತೆ ಮತ್ತು ವೈಶಿಷ್ಟ್ಯವನ್ನು ಹಲವು ರೀತಿಯಲ್ಲಿ ಅಭಿವ್ಯಕ್ತಗೊಳಿಸುತ್ತವೆ.

ಜೀವನಶೈಲಿ, ಉಡುಗೆ-ತೊಡುಗೆ, ಆಚಾರ ವಿಚಾರಗಳಲ್ಲಿ ಕಾಲಕ್ಕೆ ಸರಿಹೊಂದುವಂತೆ ಸ್ವಲ್ಪಮಟ್ಟಿಗೆ ಬದಲಾವಣೆ ಮಾಡಿಕೊಂಡರೂ ತಮ್ಮದೇ ಆದ ವೈಶಿಷ್ಟವನ್ನು ಹೊಂದಿರುವುದನ್ನು ಗಮನಿಸಬಹುದು. ಶಿವಳ್ಳಿಯವರು ನಡೆನುಡಿಗಳಲ್ಲಿ, ಸಂಸ್ಕೃತಿಯಲ್ಲಿ, ಆಚಾರ ವಿಚಾರಗಳಲ್ಲಿ, ಆಚರಣೆಯಲ್ಲಿ, ನಿತ್ಯಕರ್ಮದಲ್ಲಿ ತಮ್ಮದೇ ಆದ ವಿಶೇಷತೆಯನ್ನು ಹೊಂದಿದ್ದಾರೆ.

1. ನಗರೀಕರಣ ಮತ್ತು ಅನ್ಯವರ್ಗದ ಪ್ರಭಾವವಿದ್ದರೂ ಶಿವಳ್ಳಿ ಬ್ರಾಹ್ಮಣರು ಎಷ್ಟೇ ವಿದ್ಯಾಭ್ಯಾಸ ಕಲಿತರೂ ವೈದಿಕವಿಧಿ, ಸಂಪ್ರದಾಯ, ಆಚರಣೆ, ಧಾರ್ಮಿಕ ಕಟ್ಟುಪಾಡು, ಜಪ-ತಪ ಪೂಜೆ ಪುರಸ್ಕಾರ, ಅತಿಥಿ ಸತ್ಕಾರ ಮುಂತಾದವುಗಳನ್ನು ಸಾಕಷ್ಟು ಉಳಿಸಿಕೊಂಡಿದ್ದಾರೆ. ದೇವರ ಬಗ್ಗೆ ಭಕ್ತಿ, ಶ್ರದ್ಧೆ ಇರುವುದು ಕಂಡುಬರುತ್ತದೆ.
2. ವೈದಿಕ ಆಚರಣೆಯ ಜೊತೆಗೆ ಜಾನಪದೀಯ ಆಚರಣೆಗಳಾದ ಭೂತಾರಾಧನೆಗೂ ವಿಶೇಷವಾದ ಮಹತ್ವವನ್ನು ಕೊಡುತ್ತಾರೆ. ಕೋಲ, ತಂಬಿಲ, ನಾಗನಿಗೆ ತನು ಕೊಡುವುದನ್ನು ಪ್ರತೀ ವರ್ಷ ತಪ್ಪಿಸುವುದಿಲ್ಲ. ಶ್ರದ್ಧೆಯಿಂದ ತಮ್ಮನ್ನು ಅದರಲ್ಲಿ ತೊಡಗಿಸಿಕೊಳ್ಳುತ್ತಾರೆ ಹಾಗೂ ಆಚರಣೆ ಮಾಡುತ್ತಾರೆ.
3. ಗೋತ್ರ ಪ್ರವರ್ತಕ ಋಷಿಗಳನ್ನು ಈಗಲೂ ಅಭಿವಾದನೆಯ ಮೂಲಕ ಮರೆಯದೇ ಸ್ಮರಿಸುತ್ತಾರೆ. ತಮ್ಮ ಮೂಲ ಪುರುಷರ ಪಾವಿತ್ರ್ಯತೆಯನ್ನು ಉಳಿಸಲು 'ಸಗೋತ್ರ' ವಿವಾಹವನ್ನು ಈಗಲೂ ಒಪ್ಪುವುದಿಲ್ಲ.

4. ಶಿವಳ್ಳಿ ಬ್ರಾಹ್ಮಣರ ಸಾತ್ವಿಕತೆಗೆ ಧಾರ್ಮಿಕ ಆಚರಣೆಗಳು ಕಾರಣವಾಗಿರುವಂತೆಯೇ ಸಾತ್ವಿಕ ಆಹಾರ ಕ್ರಮವೂ ಕಾರಣವಾಗಿದೆ. ಇವರಲ್ಲಿ ನಯ, ವಿನಯ, ಸೌಜನ್ಯ, ನೀತಿ, ಧರ್ಮ, ಮಾನವೀಯತೆ ಮುಂತಾದ ಮೌಲ್ಯಗಳೂ ಇವೆ.
5. ಸಾಮಾನ್ಯ ತುಳು ಜನರಿಂದ ಭಿನ್ನವಾದ ತುಳು ಇವರದ್ದಾಗಿದೆ. ಸಂಸ್ಕೃತ ಶಬ್ದಗಳ ಪ್ರಯೋಗ ಹೆಚ್ಚಾಗಿ ಕಂಡು ಬರುತ್ತದೆ. ಆದರೆ ತುಳು ಜನರೊಂದಿಗೆ ಅವರ ಭಾಷೆಯಲ್ಲಿ ಮಾತನಾಡುವ ಸಾಮರ್ಥ್ಯವನ್ನು ಹೊಂದಿದ್ದಾರೆ.
6. ಬದುಕಿನಲ್ಲಿ ಬಹು ಪ್ರಾಮುಖ್ಯವಾದ ಧಾರ್ಮಿಕ ವಿಧಿ, ಸಂಸ್ಕಾರಗಳನ್ನು ಆಧುನಿಕ ರೀತಿಗೆ ಹೊಂದಿಕೊಳ್ಳುವಷ್ಟರ ಮಟ್ಟಿಗೆ ಆಚರಣೆಯಲ್ಲಿ ಅಳವಡಿಸಿಕೊಂಡಿದ್ದಾರೆ. ನಾಮಕರಣ, ಸೀಮಂತ, ಉಪನಯನ, ಮದುವೆ, ಅಂತ್ಯಸಂಸ್ಕಾರ ಇವು ಈಗಲೂ ಯಥಾವತ್ತಾಗಿ ಉಳಿದುಕೊಂಡಿದೆ.
7. ಹಬ್ಬಹರಿದಿನಗಳು, ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳು, ಶ್ರದ್ಧೆ ಮತ್ತು ಭಕ್ತಿಯ ಪ್ರತೀಕವಾಗಿ ಉಳಿದುಕೊಂಡು ಬಂದಿದೆ.
8. ಸಾಂಪ್ರದಾಯಿಕ ಉಡುಗೆ-ತೊಡುಗೆಗಳು ಈಗಲೂ ಕೆಲವು ಕುಟುಂಬಗಳಲ್ಲಿ ಬಳಕೆಯಲ್ಲಿದೆ. ಇಂದೂ ಅಂಗಿ ಹಾಕದ ಶ್ರೋತ್ರಿಯರು ಇದ್ದಾರೆ.
   ಪ್ರತೀ ವ್ಯಕ್ತಿಯಲ್ಲೂ ಉಡುಗೆ-ತೊಡುಗೆಗಳ ವಿಚಾರದಲ್ಲಿ ವೈಯಕ್ತಿಕತೆ ಪ್ರಮುಖವಾಗಿದ್ದು ಸೌಂದರ್ಯೋಪಾಸನೆಯ ಕುರುಹಾಗಿದೆ.
9. ಶಿವಳ್ಳಿ ಬ್ರಾಹ್ಮಣರು ಹೆಚ್ಚಾಗಿ ಪರಮತ ಸಹಿಷ್ಣುಗಳು. ಬ್ರಾಹ್ಮಣ ಪಂಗಡಗಳ ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳುವುದಲ್ಲದೆ ಅನ್ಯ ಜಾತಿಯವರೊಂದಿಗೂ ಸೌಹಾರ್ದತೆಯಿಂದ ವರ್ತಿಸುತ್ತಾರೆ. ತುಳುನಾಡಿನಲ್ಲಿ ಬಂಟ, ಗೌಡ ಮುಂತಾದ ಜಾತಿಯವರ ಮನೆಯಲ್ಲಿ ಆಗುವ ಪೂಜೆಗಳನ್ನು ಹೆಚ್ಚಾಗಿ ಶಿವಳ್ಳಿ ಬ್ರಾಹ್ಮಣರೇ ಮಾಡುತ್ತಾರೆ.
10. ಶಿವಳ್ಳಿಯವರು ಶಿವನನ್ನೂ ಆರಾಧಿಸುತ್ತಾರೆ, ವಿಷ್ಣುವನ್ನೂ ಆರಾಧಿಸುತ್ತಾರೆ. ಭಸ್ಮ, ಕುಂಕುಮ, ಗಂಧ ಮುಂತಾದವುಗಳಲ್ಲಿ ಭೇದವನ್ನು ಕಾಣುವುದಿಲ್ಲ.
11. ಮಧ್ಯಾಹ್ನದ ಹೊತ್ತು ಯಾರೇ ಬಂದರೂ ಅನ್ನ ಬಡಿಸುವ ಪದ್ಧತಿ ಇವರಲ್ಲಿ ಹೆಚ್ಚಾಗಿದೆ. ಅತಿಥಿಸತ್ಕಾರಕ್ಕೆ ವಿಶೇಷವಾದ ಮಹತ್ವವನ್ನು ನೀಡುತ್ತಾರೆ 'ಅತಿಥಿ ದೇವೋಭವ' ಎಂದು ತಿಳಿದಿದ್ದಾರೆ.
12. ಮದುವೆ ಸಂದರ್ಭದಲ್ಲಿ ವರದಕ್ಷಿಣೆಯ ಪಿಡುಗು ಶಿವಳ್ಳಿ ಬ್ರಾಹ್ಮಣರಲ್ಲಿ ಸಾಮಾನ್ಯವಾಗಿ ಇಲ್ಲ. ಆದರೆ ಅತಿಥಿಸತ್ಕಾರ, ಊಟೋಪಚಾರಕ್ಕೆ ಹೆಚ್ಚಿನ ಮಹತ್ವವನ್ನು ಕೊಡುತ್ತಾರೆ.
13. ಶ್ರೀಮಂತಿಕೆಗಿಂತ ಹೆಚ್ಚಾಗಿ ಸಮಾಜದಲ್ಲಿ ಅವರಿಗೆ ಸಿಕ್ಕುವ ಗೌರವಕ್ಕೆ ಹೆಚ್ಚು ಮಹತ್ವ ನೀಡುತ್ತಾರೆ.
14. ಮದುವೆ ಸಂದರ್ಭದಲ್ಲಿ ಹುಡುಗಿ ನೋಡಲು ಹೋದಾಗ ಹುಡುಗಿಯ ತಂದೆಯ ಆರ್ಥಿಕ ಸ್ಥಿತಿಗಿಂತ ಹೆಚ್ಚಾಗಿ ಹುಡುಗಿಯ ತಂದೆಯ ಗುಣ, ಸಂಸ್ಕಾರ, ಸಮಾಜದಲ್ಲಿ ಅವರಿಗಿರುವ ಸ್ಥಾನಮಾನ, ಮುಂತಾದವುಗಳನ್ನು ಗಮನಿಸುತ್ತಾರೆ.

15. ತಮ್ಮತನವನ್ನು ಉಳಿಸಿಕೊಂಡು ದಕ್ಷಿಣಕನ್ನಡದ ತುಳು ಜನರ ಸಂಸ್ಕೃತಿಗೆ ಒಗ್ಗಿಕೊಂಡು, ಅವರ ಭಾಷೆಯನ್ನು ಸ್ವೀಕಾರಮಾಡಿಕೊಂಡು ಸಾಮರಸ್ಯದಿಂದ ಬಾಳುತ್ತಿದ್ದಾರೆ. ಅಂತೆಯೇ ತುಳುವರಿಗೆ ಹೆಚ್ಚಿನ ಪ್ರೀತಿ, ಗೌರವ, ವಿಶ್ವಾಸ ಶಿವಳ್ಳಿಯವರ ಮೇಲಿದೆ.
16. ತುಳುಜನರ ಆರ್ಥಿಕ ಸಾಮರ್ಥ್ಯಕ್ಕೆ ಅನುಗುಣವಾಗಿ ಧಾರ್ಮಿಕ ವಿಧಿವಿಧಾನಗಳನ್ನು ಸಮರ್ಪಕವಾಗಿ ಶ್ರದ್ಧೆಯಿಂದ ಮಾಡುವುದರಿಂದ ಜನರ ಆದರಕ್ಕೆ ಪಾತ್ರರಾಗಿದ್ದಾರೆ.
17. ಶಿವಳ್ಳಿ ಬ್ರಾಹ್ಮಣರು ದೇವರ ಆರಾಧಕರೂ, ದೈವಾರಾಧಕರೂ ಆಗಿರುವುದರಿಂದ ಮತ್ತು ವೈದಿಕವಿಧಿಗಳನ್ನು ಹೆಚ್ಚಾಗಿ ಅವರೇ ಮಾಡುತ್ತಿರುವುದರಿಂದ ತುಳು ಜನರಿಂದ ಹೆಚ್ಚಿನ ಗೌರವ, ಮರ್ಯಾದೆಯನ್ನು ಗಳಿಸಿದ್ದಾರೆ.
18. ಅಣ್ಣನ ಮಗಳನ್ನು ತಂಗಿಯ ಮಗನಿಗೆ ಮದುವೆ ಮಾಡುವ ಪದ್ಧತಿ ಇದೆ. ಆದರೆ ಅಣ್ಣನ ಮಗ ತಂಗಿಯ ಮಗಳನ್ನು ಮದುವೆಯಾಗುವ ಕ್ರಮವಿಲ್ಲ. ಕಾರಣ ತಂಗಿಯನ್ನು ಒಂದು ಮನೆಗೆ ಮದುವೆ ಮಾಡಿಕೊಟ್ಟ ಮೇಲೆ ತಂಗಿಯ ಮನೆಯಿಂದ ಅಣ್ಣನ ಮನೆಗೆ ಯಾವುದನ್ನು ತರಬಾರದೆಂಬ ನಂಬಿಕೆಯಿದೆ.
19. ದಾನ, ಧರ್ಮ ಮಾಡುವುದು ತಮ್ಮ ಸಂಸ್ಕೃತಿಯ ಅಂಶವೆಂದು ಭಾವಿಸಿ ಗೋದಾನ, ಭೂದಾನ ಮಾಡುತ್ತಿರುವವರು ಇದ್ದಾರೆ. ಮನೆಯಜಮಾನ ಸತ್ತಾಗ, ಬದುಕಿನಲ್ಲಿ ಅರುವತ್ತು ವರ್ಷ, ಎಪ್ಪತ್ತು ವರ್ಷ ಆದಾಗ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಿ ಸ್ವಲ್ಪ ಭೂಮಿಯನ್ನು ದಾನಮಾಡುವ ಪದ್ದತಿ ಈಗಲೂ ಇದೆ.
20. ಭೂಸುಧಾರಣೆ ಕಾಯಿದೆ ಬಂದಾಗ ಭೂಮಿಯನ್ನು ಹಲವರು ಕಳೆದುಕೊಂಡರೂ ಜೀವನ ನಿರ್ವಹಣೆಗೆ ಬೇರೆ ಬೇರೆ ಊರುಗಳಿಗೆ ಹೋಗಿ ಹೋಟೇಲು ಉದ್ಯಮವನ್ನು ಪ್ರಾರಂಭಿಸಿ ಹಣ ಸಂಪಾದನೆಯೊಂದಿಗೆ ಕೀರ್ತಿಯನ್ನು, ಸ್ಥಾನಮಾನವನ್ನು ಗಳಿಸಿದವರು ಇದ್ದಾರೆ. ಅಂತೆಯೇ ಮೀಸಲಾತಿ ಸರಕಾರಿ ಕಾನೂನು ಬಂದಾಗ ಸರ್ಕಾರಿ ಉದ್ಯೋಗಸಿಗದೆ ಇರುವುದರಿಂದ ಅಧ್ಯಾಪಕ ಸರಕಾರಿ ವೃತ್ತಿಯಿಂದ ವಿಮುಖರಾಗಿ ವೃತ್ತಿಪರ ಶಿಕ್ಷಣವನ್ನು ಪಡೆದು ಉದ್ಯೋಗಗಳಿಸಿದವರು ಹಲವರಿದ್ದಾರೆ. ಹೊರರಾಷ್ಟ್ರಗಳಲ್ಲೂ ತಮ್ಮ ಬುದ್ಧಿವಂತಿಕೆ ಮತ್ತು ಕಾರ್ಯದಕ್ಷತೆಯಿಂದ ಉದ್ಯೋಗದಲ್ಲಿ ಇದ್ದಾರೆ.

5.7 ಶಿವಳ್ಳಿ ಬ್ರಾಹ್ಮಣರಲ್ಲಿಯ ನಂಬಿಕೆಗಳು

ಕುಟುಂಬ ವ್ಯವಸ್ಥೆಯ ಭದ್ರ ಭುನಾದಿಯ ಮೇಲೆ ನಮ್ಮ ಜೀವನ ನಡೆಯುತ್ತಾ ಬರುತ್ತಿದೆ. ಅಜ್ಜ–ತಂದೆ ಮಕ್ಕಳು ಒಟ್ಟಾಗಿ ಬಾಳುವ ಪದ್ಧತಿ ಭಾರತೀಯ ಸಂಸ್ಕೃತಿಯಲ್ಲಿ ಇದೆ. ದಿನನಿತ್ಯದ ಜೀವನದಲ್ಲಿ ಕೆಲವು ಕಟ್ಟುಪಾಡುಗಳನ್ನು ಪಾಲಿಸುವ ಅನಿವಾರ್ಯತೆಯೂ ಇದೆ. ಅದಕ್ಕೆ ಧಾರ್ಮಿಕ, ಆಧ್ಯಾತ್ಮಿಕ, ವೈಜ್ಞಾನಿಕ, ವೈಚಾರಿಕತೆ ನೆಲಗಟ್ಟಿನಲ್ಲಿ ಸ್ಪರ್ಷವನ್ನು ನೀಡಿ ಪಾಲಿಸಿಕೊಂಡು ಬರುತ್ತಿದ್ದಾರೆ. ಅಂತೆಯೇ ಶಿವಳ್ಳಿ ಬ್ರಾಹ್ಮಣರಲ್ಲಿಯೂ ಕೆಲವು ಕಟ್ಟುಪಾಡುಗಳಿವೆ.

1. ಮುಸ್ಸಂಜೆಯ ಹೊತ್ತು ನಿದ್ದೆ ಮಾಡಬಾರದು.
2. ರಾತ್ರಿ ಹೊತ್ತು ಕಸ ಗುಡಿಸಬಾರದು.
3. ರಾತ್ರಿ ಬಟ್ಟೆ ಒಗೆಯಬಾರದು. ವ್ಯಕ್ತಿ ಸತ್ತಮನೆಯಲ್ಲಿ ಮಾತ್ರ ಬಟ್ಟೆ ಒಗೆಯುವುದು.
4. ತುಳಸಿ ಗಿಡವನ್ನು ಮಧ್ಯಾಹ್ನದ ಅನಂತರ ಮತ್ತು ರಾತ್ರಿ ಕೀಳಬಾರದು.
5. ಮಧ್ಯಾಹ್ನದ ಅನಂತರ ತಲೆಕೂದಲು, ಗಡ್ಡ, ಉಗುರು ತೆಗೆಸಬಾರದು.
6. ಅಮವಾಸ್ಯೆಯ ದಿವಸ, ಹುಟ್ಟಿದ ದಿನ ತಲೆಕೂದಲು ತೆಗೆಯಬಾರದು.
7. ಖಾಲಿ ಬಟ್ಟಲಿಗೆ ಅನ್ನವನ್ನು ಮೊದಲು ಹಾಕಬಾರದು.
8. ದೇವರ ದೀಪಕ್ಕೆ ಬತ್ತಿಹಾಕಿದಾಗ ಕೈಗೆ ಎಣ್ಣೆಯಾದರೆ ತಲೆಗೆ ಒರೆಸಿಕೊಳ್ಳಬಾರದು.
9. ಹಲಸಿನ ಕಟ್ಟಿಗೆಯನ್ನು ಅಡುಗೆಗೆ ಬಳಸಬಾರದು.
10. ಮನೆಯ ಎದುರಿನಲ್ಲಿ ಹಿಡಿಸೂಡಿ ಇಡಬಾರದು.
11. ನಾಣ್ಯದಲ್ಲಿ ಆಟ ಆಡಬಾರದು.
12. ಒಬ್ಬರು–ಇನ್ನೊಬ್ಬರಿಗೆ ಕೈಯಲ್ಲಿ ದೀಪಕೊಡಬಾರದು.
13. ಹೊಸ್ತಿಲ ಹೊರಗೆ– ಒಳಗೆ ನಿಂತುಕೊಂಡು ಯಾವುದನ್ನು ಕೊಡಬಾರದು.
14. ಮಲಗುವಾಗ ಪೂರ್ವ–ಪಶ್ಚಿಮ, ಅಥವಾ ಪಶ್ಚಿಮ ಪೂರ್ವವಾಗಿ ಮಲಗಬೇಕು.
15. ಹಾಳಾದ ಗಡಿಯಾರ, ಒಡೆದ ಕನ್ನಡಿ ಮನೆಯ ಒಳಗೆ ಇಡಬಾರದು.
16. ಸುಣ್ಣ ತುಂಬಿಸುವ ಕರಡಿಕೆಯನ್ನು ಪೂರ್ತಿಯಾಗಿ ಸ್ವಚ್ಛಗೊಳಿಸಬಾರದು.
17. ಹಿಡಿಸೂಡಿಯನ್ನು ಕೈಯಲ್ಲಿ ಕೊಡಬಾರದು. ತಲೆಕೆಳಗಾಗಿ ಇಡಬಾರದು.
18. ಖಾಲಿ ಬಟ್ಟಲನ್ನು ಬಡಿಯಬಾರದು.
19. ಕಾಲು ತೊಳೆದು ತಂಬಿಗೆಯ ನೀರನ್ನು ತಂಬಿಗೆಯಲ್ಲಿ ಉಳಿಸಬಾರದು.
20. ಊಟ ಮಾಡುವಾಗ ಎಂಜಲುಕೈಯನ್ನು ಪಾತ್ರೆಯ ಒಳಗೆ ಹಾಕಿ ಅನ್ನ, ಪದಾರ್ಥವನ್ನು ಹಾಕಿಕೊಳ್ಳಬಾರದು.
21. ದೇವಸ್ಥಾನಕ್ಕೆ ಹೋಗುವ ಮುಂಚೆ ಅಕ್ಕಿಯಿಂದ ಮಾಡಿದ ಯಾವುದೇ ತಿಂಡಿಯನ್ನು ಉಪಯೋಗಿಸಬಾರದು.
22. ಕೈ ಕಾಲು ತೊಳೆಯುವಾಗ ಕಾಲು ಪೂರ್ತಿಯಾಗಿ ಒದ್ದೆಯಾಗಬೇಕು.
23. ಮುತ್ತೈದೆ ಯಾವಾಗಲೂ ಕುಂಕುಮವನ್ನು ಧರಿಸಬೇಕು.
24. ತಲೆಕೂದಲನ್ನು ಹೆಂಗಸರು ಬಿಟ್ಟುಕೊಂಡು ಇರಬಾರದು.
25. ಮಕ್ಕಳು, ಹೆಣ್ಣುಮಕ್ಕಳು ಕಾಲನ್ನು ಅಲ್ಲಾಡಿಸಿಕೊಂಡು ಕುಳಿತುಕೊಳ್ಳಬಾರದು.

26. ಬೆಳ್ಳುಳ್ಳಿ ನೀರುಳ್ಳಿಯನ್ನು ಷಷ್ಠಿ, ಏಕಾದಶಿ, ಹಬ್ಬದ ದಿವಸ ಬಳಸಬಾರದು.

27. ಮನೆಗೆ ಹಿಂಬದಿಯ ಬಾಗಿಲಿನಿಂದ ಪ್ರವೇಶ ಮಾಡಬಾರದು.

28. ಕುಳಿತುಕೊಂಡೇ ಪಾನಿಯ ಕುಡಿಯಬೇಕು ಮತ್ತು ಊಟಮಾಡಬೇಕು.

29. ಊಟದ ಎಲೆಯ ತುದಿ ಎಡಭಾಗಕ್ಕೆ ಇರಬೇಕು.

30. ಮುತ್ತೈದೆಯರು ಮನೆಗೆ ಬಂದು ನಿರ್ಗಮಿಸುವಾಗ ಆಕೆಗೆ ಕುಂಕುಮ ಹಚ್ಚಿ ರವಕೆ ಕಣಕೊಟ್ಟು ಕಳುಹಿಸಿಕೊಡಬೇಕು.

31. ತುಳಸಿಗಿಡವನ್ನು ಕೀಳುವಾಗ, ಎಲೆ ತೆಗೆಯುವಾಗ ಸ್ನಾನಮಾಡಿಯೇ ತೆಗೆಯಬೇಕು.

32. ಹೋಮಕ್ಕೆ ಅಗ್ನಿಯನ್ನು ಮನೆಯ ಗೃಹಿಣಿಯೇ ತರಬೇಕು.

33. ಊಟವಾದ ಮೇಲೆ ಸೆಗಣಿ ಹಾಕಿಯೇ ಸಾರಿಸಬೇಕು.

34. ಎರಡನೆಯ ಪಂಕ್ತಿಯಲ್ಲಿ ಕೂತ ಜನರ ಊಟವಾದ ಮೇಲೆಯೇ ಸಮಾರಂಭಕ್ಕೆ ಬಂದವರು ಹೋಗಬೇಕು.

35. ಅನ್ನಕ್ಕೆ ಒಲೆಯಲ್ಲಿ ಅಕ್ಕಿ ಇಡುವಾಗ 2 ಸಾರಿ ತೊಳೆದು ಇಡಬಾರದು. ಮೂರು ಸಾರಿ ತೊಳೆಯಬೇಕು. ಶ್ರಾದ್ದ ಮಾಡುವಾಗ ಮಾತ್ರ 2 ಸಾರಿ ತೊಳೆದು ಅಕ್ಕಿಯನ್ನು ಪಿಂಡಮಾಡಲು ಬೇಯಿಸುತ್ತಾರೆ.

36. ಊಟಕ್ಕೆ ಕುಳಿತನಂತರ ನಡುವಿನಲ್ಲಿ ಏಳಬಾರದು.

37. ಊಟದ ಎಲೆಗೆ ಮೊದಲು ತುಪ್ಪವನ್ನು ಬಡಿಸಬೇಕು.

38. ಉಪ್ಪನ್ನು ಎಲೆಯ ಎಡ ಬದಿಗೇ ಬಡಿಸಬೇಕು. ಊಟ ಮಾಡಿದ ಅನಂತರ ಎಲೆಯಲ್ಲಿ ಉಪ್ಪು ಉಳಿದರೆ ಅದಕ್ಕೆ ನೀರು ಹಾಕಬೇಕು.

39. ಮನೆಯಿಂದ ಹೊರಗೆ ಬಂದ ಅನಂತರ ಯಾವುದೇ ಕಾರಣಕ್ಕೆ ಪುನಃ ಮನೆಗೆ ಹೋಗಬೇಕಾದ ಸಂದರ್ಭ ಬಂದರೆ ಮನೆಯಲ್ಲಿ ಸ್ವಲ್ಪಹೊತ್ತು ಕುಳಿತು ಹೊರಗೆ ಹೋಗಬೇಕು.

ಅಧ್ಯಾಯ ಆರು –ಶಿವಳ್ಳಿ ಬ್ರಾಹ್ಮಣರು, ಉಡುಪಿ ಮಠಗಳು ಮತ್ತು ಕಾರ್ಯಗಳು

ಉಡುಪಿ ಮಠಗಳಿಗೂ ಶಿವಳ್ಳಿಯವರಿಗೂ ಅವಿನಾಭಾವ ಸಂಬಂಧ. ಶಿವಳ್ಳಿಯವರೇ ಆದ ದ್ವೈತ ಮತ ಪ್ರವರ್ತಕ ಶ್ರೀ ಮಧ್ವಾಚಾರ್ಯರು ಶ್ರೀಕೃಷ್ಣ ಪೂಜಾನುಕಾಲಕ್ಕಾಗಿ ಎಂಟು ಮಂದಿ ಯತಿಶಿಷ್ಯರನ್ನು ನೇಮಿಸಿದರು. ಎರಡು ತಿಂಗಳ ಪರ್ಯಾಯ ಕ್ರಮದಲ್ಲಿ ಶ್ರೀಕೃಷ್ಣ ಪೂಜಾ ಕೈಂಕರ್ಯಕ್ಕಾಗಿ ನಿಯಮಿಸಲ್ಪಟ್ಟ ಈ ಎಂಟು ಯತಿಗಳಿಗೆ ವಾಸ್ತವ್ಯಕ್ಕಾಗಿ ಎಂಟು ಮಠಗಳ ಸ್ಥಾಪನೆಯಾಯಿತು. ಶ್ರೀ ಕೃಷ್ಣ ಪೂಜಾ ಕೈಂಕರ್ಯದ ಅವಧಿಯ ಹೊರತು ಉಳಿದ ಸಮಯವನ್ನು ಈ ಯತಿಗಳು ದ್ವೈತ ಮತ ಪ್ರಚಾರಕ್ಕೆ ವಿನಿಯೋಗಿಸಬೇಕಾದುದು ಈ ಮಠಗಳ ಸ್ಥಾಪನೆಯ ಮತ್ತೊಂದು ಬಹು ಮುಖ್ಯ ಉದ್ದೇಶ. ಅದಕ್ಕಾಗಿ ತುಳುನಾಡಿನ (ಈಗಿನ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ) ಬೇರೆ ಬೇರೆ ಊರುಗಳಲ್ಲಿ ಒಟ್ಟು ಏಳು ಹಾಗೂ ಉತ್ತರ ಕನ್ನಡದ ಸೋಂದಾದಲ್ಲಿ ಒಂದು. ಹೀಗೆ 8 ಮಠವನ್ನು ಸ್ಥಾಪಿಸಿದರು. ಮೂಲತಃ ಎರಡು ತಿಂಗಳ ಅವಧಿಯ ಪರ್ಯಾಯ ವ್ಯವಸ್ಥೆಯಲ್ಲಿ ಈ ಎರಡು ಕೆಲಸಗಳನ್ನು ಶೀಘ್ರಗತಿಯಲ್ಲಿ ಮಾಡುವುದು ಕಷ್ಟ ಸಾಧ್ಯವಾದ ಕಾರಣ ಅನಂತರ ಸೋದೆಮಠದ ಯತಿಗಳಾಗಿ ಬಂದ ಶ್ರೀ ವಾದಿರಾಜರು ಈ ಅವಧಿಯನ್ನು ಎರಡು ವರ್ಷಕ್ಕೆ ವಿಸ್ತರಿಸಿದರು. ಒಂದು ಮಠ ಎರಡು ವರ್ಷಗಳ ಕಾಲ ಶ್ರೀಕೃಷ್ಣ ಮಠದ ಪರಿಸರದಲ್ಲೇ ಇದ್ದು ಪೂಜಾ ಕೈಂಕರ್ಯವನ್ನು ಕೈಗೊಳ್ಳತಕ್ಕದ್ದು. ಉಳಿದ 6 ಮಠಗಳು ಈ ಅವಧಿಯಲ್ಲಿ ಮತಪ್ರಚಾರ, ಧರ್ಮಬೋಧನೆ, ಧಾರ್ಮಿಕ ಮಾರ್ಗದರ್ಶನಾದಿ ಕಾರ್ಯಗಳಲ್ಲಿ ನಿರತವಾಗಿದ್ದರೆ ಉಳಿದ ಒಂದು ಮಠ ತನ್ನ ಮುಂದಿನ ಪರ್ಯಾಯಾವಧಿಗೆ ಬೇಕಾದ ಪೂರ್ವಸಿದ್ಧತೆ, ಸಂಪನ್ಮೂಲ ಸಂಗ್ರಹಾದಿಗಳಲ್ಲಿ ನಿರತವಾಗಿರುತ್ತದೆ.

ಈ ಅಷ್ಟಮಠಗಳಲ್ಲಿ ಯತಿಗಳಾಗಿ ನೇಮಿಸಲ್ಪಡುವವರು ಶಿವಳ್ಳಿ ಬ್ರಾಹ್ಮಣರು ಮಾತ್ರ. ಪ್ರತಿಯೊಂದು ಮಠಕ್ಕೂ ತುಳುನಾಡಿನ ಒಂದೊಂದು ಕಡೆ ಮೂಲ ಮಠಗಳಿವೆ...... ಆಯಾ ಊರಿನ ಶಿವಳ್ಳಿಯವರು ಆಯಾ ಮಠದ ಶಿಷ್ಯರಾಗಿ ಸೇರಿಕೊಳ್ಳುತ್ತಿದ್ದರು. ಈ ಮಠಗಳ ಸ್ಥಾಪಕರು, ಯತಿಗಳು ಶಿವಳ್ಳಿಯವರೇ ಆದರೂ ಶಿಷ್ಯಪರಂಪರೆಗೆ ಈ ಮಿತಿಯಿಲ್ಲ. ಶಿವಳ್ಳಿ ಬ್ರಾಹ್ಮಣರಲ್ಲದ, ಎಲ್ಲಾ ವರ್ಗದವರು ಒಂದಲ್ಲೊಂದು ಮಠದ ಶಿಷ್ಯರಾಗಿಯೋ ಭಕ್ತರಾಗಿಯೋ ಅನುಯಾಯಿಯಾಗಿಯೋ ನಡೆದುಕೊಳ್ಳುತ್ತಾರೆ. ಶಿವಳ್ಳಿಯವರಲ್ಲಿ ಬೇರೆಬೇರೆ ಮನೆತನ/ಕುಲನಾಮದವರು ಯಾವುದಾದರೊಂದು ಮಠದ ಶಿಷ್ಯರಾಗಿರುವುದು ಕಂಡು ಬರುತ್ತದೆ. ಉದಾ: ಪೆರ್ಲತ್ತಾಯ, ಶಬರಾಯ, ಸರಳಾಯ, ಕೆದಿಲ್ಲಾಯ, ಕಲ್ಲೂರಾಯ, ಉಂಗುರಪುಳಿತ್ತಾಯ, ಪುತ್ತೂರಾಯ, ನಿಡ್ವನ್ನಾಯ, ಕರ್ಕಾಡಿತ್ತಾಯ, ಬರೆಪಾಡಿತ್ತಾಯ, ಇಡೆಬೆಟ್ಟಾಯ, ಉಳ್ಳುರಾಯ, ಬಡಕ್ಕಿಲ್ಲಾಯ ಕುಲದವರು ಕಾಣಿಯೂರು ಮಠದ ಶಿಷ್ಯವೃಂದಕ್ಕೆ ಸೇರಿದವರು.

ವೈದಿಕ ಪರಂಪರೆಯನ್ನು ಶಾಸ್ತ್ರಬದ್ಧವಾಗಿ ಮತ್ತು ಪರಂಪರಾಗತವಾಗಿ ಮುಂದುವರಿಸಿಕೊಂಡು ಹೋಗುವ ಉದ್ದೇಶದಿಂದ ಪೇಜಾವರ ಸ್ವಾಮಿಗಳು ಬೆಂಗಳೂರಿನಲ್ಲಿ 'ಪೂರ್ಣಪ್ರಜ್ಞ ವಿದ್ಯಾಪೀಠ' ಸ್ಥಾಪಿಸಿ 12 ವರ್ಷದ ಗುರುಕುಲ

ಶಿಕ್ಷಣವನ್ನು ಕೊಡಿಸುವ ಮಹತ್ಕಾರ್ಯವನ್ನು ಕೈಗೊಂಡು ಯಶಸ್ಸನ್ನು ಕಂಡಿದ್ದಾರೆ. ಉಡುಪಿಯಲ್ಲಿ 'ಪ್ರಹ್ಲಾದ ಗುರುಕುಲ' ಪ್ರಾರಂಭಿಸಿ ವೈದಿಕ ಪರಂಪರೆ ಮುಂದುವರಿಯುವಂತೆ ಮಾಡಿದ್ದಾರೆ. ತುಳುನಾಡಿನಲ್ಲಿ ಹೆಚ್ಚಿನ ದೇವಸ್ಥಾನಗಳು ರಾಜರಕಾಲದಲ್ಲಿ ಸ್ಥಾಪನೆಯಾಗಿರುವುದು. ಅಲ್ಲಿ ಶಿವಳ್ಳಿ ಬ್ರಾಹ್ಮಣರು ಅರ್ಚಕರಾಗಿರುತ್ತಿದ್ದರು. ಆದರೆ ಶಿವಳ್ಳಿ ಬ್ರಾಹ್ಮಣರೇ ಸ್ಥಾಪನೆ ಮಾಡಿರುವ ಮಠ ಶ್ರೀಕೃಷ್ಣ ಮಠ. ಆದುದರಿಂದ ಶಿವಳ್ಳಿಯವರಿಗೆ ಶ್ರದ್ಧಾ ಕೇಂದ್ರವೂ ಇದೇ ಆಗಿದೆ. ನಾಡಿನಾದ್ಯಂತ ಪಸರಿಸಿರುವ ಶಿವಳ್ಳಿಯವರು ಈ 8 ಮಠಗಳಲ್ಲಿ ಒಂದಿಲ್ಲೊಂದು ಮಠಕ್ಕೆ ಹೆಚ್ಚಾಗಿ ಸಂಬಂಧ ಪಟ್ಟವರೇ ಆಗಿದ್ದಾರೆ. ತಲೆಮಾರಿನಿಂದ ತಲೆಮಾರಿಗೆ ಶಿವಳ್ಳಿಯವರಲ್ಲಿ ಮಠದಿಂದ ಮಠಕ್ಕೆ ನಿಷ್ಠೆಯನ್ನು ಬದಲಿಸುವ ಪರಿಪಾಠವೂ ಇದೆ. ಧಾರ್ಮಿಕ ಮತ್ತು ಸಾಮಾಜಿಕ ನೆಲೆಗಟ್ಟಿನಲ್ಲಿ ಜಿಜ್ಞಾಸೆಗಳು ಬಂದಾಗ ಶಿವಳ್ಳಿ ಬ್ರಾಹ್ಮಣರು ಸ್ವಾಮಿಗಳಿಂದ ಮಾರ್ಗದರ್ಶನಗಳನ್ನು ಪಡೆಯುತ್ತಾರೆ. ಶ್ರೀ ಕೃಷ್ಣ ಮಠದಲ್ಲಿ ಪರ್ಯಾಯದ ಸ್ವಾಮಿಗಳ ಶಿಷ್ಯವರ್ಗದ ಶಿವಳ್ಳಿ ಬ್ರಾಹ್ಮಣರು ಮುಖ್ಯಪ್ರಾಣ, ಗರುಡ, ಸುಬ್ರಹ್ಮಣ್ಯ, ನವಗ್ರಹ, ದೇವರುಗಳ ಪೂಜೆ, ಹಬ್ಬ-ವ್ರತಗಳ ಆಚರಣೆಯಲ್ಲಿ ಭಾಗಿಯಾಗುತ್ತಾರೆ. ಭಕ್ತರಿಗೆ ಊಟದ ಸಿದ್ದತೆ, ಊಟ ಬಡಿಸುವುದು, ಮಂತ್ರ ಪಠಣ, ರಥದಲ್ಲಿ ದೇವರ ಆರಾಧನೆ, ಮಠದ ಪೂಜೆಗೆ ಅಣಿ ಮಾಡುವುದು, ಚಾಮರ ಸೇವೆ, ನೃತ್ಯ ಸೇವೆಯಲ್ಲಿ ಭಾಗಿಯಾಗುವುದು, ಲೆಕ್ಕ ಪತ್ರಗಳನ್ನಿಡುವುದು, ಕನಕನ ಕಾಲದಿಂದ ರೂಢಿಸಿಕೊಂಡು ಬಂದ ಗೆರಟೆ-ಗಂಜಿ ಸೇವೆ ಮಾಡುವುದು, ಡೋಲು, ಮೃದಂಗ, ಶಂಖ, ತಾಳ, ನಗಾರಿಯನ್ನು ಪೂಜಾ ಸಮಯದಲ್ಲಿ ಬಾರಿಸುವುದು, ಭಜನೆ ಗೋಪೂಜೆ ಮಾಡುವುದು ಮತ್ತು ಸಾಂಸ್ಕೃತಿಕ ಕಾರ್ಯಗಳಲ್ಲಿ ಭಾಗಿಯಾಗುವರು. ದಾಸರ ಹಾಡುಗಳನ್ನು ಹಾಡುವುದು, ರಂಗೋಲಿ ಬಿಡಿಸಿ ಅಲಂಕಾರ ಮಾಡುವುದು, ದೀಪಕ್ಕೆ ಹೂಬತ್ತಿ ಹಾಕುವುದು, ದೇವರ ದೀಪಗಳನ್ನು ಬೆಳಗಿಸುವುದು ಮತ್ತು ಮಡಿ ಕಾರ್ಯಗಳಲ್ಲಿ ಶಿವಳ್ಳಿ ಬ್ರಾಹ್ಮಣ ಹೆಂಗಸರು ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಇತರ ವರ್ಗದವರು ಕಟ್ಟಿಗೆ ರಥ ನಿರ್ಮಾಣದಲ್ಲಿ, ರಥಕಟ್ಟುವುದರಲ್ಲಿ, ಕಾರ್ಯಕ್ರಮಗಳ ವ್ಯವಸ್ಥೆಯಲ್ಲಿ, ಮತ್ತು ಮಠದ ಇತರ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.

ಈ ಎಲ್ಲಾ ಕಾರಣಗಳಿಂದಾಗಿ ಉಡುಪಿ ಮಠ, ಪರಿಸರ, ಚಟುವಟಿಕೆಗಳನ್ನು ಅಧ್ಯಯನ ಮಾಡುವ ಅಗತ್ಯ ಕಂಡು ಬಂದುದರಿಂದ ಸವಿಸ್ತಾರವಾಗಿ ಮುಂದೆ ಚರ್ಚಿಸಲಾಗಿದೆ.

6.1ಉಡುಪಿ ಮತ್ತು ಪರಿಸರ

ದಕ್ಷಿಣದ ಕನ್ನಡದಲ್ಲಿ ಟಿಪ್ಪುಸುಲ್ತಾನನ ಅನಂತರ ಪ್ರಾರಂಭವಾದ ಆಂಗ್ಲರ ಆಡಳಿತದ ಪ್ರಥಮ ವರ್ಷದಲ್ಲಿ ಸ್ಥಾಪಿಸಲಾದ ಐದು ತಾಲೂಕುಗಳಲ್ಲಿ ಉಡುಪಿಯೂ ಒಂದು. (ಉಳಿದವು ಕುಂದಾಪುರ, ಮಂಗಳೂರು, ಉಪ್ಪಿನಂಗಡಿ ಮತ್ತು ಕಾಸರಗೋಡು.) ವಿಜಯನಗರ ಕಾಲೀನ ಬಾರಕೂರು ರಾಜ್ಯದ ಭಾಗವಾಗಿದ್ದ ಉಡುಪಿ ಪ್ರತ್ಯೇಕ ಆಡಳಿತದ ಭಾಗವಾದುದಷ್ಟೇ ಅಲ್ಲದೆ ರಾಜಧಾನಿ ಬಾರಕೂರನ್ನೂ ತನ್ನ

ಕಕ್ಷೆಯೊಳಗೆ ಸೇರಿಕೊಂಡಿತು. ಶಿವಳ್ಳಿ ಗ್ರಾಮದ ಭಾಗವಾಗಿಯೇ ಉಳಿದಿದ್ದ ಉಡುಪಿ ತಾಲೂಕಿನ ಆಡಳಿತಕೇಂದ್ರವಾಯಿತು. ಈಗ ಇದು ನಗರವಾಗಿದ್ದು ಜಿಲ್ಲಾಕೇಂದ್ರವಾಗಿದೆ.

ಮಂಗಳೂರು ತಾಲೂಕಿನ ಅನಂತರ ಅತಿ ಹೆಚ್ಚು ಗ್ರಾಮಗಳನ್ನು ಹೊಂದಿರುವ ತಾಲೂಕೆಂದರೆ ಉಡುಪಿ. ಕೋಟ, ಬ್ರಹ್ಮಾವರ, ಕಾಪು ಮತ್ತು ಉಡುಪಿ ಎಂಬ ನಾಲ್ಕು ಕಂದಾಯ ವಿಭಾಗ(ಹೋಬಳಿ)ಗಳನ್ನು ಹೊಂದಿರುವ ಈ ತಾಲೂಕಿನ ಒಟ್ಟು ಗ್ರಾಮಗಳ ಸಂಖ್ಯೆ 115. ಇದರ ವಿಸ್ತೀರ್ಣ94.12 ಚದರ ಕಿ.ಮೀ.ಗಳು ಉತ್ತರದಲ್ಲಿ ಕುಂದಾಪುರ, ಪೂರ್ವದಲ್ಲಿ ಮತ್ತು ಆಗ್ನೇಯದಲ್ಲಿ ಕಾರ್ಕಳ ಮತ್ತು ದಕ್ಷಿಣದಲ್ಲಿ ಮಂಗಳೂರು ತಾಲೂಕುಗಳು ಇದರ ಮೇರೆಗಳಾಗಿದ್ದರೆ ಪಶ್ಚಿಮದಲ್ಲಿ ಅರಬ್ಬೀ ಸಮುದ್ರವಿದೆ. ಫಲವತ್ತಾದ ಮಣ್ಣಿನಿಂದ ಕೂಡಿದ ಇದರ ಬಯಲು ಪ್ರದೇಶ ವಿಸ್ತಾರವಾಗಿಯೇ ಇದೆ. ಅಷ್ಟೇನೂ ಎತ್ತರವಲ್ಲದ ಸಾಕಷ್ಟು ಹಸಿರು ಛಾದರವನ್ನು ಹೊಂದಿರುವ ಗುಡ್ಡಸಾಲುಗಳೂ ಇಲ್ಲಿವೆ. ಕಾರ್ಕಳ ತಾಲೂಕಿನಲ್ಲಿ ಹುಟ್ಟುವ ಎಲ್ಲ ನದಿಗಳೂ ಉಡುಪಿ ತಾಲೂಕಿನಲ್ಲಿ ಹರಿದು ಅರಬ್ಬೀ ಸಮುದ್ರವನ್ನು ಸೇರುತ್ತವೆ. ದಕ್ಷಿಣಭಾಗದಲ್ಲಿ ಪಾಂಗಳ ಮತ್ತು ಉದ್ಯಾವರ ಹೊಳೆಗಳನ್ನು ಗುರುತಿಸಬಹುದು. ಉತ್ತರದಲ್ಲಿ ಸ್ವರ್ಣಾ, ಮಡಿಸಾಲು ಮತ್ತು ಸೀತಾನದಿಗಳು ಮುಖ್ಯವಾದವು. ಇವುಗಳಲ್ಲದೆ ಮಳೆಗಾಲದಲ್ಲಿ ಮತ್ತು ಆನಂತರದ ಸ್ವಲ್ಪಕಾಲದಲ್ಲಿ ಹರಿಯುವ ಹಲವಾರು ತೋಡುಗಳಿವೆ. ನದಿ ಮತ್ತು ತೋಡುಗಳು ಸಮುದ್ರವನ್ನು ಸೇರುವಲ್ಲಿ ಹಿನ್ನೀರಿನ ತಾಣಗಳು ಸೃಷ್ಟಿಯಾಗಿವೆ. ಮಲ್ಪೆಯಿಂದ ಪಾಂಗಾಳದ ವರೆಗೆ ಬೃಹದ್‌ಕಾಲುವೆಯೋಪಾದಿಯಲ್ಲಿರುವ ಹಿನ್ನೀರಿನ ತಾಣವನ್ನು ಪಾಂಗಳ ಮತ್ತು ಉದ್ಯಾವರ ಹೊಳೆಗಳು ಕೂಡಿ ಸೃಷ್ಟಿಸಿವೆ. ಸ್ವರ್ಣಾ, ಸೀತಾ, ಮತ್ತು ಮಡಿಸಾಲು ಹೊಳೆಗಳು ಸೇರಿ ಹಂಗಾರಕಟ್ಟೆಯ ಬಳಿ ಬಹಳ ವಿಶಾಲವಾದ ಹಿನ್ನೀರಿನ ತಾಣವನ್ನು ಸೃಷ್ಟಿಸಿವೆ. ಉತ್ತರಭಾಗದ ಈ ಹಿನ್ನೀರು ಮತ್ತು ನದಿಗಳು ಬಹಳ ದೂರದವರೆಗೆ ಯಾನಯೋಗ್ಯವಾಗಿವೆ. ಪ್ರಾಚೀನಕಾಲದಲ್ಲಿ ಕಡಲತಡಿಯ ಕಾಪು, ಉದ್ಯಾವರ, ಮಲ್ಪೆ, ತೋನ್ಸೆ (ತೊನಸೆ), ಕಲ್ಯಾಣಪುರ, ಹಂಗಾರಕಟ್ಟೆ ಮತ್ತು ಬಾರಕೂರುಗಳು ಬಂದರು ಕಾರ್ಯಚಟುವಟಿಕೆಗಳಲ್ಲಿ ಕ್ರಿಯಾಶೀಲವಾಗಿದ್ದು ಆರ್ಥಿಕ ವಹಿವಾಟಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ಹಿನ್ನೀರಿನಲ್ಲಿ ಹಲವಾರು ನಡುಗಡ್ಡೆಗಳು (ಕದ್ರುಗಳು) ನೌಕಾಯಾನಕ್ಕಷ್ಟೇ ಅಲ್ಲದೆ ಹಡಗು ಕಟ್ಟೆ ಕಾರ್ಯಗಳಿಗೂ ಬಹಳ ಅನುಕೂಲಕರವಾಗಿದ್ದವು. ಮಲ್ಪೆಯಲ್ಲಿ ಈಗಲೂ ಕಾರ್ಯನಿರ್ವಹಿಸುತ್ತಿರುವ ದೋಣಿ ನಿರ್ಮಾಣ ಕಟ್ಟೆ ಇದಕ್ಕೊಂದು ಸೂಕ್ತ ಉದಾಹರಣೆ.

ಐತಿಹಾಸಿಕವಾಗಿ ಉಡುಪಿ ತಾಲೂಕು ಅತ್ಯಂತ ಪ್ರಾಚೀನ ಕಾಲದಿಂದ ತನ್ನ ಪ್ರಭಾವವನ್ನು ಬೀರಿದೆ. ತಾಲೂಕಿನ ಬಹುಭಾಗಗಳಲ್ಲಿ ಬೃಹದ್ ಶಿಲಾಯುಗದ ಸಮಾಧಿಗಳನ್ನು ಮತ್ತು ಮೃತ್ಪಾತ್ರೆಗಳನ್ನು ದಿವಂಗತ ಡಾ.ಪಿ. ಗುರುರಾಜ ಭಟ್ಟರು ಕಂಡುಹಿಡಿದಿದ್ದಾರೆ. ಸೀತಾನದಿ ಮತ್ತು ಮಡಿಸಾಲು ಹೊಳೆಯ ವಿಸ್ತಾರವಾದ ಬಯಲು ಪ್ರದೇಶದಲ್ಲಿ ದಿವಂಗತ ಡಾ/ಬಿ. ವಸಂತ ಶೆಟ್ಟರು ಸಂಶೋಧನೆಯ ಮಹಾಸಾಧನೆಯನ್ನೇ ಮಾಡಿದ್ದಾರೆ. ಅಧಿಕಸಂಖ್ಯೆಯಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳು ಮತ್ತು ಮೃತ್ಪಾತ್ರೆಗಳನ್ನು ಪತ್ತೆ ಮಾಡಿರುವುದಲ್ಲದೆ. ಅತ್ಯಂತ ಪ್ರಾಚೀನಕಾಲದಲ್ಲಿ ಮಣ್ಣಿನ ಬಳೆ(ರಿಂಗ್)ಗಳನ್ನು ಜೋಡಿಸಿ ತೋಡಲಾಗಿದ್ದ ಬಾವಿಯನ್ನು ಪತ್ತೆ ಮಾಡಿದ್ದಾರೆ.

ಇದೆಲ್ಲಕ್ಕೂ ಮಿಗಿಲಾದುದು ಇದಕ್ಕೂ ಹಿಂದಿನ ನೂತನ ಶಿಲಾಯುಗದ ಶಿಲಾ ಆಯುಧವಾದ ಕೊಡಲಿಗಳನ್ನು ಪತ್ತೆ ಮಾಡಿರುವುದು. ಇದು ಕರಾವಳಿ ಕರ್ನಾಟಕದ ಈ ಭಾಗದ ಪ್ರಾಚೀನತೆಯನ್ನು ಬಹಳಷ್ಟು ಹಿಂದಕ್ಕೊಯ್ಯುತ್ತದೆ.

ಉದ್ಯಾವರ ಮತ್ತು ಬಾರಕೂರು ನಗರಗಳು ಜನವಸತಿಯ ಕೇಂದ್ರಗಳಾಗಿ ಕ್ರಿಸ್ತ ವರ್ಷಾರಂಭಕಾಲದಿಂದಲೇ ಬೆಳಕಿಗೆ ಬಂದಿದ್ದವು. ವೈಜ್ಞಾನಿಕ ನೆಲೆಯಲ್ಲಿ ಇಲ್ಲಿ ಭೂ ಉತ್ಖನನಗಳು ನಡದೇ ಇಲ್ಲ. ಇತ್ತ ಕಡೆ ಯಾರ ಗಮನವೂ ಹರಿಯದಿರುವುದು ಖೇದದ ಸಂಗತಿ. ಪ್ರಾಯಶಃ ಅಂತಹ ಕಾರ್ಯವೇನಾದರೂ ನಡೆದಲ್ಲಿ ನಮ್ಮ ಪ್ರಾಚೀನ ಇತಿಹಾಸದ ಮೇಲೆ ಹೊಸಬೆಳಕು ಬೀರಬಲ್ಲ ವಿಷಯ ಬೆಳಕಿಗೆ ಬಂದರೆ ಆಶ್ಚರ್ಯವೇನಿಲ್ಲ. ಈ ಕಾರ್ಯ ನಡೆಯಬೇಕಾಗಿದೆ.

ತುಳುನಾಡನ್ನು ಆಳಿದ ಪ್ರಪ್ರಥಮ ರಾಜವಂಶವಾದ ಆಳುಪರ ಖ್ಯಾತಿವೆತ್ತ ರಾಜಧಾನಿಗಳಾಗಿ ಉದ್ಯಾವರ ಮತ್ತು ಬಾರಕೂರುಗಳು ಮೆರೆದಿದ್ದವು. ಕರಾವಳಿಯ ಅತ್ಯಂತ ಪ್ರಾಚೀನ (ಕ್ರಿ.ಶ.7ನೆಯ ಶತಮಾನ) ಶಿಲಾಶಾಸನ ದೊರೆತಿರುವುದು ಈ ತಾಲೂಕಿನ ವಡ್ಡರ್ಸೆಯಲ್ಲಿ. ಬ್ರಿಟಿಷರ ಕಾಲದ ಪ್ರಾರಂಭದವರೆಗೆ ಬಾರಕೂರು ರಾಜಧಾನಿಯಾಗಿ ಆಡಳಿತದ ಕೇಂದ್ರಸ್ಥಾನವಾಗಿ ಮೆರೆದಿತ್ತು. ಸುರಾಲು ಪ್ರಾಚೀನ ಅರಸುಮನೆತನದ ಕೇಂದ್ರವಾಗಿತ್ತು. ಆಳುಪರ ಸಾಮಂತಾಧಿಕಾರಿಗಳಾಗಿ ತೌಳವ ಅರಸರು ಇಲ್ಲಿ ಅಧಿಕಾರ ನಡೆಸಿದ್ದರು. ವಿಜಯನಗರಕಾಲದಲ್ಲಿ ಕಿರಿಯ ಅರಸುಮನೆತನಗಳಾದ ಮರ್ದ ಹೆಗ್ಗಡೆ ಮತ್ತು ಕುಂದ ಹೆಗ್ಗಡೆಯವರು ಕ್ರಮವಾಗಿ ಕಾಪು, ಯೆರ್ಮಾಳು ಮತ್ತು ಎಲ್ಲೂರುಗಳಿಂದ ರಾಜಭಾರ ಮಾಡುತ್ತಿದ್ದರು. ದೊರೆತಿರುವ ಅಸಂಖ್ಯ ಶಿಲಾಶಾಸನಗಳು ಇಲ್ಲಿ ಸುವ್ಯವಸ್ಥಿತವಾಗಿ ನೆಲೆಗೊಂಡಿದ್ದ ಆಡಳಿತವನ್ನು ತಿಳಿಸುತ್ತದೆ.

ಪರಶುರಾಮ ಸೃಷ್ಟಿಯ ಕರ್ನಾಟಕದ ಪಡುಗಡಲ ಭಾಗದಲ್ಲಿ ಏಳು ಮೋಕ್ಷಪ್ರದ ಕ್ಷೇತ್ರಗಳಿವೆ. ಉಡುಪಿ ಅಂತಹ ಪುಣ್ಯಕ್ಷೇತ್ರಗಳಲ್ಲಿ ಒಂದು. (ಉಳಿದವು –ಕುಕ್ಕೆ ಸುಬಹ್ಮಣ್ಯ ಕುಂಭಾಸಿ, ಧ್ವಜೇಶ್ವರ (ಈಗಿನ ಕೋಟೇಶ್ವರ), ಕ್ರೋಢ (ಈಗಿನ ಶಂಕರನಾರಾಯಣ), ಮೂಕಾಂಬ (ಕೊಲ್ಲೂರು) ಮತ್ತು ಗೋಕರ್ಣ. ಪ್ರಾರಂಭದಲ್ಲಿ ಶೈವ, ಶಾಕ್ತರ ನೆಲೆಯಾಗಿ ಅನಂತರ ವೈಷ್ಣವರ ಪರಮಪವಿತ್ರ ಕ್ಷೇತ್ರವಾಗಿ ಬೆಳೆದ ಉಡುಪಿ ರಜತಪೀಠ, ರೂಪ್ಯಪೀಠ, ಶಿವಬೆಳ್ಳಿ(ಶಿವಳ್ಳಿ) ಎಂಬಿತ್ಯಾದಿ ಹೆಸರುಗಳಿಂದ ಕರೆಯಲ್ಪಟ್ಟಿತ್ತು. ಪ್ರಾದೇಶಿಕ ಭಾಷೆ ತುಳುವಿನಲ್ಲಿ ಇದನ್ನು 'ಒಡಿಪು' ಎಂದು ಕರೆಯುತ್ತಿದ್ದರು.

ಸಾಂಸ್ಕೃತಿಕವಾಗಿ ಉಡುಪಿ ತನ್ನ ಹಿರಿಮೆಯನ್ನು ಕಾಯ್ದಿರಿಸಿಕೊಂಡಿದೆ. ಉಡುಪಿ ಮಧ್ವಮತದ ಉಗಮಸ್ಥಾನ. ದ್ವೈತಮತ ಸ್ಥಾಪಕರಾದ ಶ್ರೀ ಮಧ್ವಾಚಾರ್ಯರ ಜನ್ಮಸ್ಥಳವಾದ ಪಾಜಕ ಇಲ್ಲಿದೆ. ವಿಜಯನಗರ ಮತ್ತು ಕೆಳದಿ ಅರಸರ ಕಾಲದಲ್ಲಿ ವೀರಶೈವಮತವೂ ಇಲ್ಲಿ ಹರಡಿತು. ಆನಂತರದ ಕಾಲಗಳಲ್ಲಿ ಇಸ್ಲಾಂ ಮತ್ತು ಕ್ರೈಸ್ತಮತಗಳೂ ಇಲ್ಲಿ ನೆಲೆಗೊಂಡವು.

ಈ ಎಲ್ಲಾ ಧಾರ್ಮಿಕ ನಡಾವಳಿಗಳ ಬೆಳವಣಿಗೆಯ ದ್ಯೋತಕವಾಗಿ ಹುಟ್ಟಿಕೊಂಡವು ಅಸಂಖ್ಯ ದೇವಾಲಯ ಮತ್ತು ದೈವಾಲಯಗಳು. ಗರಿಷ್ಟ ಸಂಖ್ಯೆಯಲ್ಲಿ ದೇವಾಲಯಗಳು ಈ ತಾಲೂಕಿನಲ್ಲಿವೆ. ಬಾರಕೂರು ನಗರ ಒಂದರಲ್ಲೇ 365

ದೇವಾಲಯಗಳಿದ್ದುವಂತೆ. ಅಲ್ಲಿಯ ರಾಜ ದಿನಕ್ಕೊಂದು ದೇವಾಸ್ಥಾನಕ್ಕೆ ಭೇಟಿ ನೀಡಿ ಕೊನೆಗೆ ಮುಖ್ಯ ದೇವಾಲಯದ ಪಂಚಲಿಂಗೇಶ್ವರ ದೇವಾಲಯಕ್ಕೆ ಬರುವಾಗ ಅಲ್ಲಿ ರಥೋತ್ಸವದ ಸಮಯವಂತೆ. ಈಗಲೂ ಜನರ ನೆನಪಿನಲ್ಲಿರುವ ನಂಬಿಕೆ ಇದು. ಬಾರಕೂರಿನ ಇಂದಿನ ಪರಿಸ್ಥಿತಿ ಮತ್ತು ಅವಶೇಷಗಳನ್ನು ನೋಡಿದರೆ ಈ ನಂಬಿಕೆಯಲ್ಲಿ ಸ್ವಲ್ಪವಾದರೂ ಸತ್ಯಾಂಶವಿದೆ ಎನಿಸುತ್ತದೆ. ಇಡೀ ದಕ್ಷಿಣ ಕನ್ನಡದ ಭಾಗಕ್ಕೆ ಪ್ರಾಚೀನವಾದ ದೇವಾಲಯಗಳು ವಡ್ಡರ್ಸೆ ಮತ್ತು ಉದ್ಯಾವರಗಳಲ್ಲಿದ್ದುವು ಎಂಬ ಅನುಮಾನ ಮೂಡುತ್ತದೆ. ಮತವಿಚಾರ ಸಾಮರಸ್ಯಕ್ಕಾಗಿ ಹುಟ್ಟಿಕೊಂಡವು ಎಂಬಂತೆ ಹಲವಾರು ಶಂಕರನಾರಾಯಣ ದೇವಸ್ಥಾನಗಳು ಇಲ್ಲಿವೆ.

ವಾಸ್ತುವಿನಲ್ಲಿ ತಮ್ಮದೇ ಆದ ವಿಶೇಷತೆ ಹೊಂದಿರುವ ದೇವಾಲಯಗಳಲ್ಲಿ ಹಲವು ಕಡೆ ಅತ್ಯುನ್ನತ ರಚನಾ ಕೌಶಲವನ್ನು ಬಿಂಬಿಸುವ ಶಿಲಾವಿಗ್ರಹಗಳು ಇವೆ. ಉಡುಪಿಯ ಶ್ರೀಕೃಷ್ಣಮಠದಲ್ಲಿರುವ ಕೃಷ್ಣ ಒಂದು ಅಪೂರ್ವ ವಿಗ್ರಹ. ಅಂತೆಯೇ ಚೇರ್ಕಾಡಿ ಸಮೀಪದ ಕನ್ನಾರುವಿನಲ್ಲಿರುವ ದುರ್ಗಾದೇವಿ ದೇವಸ್ಥಾನದ ಮಹಿಷಮರ್ದಿನಿಯ ಮೂಲವಿಗ್ರಹ.

ಸೂರ್ಯೋಪಾಸನೆ ಮತ್ತು ನಾಗ-ಸ್ಕಂದಾರಾಧನೆಗಳು ಇಲ್ಲಿದ್ದುವು ಎಂಬುದರ ಕುರುಹಾಗಿ ಹಲವಾರು ಪ್ರಾಚೀನ ಸೂರ್ಯ ಮತ್ತು ಸ್ಕಂದನ ವಿಗ್ರಹಗಳು ಇಲ್ಲಿವೆ. ವಿಶ್ವವಿಖ್ಯಾತಿಯನ್ನು ಪಡೆಯುವ ನಿಟ್ಟಿನಲ್ಲಿ ಮೆಕ್ಕೆಕಟ್ಟೆಯ ಊರುಗಳು ನವದೆಹಲಿಯ ರಾಷ್ಟ್ರೀಯ ವಸ್ತುಸಂಗ್ರಾಹಾಲಯವನ್ನು ಸೇರಿವೆ.

ವಿಶ್ವಮಟ್ಟದಲ್ಲಿ ಗುರುತಿಸಲ್ಪಟ್ಟಿರುವ ಬ್ಯಾಂಕಿಂಗ್ ಉದ್ಯಮ ಉಡುಪಿಯಲ್ಲಿ ಬೆಳೆದಿದೆ. ಧಾರ್ಮಿಕ, ಸಾಂಸ್ಕೃತಿಕ ಮತ್ತು ವಿದ್ಯಾಕ್ಷೇತ್ರಗಳಲ್ಲಿ ತಾಲೂಕು ಮುಂಚೂಣಿಯಲ್ಲಿದೆ. ಇಲ್ಲಿಯ ಜಾನಪದ ರಂಗಕಲೆಗಳ ಪೋಷಣೆ ಮತ್ತು ಅಭಿವೃದ್ಧಿಯಲ್ಲಿ ದೇವಾಲಯಗಳ ಪಾತ್ರ ಹಿರಿದಾದುದು.

ಪ್ರಾಚೀನ ಐತಿಹಾಸಿಕ ಸ್ಥಳಗಳ ಅನ್ವೇಷಣೆ ಮತ್ತು ರಕ್ಷಣೆ, ಧಾರ್ಮಿಕ ಮತ್ತು ಪ್ರೇಕ್ಷಣೀಯ ಸ್ಥಳಗಳ ಗುರುತಿಸುವಿಕೆ ಮತ್ತು ಸಮಗ್ರ ಅಭಿವೃದ್ಧಿಕಾರ್ಯಗಳು ಅತಿ ಅವಶ್ಯವಾಗಿ ಆಗಬೇಕಾಗಿವೆ. ಇದರಿಂದ ಉಡುಪಿಯ ಭವ್ಯತೆಯ ಸ್ವರೂಪ ಮತ್ತಷ್ಟು ಪ್ರಕಟಗೊಳ್ಳುವುದರಲ್ಲಿ ಸಂದೇಹವಿಲ್ಲ.

ಉಡುಪಿ ಎಂಬ ಹೆಸರು ಬರಲು ಕಥೆಯೊಂದನ್ನು ಹೇಳುತ್ತಾರೆ. ಶಾಪಗ್ರಸ್ತ ಚಂದ್ರ ಶಿವನನ್ನು ಕುರಿತು ಇಲ್ಲಿ ತಪಸ್ಸು ಮಾಡಿದನಂತೆ. ತಪಸ್ಸಿಗೆ ಮೆಚ್ಚಿ ಶಿವ ಸರೋವರದಲ್ಲಿ ಲಿಂಗರೂಪದಿಂದ ಪ್ರತ್ಯಕ್ಷನಾದನಂತೆ. ಸರೋವರವಿದ್ದ ಸ್ಥಳದಲ್ಲಿ ಈಗ ಚಂದ್ರಮೌಳೀಶ್ವರ ದೇವಾಲಯವಿದೆ. ಚಂದ್ರನಿಗೆ 'ಉಡುಪ' ಎಂಬ ಹೆಸರಿದೆ. ಹೀಗೆ ಚಂದ್ರ ಅರ್ಥಾತ್ 'ಉಡುಪ' ತಪಸ್ಸು ಮಾಡಿದ ಸ್ಥಳ 'ಉಡುಪಿ' ಆಯಿತು ಎನ್ನುತ್ತಾರೆ.

ಮಧ್ಯಯುಗೀನ ಕಾಲದಲ್ಲಿದ್ದ ಖ್ಯಾತ ವಿದ್ವಾಂಸ ನಾರಾಯಣ ಪಂಡಿತಾಚಾರ್ಯರ ತಮ್ಮ 'ಭಾವ ಪ್ರಕಾಶಿಕಾ' ಗ್ರಂಥದಲ್ಲಿ ಉಡುಪಿಯನ್ನು 'ಒಡಿಪು' ಎಂಬ ತುಳು ನಾಮದಿಂದ ಹೆಸರಿಸಿದ್ದಾರೆ. [ಪಂಡಿತರು 'ಮಧ್ವ ವಿಜಯ'ಕ್ಕೆ ಬರೆದ ಟಿಪ್ಪಣಿಯೆ ಈ 'ಭಾವಪ್ರಕಾಶಿಕ']. ಕನ್ನಡದ 'ಉಡುಪಿ' ತುಳುವಿನ 'ಒಡಿಪು' ಎಂಬ

ಎರಡೂ ನಾಮಪ್ರಯೋಗಗಳು ಈ ಊರಿಗೆ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿತ್ತು ಎನ್ನುವುದು ಇದರಿಂದ ವೇದ್ಯವಾಗುತ್ತದೆ. ಸ್ಥಳನಾಮ ತಜ್ಞ ಡಾ। ಆರ್ಕೆ ಮಣಿಪಾಲ ಅವರು ವಿವರಿಸುವಂತೆ. "ಬಹುಶಃ ರಥಬೀದಿಯಲ್ಲಿ ಪೂರ್ವಕ್ಕೆ, ದಕ್ಷಿಣದಿಂದ ಹರಿದು ಬರುವ ಹಾಗೂ ಮಡ್ಕಳ ಸಾರಿಗೆ ಸೇರುವ ತೋಡಿನ ಪಶ್ಚಿಮಕ್ಕಿರುವ ಸಪೂರವಾದ ಭೂಭಾಗವೇ 'ಒಡಿಪು' (ಉಡುಪಿ) ಆಗಿದ್ದಿರಬೇಕು. ಈಗಲೂ ಗದ್ದೆಯ ಭಾಗಕ್ಕೆ ಸಪೂರವಾದ ತುಂಡಿಗೆ ತುಳುವಿನಲ್ಲಿ 'ಒಡಿ' ಎನ್ನುತ್ತಾರೆ."

ಉಡುಪಿಗೆ ರಜತಪೀಠ (ರೂಪ್ಯಪೀಠ, ಶಿವಬೆಳ್ಳಿ) ಎಂಬ ಹೆಸರೂ ಇದೆ. ಇದಕ್ಕೂ ಒಂದು ಸ್ಥಳಪುರಾಣದ ಸೃಷ್ಟಿ ಆಗಿದೆ. ಹಿಂದೆ ರಾಮಭೋಜ ಎಂಬ ರಾಜ ಇಲ್ಲಿ ಆಳುತ್ತಿದ್ದನಂತೆ. ಪರಶುರಾಮನ ಪ್ರೇರಣೆಯಿಂದ ಆತ ಅಶ್ವಮೇಧಯಾಗ ಮಾಡುವ ಸಂಕಲ್ಪ ಮಾಡಿದ. ಯಾಗ ಶಾಲೆಗೆ ಸ್ಥಳಶುದ್ಧಿ ಮಾಡುವಾಗ ಆತನ ನೇಗಿಲಿಗೆ ಸರ್ಪವೊಂದು ಸಿಕ್ಕಿ ಸತ್ತಿತು. ಪ್ರಾಯಶ್ಚಿತ ರೂಪದಲ್ಲಿ ಸರ್ಪದ ಹೆಡೆಗಳುಳ್ಳ ಬೆಳ್ಳಿಯ ಪೀಠವನ್ನು ನಾಲ್ಕು ದಿಕ್ಕುಗಳಲ್ಲೂ ಸ್ಥಾಪಿಸಿದ. ಈ ಬೆಳ್ಳಿಯ ಪೀಠದಲ್ಲಿ ಪರಶುರಾಮ ಲಿಂಗರೂಪದಿಂದ ಪ್ರಕಟಗೊಂಡ ಈ ಪೀಠವು ಸ್ಥಳಕ್ಕೆ ರಜತಪೀಠ (ರೂಪ್ಯಪೀಠ) ಎಂಬ ಹೆಸರನ್ನು ತಂದುಕೊಟ್ಟಿತು. ಬೆಳ್ಳಿಯ ಪೀಠದಲ್ಲಿ ಶಿವ ಲಿಂಗರೂಪದಲ್ಲಿ ಮೂಡಿಬಂದದ್ದರಿಂದ ಈ ಬೆಳ್ಳಿಶಿವ–ಶಿವಬೆಳ್ಳಿ ಆದ. ಊರು ಶಿವಬೆಳ್ಳಿ ಆಗಿ ಕೊನೆಗೆ ಶಿವಳ್ಳಿ ಆಯಿತು. ಉಡುಪಿ ಶಿವಳ್ಳಿ ಗ್ರಾಮದ ಒಂದು ಭಾಗವಾಗಿ ಪ್ರಾಚೀನ ಕಾಲದಿಂದಲೂ ಇತ್ತು. ಶಾಸನಗಳಲ್ಲಿ ಈ ಬಗ್ಗೆ ಉಲ್ಲೇಖ ಇದೆ. ಈಗಲೂ ಸರ್ಕಾರಿ ದಾಖಲೆಯಲ್ಲಿ ಉಡುಪಿ ಶಿವಳ್ಳಿ ಗ್ರಾಮದ ಭಾಗವಾಗಿಯೇ ಇದೆ. ಶಿವಳ್ಳಿ ಒಂದು ಪವಿತ್ರ ಬ್ರಹ್ಮಪುರಿಯಾಗಿ ಖ್ಯಾತಿ ಹೊಂದಿತ್ತು ಎಂಬ ವಿಷಯ ಪ್ರಾಚೀನ ಶಾಸನಗಳಿಂದ ತಿಳಿದು ಬರುತ್ತದೆ.

ಶ್ರೀ ಅನಂತೇಶ್ವರ ಮತ್ತು ಶ್ರೀಚಂದ್ರಮೌಳೀಶ್ವರ ದೇವಾಲಯಗಳು, ಶ್ರೀಕೃಷ್ಣಮಠ ಮತ್ತು ಅಷ್ಟಮಠಗಳನ್ನೊಳಗೊಂಡ ರಥಬೀದಿ ಉಡುಪಿಯ ಕೇಂದ್ರಸ್ಥಾನ. ಸಾಂಪ್ರದಾಯಿಕ ಹೇಳಿಕೆಯಂತೆ ಉಡುಪಿಯ ಶ್ರೀ ಅನಂತೇಶ್ವರ ದೇವಾಲಯಕ್ಕೆ ಸಂಬಂಧಿಸಿದಂತೆ ನಾಲ್ಕು ಮೂಲೆಗಳಲ್ಲಿ ನಾಲ್ಕು ಶಕ್ತ್ಯಾಲಯಗಳೂ, ನಾಲ್ಕು ಸ್ಕಂದಾಲಯಗಳೂ ಇವೆ. ಪೂರ್ವದಲ್ಲಿ ಕಡಿಯಾಳಿ ಮಹಿಷಮರ್ದಿನಿ, ಪಶ್ಚಿಮದಲ್ಲಿ ಕನ್ನರ್ಪಾಡಿ ಜಯದುರ್ಗಾ, ಉತ್ತರದಲ್ಲಿ ಪುತ್ತೂರು (ಅಂಬಾಗಿಲು) ದುರ್ಗಾಪರಮೇಶ್ವರಿ ಮತ್ತು ದಕ್ಷಿಣದಲ್ಲಿ ಬೈಲೂರು ಮಹಿಷಮರ್ದಿನಿ–ಇವೆ. ಆ ನಾಲ್ಕು ಶಕ್ತ್ಯಾಲಗಳು. ಅಂತೆಯೇ ಉಡುಪಿಯ ಸುತ್ತಲಿರುವ ಮಾಂಗೋಡು ತಾಂಗೋಡು, ಮುಚ್ಚಲ್ಕೋಡು ಮತ್ತು ಅರಿತೋಡುಗಳಲ್ಲಿ ನಾಲ್ಕು ಸುಬ್ರಮಣ್ಯ(ಸ್ಕಂದ)ನ ಆಲಯಗಳಿವೆ. ಸಾಂಪ್ರದಾಯಿಕ ಹೇಳಿಕೆಯ ವಸ್ತುಸ್ಥಿತಿಯನ್ನು ನಾವು ಗಮನಿಸಿದರೆ ಮಾಂಗೋಡು ಮತ್ತು ಮುಚ್ಚಿಲ್ಕೋಡುಗಳಲ್ಲಿ ಸ್ಕಂದಾಲಯಗಳಿರುವುದು ಕಂಡುಬರುತ್ತದೆ. ಪುತ್ತೂರು ಗ್ರಾಮದ ಸುಬ್ರಮಣ್ಯ ನಗರದ ಬಡಾವಣೆಯಲ್ಲಿ ಮುಂದೆ ಇರುವ ಅರಿತೋಡುವಿನಲ್ಲಿರುವ ಸುಬ್ರಮಣ್ಯನನ್ನು ಜನಾರ್ದನನೆಂದು ಕರೆಯುತ್ತಾರೆ. ತಾಂಗೋಡುವಿನಲ್ಲಿ ದೇವಾಲಯವಿಲ್ಲ; ಅದು ಇದ್ದ ಸ್ಥಳದಲ್ಲಿ ಈಗ ಒಂದು ಕೆರೆ ಇದೆ. ನಾಲ್ಕು ದಿಕ್ಕುಗಳಲ್ಲಿ ಶಕ್ತ್ಯಾಲಯಗಳು ಇವೆ.

ಇಲ್ಲಿಯ ಶಾಸನಗಳಲ್ಲಿ ಶ್ರೀ ಅನಂತೇಶ್ವರ ಮತ್ತು ಶ್ರೀಚಂದ್ರಮೌಳಿ ದೇವರುಗಳನ್ನು 'ಪಡುವದೇವ' 'ಮೂಡುದೇವ' ಎಂಬುದಾಗಿ ಉಲ್ಲೇಖಿಸಲಾಗಿದೆ.

6.2 ಶ್ರೀ ಕೃಷ್ಣಮಠ

ಉಡುಪಿಯ ಎಲ್ಲ ಧಾರ್ಮಿಕ ಚಟುವಟಿಕೆಗಳ ಕೇಂದ್ರಸ್ಥಾನ ಇಲ್ಲಿಯ ರಥಬೀದಿಯಲ್ಲಿರುವ ಶ್ರೀ ಕೃಷ್ಣ ದೇವಸ್ಥಾನ. ಇದನ್ನು ಶ್ರೀ ಕೃಷ್ಣಮಠ ಎಂತಲೂ ಕರೆಯುವುದಿದೆ. ಕಾರಣ ಶ್ರೀ ಮಧ್ವ ಸಿದ್ಧಾಂತದ ಮತ್ತು ಪರ್ಯಾಯ ಯತಿಗಳ ಕೇಂದ್ರಸ್ಥಾನ ಇದಾಗಿದೆ. ದಕ್ಷಿಣದ ಮಹಾದ್ವಾರದಿಂದ ದೇವಾಲಯ ಸಮುಚ್ಚಯವನ್ನು ಪ್ರವೇಶಿಸಿದರೂ ಆಲಯವಿರುವುದು ಮೂಡುಮೊಗವಾಗಿ ಎದುರಿಗೆ ಇರುವುದು ಮಧ್ವ ಸರೋವರ. ಪೂರ್ವದ್ವಾರದಿಂದ ಆಲಯ ಹೊಕ್ಕರೂ ದೇವರ ದರ್ಶನ ಪಡುಭಾಗದಲ್ಲಿರುವ ಕಿಂಡಿಯಲ್ಲಿ. ಇಲ್ಲಿ ಶ್ರೀಕೃಷ್ಣ ಪಡುಮೊಗವಾಗಿ ಪ್ರತಿಷ್ಠಾಪಿತನಾಗಿದ್ದಾನೆ.

ದೇವಸ್ಥಾನ ಸಾಮಾನ್ಯ ವಾಸ್ತುರಚನೆಯನ್ನು ಹೊಂದಿದೆ. ವಾಸ್ತುಶಾಸ್ತ್ರಕ್ಕನುಗುಣವಾಗಿ ಪೂರ್ವ ಮತ್ತು ಉತ್ತರ ದಿಕ್ಕುಗಳಲ್ಲಿ ಪ್ರವೇಶದ್ವಾರಗಳನ್ನು ಹೊಂದಿದೆ. ಈಗ ಪೂರ್ವದ್ವಾರ ಮುಚ್ಚಿದ್ದು ವರ್ಷದಲ್ಲಿ ಒಂದಾವರ್ತಿ ಮಾತ್ರ ತರೆಯುವ ಸಂಪ್ರದಾಯ ಬೆಳೆದಿದೆ. ನವರಾತ್ರಿಯ ವಿಜಯ ದಶಮಿಯಂದು ಮಾತ್ರ ಈ ಬಾಗಿಲು ತೆರೆಯುವುದು. ಅಂದು ಶ್ರೀಕೃಷ್ಣನ ಪೂಜೆಗಾಗಿ ಸ್ವಾಮಿಗಳ ಪ್ರವೇಶ ಈ ದ್ವಾರದಿಂದ. ದೇವರಿಗೆ ಅರ್ಪಣೆ ಮಾಡುವ ಸಲುವಾಗಿ ನವಧಾನ್ಯವನ್ನು ಈ ಬಾಗಿಲಿನಿಂದ ತೆಗೆದುಕೊಂಡು ಹೋಗುತ್ತಾರೆ. ಹೊಸ ಅಕ್ಕಿಯ ನೈವೇದ್ಯ ಅಂದು ದೇವರಿಗೆ ಭಕ್ತರಿಗೆ ಪ್ರಸಾದ ರೂಪದಲ್ಲಿ 'ಹೊಸ್ತೂಟ'. ಈ ಮುಚ್ಚಿದ ಬಾಗಿಲಲ್ಲಿ ಚೆನ್ನಕೇಶವನ ಸುಂದರ ಪ್ರತಿಮೆಯನ್ನು ಕಾಣಬಹುದು.

ಉತ್ತರ ದ್ವಾರದಿಂದ ನವರಂಗ ಮತ್ತು ಗರ್ಭಗೃಹಗಳಿಗೆ ಪ್ರವೇಶ ಇದೆ. ಇಲ್ಲೇ ಶ್ರೀ ವಾದಿರಾಜರಿಂದ ಸ್ಥಾಪಿಸಲ್ಪಟ್ಟ ಆಚಾರ್ಯಮಧ್ವರ ಸುಂದರ ಶಿಲಾವಿಗ್ರಹವಿದೆ. ಗುಡಿಯೊಳಗಿದ್ದ ಪ್ರದಕ್ಷಿಣಪಥ ಈ ವಿಗ್ರಹ ಸ್ಥಾಪನೆಯಿಂದ ಮುಚ್ಚಲ್ಪಟ್ಟಿದೆ.

ಈಗ ನಾವು ನೋಡುತ್ತಿರುವ ದೇವಾಲಯದ ಮುಖ್ಯ ಭಾಗವು ಕ್ರಿ.ಶ. 1613ರಲ್ಲಿ ಸೋದೆ ಮಠದ ಶ್ರೀವೇದವೇದ್ಯತೀರ್ಥರ ಪರ್ಯಾಯ ಕಾಲದಲ್ಲಿ ಸಂಪೂರ್ಣ ಶಿಲಾಮಯವಾಗಿ ನಿರ್ಮಾಣಗೊಡದ್ದು. ಎರಡು ನೆಲೆಗಳಲ್ಲಿ ರಚಿತವಾದ ಮಾಡಿಗೆ ತಾಮ್ರದ ಹೊದಿಕೆ ಸಹ ಆಗಲೇ ಆಯಿತು. ಇದಕ್ಕೆ ಮೊದಲು ಮಠವು ಸಂಪೂರ್ಣ ಮರದ ರಚನೆಯಾಗಿತ್ತು. ಈ ವಿಚಾರವನ್ನು ಶ್ರೀಕೃಷ್ಣ ಮಠದಲ್ಲಿರುವ ಶಿಲಾಶಾಸನವೊಂದು ತಿಳಿಸುತ್ತದೆ.

ಶ್ರೀಕೃಷ್ಣ ದೇವಾಲಯ ಚಿಕ್ಕ ಪ್ರಮಾಣದ್ದು. ಅದಕ್ಕೊಪ್ಪುವ ಚಿಕ್ಕದಾದ ಪ್ರಾಕಾರ ಮಂಟಪ. ಪಡುದಿಕ್ಕಿನಲ್ಲಿರುವ ಇದರ ಚಂದ್ರಶಾಲೆಯ ಇಕ್ಕೆಲಗಳಲ್ಲಿ ಗರುಡ ಮತ್ತು ಮುಖ್ಯಪ್ರಾಣದೇವರುಗಳನ್ನು ಪ್ರತಿಷ್ಠೆಮಾಡಲಾಗಿದೆ. ಇವು ವಾದಿರಾಜರ ಕಾಲದ್ದು.

ಪ್ರಾಕಾರ ಮಂಟಪದ ಉತ್ತರ ಭಾಗದಲ್ಲಿ ಸಿಂಹಾಸನ ಕೋಣೆಯಿದೆ. ಇದಕ್ಕೆ ಸೇರಿದಂತೆ ಒಳಗೆ ಒಂದು ಚಿಕ್ಕಕೋಣೆಯಿದೆ. ಪರ್ಯಾಯ ಸ್ವಾಮಿಗಳು ಈ ಚಿಕ್ಕಕೋಣೆಯಲ್ಲಿ ತಮ್ಮ ಮೂಲಮಠದ ದೇವರನ್ನಿಟ್ಟು ಪೂಜಿಸುತ್ತಾರೆ. ಸಿಂಹಾಸನದ ಕೋಣೆ ದೊಡ್ಡದು. ಇಲ್ಲಿ ಮಧ್ವಾಚಾರ್ಯರು ಕುಳಿತುಕೊಳ್ಳುತ್ತಿದ್ದ ಪೀಠವಿದೆ. ಪರ್ಯಾಯ ಸ್ವಾಮಿಗಳಿಗೆ ಮಾತ್ರ ಈ ಪೀಠದಲ್ಲಿ ಕುಳಿತು ಭಕ್ತಾದಿಗಳಿಗೆ ತೀರ್ಥಪ್ರಸಾದ ಕೊಟ್ಟು ಹರಸುವ ಹಕ್ಕು. ಈ ಪೀಠವನ್ನೇ ಸಿಂಹಾಸನ ಎನ್ನುವುದು. ಈ ಸಿಂಹಾಸನವಿರುವ ಪ್ರಕಾರಮಂಟಪದ ಹೊರಭಾಗದಲ್ಲಿ (ಉತ್ತರದಿಕ್ಕು) ಚೌಕಿ ಎಂದು ಕರೆಯಲ್ಪಡುವ ವಿಶಾಲವಾದ ಭೋಜನಶಾಲೆ ಇದೆ. ಪರ್ಯಾಯಪೀಠಾಧಿಪತಿಗಳೊಂದಿಗೆ ಅಷ್ಟಮಠ ಇತರ ಯತಿವರ್ಯರಿಗೆ ಭಿಕ್ಷೆಯಾಗುವುದು ಇಲ್ಲೆ.

ಚೌಕಿಯಿಂದ ಹೊರಗೆ ಪೂರ್ವಭಾಗದಲ್ಲಿ ಸಾರ್ವಜನಿಕ ಭೋಜನಶಾಲೆ ಇದೆ. ಇಲ್ಲಿಂದ ಮುಂದೆ ಉತ್ತರಾಭಿಮುಖವಾಗಿ ಹೋದರೆ ಶ್ರೀ ಸುಬ್ರಹ್ಮಣ್ಯನ ಗುಡಿ, ಗೋಶಾಲೆ, ವಸಂತಮಂಟಪ, ಯತಿಗಳ ವೃಂದಾವನಗಳಿವೆ. ಇಲ್ಲಿಂದ ಮುಂದೆ ಉತ್ತರಭಾಗದಲ್ಲಿ ವಿಶಾಲವಾದ ರಾಜಾಂಗಣವಿದೆ. ಪರ್ಯಾಯದ ವಿಶೇಷ ದರ್ಬಾರು ಹಾಗು ಇತರ ಮುಖ್ಯ ಕಾರ್ಯಕ್ರಮಗಳು ಇಲ್ಲಿ ನಡೆಯುತ್ತದೆ.

ಮಧ್ವ ಸರೋವರದ ಮೂಡು ಭಾಗದಲ್ಲಿ ಸುಂದರವಾದ ಕಟ್ಟಿಗೆ ರಥ ಇದೆ. ಪರ್ಯಾಯ ಕಾಲಕ್ಕೆ ಬೇಕಾಗುವಷ್ಟು ಉರುವಲು ಸೌದೆಯನ್ನು ಈ ಕಟ್ಟಿಗೆ ರಥದ ಮಾದರಿಯಲ್ಲಿ ಶೇಖರಿಸಿ ಇಡಲಾಗುತ್ತಿತ್ತು.

ಮಧ್ವ ಸರೋವರಕ್ಕೆ ಹಿಂದೆ ಅನಂತ ಸರೋವರ ಎಂಬ ಹೆಸರಿತ್ತಂತೆ. ಮಧ್ವಾಚಾರ್ಯರಿಗೆ ಗಂಗಾಮಾತೆ ಒಲಿದುಬಂದದ್ದರಿಂದ ಇದು ಮಧ್ವ ಸರೋವರವಾಯಿತು. ಸರೋವರದ ನೈರುತ್ಯ ಭಾಗದಲ್ಲಿರುವ ಗುಡಿಯಲ್ಲಿ ಗಂಗಾಮಾತೆಯ ವಿಗ್ರಹ ಇದೆ. ಇದಕ್ಕೆ ಯತಿವರ್ಯರಿಂದ ಪೂಜೆ ಇದೆ. ಗಂಗೆ ಭಾಗೀರತಿಯು ವರ್ಷಕ್ಕೊಮ್ಮೆ ಮಧ್ವ ಸರೋವರದಲ್ಲಿ ಉದ್ಭವವಾಗುವ ವಿಚಾರ 'ಮಧ್ವವಿಜಯ'ದಲ್ಲಿ ಇದೆ. 16ನೆಯ ಶತಮಾನದಲ್ಲಿ ಸರೋವರದ ರಕ್ಷಣೆಗಾಗಿ ಸುಂದರವಾದ ಶಿಲಾಪಾವಟಗೆಗಳನ್ನು ಸುತ್ತಲೂ ರಚಿಸಿ ಭದ್ರ ಮಾಡಲಾಯಿತು. ಇದರ ಕೇಂದ್ರದಲ್ಲಿರುವ ಶಿಲಾಮಂಟಪಕ್ಕೆ ಶ್ರೀಕೃಷ್ಣನ ಉತ್ಸವಮೂರ್ತಿಯನ್ನು ತಂದು ಇರಿಸಿ ಕ್ಷೀರಾಭಿಷೇಕ ಸಹಿತ ಪೂಜೆಯನ್ನು ಪ್ರತಿ ವಸಂತ ದ್ವಾದಶಿಯಂದು ಮಾಡಲಾಗುತ್ತದೆ. ಕಾರ್ತಿಕ ಮಾಸದಲ್ಲಿ ತೆಪ್ಪೋತ್ಸವ ಇಲ್ಲಿ ವಿಜೃಂಭಣೆಯಿಂದ ನಡೆಯುತ್ತದೆ.

ಕೃಷ್ಣಮಂದಿರಕ್ಕೆ ಬಂದಾಗ ಪಡುಭಾಗದ ಕಿಂಡಿಯಲ್ಲಿ ದರ್ಶನ ಮಾಡಿ ಉತ್ತರ ದ್ವಾರದಿಂದ ಗುಡಿಯ ಪ್ರವೇಶ ಮಾಡಿದರೆ ಉತ್ತರ ಭಾಗದ ದೊಡ್ಡಕೋಣೆ ಪ್ರವೇಶಿಸಿಸುತ್ತೇವೆ. ಇದರ ದಕ್ಷಿಣಕ್ಕೆ ಚಿಕ್ಕ ಕೋಣೆ ಇದೆ. ಇದು ಗರ್ಭಗುಡಿ. ಶ್ರೀಮನ್ಮಧ್ವಾಚಾರ್ಯರಿಂದ ಪ್ರತಿಷ್ಠಾಪಿಸಲ್ಪಟ್ಟ ಕೃಷ್ಣನ ಸುಂದರ ಕೃಷ್ಣಶೀಲಾ ವಿಗ್ರಹವಿದೆ. ಈ ಕೃಷ್ಣನ ವಿಗ್ರಹದ ಬಗ್ಗೆ ಎರಡು ಐತಿಹ್ಯಗಳಿವೆ. ಮೊದಲನೆಯದು –ಅವಘಡಕ್ಕೆ ತುತ್ತಾದ ಮಲ್ಪೆಯ ಬಳಿ ಸಮುದ್ರತಳ ಸೇರಿತು. ಅದರಲ್ಲಿ ಗೋಪಿಚಂದನದ

ಉಂಡೆಯಲ್ಲಿ ಹುದುಗಿಸಿದ್ದ ಬಾಲಕೃಷ್ಣನ ವಿಗ್ರಹವು ಸಮುದ್ರತಳ ಸೇರಿತು. ಶ್ರೀ ಮಧ್ವಾಚಾರ್ಯರು ತಮ್ಮ ದಿವ್ಯದೃಷ್ಟಿಯಿಂದ ಸಮುದ್ರತಳದಿಂದ ಶ್ರೀಕೃಷ್ಣನ ವಿಗ್ರಹವನ್ನು ಮೇಲೆತ್ತಿ ತಂದು ಉಡುಪಿಯಲ್ಲಿ ಪ್ರತಿಷ್ಠಾಪಿಸಿದರು. ಪಲಿಮಾರು ಮಠದ ಶ್ರೀ ರುಘುವರ್ಯತೀರ್ಥರು ತಮ್ಮ "ಅಣುಮಧ್ವವಿಜಯ"ದ ಟೀಕೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ನಾರಾಯಣ ಪಂಡಿತಾಚಾರ್ಯರ ಮಧ್ವವಿಜಯದಲ್ಲಿ ಆಚಾರ್ಯರಿಗೆ ಸಮುದ್ರತಳದಲ್ಲಿ ಶ್ರೀಕೃಷ್ಣ ಪ್ರತಿಮೆ ಸಿಕ್ಕಿದ ವಿಚಾರವಿದೆ. ಆದರೆ ಅದರಲ್ಲಿ ಹಡಗಿನ ವಿಚಾರವಿಲ್ಲ.

ಎರಡನೆಯ ಐತಿಹ್ಯ ಹೆಚ್ಚಾಗಿ ಪ್ರಚಾರಕ್ಕೆ ಬಂದಿರುವುದು. ಅದೇನೆಂದರೆ ಬಿರುಗಾಳಿಗೆ ಹಡಗು ಮುಳುಗತೊಡಗಿತು: ಆಗ ನಾವಿಕ ಸಹಾಯಕ್ಕಾಗಿ ಕೂಗಿಕೊಂಡ. ಆಚಾರ್ಯರು ತಮ್ಮ ಕಾವಿಶಾಟಿಯಿಂದ ಬಿರುಗಾಳಿಯನ್ನು ಶಾಂತಗೊಳಿಸಿ ಹಡಗನ್ನು ಸಂಕಷ್ಟದಿಂದ ಪಾರುಮಾಡಿದರು. ಅನಂತರ ನಾವಿಕನಿಂದ ಗೋಪಿಚಂದನದ ಹೆಂಟೆಯನ್ನು ಪಡೆದು ಅದರಲ್ಲಿದ್ದ ಕೃಷ್ಣನನ್ನು ಉಡುಪಿಯಲ್ಲಿ ಸ್ಥಾಪಿಸಿದರು. ಈ ಎರಡು ಐತಿಹ್ಯಗಳಲ್ಲಿ ಮೊದಲನೆಯದು ಸಮಂಜಸವಾದುದೆಂದು ಬಲ್ಲವರ ಅಭಿಪ್ರಾಯ.

ಗರ್ಭಗುಡಿಯ ಉತ್ತರ ಭಾಗದ ಗೋಡೆಯ ಬಳಿ ಇನ್ನೊಂದು ಕೃಷ್ಣನ ವಿಗ್ರಹ ಇದೆ. ಇದು ಅಷ್ಟಾಗಿ ಜನರಿಗೆ ಕಾಣುವಂತಿಲ್ಲ. ಆನಂದಗಿರಿಗಳ 'ಶಂಕರವಿಜಯ'ದ ಪ್ರಕಾರ ಶ್ರೀ ಶಂಕರಾಚಾರ್ಯರ ಶಿಷ್ಯರಾದ ಹಸ್ತಾಮಲಕರು ಉಡುಪಿಯಲ್ಲಿ ಕೃಷ್ಣನ ಪ್ರತಿಮೆಯೊಂದನ್ನು ಸ್ಥಾಪಿಸಿದರು. ಇದು ಪ್ರಾಯಶ ಈಗ ಆದಿಉಡುಪಿಯಲ್ಲಿ ಕಂಗುಮಠ ಎಂದು ಕರೆಯುವಲ್ಲಿ ಇತ್ತು. ಕಂಗು ಮಠ ಜೀರ್ಣಾವಸ್ಥೆಗೆ ಬಂದಾಗ ಅಲ್ಲಿಯ ಕೃಷ್ಣನ ಪ್ರತಿಮೆಯನ್ನು ಉಡುಪಿಯ ಶ್ರೀಕೃಷ್ಣಮಠಕ್ಕೆ ಒಪ್ಪಿಸಲಾಯಿತು. ಅಂದಿನಿಂದ ಈ ಕೃಷ್ಣನಿಗೂ ಪರ್ಯಾಯ ಯತಿಗಳಿಂದ ಪೂಜೆ, ಸಮರ್ಪಣೆಗಳು ಆಗುವುದು ಪ್ರಾರಂಭವಾಯಿತು.

6.3 ಕನಕನ ಕಿಂಡಿ:

ಶ್ರೀಕೃಷ್ಣನಿಗೆ ಸಂಬಂಧಿಸಿದಂತೆ ಇನ್ನೊಂದು ಐತಿಹ್ಯವಿದೆ. ಅದೇ ಕನಕನ ಕಿಂಡಿ ವಿಚಾರ. ಭಕ್ತ ಕನಕನಿಗಾಗಿ ಪೂರ್ವಕ್ಕೆ ಇದ್ದ ಕೃಷ್ಣ ಪಶ್ಚಿಮಕ್ಕೆ ತಿರುಗಿ ದರ್ಶನಕೊಟ್ಟ ಎಂಬ ಜನಜನಿತವಾದ ಕಥೆ, ಇದೆ. ಆದರೆ ಕೃಷ್ಣಮಠದ ವಾಸ್ತುವನ್ನು ಗಮನಿಸಿದರೆ ಗರ್ಭಗೃಹದಲ್ಲಿರುವ ಶ್ರೀಕೃಷ್ಣನ ವಿಗ್ರಹ ಪಶ್ಚಿಮಾಭಿಮುಖವಾಗಿಯೇ ಪ್ರತಿಷ್ಠಾಪಿಸಿರುವುದು ವ್ಯಕ್ತವಾಗುತ್ತದೆ. ಭಂಡಾರಕೇರಿ ಮಠದ ಯತಿಗಳಾದ ಶ್ರೀ ಸುರೋತ್ತಮತೀರ್ಥರು ಬರೆದಿರುವ 'ಸಂನ್ಯಾಸಪದ್ಧತಿಟೀಕೆ'ಯಲ್ಲಿ ಆಚಾರ್ಯಮಧ್ವರು ಶ್ರೀಕೃಷ್ಣನನ್ನು ಪಶ್ಚಿಮಾಭಿಮುಖವಾಗಿಯೇ ಪ್ರತಿಷ್ಠೆಮಾಡಿದರು ಎಂಬ ವಿಷಯವನ್ನು ದಾಖಲಿಸಿದ್ದಾರೆ. ಈ ಸುರೋತ್ತಮತೀರ್ಥರು ಯತಿಶ್ರೇಷ್ಠರಾದ ಶ್ರೀವಾದಿರಾಜರ ಪೂರ್ವಾಶ್ರಮದ ಸೋದರರು. ಈ ಪ್ರಾಚೀನ ದಾಖಲೆಯೂ ಶ್ರೀಕೃಷ್ಣನ ವಿಗ್ರಹ ಪಶ್ಚಿಮಾಭಿಮುಖವಾಗಿಯೇ ಪ್ರತಿಷ್ಠಿತಗೊಂಡಿತ್ತು ಎನ್ನುವುದನ್ನು ಪುಷ್ಟೀಕರಿಸುತ್ತದೆ. ಆದರೆ ಈ ಕನಕನ ಕಿಂಡಿ ಐತಿಹ್ಯ ಹೇಗೆ ಬೆಳೆಯಿತು ಎಂಬ ಸಮಸ್ಯೆ ಇಲ್ಲಿ ಸಹಜವಾಗಿ ಏಳುತ್ತದೆ. ವಾದಿರಾಜರ ಕಾಲದವರೆಗೂ ಪಶ್ಚಿಮದ ಚಂದ್ರ ಶಾಲೆಯ ಗೋಡೆಯಲ್ಲಿ

ಕಿಟಕಿ ಇರಲಿಲ್ಲ. ಹಾಗಾಗಿ ಇತರರಿಗೆ ಹೊರಗಡೆಯಿಂದ ಶ್ರೀಕೃಷ್ಣನ ದರ್ಶನ ಸಾಧ್ಯವಿರಲ್ಲಿಲ್ಲ. ಶ್ರೀ ವಾದಿರಾಜರ ಶಿಷ್ಯರಾದ ಶ್ರಿ ಕನಕದಾಸರು ಉಡುಪಿಗೆ ಬಂದಾಗ ಇದ್ದ ಪರಿಸ್ಥಿತಿ ಇದು. ಹೀಗಿರುವಲ್ಲಿ ಒಂದು ದಿನ ರಾತ್ರಿ ಪಶ್ಚಿಮದ ಗೋಡೆಯಲ್ಲಿ ಒಂದು ಬಿರುಕು ಉಂಟಾಯಿತು. ಪ್ರಾಯಶ ಆಗ ಘಟಿಸಿದ ಭೂಕಂಪನದಿಂದಾಗಿ. ಈ ಬಿರುಕಿನಿಂದ ಹೊರಗಿನಿಂದಲೇ ಶ್ರೀಕೃಷ್ಣನ ದರ್ಶನ ಲಭ್ಯವಾಯಿತು. ಇದರ ಪೂರ್ಣ ಪ್ರಯೋಜನವಾದದು ಭಕ್ತಕನಕದಾಸರಿಗೆ. ವಾದಿರಾಜರು ಗೋಡೆಯ ಬಿರುಕು ಮತ್ತು ತನ್ಮೂಲಕ ಕನಕದಾಸರಿಗೆ ಲಭ್ಯವಾದ ಕೃಷ್ಣನ ದರ್ಶನವನ್ನು ಮನಗಂಡು, ಬಿರುಕನ್ನು ಮಚ್ಚುವ ಬದಲು ಅಲ್ಲೊಂದು ಕಿಟಕಿ ಇರಿಸಿ ಅದಕ್ಕೆ ಕನಕನ ಕಿಂಡಿ ಎಂದು ನಾಮಕರಣ ಮಾಡಿದರು. ಇತಿಹಾಸಕ್ಕೆ ಹತ್ತಿರವಿರುವ ಈ ಐತಿಹ್ಯ ಹೆಚ್ಚು ಪ್ರಾಮಾಣಿಕವಾದುದು ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಈಗ ಕನಕನ ಕಿಂಡಿಯ ಬಳಿ ಸುಂದರವಾದ ಗೋಪುರವಿದೆ, ಅದರ ಎದುರಿಗೆ ಕನಕನ ಜೋಪಡಿ ಇದ್ದ ಸ್ಥಳದಲ್ಲಿ ಮಂಟಪವೊಂದು ಇದ್ದು ಅದರಲ್ಲಿ ಶ್ರೀಕನಕದಾಸರ ಪ್ರತಿಮೆ ಇದೆ. ಪರ್ಯಾಯಪೀಠವೇರುವ ಸ್ವಾಮಿಗಳು ಪರ್ಯಾಯ ಮಹೋತ್ಸವದ ದಿನ ಶ್ರೀ ಕೃಷ್ಣನ ಪ್ರಪ್ರಥಮ ದರ್ಶನವನ್ನು ಈ ಕಿಂಡಿಯಿಂದಲೇ ಮಾಡುವ ರೂಢಿ ಬೆಳೆದಿದೆ. ಶ್ರೀಕೃಷ್ಣದರ್ಶನ ಮತ್ತು ಪೂಜೆಗಾಗಿ ಬರುವ ಯಾತ್ರಾರ್ಥಿಗಳಿಗೆ ಒಮ್ಮೆಯಾದರೂ ದೇವರ ದರ್ಶನವನ್ನು ಕನಕನ ಕಿಂಡಿಯಿಂದ ಮಾಡಲೇಬೇಕೆಂಬ ಬಯಕೆ ಸಹಜವಾಗಿಯೇ ಬೆಳೆದಿದೆ.

6.4 ಶ್ರೀ ಕೃಷ್ಣನ ಮೂಲಬಿಂಬ:

ಗರ್ಭಗುಡಿಯಲ್ಲಿ ಶ್ರೀಕೃಷ್ಣನ ವಿಗ್ರಹ ಸಾಕ್ಷಾತ್ ಶ್ರೀರುಕ್ಮಿಣೀಕರಾರ್ಚಿತ ಬಾಲಕೃಷ್ಣನ ವಿಗ್ರಹ ಎಂಬ ಐತಿಹ್ಯವೂ ಇದೆ. ಐತಿಹ್ಯಗಳೇನೇ ಇದ್ದರೂ ಈ ವಿಗ್ರಹವು ಔತ್ತರೇಯ ಶಿಲ್ಪಗುಣವಿಶೇಷಗಳನ್ನು ಹೊಂದಿರುವುದಂತೂ ಸತ್ಯ. ಗುಜರಾತಿನ ಪ್ರಾಚೀನ ಶಿಲ್ಪಶೈಲಿಯನ್ನು ಇಲ್ಲಿ ಕಾಣಬಹುದು. ಸುಮಾರು 50ಸೆ.ಮೀ. ಎತ್ತರವಿರುವ ಈ ದ್ವಿಬಾಹು ವಿಗ್ರಹ ಹೆಚ್ಚಿನ ಯಾವ ವಿಶೇಷ ಕೆತ್ತನೆಗಳನ್ನು ಹೊಂದಿಲ್ಲ. ಬಲಗೈಯಲ್ಲಿ ಕ್ರೀಡಾಯುಷ್ಟಿ ಮತ್ತು ಎಡಗೈಯಲ್ಲಿ ಕರ್ಪೂರಹಿಕ್ಕಾ ಸೂತ್ರಗಳಿವೆ. ಕ್ರೀಡಾಯುಷ್ಟಿಯು(ದಂಡವು) ವಿಗ್ರಹದೆತ್ತರಕ್ಕೂ ಇದ್ದು ಬುಡದಲ್ಲಿ ದಪ್ಪವಾಗಿದ್ದು ಸೊಂಟದ ಮೇಲ್ಭಾಗದಲ್ಲಿ ಸ್ವಲ್ಪ ಕಿರಿದಾಗಿದೆ. ಕೃಷ್ಣನ ಸೊಂಟ ಮತ್ತು ಕಾಲುಗಳನ್ನು ಹಿಕ್ಕಾಸೂತ್ರ ಬಳಸಿದೆ. ಕೇವಲ ಕೌಪೀನಧಾರಿಯಾದ ಕೃಷ್ಣ ತನ್ನ ಉತ್ತರೀಯನ್ನು ಸೊಂಟಕ್ಕೆ ಸುತ್ತಿ ಎಡಭಾಗದಲ್ಲಿ ಕೆಳಕ್ಕೆ ಇಳಿಬಿಟ್ಟಂತಿದೆ. ಸಂಪೂರ್ಣ ಅಲಂಕಾರರಹಿತವಾದ ಈ ವಿಗ್ರಹದ ತಲೆಯ ಹಿಂಬದಿಯಲ್ಲಿ ಚಕ್ರಾಕಾರದ ಸಿಂಬಿಯಂತಹ ಪುಟ್ಟ ಪ್ರಭಾವಳಿ ಇದೆ, ಕಿರಿಟವಿಲ್ಲ. ಬಾಲಕನ ಮುದ್ದು ಮುಖದ ಸೌಮ್ಯತೆ ಕೆತ್ತನೆಯಲ್ಲಿ ಇದೆ. ಇದರ ಕಾಲ ಸು.ಕ್ರಿ.ಶ. 8ನೇ ಶತಮಾನ.

6.5 ಪೂಜೆ ಉತ್ಸವಗಳು:

ಶ್ರೀಕೃಷ್ಣ ಮಠದಲ್ಲಿ ಆಚಾರ್ಯಮಧ್ವರಿಂದ ನಿಯಮಿತವಾದ ಮತ್ತು ಯತಿಗಳಾದ ಶ್ರೀವಾದಿರಾಜರಿಂದ ರೂಢಿಗೆ ಬಂದ ಪೂಜಾ ವಿನಿಯೋಗಗಳ ಕ್ರಮವೂ ಕಾಲಾವಧಿ

ಉತ್ಸವಗಳೂ ಇಂದಿಗೂ ಆಚರಣೆಯಲ್ಲಿವೆ. ಪ್ರತಿಯೊಂದು ಪೂಜೆಯೂ ಸಮಯ, ಸಾಮಾಗ್ರಿ, ನೈವೇದ್ಯನ ಮತ್ತು ನಗಾರಿ ಮೂಲಕ ಸೂಚನೆ ಇತ್ಯಾದಿ ಕ್ರಮಗಳನ್ನನುಸರಿಸಿಕೊಂಡೇ ನಡೆಯುವುದು. ಈ ಎಲ್ಲದರಲ್ಲೂ ಒಂದು ವೈಶಿಷ್ಟ್ಯವಿದೆ. ಅಷ್ಟಮಠದ ಯತಿಗಳೇ ತಮ್ಮ ಪೂಜಾಪರ್ಯಾಯ ಕಾಲದಲ್ಲಿ ಮಾತ್ರ ಶ್ರೀಕೃಷ್ಣ ಪೂಜೆಗೆ ಬಾಧ್ಯರೇ ಹೊರತು ಇತರರಾರೂ ಮುಟ್ಟುವಂತಿಲ್ಲ.

ಪ್ರತಿದಿನ ಉಷ:ಕಾಲದಿಂದ ರಾತ್ರಿಯವರೆಗೆ ಹದಿನಾಲ್ಕು ರೀತಿಯ ಪೂಜೆಗಳು ನಡೆಯುತ್ತವೆ. ಅವುಗಳಾವುವೆಂದರೆ ನಿರ್ಮಾಲ್ಯವಿಸರ್ಜನೆ, ಉಷ:ಕಾಲಪೂಜೆ, ಅಕ್ಷಯಪಾತ್ರ ಮತ್ತು ಗೋಪೂಜೆ, ಪಂಚಾಮೃತಭಿಷೇಕಪೂಜೆ, ಉದ್ವರ್ತನಪೂಜೆ. ಕಲಶಪೂಜೆ, ತೀರ್ಥಪೂಜೆ, ಅವಸರಸನಕಾದಿಪೂಜೆ, ಮಹಾಪೂಜೆ, ಚಾಮರಸೇವ, ರಾತ್ರಿಪೂಜೆ, ಮಂಟಪಪೂಜೆ ಮತ್ತು ಶಯನೋತ್ಸವಪೂಜೆ. ಬೆಳಗ್ಗೆ ನಾಲ್ಕು ಗಂಟೆಗೆ ಪ್ರಾರಂಭವಾಗುವ ಈ ಪೂಜಾಕಾರ್ಯಗಳು ರಾತ್ರಿ 8.30ರ ವೇಳೆಗೆ ಮುಕ್ತಾಯಗೊಳ್ಳುತ್ತವೆ. ಭಕ್ತಾದಿಗಳಿಗೆ ಶ್ರೀಕೃಷ್ಣನ ದರ್ಶನ ರಾತ್ರಿ 10.30ರ ವರೆಗೂ ಇರುತ್ತದೆ.

ನಿತ್ಯಪೂಜೆಯಲ್ಲದೆ ಕಾರ್ತಿಕ ಶುದ್ಧ ದ್ವಾದಶಿಯಿಂದ ಪತ್ತನಾಜೆಯವರೆಗೆ(ವೃಷಭ ಮಾಸದ 10ನೆಯ ದಿನದವರೆಗೆ) ವಿವಿಧ ರೀತಿಯ ವಿಶೇಷ ಪೂಜೆ, ಉತ್ಸವ, ರಥೋತ್ಸವಗಳು ಜರಗುತ್ತಲೆ ಇರುತ್ತವೆ. ಕೆಲವು ಮಠದ ನಡಾವಳಿಯದ್ದಾದರೆ ಉಳಿದದ್ದು ಭಕ್ತರ ಸೇವೆಯ ಉತ್ಸವಗಳು. ಪ್ರತಿಯೊಂದು ನಿಯಾಮನುಸಾರ. ಕ್ಲಪ್ತ ಸಮಯದಲ್ಲಿ ವೈಭವೋಪೇತವಾಗಿ ನಡೆಯುತ್ತವೆ. ಈ ಕಾರ್ಯಕ್ರಮ ರಂಜನೀಯ ಅಷ್ಟೆ ಅಲ್ಲ ಅನುಕರಣೀಯ.

6.6 ರಥಗಳು:

ಅದ್ಭುತ ಕಾಷ್ಠಶಿಲ್ಪಗಳಿಂದ ಅಲಂಕೃತವಾಗಿರುವ ಮೂರು ರಥಗಳು ಶ್ರೀಕೃಷ್ಣನ ಸೇವೆಯಲ್ಲಿವೆ. ಇವುಗಳನ್ನು ಕ್ರಮವಾಗಿ ಬ್ರಹ್ಮರಥ ಗರುಢರಥ ಮತ್ತು ಚಿಕ್ಕರಥ ಎಂದು ಕರೆಯಲಾಗುತ್ತದೆ. ಈ ಹೆಸರುಗಳು ಅವುಗಳ ಗಾತ್ರಕ್ಕೆ ತಕ್ಕಂತಿವೆ.

ಹೆಸರೇ ಸೂಚಿಸುವಂತೆ ಬ್ರಹ್ಮರಥವು ಬ್ರಹದಾಕಾರದ್ದು. ಆಳಿಗೂ ಮಿಗಿಲಾದ ಎತ್ತರದ ನಾಲ್ಕು ಚಕ್ರಗಳ ಮೇಲೆ ಅಸಂಖ್ಯ ಕುಸುರಿ ಕೆತ್ತನೆಯುಳ್ಳ ಮರದ ಪೆಟ್ಟಿಗೆಗಳನ್ನು ಹೊಂದಿರುವ ಈ ರಥ ಉತ್ಸವಕ್ಕೆ ಅಲಂಕರಣಗೊಂಡು ನಭಕ್ಕೇರುವಂತೆ ಸಜ್ಜಾದಾಗ ಅದನ್ನು ನೋಡುವುದೇ ಒಂದು ಆನಂದಮಯ ದೃಶ್ಯವಾಗುತ್ತದೆ. ಕೃಷ್ಣಾಪುರ ಮಠದ ಶ್ರೀವಿದ್ಯಾಸಮುದ್ರತೀರ್ಥರು (30ನೆಯ ಯತಿಗಳು) ತಮ್ಮ ಪೂಜಾಪರ್ಯಾಯ ಕಾಲದಲ್ಲಿ ಈ ರಥವನ್ನು ರಚಿಸಿ ದೇವರಿಗೆ ಅರ್ಪಿಸಿದರು. ಗರುಡ ರಥಕ್ಕೆ ಈಗ ಒಂದು ನೂರು ವರ್ಷಗಳು ಸಂದಿವೆ. ಶೀರೂರು ಮಠದ ಶ್ರೀ ಲಕ್ಷ್ಮೀಸಮುದ್ರತೀರ್ಥ ತಮ್ಮ ಪೂಜಾ ಪರ್ಯಾಯ ಕಾಲದಲ್ಲಿ (1898–99) ಈ ರಥವನ್ನು ನಿರ್ಮಿಸಿ ದೇವರಿಗೆ ಸಮರ್ಪಿಸಿದರು. ಇದೇ ಶೀರೂರು ಮಠದ ಲಕ್ಷ್ಮೀಮನೋಜ್ಞತೀರ್ಥರು ತಮ್ಮ ಪೂಜಾ ಪರ್ಯಾಯ ಕಾಲದಲ್ಲಿ (1962–63) ಚಿಕ್ಕ ರಥವನ್ನು ನಿರ್ಮಿಸಿ ದೇವರಿಗೆ ಸಮರ್ಪಿಸಿದರು.

ಬೇರೆ ಬೇರೆ ಉತ್ಸವಗಳ ಸಮಯದಲ್ಲಿ ಈ ರಥಗಳನ್ನು ಎಳೆಯುವ ರೂಢೀ ಇದ್ದರೆ, ಕೆಲ ಉತ್ಸವಗಳಿಗೆ ಎರಡು ಅಥವಾ ಮೂರು ರಥಗಳನ್ನು ಎಳೆಯುವ ರೂಢಿ ಇದೆ. ಉಡುಪಿಯಲ್ಲಿಯೂ ಮಕರ ಸಂಕ್ರಮಣಗಳಂದು ಈ ಮೂರು ರಥಗಳನ್ನೆಯುವ ವೈಭವ ನೋಡಬಹುದು.

ಶ್ರೀಕೃಷ್ಣ ಅನಂತೇಶ್ವರನ ಒಕ್ಕಲೆಂಬ ಭಾವನೆ ಇದೆ. ಈ ಒಕ್ಕಲು–ದನಿ ಸಂಬಂಧ ಬಹಳ ಅನ್ಯೋನ್ಯವಾಗೇ ಇದೆ. ಈ ಮರ್ಯಾದೆಯನ್ನು ಶಾಶ್ವತವಾಗಿ ಉಳಿಸಿಕೊಂಡು ಬಂದಿರುವ ರೂಢಿಯೊಂದಿದೆ. ಅದೇನೆಂದರೆ ಶ್ರೀಅನಂತೇಶ್ವರನ ವರ್ಷಾವಧಿ ರಥೋತ್ಸವ ಕಾಲದಲ್ಲಿ ಬ್ರಹ್ಮರಥವನ್ನು ಮಠದಿಂದ ಕೊಡುವ ಪದ್ಧತಿ.

6.7 ಸ್ವರ್ಣ, ರಜತ ರಥ, ಪಾಲಕಿಗಳು:

ಭಕ್ತರ ನೆರವಿನಿಂದ ಪರ್ಯಾಯ ಯತಿಗಳು ಕಾಲದಿಂದ ಕಾಲಕ್ಕೆ ನಾನಾ ರೀತಿಯ ವಸ್ತು–ವಾಹನಗಳನ್ನು ರಚಿಸಿ ಶ್ರೀಕೃಷ್ಣನಿಗೆ ಅರ್ಪಿಸಿದ್ದಾರೆ. ಇದರಲ್ಲಿ ಮುಖ್ಯವಾದವು ಸ್ವರ್ಣರಥ, ರಜತರಥ ಮತ್ತು ಪಾಲಕಿಗಳು. ವಿಶೇಷ ಪೂಜಾಸಮಯದಲ್ಲಿ ಮತ್ತು ಭಕ್ತರ ಸೇವಾರ್ಥದ ನೆಲೆಯಲ್ಲಿ ಈ ರಥ ಮತ್ತು ಪಾಲಕಿಗಳ ಉತ್ಸವ ಜರುಗುತ್ತಿರುತ್ತವೆ.

6.8 ಶ್ರೀಕೃಷ್ಣ ಪೂಜಾವ್ಯವಸ್ಥೆ:

ಆಚಾರ್ಯಮಧ್ವರು ತಾವು ಪ್ರತಿಷ್ಠೆ ಮಾಡಿದ ಮಠದ ಶ್ರೀಕೃಷ್ಣನ ಪೂಜಾಕಾರ್ಯಗಳು ಸರಿಯಾಗಿ ನಡೆದುಕೊಂಡುಹೋಗುವ ಸಲುವಾಗಿ ಶಾಶ್ವತ ವ್ಯವಸ್ಥೆಯೊಂದನ್ನು ಮಾಡಿದರು. ತಮ್ಮ ಶಿಷ್ಯ ವರ್ಗದ ಎಂಟು ಜನರಿಗೆ ಸಂನ್ಯಾಸದೀಕ್ಷೆ ಕೊಟ್ಟು 8 ಮಠಗಳನ್ನು ಸ್ಥಾಪಿಸಿ ಇವರು ಎರಡು ತಿಂಗಳಿಗೊಮ್ಮೆ ಸರದಿಯಲ್ಲಿ ಶ್ರೀಕೃಷ್ಣನ ಪೂಜೆ ನಡೆಸಿಕೊಂಡು ಹೋಗುವಂತೆ ನಿಯಮ ಮಾಡಿದರು. ಈ ಎಂಟು ಜನ ಯತಿಗಳು ಕೃಷ್ಣ ಮಠದ ಪ್ರತ್ಯೇಕ ಕೋಣೆಗಳಲ್ಲಿ ವಾಸ್ತವ್ಯ ಮಾಡಿದರು. ಪಲಿಮಾರು, ಅದಮಾರು, ಕೃಷ್ಣಾಪುರ, ಪುತ್ತಿಗೆ, ಶಿರೂರು, ಸೋದೆ, ಕಾಣಿಯೂರು ಮತ್ತು ಪೇಜಾವರ ಇವೆ ಆ ಎಂಟು ಮಠಗಳು. ಸೋದೆ ಮಠದ ಶ್ರೀ ವಾದಿರಾಜತೀರ್ಥರು ಎರಡು ತಿಂಗಳ ಅವಧಿಯನ್ನು ಎರಡು ವರ್ಷಗಳನ್ನಾಗಿ ಮಾಡಿದರು. ಅಲ್ಲದೆ ಶ್ರೀಕೃಷ್ಣ ಮಠದಲ್ಲೆ ವಾಸ್ತವ ಮಾಡಿದ್ದ ಯತಿಗಳನ್ನು ರಥಬೀದಿಯ ಸುತ್ತಲು ಸ್ಥಳಾವಕಾಶ ಮಾಡಿ ಮಠಗಳನ್ನು ಕಟ್ಟಿ ಪ್ರತ್ಯೇಕವಾಗಿ ನೆಲೆಸುವಂತೆ ಮಾಡಿದರು. ಶ್ರೀಕೃಷ್ಣಮಠ ಪರ್ಯಾಯ ಯತಿಗಳ ಕಾರ್ಯಕಲಾಪ ಮತ್ತು ವಾಸ್ತವ್ಯಕ್ಕೆ ಮೀಸಲಾಯಿತು. ದ್ವೈವಾರ್ಷಿಕ ಪರ್ಯಾಯವು ಪ್ರಾಯಶ: ಪಲಿಮಾರು ಮಠದಿಂದಲೇ (1522–23) ಪ್ರಾರಂಭವಾಗಿರಬೇಕು. ತಮ್ಮ ಮಠದ ಪಟ್ಟದ ದೇವರಿಗಾಗಿ ಹೊಸದಾಗಿ ಕಟ್ಟಲ್ಪಟ್ಟ ಮಠಗಳಲ್ಲಿ ಗುಡಿಗಳ ರಚನೆ ಮಾಡಿದರು. ಈ ಗುಡಿಗಳು ಪಶ್ಚಿಮಾಭಿಮುಖವಾಗಿರುವುದು ಗಮನಾರ್ಹ. ಇತ್ತೀಚಿನ ದಿನಗಳಲ್ಲಿ ಪರ್ಯಾಯ ಪೀಠಾರೋಹಣವು ಉಡುಪಿಯ ಅತ್ಯಂತ ಪ್ರಮುಖವಾದ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವಾಗಿ ಮಾರ್ಪಟ್ಟು ಇಡೀ ರಾಷ್ಟ್ರದ ರಾಜ್ಯದ ಗಮನವನ್ನು ತನ್ನತ್ತ ಸೆಳೆಯುತ್ತಿದೆ.

6.9 ಜೀರ್ಣೋದ್ಧಾರ ಶಾಸನಗಳು:

ಶ್ರೀಕೃಷ್ಣಮಠವು ಶ್ರೀ ವೇದವೇದ್ಯರತೀರ್ಥರ ಕಾಲದಲ್ಲಿ(ಕ್ರಿ.ಶ.1613) ಸಂಪೂರ್ಣ ಶಿಲಾಮಯವಾಗಿ ಜೀರ್ಣೋದ್ಧಾರಗೊಂಡಿತ್ತು. 20ನೆಯ ಶತಮಾನದಲ್ಲಿ ನಾನಾ ರೀತಿಯ ಜೀರ್ಣೋದ್ಧಾರ ಕಾರ್ಯಗಳು ಜರುಗಿವೆ. ಶಿಲೆಕಲ್ಲು ಇದ್ದ ಕಡೆ ಈಗಿನ ಆಶಯಕ್ಕೆ ತಕ್ಕಂತೆ ಹೊಳಪುಗಲ್ಲು ದೇವಾಲಯವನ್ನು ಆವರಿಸಿದೆ. ಎರಡು ಹಂತದ ಮಾಡು ಮಾತ್ರ ತಾಮ್ರದ ಹೊದಿಕೆಯನ್ನು ಉಳಿಸಿಕೊಂಡು ಪ್ರಾದೇಶಿಕ ವಸ್ತುವಿನ ಚೆಲುವನ್ನು ರಕ್ಷಿಸಿಕೊಂಡಿದೆ.

ವಿಜಯನಗರ ಆಳ್ವಿಕೆಯ ಪ್ರಾರಂಭದ ಕಾಲದಿಂದ ಮೈಸೂರು ಅರಸರ ಕಾಲದವರೆಗೂ ಹಲವಾರು ಚಕ್ರವರ್ತಿಗಳು, ಮಹಾರಾಜರು, ಮಂತ್ರಿ. ದಂಡನಾಯಕ, ಅಧಿಕಾರಿಗಳು ಮತ್ತು ಭಕ್ತರು ಶ್ರೀಕೃಷ್ಣ ಮಠಕ್ಕೆ ದಾನಧರ್ಮಗಳನ್ನು ಮಾಡಿದ್ದಾರೆ. ಇವನ್ನು ಶಾಸನಗಳಲ್ಲಿ ದಾಖಲಿಸಿದ್ದಾರೆ. ಹಿಂದೆ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದ ಶಿಲಾಶಾಸನಗಳನ್ನು ನೋಡಬಹುದಿತ್ತು. ಆದರೆ ಮೇಲಿನಿಂದ ಮೇಲೆ ನಡೆದ ಅಭಿವೃದ್ಧಿಕಾರ್ಯಗಳಿಂದಾಗಿ ಈ ಶಾಸನಗಳ ಇರುವಿಕೆ ಮತ್ತು ಅವುಗಳ ಪ್ರಾಮುಖ್ಯತೆಯ ಬಗ್ಗೆ ಆಸಕ್ತಿ ಅಷ್ಟಾಗಿ ಕಂಡುಬರುತ್ತಿಲ್ಲ. ಶ್ರೀಕೃಷ್ಣಮಠದ ಅತ್ಯಂತ ಪ್ರಾಮಾಣಿಕವಾದ ಇತಿಹಾಸ ರಚನೆಗೆ ಈ ಶಾಸನಗಳು ಪ್ರಮುಖ ಆಧಾರಗಳು. ಇವುಗಳ ರಕ್ಷಣೆ ಮಠಕ್ಕೊಂದು ಶೋಭೆಯನ್ನೀಯುತ್ತದೆ.

6.10 'ಶ್ರೀಚಂದ್ರಮೌಳೀಶ್ವರ ದೇವಸ್ಥಾನ

ಉಡುಪಿ ಅನಂತೇಶ್ವರ ದೇವಾಲಯದ ಎದುರಿಗೆ ಪೂರ್ವಾಭಿಮುಖವಾಗಿ ಇರುವ ದೇವಾಲಯ ಚಂದ್ರಮೌಳೀಶ್ವರ. ಇದು ತುಂಬಾ ತಗ್ಗಿನಲ್ಲಿರುವುದರಿಂದ ಬಹುಶಃ ಅಲ್ಲಿ ಇದ್ದ ಕೆರೆಯನ್ನು ಮುಚ್ಚಿ ಅಲ್ಲಿ ಶಿವ ದೇವಾಲಯಗಳನ್ನು ಕಟ್ಟಿದಂತಿದೆ. ಅನಂತೇಶ್ವರ ದೇವಾಲಯದ ಅನಂತರ ಇದನ್ನು ಕಟ್ಟಿರಬೇಕೆಂದು ಅನುಮಾನ ಬರುತ್ತದೆ. ಆದರೆ ಇಷ್ಟು ಸನಿಹದಲ್ಲಿ ಎರಡು ಶಿವಾಲಯಗಳಿರುವುದು ಸೋಜಿಗವೆ ಸರಿ.

ಇದರ ಪ್ರಾಚೀನತೆಯನ್ನು ಸೂಚಿಸಬಲ್ಲ ಶಾಸನಗಳು ಲಭ್ಯವಿಲ್ಲ. ಲಭ್ಯವಿರುವ ಒಂದೇ ಒಂದು ಆಧಾರವೆಂದರೆ ಇಲ್ಲಿಯ ಪ್ರಧಾನ ಬಲಿಪೀಠ. ಶಿಲಾಮಯವಾದ ಇದು ಚಿಕ್ಕದಾದರು ಅತ್ಯಂತ ಸುಂದರವಾದ ರಚನೆ. ಇದರ ಶೈಲಿ ಸುಮಾರು ಕ್ರಿ.ಶ. 7–8ನೆಯ ಶತಮಾನದ ಪ್ರತೀಕ.

ವಿಶಾಲವಾದ ಅಂಗಣದಲ್ಲಿ ಚತುರಸ್ರವಾದ ಗರ್ಭಗೃಹ, ಸಾಧಾರಣ ಎತ್ತರದ ವಿಶಾಲವಾದ ವೇದಿಕೆಯ ಮೇಲೆ ಇದರ ರಚನೆ ಆಗಿದೆ. ವೇದಿಕೆಯ ಅಧಿಷ್ಠಾನ ತೀರ ಸಾಮಾನ್ಯ ರಚನೆಯದು. ಗರ್ಭಗೃಹದ ಸುತ್ತ ಎಡನಾಳ (ಕತ್ತಲೆಯ ಸುತ್ತು)ಇದೆ. ಇದರ ಹೊರಗೊಂದು ಹೊರಸುತ್ತು ಇದೂ ಸಹ ಮುರಕಲ್ಲು ಗೋಡೆಯಿಂದ ಮುಚ್ಚಲ್ಪಟ್ಟು ಕತ್ತಲೆಯ ಸುತ್ತಿನಂತೆಯೇ ಇದೆ.ಮೂಲ ರಚನೆದಲ್ಲದ ಈ ಗೋಡೆ ಕಾಲಾನಂತರದ ಸೇರ್ಪಡೆ. ಒಳ ಭಿತ್ತಿಯಲ್ಲಿ ಅಲಂಕರಣೆ ಇದ್ದರೂ ಗೋಚರಕ್ಕೆ ಬಾರದಂತಹ ಪರಿಸ್ಥಿತಿ ಇದರಿಂದ ಉಂಟಾಗಿದೆ. ಒಳಗೆ ಎತ್ತರವಾದ ಪಾಣಿಪೀಠದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಇದು ಸ್ಪಟಿಕದಂತೆ ಪ್ರಕಾಶಮಾನವಾಗಿದೆ. ಗರ್ಭಗೃಹದ ಮುಂದೆ

ತೀರ್ಥಮಂಟಪ ನಂದಿಮಂಟಪ; ಇವೆರಡೂ ತಾಮ್ರದ ಹೊದಿಕೆಯ ಮಾಡನ್ನು ಹೊಂದಿವೆ. ಇಲ್ಲಿಯ ಉತ್ಸವ ಮೂರ್ತಿಯು ಕಂಚಿನದಾಗಿದ್ದು ಸುಮಾರು ಕ್ರಿ.ಶ. 9ನೆಯ ಶತಮಾನಕ್ಕೆ ಸೇರಿದ್ದು. ನಂದಿಕೇಶ್ವರ ಇಲ್ಲಿಯ ಮುಖ್ಯ ದೈವ.

ಈ ದೇವಸ್ಥಾನದಲ್ಲಿ ಕಾರ್ತಿಕ ಬಹುಳ ಅಮವಾಸ್ಯೆಯಂದು ಧ್ವಜಾರೋಹಣವಾಗಿ ಮೂರು ದಿನ ನಡೆಯುವ ಗಣೇಶೋತ್ಸವ, ಅಲ್ಲದೆ ಮೇಷ ಸಂಕ್ರಮಣ, ಸಿಂಹ ಸಂಕ್ರಮಣ, ಮಕರ ಸಂಕ್ರಮಣಗಳಂದು ಬಲಿಉತ್ಸವ, ಮಕರ ಸಂಕ್ರಮನದ ಹಿಂದಿನ ಆರು ದಿನಗಳಿಂದ ಆರಂಭಿಸಿ ಸಂಕ್ರಮಣದವರೆಗೆ ನಡೆಯುವ ಸಪ್ತೋತ್ಸವ, ಉತ್ಥಾನ ದ್ವಾದಶಿಯಿಂದ ಆರಂಭಿಸಿ ಹುಣ್ಣಿಮೆಯವರೆಗೆ ಲಕ್ಷದೀಪೋತ್ಸವ ನಡೆಯುತ್ತದೆ.

ಶಾಸನಗಳಲ್ಲಿ ಅನಂತೇಶ್ವರ ಮತ್ತು ಚಂದ್ರಮೌಳೀಶ್ವರ ದೇವಾಲಯಗಳನ್ನು 'ಪಡುದೇವ' 'ಮೂಡುದೇವ' ಎಂದು ಉಲ್ಲೇಖಿಸಲಾಗಿದೆ. ಮಧ್ವವಿಜಯ ಗ್ರಂಥದಲ್ಲೂ ಈ ದೇವಾಲಯಗಳನ್ನು 'ಮೂಡುದೇವಾಲಯ' ಎಂದೇ ಉಲ್ಲೇಖಿಸಲಾಗಿದೆ.

6.11 ಶ್ರೀ ಅನಂತೇಶ್ವರ ದೇವಸ್ಥಾನ

ಉಡುಪಿ ರಥಬೀದಿಯ ಪ್ರಮುಖ ಆಕರ್ಷಣೆಗಳಲ್ಲಿ ಒಂದು ಶ್ರೀ ಅನಂತೇಶ್ವರ ದೇವಸ್ಥಾನ. ಇದು ಸುಮಾರು ಕ್ರಿ.ಶ. 7–8ನೆಯ ಶತಮಾನಕ್ಕೆ ಸೇರುವ ಪ್ರಾಚೀನ ದೇವಾಲಯ. ಇಲ್ಲಿರುವ ಕ್ರಿ.ಶ. 1357ರ ಶಿಲಾ ಶಾಸನದಲ್ಲಿ ಈ ದೇವರನ್ನು 'ಉಡುಪಿಯ ಶ್ರೀ ಮಹಾದೇವ' ಎಂದು ಕರೆಯಾಲಾಗಿದೆ.

ಇದರ ಮಹಾದ್ವಾರ, ಚಂದ್ರಶಾಲೆ, ಪ್ರಾಕಾರ ಮತ್ತು ತೆರೆದ ಪ್ರದಕ್ಷಿಣಪಥ– ಎಲ್ಲವೂ ಭವ್ಯವಾಗಿದೆ. ಪ್ರವೇಶ ದ್ವಾರವೂ ಬೃಹತ್ತಾದ ಮಂಟಪವನ್ನು ಹೊಂದಿದೆ. ವಿಶಾಲವಾದ ಪ್ರಾಂಗಣದೊಳಗೆ ಗಜಪೃಷ್ಠಾಕಾರದಲ್ಲಿ ಈ ಬೃಹತ್ ದೇವಾಲಯವನ್ನು ಕಗ್ಗಲ್ಲಿನಿಂದ ಕಟ್ಟಲಾಗಿದೆ. ಇದರ ಮಾಡು ಎರಡು ನೆಲೆಗಳಲ್ಲಿವೆ. ಕೆಳಗಿನಹಂತದ ಮಾಡು ಶಿಲಾಮಯವಾಗಿದ್ದರೆ, ಗರ್ಭಗೃಹದ ಮೇಲಿನ ವಿಮಾನದ ಮಾಡಿಗೆ ತಾಮ್ರದ ಹೊದಿಕೆಯಿದೆ. ಮಾಡಿನ ಎತ್ತರವೂ ದೇವಾಲಯಕ್ಕೆ ಭವ್ಯತೆಯ ಮೆರುಗನ್ನು ತಂದುಕೊಟ್ಟಿದೆ. ಜನರಿಗೆ ಈ ದೇವಾಲಯದ ಇರವು ಗೋಚರಿಸುವುದು ಇದರ ಎತ್ತರದಿಂದಲೇ.

ಮುಖಮಂಟಪ, ನವರಂಗ, ಗರ್ಭಗೃಹ ಇಲ್ಲಿಯ ಮುಖ್ಯ ಅಂಗಗಳು. ಗರ್ಭಗೃಹದ ಸುತ್ತಲೂ ಕತ್ತಲೆ ಪ್ರದಕ್ಷಿಣಪಥವಿದೆ. ಇದಕ್ಕೆ ಪ್ರವೇಶ ನವರಂಗದಿಂದ ಹಂತಹಂತವಾಗಿ ಮೇಲೆರುವ ಇಲ್ಲಿಯ ನೆಲಮಟ್ಟವು ಗರ್ಭಗೃಹವನ್ನು ಎತ್ತರದ ಸ್ಥಳದಲ್ಲಿರಿಸಿದೆ. ಗರ್ಭಗೃಹದಲ್ಲಿ ಎತ್ತರವಾದ ಪಾಣಿಪೀಠದ ಮೇಲೆ ಸಾಕಷ್ಟು ಎತ್ತರವಾದ ಮತ್ತು ಸ್ವಯಂಭೂ ಎನ್ನಲಾದ ಶಿವಲಿಂಗವಿದೆ. ಇಲ್ಲಿ ಪೂಜಾಸಮಯದ ವೀಕ್ಷಣೆ ಅನಿರ್ವಚನೀಯ ಅನುಭವ ಕೊಡುತ್ತದೆ.

ಮುಖಮಂಟಪದಲ್ಲಿ ಉಪಾಸನದೇವತೆಯಾಗಿ ಗಣಪತಿ ಪೂಜೆಗೊಳ್ಳುತ್ತಿದ್ದಾನೆ. ಇಲ್ಲಿಯ ಉತ್ಸವ ಮೂರ್ತಿಯು 30ಸೇ.ಮೀ. ಎತ್ತರದ ಸುಂದರ ಕಂಚಿನ ಪ್ರತಿಮೆ. ದೇವಾಲಯದ ನೈಋತ್ಯ ಭಾಗದಲ್ಲಿ ಶಾಸ್ತಾರನ ಗುಡಿಯಿದೆ. ಗರ್ಭಗೃಹದ ಭಿತ್ತಿಯು

ಎತ್ತರವೂ, ವಿಶಾಲವೂ ಆಗಿದ್ದು ಹೊರಗಿನ ಭಾಗದಲ್ಲಿ ಆಕರ್ಷಕ ಕೆತ್ತನೆಗಳಿಂದ ಕೂಡಿದೆ. ಈ ಭಾಗವು ಸುಭದ್ರವಾದ ಶಿಲಾಮಯ ರಚನೆ. ಆದರೆ ಇದರ ಸೌಂದರ್ಯ ಮಾತ್ರಯಾರಿಗೂ ಗೋಚರಿಸುವುದಿಲ್ಲ. ಕಾರಣ ಇದರ ಹೊರಸುತ್ತಿನಲ್ಲಿರುವ ಮುರಕಲ್ಲಿನ ಸಾಮಾನ್ಯ ಭಿತ್ತಿ. ಮೂಲ ರಚನೆಯಲ್ಲದ ಇದು ಕಾಲಾನಂತರದ ಸೇರ್ಪಡೆ.

ಮಹಾದ್ವಾರಕ್ಕೆದುರಾಗಿ ಹೊರಭಾಗದಲ್ಲಿ ಬೃಹತ್ ಶಿಲಾಮಯ ಪ್ರಧಾನ ಬಲಿಪೀಠವಿದೆ. ಇದರ ಎತ್ತರ ಸುಮಾರು ಎರಡೂವರೆ ಮೀಟರುಗಳು. ದೇವಾಲಯದ ಭವ್ಯತೆಗೆ ಮೆರುಗನ್ನು ನೀಡುವಂತಹ ಕಲಾನೈಪುಣ್ಯದಿಂದ ಕೂಡಿದ ಅತ್ಯಂತ ಸುಂದರವಾದ ರಚನಾ ಶೈಲಿ ಇದರದ್ದು. ದೇವಾಲಯದ ಪ್ರಾಚೀನತೆಯನ್ನು ಈ ಶೈಲಿ ಪ್ರತಿಬಿಂಬಿಸುತ್ತದೆ.

ಪ್ರಧಾನ ಬಲಿಪೀಠದ ಎದುರು ಸುಮಾರು ಹತ್ತು ಮೀಟರ್ ಎತ್ತರದ ಬೃಹತ್ ಶಿಲಾಸ್ತಂಭವಿದೆ. ಸುಂದರ ರಚನಾ ಶೈಲಿ ಮತ್ತು ಕೆತ್ತನೆಗಳಿಂದ ಕೂಡಿದ ಇದು ವಿಜಯನಗರ ಕಾಲದ್ದು. ಇದರ ಇರುವಿಕೆಯೆ ಜನರಿಗೆ ಗೋಚರವಾಗದಂತ ಪರಿಸ್ಥಿತಿಯಲ್ಲಿ ಈ ಸುಂದರ ಶಿಲಾಸ್ತಂಬ ಮತ್ತು ಬಲಿಪೀಠಗಳಿವೆ. ಶ್ರೀಮದನಂತೇಶ್ವರ ದೇವಾಲಯವು ಉಡುಪಿಯ ಪ್ರಾಚೀನ ವಿದ್ಯಾಕೇಂದ್ರವೂ ಆಗಿತ್ತು. ಆಚಾರ್ಯಮಧ್ವರು ಬಾಲ್ಯದಲ್ಲಿ ಅಚ್ಚುತಪ್ರಜ್ಞರಿಂದ ವಿದ್ಯೆ ಅನಂತರ ಸಂನ್ಯಾಸದೀಕ್ಷೆ ಪಡೆದ ಕ್ಷೇತ್ರ ಇದು. ಅನಂತರ ಇಲ್ಲಿಯೇ ತಮ್ಮ ಶಿಷ್ಯರಿಗೆ ಪಾಠಹೇಳುತ್ತಿದ್ದರೆಂಬ ಐತಿಹ್ಯ ಇದೆ. ದೇವಾಲಯದ ನವರಂಗದ ಕಂಬದ ಬಳಿ ಆಚಾರ್ಯರೂ ಕುಳಿತುಕೊಳ್ಳುತ್ತಿದ್ದ ಪೀಠವನ್ನು ಇಂದಿಗೂ ಕಾಣಬಹುದು. ಇದಕ್ಕೆ ನಿತ್ಯಪೂಜೆ ಇದೆ. ಈ ಸ್ಥಳದಲ್ಲಿ ವಿಗ್ರಹ ಇಲ್ಲದ ಒಂದು ಸುಂದರವಾದ ಗುಡಿ ಇದೆ. ಗುಡಿಯ ಹೊರಗೆ ಬಾಗಿಲ ಮೇಲುಗಡೆ ಶ್ರೀ ಮದ್ವಾಚಾರ್ಯರ ಸುಂದರ ಕಲಾವಿಗ್ರಹವಿದೆ. ಇದನ್ನು ಶ್ರೀ ವಾದಿರಾಜ ಸ್ವಾಮಿಗಳು ಸ್ಥಾಪಿಸಿದ್ದರೆಂಬ ಪ್ರತೀತಿ ಇದೆ. ಉಡುಪಿಯ ಭವ್ಯ ಪರಂಪರೆಗೆ ಇದೊಂದು ಪವಿತ್ರ ಸ್ಮಾರಕ.

ಈ ದೇವಾಲಯದಲ್ಲಿ ಶಿವರಾತ್ರಿಯಂದು ಧ್ವಜಾರೋಹಣವಾಗಿ 5ನೇ ದಿನಕ್ಕೆ ಮಹಾರಥೋತ್ಸವ ನಡೆಯುತ್ತದೆ. ಚಾಂದ್ರಯುಗಾದಿಯಿಂದ ನವಮಿಯವರೆಗೆ ರಾಮೋತ್ಸವ ನಡೆಯುತ್ತದೆ. ಇದಲ್ಲದೆ ಗಣೇಶ ಚತುರ್ಥಿ, ಮೇಷ ಸಂಕ್ರಮಣ, ಸಿಂಹ ಸಂಕ್ರಮಣ, ಮಕರ ಸಂಕ್ರಮಣಗಳೂ, ಮಕರ ಸಂಕ್ರಮಣದ ಹಿಂದಿನ ಆರು ದಿನಗಳಿಂದ ಆರಂಭಿಸಿ ಸಂಕ್ರಮಣದವರೆಗೆ ಸಪ್ತೋತ್ಸವ, ಉತ್ಥಾನ ದ್ವಾದಶಿಯಿಂದ ಆರಂಭಿಸಿ ಹುಣ್ಣಿಮೆಯವರೆಗೆ ಲಕ್ಷದೀಪೋತ್ಸವ ಜರಗುತ್ತದೆ.

ಪರಿವಾರ ದೈವಗಳ ಸ್ಥಾನದಲ್ಲಿ ಬೊಬ್ಬರ್ಯ, ಕಲ್ಲುಕುಟ್ಟಿಗ, ಧೂಮಾವತಿ ದೈವಗಳಿದ್ದು, ಇವುಗಳಿಗೆ ವಾರ್ಷಿಕ ಕೋಲ ನೇಮೋತ್ಸವಗಳು ನಡೆಯುತ್ತವೆ.

6.12 ಶ್ರೀ ಸುಬ್ರಹ್ಮಣ್ಯ ದೇವಸ್ಥಾನ

ಶ್ರೀಕೃಷ್ಣಮಠದ ವಸಂತಮಹಲಿನ ಆಗ್ನೇಯ ಭಾಗದಲ್ಲಿ ಶ್ರೀಸುಬ್ರಹ್ಮಣ್ಯನ ಪುಟ್ಟ ಗುಡಿ ಇದೆ. ಸೋದೆ ಮಠದ ಶ್ರೀ ವಾದಿರಾಜತೀರ್ಥರು ಇದನ್ನು ನಿರ್ಮಿಸಿದರೆಂಬ ಐತಿಹ್ಯವಿದೆ.

ದೆಹಲಿಯ ಮೊಗಲ್ ಚಕ್ರವರ್ತಿಯೊಬ್ಬ ಕಳುಹಿಸಿದ ಅಪರಿಮಿತ ಚಿನ್ನದ ಕಾಣಿಕೆಯನ್ನುಉಪಯೋಗಿಸಿಕೊಂಡು ಶ್ರೀಕೃಷ್ಣ ಮಠದ ಮಾಡಿಗೆ ಚಿನ್ನದ ತಗಡು ಹಾಸು ಹಾಕುವ ಆಲೋಚನೆಯನ್ನು ಶ್ರೀವಾದಿರಾಜರು ಮಾಡಿದರಂತೆ. ಆದರೆ ಅವರಿಗೆ ಕನಸಿನಲ್ಲಿ ಆ ಕೆಲಸವನ್ನು ಮಾಡದಂತೆ ಆದೇಶವಾಯಿತ್ತಂತೆ. ಆ ಕಾರಣ ಇಡೀ ಹೊನ್ನಿನ ರಾಶಿಯನ್ನು ಮಠದ ಉತ್ತರಭಾಗದಲ್ಲಿಯ ನೆಲದಲ್ಲಿ ಹುದುಗಿಸಿಟ್ಟರು. ನಿಧಿಯನ್ನು ಕಾಪಿಡುವ ಸಲುವಾಗಿ ನಾಗದೇವರನ್ನು ಪ್ರತಿಷ್ಠಾಪಿಸಿದರು ಎಂಬ ಐತಿಹ್ಯವಿದೆ. ಆದರೆ ಈ ಅಪರಿಮಿತ ನಿಧಿಯನ್ನು ವಿಜಯನಗರ ಚಕ್ರವರ್ತಿ ಶ್ರೀ ಅಚ್ಯುತರಾಯ ಕೊಡ ಮಾಡಿದ ಎಂಬ ಅಭಿಪ್ರಾಯವೂ ಇದೆ.

ಶ್ರೀಸುಬ್ರಹ್ಮಣ್ಯನಿಗೆ ನಿತ್ಯಪೂಜೆ ಇದೆ. ಸುಬ್ರಹ್ಮಣ್ಯ ಷಷ್ಠಿಯಂದು ಇಲ್ಲಿ ವಿಶೇಷ ಪೂಜೆ, ಉತ್ಸಾವಾದಿಗಳು ಜರಗುತ್ತವೆ. ಅಂದು ಹಗಲು ಶ್ರೀಸುಬ್ರಹ್ಮಣ್ಯನ ರಥೋತ್ಸವ ನೆರವೇರುತ್ತದೆ. ಪ್ರತಿ ಪರ್ಯಾಯಕಾಲದಲ್ಲಿ ಇಲ್ಲಿ ವಿಶೇಷ ನಾಗಮಂಡಲ ಸೇವೆ ನಡೆಯುತ್ತದೆ.

6.13 ಅಷ್ಟ ಮಠಗಳು

ಉಡುಪಿಯ ಕೇಂದ್ರಸ್ಥಾನ ಹಾಗೂ ಆಕರ್ಷಣೀಯ ಕೇಂದ್ರ ಇಲ್ಲಿಯ ರಥಬೀದಿ. ಇಲ್ಲಿ ಶ್ರೀ ಮಧ್ವಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಅಷ್ಟಮಠಗಳಿವೆ. ಶ್ರೀಕೃಷ್ಣ ಮಂದಿರದಿಂದ ಹೊರಗೆ ಬಂದಾಗ ನಮಗೆದುರಾಗುವುದು ಮೂಡುದೇವ ಶ್ರೀಚಂದ್ರಮೌಳೀಶ್ವರ ದೇವಸ್ಥಾನ. ಎಡಕ್ಕೆ ಹೊರಳಿ ಮುಂದೆ ನಡೆದರೆ ಎಡಭಾಗದಲ್ಲಿ ಮಧ್ವ ಸರೋವರ ಮತ್ತು ಎದುರಿಗೆ ಕಾಣಿಯೂರು ಮಠವನ್ನು ಕಾಣುತ್ತೇವೆ. ಇಲ್ಲಿ ದಕ್ಷಿಣಾಮುಖವಾಗಿರುವ ರಥಬೀದಿಯಲ್ಲಿ ಮುಂದೆ ಸಾಗಿದರೆ ಆಗ್ನೇಯ ಮೂಲೆಯಲ್ಲಿ ಉತ್ತರಾಭಿಮುಖವಾಗಿರುವ ಶ್ರೀ ವಾದಿರಾಜ ಮಠ ಮತ್ತು ಅದರ ಎಡಭಾಗದಲ್ಲಿರುವ ಪುತ್ತಿಗೆ ಮಠಗಳನ್ನು ನೋಡಬಹುದು. ಪೂರ್ವ–ಪಶ್ಚಿಮವಾಗಿರುವ ರಥಬೀದಿಯ ಮುಂದುವರೆದ ಭಾಗವು ಈಗ ಬಹಳ ವಿಶಾಲವಾಗಿದ್ದು ಸುಂದರವಾದ ನೋಟವನ್ನು ಹೊಂದಿದೆ. ರಥೋತ್ಸವಕ್ಕೆ ಸಂಬಂಧ ಪಟ್ಟ ಎಲ್ಲ ಮುಖ್ಯ ಕಾರ್ಯಕ್ರಮಗಳ ಆಕರ್ಷಣಿಯ ನೋಟ ಇಲ್ಲಿ ಪ್ರೇಕ್ಷಕರಿಗೆ ದೊರೆಯುತ್ತದೆ. ಮಕರ ಸಂಕ್ರಮಣದಂದು ಮೂರು ರಥಗಳನ್ನೂ ಎಳೆದು ತಂದು ಇಲ್ಲಿ ಒಂದೇ ಸಾಲಿನಲ್ಲಿ ನಿಲ್ಲಿಸುವಾಗ ದೊರೆಯುವ ಸೊಬಗು ನೋಡಿ ಆನಂದಿಸುವಂತಹುದು.

ರಥಬೀದಿಯ ನೈಋತ್ಯ ಭಾಗದಲ್ಲಿ ಉತ್ತರಾಭಿಮುಖವಾಗಿ ಅದಮಾರು ಮಠ ಮತ್ತು ಪೂರ್ವಾಭಿಮುಖವಾಗಿ ಪೇಜಾವರ ಮಠಗಳಿವೆ. ಪಶ್ಚಿಮ ದಿಕ್ಕಿನ ರಥಬೀದಿಯಲ್ಲಿ ಉತ್ತರಾಭಿಮುಖವಾಗಿ ಸಾಗಿದರೆ ಪೂರ್ವಾಭಿಮುಖವಾಗಿರುವ ಪಲಿಮಾರು ಮಠವನ್ನು ಕಾಣಬಹುದು. ಇಲ್ಲಿಂದ ಮುಂದೆ ಪೂರ್ವಾಭಿಮುಖವಾಗಿ ನಡೆದರೆ ದಕ್ಷಿಣಾಭಿಮುಖವಾಗಿರುವ ಕೃಷ್ಣಾಪುರ ಮತ್ತು ಶೀರೂರು ಮಠಗಳನ್ನು ಕಾಣಬಹುದು.

ಆಚಾರ್ಯಮಧ್ವರು ಸೃಷ್ಟಿಸಿದ ದ್ವಂದ್ವ ಮಠ ಪರಂಪರೆಯ ಪ್ರಕಾರ ನಡೆಯುವ ಪರ್ಯಾಯ ಕ್ರಮದಂತೆ ಈ ಮಠಗಳ ಕಟ್ಟಡಗಳು ಇಲ್ಲ. ಉಡುಪಿ ಶ್ರೀಕೃಷ್ಣ ಮಠದ ಪೂಜಾಪರಂಪರೆಯಲ್ಲಿ ವಿನೂತನ ಮಾರ್ಪಟುಗಳನ್ನು ತಂದ ಸೋದೆಮಠದ

ಶ್ರೀವಾದಿರಾಜತೀರ್ಥರು ಪ್ರತ್ಯೇಕ ಮಠಗಳ ರಚನೆಗಾಗಿ ಪ್ರಾಯಶಃ ಅಷ್ಟಮಠದ ಯತಿಗಳಿಗೆ ರಥಬೀದಿಯ ಸುತ್ತಲು ಸ್ಥಳ ವಿಂಗಡಿಸಿಕೊಟ್ಟರು. ಹೀಗಾಗಿ ತಮ್ಮ ಮೂಲ ಸ್ಥಳಗಳಲ್ಲಿರುವ ಮಠಗಳಲ್ಲದೆ ಉಡುಪಿಯಲ್ಲೂ ಸಹ ಮಠದ ಕೇಂದ್ರಗಳನ್ನು ಹೊಂದಿದ ಯತಿಗಳು ಪರ್ಯಾಯನಂತರದ ಕಾಲದಲ್ಲಿ ತಮ್ಮ ಮಠಗಳಲ್ಲೇ ವಾಸಿಸುವ ಕ್ರಮ ರೂಢಿಗೆ ಬಂತು.

'ಸಂಪ್ರದಾಯ ಪದ್ಧತಿ' ಎಂಬ ಗ್ರಂಥದ ಪ್ರಕಾರ ಆಚಾರ್ಯ ಮಧ್ವರು ಕಣ್ವತೀರ್ಥದಲ್ಲಿ ಚಾತುರ್ಮಾಸ್ಯ ದೀಕ್ಷೆಯಲ್ಲಿದ್ದಾಗ ಒಂದೊಂದು ಗುಂಪಿನಲ್ಲೂ ಇಬ್ಬಿಬ್ಬರು ಯತಿಗಳು ಇರುವಂತೆ ತಮ್ಮ ಎಂಟು ಜನ ಶಿಷ್ಯರನ್ನು ನಾಲ್ಕು ಗುಂಪುಗಳನ್ನಾಗಿ ಮಾಡಿದರು. ಈ ವರ್ಗೀಕರಣ ಇಂತಿದೆ–

1. ಪಲಿಮಾರು ಮತ್ತು ಅದಮಾರು
2. ಕೃಷ್ಣಾಪುರ ಮತ್ತು ಪುತ್ತಿಗೆ
3. ಶೀರೂರು ಮತ್ತು ಸೋದೆ
4. ಕಾಣಿಯೂರು ಮತ್ತು ಪೇಜಾವರ

ಶ್ರೀ ಹೃಷಿಕೇಶತೀರ್ಥರು ಪಲಿಮಾರು ಮಠದ ಮೂಲಯತಿಗಳು. ಸೀತಾಲಕ್ಷ್ಮಣ ಸಮೇತ ಕೋದಂಡರಾಮ ಈ ಮಠದ ಪಟ್ಟದ ದೇವರು. ಪಲಿಮಾರಿನಲ್ಲಿ ಮೂಲಮಠ ಇದೆ. ಆಕಾರಣದಿಂದ ಇದಕ್ಕೆ ಪಲಿಮಾರು ಮಠ ಎಂಬ ಹೆಸರು. ಮಧ್ವಪರಂಪರೆಯ ಖ್ಯಾತ ವಿದ್ವಾಂಸರಾಗಿದ್ದ ಈ ಮಠದ ಶ್ರೀ ವಿದ್ಯಾಮಾನ್ಯತೀರ್ಥರು ಕ್ರಿ.ಶ. 2000ದಲ್ಲಿ ವೃಂದಾವನಸ್ಥರಾದರು. ಶ್ರೀ ವಿದ್ಯಾಧೀಶತೀರ್ಥರು ಈ ಮಠದ ಈಗಿನ ಯತಿಗಳು.

ಶ್ರೀ ನರಸಿಂಹತೀರ್ಥರು (ನಾರಾಯಣ ಪಂಡಿತರ ಪ್ರಕಾರ– ನರಹರಿತೀರ್ಥರು) ಅದಮಾರು ಮಠ ಪರಂಪರೆಯ ಮೂಲ ಯತಿಗಳು. ಅದಮಾರಿನಲ್ಲಿ ಮೂಲ ಮಠ ಇದೆ. ಕಾಳಿಯಮರ್ದನ ಚತುರ್ಭುಜ ಶ್ರೀಕೃಷ್ಣ ಈ ಮಠದ ಪಟ್ಟದ ದೇವರು. ಶಿಕ್ಷಣ ಕ್ಷೇತ್ರದಲ್ಲಿ ಈ ಮಠದ ಕೊಡುಗೆ ಅಪಾರ. ವಿಜ್ಞಾನ ಕ್ಷೇತ್ರದಲ್ಲಿ ನಿರಂತರ ಸಂಶೋಧನಕಾರ್ಯಕ್ಕೆ ಅನುವುಮಾಡಿ ಕೊಡುವಂತಹ ಅಪಾರ ವೆಚ್ಚದ ಬೃಹತ್ ಯೋಜನೆಯೊಂದು ಬೆಂಗಳೂರಿನಲ್ಲಿ ಸಾಕಾರಗೊಳ್ಳುತ್ತಿದೆ. ಹಿರಿಯ ಯತಿಗಳಾದ ಶ್ರೀ ವಿಭುದೇಶತೀರ್ಥರ ಮಹಾನ್ ಯೋಜನೆ ಇದು. ಇವರ ಶಿಷ್ಯರಾದ ಶ್ರೀ ವಿಶ್ವಪ್ರಿಯತೀರ್ಥರು ಈ ಮಠದ ಈಗಿನ ಯತಿಗಳು.

ಶ್ರೀ ಜನಾರ್ದನತೀರ್ಥರು ಕೃಷ್ಣಾಪುರ ಮಠದ ಮೂಲ ಯತಿಗಳು. ಕೃಷ್ಣಾಪುರದಲ್ಲಿ ಮೂಲ ಮಠ ಇದೆ. ಕಾಳಿಯಮರ್ದನ ದ್ವಿಭುಜ ಕೃಷ್ಣ ಈ ಮಠದ ಪಟ್ಟದ ದೇವರು. ಶಿಷ್ಯರ ಕೋರಿಕೆಯ ಮೇರೆಗೆ ಆಚಾರ್ಯ ಮಧ್ವರು ಉಗ್ರನರಸಿಂಹನ ವಿಗ್ರಹವನ್ನು ಈ ಮಠಕ್ಕೆ ದಯಪಾಲಿಸಿದ್ದಾರೆ. ಶ್ರೀ ವಿದ್ಯಾಸಾಗರತೀರ್ಥರು ಈಗಿನ ಪೀಠಾಧಿಪತಿಗಳು.

ಶ್ರೀ ಉಪೇಂದ್ರತೀರ್ಥರು ಪುತ್ತಿಗೆ ಮಠದ ಮೂಲ ಯತಿಗಳು–ಹಿರಿಯಡಕದ ಬಳಿಯ ಪುತ್ತಿಗೆಯಲ್ಲಿ ಸ್ವರ್ಣಾನದಿಯ ದಂಡೆಯ ಮೇಲೆ ಮೂಲ ಮಠ ಇದೆ. ರುಕ್ಮಿಣಿ,

ಸತ್ಯಭಾಮೆ ಸಹಿತ ವಿಠಲ ಈ ಮಠದ ಪಟ್ಟದ ದೇವರು. ಈ ವಿಠಲನನ್ನು 'ಉಪೇಂದ್ರವಿಠಲ' ಎಂದು ಕರೆಯಲಾಗುತ್ತಿದೆ. ಈ ಮಠದ ಈಗಿನಯತಿವರ್ಯರಾದ ಶ್ರೀ ಸುಗುಣೇಂದ್ರತೀರ್ಥರು ವಿದೇಶ ಪರ್ಯಟನೆ ಮೂಲಕ ಧರ್ಮಜಾಗೃತಿ ಕಾರ್ಯ ಕೈಗೊಂಡಿದ್ದಾರೆ. ವಿಶ್ವಧರ್ಮ ಸಂಸತ್ತಿನಲ್ಲಿ ಅತ್ಯಂತ ಪ್ರಭಾವಪೂರ್ಣ ಕಾರ್ಯ ನಿರ್ವಹಿಸಿದ್ದಾರೆ.

ಶೀರೂರು ಮಠದ ಮೂಲ ಯತಿಗಳು ಶ್ರೀ ವಾಮನ ತೀರ್ಥರು-ಹಿರಿಯಡಕದ ಬಳಿಯ ಶೀರೂರು ಗ್ರಾಮದಲ್ಲಿ ಸ್ವರ್ಣಾನದಿ ದಂಡೆಯ ಮೇಲೆ ಮೂಲ ಮಠ ಇದೆ. ಶ್ರೀದೇವಿ, ಭೂದೇವಿ ಸಹಿತವಾದ ವಿಠಲ ಈ ಮಠದ ಪಟ್ಟದ ದೇವರು. ಈ ದೇವರನ್ನು 'ವಾಮನವಿಠಲ' ಎಂದು ಕರೆಯಲಾಗುತ್ತಿದೆ. ಶ್ರೀ ಲಕ್ಷ್ಮೀವರತೀರ್ಥರು ಈ ಮಠದ ಇಂದಿನ ಪೀಠಾಧಿಪತಿಗಳು. ಇವರ ಪರ್ಯಾಯ ಕಾಲದಲ್ಲಿ (ಜನವರಿ 1994-ಜನವರಿ 1996] ಶ್ರೀಕೃಷ್ಣನಿಗೆ ಮಾಡಿದ 300ಅಲಂಕಾರಗಳು ಇತ್ತೀಚಿನ ಇತಿಹಾಸದಲ್ಲೊಂದು ಮೈಲುಗಲ್ಲಾಗಿದೆ.

ಶ್ರೀ ವಿಷ್ಣುತೀರ್ಥರು ಕುಂಭಾಸಿ ಮಠದ ಮೂಲ ಯತಿಗಳು. ಪರಶುರಾಮ ಸೃಷ್ಟಿಯ ಕರಾವಳಿಯಲ್ಲಿರುವ ಸಪ್ತ ಮೋಕ್ಷದಾಯಕ ಸ್ಥಳಗಳಲ್ಲಿ ಕುಂಭಾಸಿಯೂ ಒಂದು. ಶ್ರೀ ವಾದಿರಾಜರು ಹುಟ್ಟಿದ ಸ್ಥಳ-ಹೂವಿನ ಕೆರೆ ಇದರ ಹತ್ತಿರವೇ ಇದೆ. 'ಭೂವರಾಹ' ಈ ಮಠದ ಪಟ್ಟದ ದೇವರು. ಶ್ರೀ ವಾದಿರಾಜರು ಈ ಮಠದ ಪೀಠವನ್ನೇರಿದ ಮೇಲೆ ಸೋದೆಯ ರಾಜ ಅರಸಪ್ಪ ನಾಯಕನಿಂದ ಅತಿಶಯವಾಗಿ ಪುರಸ್ಕೃತರಾದರು. ಸುಪ್ರೀತರಾದ ಗುರುಗಳು ಸೋದೆಯಲ್ಲಿ ಭವ್ಯವಾಗಿ ತಮ್ಮ ಮಠವನ್ನು ನಿರ್ಮಾಣ ಮಾಡಿದರು. ಅಷ್ಟೇ ಅಲ್ಲ ಅಂದಿನಿಂದ ತಮ್ಮ ಕುಂಭಾಸಿ ಮಠವನ್ನು 'ಸೋದೆ ಮಠ' ಎಂದು ಮರುನಾಮಕರಣ ಮಾಡಿದರು. ಉಳಿದ ಏಳು ಮಠಗಳು ತೌಳವ ದೇಶಿಯ ಉಡುಪಿ ಮತ್ತು ದಕ್ಷಿಣ ಕನ್ನಡ (ಮಂಗಳೂರು) ಜಿಲ್ಲೆಗಳಲ್ಲೇ ಇದ್ದರೆ, ಇದೊಂದು ಮಠ ಮಾತ್ರ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಸೋದೆ (ಸ್ವಾದಿ)ಯಲ್ಲಿದೆ. ವಾದಿರಾಜರು ಹಯಗ್ರೀವನನ್ನು ಆರಾಧಿಸುತ್ತಿದ್ದರು. ಹಾಗಾಗಿ ಈಗಿನ ಸೋದೆ ಮಠಕ್ಕೆ ಬೂವರಾಹ ಮತ್ತು ಹಯಗ್ರೀವ ಎರಡೂ ಮುಖ್ಯ ದೇವರುಗಳು. ಶ್ರೀ ವಿಶ್ವೋತ್ತಮತೀರ್ಥರು ಇಂದಿನ ಪೀಠಾಧಿಪತಿಗಳು.

ಶ್ರೀ ರಾಮತೀರ್ಥರು ಕಾಣಿಯೂರು ಮಠದ ಮೂಲ ಯತಿಗಳು. ಪುತ್ತೂರು ತಾಲೂಕಿನಲ್ಲಿ ಕಾಣಿಯೂರಿನಲ್ಲಿ ಇದರ ಮೂಲ ಮಠ ಇದೆ. ಸ್ವಸ್ತಿಕದ ಮೇಲೆ ಆಸೀನನಾದ ಚತುರ್ಭುಜ ಯೋಗನರಸಿಂಹ ಈ ಮಠದ ಪಟ್ಟದ ದೇವರು. ಶ್ರೀ ವಿದ್ಯಾವಾರಿನಿಧಿತೀರ್ಥರು ತಮ್ಮ ಪರ್ಯಾಯದ ಒಂದು ವರ್ಷಕಾಲ ಪೂರೈಸುವಷ್ಟರಲ್ಲೆ [1998-99] ವೃಂದಾವನಸ್ಥರಾದರು. ಉಳಿದ ಅವಧಿಯನ್ನು [1999-2000] ಅವರ ಶಿಷ್ಯರಾದ ಶ್ರೀ ವಿದ್ಯಾವಲ್ಲಭತೀರ್ಥರು ಅತ್ಯಂತ ಯಶಸ್ವಿಯಾಗಿ ಸಮಪನ್ನಗೊಳಿಸಿದರು.

ಶ್ರೀ ಅಧೋಕ್ಷಜತೀರ್ಥರು ಪೇಜಾವರ ಮಠದ ಮೂಲ ಯತಿಗಳು. ಸುರತ್ಕಲ್ ಬಳಿಯ ಪೇಜಾವರದಲ್ಲಿ ಇದರ ಮೂಲ ಮಠದ ಇದೆ. ಶ್ರೀದೇವಿ, ಭೂದೇವಿ ಸಹಿತ ವಿಠಲ ಈ ಮಠದ ಪಟ್ಟದ ದೇವರು. ಈ ದೇವರನ್ನು 'ಅಜವಿಠಲ' ಎಂದು ಕರೆಯುತ್ತಾರೆ. ಅಷ್ಟೇ ಅಲ್ಲ, ಮಠವನ್ನು ಪೇಜಾವರ ಅಧೋಕ್ಷಜ ಮಠ ಎಂತಲೂ

ಕರೆಯುತ್ತಾರೆ. ಈ ಮಠದ ಈಗಿನ ಹಿರಿಯ ಯತಿಗಳಾದ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವು ನಿರಂತರ ತೊಡಗಿಸಿಕೊಂಡು ದೀನ-ದಲಿತರ ಉದ್ಧಾರ ಕಾರ್ಯವನ್ನು ಅವರದೇ ಆದ ವಿಶಿಷ್ಟ ರೀತಿಯಲ್ಲಿ ನಡೆಸುತ್ತಾ ಬಂದಿದ್ದಾರೆ. ತಮ್ಮ ನಿರಂತರ ಕಾರ್ಯ ಚಟುವಟಿಕೆಗಳಿಂದ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ದೇಶವಿದೇಶಗಳಲ್ಲಿ ಖ್ಯಾತನಾಮರಾಗಿದ್ದಾರೆ. ಶ್ರೀ ವಿಶ್ವವಿಜಯತೀರ್ಥರು ಈ ಮಠದ ಕಿರಿಯ ಯತಿಗಳು.

ಅಷ್ಟಮಠಗಳ ಮೂಲ ಮಠಗಳು ಮತ್ತು ಉಡುಪಿಯಲ್ಲಿರುವ ಮಠಗಳು ಸುಂದರ ಕಾಷ್ಠಶಿಲ್ಪದ ಆಗರಗಳು. ಕೆಲವು ಮೂಲ ಮಠಗಳಿಗೆ ಐನೂರು ವರ್ಷಗಳಷ್ಟು ಪ್ರಾಚೀನತೆ ಇದ್ದರೆ ಉಡುಪಿಯಲ್ಲಿರುವ ಮಠಗಳು 16ನೆಯ ಶತಮಾನದವು. ಗೆದ್ದಲು, ಕ್ರಿಮಿ-ಕೀಟಗಳಿಂದ ಇವುಗಳಿಗೆ ನಿರಂತರ ರಕ್ಷಣೆ ಬೇಕಾಗಿದೆ. ಆಗ ಮಠಗಳ ಈ ಕಾಷ್ಠಕಲೆ ಸಮಾಜದ ಅಮೂಲ್ಯ ಆಸ್ತಿಯಾಗಿ ಉಳಿಯುತ್ತದೆ. ಹೆಚ್ಚಿನ ಮಠಗಳಲ್ಲಿ ವೇದಾಧ್ಯಯನಕ್ಕಾಗಿ ಗುರುಕುಲ ಮಾದರಿಯ ಪಾಠಶಾಲೆಗಳನ್ನು ನಡೆಸಲಾಗುತ್ತಿದೆ.

6.14 ಇತರ ಮಠಗಳು:

ಆಚಾರ್ಯಮಧ್ವರ ತತ್ವಗಳು ಹರಡಿದಂತೆ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಮಠಗಳು ಮತ್ತು ಮಠ ಪರಂಪರೆಗಳು ಹುಟ್ಟಿಕೊಂಡವು. ವಿಜಯನಗರ ಸಾಮ್ರಾಜ್ಯದ ಕಾಲವು ಇಂತಹ ಧಾರ್ಮಿಕ ಚಟುವಟಿಕೆಗಳಿಗೆ ಅತ್ಯಂತ ಪ್ರಶಸ್ತವಾಗಿತ್ತು. ಮೂಲ ಮಧ್ವಮತದ ಆಧಾರದಲ್ಲಿ ಹುಟ್ಟಿಕೊಂಡ ಮಠಗಳ ಪೈಕಿ ಕೆಲವು ತಮ್ಮ ಮಠಗಳ ಶಾಖೆಯನ್ನು ಉಡುಪಿಯಲ್ಲೂ ಕಾಲ ಕ್ರಮೇಣ ಸ್ಥಾಪಿಸಿದವು. ಅವುಗಳಾವುದೆಂದರೆ ಭಂಡಾರಕೇರಿಮಠ, ವ್ಯಾಸರಾಯ ಮಠ, ಭೀಮನಕಟ್ಟೆ ಮಠ, ಉತ್ತರಾದಿಮಠ ಮತ್ತು ನಂಜನಗೂಡು ಶ್ರೀರಾಘವೇಂದ್ರ ಮಠ. ರಥಬೀದಿಯಲ್ಲಿ ಪುತ್ತಿಗೆ ಮಠದಿಂದ ಕೃಷ್ಣಾಪುರಮಠದ ವರೆಗಿನ ಪರಿಧಿಯೊಳಗೆ ಈ ಮಠಗಳಿರುವುದನ್ನು ನೋಡಬಹುದು. ಶ್ರೀರಾಘವೇಂದ್ರ ಮಠದಲ್ಲಿರುವ ಶ್ರೀ ರಾಘವೇಂದ್ರರ ವೃಂದಾವನವು (ಸ್ಥಾಪನೆ1926) ಅತ್ಯಂತ ಭಕ್ತಿಪೂರ್ವಕ ಜನಾಕರ್ಷಣೀಯ ಕೇಂದ್ರವಾಗಿ ಈಗ ಮುನ್ನಡೆದಿದೆ. ಈಗ ಜೀರ್ಣೋದ್ಧಾರವಾಗಿ ಹೊಸ ಕಳೆಯನ್ನು ಹೊಂದಿದೆ.

ಪ್ರತಿ ವರ್ಷ ಮೀನ ಮಾಸ ಸಂಕ್ರಮಣದ ಹಿಂದಿನ ದಿನದಂದು ತೊಡಗಿ ಮೀನ ಮಾಸ ನಾಲ್ಕರ ವರೆಗೆ ಆರು ದಿನಗಳ ಕಾಲ ವಾರ್ಷಿಕ ಜಾತ್ರೆ ನಡೆಯುತ್ತದೆ. ಅಲ್ಲದೆ ರಂಗಪೂಜೆ, ತುಲಾಭಾರ, ದೀಪೋತ್ಸವ ಮೊದಲಾದವುಗಳು ಇಲ್ಲಿಯ ಸೇವೆಗಳು.

6.15 ಪರ್ಯಾಯ

ಶ್ರೀಕೃಷ್ಣನ ಪೂಜಾಕೈಂಕರ್ಯವನ್ನು ಕೈಕೊಳ್ಳಲು ಎಂಟು ಯತಿಗಳಿಗೆ ಆಚಾರ್ಯಮಧ್ವರು ವಿಧಿಸಿದ ಪ್ರಕಾರ ಪ್ರತಿಯೊಬ್ಬ ಯತಿಯೂ ಎರಡೆರಡು ತಿಂಗಳುಗಳ ಕಾಲ ಶ್ರೀಕೃಷ್ಣನ ಪೂಜೆಯನ್ನು ಮಾಡಬೇಕಾಗಿತ್ತು. ಈ ಪದ್ಧತಿಯನ್ನು ಶ್ರೀಕೃಷ್ಣಪೂಜಾ 'ಪರ್ಯಾಯ ಪದ್ಧತಿ' ಎನ್ನುತ್ತಾರೆ. ಈ ಪದ್ಧತಿ ಸುಮಾರು 200 ವರ್ಷಗಳ ಕಾಲ ಅನುಚಾನವಾಗಿ ನಡೆದುಕೊಂಡು ಬಂತು. ಅನಂತರ ಶ್ರೀ ವಾದಿರಾಜಸ್ವಾಮಿಗಳು (ಕ್ರಿ.ಶ.

1480–1600) ಎರಡು ತಿಂಗಳ ಕನಿಷ್ಠ ಅವಧಿಯ ಅನನುಕೂಲತೆಗಳನ್ನು ಮನಗಂಡು ಪರ್ಯಾಯಪೂಜಾಪದ್ಧತಿಯ ಅವಧಿಯನ್ನು ಎರಡು ತಿಂಗಳಿಂದ 2 ವರ್ಷಗಳಿಗೆ ವಿಸ್ತರಿಸಿದರೆಂದು ತಿಳಿದುಬರುತ್ತದೆ. ಈ ಪದ್ಧತಿ ಪ್ರಕಾರ 8 ಮಠಗಳಿಗೆ ಒಂದು ಸುತ್ತು ಪರ್ಯಾಯ ಆಗಲು ಹದಿನಾಲ್ಕು ವರ್ಷಗಳು ಬೇಕಾಗುತ್ತವೆ. ಈ ಹೊಸ ಕ್ರಮದ ಪ್ರಕಾರ ಕ್ರಿ.ಶ. 1522ರಲ್ಲಿ ನಡೆದ ಮೊತ್ತ ಮೊದಲ ಪರ್ಯಾಯವು ಅನೂಚಾನವಾಗಿ ನಡೆದುಕೊಂಡು ಬಂದು 1986ರಲ್ಲಿ ನಡೆದ ಪಲಿಮಾರು ಮಠದ ಪರ್ಯಾಯವು 30ನೇ ಸುತ್ತಿನ ಮೊದಲ ಪರ್ಯಾಯವೂ 2000ನೇ ಇಸವಿಯಲ್ಲಿ ಜರಗಿದ ಪೇಜಾವರ ಮಠದ ಪರ್ಯಾಯವು 30ನೇ ಸುತ್ತಿನ ಕೊನೆಯ ಪರ್ಯಾಯವೂ ಆಗಿದೆ.

ಉಡುಪಿಯಲ್ಲಿ ಅಷ್ಟಮಠಗಳಿಗೆ ಪ್ರತಿಯೊಂದಕ್ಕೂ ನಾಡಿನ ಬೇರೆಬೇರೆ ಕಡೆಗಳಲ್ಲಿ ಉಂಬಳಿ ದೊರೆತಿದೆ. ತದನುಸಾರ ಈ ಮಠಗಳಿಗೆ ತಮಗೆ ಸಿಕ್ಕಿದ ಉಂಬಳಿಯಿರುವ ಗ್ರಾಮದ ಹೆಸರೇ ಬಂದಿರುವುದೊಂದು ವಿಶೇಷ. ಅದರಂತೆ ಆಯಾ ಹಳ್ಳಿಗಳಲ್ಲಿ ಈ ಮಠಗಳ ಪ್ರಧಾನ ಶಾಖಾಮಠಗಳಿವೆ.

ಪಲಿಮಾರು : ಉಡುಪಿ ತಾಲೂಕಿನ ಪಲಿಮಾರು ಎಂಬ ಹಳ್ಳಿ

ಅದಮಾರು : ಪಡುಬಿದ್ರಿಯ ಸಮೀಪದ ಒಂದು ಗ್ರಾಮ.

ಕೃಷ್ಣಾಪುರ : ಮಂಗಳೂರು ತಾಲೂಕಿನ ಸುರತ್ಕಲ್ಲಿನ ಸಮೀಪದ ಹಳ್ಳಿ.

ಪುತ್ತಿಗೆ : ಉಡುಪಿ ತಾಲೂಕಿನ ಹಿರಿಯಡಕ ಸಮೀಪದ ಗ್ರಾಮ.

ಶೀರೂರು : ಹಿರಿಯಡಕ ಸಮೀಪವಿರುವ ಇನ್ನೊಂದು ಗ್ರಾಮ.

ಸೋದೆ : ಶಿರಸಿನ ಸಮೀಪದ ಒಂದು ಗ್ರಾಮ.

ಕಾಣಿಯೂರು : ಪುತ್ತೂರು ತಾಲೂಕಿನ ಒಂದು ಹಳ್ಳಿ.

ಪೇಜಾವರ : ಮಂಗಳೂರು ತಾಲೂಕಿನ ಜೋಕಟ್ಟೆಯ ಹಳ್ಳಿ.

ಈ ಎಲ್ಲ ಮಠಗಳಿಗೂ ಕೇಂದ್ರಸ್ಥಾನ ಉಡುಪಿಯೇ. ಪ್ರಾಚೀನ ದೇವಾಲಯಗಳಾದ ಶ್ರೀಚಂದ್ರಮೌಳೀಶ್ವರ ಹಾಗೂ ಶ್ರೀಅನಂತೇಶ್ವರ ದೇವಾಲಯಗಳು ಕೇಂದ್ರವಾಗಿದ್ದು ಅದನ್ನು ಸುತ್ತುವರಿದಿರುವ ರಥಬೀದಿಯ ಸುತ್ತಲೂ ಈ ಅಷ್ಟಮಠಗಳು ಸ್ಥಾಪಿತವಾಗಿವೆ. ಈ ದೇವಾಲಯಗಳ ಈಶಾನ್ಯಭಾಗದಿಂದಾರಂಭಿಸಿ ತೇರುಬೀದಿ ಗುಂಟ ಪ್ರದಕ್ಷಿಣಾಕಾರವಾಗಿ ಬಂದಾಗ ಕ್ರಮವಾಗಿ ಕಾಣಿಯೂರು, ಸೋದೆ, ಪುತ್ತಿಗೆ, ಅದಮಾರು, ಪೇಜಾವರ, ಪಲಿಮಾರು, ಕೃಷ್ಣಾಪುರ ಹಾಗೂ ಶೀರೂರು ಎಂಬ ಎಂಟು ಮಠಗಳನ್ನು ಕೊನೆಗೆ ಶ್ರೀಕೃಷ್ಣಮಂದಿರವನ್ನೂ (ಇದನ್ನು 'ಕೃಷ್ಣಮಠ'ವೆಂದೇ ಕರೆಯುವುದು ರೂಢಿ) ದರ್ಶಿಸಬಹುದು.

ಯಾವುದೇ ಮತ, ಪಂಥವಿದ್ದರೂ ಮಠಸ್ಥಾಪನೆಯ ಮೂಲೋದ್ದೇಶ ಮತಪ್ರಚಾರವೆಂದರೆ ತಪ್ಪಾಗಲಾರದು. ಆದರೆ ಅದಕ್ಕಿಂತ ಹೆಚ್ಚಾಗಿ ಅವುಗಳು ಧಾರ್ಮಿಕಶ್ರದ್ಧಾಕೇಂದ್ರಗಳಾಗಿ ಸಮಾಜಕ್ಕೆ ನೈತಿಕತೆಯ ಮಾರ್ಗದರ್ಶಕಗಳಾಗಿ ಪರಿವರ್ತಿತವಾಗಿರುವುದನ್ನು ಗಮನಿಸಬಹುದು. ಅದರಂತೆಯೇ ಮೂಲತಃ ಶ್ರೀಕೃಷ್ಣ

ಪೂಜಾರ್ಥ ಹುಟ್ಟಿಕೊಂಡ ಮಠಪರಂಪರೆಯು ದ್ವೈತಮತ ಪ್ರವರ್ತನ ಕೇಂದ್ರಗಳಾಗಿ ಬೆಳೆದವು. ಆದರೆ ಕಾಲಕ್ರಮೇಣ ಕಾಲಧರ್ಮಕ್ಕನುಸಾರ, ಸಾಮಾಜಿಕ ಪರಿವರ್ತನೆಗನುಸಾರ, ಜನರು ಮನೋಭಾವದ ಬದಲಾವಣೆಗನುಸಾರ ಪ್ರತಿಸ್ಪಂದಿಸಿದ ಈ ಮಠಗಳು ತಮ್ಮ ಉದ್ದೇಶದಲ್ಲಿ, ತಮ್ಮ ಸಾಮಾಜಿಕ ಬದ್ಧತೆಯಲ್ಲಿ, ತಮ್ಮ ಚಟುವಟಿಕೆಗಳಲ್ಲಿ, ತಮ್ಮ ನಿಲುವುಗಳಲ್ಲಿ, ತಮ್ಮ ಕರ್ತವ್ಯಗಳಲ್ಲಿ, ತಮ್ಮ ಹೊಣೆಗಾರಿಕೆಗಳಲ್ಲಿ ಗಮನಾರ್ಹವಾದ ಪರಿವರ್ತನೆಗಳನ್ನು ಮಾಡಿಕೊಂಡುದನ್ನು ಅವುಗಳ ಸುಮಾರು 700 ವರ್ಷಗಳ ಚರಿತ್ರೆಯಿಂದ ಮನವರಿಕೆ ಮಾಡಿಕೊಳ್ಳಬಹುದು.

ಈ ದೃಷ್ಟಿಯಿಂದ ಉಡುಪಿಯ ಅಷ್ಟಮಠಗಳು ಇಂದು ಸಮಾಜದೊಳಗೆ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿವೆ, ಸಮಾಜದ ಆಗುಹೋಗುಗಳಿಗೆ ಪ್ರತಿಸ್ಪಂದಿಸುತ್ತವೆ.

6.16 ಸಾಂಸ್ಕೃತಿಕ ಕ್ಷೇತ್ರದಲ್ಲಿ:

ಇಂದು ಅಷ್ಟಮಠಗಳು ಸಂಸ್ಕೃತಿಯ ವಾಹಕಗಳಾಗಿಯೂ ಕಾರ್ಯನಿರ್ವಹಿಸುತ್ತಿವೆ. ನಾಡಿನ ಅಸಂಖ್ಯಾತ ದೇವಾಲಯಗಳಲ್ಲಿ ತಲೆಮಾರಿನಿಂದ ತಲೆಮಾರಿಗೆ ಪೂಜಾಕ್ರಮ, ಹಬ್ಬಹರಿದಿನಗಳ ಆಚರಣೆಯ ಕ್ರಮ, ನಿತ್ಯ–ನೈಮಿತ್ತಿಕ ಅನುಷ್ಠಾನಗಳ ಕ್ರಮ ಮುಂತಾದವು ಗುರುತಿಸಲಾರದಷ್ಟು ವ್ಯತ್ಯಸ್ತವಾಗಿ ಹೋಗಬಹುದು. ಆದರೆ ಉಡುಪಿಯ ಅಷ್ಟಮಠಗಳು ಶತಮಾನಗಳ ಹಿಂದಿದ್ದ ಕ್ರಮಗಳನ್ನು ಈಗಲೂ ಮುನ್ನಡೆಸಿಕೊಂಡು ಬಂದುದನ್ನು ಗುರುತಿಸಬಹುದು. ಮಾತ್ರವಲ್ಲದೆ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಗುರುತರವಾದ ಕಾರ್ಯ ತಮ್ಮಿಂದ ನಡೆಯಬೇಕಿದೆ ಎಂಬುದನ್ನು ಅರಿತುಕೊಂಡಿವೆ. ಕಾಲಧರ್ಮಕ್ಕನುಸಾರ ಮತ್ತು ಸಾಮಾಜಿಕ ಪರಿವರ್ತನೆಗನುಸಾರ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸೂಕ್ತ ನಿರ್ದೇಶನವನ್ನು ಕೊಡಬಲ್ಲವು; ಯುಕ್ತ ಸಹಭಾಗಿತ್ವವನ್ನು ಪಡೆಯಬಲ್ಲವು.

ಸಾಂಸ್ಕೃತಿಕ ಕ್ಷೇತ್ರದಲ್ಲಿ ಈ ಅಷ್ಟಮಠಗಳ ಬಹುದೊಡ್ಡ ಕೊಡುಗೆಯೆಂದರೆ ಪರ್ಯಾಯ ಮಹೋತ್ಸವವನ್ನು ಜಾತ್ರೆಯ ರೀತಿಯಲ್ಲಿ ನಡೆಸಿಕೊಂಡು ಬರುವಂತಹದು. ಮೂಲತಃ ಧಾರ್ಮಿಕ ಉತ್ಸವವಾಗಿ ಆರಂಭವಾದ ಪರ್ಯಾಯವು ಈಗ ಭಕ್ತಭಾವುಕರಿಗೆ, ನಾಡ ಜನರಿಗೆ ಧಾರ್ಮಿಕ ಉತ್ಸವಕ್ಕಿಂತ ಹೆಚ್ಚಾಗಿ ಸಾಂಸ್ಕೃತಿಕ ಉತ್ಸವವಾಗಿಯೇ ಕಂಡುಬರುತ್ತದೆ. ಮೈಸೂರಿನ ದಸರಾ ಉತ್ಸವ ಹೇಗೋ ಉಡುಪಿಯ ಪರ್ಯಾಯ ಉತ್ಸವವೂ ಹಾಗೆಯೇ ದೇಶವಿದೇಶಗಳಿಂದ ಜನರನ್ನು ಆಕರ್ಷಿಸುವ ನಾಡಹಬ್ಬ. ಅಷ್ಟಮಠಗಳವರಿಗೆ ಶ್ರೀಕೃಷ್ಣನ ಪೂಜಾ ಕೈಂಕರ್ಯದ ಹೊಣೆಗಾರಿಕೆಯನ್ನು ಒಂದು ಮಠದವರು ಬಿಟ್ಟುಕೊಡುವ, ಇನ್ನೊಂದು ನಿರ್ದಿಷ್ಟ ಮಠದವರು ವಹಿಸಿಕೊಳ್ಳುವ ಒಂದು ಧಾರ್ಮಿಕ ಹಬ್ಬ. ಆದರೆ ಅನ್ಯರಿಗೆ ಇದು ಸಾಂಸ್ಕೃತಿಕ ಉತ್ಸವ ವಿಶೇಷ. ಈ ನಾಡಹಬ್ಬ ಎರಡು ದಿನಗಳ ಕಾಲ ಬಹಳ ವಿಜೃಂಭಣೆಯಿಂದ ನೆರವೇರುತ್ತದೆ. ಮುಂಜಾನೆ ಎರಡು ಗಂಟೆಗೇ ಆರಂಭವಾಗುವ ಪರ್ಯಾಯೋತ್ಸವದ ಮೆರವಣಿಗೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ವೀಯುವ ಹಲವಾರು ತಂಡಗಳು, ಕಲಾವಿದರು ಅತ್ಯುತ್ಸಾಹದಿಂದ ಭಾಗವಹಿಸುತ್ತಾರೆ. ಬಳಿಕ ನಡೆಯುವ ದರ್ಬಾರು ಸಭೆಯಲ್ಲಿ ಅನೇಕ ಭಾಷಣಗಳೂ ವಿವಿಧ ಕ್ಷೇತ್ರಗಳಲ್ಲಿ ಅಪೂರ್ವಸಾಧನೆಗೈದ

ಗಣ್ಯರನೇಕರಿಗೆ ಸಮ್ಮಾನ ಕಾರ್ಯಕ್ರಮಗಳೂ ಜರಗುತ್ತವೆ. ಬಳಿಕ ಇಡೀ ಪಟ್ಟಣದಲ್ಲಿ ಅಲ್ಲಲ್ಲಿ ಬೇರೆಬೇರೆ ರೀತಿಯ ಮನೋರಂಜನ ಕಾರ್ಯಕ್ರಮಗಳು ಹಗಲಿರುಳೂ ನಡೆಯುತ್ತವೆ. ಬೇರೆಬೇರೆ ಊರಿಂದ ಬಂದ ಸಾಂಸ್ಕೃತಿಕ ತಂಡಗಳೂ ಸ್ಥಳೀಯ ಸಂಘಸಂಸ್ಥೆಗಳೂ ಸ್ಥಳಾವಕಾಶ ಸಿಕ್ಕಲ್ಲೆಲ್ಲ ಕಾರ್ಯಕ್ರಮಗಳನ್ನು ನೀಡುತ್ತಿರುವಾಗ ಇಡೀ ಪಟ್ಟಣವೇ ಒಂದು ರಂಗಸ್ಥಳವೆಂಬಂತೆ ಭಾಸವಾಗುತ್ತದೆ. ಪರ್ಯಾಯ ಮಹೋತ್ಸವದ ಪೂರ್ತಿ ರಾತ್ರಿ ಹಗಲಿನಂತಾಗಿ ಉಡುಪಿ ನಗರವಿಡೀ ಎಚ್ಚರವಿರುತ್ತ ಜನರೆಲ್ಲರೂ ಈ ಅಪೂರ್ವ ಸಂಭ್ರಮದಲ್ಲಿ ಪಾಲ್ಗೊಳ್ಳುತ್ತಾರೆ. ಪರ್ಯಾಯೋತ್ಸವದಲ್ಲಿ ಮಠಗಳೂ ನಾಡಜನಗಳೂ ಒಟ್ಟಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೇರ್ಪಡಿಸುತ್ತವೆ. ಸಾಂಸ್ಕೃತಿಕ ತಂಡಗಳೊಳಗೆ ಅಥವಾ ಕಲಾವಿದರೊಳಗೆ ವಿವಿಧ ರೀತಿಯ ಸ್ಪರ್ಧೆಗಳನ್ನು ಏರ್ಪಡಿಸಿ ಪರ್ಯಾಯ ಮಠವು ಅವುಗಳಿಗೆ ಸೂಕ್ತ ಬಹುಮಾನಗಳನ್ನೂ ಪಾರಿತೋಷಕಗಳನ್ನೂ ಇತ್ತು ಸನ್ಮಾನಿಸುವ ಮೂಲಕ ಕಲಾಪ್ರೋತ್ಸಾಹವನ್ನೀಯುತ್ತದೆ. ಈ ಸಂದರ್ಭದಲ್ಲಲ್ಲದೆ ಆಗಾಗ ಮಠದ ಪರಿಸರದಲ್ಲಿ ಉಪನ್ಯಾಸ, ಪ್ರವಚನ, ಸಂಗೀತ ಕಛೇರಿ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಠಗಳು ಏರ್ಪಡಿಸುತ್ತವೆ. ಇಂತಹ ಕಾರ್ಯಕ್ರಮಗಳನ್ನು ಸಾಮಾನ್ಯವಾಗಿ ಪರ್ಯಾಯವನ್ನು ವಹಿಸಿಕೊಂಡ ಮಠವೇ ಏರ್ಪಡಿಸುತ್ತದೆ.

ಪರ್ಯಾಯೋತ್ಸವದಂತೆ, ಆದರೆ ಅದಕ್ಕಿಂತ ಕಿರಿದಾದ ಇನ್ನೊಂದು ವಿಶಿಷ್ಟ ಉತ್ಸವ ಶ್ರೀಕೃಷ್ಣ ಜನ್ಮಾಷ್ಟಮಿ ಮತ್ತು ಅದರ ಮರುದಿನ ಹಗಲುಹೊತ್ತಿನಲ್ಲಿ ಜರಗುವ 'ವಿಟ್ಲಪಿಂಡಿ' ಎನ್ನುವ ಉತ್ಸವಗಳು. ಈ ಸಂದರ್ಭದಲ್ಲಿ ಇಡೀ ಊರೇ ಈ ಉತ್ಸವಗಳಲ್ಲಿ ಪಾಲ್ಗೊಳ್ಳುತ್ತದೆ. ಇವೆಲ್ಲವೂ ಪರ್ಯಾಯಮಠದ ನೇತೃತ್ವದಲ್ಲೇ ನೆರವೇರುವಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು.

6.17 ಧಾರ್ಮಿಕ ಕ್ಷೇತ್ರದಲ್ಲಿ

ಶ್ರೀಕೃಷ್ಣನ ನಿರಂತರ ಪೂಜೆ, ಕಾಲಕಾಲಕ್ಕೆ ಆಗಬೇಕಾದ ಉತ್ಸವಗಳು, ಹಬ್ಬಗಳು ಮೊದಲಾದ ಧಾರ್ಮಿಕ ಕಾರ್ಯಕ್ರಮಗಳನ್ನು ನೆರವೇರಿಸುವುದೇ ಅಷ್ಟಮಠಗಳ, ಮುಖ್ಯವಾಗಿ ಪರ್ಯಾಯವನ್ನು ವಹಿಸಿಕೊಂಡು ಮಠದ ಕರ್ತವ್ಯ. ಈ ಹೊಣೆಗಾರಿಕೆಯನ್ನು ಉಡುಪಿಯ ಅಷ್ಟಮಠಗಳು ಬಹಳ ನಿಷ್ಠೆಯಿಂದ ಅನೂಚಾನವಾಗಿ ನಿರ್ವಹಿಸುತ್ತವೆ.

ಧಾರ್ಮಿಕಸೇವೆಯ ಅಂಗವಾಗಿ ಪಲಿಮಾರು ಮಠಾಧೀಶರು 1995ರಲ್ಲಿ ಪಲಿಮಾರಿನಲ್ಲಿರುವ ಆಂಜನೇಯ ಗುಡಿಯನ್ನು ಪೂರ್ತಿ ಶಿಲಾಮಯಗೊಳಿಸಿ ಪುನಃಪ್ರತಿಷ್ಠಾಪಿಸಿದರು. ಅಂತೆಯೇ, ಹರಿದ್ವಾರದಲ್ಲಿ, ಗಂಗಾತೀರದಲ್ಲಿ 32 ಅಡಿ ಎತ್ತರದ ಆಂಜನೇಯ ವಿಗ್ರಹವನ್ನು ಪ್ರತಿಷ್ಠಾಪಿಸಿದರು. ಈ ಸಂದರ್ಭದಲ್ಲಿ ಸಹಸ್ರಕೋಟಿ ರಾಮನಾಮ ಲೇಖನಯಜ್ಞವನ್ನು ನೆರವೇರಿಸಿ ಜನರು ಈ ಸತ್ಕಾರ್ಯದಲ್ಲಿ ಭಾಗಿಗಳಾಗುವಂತೆ ಮಾಡಿದರು. ಇದರಂತೆ, ಪುತ್ತಿಗೆ ಮಠದ ಪರ್ಯಾಯಾವಧಿಯಲ್ಲಿ 'ಗೀತಾಮಂದಿರ'ದ ನಿರ್ಮಾಣಸಂದರ್ಭದಲ್ಲಿ ಪುತ್ತಿಗೆ ಮಠಾಧೀಶ ಶ್ರೀ ಸುಗುಣೇಂದ್ರ ತೀರ್ಥರ ಸಲಹೆಯಂತೆ 'ಗೀತಾಲೇಖನಯಜ್ಞ'ವೆಂಬ ಭಗವದ್ಗೀತೆಯ ಶ್ಲೋಕವನ್ನು

ದಿನಕ್ಕೊಂದರಂತೆ ಬರೆದು ಕೊನೆಗೆ ಹಸ್ತಲಿಖಿತ ಗ್ರಂಥವನ್ನು ಶ್ರೀಕೃಷ್ಣನಿಗೆ ವಿಧಿವತ್ತಾಗಿ ಸಮರ್ಪಿಸುವ ಪುಣ್ಯಕಾರ್ಯದಲ್ಲಿ ಭಕ್ತರು ತುಂಬು ಉತ್ಸಾಹದಿಂದ ಪಾಲ್ಗೊಂಡರು. ಈ ರೀತಿ ಮಠಗಳು ಜನರ ಮನಸ್ಸನ್ನು ಧಾರ್ಮಿಕಕಾರ್ಯಗಳೆಡೆಗೆ ಆಕರ್ಷಿಸುವಲ್ಲಿ ಸಫಲವಾಗಿವೆ.

ಪೇಜಾವರ ಮಠದ ವತಿಯಿಂದ ಹಲವಾರು ಮಠಮಂದಿಗಳು ದೇಶದೆಲ್ಲೆಡೆ ನಿರ್ಮಾಣವಾಗಿವೆ:

1. ಶ್ರೀ ರಾಘವೇಂದ್ರ ಮಠ (ಬೆಂಗಳೂರು)
2. ಕೃಷ್ಣ ದೇವಸ್ಥಾನ (ಕನಕಪುರ)
3. ರಾಘವೇಂದ್ರ ಮಠ (ಮೈಸೂರು)
4. ರಾಘವೇಂದ್ರ ಮಠ (ಹಾಸನ)
5. ಸತ್ಯನಾರಾಯಣ ದೇವಸ್ಥಾನ (ಗಂಗಾವತಿ)
6. ರಾಘವೇಂದ್ರ ಮಠ (ಕಾರ್ಕಳ)
7. ಶ್ರೀಕೃಷ್ಣ ರಾಘವೇಂದ್ರ ಮಠ (ತ್ಯಾಗರಾಜ ನಗರ, ಚೆನ್ನೈ)
8. ದುರ್ಗಾದೇವಸ್ಥಾನ (ಕುರಿಯೂರು, ತಮಿಳುನಾಡು)
9. ಪ್ರಾಣದೇವರ ಗುಡಿ (ಕುಂಭಕೋಣಮ್, ತಮಿಳುನಾಡು)
10. ಕಾವುಗೋಳಿ ಮಠ, ಶ್ರೀಕೃಷ್ಣ ದೇವಸ್ಥಾನ (ಕುಂಬಳೆ, ಕಾಸರಗೋಡು)
11. ರಾಘವೇಂದ್ರ ಮಠ (ತ್ರಿಪುರಾತ್ರ, ಕೇರಳ)
12. ಉಡುಪಿ ಮಠ (ತಿರುಪತಿ)
13. ಶ್ರೀ ರಾಘವೇಂದ್ರ ಸೇವಾ ಸಮಿತಿ (ಭುವನೇಶ್ವರ)
14. ಅನಂತ ಮಠ (ಬದರಿ)
15. ಮಧ್ವಾಶ್ರಮ (ಹರಿದ್ವಾರ)
16. ಕಾಶಿ (ನಿರ್ಮಾಣದ ಸಿದ್ಧತೆಯಲ್ಲಿ)
17. ಬೃಂದಾವನ (ಭಂಡಾರಕೇರಿ ಮಠದ ಸಹಯೋಗದಲ್ಲಿ ಆಶ್ರಮ)

ಉಡುಪಿಯನ್ನು ಸಂದರ್ಶಿಸುವ ಯಾತ್ರಿಕರಿಗೆ, ಬಡಬಗ್ಗರಿಗೆ ನಿತ್ಯವೂ ಇಲ್ಲಿ ಅನ್ನದಾನ ನೆರವೇರುತ್ತದೆ. ಕೃಷ್ಣನನ್ನು ಇಲ್ಲಿ 'ಅನ್ನಬ್ರಹ್ಮ'ನೆಂದೇ ಪರಿಗಣಿಸುತ್ತಾರೆ. ಪರ್ಯಾಯವನ್ನು ವಹಿಸಿಕೊಂಡ ಮಠವೇ ಈ ಅನ್ನದಾನವನ್ನು ಭಕ್ತರ ತನುಮನಧನ ಸಹಕಾರದೊಂದಿಗೆ ಮಾಡುತ್ತದೆ. ಮಾತ್ರವಲ್ಲದೆ, ಇಲ್ಲಿಯ ಸಂಸ್ಕೃತ ಕಾಲೇಜಿನಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಶ್ರೀಕೃಷ್ಣಮಠದಲ್ಲಿ ಉಚಿತ ಭೋಜನ ವ್ಯವಸ್ಥೆಯನ್ನೂ ಮಾಡಲಾಗಿದೆ. ಸ್ಥಳೀಯ ಆಸ್ಪತ್ರೆಯ ಬಡರೋಗಿಗಳಿಗೂ ಸ್ವಲ್ಪಮಟ್ಟಿಗೆ ಉಚಿತ ಆಹಾರವು ಕೃಷ್ಣಮಠದಿಂದ ಪೂರೈಕೆವಾಗುತ್ತದೆ. ಅದಮಾರು ಮಠದ ವತಿಯಿಂದ ಪ್ರತಿದಿನ ಸುಮಾರು 3,000 ಮಂದಿಗೆ ಅನ್ನದಾನ, ಪೂರ್ಣಪ್ರಜ್ಞ ಕಾಲೇಜು, ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜು, ಬೋರ್ಡ್ ಹೈಸ್ಕೂಲು, ಕ್ರಿಶ್ಚಿಯನ್ ಹೈಸ್ಕೂಲು ಮತ್ತಿನ್ನಿತರ ವಿದ್ಯಾಲಯಗಳ ಬಡ ವಿದ್ಯಾರ್ಥಿಗಳಿಗೂ ಅನ್ನದಾನದ ವ್ಯವಸ್ಥೆಯನ್ನು ಮಾಡಲಾಗಿದೆ.

ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥರು ಭಗವದ್ಗೀತೆಯ ಶ್ಲೋಕಗಳನ್ನು ಚಂದ್ರಕಾಂತಶಿಲೆಯಲ್ಲಿ ಕೆತ್ತಿಸಿ 'ಗೀತಾಮಂದಿರ'ದಲ್ಲಿ ಸ್ಥಾಪಿಸಿದ್ದಾರೆ. ಸೋದೆ

ಮಠಾಧೀಶರು ಶ್ರೀ ವಾದಿರಾಜರ 'ಸ್ವಾಪ್ನವೃಂದಾವನಾಖ್ಯಾನಮ್' ಎನ್ನುವ ಗ್ರಂಥವನ್ನು ಚಂದ್ರಕಾಂತ ಶಿಲೆಯಲ್ಲಿ ಕೊರೆಯಿಸಿ ಸೋದೆಯಲ್ಲಿ ಸ್ಥಾಪಿಸುವ ಮೂಲಕ ಪ್ರಾಚೀನ ಗ್ರಂಥಗಳನ್ನು ಶಾಶ್ವತಗೊಳಿಸುವ ಮತ್ತು ಜನರಿಗೆ ಸುಲಭ ಪಠನೀಯಗಳನ್ನಾಗಿ ಮಾಡುವ ಕಾರ್ಯಕ್ರಮಗಳನ್ನು ನೆರವೇರಿಸುತ್ತಿದ್ದಾರೆ.

ಮಠಗಳು ನಡೆಸುವ ವೈದಿಕಧರ್ಮದ ರಕ್ಷಣೆ ಮತ್ತು ಧರ್ಮಪ್ರಸಾರದ ಸಲುವಾಗಿ ಹಿಂದೂರಾಜರು ಹಾಗೂ ಅನುಕೂಲವಂತ ಶಿಷ್ಯಜನರು ಬಗೆಬಗೆಯ ದಾನ, ದತ್ತಿಗಳನ್ನು ಈ ಮಠಗಳಿಗೆ ನೀಡಿದ್ದಕ್ಕೆ ದಾಖಲೆಗಳು ಸಿಕ್ಕುತ್ತವೆ. ವಿಜಯ ನಗರದ ಕೃಷ್ಣದೇವರಾಯನು ಶಾಲಿವಾಹನ ಶಕ 1435 (ಕ್ರಿ.ಶ. 1513)ರಲ್ಲಿ ಸೋದೆಮಠಕ್ಕೆ ಭೂಮಿದಾನ ಕೊಟ್ಟದ್ದನ್ನು, ಉಂಬಳಿ ಬಿಟ್ಟದ್ದನ್ನು ತಿಳಿಸುವ ತಾಮ್ರ ಶಾಸನವೊಂದು ಈಗಲೂ ಸೋದೆ ಮಠದಲ್ಲಿದೆ.

6.18 ಶೈಕ್ಷಣಿಕ ಕ್ಷೇತ್ರದಲ್ಲಿ

ಉಡುಪಿಯ ಅಷ್ಟಮಠಗಳು ಇತರೆಲ್ಲ ಕ್ಷೇತ್ರಗಳಿಗಿಂತಲೂ ಶೈಕ್ಷಣಿಕ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆ ಬಹಳ ಹೆಚ್ಚಿನದು ಮತ್ತು ಶ್ಲಾಘ್ಯವಾದುದು. ಶಿಕ್ಷಣಕ್ಷೇತ್ರದಲ್ಲಿ ಅಷ್ಟಮಠಗಳು ಸಾಂಘಿಕವಾಗಿ ಸ್ಥಾಪಿಸಿದ ಮೊದಲ ವಿದ್ಯಾಲಯವೆಂದರೆ 'ಶ್ರೀಮನ್ಮಧ್ವ ಸಿದ್ಧಾಂತಪ್ರಬೋಧಿನೀ ಸಂಸ್ಕೃತಮಹಾಪಾಠಶಾಲೆ'. ಮೊದಲು ಅನಂತೇಶ್ವರದಲ್ಲಿ ಕಾರ್ಯಾರಂಭ ಮಾಡಿದ ಈ ವಿದ್ಯಾಲಯವು 1951ರಲ್ಲಿ ಈಗಿನ ವಿಶಾಲ ಕಟ್ಟಡದಲ್ಲಿ ಕಾರ್ಯನಿರ್ವಹಿಸಲು ಆರಂಭಿಸಿತು. ಇಲ್ಲಿ ಪ್ರಮುಖವಾಗಿ ದ್ವೈತ, ವೇದಾಂತ, ನ್ಯಾಯಶಾಸ್ತ್ರ, ಜ್ಯೋತಿಷ್ಯ ಮತ್ತು ಅಲಂಕಾರಶಾಸ್ತ್ರ ಎಂಬ ನಾಲ್ಕು ಶಾಸ್ತ್ರಗಳಲ್ಲಿ ಸಂಸ್ಕೃತ ಭಾಷಾ ಉಚ್ಚ ಶಿಕ್ಷಣವನ್ನು ನೀಡಲಾಗುತ್ತಿದೆ. ಇದೀಗ ಕೆಲವು ವರ್ಷಗಳಿಂದೀಚೆ ಇವುಗಳ ಜೊತೆಗೆ ಪ್ರಥಮಾ, ಕಾವ್ಯ, ಸಾಹಿತ್ಯ ಶಿಕ್ಷಣಕ್ಕೂ ಅವಕಾಶ ಕಲ್ಪಿಸಲಾಗಿದೆ. ಈ ಶಾಲೆಯ ಉಪಾಂಗವಾಗಿ ಒಂದು ಸಂಸ್ಕೃತ ಪ್ರಧಾನ ಪ್ರಾಥಮಿಕ ಶಾಲೆಯು ಪ್ರೌಢಶಾಲೆಯೂ ಕಾರ್ಯನಿರ್ವಹಿಸುತ್ತಿವೆ. ಒಟ್ಟಿನಲ್ಲಿ ಈ ವಿದ್ಯಾಲಯವು ಸಂಸ್ಕೃತ ಸಾಹಿತ್ಯಕ್ಕೆ ಮತ್ತು ಸಂಸ್ಕೃತ ಶಿಕ್ಷಣಕ್ಕೆ ಗಣನೀಯವಾದ ಕೊಡುಗೆಯನ್ನು ಸಲ್ಲಿಸುತ್ತಿದೆ. ಸಾವಿರಾರು ಮಂದಿ ಸಂಸ್ಕೃತ ಪಂಡಿತರನ್ನು ನಾಡಿಗೆ ನೀಡಿದ ಕೀರ್ತಿ ಈ ಸಂಸ್ಥೆಗೆ ಸಲ್ಲುತ್ತದೆ.

ಇನ್ನು, ಅಷ್ಟಮಠಗಳೊಳಗೆ ಶ್ರೀ ಪೇಜಾವರ ಮತ್ತು ಅದಮಾರು ಮಠಗಳು ಸಂಖ್ಯಾದೃಷ್ಟಿಯಿಂದ, ಅತ್ಯಂತ ಹೆಚ್ಚು ಶೈಕ್ಷಣಿಕ ಸಂಸ್ಥೆಗಳನ್ನುಳ್ಳ ಮಠಗಳು.

ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಸೇವೆಗಾಗಿ 4–1–1953ರಲ್ಲಿ ಪೇಜಾವರ ಮಠಾಧೀಶರ ನೇತೃತ್ವದಲ್ಲಿ 'ಅಖಿಲ ಭಾರತ ಮಾಧ್ವ ಮಹಾಮಂಡಲ' ಎಂಬ ಒಂದುಸಂಸ್ಥೆ ಸ್ಥಾಪನೆಯಾಯಿತು. ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಸೇವೆಯೇ ಮುಖ್ಯ ಉದ್ದೇಶವಾಗಿರುವ ಈ ಮಹಾಮಂಡಲವು ಧರ್ಮಪ್ರಸಾರಕ್ಕಾಗಿ ಕನ್ನಡದಲ್ಲಿ ಹಾಗೂ ತೆಲುಗಿನಲ್ಲಿ 'ತತ್ತ್ವವಾದ', ಇಂಗ್ಲಿಷ್ ಹಾಗೂ ತಮಿಳಿನಲ್ಲಿ 'ಧರ್ಮಪ್ರಕಾಶ' ಎಂಬ ಮಾಸಪತ್ರಿಕೆಗಳನ್ನು ಪ್ರಕಟಿಸುತ್ತಿದೆ. ತಾಂತ್ರಿಕ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗಾಗಿ ಲಕ್ಷಾಂತರ ರೂಪಾಯಿಗಳ ಸಾಲರೂಪದ ಶಿಷ್ಯವೇತನ ನೀಡಿದೆ. ವರ್ಷಂಪ್ರತಿ ಧಾರ್ಮಿಕ ಶಿಕ್ಷಣ ಶಿಬಿರಗಳನ್ನು ನಡೆಸುತ್ತಿದೆ.

6.18.1 ಪೂರ್ಣಪ್ರಜ್ಞ ವಿದ್ಯಾಪೀಠ

1956ರಲ್ಲಿ ಅಖಿಲ ಭಾರತ ಮಾಧ್ವ ಮಹಾಮಂಡಲದ ಆಶ್ರಯದಲ್ಲಿ, ಶ್ರೀ ಪೇಜಾವರ ಮಠಾಧೀಶರ ನಿರ್ದೇಶಕತ್ವದಲ್ಲಿ "ಪೂರ್ಣಪ್ರಜ್ಞ ವಿದ್ಯಾಪೀಠ" ವು ಬೆಂಗಳೂರಲ್ಲಿ ಸ್ಥಾಪಿತವಾಗಿದೆ. ಅರ್ಹ ವಟುಗಳಿಗೆ ಪೌರೋಹಿತ್ಯ, ವೇದ, ವೇದಾಂಗ, ಜ್ಯೋತಿಷ, ಸಂಸ್ಕೃತ ಮೊದಲಾದ ಪ್ರಾಚೀನ ಪರಂಪರೆಯ ವಿದ್ಯೆಯನ್ನು ಗುರುಕುಲ ಮಾದರಿಯಲ್ಲಿ ನೀಡುವುದೇ ಇದರ ಸ್ಥಾಪನೆಯ ಮೂಲೋದ್ದೇಶ. ಸ್ಥಾಪಿತವಾದಂದಿನಿಂದ ಇಂದಿನ ತನಕ ಈ ಸಂಸ್ಥೆಯು ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿ ಸದಾಚಾರ ಸಂಪನ್ನರನ್ನಾಗಿಸಿ ಉತ್ತಮ ಜೀವನ ನಡೆಸಲು ಅವಕಾಶ ಮಾಡಿಕೊಟ್ಟಿದೆ. ಇದೇ ರೀತಿ ಶ್ರೀ ಪೇಜಾವರ ಮಠವು ಹತ್ತಾರು ಕಡೆ ಅನೇಕ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ಪ್ರಾಚೀನ ಅರ್ವಾಚೀನ ಮಾತ್ರವಲ್ಲದೆ ಆಧುನಿಕ ಶಿಕ್ಷಣಕ್ರಮವನ್ನೂ ಅಳವಡಿಸಿ ವಿದ್ಯಾದಾನ ಮಾಡಿ ಶಿಕ್ಷಣಕ್ಷೇತ್ರದಲ್ಲಿ ಬಹು ಶ್ಲಾಘ್ಯಕಾರ್ಯವನ್ನು ಮಾಡುತ್ತಿದೆ. ಜೊತೆಗೆ ಸಮಾಜಕ್ಕೆ ಉಪಯುಕ್ತವಾದ ಅನೇಕ ಸಂಸ್ಥೆಗಳನ್ನೂ, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅನೇಕ ವಿದ್ಯಾರ್ಥಿ ನಿಲಯಗಳನ್ನೂ ಕಟ್ಟಿಸಿದೆ. ಅವುಗಳನ್ನು ಸ್ಥೂಲವಾಗಿ ಈ ಕೆಳಗೆ ಗಮನಿಸಬಹುದು:

6.18.2 ಪೇಜಾವರ ಮಠ

ಶಿಕ್ಷಣ ಸಂಸ್ಥೆಗಳು:

1. ಪೂರ್ಣಪ್ರಜ್ಞ ವಿದ್ಯಾಪೀಠ (ಬೆಂಗಳೂರು)
2. ವಿಜಯಭಾರತಿ ವಿದ್ಯಾಲಯ ಪ್ರೌಢಶಾಲೆ (ಗಿರಿನಗರ)
3. ಜನತಾ ಕಲ್ಯಾಣನಿಧಿ (ಬುದ್ಧಿಮಾಂದ್ಯ ಮಕ್ಕಳಿಗೆ) ಶಾಲೆ (ಮಲ್ಲೇಶ್ವರಂ)
4. ವಿಜಯವಿಠಲವಿದ್ಯಾಶಾಲೆ- ಪದವಿಪೂರ್ವ ಕಾಲೇಜು (ಮೈಸೂರು)
5. ಸಂಜೀವಿನೀ ವಿದ್ಯಾಸಂಸ್ಥೆ- ಪ್ರೌಢಶಾಲೆ(ಚಿಕ್ಕಮಂಗಳೂರು)
6. ಶ್ರೀಕೃಷ್ಣ ವಿದ್ಯಾರ್ಥಿನಿಲಯ (ದಾವಣಗೆರೆ)
7. ಶ್ರೀ ವಾದಿರಾಜ ವಿದ್ಯಾರ್ಥಿನಿಲಯ (ಧಾರವಾಡ)
8. ಶ್ರೀ ಪ್ರಹ್ಲಾದ ವಿದ್ಯಾರ್ಥಿನಿಲಯ (ಧಾರವಾಡ)
9. ವಿದ್ಯಾರ್ಥಿನಿಲಯ (ಬೆಳಗಾಂ)
10. ಶ್ರೀ ಜಯತೀರ್ಥ ವಿದ್ಯಾರ್ಥಿನಿಲಯ (ಗುಲ್ಬರ್ಗಾ)
11. ಶ್ರೀ ರಾಘವೇಂದ್ರ ವಿದ್ಯಾರ್ಥಿನಿಲಯ (ರಾಯಚೂರು)
12. ವಿದ್ಯಾರ್ಥಿ ನಿಲಯ (ಬಾಗಲಕೋಟೆ)
13. ವಿದ್ಯಾರ್ಥಿನಿಲಯ (ವಿಜಾಪುರ)
14. ವಿದ್ಯಾಪೀಠ (ಗಂಗಾವತಿ)
15. ಸಿದ್ಧಾಪುರ ಶಿಕ್ಷಣ ಪ್ರಸಾರಕ ಸಮಿತಿಯ ಆಶ್ರಯದಲ್ಲಿ ಆರು ಪ್ರೌಢಶಾಲೆಗಳು
16. ಧನ್ವಂತರಿ ಆಯುರ್ವೇದ ಕಾಲೇಜು (ಸಿದ್ಧಾಪುರ)
17. ಜನತ ಶಿಕ್ಷಣ ಸಮಿತಿಯ ಆಶ್ರಯದಲ್ಲಿ 4 ಪ್ರೌಢಶಾಲೆಗಳು (ಧಾರವಾಡ)
18. ಮಾಧ್ವ ವಿದ್ಯಾರ್ಥಿ ನಿಲಯ (ಉಡುಪಿ)
19. ಪಾಜಕ ಪ್ರತಿಷ್ಠಾನ (ಪಾಜಕ, ಉಡುಪಿ ತಾಲೂಕು)

20. ಶ್ರೀ ರಾಮಕುಂಜೇಶ್ವರ ಪ್ರಾಥಮಿಕ ಶಾಲೆ (ರಾಮಕುಂಜ)
21. ಶ್ರೀ ರಾಮಕುಂಜೇಶ್ವರ ಪದವಿಪೂರ್ವ ಕಾಲೇಜು(ರಾಮಕುಂಜ)
22. ವಿದ್ಯಾಪೀಠ (ತ್ರಿಪುರಾತ್ರ, ಎರ್ನಾಕುಳಂ)
23. ವಿದ್ಯಾಪೀಠ (ಹೈದರಾಬಾದ್)
24. ಶ್ರೀರಾಮವಿಟ್ಠಲ ಶಿಕ್ಷಣ ಸೇವಾ ಸಮಿತಿ (ದೆಹಲಿ)

ಪೇಜಾವರ ಕಿರಿಯ ಶ್ರೀಪಾದರಾದ ಶ್ರೀ ವಿಶ್ವಪ್ರಸನ್ನ ತೀರ್ಥರ ಮುತುವರ್ಜಿಯಿಂದ 'ಪ್ರಹ್ಲಾದ ಗುರುಕುಲ'ವು ಚೆನ್ನಾಗಿ ನಡೆಸಲ್ಪಡುತ್ತಿದೆ. ಕಳೆದ ಸುಮಾರು 42 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಬೆಂಗಳೂರಿನ ಪೂರ್ಣಪ್ರಜ್ಞ ವಿದ್ಯಾಪೀಠದ ಕೇಂದ್ರ ಸರಕಾರದ ನೆರವಿನಿಂದ 'ಪೂರ್ಣಪ್ರಜ್ಞ ಸಂಶೋಧನ ಮಂದಿರ'ವು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಂಶೋಧನ ಕಾರ್ಯದಲ್ಲಿ ಸೂಕ್ತ ಮಾರ್ಗದರ್ಶನ ನೀಡುತ್ತಿದೆ. ಗಣಕಯಂತ್ರ ವಿಭಾಗವನ್ನು ಪಡೆದಿರುವ ಈ ಸಂಸ್ಥೆಯು ಅಂತಾರಾಷ್ಟ್ರಿಯ ಸಂಪರ್ಕದ ಸೌಲಭ್ಯವನ್ನೂ ಹೊಂದಿದೆ.

6.18.3 ಅದಮಾರು ಮಠ

ಅದಮಾರು ಮಠದ ಆಶ್ರಯದಲ್ಲಿ ಶ್ರೀ ವಿಬುಧೇಶ ತೀರ್ಥ ಶ್ರೀಪಾದರಿಂದ 1960ರಲ್ಲಿ ಸ್ಥಾಪಿತವಾದ 'ಶ್ರೀ ಅದಮಾರು ಮಠ ಎಜುಕೇಶನ್ ಕೌನ್ಸಿಲ್' ಎನ್ನುವ ಸಂಸ್ಥೆಯು ಹಲವಾರು ಶಿಕ್ಷಣಸಂಸ್ಥೆಗಳನ್ನು ಹುಟ್ಟುಹಾಕಿ, ಶ್ರೀ ವಿಬುಧೇಶ ತೀರ್ಥ ಶ್ರೀಪಾದರು ಮಾರ್ಗದರ್ಶನದೊಂದಿಗೆ ಸಮರ್ಥವಾಗಿ ಮುನ್ನಡೆಯುತ್ತಿದೆ.

1. ಪೂರ್ಣಪ್ರಜ್ಞ ಕಾಲೇಜು (ಉಡುಪಿ–ಸ್ಥಾಪನೆ1966)
2. ಪೂರ್ಣ ಪ್ರಜ್ಞ ಸಂಧ್ಯಾ ಕಾಲೇಜು (ಉಡುಪಿ)
3. ಪೂರ್ಣಪ್ರಜ್ಞ ಪ್ರಿ–ಯುನಿವರ್ಸಿಟಿ ಕಾಲೇಜು
(ಅದಮಾರು–ಸ್ಥಾ.1950)
4. ಗಣಪತಿ ಹೈಸ್ಕೂಲ್ (ಪಡುಬಿದ್ರಿ)
5. ಶ್ರೀ ಬ್ರಹ್ಮವಿದ್ಯಾ ಪ್ರಬೋಧಿನಿ ಹೈಯರ್ ಪ್ರೈಮರಿ ಸ್ಕೂಲ್ (ಪಡುಬಿದ್ರಿ)

ಇನ್ನಿಷ್ಟು ಉಡುಪಿ ಜಿಲ್ಲೆಯಲ್ಲಿವೆ.

6. ಪೂರ್ಣಪ್ರಜ್ಞ ನರ್ಸರಿ ಮತ್ತು ಪ್ರೈಮರಿ ಸ್ಕೂಲ್ (ಸಂಗಮೇಶ್ವರಪೇಟೆ, ಚಿಕ್ಕಮಗಳೂರು)
7. ಪೂರ್ಣಪ್ರಜ್ಞ ಹೈಸ್ಕೂಲ್ (ಸಂಗಮೇಶ್ವರ, ಚಿಕ್ಕಮಂಗಳೂರು)
8. ಪೂರ್ಣಪ್ರಜ್ಞ ನರ್ಸರಿ ಮತ್ತು ಪ್ರೈಮರಿ ಸ್ಕೂಲ್ (ಆಲ್ದೂರು)

–ಇವು ಮೂರು ವಸತಿ ಶಾಲೆಗಳು.

9. ಪೂರ್ಣಪ್ರಜ್ಞ ರೋಟರಿ ನರ್ಸರಿ ಮತ್ತು ಹೈಸ್ಕೂಲ್ (ಬೇಲೂರು, ಹಾಸನಜಿಲ್ಲೆ)
10. ಪೂರ್ಣಪ್ರಜ್ಞ ಎಜುಕೇಶನ್ ಸೆಂಟರ್ (ಲೋವರ್‌ಹುತ್ತ, ಭದ್ರಾವತಿ)
11. ಪೂರ್ಣಪ್ರಜ್ಞ ಎಜುಕೇಶನ್ ಸೆಂಟರ್–ಪೂರ್ಣಪ್ರಜ್ಞ ಸಯನ್ಸ್ ಜೂನಿಯರ್ ಕಾಲೇಜು (ಸದಾಶಿವನಗರ, ಬೆಂಗಳೂರು)
12. ಕೆ. ಎಸ್. ಮೀಡಿಯಂ ನರ್ಸರಿ ಮತ್ತು ಪೂರ್ಣಪ್ರಜ್ಞ ಹೈಸ್ಕೂಲ್ (ಸದಾಶಿವ ನಗರ)
13. ಪೂರ್ಣಪ್ರಜ್ಞ ಹೈಸ್ಕೂಲ್ (ಸದಾಶಿವನಗರ)

14. ಪೂರ್ಣಪ್ರಜ್ಞ ಎಜುಕೇಶನ್ ಸೆಂಟರ್ (ಯಲಹಂಕ)

15. ಪೂರ್ಣಪ್ರಜ್ಞ ಎಜುಕೇಶನ್ ಸೆಂಟರ್(ಇಂದಿರಾನಗರ, ಬೆಂಗಳೂರು)

16. WIDIA ಪೂರ್ಣಪ್ರಜ್ಞ ಸ್ಕೂಲ್ (ದಾಸರಹಳ್ಳಿ, ಬೆಂಗಳೂರು)

17. ವಿದ್ಯಾನಿಕೇತನ ಕನ್ನಡ ಪ್ರಾಥಮಿಕ ಶಾಲೆ (ಭಂಗಿ ಕಾಲೊನಿ, ಅಂಜಾನಪ್ಪ ಗಾರ್ಡನ್, ಬೆಂಗಳೂರು)

18. ಕೃಷ್ಣನಗರ್ ಇಂಗ್ಲಿಷ್ ಪ್ರೈಮರಿ ಸ್ಕೂಲ್ (ಬೈರತಿ ಬಂಡೆ, ಬೆಂಗಳೂರು)
ಇವೆಲ್ಲವೂ ನರ್ಸರಿ ಮತ್ತು ಪ್ರೈಮರಿ ಶಾಲೆಗಳು.

19. ಪೂರ್ಣಪ್ರಜ್ಞ (ಇಂಗ್ಲಿಷ್‌ಮೀಡಿಯಂ) ನರ್ಸರಿ, ಪ್ರೈಮರಿ ಮತ್ತು ಹೈಸ್ಕೂಲ್ (ದಹಿಸರ್, ಮುಂಬಯಿ)

20. ಪೂರ್ಣಪ್ರಜ್ಞ (ಗುಜರಾತಿ ಮೀಡಿಯಂ) ನರ್ಸರಿ, ಪ್ರೈಮರಿ ಮತ್ತು ಹೈಸ್ಕೂಲ್ (ದಹಿಸರ್, ಮುಂಬಯಿ)

21. ಪೂರ್ಣಪ್ರಜ್ಞ (ಮರಾಠಿ ಮೀಡಿಯಂ) ನರ್ಸರಿ, ಪ್ರೈಮರಿ ಮತ್ತು ಹೈಸ್ಕೂಲ್ (ದಹಿಸರ್, ಮುಂಬಯಿ)

22. ಪೂರ್ಣಪ್ರಜ್ಞ ಪಬ್ಲಿಕ್ ಸ್ಕೂಲ್ (ವಸಂತಕುಂಜ, ನವಹೆಹಲಿ).

ಇವಿಷ್ಟು ಪೂರ್ಣಪ್ರಜ್ಞ ಎಜುಕೇಶನ್ ಕೌನ್ಸಿಲ್ ನಾಡು, ಹೊರನಾಡುಗಳ ಬೇರೆಬೇರೆ ಭಾಗಗಳಲ್ಲಿ ನಡೆಸುತ್ತಿರುವ ವಿದ್ಯಾಸಂಸ್ಥೆಗಳು. ಇವುಗಳಲ್ಲಿ ಒಟ್ಟು ಸುಮಾರು 16,000 ವಿದ್ಯಾರ್ಥಿ, ವಿದ್ಯಾರ್ಥಿನಿಯರು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ಆದರೆ ಇವೆಲ್ಲಕ್ಕಿಂತಲೂ ಅದಮಾರು ಮಠದ ಮಹತ್ವಾಕಾಂಕ್ಷೆಯ ಮತ್ತು ಗಮನಾರ್ಹಯೋಜನೆಯೆಂದರೆ 'Sri Poornaprajna Institute of Scientific Research' ಎಂಬ ಹೆಸರಿನಲ್ಲಿ ಸ್ಥಾಪಿತವಾದ ವಿಜ್ಞಾನ ಸಂಶೋಧನ ಸಂಸ್ಥೆ. ಸುಮಾರು 500 ಕೋಟಿ ರೂಪಾಯಿ ವೆಚ್ಚದ ಈ ಯೋಜನೆಯು ವಿಶ್ವದಾದ್ಯಂತ ವಿಜ್ಞಾನಿಗಳ, ಶಿಕ್ಷಣವೇತ್ತರ ಗಮನ ಸೆಳೆದಿದೆ. ಭಾರತದಿಂದ ಪ್ರತಿಭಾ ಪಲಾಯನ ಆಗುವುದನ್ನು ತಡೆಯುವ ಮಹೋದ್ದೇಶವನ್ನಿಟ್ಟುಕೊಂಡು ಅದಮಾರು ಮಠಾಧೀಶರಾದ ಶ್ರೀ ವಿಬುಧೇಶ ತೀರ್ಥ ಶ್ರೀಪಾದರು ಈ ಮಹೋನ್ನತ ಯೋಜನೆಗೆ ಮುಂದಡಿಯಿಟ್ಟಿದ್ದಾರೆ.

6.18.4 ಪಲಿಮಾರು ಮಠ

ಪಲಿಮಾರು ಮಠದ ವತಿಯಿಂದ ಪಡುಬಿದ್ರಿ ಸಮೀಪದ ಪಲಿಮಾರು ಎಂಬಲ್ಲಿ **'ಯೋಗದೀಪಿಕಾ'** ಎಂಬ ವಿದ್ಯಾಸಂಸ್ಥೆಯು ಕಳೆದ ಹಲವಾರು ವರ್ಷಗಳಿಂದ ವಿದ್ಯಾರ್ಥಿಗಳಿಗೆ ಜ್ಞಾನ ದಾನ ಮಾಡುತ್ತಿದೆ. ದ್ವೈತ ಸಿದ್ಧಾಂತಕ್ಕೆ ಪೂರಕವಾಗಿ ತಂತ್ರಾಗಮ ಪದ್ಧತಿಯನ್ನು ಅನುಸರಿಸಬೇಕೆಂಬ ಉದ್ದೇಶದಿಂದ ಈ ಗುರುಕುಲವು 1989ರಲ್ಲಿ ಸ್ಥಾಪಿತವಾಗಿದೆ. ಪಲಿಮಾರಿನ ಆದರ್ಶ ಗುರುಕುಲ ಟ್ರಸ್ಟ್ ಮತ್ತು ಯೋಗದೀಪಿಕಾ ಟ್ರಸ್ಟ್‌ಗಳ ಸಂಯುಕ್ತ ಆಶ್ರಯದಲ್ಲಿ ಈ ಗುರುಕುಲವು ನಡೆಸಲ್ಪಡುತ್ತದೆ. ಇವೆರಡಕ್ಕೂ ಪಲಿಮಾರು ಮಠಾಧೀಶರೇ ಮುಖ್ಯಸ್ಥರು. ಇಲ್ಲಿ ಆರು ವರ್ಷಗಳ ಅವಧಿಯ ಶಿಕ್ಷಣವನ್ನು ನೀಡಲಾಗುತ್ತಿದ್ದು, ಅದರಲ್ಲಿ ಸಂಸ್ಕೃತ ಭಾಷಾಜ್ಞಾನ, ಆಗಮಶಾಸ್ತ್ರ, ವ್ಯಾಕರಣ, ಜ್ಯೋತಿಷಶಾಸ್ತ್ರ, ಭೋಜನ ಹಾಗೂ ವಸತಿವ್ಯವಸ್ಥೆಗಳನ್ನು ಒದಗಿಸಲಾಗುತ್ತಿದೆ. ಇದು

ಸರಕಾರದ ಯಾವುದೇ ಧನಸಹಾಯವಿಲ್ಲದೇ ನಡೆಯುವ ಸಂಸ್ಥೆ. ಇಲ್ಲಿ ಶಿಕ್ಷಣ ಪೂರೈಸಿದ ವಿದ್ಯಾರ್ಥಿಗೆ ಗುರುಕುಲ ವತಿಯಿಂದ 'ತಂತ್ರಾಗಮಕೋವಿದ' ಎಂಬ ಪದವಿಯನ್ನೂ ಮೈಸೂರಿನ ಸಂಸ್ಕೃತ ಮಂಡಲಿಯ ವತಿಯಿಂದ ಸಂಸ್ಕೃತ ಪದವಿಯನ್ನೂ ನೀಡಲಾಗುತ್ತಿದೆ. ಪಲಿಮಾರು ಮಠದ ಯತಿಗಳಾಗಿದ್ದ ಶ್ರೀ ವಿದ್ಯಾಮಾನ್ಯ ತೀರ್ಥರು ಭಂಡಾರಕೇರಿ ಮಠದಲ್ಲಿ 1943ನೇ ಇಸವಿಯ ಫೆಬ್ರವರಿ ತಿಂಗಳಲ್ಲಿ 'ಶ್ರೀಮನ್ಮಧ್ವರಾದ್ಧಾಂತಸಂವರ್ಧಿನೀ ಸಭಾ' ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದರು. ಅದರ ಮುಖ್ಯ ಉದ್ದೇಶಗಳು ಇವು:

1. ಮಧ್ವನವಮಿ ಉತ್ಸವಸಂದರ್ಭದಲ್ಲಿ ವಿದ್ಯಾರ್ಥಿಗಳ, ವಿದ್ವಾಂಸರುಗಳ ಸಭೆಯನ್ನು ಸೇರಿಸಿ ಪರವಿದ್ಯೆಯನ್ನು ಅಭ್ಯಾಸ ಮಾಡಿದ ವಿದ್ಯಾರ್ಥಿಗಳ ಪರೀಕ್ಷೆಯನ್ನು ಮಾಡಿ ಅವರಿಗೆ ಸೂಕ್ತ ಸಂಭಾವನೆ ಕೊಡುವುದು.

2. ಆ ವಿದ್ಯಾರ್ಥಿಗಳಿಗೆ ಶಿಕ್ಷಣವಿತ್ತ ವಿದ್ವಾಂಸರಿಗೆ ಸೂಕ್ತ ಸಂಭಾವನೆ ಕೊಡುವುದು.

3. ಪರವಿದ್ಯೆಗಳ ಗ್ರಂಥಪ್ರಕಾಶನ.

4. ಆ ಗ್ರಂಥಗಳ ಕನ್ನಡ ಅನುವಾದಪೂರ್ವಕ ಪ್ರಕಾಶನ.

5. ಸಣ್ಣಪುಟ್ಟ ಧಾರ್ಮಿಕ, ತಾತ್ವಿಕ ಪುಸ್ತಕಗಳ ಪ್ರಕಾಶನ.

6. ಮನೆಮನೆಗಳಿಗೆ ಹೋಗಿ ದೇವರ ಅರ್ಚಕರನ್ನು ನಿಯೋಜಿಸಿ ಆ ಜನರಿಗೆ ಧರ್ಮೋಪದೇಶ ಮಾಡುವುದು.

7. ಪ್ರಸಿದ್ಧ ಪಂಡಿತರಿಂದ ಅಲ್ಲಲ್ಲಿ ಧಾರ್ಮಿಕ ಉಪನ್ಯಾಸಗಳನ್ನು ಏರ್ಪಡಿಸುವುದು. ಇತ್ಯಾದಿ. ಈ ಸಂಸ್ಥೆಯ ಆಶ್ರಯದಲ್ಲಿ ಅನೇಕ ಅತ್ಯಮೂಲ್ಯ ಗ್ರಂಥಗಳು ಪ್ರಕಾಶಿತವಾಗಿವೆ. 'ಗಾಯತ್ರೀಗಾಂಭೀರ್ಯ' ಎನ್ನುವ ಗಾಯತ್ರೀಮಂತ್ರದ ಗಾಂಭೀರ್ಯವನ್ನು ವಿವರಿಸುವ ಕೃತಿಯನ್ನು ಪ್ರಕಟಿಸಲಾಗಿದೆ. ಕನ್ನಡ ಅನುವಾದ ಸಹಿತವಾದ 'ತತ್ತ್ವಸಂಖ್ಯಾನ', 'ತತ್ತ್ವವಿವೇಕ', 'ಉಪಾಧಿಖಂಡನ ಮೊದಲಾದ ಕೃತಿಗಳು ಪ್ರಕಟಗೊಂಡಿವೆ. ಸುಮಾರು ಮೂರು ಸಾವಿರ ಪುಟಗಳಷ್ಟು ಬೃಹದ್ ಗ್ರಂಥಗಳಾದ ಶ್ರೀಮಧ್ವಾಚಾರ್ಯರ ದಶಪ್ರಕರಣಗಳನ್ನು ಟೀಕಾಟಿಪ್ಪಣಿ ಸಹಿತ ಪ್ರಕಟಿಸಲಾಗಿದೆ.

ಈ ಮಠದ ಆಶ್ರಯದಲ್ಲಿರುವ 'ತತ್ತ್ವಸಂಶೋಧನ ಸಂಸತ್' ಎಂಬ ಸಂಸ್ಥೆಯು ಹಿಂದಿನ ಮಠಾಧಿಪತಿಗಳಿಂದ ವಿದ್ವಾಂಸರಿಂದ ಬರೆಯಲ್ಪಟ್ಟ ಪ್ರಾಚೀನ ಹಸ್ತಪ್ರತಿಗಳ ಸಂಶೋಧನ, ವ್ಯಾಖ್ಯಾನ ಮತ್ತು ಪ್ರಕಾಶನದ ಗುರುತರ ಉದ್ದೇಶವನ್ನು ಇರಿಸಿಕೊಂಡು ಕಾರ್ಯನಿರ್ವಹಿಸುತ್ತಿದೆ. ಫಲಿಮಾರು ಮಠದ ಮೂಲಯತಿಗಳಾದ ಶ್ರೀಹೃಷೀಕೇಶ ತೀರ್ಥರು ತುಳುಲಿಪಿಯಲ್ಲಿ ಬರೆದ, ಆಚಾರ್ಯಮಧ್ವರು ರಚಿಸಿದ ಗ್ರಂಥಗಳು 'ಸರ್ವಮೂಲಗ್ರಂಥ'ವೆಂದು ಪ್ರಸಿದ್ಧವಾಗಿವೆ. ಅದನ್ನು ವಿದ್ಯಾವಾಚಸ್ಪತಿ ಶ್ರೀ ಬನ್ನಂಜೆ ಗೋವಿಂದಾಚಾರ್ಯರ ಸಂಪಾದಕತ್ವದಲ್ಲಿ ತತ್ತ್ವವಾದ ಸಂಶೋಧನ ಸಂಸತ್ತು ಅಖಿಲ ಭಾರತ ಮಾಧ್ವ ಮಹಾಮಂಡಲದ ಸಹಯೋಗದೊಂದಿಗೆ 5 ಸಂಪುಟಗಳಲ್ಲಿ ಪ್ರಕಟಿಸಿದೆ. ಅಲ್ಲದೆ, ಮಧ್ವಚಾರ್ಯರ 'ಯಮಕ ಭಾರತ'ವೆಂಬ ಕೃತಿಯನ್ನು ಈ ಮಠದ ಯತಿಗಳಾದ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು ಮಾಡಿದ ಕನ್ನಡ

ಅನುವಾದದೊಂದಿಗೆ ಸಂಸತ್ತು ಪ್ರಕಟಿಸಿದೆ. ಅದೇ ರೀತಿ ವಿದ್ಯಾವಾಚಸ್ಪತಿ ಶ್ರೀ ಬನ್ನಂಜೆ ಗೋವಿಂದಾಚಾರ್ಯರಿಂದಲೇ ಕನ್ನಡಕ್ಕೆ ಅನುವಾದಗೊಂಡ 'ತಂತ್ರಸಾರ' 'ಮಧ್ವರಾಮಾಯಣ' 'ಚತುರ್ದಶ ಸ್ತೋತ್ರಗಳು' 'ಪುರುಷಸೂಕ್ತ-ಶ್ರೀಸೂಕ್ತ' ಮೊದಲಾದ ಕೃತಿಗಳನ್ನು ಇದೇ ಸಂಸ್ಥೆ ಪ್ರಕಟಿಸಿದೆ. ಆಚಾರ್ಯಾತ್ರಯರ ಭಾಷ್ಯಸಹಿತವಾಗಿರುವ 'ಬ್ರಹ್ಮಸೂತ್ರಗಳು' ಈ ಸಂಸತ್ತಿನ ಮಹತ್ತ್ವದ ಪ್ರಕಟನೆಗಳಲ್ಲೊಂದು. ಇತ್ತೀಚೆಗೆ 'ಮೈತ್ರ' ಎನ್ನುವ ಗಾಯತ್ರೀಮಂತ್ರ ಸಂಬಂಧವಾದ ಹೊತ್ತಗೆಯನ್ನು ಸಹ ಇದು ಪ್ರಕಟಿಸಿದೆ. ಒಟ್ಟಿನಲ್ಲಿ ಪೂರ್ವಸೂರಿಗಳ ಮೇರುಕೃತಿಗಳನ್ನು ಸಂಶೋಧಿಸಿ, ವ್ಯಾಖ್ಯಾನಸಹಿತ ಪ್ರಕಟಿಸುವುದು ತತ್ತ್ವವಾದ ಸಂಶೋಧನ ಸಂಸತ್ತಿನ ಕಾರ್ಯ ಕಲಾಪವಾಗಿದೆ.

6.18.5 ಪುತ್ತಿಗೆ ಮಠ

ಪುತ್ತಿಗೆ ಮಠದ ಇಂದಿನ ಯತಿಗಳಾದ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರ ನೇತೃತ್ವದಲ್ಲಿ ಪುತ್ತಿಗೆಯೆಂಬ ಗ್ರಾಮದಲ್ಲಿ 'ಶ್ರೀ ಪುತ್ತಿಗೆ ವಿದ್ಯಾಪೀಠ' ವೆಂಬ ಸಂಸ್ಥೆಯು 1986ರಲ್ಲಿ ಸ್ಥಾಪಿತವಾಯಿತು. ಇದರಲ್ಲಿ ವೇದ, ಪೌರೋಹಿತ್ಯ, ಜ್ಯೋತಿಷ, ಸಂಸ್ಕೃತ ಸಾಹಿತ್ಯ ಮೊದಲಾದ ವಿಷಯಗಳಲ್ಲಿ ವಿದ್ಯಾದಾನವನ್ನು ಮಾಡಲಾಗುತ್ತಿದೆ. ಅದೇ ರೀತಿ ಅದಮಾರು ಮಠದ ವತಿಯಿಂದ ಗುರುಕುಲ ಮಾದರಿಯ ವೇದಪಾಠಶಾಲೆ, ಋಗ್ವೇದ, ಯಜುರ್ವೇದ ಮತ್ತು ಸಾಮವೇದಗಳ ಶಿಸ್ತುಬದ್ಧ ಅಧ್ಯಯನಕ್ಕೆ ಅವಕಾಶ ಲಭಿಸಿದೆ. ಪೌರೋಹಿತ್ಯಾದಿ ವಿಧಿವಿಧಾನಗಳ ವ್ಯವಸ್ಥಿತ ಅಧ್ಯಯನಕ್ಕೂ ಈ ಮಠದ ವತಿಯಿಂದ ಪ್ರೋತ್ಸಾಹ ಸಿಕ್ಕಿದೆ.

ವಿದ್ವತ್ ಪ್ರಸಾರದ ಒಂದು ರೂಪವಾದ ಗ್ರಂಥಪ್ರಕಟನೆಯೂ ಈ ಮಠದ ವತಿಯಿಂದ ನೆರವೇರುತ್ತಿದೆ. ಶ್ರೀ ಸುಗುಣೇಂದ್ರತೀರ್ಥರು ರಚಿಸಿದ 'ಪರಿಮಳತೀರ್ಥರು' 'ಹನ್ನೆರಡು ಹಬ್ಬಗಳ ಸಂದೇಶ' 'ರಾಮಾಯಣ ರಹಸ್ಯ-ಸ್ವಾರಸ್ಯ' 'ವಿಜಯದಶಮಿಯ ಹಿನ್ನೆಲೆ' 'ಆಚಾರ್ಯಮಧ್ವರ ಜೀವನಸಂದೇಶ' ಮೊದಲಾದ ಕೃತಿಗಳು ಪ್ರಕಟವಾಗಿದೆ. ವಿದ್ಯಾವಾಚಸ್ಪತಿ ಶ್ರೀ ಬನ್ನಂಜೆ ಗೋವಿಂದಾಚಾರ್ಯರ 'ಭಗವಂತನ ನಾಲ್ನುಡಿ' (ಭಗವದ್‌ಗೀತೆಯ ಕನ್ನಡ ಅನುವಾದ), 'ಉಡುಪಿ ಪರಿಚಯ' 'ಆನಂದತೀರ್ಥರು' (ಕಿರುರೂಪಕ) ಮೊದಲಾದ ಗ್ರಂಥಗಳು ಪ್ರಕಾಶಿತವಾಗಿವೆ. ದಿ ಪ್ರೋ ಎಂ. ರಾಜಗೋಪಾಲಾಚಾರ್ಯರು ರಚಿಸಿದ 'ಲಘುಸ್ತೋತ್ರಗಳು', ಶ್ರೀ ಸುಧೀಂದ್ರ ತೀರ್ಥರ ನೆನಪುಗಳು' 'ಆರೋಗ್ಯಸೂತ್ರಗಳು', 'ದಶಾವತಾರಸ್ತುತಿ', 'ತ್ರಿಭಾಷಾಸೂಕ್ತಿಕೋಶ' ಮೊದಲಾದ ಕೃತಿಗಳನ್ನು ಪುತ್ತಿಗೆ ಮಠವು ಪ್ರಕಟಿಸಿದೆ. ಇವೆಲ್ಲದರ ಜೊತೆಗೆ 1986ರಿಂದ ಪುತ್ತಿಗೆ ಮಠವು 'ಸುಗುಣಮಾಲಾ' ಎನ್ನುವ ಧಾರ್ಮಿಕ, ಸಾಂಸ್ಕೃತಿಕ ಮಾಸಪತ್ರಿಕೆಯೊಂದನ್ನು ನಿಯತವಾಗಿ ಪ್ರಕಟಿಸುತ್ತಿದೆ. 1988ರಿಂದ ಇದರ ಇಂಗ್ಲಿಷ್ ಆವೃತ್ತಿಯೂ ಪ್ರಕಟವಾಗತೊಡಗಿದೆ. ಅಷ್ಟಮಠಗಳಲ್ಲಿ ಪತ್ರಿಕೆಯನ್ನು ನಡೆಸುತ್ತಿರುವ ಮಠವಿದೊಂದೇ ಎನ್ನುವ ವಿಶಿಷ್ಟತೆ ಈ ಮಠಕ್ಕಿದೆ. ಇದಕ್ಕೆ ಸ್ವಂತದ್ದಾದ ಮುದ್ರಣಾಲಯವೂ ಇದ್ದು ಇದರಲ್ಲೇ ಈ ಮಾಸಪತ್ರಿಕೆಯೂ, ಇತರ ಹಲವು ಗ್ರಂಥಗಳೂ ಮುದ್ರಿತವಾಗುತ್ತಿವೆ.

ಸೋದೆ ಮಠದ ಯತಿಗಳಲ್ಲೊಬ್ಬರಾದ ಶ್ರೀ ವಿಶ್ವೇಂದ್ರ ತೀರ್ಥರು ಉಡುಪಿ ತಾಲೂಕಿನ ಇನ್ನಂಜೆಯೆಂಬ ಹಳ್ಳಿಯಲ್ಲಿ 1943ರಲ್ಲಿ ಒಂದು ಹೈಸ್ಕೂಲನ್ನು ಸ್ಥಾಪಿಸಿ ವಿದ್ಯಾಪ್ರಸಾರಕ್ಕೆ ಚಾಲನೆ ನೀಡಿದ್ದಾರೆ. ಇದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 17ನೆಯ, ಗ್ರಾಮಾಂತರ ಪ್ರದೇಶದ ಮೊತ್ತಮೊದಲನೆಯ ಹೈಸ್ಕೂಲಾಗಿ ಸ್ಥಾಪಿತವಾಯಿತು. ಬಳಿಕ ಈ ವಿದ್ಯಾಸಂಸ್ಥೆಗೆ 'ಶ್ರೀವಿಷ್ಣುಮೂರ್ತಿ ಹಯವದನ ಸ್ವಾಮಿ ಹೈಸ್ಕೂಲ್' ಎಂದು ನಾಮಕರಣಮಾಡಲಾಗಿದೆ. ಇದರಲ್ಲಿ ವಿದ್ಯಾರ್ಜನೆ ಮಾಡುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ 'ವಾದಿರಾಜ ಗುರುಕುಲ'ವೆಂಬ ವಿದ್ಯಾರ್ಥಿನಿಲಯವನ್ನೂ ನಿರ್ಮಿಸಲಾಗಿದೆ. ಈ ವಿದ್ಯಾಸಂಸ್ಥೆ 1979ರಿಂದ ಹೈಯರ್ ಸೆಕೆಂಡರಿ ಶಾಲೆಯಾಗಿ, 1983ರಿಂದ ಪದವಿಪೂರ್ವ ಕಾಲೇಜಾಗಿ ಅಭಿವೃದ್ಧಿ ಹೊಂದಿದೆ.

ಕೃಷ್ಣಾಪುರಮಠವು ಸಹ ಉಡುಪಿಕ್ಷೇತ್ರ ಪರಿಚಯವನ್ನು ಕೊಡುವ 'ಉಡುಪಿ' ಎನ್ನುವ ಕಿರುಹೊತ್ತಗೆಯನ್ನು ಕನ್ನಡ ಮತ್ತು ಇಂಗ್ಲಿಷಿನಲ್ಲಿ ಪ್ರಕಟಿಸಿದೆ.

6.19 ಸಾಮಾಜಿಕ ಕ್ಷೇತ್ರದಲ್ಲಿ

ಸಮಾಜಮಧ್ಯದಲ್ಲಿರುವ ಮಠಗಳು ಎಂದಿಗೂ ಪೂರ್ತಿಯಾಗಿ ಸಮಾಜಕ್ಕೆ ವಿಮುಖವಾಗಿರುವುದು ಸಾಧ್ಯವಿಲ್ಲ. ಸಮಾಜದೊಡನೆ ಇಟ್ಟುಕೊಳ್ಳುವ ಸಂಪರ್ಕದ ಪರಿಣಾಮವಾಗಿ ಅವುಗಳು ಒಂದಿಲ್ಲೊಂದು ರೀತಿಯ ಸಮಾಜಸೇವೆಯಲ್ಲಿ ತೊಡಗಿರಬೇಕಾಗುತ್ತವೆ. ಮಠಗಳಿಗೆ ಮತಪ್ರಸಾರ, ಪೂಜಾಕೈಂಕರ್ಯದೊಂದಿಗೆ ವಿಭಿನ್ನ ವರ್ಗದ, ವಿಭಿನ್ನ ಮನೋಭಾವದ, ವಿಭಿನ್ನ ಮತಪಂಗಡಗಳ ಜನರ ನಡುವೆ ಸಾಮರಸ್ಯವನ್ನು ತರುವ ಗುರುತರವಾದ ಹೊಣೆಗಾರಿಕೆಯಿದೆ. ವಿಭಿನ್ನ ಮತ ಪಂಗಡಗಳೊಳಗೆ ಸಂಘರ್ಷವೇರ್ಪಟ್ಟರೆ ಅದನ್ನು ನಿವಾರಿಸುವ ಮಧ್ಯವರ್ತಿಯಾಗಿ ಮಠಗಳು ಕೆಲಸ ನಿರ್ವಹಿಸಬೇಕಾಗುತ್ತದೆ. ಸಮಾಜಬಾಂಧವರೊಳಗೆ ಭಿನ್ನಾಭಿಪ್ರಾಯ ಬಂದರೆ, ಆಚಾರವಿಚಾರಗಳಲ್ಲಿ ಸಂದೇಹವುಂಟಾದರೆ ಅದನ್ನು ಪರಿಹರಿಸುವ ಮಾರ್ಗದರ್ಶಕಕಾರ್ಯವೂ ಮಠಗಳದ್ದೇ. ಜನರಿಗೆ ಬೇರೆಬೇರೆ ರೀತಿಯಲ್ಲಿ ಸಂಕಷ್ಟಗಳು ಬಂದಾಗ ಮಠಗಳು ಕೈಕಟ್ಟಿ ಕೂರುವಂತಿಲ್ಲ. ಅವುಗಳ ಪರಿಹಾರಕ್ಕಾಗಿ ಮಾರ್ಗೋಪಾಯಗಳನ್ನು ಕಂಡುಹಿಡಿಯಬೇಕಾಗುತ್ತದೆ. ಈ ಎಲ್ಲ ಸನ್ನಿವೇಶಗಳಲ್ಲೂ ಉಡುಪಿಯ ಅಷ್ಟಮಠಗಳು ತಮ್ಮ ಜವಾಬ್ದಾರಿಯನ್ನು ಯೋಗ್ಯರೀತಿಯಲ್ಲಿ ನಿರ್ವಹಿಸಿವೆ. ಸಮಾಜದ ಸಂಕಷ್ಟಕ್ಕೆ ಸ್ಪಂದಿಸಿವೆ.

ಅಷ್ಟಮಠಗಳೊಳಗೆ ಎಲ್ಲ ಮಠಗಳೂ ಒಂದಿಲ್ಲೊಂದು ಸಾಮಾಜಿಕಕಾರ್ಯದಲ್ಲಿ ನಿರತವಾಗಿದ್ದರೂ ಪೇಜಾವರ ಮಠಾಧೀಶ ಶ್ರೀ ವಿಶ್ವೇಶತೀರ್ಥರ ಸಾಮಾಜಿಕ ಕಾರ್ಯಕಲಾಪಗಳು ಮಾತ್ರ ಎಲ್ಲರ ಗಮನಸೆಳೆದಿವೆ ಮತ್ತು ಸರ್ವವಿದಿತವಾಗಿವೆ. ವಿಶ್ವ ಹಿಂದೂ ಪರಿಷತ್ತಿನ ಮಾರ್ಗದರ್ಶಕರಾಗಿ ಮಾಡಿದ ಕಾರ್ಯವು ಗಮನಾರ್ಹವಾದುದು. ದೇಶದೆಲ್ಲೆಡೆ ಸಂಚರಿಸಿ ಹಿಂದೂಗಳ ಸಂಘಟನೆಗಾಗಿ, ಉದ್ಧಾರಕ್ಕಾಗಿ ಅವಿರತವಾಗಿ ದುಡಿಯುತ್ತಿದ್ದಾರೆ. ಜೊತೆಗೇ ಬೌದ್ಧ, ಕ್ರೈಸ್ತ, ಇಸ್ಲಾಂ ಮುಂತಾದ ಮತಾನುಯಾಯಿಗಳ ಏಳಿಗೆಯನ್ನೂ ಬಯಸುತ್ತಾರೆ. ಗುಲ್ಬರ್ಗಾದ ಬರಗಾಲ ಪೀಡಿತರಿಗೆ ಪಾದಯಾತ್ರೆಯ ಮೂಲಕ ವಸ್ತು, ಹಣ ಸಂಗ್ರಹ ಮಾಡಿ ನೆರವಿತ್ತಿದ್ದಾರೆ. ನೆರೆ ಮೊದಲಾದ ಪ್ರಾಕೃತಿಕ

ವಿಕೋಪ ಬಂದಾಗ ಅಥವಾ ಕೋಮು ಸಂಘರ್ಷದಿಂದ ಜನರು ಸಂಕಷ್ಟಕ್ಕೀಡಾದಾಗ ಅಲ್ಲಿಗೆ ತೆರಳಿ ತಮ್ಮಿಂದಾಗುವ ಸಹಾಯವನ್ನು ನೀಡುತ್ತಾರೆ. ಇತೀಚೆಯ ಒಂದು ಉದಾಹರಣೆಯೆಂದರೆ, ಹಿಂದೆ ಮಂಗಳೂರು ತಾಲೂಕಿನ ಸುರತ್ಕಲ್ ಮತ್ತು ಆಸುಪಾಸಿನಲ್ಲಿ ವಾರಗಳ ಕಾಲ ನಡೆದ ಕೋಮು ಗಲಭೆಯಿಂದ ಸಂತ್ರಸ್ತರಾದವರನ್ನು ಹಿಂದೂ, ಮುಸ್ಲಿಂ ಎಂಬ ಭೇದವಿಲ್ಲದೆ ಕಂಡು ಸಂತೈಸಿ ತಮ್ಮಿಂದಾದ ನೆರವನ್ನಿತ್ತಿದ್ದಾರೆ.

ಇವೆಲ್ಲಕ್ಕಿಂತಲೂ ಪೇಜಾವರ ಮಠಾಧೀಶರು ಪ್ರಖ್ಯಾತರಾದದ್ದು ಹರಿಜನೋದ್ಧಾರಕ್ಕಾಗಿ ಅವರು ಹರಿಜನ ಕೇರಿಗಳಿಗೆ ಹೋದುದರಿಂದ. ಮಡಿವಂತಿಕೆಯ ಚಿಪ್ಪಿನೊಳಗೆ ಇರುವಂತಹ ಮಠವು ಕ್ರಾಂತಿಕಾರಕವಾಗಿ ಹರಿಜನ ಕೇರಿಗೆ ಹೋದದ್ದು ಎಲ್ಲರ ಗಮನ ಸೆಳೆಯಲು ಮತ್ತು ಪೇಜಾವರ ಮಠಾಧೀಶರನ್ನು ಕ್ರಾಂತಿ ಮಾಡಿದ ಸ್ವಾಮೀಜಿ ಎಂದು ಪರಿಗಣಿಸಲು ಕಾರಣವಾಯಿತು. ಅವರು ತಮ್ಮ ದ್ವಿತೀಯ ಪರ್ಯಾಯಾವಧಿಯಲ್ಲಿ ಬ್ರಾಹ್ಮಣೇತರ ವರ್ಗದ ವಿದ್ಯಾರ್ಥಿಗಳಿಗೆ ಅನ್ನದಾನ ಮಾಡಿದರು. ಅನಂತರ ಬೆಂಗಳೂರಿನಲ್ಲಿ ಹರಿಜನ ಕೇರಿಗಳಿಗೆ ಭೇಟಿಯಿತ್ತು ದಲಿತರಿಗೆ ಧರ್ಮೋಪದೇಶ ಮಾಡಿದರು. ಇದೇ ಕಾರ್ಯವನ್ನು ಅವರು ತಮಿಳುನಾಡು, ಕರ್ನಾಟಕದ ಇತರ ಕಡೆ ಕೈಕೊಂಡಿದ್ದಾರೆ. ಶ್ರೀ ಪುತ್ತಿಗೆ ಮಠಾಧೀಶರೂ ಹರಿಜನ ಕೇರಿಗಳಿಗೆ ಹೋಗಿ ಅವರ ಸಂಕಷ್ಟಗಳನ್ನು ಪರಿಹರಿಸುವ ಯತ್ನ ಮಾಡಿರುವುದು ಅಷ್ಟಮಠಗಳು ಸಮಾಜೋದ್ದಾರಕ್ಕೆ, ವರ್ಣವೈಷಮ್ಯಗಳನ್ನು ಹೋಗಲಾಡಿಸಲಿಕ್ಕೆ ಮತ್ತು ವಿವಿಧ ಜಾತಿ, ಮತ, ಪಂಗಡಗಳೊಳಗೆ ಸಾಮರಸ್ಯವನ್ನು ಉಂಟುಮಾಡುವುದಕ್ಕೆ ಕೈಗೊಳ್ಳುತ್ತಿರುವ ಪ್ರಯತ್ನವನ್ನು ಸೂಚಿಸುತ್ತವೆ. ಬಡಬಗ್ಗರಿಗೆ, ಅನಾಥರಿಗೆ, ಅಶಕ್ತರಿಗೆ ಸಹಾಯಹಸ್ತ ನೀಡುವ ಉದ್ದೇಶವನ್ನಿಟ್ಟುಕೊಂಡು ಪೇಜಾವರ ಮಠದ ವತಿಯಿಂದ–

1. ಕೃಷ್ಣ ಸೇವಾಶ್ರಮ (ಜಯನಗರ, ಬೆಂಗಳೂರು)
2. ಖರ್ಜಿಗೆ ಅನಾಥಶ್ರಮ
3. ಕೃಷ್ಣ ಸೇವಾ ಧಾಮ, ಬಾಲನಿಕೇತನ (ಉಡುಪಿ)
4. ಶ್ರೀ ಕೃಷ್ಣ ಉಚಿತ ಚಿಕಿತ್ಸಾಲಯ (ಉಡುಪಿ)
5. ಪಿತೃಶಾಲೆ– ವೇಲಪ್ಪನ್ ಚಾವಡಿ(ಮದ್ರಾಸ್)
6. ಅಶ್ವಿನಿ ಆಸ್ಪತ್ರೆ (ಮಡಿಕೇರಿ, ಮಾರ್ಗದರ್ಶಕರು)

ಮೊದಲಾದ ಸಂಸ್ಥೆಗಳನ್ನು ಶ್ರೀ ವಿಶ್ವೇಶ ತೀರ್ಥ ಸ್ವಾಮಿಗಳು ಸ್ಥಾಪಿಸಿದರು. ಇವರಂತೆಯೇ ಸಮಾಜಸೇವೆಯಲ್ಲಿ ನಿರತರಾದ ಇನ್ನೋರ್ವ ಯತಿ ಅದಮಾರು ಮಠಾಧೀಶರಾದ ಶ್ರೀ ವಿಬುಧೇಶ ತೀರ್ಥರು. ಕೃಷ್ಣಾ ನಗರದಲ್ಲಿ (ಬೈರತಿಬಂಡೆಯಲ್ಲಿ) ಹರಿಜನರಿಗಾಗಿ 4.5 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಗಣಪತಿ ದೇವಾಲಯವನ್ನು ನಿರ್ಮಿಸಿದ್ದಲ್ಲದೆ, ಅಲ್ಲಿಯೇ ಸ್ಥಳೀಯರಿಗಾಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನೂ ವ್ಯವಸ್ಥೆಗೊಳಿಸಿದ್ದಾರೆ. ಬೆಂಗಳೂರಿನ ಅಂಜಾನಪ್ಪ ಗಾರ್ಡನ್‌ನಲ್ಲಿ ಅಲ್ಲಿಯ ಕೊಳಚೆ ಪ್ರದೇಶದ ನಿವಾಸಿಗಳ ಮಕ್ಕಳಿಗಾಗಿಯೇ 'ವಿದ್ಯಾನಿಕೇತನ ಕನ್ನಡ ಪ್ರಾಥಮಿಕ ಶಾಲೆ'ಯನ್ನು ತೆರೆದು ದೀನದಲಿತರ ಸಮಾಜೋದ್ಧಾರ ಕಾರ್ಯದಲ್ಲಿ ಮುಂದಡಿ

ಇಟ್ಟಿದ್ದಾರೆ. ಬಡವರಿಗಾಗಿ ಸಂಗಮೇಶ್ವರಪೇಟೆಯಲ್ಲಿ 21 ಮನೆ, ಬೆಂಗಳೂರಿನ ಬೈರತಿಬಂಡೆಯಲ್ಲಿ 93 ಮನೆ, ಮಾಕೆಕಿಡ್ಡಿಪಲ್ಲಿಯಲ್ಲಿ 8 ಮನೆ ಹೀಗೆ ಒಟ್ಟು 131 ಮನೆಗಳನ್ನು ಉತ್ತಮವಾಗಿ ಆದರೆ ಅತ್ಯಲ್ಪ ಖರ್ಚಿನಲ್ಲಿ ನಿರ್ಮಿಸಿಕೊಟ್ಟಿದ್ದಾರೆ. ಬಡಜನರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ನೀಡಲಿಕ್ಕಾಗಿ ಚಿಕಿತ್ಸಾಲಯಗಳನ್ನು ಸ್ಥಾಪಿಸಿದ್ದಾರೆ. ಬೆಂಗಳೂರಿನ ಬನ್ನೇರುಘಟ್ಟದಲ್ಲಿ ವೃದ್ಧಾಶ್ರಮವೊಂದನ್ನು ಸ್ಥಾಪಿಸಿ ಅಶಕ್ತ ವೃದ್ಧರಿಗೆ ಸಹಾಯಹಸ್ತ ಚಾಚಿದ್ದಾರೆ. ಜೀವನದ ಸಂಧ್ಯಾಸಮಯದಲ್ಲಿ ಅವರಿಗೆ ಆಸರೆಯೊಂದನ್ನು ಕಲ್ಪಿಸಿಕೊಟ್ಟಿರುವುದು ಶ್ಲಾಘನೀಯ. ಆಂಧ್ರ ಮತ್ತು ಕರ್ನಾಟಕದ ಗಡಿಪ್ರದೇಶಗಳಾದ ಬಾಗೇಪಲ್ಲಿಯ ಎರಡು ಗ್ರಾಮಗಳನ್ನು ಅಲ್ಲಿ ಬರ ಪರಿಸ್ಥಿತಿ ತಲೆದೋರಿದಾಗ ದತ್ತು ಸ್ವೀಕರಿಸಿ, ಗ್ರಾಮಸ್ಥರಿಗೆ ಕುಡಿಯುವ ನೀರು, ಆಹಾರ ಮತ್ತು ವಸತಿಗಾಗಿ ವಿಶೇಷ ಯೋಜನೆಯನ್ನು ರೂಪಿಸಿದ್ದು ಮೊದಲಾದವು ಅದಮಾರು ಮಠಾಧೀಶರ ಸಾಮಾಜಿಕ ಕಳಕಳಿಗೆ ಕೆಲವು ನಿದರ್ಶನಗಳು.

ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥರ ನೇತೃತ್ವದಲ್ಲಿ 'ಬದರಿಕಾ ಸೇವಾ ಟ್ರಸ್ಟ್' ಎನ್ನುವ ಸಂಸ್ಥೆಯೊಂದು ಇತ್ತೀಚೆಗೆ ರೂಪುಗೊಂಡಿದೆ. ಬೆಂಗಳೂರಿಂದ ಸುಮಾರು 40 ಕಿ.ಮೀ ದೂರದಲ್ಲಿ ಪ್ರಸ್ತಾವಿತ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಈ ಸಂಸ್ಥೆಯು 'ಬದರಿಕಾ' ಎನ್ನುವ ವಾನಪ್ರಸ್ಥಾಶ್ರಮವನ್ನು ಮತ್ತು ನಾಲ್ಕು ಎಕರೆ ಪ್ರದೇಶದಲ್ಲಿ ಉಡುಪಿ ಶ್ರೀಕೃಷ್ಣನ ಮಂದಿರವೊಂದನ್ನು ನಿರ್ಮಿಸುವ ಉದ್ದೇಶವನ್ನಿಟ್ಟುಕೊಂಡು ದಿನಾಂಕ 17–6–1999ರಂದು ಪುತ್ತಿಗೆ ಮಠದ ಯತಿಗಳಿಂದ ಭೂಮಿಪೂಜೆ ನೆರವೇರಿದೆ.

ಇದೇ ರೀತಿ ಉಳಿದ ಮಠಾಧಿಪತಿಗಳೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಕ್ಷೇತ್ರದಲ್ಲಿ ತಮ್ಮಿಂದಾಗುವ ಕೆಲಸವನ್ನು ಎಲೆಮರೆ ಕಾಯಿಯಂತಿದ್ದು ಮಾಡುತ್ತಿದ್ದಾರೆ.

6.20 ಇತರ ಕ್ಷೇತ್ರದಲ್ಲಿ

ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಮೊದಲಾದ ಹಲವು ಕ್ಷೇತ್ರಗಳಿಗೆ ಒಟ್ಟಾಗಿ ಅನ್ವಯವಾಗುವಂತಹ ಹಲವು ಕಾರ್ಯಗಳನ್ನು ಉಡುಪಿಯ ಅಷ್ಟಮಠಗಳು ಮಾಡುತ್ತಿವೆ. ಒಂದು ಪುಣ್ಯಕ್ಷೇತ್ರವಾಗಿ, ಯಾತ್ರಾಸ್ಥಳವಾಗಿ ಬೆಳೆದ ಉಡುಪಿಯನ್ನು ಸಂದರ್ಶಿಸುವ ಯಾತ್ರಾರ್ಥಿಗಳಿಗೆ ಇಲ್ಲಿ ಉಳಿದುಕೊಳ್ಳಲು ಸೂಕ್ತವಾದ ವಸತಿಗೃಹಗಳು ನಿರ್ಮಾಣವಾಗುವ ತುರ್ತು ಇದ್ದ ಸಂದರ್ಭದಲ್ಲಿ ಮತ್ತು ಅವುಗಳ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಮೇಲ್ಪಂಕ್ತಿಯಾಗಿ ಅದಮಾರು ಮಠಾಧೀಶರಾದ ಶ್ರೀ ವಿಬುಧೇಶ ತೀರ್ಥರು ಉಡುಪಿ ಶ್ರೀಕೃಷ್ಣಮಠದ ಸಮೀಪ 1963ರಲ್ಲಿ ಛತ್ರವೊಂದನ್ನು ನಿರ್ಮಿಸಿಕೊಟ್ಟರು. ಇದು ಉಡುಪಿಯಲ್ಲಿ ನಿರ್ಮಾಣವಾದ ಮೊತ್ತ ಮೊದಲ ಛತ್ರ.

ಆ ಬಳಿಕ ಪೇಜಾವರ ಮಠದ ವತಿಯಿಂದ ದೇಶದ ಬೇರೆಬೇರೆ ಕಡೆ ಛತ್ರಗಳು ನಿರ್ಮಿತವಾದುವು:

1. ಕೃಷ್ಣಧಾಮ (ಉಡುಪಿ– ಟ್ರಸ್ಟಿನ ಅಧ್ಯಕ್ಷರು)
2. ಅಧೋಕ್ಷಜ ಮಂದಿರ (ಉಡುಪಿ)

3. ಎಲ್ಲೂರು ನರಸಿಂಗ ರಾವ್ ಛತ್ರ (ರಾಮೇಶ್ವರ)

4. ಆನಂದತೀರ್ಥ ಮಂದಿರ (ಈರೋಡು)

5. ಮಾಧ್ವಭವನ (ಸಾಂತಾಕ್ರೂಸ್, ಮುಂಬಯಿ)

6. ಕೃಷ್ಣ ಮಂದಿರ (ಗುಲ್ಬರ್ಗಾ)

7. ಕೃಷ್ಣ ಮಂದಿರ (ಸಿಟಿ ಮಾರ್ಕೆಟ್)

8. ಕೃಷ್ಣಧಾಮ (ಮೈಸೂರು)

9. ಕೃಷ್ಣ ಮಂದಿರ (ಬಳ್ಳಾರಿ)

ಪೇಜಾವರ ಮಠವು ಸಭಾಕಾರ್ಯಕ್ರಮಗಳಿಗಾಗಿ, ಮದುವೆಮುಂಜಿಗಳಿಗಾಗಿ ಹಲವು ಕಡೆಗಳಲ್ಲಿ ಕಲ್ಯಾಣಮಂಟಪಗಳನ್ನು ನಿರ್ಮಿಸಿದೆ.

1. ಗೋವಿಂದ ಕಲ್ಯಾಣಮಂಟಪ (ಉಡುಪಿ)

2. ಕಲ್ಯಾಣಮಂಟಪ (ಗಿರಿನಗರ)

3. ಶ್ರೀಕೃಷ್ಣ ಕಲಾಮಂಟಪ (ದಾವಣಗೆರೆ)

4. ಶ್ರೀ ಕೃಷ್ಣ ಕಲ್ಯಾಣ ಮಂಟಪ (ಕದ್ರಿ)

ಇತ್ಯಾದಿ. ಕೃಷ್ಣಾಪುರ ಮಠವು 'ಶ್ರೀಕೃಷ್ಣ ಸಭಾ ಭವನ'ವನ್ನು ನಿರ್ಮಿಸಿ ಮದುವೆ ಮತ್ತು ಇತರ ಕಾರ್ಯಕ್ರಮಗಳಿಗಾಗಿ ಕೊಡುತ್ತಿದೆ. ಪಲಿಮಾರು ಮಠವು 'ವಿದ್ಯಾಮಾನ್ಯ ಸಭಾ ಭವನ' ವನ್ನು ನಿರ್ಮಿಸಿ ಪಾಠಪ್ರವಚನಗಳಗಾಗಿ, ಸಭಾಕಾರ್ಯ ಕ್ರಮಕ್ಕಾಗಿ ಮೀಸಲಾಗಿಟ್ಟಿದೆ. ಅದಮಾರು ಮಠವು 1986 ರಲ್ಲಿ ಪೂರ್ಣಪ್ರಜ್ಞ ಕಾಲೇಜಿನ ಸಮೀಪ 'ಪೂರ್ಣಪ್ರಜ್ಞ ಅಡಿಟೋರಿಯಮ್' ಎಂಬ ಸುವಿಶಾಲವಾದ ಸಭಾಮಂದಿರವನ್ನು ನಿರ್ಮಿಸಿ ಅದರಲ್ಲಿ ಧ್ವನಿವರ್ಧಕ, ದೀಪದ ವ್ಯವಸ್ಥೆಗಳನ್ನು ಸುವ್ಯಸ್ಥಿತವಾಗಿ ಅಳವಡಿಸಿವೆ. ಅಲ್ಲದೆ. ಯಾತ್ರಿಕರ ಸೌಕರ್ಯಕ್ಕಾಗಿ ಛತ್ರ ನಿರ್ಮಾಣ, ನೂತನ ಭೋಜನಶಾಲೆಯ ನಿರ್ಮಾಣ ಮತ್ತು ಯಾತ್ರಿಕರ ದೃಷ್ಟಿಯಿಂದ ಬಹುಮುಖ್ಯವಾದ ಶೌಚಾಲಯನಿರ್ಮಾಣವು ಅದಮಾರು ಮಠದ ಪರ್ಯಾಯಾವಧಿಯಲ್ಲಿ ನಡೆದುದು ಬಹು ಶ್ಲಾಘ್ಯಕಾರ್ಯವಾಗಿದೆ. ಕಾಣಿಯೂರು ಮಠದ ವಸತಿಗೃಹ, ಪುತ್ತಿಗೆ ಮಠದ 'ಇಂದ್ರಪ್ರಸ್ಥ', ಸೋದೆ ಮಠದ 'ಭೂವರಾಹ' ವಾಣಿಜ್ಯ ಸಂಕೀರ್ಣ ಮೊದಲಾದವು ಮಠಗಳ ವಣಿಕ್ ಸ್ಪರ್ಶವಿರುವ ಸೇವಾ ಸಂಕೀರ್ಣಗಳು. ಇವುಗಳಿಂದ ಬಂದ ಆದಾಯವನ್ನೆಲ್ಲ ಮಠದ ಹಾಗೂ ಇತರ ಅಂಗಸಂಸ್ಥೆಗಳ ಅಭಿವೃದ್ಧಿಕಾರ್ಯಗಳಿಗಾಗಿ ವಿನಿಯೋಗಿಸಲಾಗುತ್ತಿದೆ.

ಇವುಗಳಿಗಿಂತ ಭಿನ್ನವಾಗಿ ಪ್ರತಿಯೊಂದು ಪರ್ಯಾಯ ಪೀಠಾರೂಢ ಯತಿಗಳೂ ತಮ್ಮ ಪರ್ಯಾಯಾವಧಿಯಲ್ಲಿ ಬೇರೆಬೇರೆ ಅಭಿವೃದ್ಧಿ ಕಾರ್ಯಗಳನ್ನೋ ಬೃಹದ್ಗಾತ್ರದ ಯೋಜನೆಗಳನ್ನೋ ಹಮ್ಮಿಕೊಂಡು ಕಾರ್ಯಪ್ರವೃತ್ತರಾಗುತ್ತಾರೆ. ಇದರ ಫಲವಾಗಿ ಕಾರ್ಯರೂಪಕ್ಕಿಳಿದ ಯೋಜನೆಗಳೆಂದರೆ– ವಿಶಾಲವಾದ ಗೋಶಾಲೆ,

ಶೀರೂರುಮಠದ ಪರ್ಯಾಯಾವಧಿಯಲ್ಲಿ ಶ್ರೀಕೃಷ್ಣ ಮಠದ ಆಲಂಕಾರಿಕ ಮುಖದ್ವಾರ ರಚನೆ, ಮಧುರಾಛತ್ರ ಮೊದಲಾದವು. ಪುತ್ತಿಗೆ ಮಠಾಧೀಶರು ತಮ್ಮ ಪರ್ಯಾಯಾವಧಿಯಲ್ಲಿ ಕೋಟ್ಯಂತರ ರೂಪಾಯಿಗಳ ವೆಚ್ಚದಲ್ಲಿ 'ಗೀತಾಮಂದಿರ'ವನ್ನು ನಿರ್ಮಿಸಿದರು. ಅದೇ ರೀತಿ ಉಡುಪಿಕ್ಷೇತ್ರಕ್ಕೆ ಪ್ರವೇಶವಾಗುವ ಮಾರ್ಗಸಂಧಿಯಲ್ಲಿ ಬೃಹದಾಕಾರದ ಪ್ರವೇಶದ್ವಾರವನ್ನು ನಿರ್ಮಿಸಿದುದೂ ಇವರ ಕಾರ್ಯಸಾಧನೆಯಲ್ಲೊಂದು ಮೈಲುಗಲ್ಲು.

ಈ ಬಾರಿಯ ಅದಮಾರು ಮಠದ ಪರ್ಯಾಯಾವಧಿಯಲ್ಲಿ, ಪರ್ಯಾಯ ಸ್ವಾಮೀಜಿಯವರ ನೇತೃತ್ವದಲ್ಲಿ ಶ್ರೀಕೃಷ್ಣಮಠದ ಇತಿಹಾಸಪ್ರಸಿದ್ಧ ಕನಕನ ಕಿಂಡಿಯ ಎದುರಿನ ಜೀರ್ಣಾವಸ್ಥೆಯಲ್ಲಿದ್ದ ಗೋಪುರವನ್ನು ಕೆಡವಿ ಬೃಹದಾಕಾರದ ಗೋಪುರವನ್ನು ನಿರ್ಮಿಸಿ, ಅದಕ್ಕೆ 'ಕನಕ ಗೋಪುರ' ಎಂದು ಮೊತ್ತ ಮೊದಲಿಗೆ ನಾಮಕರಣ ಮಾಡಲಾಗಿದೆ.

ಇವೆಲ್ಲಾ ಕಾರ್ಯಗಳೂ ಒಂದು ರೀತಿಯದ್ದಾರೆ, ಭಂಡಾರಕೇರಿ–ಪಲಿಮಾರು ಮಠಾಧೀಶರಾಗಿದ್ದ ಶ್ರೀ ವಿದ್ಯಾಮಾನ್ಯ ತೀರ್ಥರು ತಮ್ಮ ಬೇರೆಬೇರೆ ಪರ್ಯಾಯಾ ವಧಿಗಳಲ್ಲಿ ಶ್ರೀಕೃಷ್ಣನಿಗೆ ಚಿನ್ನದ ತೊಟ್ಟಿಲನ್ನೂ ಚಿನ್ನದ ರಥವನ್ನೂ ವಜ್ರಖಚಿತ ಕಿರೀಟವನ್ನೂ ಅರ್ಪಿಸಿ ಧನ್ಯರಾದುದು ಮತ್ತೊಂದು ಬಗೆ. ಅದರಂತೆ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥರು ಪುತ್ತಿಗೆ ಮಠದ ಸುಧೀಂದ್ರ ತೀರ್ಥರ ಶತಮಾನೋತ್ಸವದ ಸ್ಮಾರಕಾರ್ಥ ಸುಮಾರು 85,000 ತೊಲೆ ಬೆಳ್ಳಿಯಿಂದ ರಜತರಥವನ್ನು ನಿರ್ಮಿಸಿ ಕೃಷ್ಣನಿಗೆ ಅರ್ಪಿಸಿದ್ದಾರೆ. ಜೊತೆಗೆ ಶ್ರೀ ಕೃಷ್ಣನ ಏಕಾಂತ ಸೇವೆಗಾಗಿ 155 ತೊಲೆ ಚಿನ್ನದ ತೊಟ್ಟಿಲನ್ನೂ ಅರ್ಪಿಸಿದ್ದಾರೆ. ಶೀರೂರು ಮಠಾಧೀಶರಾದ ಶ್ರೀ ಲಕ್ಷ್ಮೀವರ ತೀರ್ಥರು ತಮ್ಮ ಪರ್ಯಾಯಾವಧಿಯಲ್ಲಿ 'ಅಲಂಕಾರಃ ಪ್ರಿಯೋ ವಿಷ್ಣುಃ' ಎಂಬಂತೆ ಶ್ರೀಕೃಷ್ಣನನ್ನು ದಿನಕ್ಕೊಂದು ರೀತಿಯಲ್ಲಿ ವಿಶೇಷವಾಗಿ ಅಲಂಕರಿಸಿ ಭಕ್ತಭಾವುಕರ ಕಣ್ಣಿಗೆ ಹಬ್ಬವನ್ನುಂಟುಮಾಡಿ ಕೃತಾರ್ಥರಾದುದು ಮತ್ತೊಂದೇ ಬಗೆ. (ಇವರ ಪ್ರತಿದಿನದ ಶ್ರೀಕೃಷ್ಣನ ವಿಶೇಷಾಲಂಕಾರದ ಭಾವಚಿತ್ರಗಳು ಮಠದಲ್ಲಿ ಈಗಲೂ ಲಭ್ಯವಿವೆ.) ಹೀಗೆ ಉಡುಪಿಯ ಅಷ್ಟಮಠಗಳು ಧಾರ್ಮಿಕ, ಸಾಂಸ್ಕೃತಿಕ ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಗಮನಾರ್ಹವಾದ ಕೊಡುಗೆಗಳನ್ನು ಸಮಾಜಕ್ಕೀಯುತ್ತಿವೆ. ಧರ್ಮಾನುಷ್ಠಾನ, ಮತಪ್ರಸಾರಗಳ ಮೂಲೋದ್ದೇಶಸಾಧನೆಗಾಗಿ ಸ್ಥಾಪಿತವಾದ ಮಠಗಳು ಸಮಾಜದ ಪರಿವರ್ತನೆಯೊಂದಿಗೆ ತಮ್ಮ ಕಾರ್ಯಕ್ಷೇತ್ರವನ್ನು ನಾಲ್ದೆಸೆಗೂ ವಿಸ್ತರಿಸುತ್ತಿವೆ. ಸಮಾಜಕ್ಕೆ ಬೇಕಾದ ರೀತಿಯಲ್ಲಿ ಮಾರ್ಗದರ್ಶನವೀಯುವ ಕಾರ್ಯವನ್ನು ಮಾಡುತ್ತಿವೆ. ಇನ್ನೊಂದು ಬಹು ಗಮನಾರ್ಹ ಅಂಶವೆಂದರೆ, ಈ ಮಠಗಳ ಅಧೀಶರುಗಳು ಶಿವಳ್ಳಿ ಬ್ರಾಹ್ಮಣರು. ಉತ್ತರಾಧಿಕಾರಿ ಶಿಷ್ಯಸ್ವೀಕಾರದ ಸಂದರ್ಭದಲ್ಲಿಯೂ ಶಿವಳ್ಳಿ ಬಾಲಕರನ್ನೇ ಆಯ್ಕೆ ಮಾಡಲಾಗುತ್ತದೆ. ಆದರೆ, ಸಮಾಜದ ಬಹುತೇಕವರ್ಗದವರು ಈ ಅಷ್ಟಮಠಗಳಲ್ಲಿ ಒಂದಲ್ಲೊಂದು ಮಠವನ್ನು ತಮಗೆ ಮಾರ್ಗದರ್ಶಕಸ್ಥಾನದಲ್ಲಿರುವ ಗುರುಮಠವಾಗಿ ಸ್ವೀಕರಿಸಿರುವುದು ವಿಶೇಷವಾಗಿದೆ.

6.21 ಅಷ್ಟಮಠಗಳನ್ನು ಹೊಂದಿಕೊಂಡು ವೈದಿಕಕರ್ಮ ಮತ್ತು ವಿದ್ಯಾದಾನ ಮಾಡುತ್ತಿದ್ದ ಸ್ವತಂತ್ರ ಮಠಗಳು

ಮಠಗಳು	ಮುಖ್ಯಮಠ	ಆರಾಧಿಸುವ ದೇವರು
1. ಎಕ್ಕಾರುಮಠ	ಸೋದೆ	ಗೋಪಾಲಕೃಷ್ಣ
2. ಬೈಲಮಠ	ಸೋದೆ	ಲಕ್ಷ್ಮೀನಾರಾಯಣ
3. ದೇವಪ್ಪಮಠ(ಕೊಡೆತ್ತೂರು)	ಸೋದೆ –	
4. ಜೋಡಿಲ್ಲಿ ಮಠ(ಕೈಯಾರು)	–	
5. ಅತ್ತೂರು ಬೈಲಮಠ	–	ಗಣಪತಿ
6. ಮುಂಡು ಮಠ	ಸೋದೆ	
7. ಗುಡ್ಡೆಮಠ(ಮೂಡಬಿದರೆ) (ಅನಂತಾಸನಮಠ)	ಸೋದೆ	ಅನಂತಪದ್ಮನಾಭ
8. ಕಣ್ವತೀರ್ಥ(ಮಂಜೇಶ್ವರ)	ಪೇಜಾವರ	ಶ್ರೀರಾಮ
9. ಕಾಂತಾವರ ಮಠ	ಪಲಿಮಾರು	ಶ್ರೀರಾಮ
10. ಮಾಣಿಯೂರುಮಠ(ಎಲ್ಲೂರು)	ಕೃಷ್ಣಾಪುರ	ಶೇಷಶಾಯಿ ಅನಂತಪದ್ಮನಾಭ
11. ಮಣಿಪುರಮಠ (ಉದ್ಯಾವರ)	ಅದಮಾರು	
12. ಚಂದ್ರಸೇನರ ಕುದುರು (ಹೆಜಮಾಡಿ)	ಅದಮಾರು	
13. ಬಪ್ಪನಾಡುಕೇರಿ ಮಠ	–	ಮುಖ್ಯಪ್ರಾಣ
14. ಕುಳಿತೆಮಠ (ಇನ್ನ)	–	
15. ಬಳ್ಕುಂಜೆ ಮಠ(ಇನ್ನ)	ಶೀರೂರು	ಸೀತಾರಾಮ
16. ದಾದೊಟ್ಟುಮಠ (ಶಿರ್ವ)	–	
17. ಕೊಬ್ಬರಿಮಠ (ಬನ್ನಿಂತಾಯ)	–	ಲಕ್ಷ್ಮೀನರಸಿಂಹ
18. ಪಂಜಿಮಾರ್ ಮಠ	ಸೋದೆ	
19. ಕಡ್ತಿಲ ಮಠ (ಮಂಚಿ)	ಅದಮಾರು	
20. ಕೃಷ್ಣಾಪುರಮಠ (ಪಡುಬಿದ್ರಿ)	ಕೃಷ್ಣಾಪುರ	ಗೋಪಾಲಕೃಷ್ಣ
21. ತಾಳ್ಪರ (ತೌಳವ) ಮಠ, ಪೆರ್ಮುದೆ	–	

22. ನಡಂತಾಡಿ ಮಠ (ಬಂಟ್ವಾಳ)	ಸೋದೆ	
23. ನಾರಳಮಠ	ಸೋದೆ	
24. ಕದ್ರಿಮಠ (ಕಾಟಿಪಳ್ಳ)	–	
25. ಉಳ್ಳೂರು ಮಠ	ಪೇಜಾವರ	ಕಾಲಿಯಮರ್ದನ ಕೃಷ್ಣ
26. ಸಂಗಮಮಠ (ಮಂಗಳೂರು)	ಅದಮಾರು (ಶರವು ಶಾಸ್ತ್ರಿಗಳ ಕುಲದೇವರು)	
27. ನೆಲ್ಲಿಕಾಯಿ ಮಠ (ಕರ್ನಾಟಕ ಬ್ರಾಹ್ಮಣರು, ಈಗ ರಾಘವೇಂದ್ರ ಮಠವಾಗಿ ಶಿವಳ್ಳಿ ಆಡಳಿತೆ)	–	
28. ಬೆಳ್ಮಣ್ಣು ಮೂಡುಮಠ	ಕೃಷ್ಣಾಪುರ	
ಬಾಳೆಗಾರು ಮಠದ ಉಪಮಠ)	–	ಲಕ್ಷ್ಮೀನಾರಾಯಣ
29. ಕಂಗುಮಠ (ಉಡುಪಿ ಕೊಡವೂರು)		
30. ಕರ್ಜೆಮಠ	–	
31. ಕಡೆಕೊಪ್ಪಲಮಠ	ಅದಮಾರು	
32. ಕಾವುಮಠ (ಕಾಸರಗೋಡು)	(ಪಂಡಿತ ತ್ರಿವಿಕ್ರ ಮಾಚಾರ್ಯರು)	
33. ಕುಂಭಾಸಿ ಮಠ	ಸೋದೆ	
34. ಭಂಡಾರಕೇರಿಮಠ	ಮಧ್ವಚಾರ್ಯರಿಗೆ ಆಶ್ರಮ ನೀಡಿದ	ದಾಮೋದರ
	ಅಚ್ಯುತಪ್ರೇಕ್ಷರ ಮಠ	ಶಾಲಗ್ರಾಮ
35. ಸುಬ್ರಹ್ಮಣ್ಯ ಮಠ(ಕುಕ್ಕೆ)	ಮಧ್ವಾಚಾರ್ಯರ ಮೊದಲೇ ಇದ್ದ ಮಠ ಭಾಟ್ಟಾಚಾರ್ಯ ಸಂಪ್ರದಾಯದ	

	ನರಸಿಂಹ ತೀರ್ಥರನ್ನು ವಾದದಲ್ಲಿ ಗೆದ್ದು ಆಚಾರ್ಯರು ಈ ಮಠವನ್ನು ಪಡೆದರು. ಸೋದೆಮಠದ ವಿಷ್ಣು ತೀರ್ಥರು ಈ ಮಠದ ಮೂಲಯತಿಗಳು.	ಪಾಂಡುರಂಗ ವಿಠಲ ಮತ್ತುಸಂಪುಟನರಸಿಂಹ
36. ಚಿತ್ರಾಪುರಮಠ	ಪೇಜಾವರಮಠ (ಭಾಟ್ಟಸಂಪ್ರದಾಯದ ಶ್ರೀಪಾದರನ್ನು ಸೋಲಿಸಿ ಮಾಧ್ವರಾಗಿ ಮಾಡಿದ್ದರು.)	ರುಕ್ಮಿಣೀಸತ್ಯ ಸತ್ಯಭಾಮಸಮೇತ ಕಾಲಿಯಮರ್ದನ ಕೃಷ್ಣ
37. ದಂಡತೀರ್ಥಮಠ	ಕೃಷ್ಣಾಪುರಮಠ ಮಧ್ವಾಚಾರ್ಯರಿಗೆ ಪಾಠಹೇಳಿದ ಸ್ಥಳ.	
38. ಎರ್ಕಿಮಠ	–	–
39. ಹೂವಿನ ಕೆರೆ ಮಠ	ಸೋದೆ	–
40. ಪಂಜಿಮಾರು ಮಠ(ಶಿರ್ವ)	ಸೋದೆ	–
41. ದಡ್ಡುಮಠ (ಮುದರಂಗಡಿ)	ಸೋದೆ	–
42. ಕೊಲ್ಯ ಮಠ	ಸೋದೆ	–
43. ಹತ್ರಬೈಲು ಮಠ	–	ಸಿದ್ಧಿವಿನಾಯಕ
44. ಕೊತ್ವಾರು ಮಠ	(ವಯಿಲಾಯ ಮನೆತನದವರು)	–
45. ಭೀಮಸೇತು ಮಠ, ತೀರ್ಥಹಳ್ಳಿ	ಭಂಡಾರಕೇರಿ ಮಠ	
46. ಹೆಬ್ಬಾರ್ ಬೆಟ್ಟ ಮಠ	–	ಗೋಪಾಲಕೃಷ್ಣ
47. ಗೋರೆಲು ನೆಲ್ಲಿಮಠ	–	ಅನಂತಶಯನ (ಪಂಚಲೋಹದ ಪ್ರತಿಮೆ)
48. ಮಂಚೀರುಮಠ	–	ಗೋಪಾಲಕೃಷ್ಣ

49. ಬಾಳೆಬೈಲು ಮಠ – ಗೋಪಾಲಕೃಷ್ಣ (ಲಕ್ಷ್ಮೀನರಸಿಂಹ ದೇವರು)

6.22 ವಿಶ್ವಗುರು ಮಧ್ವಾಚಾರ್ಯರು

ಕರ್ನಾಟಕವು ಎಲ್ಲ ಪಂಥಗಳಿಗೆ, ನಂಬಿಕೆಗಳಿಗೆ ಇಂಬಿತ್ತ ನಾಡು. ಎಲ್ಲಾ ಬುದ್ಧಿಜೀವಿಗಳಿಗೆ ಅನುಭವಿಗಳಿಗೆ ಆಶ್ರಯವನ್ನು ನೀಡಿ ಸಲಹಿದ ನಾಡು. ಮಹಾಪುರುಷರನ್ನು, ಚಿಂತಕರನ್ನು ಜಗತ್ತಿಗೆ ನೀಡಿದ ನಾಡು. ಮತತ್ರಯ ಸ್ಥಾಪಕರಲ್ಲಿ ಒಬ್ಬರಾದ ಆಚಾರ್ಯ ಶಂಕರರು ಕೇರಳದವರು. ಅವರ ಪ್ರಧಾನ ಪೀಠಗಳಲ್ಲೊಂದಾದ ಶೃಂಗೇರಿ ಕರ್ನಾಟಕದಲ್ಲಿದೆ. ಆಚಾರ್ಯ ರಾಮಾನುಜರು ತಮಿಳುನಾಡಿನವರು. ಅವರ ಮೆಚ್ಚಿನ ಮೇಲುಕೋಟೆ ಕರ್ನಾಟಕದಲ್ಲಿದೆ. ಆಚಾರ್ಯ ಮಧ್ವರಂತು ಕರ್ನಾಟಕದವರೇ ವಿಶ್ವದ ತತ್ವಜ್ಞಾನ ಪ್ರಪಂಚಕ್ಕೆ ಕರ್ನಾಟಕದ ಅದ್ವಿತೀಯ ಕೊಡುಗೆ.

ಉಡುಪಿಯಿಂದ ದಕ್ಷಿಣಕ್ಕೆ ಸುಮಾರು 8.ಕಿ.ಮೀ ದೂರದ ಗ್ರಾಮ ಬೆಳ್ಳೆ. ಬಂಡೆ ಬೆಟ್ಟಗಳಿಂದ ಸುತ್ತುವರಿದ ಸುಂದರವಾದ ಹಳ್ಳಿ. ಆಚಾರ್ಯ ಮಧ್ವರು ಜನಿಸಿದ ಅಜ್ಞಾತವಾಗಿದ್ದ ಪಾಜೆ ಪವಿತ್ರ ಯಾತ್ರಾ ಕ್ಷೇತ್ರವಾಗಿ ವಿಖ್ಯಾತಿಯಾಯಿತು. ಪಾಜಕ ಕ್ಷೇತ್ರವೆಂದು ಪ್ರಖ್ಯಾತವಾಯಿತು. ವಿಲಂಬಿ ಸಂವತ್ಸರದ (ಕ್ರಿ.ಶ. 1238) ಅಶ್ವಯುಜ ಮಾಸ ಶುಕ್ಲ ಪಕ್ಷ ವಿಜಯ ದಶಮಿಯ ಮಧ್ಯಾಹ್ನ ಆಚಾರ್ಯ ಮಧ್ವರ ಜನನ. ಮಗುವಿಗೆ ವಾಸುದೇವ ಎಂದು ನಾಮಕರಣ. ಆಚಾರ್ಯರ ತಂದೆ ನಡಲ್ಲಾಯ ಮನೆತನದವರು. ತಂದೆಯ ಹೆಸರು ನಡಿಲ್ಲಾಯ ನಾರಾಯಣ ಭಟ್ಟ, ತಾಯಿಯ ಹೆಸರು ವೇದಾವತಿ.

ವಾಸುದೇವನಿಗೆ ಬಾಲ್ಯದಲ್ಲಿಯೇ ಅಧ್ಯಾತ್ಮದ ಒಲವು. ವಿರಕ್ತಿ ಮಾರ್ಗದ ಸೆಳೆತ. ಅತಿಮಾನುಷವಾದ ಪ್ರತಿಭಾಶಕ್ತಿ. ಮತಾಪಿತರು ಹಲವು ವರ್ಷದ ಅನಂತರ ಜನಿಸಿದ ತನ್ನ ಮಗ ಸಂಸಾರಿಯಾಗಬೇಕೆಂದು ಬಯಸಿದರೆ, ಜಗತ್ತೆ ತನ್ನ ಸಂಸಾರ ಎಂದು ವಾಸುದೇವ ಮನೆಯಿಂದ ದೂರ ಸರಿದು ಹನ್ನೊಂದರ ಎಳೆವರೆಯಲ್ಲೆ ಕ್ರಿ.ಶ. 1249 ಸೌಮ್ಯ ಸಂವತ್ಸರದಲ್ಲಿ ಉಡುಪಿಯ ಪರಿಸರದಲ್ಲಿ ಆಗ ವಿಖ್ಯಾತರಾಗಿದ್ದ ಅಚ್ಯುತ ಪ್ರಜ್ಞ ಯತಿಗಳಿಂದ ಸನ್ಯಾಸ ದೀಕ್ಷೆ ಪಡೆದರು. ಗುರು ಅಚ್ಯುತ ಪ್ರಜ್ಞರು ವಟು ವಾಸುದೇವನಿಗೆ ಆಶ್ರಮಕಾಲದಲ್ಲಿ 'ಪೂರ್ಣಪ್ರಜ್ಞ' ಎಂದು ನಾಮಕರಣ ಮಾಡಿದರು. ಆಶ್ರಮ ಸ್ವೀಕಾರವಾಗಿ 40 ದಿವಸದಲ್ಲೇ ವಾಸುದೇವ ಪಂಡಿತ ಮುಂತಾದ ದೇಶ ವಿಖ್ಯಾತ ತರ್ಕ ವಿದ್ವಾಂಸರನ್ನು ತರ್ಕದಲ್ಲಿ ಸೋಲಿಸಿ ಗರ್ವವನ್ನು ಭಂಗಮಾಡಿದ ಪುಟ್ಟಯತಿ ಪೂರ್ಣಪ್ರಜ್ಞ, ಪುಟ್ಟಯತಿಯ ಅಲೌಕಿಕ ಪ್ರತಿಭೆಯನ್ನು ಕಂಡು ಸಂತಸಗೊಂಡ ಗುರು ಅಚ್ಯುತ ಪ್ರಜ್ಞರು ವೇದಾಂತ ಸಾಮ್ರಾಜ್ಯದಲ್ಲಿ ಪಟ್ಟಾಭೀಷೇಕಗೈದು 'ಆನಂದ ತೀರ್ಥ' ಎಂದು ಹೆಸರಿಟ್ಟರು.

ಹೀಗೆ ಆಚಾರ್ಯರ ಸನ್ಯಾಸದ ಹೆಸರು 'ಪೂರ್ಣಪ್ರಜ್ಞ' ಪಟ್ಟಾಭೀಷೇಕದ ಹೆಸರು 'ಆನಂದತೀರ್ಥ'. ಆಚಾರ್ಯರು ತಾನೇ ಮೆಚ್ಚಿ ಆವಿಷ್ಕರಿಸಿದ ವೈದಿಕನಾಮ (ಕಾವ್ಯನಾಮ) 'ಮಧ್ವ'.

6.22.1 ದಕ್ಷಿಣಯಾತ್ರೆ

ಆಚಾರ್ಯರು ಹದಿಹರೆಯದಲ್ಲಿ ದಕ್ಷಿಣಭಾರತದ ಅನಂತಶಯನ, ಕನ್ಯಾಕುಮಾರಿ, ರಾಮೇಶ್ವರ, ಶ್ರೀರಂಗ ಮುಂತಾದ ಕ್ಷೇತ್ರಗಳನ್ನು ಸಂದರ್ಶಿಸಿದರು. ಎಲ್ಲಾ ಕಡೆಗಳಲ್ಲಿ ಪ್ರವಚನಗಳನ್ನು ನಡೆಸಿ ತನ್ನ ತತ್ವವಾದ ಸಂದೇಶವನ್ನು ಪ್ರಚಾರ ಮಾಡಿದರು. ಹಳೆಯ ಕೆಲವು ಮೂಢನಂಬಿಕೆಗಳನು ಸ್ಪಷ್ಟವಾಣಿಯಿಂದ ಖಂಡಿಸಿದರು.ಆಧ್ಯಾತ್ಮವನ್ನು ಮೂಢನಂಬಿಕೆಗಳ ಜೊತೆ ಬೆರೆಸಬಾರದು ಎಂದರು. ನಿಜವಾದ ತತ್ವದ ಪ್ರಸಾರಕ್ಕಾಗಿ ಇಡಿಯ ಬದುಕನ್ನು ಮುಡಿಪಾಗಿಸಿಡಬೇಕೆಂದು ದೃಢಸಂಕಲ್ಪ ಕೈಗೊಂಡರು. ಉಡುಪಿಗೆ ಮರಳಿದ ಆಚಾರ್ಯರು ಭಗವದ್ಗೀತೆಗೆ ಭಾಷ್ಯ ರಚಿಸಿದರು.

6.22.2 ಬದರಿಯತ್ತ ಪ್ರಯಾಣ

ಉತ್ತರಭಾರತದ ಎಲ್ಲೆಡೆ ಸಂಚರಿಸಿ ವೇದಧರ್ಮದ ಸಂದೇಶವನ್ನು ತಲುಪಿಸಬೇಕೆಂದು ಬಯಸಿ ಬದರಿಯತ್ತ ಪ್ರಯಾಣ. 48 ದಿನಗಳ ಕಾಷ್ಠಮೌನ, ಶೀತಲ ಗಂಗಾಸ್ನಾನ, ಅನಂತರ ವ್ಯಾಸ ಬದರಿಗೆ ಏಕಾಕಿಯಾಗಿ ಪ್ರಯಾಣ. ಹಿಮಾಲಯದ ದುರ್ಗಮ ಕಳ್ಳರ ತಂಡ ತಡೆದಾಗ ತನ್ನ ಶಿಷ್ಯ ಉಪೇಂದ್ರರನ್ನು ಅವರ ಜೊತೆ ಹೋರಾಡಿಸಿ ಕಳ್ಳರ ಸದ್ದಡಗಿಸಿದರು. 'ಬುದ್ಧಿ' ಬಲದಂತೆಯೇ ದೇಹ ಬಲವನ್ನು ಬೆಳೆಸಿಕೊಳ್ಳಬೇಕು, ದುರ್ಬಲವಾದ ದೇಹದಲ್ಲಿ ಬೌದ್ಧಿಕತೆ ಇರುವುದು ಅಸಾಧ್ಯ ಎಂದು ಭಾವಿಸಿದ ಆಚಾರ್ಯರು ತಮ್ಮ ಶಿಷ್ಯರನ್ನು ವೇದಾಂತ ಸಾಧನೆಯಲ್ಲಿ ಹೇಗೆ ಹಾಗೆಯೇ ಅಂಗ ಸಾಧನೆಯಲ್ಲಿ ಕೂಡಾ ಚತುರರನ್ನಾಗಿ ಮಾಡಿದರು.

ಆಚಾರ್ಯ ಮಧ್ವರು ಎರಡು ಬಾರಿ ಭಾರತದಾದ್ಯಂತ ಸಂಚರಿಸಿದರು.ದೇಶದ ವಿದ್ವಾಂಸರ ಮುಂದೆ ತನ್ನ ತತ್ವವಾದವನ್ನು ಮಂಡಿಸಿ ವಿದ್ವತ್‌ವೃಂದವೆಲ್ಲ ಪ್ರತಿಭೆಗೆ ತಲೆದೂಗುವಂತೆ ಮಾಡಿದರು. ಆಚಾರ್ಯ ಮಧ್ವರದ್ದು ಭಾರತೀಯ ಇತಿಹಾಸದಲ್ಲಿ ಅಪೂರ್ವವಾದ ಬಹುಮುಖ ಪ್ರತಿಭೆಯ ವ್ಯಕ್ತಿತ್ವ, ತತ್ವಶಾಸ್ತ್ರದಲ್ಲಿ ಅದ್ವಿತೀಯ ವಿದ್ವಾಂಸ, ವೇದ–ವೈದಿಕ ವಾಙ್ಮಯದ ಅಪೂರ್ವ ಸಂಶೋಧಕರು. ಶಿಲ್ಪಶಾಸ್ತ್ರದಲ್ಲಿ ಪರಿಣತರು. ಕರ್ನಾಟಕ ಸಂಗೀತಕ್ಕೆ ಮೂಲರೂಪವನ್ನು ಕೊಟ್ಟ ಆಚಾರ್ಯಪುರುಷರು.

ಆಚಾರ್ಯರ ಕಾಲದಲ್ಲಿ ಕಿಂಚಿತ್ತಾಗಿ ಕ್ರೈಸ್ತಧರ್ಮವೂ ಇಲ್ಲಿ ಪಸರಿಸಿತ್ತು. ಇಸ್ಲಾಂ ಧರ್ಮವಂತು ಉತ್ತರ ಭಾರದಲ್ಲಿ ಸಾಕಷ್ಟು ವ್ಯಾಪಕವಾಗಿ ಹಬ್ಬಿತ್ತು. ಕರ್ನಾಟಕದಲ್ಲಿ ಜೈನ ಧರ್ಮ ಮತ್ತು ವೀರಶೈವ ಧರ್ಮ ಗಾಢವಾಗಿ ಬೇರೂರಿತ್ತು. ಈ ಎಲ್ಲ ಧರ್ಮಗಳ ಹಿನ್ನೆಲೆಯಲ್ಲಿ ವೈದಿಕ ಧರ್ಮದ ಪುನರುಜ್ಜೀವನ ಆಚಾರ್ಯರ ಪ್ರಮುಖ ಕಾರ್ಯವಾಗಿತ್ತು.

ಈ ಪುನರುಜ್ಜೀವನ ಕಾರ್ಯದಲ್ಲಿ ಆಚಾರ್ಯರು ಹಾಕಿಕೊಟ್ಟ ಪರಂಪರೆ ಅಪೂರ್ವವಾದದ್ದು. ಶಾಸ್ತ್ರಗಳ ಸಾರ ಮಂಥನಕ್ಕಾಗಿ ಸಂಸ್ಕೃತದಲ್ಲಿ ಗ್ರಂಥಗಳನ್ನು ಬರೆದರು. ಈ ಉದ್ಗ್ರಂಥಗಳು ಜನಸಾಮಾನ್ಯರನ್ನು ಮುಟ್ಟುವುದು ಕಷ್ಟವಾದಾಗ ಸ್ವತಃ ಹಿರಿಯ ಸಂಗೀತಗಾರರೂ, ವಾಗ್ಗೇಯಕಾರರೂ ಆದ ಆಚಾರ್ಯರು ಶಿಷ್ಯರಿಂದ ಕನ್ನಡಲ್ಲಿ ಕೀರ್ತನೆಗಳನ್ನು ಬರೆಯಿಸಿ ಭಾಗವತರ ಮೂಲಕ ಅದನ್ನು ಬಳಕೆಗೆ ತಂದರು.

ಅಲ್ಲಿಂದ ಮರಳಿದ ಬಳಿಕ 'ಬ್ರಹ್ಮಸೂತ್ರಗಳಿಗೆ ಭಾಷ್ಯ' ರಚನೆ. ಆಚಾರ್ಯರು ಸ್ವತಃ ಕೈಯಾರೆ ಗ್ರಂಥವನ್ನು ಬರೆಯಲಿಲ್ಲ. ಇವರು ಹೇಳುತ್ತಾ ಹೋದಾಗ ಶಿಷ್ಯರು ಬರೆದರು.

ಕೆಲವು ಕಾಲ ಉಡುಪಿಯ ಪರಿಸರದಲ್ಲೇ ಇದ್ದ ಆಚಾರ್ಯರು ಉಪನಿಷತ್ತುಗಳಿಗೆ ಭಾಷ್ಯ ಬರೆದರು. ಋಗ್ವೇದದ 40 ಸೂಕ್ತಿಗಳಿಗೆ ಭಾಷ್ಯ ರಚಿಸಿ ವೇದದ ಆಧ್ಯಾತ್ಮ ಮುಖವನ್ನು ತೆರೆದು ತೋರಿಸಿದರು. ಶಿಷ್ಯರ ಜೊತೆ ಪ್ರಯಾಣದಲ್ಲಿ ಹಾಡಲು ಅನುಕೂಲವಾಗುವಂತೆ ಹಾಡಗಬ್ಬಗಳನ್ನು ರಚಿಸಿದರು.

ಒಂದು ದಿನ ಆಚಾರ್ಯರು ಸ್ನಾನ ಮಾಡಿ ಶುಚಿರ್ಭೂತರಾಗಿ ಕಡಲ ತೀರದಲ್ಲಿ ದೇವರನ್ನು ಧ್ಯಾನಿಸುತ್ತಾ ಕುಳಿತು ಕೊಂಡಿದ್ದರು. ಅರಬ್ಬೀ ಸಮುದ್ರದಲ್ಲಿ ಬಿರುಗಾಳಿಗೆ ಸಿಕ್ಕಿದ ಹಡಗು ವಿಪನ್ನಾವಸ್ಥೆಯಲ್ಲಿರುವಾಗ ಹೇಗಾದರೂ ಹಡಗನ್ನುಳಿಸಬೇಕೆಂದು ಹಡಗಿನ ಯಜಮಾನ ಸಹಾಯ ಹಸ್ತ ಚಾಚಿದಾಗ ಕೂಡಲೇ ತನ್ನ ಕಾವಿಶಾಟಿಯಿಂದಲೇ ಅನುಕೂಲವಾದ ಗಾಳಿ ಬೀಸುವಂತೆ ಮಾಡಿ ವಿಪತ್ತಿಗೆ ಸಿಕ್ಕಿದ ಹಡಗು ಸುರಕ್ಷಿತವಾಗಿ ದಡಸೇರುವಂತೆ ಮಾಡಿದರು. ಹಡಗಿನ ಮಾಲಿಕ ಬೇಕಾದ ವಸ್ತುಗಳನ್ನು ಕಾಣಿಕೆಯಾಗಿ ತೆಗೆದುಕೊಳ್ಳಬಹುದೆಂದಾಗ ಸನ್ಯಾಸಿಯಾದ ಆಚಾರ್ಯರು 3 ಗೋಪಿ ಚಂದನದ ಹೆಂಟೆಯನ್ನು ಕಾಣಿಕೆಯಾಗಿ ಪಡೆದರು. ಆಚಾರ್ಯರು ಶಿಷ್ಯರಿಂದ ಗೋಪಿ ಚಂದನಗಳನ್ನು ಹೊರಿಸಿಕೊಂಡು ಉಡುಪಿಗೆ ಬರುವಾಗ ಒಂದು ಹೆಂಟೆ ಒಡೆಯಿತು. ಅದರೊಳಗೆ ಬಲರಾಮ ಮೂರ್ತಿ ಇತ್ತು. ಅದನ್ನು ವಡಭಾಂಡೇಶ್ವರ ಎಂಬ ಸ್ಥಳದಲ್ಲಿ ಪ್ರತಿಷ್ಠೆ ಮಾಡಿದರು. ಒಂದು ಗೋಪಿ ಚಂದನದಲ್ಲಿ ಅಡಗಿರುವ ನವನೀತ ಚೋರನಾದ ಶ್ರೀಕೃಷ್ಣನ ದಿವ್ಯ ವಿಗ್ರಹವನ್ನು ಸುಮೂರ್ಹದಲ್ಲಿ ಉಡುಪಿಯಲ್ಲಿ ಪ್ರತಿಷ್ಠೆ ಮಾಡಿದರು. 3ನೇ ಚಂದನವನ್ನು ಹಡಗಿನ ಒಡೆಯ ಬೇಕೆಂದಾಗ ಆಚಾರ್ಯರು ಅವನಿಗೆ ದಯಪಾಲಿಸಿದರು. ಅದರಲ್ಲಿ ಅಡಗಿದ್ದ ದಿವ್ಯವಾದ ಜನಾರ್ದನ ದೇವರ ವಿಗ್ರಹವನ್ನು ಉಡುಪಿಯಿಂದ 13 ಮೈಲು ದೂರದಲ್ಲಿರುವ ಯರ್ಮಾಳು ಎಂಬ ಗ್ರಾಮದಲ್ಲಿ ಪ್ರತಿಷ್ಠಿಸಿ ಪೂಜಾದಿ ವಿನಿಯೋಗಗಳಿಗೆ ಬೇಕಾದ ದಾನ ದತ್ತಿಗಳನ್ನು ಮಾಡಿ ಸುವ್ಯವಸ್ಥೆ ಮಾಡಿದರು ಎಂಬ ಪ್ರತೀತಿಯಿದೆ. ಅನಕ್ಷರಸ್ಥರಾದ ಹಳ್ಳಿಯ ಜನರನ್ನೂ ಸಂದೇಶ ತಲುಪಬೇಕು ಎನ್ನುವ ದೃಷ್ಟಿಯಿಂದ ತನ್ನ ಶಿಷ್ಯ ನರಹರಿತೀರ್ಥರ ಮೂಲಕ ಭಾಗವತರ ಆಟ, ದಶಾವತಾರದ ಆಟ ಎಂದು ಹೆಸರಾದ ಬಯಲಾಟದ ಕಲಾ ಮಾಧ್ಯಮವನ್ನು ಬಳಕೆಗೆ ತಂದರು.

ವಿರಕ್ತಿಯಿಂದ ಸನ್ಯಾಸವನ್ನು ಬಯಸಿ ಕಾದು ನಿಂತ ನಿನ್ನ ಸೋದರನಿಗೆ ಸನ್ಯಾಸ ದೀಕ್ಷೆಯನ್ನಿತ್ತರು. ಇವರೇ ಈಗಿನ ಸೋದೇಮಠ ಮತ್ತು ಸುಬ್ರಹ್ಮಣ್ಯ ಮಠದ ಮೂಲಯತಿಗಳಾದ ಶ್ರೀ ವಿಷ್ಣುತೀರ್ಥರು. ಮುಂದೆ ಅನೇಕ ಮಂದಿ ಬೇರೆ ಬೇರೆ ಪ್ರದೇಶದ ಶಿಷ್ಯರು ಆಚಾರ್ಯರಿಂದ ಸನ್ಯಾಸ ದೀಕ್ಷೆ ಪಡೆದರು. ಅವರ ಪೈಕಿ ಉಡುಪಿಯಲ್ಲಿ ನೆಲೆನಿಂತ ಎಂಟು ಮಂದಿ ಶಿಷ್ಯರ ಹೆಸರು ಆಶ್ರಮದ ಕ್ರಮದಂತೆ–

1. ಹೃಷೀಕೇಶ ತೀರ್ಥ – ಪಲಿಮಾರು ಮಠ
2. ನರಹರಿ(ಸಿಂಹ) ತೀರ್ಥ – ಅದಮಾರು ಮಠ
3. ಜನಾರ್ದನ ತೀರ್ಥ – ಕೃಷ್ಣಾಪುರ ಮಠ
4. ಉಪೇಂದ್ರ ತೀರ್ಥ – ಪುತ್ತಿಗೆ ಮಠ
5. ವಾಮನ ತೀರ್ಥ – ಶೀರೂರು ಮಠ
6. ವಿಷ್ಣು ತೀರ್ಥ – ಸೋದೆ ಮಠ
7. ರಾಮ ತೀರ್ಥ – ಕಾಣಿಯೂರು ಮಠ
8. ಅಧೋಕ್ಷಜ ತೀರ್ಥ – ಪೇಜಾವರ

ಆಚಾರ್ಯರು ಎಪ್ಪತ್ತರ ಹರೆಯದಲ್ಲೂ ಜಿಲ್ಲೆಯಾದ್ಯಂತ ಸಂಚರಿಸಿ ಜನ ಜಾಗೃತಿಯಲ್ಲಿ ತೊಡಗಿದ್ದರು. 79 ವರ್ಷಗಳ ಕಾಲದ ಆಚಾರ್ಯರ ಒಟ್ಟು ಜೀವಿತಾಕಾಲ. ಉದ್ದೇಶ ಈಡೇರಿತು ಎಂದಾಗ ಈ ತತ್ವವಾದದ ಪರಂಪರೆಯನ್ನು ಮುಂದುವರೆಸುವ ಹೊಣೆಯನ್ನು ತನ್ನ ಶಿಷ್ಯರ ಹೆಗಲ ಮೇಲೆ ಹೊರಿಸಿ ತಾನು ಏಕಾಕಿಯಾಗಿ ನಿರ್ಲಿಪ್ತ ನಿಶ್ಚಿಂತೆಯಿಂದ ಬದರಿಗೆ ತೆರಳಿದರು. ಹೀಗೆ ಬದರಿಗೆ ತೆರಳಿದ ದಿನ, ಕಲಿವರ್ಷ 4418, ಪಿಂಗಲ ಸಂವತ್ಸರದ ಮಾಘ ಶುದ್ಧ ನವಮಿ 1317. ಇಂದಿಗೂ ಈ ದಿನದಂದೇ ಮಧ್ವ ನವಮಿಯೆಂದು ಆಚಾರ್ಯರ ಪುಣ್ಯತಿಥಿಯನ್ನು ಆಚರಿಸುತ್ತಾರೆ.

6.22.3 ಆಚಾರ್ಯರ ಕೃತಿಗಳು

ಸೂತ್ರ ಪ್ರಸ್ತಾನದ ಮೇಲೆ ಆಚಾರ್ಯರು ನಾಲ್ಕು ಕೃತಿಗಳನ್ನು ರಚಿಸಿದ್ದಾರೆ.

1. ಬ್ರಹ್ಮಸೂತ್ರ ಭಾಷ್ಯ
2. ಸರ್ವಶಾಸ್ತ್ರಾರ್ಥ ಸಂಗ್ರಹ(ಅಣು ಭಾಷ್ಯ)
3. ಬ್ರಹ್ಮಸೂತ್ರಾನು ವ್ಯಾಖ್ಯಾನ
4. ಬ್ರಹ್ಮಸೂತ್ರಾನು ವ್ಯಾಖ್ಯಾನ ನ್ಯಾಯ ವಿವರಣ

ಗೀತಾ ಪ್ರಸ್ಥಾನದ ಮೇಲೆ ಎರಡು ಗ್ರಂಥಗಳು

5. ಭಗವದ್ ಗೀತಾ ಭಾಷ್ಯ
6. ಭಗವದ್ ಗೀತಾ ತಾತ್ಪರ್ಯ ನಿರ್ಣಯ
7. ಮಹೈತರೇ ಯೋಪನಿಷದ್ ಭಾಷ್ಯ
8. ಬೃಹದಾರಣ್ಯ ಕೋಪನಿಷದ್ ಭಾಷ್ಯ
9. ಛಂದೋಗೋಪನಿಷದ್ ಭಾಷ್ಯ
10. ತೈತೀರೀಯೋಪನಿಷದ್ ಭಾಷ್ಯ

11. ತಲವಕಾರೋಪನಿಷದ್ (ಕೇನೋಪನಿಷದ್) ಭಾಷ್ಯ

12. ಕಾಠಕೋಪನಿಷದ್ ಭಾಷ್ಯ

13. ಅಥರ್ವಣೋಪನಿಷದ್(ಮುಂಡಕೋಪನಿಷದ್) ಭಾಷ್ಯ

14. ಷಟ್ ಪ್ರಶ್ನೋಪನಿಷದ್ ಭಾಷ್ಯ

15. ಯಾಜ್ನೀಯ ಮಂತ್ರೋಪನಿಷದ್ (ಈಶಾವಾಸ್ಯೊಪನಿಷದ್) ಭಾಷ್ಯ

16. ಮಾಂಡೂಕೋಪನಿಷದ್ ಭಾಷ್ಯ

17. ಋಗ್ ಭಾಷ್ಯ

18. ಖಂಡಾಂರ್ಥ ನಿರ್ಣಯ (ಕರ್ಮನಿರ್ಣಯ)

19. ಮಹಾಭಾರತ ತಾತ್ಮರ್ಯ ನಿರ್ಣಯ

20. ಮಹಾಭಾರತ ತಾತ್ಪರ್ಯ (ಯಮಕ ಭಾರತ)

21. ಭಾಗವತ ತಾತ್ಪರ್ಯ ನಿರ್ಣಯ

ಪ್ರಮಾಣ –ಪ್ರಮೇಯಗಳ ನಿಷ್ಕರ್ಷೆಗಾಗಿ 9 ಪ್ರಕರಣ ಗ್ರಂಥಗಳು

22. ವಿಷ್ಣು ತತ್ವನಿರ್ಣಯ

23. ವಾದ (ತತ್ವೋದ್ಯೋತ)

24. ಮಹಾವಾದದೂಷಣ(ಮಾಯವಾದ ಖಂಡನ)

25. ಉಪಾಧಿದೂಷಣ (ಉಪಾಧಿಖಂಡನ– ತತ್ವಪ್ರಕಾಶಿಕಾ)

26. ಮಿಥ್ಯಾತ್ವಾನುಮಾನದೂಷಣ(ಮಿಥ್ಯಾತ್ವಾನುಮಾನ ಖಂಡನ)

27. ತತ್ವ ಸಂಖ್ಯಾನ

28. ತತ್ವ ವಿವೇಕ

29. ಪ್ರಮಾಣ ಲಕ್ಷಣ

30. ವಾದ ಲಕ್ಷಣ (ಕಥಾ ಲಕ್ಷಣ)

ಧರ್ಮಶಾಸ್ತ್ರದ ವ್ರತ–ಅನುಷ್ಠಾನಗಳ ಬಗೆಗೆ, ವಾಸ್ತುಶಿಲ್ಪದ ಬಗೆಗೆ, ಮಂತ್ರ–ತಂತ್ರಗಳ ಬಗೆಗೆ, ಗೃಹಸ್ಥರ ಮತ್ತು ಸನ್ಯಾಸಿಗಳ ಆಚಾರ–ಧರ್ಮಗಳ ಬಗೆಗೆ ಮಾರ್ಗದರ್ಶನ ಮಾಡುವ ಏಳು ಗ್ರಂಥಗಳು.

31. ಕೃಷ್ಣಾಮೃತ ಮಹಾರ್ಣವ

32. ತಂತ್ರಸಾರ ಸಂಗ್ರಹ

33. ಸದಾಚಾರಸ್ಮೃತಿ

34. ಜಯಂತೀ ನಿರ್ಣಯ

35. ಓಂತತ್ ಸತ್ ಪ್ರಣವಕಲ್ಪ(ಯತಿ ಪ್ರಣವಕಲ್ಪ)

36. ನ್ಯಾಸಪದ್ಧತಿ

37. ತಿಥಿನಿರ್ಣಯ

ಸ್ತೋತ್ರ ಸಾಹಿತ್ಯದಲ್ಲಿ ಒಂದು ಸ್ತುತಿ, ಮತ್ತೊಂದು ಸಂಗೀತ ಬದ್ಧವಾದ ಹಾಡುಗಬ್ಬಗಳ ಸಂಕಲನ.

38. ನರಸಿಂಹನಖಸ್ತುತಿ

39. ದ್ವಾದಶ ಸ್ತೋತ್ರಗಳು

ಆಚಾರ್ಯರ ಬಾಲ್ಯದಲ್ಲಿ ಚೆಂಡಾಟದ ಮೇಲೆ ರಚಿಸಿದ್ದೆಂದು ಹೇಳಲಾದ ಅಪೂರ್ವ ಛಂದಸ್ಸಿನ ಒಂದು ಪುಟ್ಟ ಕೃತಿ

40. ಕಂದುಕಸ್ತುತಿ

6.23 ಪರಿವರ್ತನೆಯ ಹರಿಕಾರ ಶ್ರೀ ವಾದಿರಾಜರು

ಮದ್ವಾಚಾರ್ಯರು ದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿ ಹೊಸ ಚಿಂತನೆಯನ್ನು ಜನರಲ್ಲಿ ಮೂಡಿಸಿದವರು, ಬಿತ್ತಿದವರು. ವಾದಿರಾಜರು ಅದನ್ನು ಬೆಳೆಸಿ ಮುಂದುವರಿಸಿಕೊಂಡು ಹೋದವರು. ಸಾಂಸ್ಕೃತಿಕವಾಗಿ, ಆಧ್ಯಾತ್ಮಿಕವಾಗಿ, ಸಾಮಾಜಿಕವಾಗಿ ಹೊಸಕ್ರಾಂತಿಯನ್ನೇ ಮಾಡಿದವರು. ವಾದಿರಾಜರು ಮಹಾನ್‌ಯತಿ, ತಪಸ್ವಿ, ವಾಗ್ಗೇಯಕಾರ, ಗ್ರಂಥಕಾರ, ಕವಿ, ತತ್ವಜ್ಞಾನಿ, ಸಾಂಸ್ಕೃತಿಕ ನೇತಾರ, ಕಲಾಪ್ರೇಮಿ ಮತ್ತು ಮಹಾನ್ ಸಮಾಜ ಸುಧಾರಕರು.

ತುಳುನಾಡಿನಲ್ಲಿ ಸಂಸ್ಕೃತಕ್ಕೊಂದು ಮಹಾಕಾವ್ಯ ನೀಡಿದ ಮೊದಲ ಯತಿಗಳು. ಕಾಸರಗೋಡಿನ ಪೆಜತ್ತಾಯ ವಂಶದ ತ್ರಿವಿಕ್ರಮ ಪಂಡಿತರ 'ವಿಷಾಹರಣ' ತುಳುನಾಡಿನ ಮೊದಲ ಮಹಾಕಾವ್ಯ. ಅವರ ಮಗನಾದ ನಾರಾಯಣ ಪಂಡಿತ ಸಂಗ್ರಹ ರಾಮಾಯಣ ಮತ್ತು ಮಧ್ವವಿಜಯ ಅನಂತರದ ಎರಡು ಮಹಾಕಾವ್ಯ. ನಾಲ್ಕನೆಯ ಮಹಾಕಾವ್ಯ 'ರುಗ್ಮಿಣೀಶ ವಿಜಯ'ವನ್ನು ಬರೆದವರು ವಾದಿರಾಜರು. ಇದು ಕರ್ನಾಟಕ ಮತ್ತು ಮಹಾರಾಷ್ಟ್ರದ ಬೆಸುಗೆಯೂ ಹೌದು. ಪುಣೆಯ ಸಂಸ್ಕೃತ ಪಂಡಿತರ ಪಂಥಾಹ್ವಾನಕ್ಕೆ ಉತ್ತರವಾಗಿ ವಾದಿರಾಜರು ಈ ಕೃತಿಯನ್ನು ರಚಿಸಿದರೆಂದು ಐತಿಹ್ಯವಿದೆ.

ಭಾರತದ ಎಲ್ಲಾ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ ತೀರ್ಥಕ್ಷೇತ್ರಗಳ ಮಹಿಮೆಯನ್ನು ಪೌರಾಣಿಕ ಐತಿಹಾಸಿಕ ಹಿನ್ನೆಲೆಗಳನ್ನು ಸಂಚಾರದ ಕಾಲದ ತನ್ನ ಅನುಭವಗಳನ್ನು ದಾಖಲಿಸಿದ ಅಪೂರ್ವ ಪ್ರವಾಸ ಲೇಖನ 'ತೀರ್ಥಪ್ರಬಂಧ' ಪದ್ಯರೂಪದಲ್ಲಿ ಕಾವ್ಯಮಯವಾಗಿ ರೂಪಗೊಂಡ ಚಿಕ್ಕಕೃತಿ. ಶಾಸ್ತ್ರಗ್ರಂಥಗಳನ್ನು ಪದ್ಯಗಳಲ್ಲಿ ಬರೆದವರಲ್ಲಿ ವಾದಿರಾಜರೂ ಪ್ರಮುಖರು. 'ಯುಕ್ತಿಮಲ್ಲಿಕಾ' 'ನ್ಯಾಯರತ್ನಾವಳಿ' ಗ್ರಂಥಗಳ ಮೂಲಕ ಕಾವ್ಯ ಪರಂಪರೆಗೆ ವ್ಯಾಪಕವಾದ ಆಯಾಮವನ್ನು ನೀಡಿದ್ದಾರೆ.

ವಾದಿರಾಜರು ಮೂಲತಃ ಕವಿಹೃದಯಿ. ಶಾಸ್ತ್ರಗಳಲ್ಲೂ ಕಾವ್ಯಪ್ರೇಮ ಹರಿದು ಬಂದಿದೆ. ಉದಾಹರಣೆಗೆ.

ಅಧುನಾ ವಿಧುನಾ ರುದ್ಧಂ ಮಧು ನಾಸೀನ್ಮಧುವ್ರತ।

ಉದಿತೇ ಮುದಿತೇಬ್ಜೇ ಸ್ಯಾದದಿತೇರ್ವಿದಿತೇಸುತೇ॥

(ಈ ಚಂದ್ರನಿಂದಾಗಿ ಮುಚ್ಚಿದ ಮೊರೆಯ ತಾವರೆಯಲ್ಲಿ ಸಿಗದಿದ್ದರೇನು ಜೇನು. ಓ ದುಂಬಿಯೇ ಸೂರ್ಯ ಮೂಡಿದಾಗ ತಾವರೆಯ ಮೊರೆಯರಳಿದಾಗ ಹೀರ ಬಹುದಲ್ಲವೇ ನೀನು?.)

(ಯುಕ್ತಿಮಲ್ಲಿಕಾ)

ತುಲಯಾ ಮಲಯಾದ್ರ್ಯುತ್ಥ ಚಂದನೇನೇಂಧನಂ ಖಲಃ

ಸಮಂ ಸಮಂತಾತ್ ಕುರುತೇ ಗ್ರಂಥೌ ಗಂಧಂ ಕರೋತಿಕಃ

(ಮರ ಕಡಿಯುವ ಗಾಂಪ ಗಂಧದ ಕೊರಡನ್ನು ಉರುವಲಿನ ಜೊತೆಗೆ ತಕ್ಕಡಿಯಲ್ಲಿಟ್ಟು ತೂಗಬಹುದು. ಆದರೆ ಕೊರಡಲ್ಲಿ ಕಂಪು ಮೂಡಿಸುವವನಾರು)

(ಯುಕ್ತಿಮಲ್ಲಿಕಾ)

ವಾದಿರಾಜರ ಯುಕ್ತಿಮಲ್ಲಿಕೆಯಲ್ಲಿ ಬಂದ ಇಂಥಪದ್ಯಗಳ ಶಬ್ದದ ಮಾಧುರ್ಯ, ಅರ್ಥದ ಚಮತ್ಕಾರ ವೈಶಿಷ್ಟ್ಯಪೂರ್ಣ. ವೇದಾಂತಕ್ಕೆ ಕಾವ್ಯದ ಮೆರಗು ನೀಡಿ. ಜನಪ್ರೀಯಗೊಳಿಸಿದ ಕೀರ್ತಿ ವಾದಿರಾಜರಿಗೆ ಸಲ್ಲುತ್ತದೆ. ಪಂಡಿತರೂ ಪಾಮರರೂ ಜೊತೆಯಾಗಿ ತಲೆದೂಗುವಂತೆ ಕೃತಿ ರಚನೆ ಮಾಡಿದ್ದು ವಿಶೇಷ.

ವಾದಿರಾಜರು ಭಕ್ತಿಪಂಥದ ಪ್ರಸಾರಕ್ಕಾಗಿ 'ನೀನು ಈಶ, ನಾನು ದಾಸ' ಎಂಬ ಪ್ರಜ್ಞೆಯನ್ನು ಜನಮನದಲ್ಲಿ ಜಾಗೃತಗೊಳಿಸುವುಕ್ಕಾಗಿ ಆಚಾರ್ಯಮಧ್ವರ ಸಿದ್ಧಾಂತದ ತಿರುಳನ್ನು, ಸತ್ತ್ವವನ್ನು ಜನಸಾಮಾನ್ಯರಿಗೂ ತಲುಪಿಸುವುದಕ್ಕಾಗಿ ಸ್ತೋತ್ರಗಳನ್ನು ಹಾಡುಗಬ್ಬಗಳನ್ನು ರಚಿಸಿದರು. ಸ್ತೋತ್ರಸಾಹಿತ್ಯವನ್ನು, ಭಕ್ತಿಸಾಹಿತ್ಯವನ್ನು 'ಅಹಂಭಾವ'ದ ತಾಣದಲ್ಲಿ 'ದಾಸೋಹಂ' ಭಾವವನ್ನು ವ್ಯಾಪಕವಾಗಿ ಪಸರಿಸಿದವರು ವಾದಿರಾಜರು. ಹಾಡುಗಬ್ಬದ ಪರಂಪರೆಯನ್ನು, ಕರ್ನಾಟಕ ಸಂಗೀತದ ಅನನ್ಯತೆಯನ್ನು ವ್ಯಾಪಕವಾಗಿ ಬೆಳೆಸಿದ ಸಂತರಲ್ಲಿ ವಾದಿರಾಜರು ಮುಂಚೂಣಿಯಲ್ಲಿ ನಿಲ್ಲುತ್ತಾರೆ.

ಸಂಸ್ಕೃತದಲ್ಲಿ ಹಾಡಿದರೆ ಸಾಲದು, ಜನಸಾಮಾನ್ಯರನ್ನು ಮುಟ್ಟಬೇಕು ಎಂಬ ಉದ್ದೇಶದಿಂದ ಆಡುಮಾತಿನಲ್ಲೂ ಹಾಡು ಗಬ್ಬಗಳನ್ನು ಹೊಸೆಯಬೇಕು ಎಂಬ ದೃಷ್ಟಿಯಿಂದ ಜನಸಾಮಾನ್ಯರ ಭಾಷೆಯಲ್ಲಿ ಬರೆದರು. ಇವರ ಕನ್ನಡ ದೇವರ ನಾಮಗಳು ಇಂದು ಕರ್ನಾಟಕದಾದ್ಯಂತ ಜಾತಿ-ಮತ-ಪಂಥಗಳನ್ನು ಮೀರಿ ಭಾವುಕರ ಬಾಯಿಯಲ್ಲಿ ನಲಿದಾಡುತ್ತಿದೆ. ಅವರು ರಚಿಸಿದ ಖಂಡಕಾವ್ಯ, ಸಾಂಗತ್ಯದಾಟಿಯ 'ಶೋಭಾನೆಹಾಡು' ಮುತ್ತೈದರ ಉಪನಿಷತ್ತು. ವಾದಿರಾಜರು ಜನಪರ ಕಾಳಜಿವುಳ್ಳವರು. ತುಳುವಿನಲ್ಲೂ ಅವರು ಹಾಡುಗಳನ್ನು ಬರೆದರು ಉದಾಹರಣೆಗೆ,

ಕಣ್ಣ್ ಬುಡ್ದ್ ನೀರ್‌ದುಲಯಿ ತೂಪಿನೇರ್‌ಗಾ।

ಅಣ್ಣ ಪಣ್‌ಪೆ ಕೇಣ್ ಮತ್ಸ್ಯೋ ದೇವೆರತ್ತ್‌ಗ

ಇದು ದಶಾವತಾರಸ್ತುತಿ. ಇಲ್ಲಿ ಬರುವ ಏರ್‌ಗಾ, ಅತ್ತಗಾ ಎಂಬ ಪದಗಳ ಬಳಕೆಯನ್ನು ನೋಡಿದರೆ ಇದು ಶಿಷ್ಟ ತುಳುವಲ್ಲ, ದಲಿತರ ತುಳು. ಹರಿಜನರ ತುಳುವಿನ 'ಗಾ' ಶಿಷ್ಟರ ತುಳುವಿನಲ್ಲಿ 'ಯಾ' ಆಗುತ್ತದೆ. ಏರ್‌ಯಾ, ಅತ್ತಯಾ ಇತ್ಯಾದಿ. ಹರಿಜನರನ್ನು ಅಣ್ಣ ಎಂದು ಆತ್ಮೀಯತೆಯ ಬೆಸುಗೆಯೊಡನೆ ಕರೆದು ಆಧ್ಯಾತ್ಮವನ್ನು ತಿಳಿಹೇಳುವ ರೀತಿ ಅದ್ಭುತ.

ವಾದಿರಾಜರು ಮಹಾನ್ ಕ್ರಾಂತಿಕಾರಿ ಯತಿಗಳು. ಸುಧಾರಣೆಗಳ ಹರಿಕಾರರು. ಮಠಗಳ ಮಡಿವಂತಿಕೆಯ ಬೇಲಿಮುರಿದು ಹರಿಜನರ ಕೇರಿಯಲ್ಲಿ ಅವರೊಡನೆ ಈ ಹಾಡು ಹಾಡುತ್ತಾ ದುಡಿಯ ಬಡಿತಕ್ಕೆ ತಕ್ಕಂತೆ ಹಾಡಿ ಕುಣಿಯುತ್ತಾ ಹರಿಜನರನ್ನು ಹಾಡಿ ಕುಣಿಸುತ್ತಾ ಖುಷಿಪಟ್ಟಿರಬಹುದು.

ಉಡುಪಿಯಲ್ಲಿ, ಶ್ರೀಕೃಷ್ಣ ಮಂದಿರದಲ್ಲಿ ಬೆಳಗಿನಿಂದ ಸಂಜೆ ತನಕ ಬೇರೆ ಬೇರೆ ಪೂಜಾಕಾಲಗಳಲ್ಲಿ ಸಂಸ್ಕೃತದ ಮಂತ್ರಗಳ ಜೊತೆಗೆ ಕನ್ನಡದ ಹಾಡುಗಳನ್ನು ಹಾಡುವ ಪದ್ಧತಿಯನ್ನು ಬಳಕೆಗೆ ತಂದರು. ತಕ್ಕಂಥಹ ಹಾಡುಗಳನ್ನು ರಚಿಸಿ ರಾಗ ಸಂಯೋಜನೆ ಮಾಡಿದರು. ಇಂದಿಗೂ ಅನುಚಾನವಾಗಿ ನಡೆದು ಬಂದಿದೆ. ರಾತ್ರಿ ಪೂಜೆಯ ಸಮಯದಲ್ಲಿ, ತುಳಸಿ ಪೂಜೆಯ ಸಮಯದಲ್ಲಿ ನರ್ತನಕ್ಕೆ ಪೂರಕವಾಗಿ ಹಾಡುವ 'ಲಕ್ಷುಮೀನಾರಾಯಣಾ' ಎಂಬ ಪಲ್ಲವಿಯೊಡನೆ ಸಾಗುವ ಕೀರ್ತನೆಯನ್ನು ರಚಿಸಿದವರು ವಾದಿರಾಜರೇ.

ವಾದಿರಾಜರು ಸೌಜನ್ಯದ ಮೂರ್ತಿ, ಅವರಲ್ಲಿ ನಿರ್ಲಿಪ್ತತೆಯೂ ಅನನ್ಯವಾಗಿತ್ತು. ಪುಣೆಯ ಪೇಶ್ವೆ 'ಮಹಾಕವಿ' ಎಂದಾಗಲೂ ಬೀಗಲಿಲ್ಲ. ಕರ್ನಾಟಕದ ಕೃಷ್ಣದೇವರಾಯನು 'ಪ್ರಸಂಗಾಭರಣತೀರ್ಥ' ಎಂಬ ಬಿರುದಿತ್ತು ಗೌರವಿಸಿದಾಗಲೂ ಬೀಗಲಿಲ್ಲ. ಉಡುಪಿಯಕೃಷ್ಣನ ಗುಡಿಯಮಾಡಿಗೆ ಚಿನ್ನದ ಹೊದಿಗೆ ಹೊದಿಸಲೆಂದು ಉತ್ತರದ ಮುಸ್ಲಿಂ ದೊರೆಯೊಬ್ಬ ಅವರಿಗೆ ಚಿನ್ನದ ರಾಶಿಯನ್ನು ಅರ್ಪಿಸಿದರೆ ಅದನ್ನು ಬಳಸಲಿಲ್ಲ. ಕಾರಣ ಜನರ ಕಣ್ಣು ದೇವರ ಬದಲು ಮಾಡಿನತ್ತ ಹರಿಯುತ್ತದೆ ಎಂದು ನಿರ್ಧರಿಸಿ ಬಂಗಾರವನ್ನೆಲ್ಲ ಭೂಗತಮಾಡಿ ಅದರ ಮೇಲೆ ನಾಗನನ್ನು ಸ್ಥಾಪಿಸಿದರೆಂದು ಪ್ರತೀತಿ ಇದೆ.

'ವಾದಿರಾಜ ತೀರ್ಥರು' ಎಂದು ಸನ್ಯಾಸ ದೀಕ್ಷೆ ಪಡೆದುಕೊಂಡಾಗ ಹೆಸರಿದ್ದರೂ 'ವಾದಿರಾಜ' ಎಂಬ ಹೆಸರನ್ನೇ ಹೆಚ್ಚು ಇಷ್ಟ ಪಡುತ್ತಿದ್ದರು. 'ರಾಜ' ಎನ್ನಿಸಿಕೊಳ್ಳುವುದು ವಾದಿರಾಜರಿಗೆ ಬೇಕಿಲ್ಲ. ಅವರ ನಿರ್ಲಿಪ್ತತೆಯ ಪರಾಕಾಯನ್ನು ಈ ಪದ್ಯದಲ್ಲಿ ಕಾಣಬಹುದು.

'ವಾದೀ ಮಧ್ವೋ ಯಸ್ಯ ರಾಜ ಸೋಹಂ ತಸ್ಯ ಕೃಪಾಬಲಾತ್'

ವಾದಿರಾಜೊ ನ ಸ್ವಶಕ್ತ್ಯಾ ವೀಣೆವ ರಣಯಾಮಿ ತತ್॥"

"ಆಚಾರ್ಯ ಮಧ್ವರೇ ನಿಜವಾದವಾದಿ, ಅವರೇ ನನಗೆ ರಾಜ. ಆದ್ದರಿಂದ ನಾನು ವಾದಿರಾಜ"

ನನ್ನ ಸ್ವಂತ ಶಕ್ತಿಯಲ್ಲ. ಅವರು ನುಡಿದಂತೆ ನುಡಿಯುವ ವೀಣೆ ನಾನು–

ಭಾವಪ್ರಕಾಶಿಕಾ– ಮಧ್ವರ ಮಹಾಭಾರತ ತಾತ್ಪರ್ಯನಿರ್ಣಕ್ಕೆ ಬರೆದ ಟೀಕೆ.

ಈ ಟೀಕೆಯು ಅವರ ಕರಣೆಯ ಕೊಡುಗೆ ಎನ್ನುತ್ತಾರೆ,

ದೇವಾಲಯಗಳ ಧಾರ್ಮಿಕ ಪರಂಪರೆಗೆ ಕಲೆಯ ಮೆರುಗನ್ನಿತ್ತವರು ವಾದಿರಾಜರು. ಉಡುಪಿಯ ರಥಗಳ ರಚನೆಯ ಹಿಂದಿರುವ ಕಲಾತ್ಮಕತೆ ವಾದಿರಾಜರದ್ದು. ಲಕ್ಷದೀಪೋತ್ಸವದ ಕಲ್ಪನೆಯು ವಾದಿರಾಜರದು. ಪರ್ಯಾಯದ ಪೂರ್ವಭಾವಿಯಾಗಿ ಮಧ್ವಸರೋವರದ ಈಶಾನ್ಯ ಮೂಲೆಯಲ್ಲಿ ರೂಪುಗೊಂಡು ಕಣ್ಣ್ ಸೆಳೆಯುವ ಕಟ್ಟಿಗೆಯರಥದ ಕಲ್ಪನೆ ವಾದಿರಾಜರದು. ನಾಡಿನ ಹಿರಿಯ ಹಬ್ಬವೆನ್ನುವಂತೆ ಜನಪ್ರೀಯವಾಗಿರುವ ಪರ್ಯಾಯೋತ್ಸವದ ಮೂಲಕಲ್ಪನೆ ವಾದಿರಾಜರದು. ಪರ್ಯಾಯಾದ ಮೆರವಣಿಗೆ, ದರ್ಬಾರಿನ ಸಭೆ, ಸಭೆಯಲ್ಲಿ ಯತಿಗಳು ಕೂಡಲು ಅರಳಿನ ಗದ್ದುಗೆಯ ಸಿಂಹಾಸನ ಎಲ್ಲವೂ ಇವರ ಕನಸಿನ ಕೂಸು. ಉಡುಪಿಗೂ–ಧರ್ಮಸ್ಥಳಕ್ಕೂ ಬಾಂಧವ್ಯವನ್ನು ಬೆಸೆದವರು ಇವರೇ. 'ಕುಡುಮ'ವನ್ನು 'ಧರ್ಮಸ್ಥಳ'ವನ್ನಾಗಿಸಿ ಮಂಜುನಾಥನನ್ನು ಸ್ಥಾಪಿಸಿ ಶೈವ– ವೈಷ್ಣವರ ಬಾಂಧವ್ಯವನ್ನು ಬೆಸೆದ ಈ ಕ್ಷೇತ್ರವನ್ನು ಧರ್ಮಕ್ಷೇತ್ರವನ್ನಾಗಿ ಮಾಡಿದವರು ಇವರೇ. ಈ ಸೌಹಾರ್ದದಪರಂಪರೆ ಇಂದಿಗೂ ಬೆಳೆದು ಬಂದಿದೆ. ಉಡುಪಿಯ ಶ್ರೀ ಪಾದರು ಪರ್ಯಾಯದ ಮುನ್ನ ಧರ್ಮಸ್ಥಳಕ್ಕೆ ಭೇಟಿ ನೀಡಿ ಮಂಜುನಾಥನ ದರ್ಶನ ಪಡೆದು ಬರುತ್ತಾರೆ. ಹೆಗ್ಗಡೆಯವರು ಉಡುಪಿಗೆ ಬಂದು ಪರ್ಯಾಯ ಸಭೆಯಲ್ಲಿ ಭಾಗವಹಿಸುತ್ತಾರೆ. ಈ ಸಂಬಂಧಕ್ಕೆ ನಾಂದಿಹಾಡಿದವರು ವಾದಿರಾಜರು.

ಮಡಿವಂತರು ಅಭೋಜ್ಯ ಎಂದು ಕೈಬಿಟ್ಟಿದ್ದ ಗುಳ್ಳವನ್ನು ಕೃಷ್ಣನಿಗೆ ಸಮರ್ಪಿಸಿ ಮಡಿವಂತರಿಗೂ ತಿನ್ನಿಸಿದವರು ವಾದಿರಾಜರು. ಪರ್ಯಾಯದ ಅನ್ನಸಂತರ್ಪಣೆಯ ಸಮಾರಾಧನೆಯಲ್ಲಿ ಗುಳ್ಳದ ಹುಳಿಯದೇ ಪ್ರಧಾನ ಪಾತ್ರ. ಈಗ ವಾದಿರಾಜಗುಳ್ಳ ಎಂದು ಪ್ರಸಿದ್ಧವಾಗಿದೆ. ಮಟ್ಟಿಯ ಗುಳ್ಳವನ್ನು ಮಾತ್ರವಲ್ಲ. ಮಟ್ಟಿಯ ಬ್ರಾಹ್ಮಣರಿಗೂ ಗೌರವ, ಮರ್ಯಾದೆ ಸಿಗುವಂತೆ ಮಾಡಿದವರು ವಾದಿರಾಜರು. ಆ ಕಾಲದಲ್ಲಿ ಮಟ್ಟಿಯ ಬ್ರಾಹ್ಮಣರು, ಗದ್ದೆಯನ್ನು ಉಳುತ್ತಾ ಬೇಸಾಯವನ್ನು ಮಾಡುತ್ತಿದ್ದರು. ಬ್ರಾಹ್ಮಣರು ಉಳಬಾರದು ಎಂಬ ಭಾವನೆ ಇದ್ದ ಕಾರಣದಿಂದ ಅವರನ್ನು ಅವಜ್ಞೆಯಿಂದ ಕಾಣುತ್ತಿದ್ದ ಕಾಲದಲ್ಲಿ, ಗುಳ್ಳದ ಬೀಜವನ್ನು ನೀಡಿ ಹರಸಿ ಪ್ರೋತ್ಸಾಹಿಸಿ ಅವರಿಗೂ ಸಾಮಾಜಿಕ ಮನ್ನಣೆ ನೀಡಿ ತಲೆಯೆತ್ತಿ ಬಾಳುವಂತೆ ಮಾಡಿದರೆಂಬ ಮಾತಿದೆ.

ಕೋಟ ಮತ್ತು ಕೋಟೇಶ್ವರ ಬ್ರಾಹ್ಮಣರು ಪರಸ್ಪರ ಬಂಧುಗಳಾಗಿದ್ದವರು. ಸ್ಮಾರ್ತ ಬ್ರಾಹ್ಮಣರ ಪಂಗಡಕ್ಕೆ ಸೇರಿದವರು. ಯಾವುದೋ ಕಾರಣಕ್ಕೆ ವಿವಾದ ಉಂಟಾಗಿ ಕೋಟದವರು ಕೋಟೇಶ್ವರದವರನ್ನು ದೂರ ಇಟ್ಟರು. ಕೋಟೇಶ್ವರ ಬ್ರಾಹ್ಮಣರಿಗೆ ಉಡುಪಿಯ ಸಂಪರ್ಕದ ಸೆಳೆತವಿತ್ತು. ಶಂಕರರ ಮಾಯವಾದಕ್ಕಿಂತ ಮಧ್ವರರ(ತತ್ವವಾದದ) ದ್ವೈತ ಸಿದ್ಧಾಂತದ ಕಡೆಗೆ ಹೆಚ್ಚು ಒಲವು ತೋರಿಸುತ್ತಿದ್ದರು. ಸಹಜವಾಗಿಯೇ ಕೋಟೇಶ್ವರ ಬ್ರಾಹ್ಮಣರು ವಿವಾದ ಪರಿಹಾರಕ್ಕಾಗಿ ಉಡುಪಿಗೆ ಬಂದು

ವಾದಿರಾಜರ ನೆರವಿನಿಂದ ವೈಷ್ಣವ ದೀಕ್ಷೆಯನ್ನು ಪಡೆದು ಮಠದ ಶಿಷ್ಯರಾದರು. ಇವತ್ತಿಗೂ ಸೋದೆ ಮಠದ ಶಿಷ್ಯರಾಗಿಯೇ ಮುಂದುವರಿಯುತ್ತಿದ್ದಾರೆ.

ಆಚಾರ್ಯ ಮಧ್ವರಕಾಲದಲ್ಲಿ ಎರಡು ವರ್ಷಗಳ ಪರ್ಯಾಯದ ವ್ಯವಸ್ಥೆಯು ಇರಲಿಲ್ಲ. ಎರಡು ತಿಂಗಳಿಗೊಮ್ಮೆ ಸರತಿಯಂತೆ ಎಂಟು ಮಂದಿ ಯತಿಗಳು ಪೂಜೆಯನ್ನು ಮಾಡುತ್ತಿದ್ದರು. ವಾದಿರಾಜರು ಈ ಎರಡು ವರ್ಷಗಳ ಪರ್ಯಾಯ ಪದ್ಧತಿಯನ್ನು ಅನುಷ್ಠಾನಕ್ಕೆ ತಂದರು. ಪಲಿಮಾರು ಮಠದಿಂದ ಆರಂಭಗೊಂಡ ಪರ್ಯಾಯ ಚಕ್ರ ಪೇಜಾವರ ಮಠದ ಪರ್ಯಾಯದಲ್ಲಿ ಕೊನೆಗೊಳ್ಳುತ್ತದೆ.

6.24 ಕನಕನ ಕಿಂಡಿ

ಉಡುಪಿಯ ಇತಿಹಾಸದಲ್ಲಿ ಮತ್ತು ವಾದಿರಾಜರ ಜೀವಿತಾವಧಿಯಲ್ಲಿ ಮಹತ್ತ್ವದ ಘಟ್ಟ ಎಂದರೆ ವಾದಿರಾಜರ ಮತ್ತು ಕನಕದಾಸರ ಸಂಬಂಧ. ಕನಕದಾಸರು ಉಡುಪಿಗೆ ಬಂದದ್ದು, ಹಲವು ಸಮಯ ಉಡುಪಿಯಲ್ಲಿದ್ದದ್ದು ಪ್ರಾಯಶಃ ವಾದಿರಾಜರ ಮೊದಲು ಪರ್ಯಾಯ ಕಾಲದಲ್ಲಿಯೇ. (ಕ್ರಿ.ಶ 1532–33) ಕೃಷ್ಣನ ಗುಡಿಯ ಎದುರುಗಡೆ ಈಗ ಕನಕದಾಸರ ಶಿಲಾವಿಗ್ರಹ ಇವರ ಜಾಗದಲ್ಲಿ ಕನಕದಾಸರು ಸಣ್ಣ ಗುಡಿಸಲಲ್ಲಿವಾಸವಾಗಿದ್ದರು. ಕನಕದಾಸರ ಗುಡಿಸಲಿನ ನೇರ ಎದುರಿನಲ್ಲಿ ಪೂರ್ವದಿಕ್ಕಿನಲ್ಲಿ ಕೃಷ್ಣನ ಗುಡಿ. ಪಶ್ಚಿಮಾಭಿಮುಖವಾಗಿಯೇ ಪ್ರತಿಷ್ಠೆ ಮಾಡಿದ್ದರೂ ಪಶ್ಚಿಮದಲ್ಲಿ ರಸ್ತೆಗೆ ತಾಗಿ ಇದ್ದ ಗೋಡೆಯಲ್ಲಿ ಬಾಗಿಲಾಗಲಿ, ಕಿಟಕಿಯಾಗಲಿ ಇರಲಿಲ್ಲ. ದಕ್ಷಿಣ ಕನ್ನಡದ ಸುಳ್ಯದ ಚೆನ್ನಕೇಶವ ದೇವಾಲಯ, ವಡಬಾಂಡೇಶ್ವರ ದೇವಾಲಯ ಪಶ್ಚಿಮಾಭಿಮುಖವಾಗಿಯೇ ಇರುವುದನ್ನು ಗಮನಿಸಬಹುದು.

ಕನಕದಾಸರು ಉಡುಪಿಯಲ್ಲಿದ್ದಾಗ ಒಂದು ರಾತ್ರಿ ಸಣ್ಣ ಭೂಕಂಪವಾಗಿತ್ತು. 'ನಡುರಾತ್ರಿಯಲಿ ಏಕೆ ನಡುಗಿದೆಯೊ ತಾಯಿ' ಎಂಬ ಹಾಡು ಅದಕ್ಕೆ ಪುಷ್ಟಿಕೊಡುತ್ತದೆ. ಬೆಳಗೆದ್ದು ನೋಡಿದಾಗ ಗುಡಿಯ ಪಶ್ಚಿಮದ ಗೋಡೆಯಲ್ಲಿ ಕನಕದಾಸರ ಗುಡಿಸಲಿನ ನೇರಕ್ಕೆ ಬಿರುಕು ಬಿಟ್ಟಿತ್ತು. ರಸ್ತೆಯಲ್ಲೆ ನಿಂತು ಈ ಬಿರು ಕಿಂಡಿಯ ಮೂಲಕ ಒಳಕ್ಕೆ ಇಣುಕಿದರೆ ಗರ್ಭಗುಡಿಯಲ್ಲಿರುವ ಕೃಷ್ಣನದರುಶನ. ಇದು ಪ್ರಾಕೃತಿಕವಾಗಿ ಘಟಿಸಿದ ಸಹಜ ಘಟನೆಯಾದರೂ ಹೊರಗಣ್ಣಿಗೆ ಪ್ರಾಕೃತ ಘಟನೆ ಒಳಗಣ್ಣಿಗೆ ದೈವೀಘಟನೆ. ಕನಕರ ಭಕ್ತಿಗೆ ಸಾಕ್ಷಿಯಾಗಿ ಈ ಕಿಂಡಿ ಶಾಶ್ವತವಾಗಿ ಉಳಿಯಬೇಕು ಎಂಬ ದೃಷ್ಟಿಯಿಂದ ಬಿರುಕನ್ನು ಮುಚ್ಚದೆ ಅಲ್ಲಿ ಪುಟ್ಟ ಕಿಂಡಿಯನ್ನೇ ಮಾಡಿಸಿದರು ಎಂಬ ಐತಿಹ್ಯವನ್ನು ಅಲ್ಲಗಳೆಯುವಂತಿಲ್ಲ.

ಉಡುಪಿಯಲ್ಲಿ ಮಧ್ಯಾಹ್ನದ ಮಹಾ ಪೂಜೆಯ ಹೊತ್ತಿಗೆ ಕೃಷ್ಣನಿಗೆ ವಿವಿಧ ಭಕ್ಷಭೋಜ್ಯಗಳ ಜೊತೆಗೆ ಗೆರಟೆಯಲ್ಲಿ ಅಂಬಲಿ ಮತ್ತು ರೊಟ್ಟಿಯ ಸಮರ್ಪಣೆ. ಇದಕ್ಕೊಂದು ಹಿನ್ನೆಲೆಯಿದೆ.

ಕನಕದಾಸರು ಕೃಷ್ಣನ ಪಾಕಶಾಲೆಯಿಂದ ಬಸಿದು ಬಂದ ತಿಳಿ ಅಂಬಲಿಯನ್ನು ಒಂದು ಗೆರಟೆಯಲ್ಲಿ ಹಿಡಿದಿಡುತ್ತಿದ್ದರಂತೆ. (ಕನಕನ ಕಿಂಡಿ ಇರುವ ಗೋಡೆಯ ಉತ್ತರದ ತುದಿಯಲ್ಲಿ ಒಳಗಡೆ ನೈವೇದ್ಯ ಬೇಯಿಸುವ ಪಾಕಶಾಲೆಯಿದೆ. ಅನ್ನ ಬಸಿದ ನೀರನ್ನು ಹೊರಬಿಡುತ್ತಿದ್ದ ತೂತು ಈಗಲೂ ಆ ಗೋಡೆಯಲ್ಲಿದೆ.) ಜೊತೆಗೆ ತಮ್ಮ ಆಹಾರವಾದ

ರೊಟ್ಟಿಯನ್ನು ತನ್ನ ಗುಡಿಸಲಲ್ಲಿ ಕೃಷ್ಣನ ಮುಂದಿಟ್ಟು ಕೃಷ್ಣನಿಗೆ ಅರ್ಪಿಸಿ ತಾನು ಸ್ವೀಕರಿಸುತ್ತಿದ್ದರೆಂಬ ಐತಿಹ್ಯ. ಕನಕದಾಸರರು ಕೃಷ್ಣನಿಗೆ ಗಂಜಿ ತಿನ್ನಿಸಿದ ಭಕ್ತಿಯ ಪರಾಕಾಷ್ಠೆಯ ನಿದರ್ಶನವನ್ನು ಉಳಿಸ ಬಯಸಿದರು ವಾದಿರಾಜರು, ಅದಕ್ಕಾಗಿ ಎಲ್ಲಾ ಭಕ್ಷಗಳ ಜೊತೆಗೆ ಗೆರಟೆಯಲ್ಲಿ ಬಸಿದ ಅಂಬಲಿಯನ್ನೂ ರೊಟ್ಟಿಯನ್ನೂ ಪ್ರತಿ ನಿತ್ಯ ಕೃಷ್ಣನಿಗೆ ಸಮರ್ಪಿಸುವ ಪರಿಪಾಠವನ್ನೂ ಇವತ್ತಿಗೂ ಉಳಿಸಿಕೊಂಡು ಬಂದಿರುವುದು ವಿಶೇಷ.

ಕನಕದಾಸರ ಉಡುಪಿ ವಾಸ್ತವ್ಯ ಮತ್ತು ಕೃಷ್ಣನ ಮೇಲಿನ ಭಕ್ತಿಯನ್ನು ವಾದಿರಾಜರು ಅಜರಾಮರಗೊಳಿಸಿದರು.

6.25 ಶಿವಳ್ಳಿ ಬ್ರಾಹ್ಮಣರ ಅಡುಗೆ

ಉಡುಪಿ ಎಂದೊಡನೆ ನೆನಪಿಗೆ ಬರುವುದು 'ಕೃಷ್ಣ' ಮಠ ಮತ್ತು ಅಷ್ಟಮಠಗಳು ಅಂತೆಯೇ ಉಡುಪಿಯ ರುಚಿರುಚಿಯಾದ ಅಡುಗೆ ಉಡುಪಿಯ ಪಾಕ, ರುಚಿ, ಪರಿಮಳದ ಪ್ರಾದೇಶಿಕ ವೈವಿಧ್ಯಗಳಿಂದಾಗಿ ಊಟಕ್ಕೆ ವಿಶೇಷ ಮಹತ್ವ ಪಡೆದಿದೆ. ಉಡುಪಿಯ ಪ್ರಸಿದ್ಧಿಯನ್ನು ಜಗತ್ತಿನಾದ್ಯಂತ ಪಸರಿಸಿದ ಉಡುಪ ಕೃಷ್ಣನಿಗೂ ಉಡುಪಿಯ ಅಡುಗೆಗೂ ಅವಿನಾಭಾವ ಸಂಬಂಧ. ಉಡುಪಿಯ ಅಡುಗೆಯ ಪರಿಮಳ ಪರ ರಾಷ್ಟ್ರದಲ್ಲೂ ಪಸರಿಸಿದೆ. ಶಿವಳ್ಳಿ ಬ್ರಾಹ್ಮಣರು ಅಡುಗೆಯಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿದ್ದಾರೆ.

ಕೃಷ್ಣ ಮಠದ ಯತಿ ಪರಂಪರೆಯಲ್ಲಿ ದೈವಾಂಶ ಸಂಭೂತರೆನಿಸಿಕೊಂಡ ಮಧ್ವಾಚಾರ್ಯರು, ವಾದಿರಾಜರು, ಉಡುಪಿಯ ಅಡುಗೆಗೆ ಬಳಸಬಹುದಾದ ತರಕಾರಿಗಳ ವಿಂಗಡನೆ ಮಾಡಿದರೆಂದು ಅಂಬೋಣ. ಕೃಷ್ಣಮಠದಲ್ಲಿ ಮತ್ತು ಸಂಪ್ರದಾಯಸ್ಥ ಶಿವಳ್ಳಿ ಬ್ರಾಹ್ಮಣರ ಮನೆಗಳಲ್ಲಿ ಈಗಲೂ ವರ್ಜ್ಯ ತರಕಾರಿಗಳನ್ನು ಬಳಸುತ್ತಿಲ್ಲ. ಉಪಯೋಗಿಸುವುದಿಲ್ಲ. ಆದರೆ ಆಧುನಿಕತೆಯ ಭರಾಟೆಯಲ್ಲಿ ವರ್ಜ್ಯ ತರಕಾರಿಗಳನ್ನು ಬಳಸುವ ಮೂಲಕ ಅಡುಗೆ ವಿಧಿವಿಧಾನ, ಕ್ರಮಗಳಲ್ಲಿ ಬಹಳ ಮಾರ್ಪಾಟಾಗಿದೆ. ಸಾಂಪ್ರಾದಾಯಿಕ ವೈಶಿಷ್ಟ್ಯಗಳು ಮಾಯವಾಗುತ್ತಾ ಬರುತ್ತಿದೆ.

ಕ್ಯಾರೇಟ್, ಬೀನ್ಸ್, ಮೂಲಂಗಿ, ಪಪ್ಪಾಯಿ, ಟೊಮ್ಯಾಟೊ, ಕ್ಯಾಬೇಜ್, ಬೀಟ್‌ರೂಟ್, ನವಿಲುಕೋಸು, ಮುಂತಾದ ತರಕಾರಿಗಳು ಬೇರೆ ರಾಷ್ಟ್ರದಿಂದ ಆಮದಾದ ತರಕಾರಿಗಳಾದುದರಿಂದ ನಿಷಿದ್ದ. ಈರುಳ್ಳಿ, ಬೆಳ್ಳುಳ್ಳಿ ತಾಮಸ ಗುಣದಿಂದಾಗಿ ವರ್ಜ್ಯ. ಅಚ್ಚ ಊರಿನ ನೆಲದಲ್ಲೇ ಬೆಳೆಯುವ ತೊಂಡೆಕಾಯಿ, ನುಗ್ಗೇಕಾಯಿ, ಬದನೆಕಾಯಿ, ಬಸಲೆಸೊಪ್ಪು, ಕೂಡಾ ನಿಷಿದ್ಧ. ಈ ತರಕಾರಿಗಳು ರಾಜಸ, ತಾಮಸ ಗುಣಗಳನ್ನು ಪ್ರಚೋದಿಸುವುದರಿಂದ ನಿಷಿದ್ಧವಾದಂತೆ ಸೇವನೆಗೆ ಅರ್ಹವಲ್ಲ.

ಶಿವಳ್ಳಿ ಬ್ರಾಹ್ಮಣರು ಸಮಾರಾಧನೆಯಲ್ಲಿ ಬಡಿಸುವ ಕ್ರಮ

ಹಂತ–1

1. ಉಪ್ಪು
2. ಉಪ್ಪಿನಕಾಯಿ

3. ಕಡ್ಲೆಬೇಳೆ ಕೋಸಂಬರಿ
4. ಹೆಸರು ಬೇಳೆ ಕೋಸಂಬರಿ
5. ಸಳ್ಳಿ(ಸಾಸ್ಮಿ)
6. ಸಮ್ಮಂದ(ಚಟ್ನಿ)
7. ಸಾದಾಪಲ್ಯ
8. ಮಸಾಲೆ ಪಲ್ಯ
9. ಉದ್ನಿಟ್ಟು
10. ಹಪ್ಪಳ ಸೆಂಡಿಗೆ
11. ಚಿತ್ರಾನ್ನ
12. ಕಡುಬು
13. ಹಣ್ಣುಗಳು
15. ಸಿಹಿಪ್ರಸಾದ
16. ತುಪ್ಪ
17. ತೊವ್ವೆ
18. ಪಾಯಸ
19. ನೀರು

ಹಂತ–2

1. ಅನ್ನ
2. ಸೀಬಜ್ಜಿ
3. ಮೊಸರು ಬಜ್ಜಿ
4. ತಂಬ್ಳಿ
5. ಸಾರು

ಹಂತ –3

1. ಅನ್ನ
2. ಮೆಣಸ್ಕಾಯಿ

3. ಬೋಳುಹುಳಿ(ಸಣ್ಣ ಹುಳಿ)

4. ದೊಡ್ಡ ಹುಳಿ

ಹಂತ –4

1. ಅನ್ನ

2. ಖಾರಭಕ್ಷ್ಯ

3. ಸಿಹಿಭಕ್ಷ್ಯ

4.ಪಾಯಸ

ಹಂತ–5 ಮತ್ತು 6

1. ಉಪ್ಪಿನಕಾಯಿ

2. ಅನ್ನ

3. ಮೊಸರು

4. ಮಜ್ಜಿಗೆ ಹುಳಿ

5. ನೀರು ಮಜ್ಜಿಗೆ

ಶಿವಳ್ಳಿ ಬ್ರಾಹ್ಮಣರು ಸಮಾರಾಧನೆಯಲ್ಲಿ ಊಟ ಅನುಕ್ರಮಣಿಕೆಯಲ್ಲಿ ಬಡಿಸುವ ವಿಧಾನ

ಹಂತ ಒಂದು: ತುಪ್ಪ, ಉಪ್ಪು, ಉಪ್ಪಿನಕಾಯಿ, ಕಡ್ಲೇಬೇಳೆ, ಕೋಸಂಬರಿ, ಹೆಸರು ಬೇಳೆ ಕೋಸಬಂರಿ, ಸಾಸ್ಮಿ(ಸಳ್ಳಿ) ಸಮ್ಮಂದ(ಚಟ್ನಿ) ಉದ್ನಿಟ್ಟು, ಎರಡು ವಿಧದ ಪಲ್ಯ, ಚಿತ್ರಾನ್ನ, ಪಾಯಸ, ಅನ್ನ ತೊವ್ವೆ, ಹಪ್ಪಳ, –ಸೆಂಡಿಗೆ, ಹಣ್ಣುಗಳು, ಪ್ರಸಾದ, ಕಡುಬು.

ಉಣ್ಣುವ ಕ್ರಮ: ಅನುಕ್ರಮವಾಗಿ ಪಾಯಸ, ಕೋಸಂಬರಿ, ಚಿತ್ರಾನ್ನ, ತೊವ್ವೆ, ಪಲ್ಯ

ಹಂತ ಎರಡು: ಸೀಬಜ್ಜಿ, ಮೊಸರು ಬಜ್ಜಿ, ತಂಬ್ಳಿ ಸಾರು (ಎರಡು ಸಲ ಬಡಿಸುತ್ತಾರೆ)

ಹಂತ ಮೂರು: ಮೆಣಸ್ಕಾಯಿ, ಸಣ್ಣದಪಲ್ಯ(ಒಂದೇ ಸಲ ಬಡಿಸುತ್ತಾರೆ) ಬೋಳುಹುಳಿ, ಒಂದೇ ಸಲ ಸ್ವಲ್ಪ ಹಾಕುತ್ತಾರೆ.

<u>**ಹಂತ ನಾಲ್ಕು :**</u> ಮಜ್ಜಿಗೆ ಹುಳಿ

ಹಂತ ಐದು : ಖಾರ ಭಕ್ಷ್ಯ, ಸಿಹಿ ಭಕ್ಷ್ಯ, ಪಂಚಪರಮಾನ್ನಗಳು, ರಸಾಯನ, ಭಕ್ಷ್ಯಪರಮಾನ್ನ.

ಹಂತ ಆರು : ಮೊಸರು, ನೀರು ಮಜ್ಜಿಗೆ.

ಹಂತ ಏಳು : ತಾಂಬೂಲಚರ್ವಣ.

ನಾಲ್ಕನೆಯ ಹಂತವನ್ನು ಬಿಟ್ಟು ಉಳಿದ ಎಲ್ಲಾ ಹಂತಗಳಲ್ಲಿ ಅನ್ನ ಬಡಿಸುತ್ತಾರೆ. ಶುಭ ಸಮಾರಂಭಗಳಲ್ಲಿ ಅಪ್ಪ, ವಡೆ ನಿಷಿದ್ಧ. ಬಾಳೆ ಯೆಲೆಯ ತುದಿ ಎಡಕ್ಕೂ, ಕಡೆ ಭಾಗ ಬಲಕ್ಕೂ ಇರುವಂತೆ ಎಲೆಯನ್ನು ಇಡಬೇಕು. ಗೃಹಸ್ಥರಿಗೆ ಬಾಳೆ ಎಲೆಯಲ್ಲಿ ತುದಿ ಇರಲೇಬೇಕು. ಅನ್ನದೊಡನೆ ಎಲ್ಲಾ ವ್ಯಂಜನಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಕಲಸಿ ಉಣ್ಣುತ್ತಾರೆ. ಉಂಡೆಮಾಡಿ ಊಟ ಮಾಡಬಾರದು.

6.26 ಶಿವಳ್ಳಿ ತುಳುವಿನಲ್ಲಿ ಪ್ರಾಚೀನ ಕಾವ್ಯ

ಶಿವಳ್ಳಿ ಬ್ರಾಹ್ಮಣರು ವೈದಿಕರಾಗಿದ್ದುಕೊಂಡು ವೇದಾಧ್ಯಯನ, ಯಾಗಯಜ್ಞ, ಪೌರೋಹಿತ್ಯ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ಸಂಸ್ಕೃತ ಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಿರಬಹುದು. ಅದರೆ ತುಳು ಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಿರಲಿಕ್ಕಿಲ್ಲ ಎಂಬ ಪ್ರತೀತಿ ಇತ್ತು. ಆದರೆ ಧಾರ್ಮಿಕ ಆಚರಣೆಗಳೊಂದಿಗೆ ತುಳುವಿನಲ್ಲಿ ಸಾಹಿತ್ಯರಚನೆ ಮಾಡಿರುವ ವಿಚಾರ ಇತ್ತೀಚಿನ ದಿನಗಳಲ್ಲಿ ಬೆಳಕಿಗೆ ಬಂದಿದೆ. ಪ್ರಾಚೀನ ತುಳವಿನಲ್ಲಿ ಶಿಷ್ಟ ಕಾವ್ಯಗಳ ರಚನೆ ಮಾಡಿ ತುಳುವಿಗೂ ವಿಶೇಷವಾದ ಸ್ಥಾನಮಾನ ಒದಗಿಸಿಕೊಟ್ಟ ಕೀರ್ತಿ ಶಿವಳ್ಳಿ ಬ್ರಾಹ್ಮಣರಿಗೆ ಸಲ್ಲುತ್ತದೆ.

1984 ರಲ್ಲಿ ಹಳೆಯ ತುಳುಭಾಷೆಯ 'ಶ್ರೀಭಾಗವತೊ' ಗ್ರಂಥ ಪ್ರಕಟವಾಗುವವರೆಗೆ ತುಳುವಿನಲ್ಲಿ ಶಿಷ್ಟಸಂಪ್ರದಾಯದ ಕಾವ್ಯರಚನೆ ಇರಲಿಲ್ಲ. ಪಾಡ್ದನರೂಪದ ಜನಪದ ಕಾವ್ಯ ಮಾತ್ರವಿತ್ತು ಎಂಬುದು ವಿದ್ವಾಂಸರ ಭಾವನೆಯಾಗಿತ್ತು. ಅನಂತರದಲ್ಲಿ ಕಾವೇರಿ, ದೇವಿಮಹಾತ್ಮೆ, ಮಹಾಭಾರತೋ, ರಾಮಾಯಣ ಗ್ರಂಥದ ಹಸ್ತಪ್ರತಿಗಳು ದೊರೆತವು. ಈ ಎಲ್ಲಾ ಗ್ರಂಥಗಳು ಶಿವಳ್ಳಿ ಬ್ರಾಹ್ಮಣರ ಆಡುಭಾಷೆಗಳಲ್ಲಿ ರಚಿತವಾದದ್ದು. ಹೀಗಾಗಿ ತುಳುವಿನಲ್ಲಿ ಶಿಷ್ಟಸಂಪ್ರದಾಯದ ಸಾಹಿತ್ಯವನ್ನು ಬೆಳೆಸಿದವರು ಶಿವಳ್ಳಿ ಬ್ರಾಹ್ಮಣರು ಎಂಬುದಕ್ಕೆ ಸಂಶಯವಿಲ್ಲ.

ತುಳುವಿಗೆ ತನ್ನದೇ ಆದ ಲಿಪಿಯನ್ನು ರೂಪಿಸಿದವರು ಶಿವಳ್ಳಿ ಬ್ರಾಹ್ಮಣರೇ 'ಬೆರಣೆ' ಸೆಟ್ಟ್‌ಂಡ ತೆನಕಾಯಿ ದೇಸೊದ ಶಾಂತಿಪೂಜೆಗ್' ಎಂಬ ನಾಣ್ಣುಡಿಯಂತೆ ಶಿವಳ್ಳಿ ಬ್ರಾಹ್ಮಣರು ಜೀವನೋಪಾಯಕ್ಕಾಗಿ ಕೇರಳದಲ್ಲಿ ದೇವಸ್ಥಾನದ ಅರ್ಚಕರಾಗಿ ತಂತ್ರಾಗಮ, ಪೌರೋಹಿತ್ಯಗಳ ಅಧ್ಯಯನಕ್ಕಾಗಿ ಹೋಗುತ್ತಿದ್ದರು. ಅಲ್ಲಿ ನಂಬೂದಿರಿ ಬ್ರಾಹ್ಮಣರೊಡನೆ ಸೇರಿ ಸಂಸ್ಕೃತದ ವೇದ, ಶಾಸ್ತ್ರ, ಮಂತ್ರಗಳನ್ನು ಬರೆಯಲಿಕ್ಕಾಗಿ ಹೊಸತೊಂದು ಲಿಪಿಯ ನಿರ್ಮಾಣ ಮಾಡಿದರು. ಆಗ ಬಳಕೆಯಲ್ಲಿದ್ದ ಕೊಲೆಳುತ್ತು, ವಟ್ಟೆಳುತ್ತು ಮೊದಲಾದ ದೇಶೀ ಲಿಪಿಗಳಲ್ಲಿ ಸಂಸ್ಕೃತ ಭಾಷೆಯ ಧ್ವನಿಗಳನ್ನು ದಾಖಲಿಸುವ ಅನುಕೂಲತೆಗಳು ಇರಲಿಲ್ಲ. ಪರ್ಯಾಯವಾಗಿ 'ಆರ್ಯ ಎಳುತ್ತು' ಲಿಪಿಯನ್ನು ರೂಪಿಸಿದರು. ಇದಕ್ಕೆ ತುಳು–ಮಲಯಾಳ ಲಿಪಿ ಎಂದು ಕರೆದರು. ತುಳುವ ಬ್ರಾಹ್ಮಣರು ಸಂಸ್ಕೃತ ಬರೆಯಲಿಕ್ಕೂ ಇದನ್ನೇ ಬಳಸಿದರು. ಮುಂದೆ ಈ ಲಿಪಿಯ ಒಂದು ಪ್ರಭೇದವನ್ನು ತುಳುವರು ಬಳಸಿದರು. ಈ ಶತಮಾನದವರೆಗೂ ಶಿವಳ್ಳಿ ಬ್ರಾಹ್ಮಣರು ವೇದ ಹಾಗೂ ಮಂತ್ರಗಳನ್ನು ಬರೆಯಲಿಕ್ಕೂ ಇದನ್ನೇ ಬಳಸಿದರು. ಈ ಶತಮಾನದವರೆಗೂ ಶಿವಳ್ಳಿ ಬ್ರಾಹ್ಮಣರು ವೇದ ಹಾಗೂ ಮಂತ್ರಗಳನ್ನು ಬರೆಯಲಿಕ್ಕೆ ಈ ತುಳು ಲಿಪಿಯನ್ನೇ ಬಳಸುತ್ತಿದ್ದರು. ಮಧ್ವಾಚಾರ್ಯರ ಕಾಲದಿಂದಲೂ ಈ ಸಂಪ್ರದಾಯ ಬೆಳೆದು ಬಂದಿದೆ. ತುಳು ಲಿಪಿಯಲ್ಲಿ ಬರೆದ ತುಳು ಸಾಹಿತ್ಯ ತಾಡವಾಲೆಗಳಲ್ಲಿಯೇ

ಉಳಿದುಹೋಗಿತ್ತು. ಪ್ರಕಾಶಕ್ಕೆ ಬಂದಿರಲಿಲ್ಲ. ಹೀಗಾಗಿ ತುಳುವಿನಲ್ಲಿ ಶಿಷ್ಟಸಂಪ್ರದಾಯ ಬೆಳೆದುಬರಲಿಲ್ಲ ಎಂಬ ಭಾವನೆ ವಿದ್ವಾಂಸರಲ್ಲೂ ಜನಸಾಮಾನ್ಯರಲ್ಲಿ ಬೆಳೆದು ಬಂದಿತ್ತು.

ಮಧೂರಿನ ಶಿವನಾರಾಯಣ ಸರಳಾಯರ ಮನೆಯಲ್ಲಿದ್ದ ತಾಡವೋಲೆ ಗ್ರಂಥರಾಶಿಯಿಂದ 'ಶ್ರೀಭಾಗವತೊ' ಎಂಬ ತುಳಮಹಾಕಾವ್ಯವನ್ನು ಶೋಧಿಸಿ ಹೊರತಂದ ವಿದ್ವಾನ್ ವೆಂಕಟರಾಜ ಪುಣಿಂಚತ್ತಾಯರು ಅದನ್ನು ಕನ್ನಡ ಲಿಪಿಯಲ್ಲಿ ಲಿಪ್ಯಂತರ ಮಾಡಿ ಮಂಗಳೂರು ವಿಶ್ವವಿದ್ಯಾಲಯದ ಮೂಲಕ 1984 ರಲ್ಲಿ ಪ್ರಕಟಿಸಿದರು. ಆಮೇಲೆ 'ಕಾವೇರಿ' ಎಂಬ ಖಂಡಕಾವ್ಯ 'ದೇವಿ ಮಹಾತ್ಮೆ' ಎಂಬ ಗದ್ಯಗ್ರಂಥಗಳೂ ಪ್ರಕಟವಾದವು. 2000ನೇ ಇಸವಿಯಲ್ಲಿ 'ಶ್ರೀ ಮಹಾಭಾರತೋ' ಎಂಬ ಮಹಾ ಕಾವ್ಯವೂ ಪ್ರಕಟವಾಯಿತು. ಈ ಎಲ್ಲಾ ಕಾವ್ಯಗಳೂ ಶಿವಳ್ಳಿ ಬ್ರಾಹ್ಮಣರ ಉಪಭಾಷೆಯಲ್ಲಿ ರಚಿತವಾಗಿದೆ. ಆದರೆ ಲೇಖಕರು ಎಲ್ಲರೂ ಶಿವಳ್ಳಿಯವರೇ ಎಂಬುದು ಸ್ಪಷ್ಟವಾಗಿಲ್ಲ. 'ಶ್ರೀ ಭಾಗವತೊ' ಗ್ರಂಥದ ಭಾಷೆ ಶಿವಳ್ಳಿಯವರದ್ದಾದರೂ ಲೇಖಕನ ಹೆಸರು ತುಂಗವಂಶದ ವಿಷ್ಣು ಅಥವಾ ವಿಷ್ಣುತುಂಗ ಎಂದಿದೆ. ಸಿಕ್ಕಿದ ಕಾವ್ಯಗಳು ಅಪೂರ್ಣವಾಗಿದೆ. ದೇವಿಮಹಾತ್ಮೆ ಮಾತ್ರ ಸಂಪೂರ್ಣ ರೂಪದಲ್ಲಿ ಸಿಕ್ಕಿದೆ. ಶ್ರೀ ಮಹಾಭಾರತೊ ಕಾವ್ಯದ ಕವಿ ಅರುಣಾಬ್ಜ.

ಅರುಣಾಬ್ಜ ಕವಿ ಉಡುಪಿ ನಿಡಂಬೂರು ಶಂಕರನಾರಾಯಣ (ಕೊಡವೂರು) ಪರಿಸರದವನೆಂದು ಅವನ ಕಾವ್ಯದಿಂದ ತಿಳಿಯುತ್ತದೆ. ವಿಪ್ರವಂಶ ಸಂಭೂತನಾದ ನಾಣಿಲ್ತಾಯ ಕುಲದ ಏಪಾಪಾಣೆ ಮುಕುಂದನು (ಶಂಕರ ನಾರಾಯಣ) ಕಾವ್ಯವನ್ನು ರಚಿಸಿದ್ದ. ನಾನು ಅವರ ಶಿಷ್ಯರಿಗೆ ಶಿಷ್ಯ ಎಂದು ಉಲ್ಲೇಖವಿದೆ. ಭೂಮಿಯಲ್ಲಿ ಪ್ರತಿಭಾವಂತ ಕವಿಗಳು ತುಳುಭಾಷೆಯಲ್ಲಿ ರಾಮಾಯಣವನ್ನು ಬರೆದರು. ಅವರ ಪಾದಕಮಲ ಭೃಂಗನಾದ ನಾನು ಮಹಾಭಾರತ ರಚಿಸುತ್ತೇನೆ ಎನ್ನುತ್ತಾನೆ ಕವಿ. ಗುಡ್ಡೆತರಾಯೇ (ಗಿರಿರಾಜ)ಎಂಬ ಕವಿ ರುಕ್ಮಿಣಿ ಸ್ವಯಂವರ, ಕೀಚಕವಧೇ, ಬಾಣಾಸುರ ವಧೆ ಎಂಬ ಕಾವ್ಯಗಳನ್ನು ಬರೆದಿದ್ದಾರೆ ಎಂಬ ಉಲ್ಲೇಖವಿರುವುದರಿಂದಲೂ ಅಂಬರೀಷೋಖ್ಯಾನ ಎಂಬ ಕಾವ್ಯದ ಉಲ್ಲೇಖವಿರುವುದರಿಂದಲೂ ಹದಿನಾಲ್ಕನೆಯ ಶತಮಾನಕ್ಕಿಂತಲೂ ಹಿಂದೆ ತುಳುವಿನಲ್ಲಿ ಪ್ರಾಚೀನ ಶಿಷ್ಟ ಕಾವ್ಯದ ಪರಂಪರೆ ಸಾಕಷ್ಟು ಬೆಳೆದು ಬಂದಿತ್ತೆಂದು ಊಹಿಸಬಹುದು.

'ಮಹಾಭಾರತೊ'

ತುಳುವಿನಲ್ಲಿ ಉಪಲಬ್ದವಿರುವ ಕೃತಿಗಳಲ್ಲಿ ಪ್ರಾಚೀನತಮವಾದುದು. ಈ ಕೃತಿ ಸುಮಾರು 14–15ನೇ ಶತಮಾನದಲ್ಲಿ ರಚಿತವಾಯಿತು. ಕವಿ ಅರುಣಾಬ್ಜ ಉಡುಪಿ ಸಮೀಪದ ಕುಡವೂರು ಈಗಿನ ಕೊಡವೊರಿನವನು. ಸಂಸ್ಕೃತದ ಮಹಾಭಾರತದ ಆದಿ ಪರ್ವದಲ್ಲಿರುವ ಒಂದು ಉಪಪರ್ವ–ಸಂಭವ ಪರ್ವದಿಂದ ಮುಂದಿನ ಖಾಂಡವದಹನದ ವರೆಗಿನ 12 ಪರ್ವಗಳ ಕಥೆಯನ್ನು ಕವಿ ನಿರೂಪಿಸಿದ್ದಾನೆ. ಇದರಲ್ಲಿ ಅಧ್ಯಾಯಗಳಿಗೆ ಸಂಧಿ ಎಂದೂ, ಪದ್ಯಗಳಿಗೆ 'ಪಾಡ್'ಗಳೆಂದೂ ಕವಿ ಹೆಸರಿಟ್ಟುಕೊಂಡಿದ್ದಾನೆ. ಅನೇಕ ವರ್ಣನೆಗಳೂ ಕಲ್ಪನ ವಿಲಾಸಗಳು ತುಳು ಮಹಾಭಾರತೊದಲ್ಲಿವೆ. ಕರ್ಜೂರದ ಉಲ್ಲೇಖ, ಕೀಲು ಕೊಡೆಯ ವರ್ಣನೆ, ತುಳುನಾಡಿನ ವಾದ್ಯಗಳ ವರ್ಣನೆ, ಬೊಂಬೆಗಳ ಚಮತ್ಕಾರ, ಅತಿಥಿಗಳಿಗೆ ಕೊಡುವ ತಣ್ಣೀರಿನ ವಿಶೇಷತೆ, ದ್ರೌಪದಿಯ ಸೌಂದರ್ಯ ವರ್ಣನೆ, ಭೂತದ ಕೋಲ, ತುಳು

ನಾಡಿನ ಗಿಡಮರಗಳ ಹೆಸರು, ಹೀಗೆ ಬಗೆಬಗೆಯ ವಿಶೇಷ ವರ್ಣನೆ, ಕವಿಕಲ್ಪನೆ, ಕವಿಸಮಯಗಳಿಂದ ಕೂಡಿದ ಅರುಣಾಬ್ಜ ಕವಿಯ ತುಳು ಮಹಾಭಾರತೊ ಬಹುವಿಶಿಷ್ಟ ಕೃತಿಯಾಗಿದೆ. ಅರುಣಾಬ್ಜನ ಗುರುವಿನ ಗುರು 'ನಾಣಿಲತ್ತಾಯ' ಕುಲನಾಮದ ಒಬ್ಬ ಜಾಣ ಕವಿ ಎಂಬುದಾಗಿ ಆತ ಉಲ್ಲೇಖಿಸುತ್ತಾನೆ. ಈ ಕುಲನಾಮವು ಶಿವಳ್ಳಿಯವರದ್ದೇ.

'ದೇವಿಮಹಾತ್ಮೆ' ತುಳುವಿನ ಪ್ರಾಚೀನ ಕಾವ್ಯಗಳಲ್ಲಿ ಒಂದು. ಇದು ಗದ್ಯ ಪ್ರಕಾರದ್ದು. ಕರ್ತೃ ತೆಂಕಿಲ್ಲಾಯ ಕುಲನಾಮದವನು. ಹಳೆಯ ತುಳು ಭಾಷೆಯಲ್ಲಿದ್ದು ಹಿರಿಯರು ಮಾತನಾಡುತ್ತಿದ್ದ ತುಳುವಿನ ನಿಜಸ್ವರೂಪವನ್ನು ತಿಳಿಯಲು ಬಹಳ ಸಹಕಾರಿಯಾಗಬಹುದು. ಮಾರ್ಕಾಂಡೇಯ ಪುರಾಣಾಂತರ್ಗತವಾದ ದೇವೀಮಹಾತ್ಮೆಯ ಕಥೆಯನ್ನು ತುಳುಗದ್ಯದಲ್ಲಿ ನಿರೂಪಿಸಲಾಗಿದೆ. ಸುಮಾರು 15ನೇ ಶತಮಾನದಲ್ಲಿ ರಚಿತವಾಗಿರಬೇಕೆಂದು ಊಹಿಸಲಾಗಿದೆ.

'ಕಾವೇರಿ' ಕಾವ್ಯ ತುಳುವಿನಲ್ಲಿ ರಚಿಸಲ್ಪಟ್ಟಿದೆ. ಕಾವೇರಿ ನದಿಯ ಮಹಿಮಾ ವರ್ಣನೆಯನ್ನು ವಸ್ತುವಾಗಿ ಹೊಂದಿದ ಕಾವ್ಯ. 'ರಾಮಯಣೊ' ಕಾವ್ಯದ ಭಾಷೆಯು ಸಹ ಶಿವಳ್ಳಿ ತುಳು ಎಂಬುದೂ ಉಲ್ಲೇಖನೀಯ.

ಅಧ್ಯಾಯ ಏಳು– ಸಂಸ್ಕೃತಿ ಸಾಹಿತ್ಯ ಕಲೆಗೆ ಶಿವಳ್ಳಿಯವರ ಕೊಡುಗೆ

7.1 ಧಾರ್ಮಿಕ ಕ್ಷೇತ್ರದಲ್ಲಿ

7.1.1ಶಿವಳ್ಳಿಯವರಲ್ಲಿ ಹೆಸರಾಂತ ಪುರೋಹಿತರು

ಅತ್ಯಂತ ಪ್ರಾಚೀನವೂ ಪವಿತ್ರವೂ ಆದ ವೃತ್ತಿ. ಪೌರೋಹಿತ್ಯ, ವೇದಾಧ್ಯಯನ, ವೇದಾಂಗಗಳ ಪರಿಜ್ಞಾನಗಳಾದ ಜ್ಯೋತಿಷ್ಯ ಕಲ್ಪಸೂತ್ರ, ಗೃಹ್ಯಸೂತ್ರಾದಿ ವೇದಾರ್ಥ ಜ್ಞಾನಕ್ಕೆ ವೇದ ಶಬ್ದಗಳ ನಿಘಂಟು, ವೇದ ಮಂತ್ರಗಳನ್ನು ಹೇಳುವ ರೀತಿ, ವ್ಯಾಕರಣ ಛಂದಃಶಾಸ್ತ್ರ ಮುಂತಾದವುಗಳನ್ನು ಪುರೋಹಿತರು ತಿಳಿದಿರಬೇಕು. ಅಂತೆಯೇ ಸಂಸ್ಕೃತ ಭಾಷೆಯ ಪರಿಜ್ಞಾನವನ್ನು ಹೊಂದಿ ಗರ್ಭಾಧಾನಾದಿ ವಿವಾಹಾಂತ ಪೂರ್ವ ಷೋಡಶ ಕರ್ಮಗಳು, ದಹನಾದಿ ಸಪಿಂಡ್ಯಂತ ಅಪರ ಪೂರ್ವ ಷೋಡಶ ಕರ್ಮಗಳು, ದಹನಾದಿ ಸಂಪಿಡ್ಯಂತ ಅಪರ ಷೋಡಶ ಕರ್ಮಗಳು, ಶಾಂತಿಕ ಪೌಷ್ಟಿಕ ಕರ್ಮಗಳು, ಪ್ರಾಯಶ್ಚಿತ್ತಗಳು, ಅಶೌಚ ವಿಷಯಗಳು ಪೌರೋಹಿತ್ಯದ ಮುಖ್ಯ ವಿಷಯ. ಬ್ರಾಹ್ಮಣ್ಯ ಪ್ರಾಪ್ತಿ, ಆಧ್ಯಾತ್ಮಿಕ ಉನ್ನತಿ ಸಂಸ್ಕೃತಿಯ ವಿಚ್ಛೇದನ, ವೈದಿಕ ವಾಙ್ಮಯದ ಅವಿಚ್ಛಿನ್ನವಾದ ರೀತಿಯ ರಕ್ಷಣೆ, ನಮ್ಮ ಜೀವನದಲ್ಲಿ ಗುರಿಯತ್ತ ಸಾಗುವ ರೀತಿಯ ಪ್ರಗತಿ ಮತ್ತು ಭಗವದನುಗ್ರಹ ಪ್ರಾಪ್ತಿ ಇವು ಪ್ರಯೋಜನಗಳು.

ಶಿವಳ್ಳಿಯವರಲ್ಲಿ ಅನಾದಿಕಾಲದಿಂದಲೂ ಪೌರೋಹಿತ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಹಲವರಿದ್ದಾರೆ. ತಮ್ಮ ಅನುಷ್ಠಾನ, ನಿಷ್ಠೆ, ಸಂಸ್ಕೃತ ಜ್ಞಾನ, ಮತ್ತು ಸಾಮಾಜಿಕ ಕಳಕಳಿ ಹಾಗೂ ಸಮಾಜದ ಬದಲಾವಣೆಗಳಿಗೆ ಹೊಂದಿಕೊಂಡು ಬರುವಂತಹ ಮನೋಧರ್ಮದವರಿಂದ ಶಿವಳ್ಳಿಯವರು ಈ ಕ್ಷೇತ್ರದಲ್ಲಿ ಹೆಚ್ಚಿನ ಜನಪ್ರೀಯತೆಯನ್ನು ಗಳಿಸಿದ್ದಾರೆ. ಜನರ ಪ್ರೀತಿಗೆ ಪಾತ್ರರಾಗಿದ್ದಾರೆ.

7.1.2ಹೆಸರಾಂತ ಪುರೋಹಿತರು

ದಿ। ಪಾದಬೆಟ್ಟು ಗೋಪಾಲಕೃಷ್ಣ ಆಚಾರ್ಯ

ದಿ। ಕಾಪು ಹಯಗ್ರೀವಾಚಾರ್ಯ

ದಿ। ಪಡುಬಿದ್ರೆ ಸೀತಪ್ಪಾಚಾರ್ಯ

ದಿ। ಪಡುಬಿದ್ರೆ ಲಕ್ಷ್ಮೀನಾರಾಯಣಾಚಾರ್ಯ

ದಿ। ಪಡುಬಿದ್ರೆ ರಾಜಪುರೋಹಿತ ಆನಂದಾಚಾರ್ಯ– ಕೊಚ್ಚಿಯ ಮಹಾರಾಜರ ಆಸ್ಥಾನ ಪುರೋಹಿತರು.

ದಿ। ಇನ್ನ ಕೃಷ್ಣಾಚಾರ್ಯ

ದಿ।ಎರ್ಮಾಳು ವಾಸುದೇವ ಭಟ್

ದಿ। ಪರಂಕಿಲ ವಾಸುದೇವ ಭಟ್

ದಿ। ಕಡುಮನಡ್ಕ ಗೋಪಾಲಕೃಷ್ಣ ಕೇಕುಣ್ಣಾಯ (ಪಿಲಿಂಬಳ ಭಟ್ಟರು)

ದಿ। ಶಿವನಾರಾಯಣ (ರಂಗಯ್ಯ) ಸರಳಾಯ, ಮಧೂರು

ದಿ।ಮಹಾದೇವ ಸರಳಾಯ, ಕರಾಯ

ಶ್ರೀ ವಲ್ಲಭ ದೇವಪೂಜತ್ತಾಯ ಕಾಸರಗೋಡು
ವೆಂಕಟ್ರಮಣ ಉಪಾಧ್ಯಾಯ, ಮಧೂರು
ಮಧೂರು ವೆಂಕಟೇಶ್ವರ ಸರಳಾಯ, ಸುಳ್ಯ
ಮಧೂರು ಪ್ರಭಾಕರ ಸರಳಾಯ ಪೆರ್ಲ
ಪಾದೆಬೆಟ್ಟು ಗುರುರಾಜ ಆಚಾರ್ಯ, ನಾಗರ ಕೋಯಿಲ್
ವಾಮಂಜೂರು ಪದ್ಮನಾಭ ಉಪಾಧ್ಯಾಯ
ಕೈಯಾರು ಜೋಡಿಲ್ಲು ಕೃಷ್ಣಾಚಾರ್ಯ
ಪೆರಾರ ಗಣಪತಿ ಆಚಾರ್ಯ
ಚಿತ್ರಾಪುರ ಗೋಪಾಲಕೃಷ್ಣಾಚಾರ್ಯ
ಪದ್ಮನಾಭ ಆಚಾರ್ಯ ಬೆಂಗಳೂರು
ಕಾರ್ಕಳ(ಕೋರಂದೂರು) ಗೋಪಾಲಕೃಷ್ಣ ಆಚಾರ್ಯ
ಕವತಾರು ಕೃಷ್ಣ ಭಟ್, ಪಕ್ಷಿಕೆರೆ
ಮಾಧವ ಆಚಾರ್ಯ – ಚೆನ್ನೈ
ಗುರುರಾಜ ಉಡುಪ–ಮುಂಬಯಿ
ಕಲ್ಯ ಗೋಪಾಲ ಭಟ್
ಕಡುಮನಡ್ಕ ಬಾಲಕೃಷ್ಣ ಕೇಕುಣ್ಣಾಯ, ಪುತ್ತೂರು
ಸುಬ್ರಾಯ ಪೆಜತ್ತಾಯ
ಬಾಲಕೃಷ್ಣ ಕೆದಿಲ್ಲಾಯ ಕೊಕ್ಕಡ
ಶ್ರೀಪತಿ ಎಳಚಿತ್ತಾಯ ಉಜಿರೆ ಮುಂತಾದವರು

7.1.3ಶಿವಳ್ಳಿ ಅನುವಂಶಿಕ ಅರ್ಚಕರು

ಉಡುಪಿ ದ.ಕನ್ನಡ ಮತ್ತು ಕೇರಳದ ಕೆಲವು ಕಡೆಗಳಲ್ಲಿ ಶಿವಳ್ಳಿ ಬ್ರಾಹ್ಮಣರೇ ಹೆಚ್ಚಾಗಿ ಅರ್ಚಕರು. ವಂಶಪಾರಂಪರ್ಯವಾಗಿ ನಿರ್ದಿಷ್ಟ ಕುಲದವರೇ ಅರ್ಚಕರಾಗಿರುವುದು ವೈಶಿಷ್ಟ್ಯ.

1. ಶ್ರೀವರಾಹ ದೇವಸ್ಥಾನ, ತಿರುವನಂತಪುರ, ಕೇರಳ (ಸದ್ಯ ರಮೇಶ ಪೋತಿ ಅರ್ಚಕರು.)

2. ಅನಂತಪದ್ಮನಾಭ ದೇವಸ್ಥಾನ, ತಿರುವನಂತಪುರ, ಕೇರಳ

ನರಸಿಂಹ ದೇವಸ್ಥಾನ– ಪದ್ಮನಾಭ ಪೋತಿ

ಪದ್ಮನಾಭ ದೇವಸ್ಥಾನ –ಮಧುಸೂದನ ಪೋತಿ

ಕೃಷ್ಣ ದೇವಸ್ಥಾನ– ಶ್ರೀನಿವಾಸ ಪೋತಿ

ನಂಬಿಮಠ(ದೇವರು ಶ್ರೀಕಂಠೇಶ್ವರ)

ಈ ದೇವಸ್ಥಾನದ ಆಡಳಿತೆ ತಿರುವಾಂಕೂರಿನ ಮಹಾರಾಜರಿಗೆ ಸೇರಿದ್ದು, ಇಲ್ಲಿನ ಅರ್ಚಕರು ಕೊಕ್ಕಡ ಗ್ರಾಮ(ದಕ್ಷಿಣ ಕನ್ನಡ)ದ ಶಿವಳ್ಳಿಯವರು. ಇದು

ವಂಶಪಾರಂಪರ್ಯವಾಗಿ ಬಂದಿದೆ. ನಂಬಿ ಮಠದಲ್ಲಿ ಪೂಜೆ ಮಾಡುವರು ಉಡುಪಿಯ ಪರ್ಯಾಯದ ಸನ್ಯಾಸಿಯಂತೆ. ಮೂರು ವರ್ಷ ದೀಕ್ಷೆ ವಹಿಸಬೇಕು. ಈ ಸಮಯದಲ್ಲಿ ನಂಬಿ ಕುಳಿತವರು ಎಲ್ಲಿಗೂ ಹೋಗುವಂತಿಲ್ಲ.

ಅನಂತ, ಪದ್ಮನಾಭ, ನರಸಿಂಹ ಮತ್ತು ಕೃಷ್ಣ ದೇವಸ್ಥಾನದಲ್ಲಿ ಕೊಕ್ಕಡದ ಏಳು ಮನೆಯವರಿಗೆ ಪೂಜೆಯ ಹಕ್ಕು– ಎಡಪಾಡಿತ್ತಾಯ, ಶಬರಾಯ, ಉಪ್ಪಾರ್ಣ, ತೋಡ್ತಿಲ್ಲಾಯ, ಬಾಳ್ತಿಲ್ಲಾಯ, ಪರ್ಲತ್ತಾಯ ಮತ್ತು ನೂರಿತ್ತಾಯ. ನಂಬಿಮಠಕ್ಕೆ ಸ್ತ್ರೀಯರ ಪ್ರವೇಶ ಇಲ್ಲ. ಪದ್ಮನಾಭದೇವರಿಗೆ ಆಭರಣ ಮತ್ತು ಇತರ ಪೂಜಾವಸ್ತುಗಳನ್ನು ಚಿನ್ನದಿಂದ ಮಾಡಲಾಗಿದೆ. ಬೆಳ್ಳಿಯ ವಸ್ತುಗಳಿಲ್ಲ. ಉಪಯೋಗಿಸುವ ಮುದ್ರೆ–ಶಂಖ.

3. ನಾಗರಕೋವಿಲ್, ಕೇರಳ

ನಾಗರಾಧನೆಗೆ ಪ್ರಸಿದ್ಧಿ. ಅರ್ಚಕರು ಸದ್ಯ ಜನಾರ್ದನ ಪೋತಿ ಮತ್ತು ಕೇಶವ ಪೋತಿ.

4. ಶುಚೀಂದ್ರಂ ಕೇರಳ

ಹನುಮಂತನ ಪೂಜೆಗೆ ಶಿವಳ್ಳಿ ಬ್ರಾಹ್ಮಣರು.

5. ತಿರುಚೆಂದೂರು, ಕೇರಳ,

ಷಣ್ಮುಖ ದೇವಸ್ಥಾನ, ಅರ್ಚಕರು ಶಿವಳ್ಳಿ ಬ್ರಾಹ್ಮಣರು, ಸದ್ಯ ಗೋಪಾಲಕೃಷ್ಣ ಪೋತಿಯವರು ಅರ್ಚಕರಾಗಿದ್ದಾರೆ.

6. ಕನ್ಯಾಕುಮಾರಿ, ತಮಿಳುನಾಡು,

ಕನ್ಯಾಕುಮಾರಿ ದೇವಸ್ಥಾನದ ಅರ್ಚಕರು ಶಿವಳ್ಳಿ ಬ್ರಾಹ್ಮಣರು. ಸದ್ಯ ಮರಿಕಂಠ ಪೋತಿ ಮತ್ತು ಸುಬ್ರಹ್ಮಣ್ಯ ಪೋತಿ ಅವರು ಅರ್ಚಕಾಗಿದ್ದಾರೆ. ಹದಿನೈದು ದಿವಸ ಒಬ್ಬರ ಪಾಲಿಗೆ ಪೂಜೆ ಬರುತ್ತಿದೆ.

7. ಚೋಟಾನಿಕೆರೆ, ಕೇರಳ,

ಪ್ರೇತಬಾಧೆಗೆ ಮುಕ್ತಿ ದೊರೆಯುವ ಸ್ಥಳ. ಸದ್ಯ ಪದ್ಮನಾಭ ಪೋತಿ ಮತ್ತು ದಾಮೋದರ ಪೋತಿಯವರು ಅರ್ಚಕರಾಗಿದ್ದಾರೆ.

8. ಮಲ್ಲಕ್ಕೆಲ್ ಭಗವತೀ ದೇವಸ್ಥಾನ, ಕೇರಳ,

ಅರ್ಚಕರಾಗಿ ರಾಜಶೇಖರ ಪೋತಿ ಮತ್ತು ಕೃಷ್ಣ ಪೋತಿ

9. ಕುಮಾರ ಕೋವಿಲ್, ಕೇರಳ,

ಶುಚೀಂದ್ರದ ಬಳಿ ಇರುವ ಸುಬ್ರಹ್ಮಣ್ಯ ದೇವಾಲಯ. ಅರ್ಚಕರಾಗಿ ಅಪ್ಪಿ ಪೋತಿ ಮತ್ತು ಕೃಷ್ಣ ಪೋತಿ ಅವರು ಕಾರ್ಯನಿರ್ವಹಿಸುತ್ತಿದ್ದಾರೆ.

10. ಶಬರಿಮಲೆ ಅಯ್ಯಪ್ಪ ದೇವಸ್ಥಾನ, ಕೇರಳ,

ಮೇಲ್‌ಶಾಂತಿ (ಪ್ರಧಾನ ಅರ್ಚಕರು) ಶಿವಳ್ಳಿಯವರು.

11. ತಲಕಾವೇರಿ, ಕೊಡಗು, ಕರ್ನಾಟಕ,

ಅರ್ಚಕರು: ಸೀತಾರಾಮ ಆಚಾರ್ಯ

12. ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ, ಸುಳ್ಯ ತಾಲೂಕು

ಬೆಳ್ತಂಗಡಿ ತಾಲೂಕಿನ ಕೊಕ್ಕಡ ಗ್ರಾಮದ ಶಿವಳ್ಳಿ ಬ್ರಾಹ್ಮಣರು ಅರ್ಚಕರು. ನೂರಿತ್ತಾಯ, ಎಡಪಾಡಿತ್ತಾಯ ಕುಲದವರಿಗೆ ಆದ್ಯತೆ. ಸದ್ಯ ಕ್ಷೇತ್ರದಲ್ಲಿ ತಂತ್ರಿಗಳಾಗಿ ಜೋಗಿತ್ತಾಯ ಕುಲದವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇಲ್ಲಿ ಪೂಜಾನಿರತ ಅರ್ಚಕರಿಗೆ ವಿಶಿಷ್ಟ ಕಟ್ಟುಪಾಡುಗಳಿವೆ. ಅರ್ಚಕ ವಿವಾಹಿತನಾಗಿರಬೇಕು. ಆದರೆ ಇಲ್ಲಿ ಪೂಜೆ ನಡೆಸುವ ಅವಧಿಯಲ್ಲಿ (ಹದಿನೈದು ದಿವಸ) ಬ್ರಹ್ಮಚರ್ಯಪಾಲನೆ ಕಡ್ಡಾಯ. ವಾಸವೆಲ್ಲಾ ದೇವಸ್ಥಾನದ ಒಳಗೆಯೇ. ಬೇರೆಯವರ ಮನೆಗೆ ಪ್ರವೇಶ ನಿಷಿದ್ಧ. ಅವಧಿ ಮುಗಿದಾಕ್ಷಣ ಅವರು ತನ್ನೂರಿಗೆ ತೆರಳಬೇಕು. ಸುಬ್ರಹ್ಮಣ್ಯದಲ್ಲಿ ಪೂಜೆ ನಿರ್ವಹಿಸುವಷ್ಟು ಕಾಲ ಅರ್ಚಕರ ಪತ್ನಿ ಕುಮಾರಧಾರಾ ನದಿ ದಾಟಿ ಬರುವಂತಿಲ್ಲ, ಕ್ಷೇತ್ರಪ್ರವೇಶ ಮಾಡುವಂತಿಲ್ಲ. ಪತ್ನಿ ಅಕಸ್ಮಾತ್ ನಿಧನರಾದರೆ ಅರ್ಚಕರು ಪೂಜೆ ಸಲ್ಲಿಸುವಂತಿಲ್ಲ.

13. ಶಿಬರೂರು, ಕರ್ನಾಟಕ,

ಕಟೀಲಿನ ಹತ್ತಿರವಿರುವ ಕೊಡಮಂತಾಯ ದೈವಸ್ಥಾನ. ಆನುವಂಶಿಕ ಆಡಳಿತೆ ಮೊಕ್ತೇಸರರು ಶಿಬರಾಯರು.

14. ಕಣಂದೂರು ತೊಡಕುಕ್ಕಿನಾಯ ದೈವಸ್ಥಾನ, ಕರ್ನಾಟಕ,

ಆನುವಂಶಿಕ ಮೊಕ್ತೇಸರರು ಪೊಯ್ಯತ್ತಾಯರು.

15. ಶರವು ದೇವಸ್ಥಾನ,

ಗಣಪತಿ ಮತ್ತು ಶರಭೇಶ್ವರ ಪ್ರಸನ್ನದೇವರು, ಆನುವಂಶಿಕ ಅರ್ಚಕರು ಮತ್ತು ಮೊಕ್ತೇಸರರು ಶರವು ಶಾಸ್ತ್ರಿಗಳು.

16. ದುರ್ಗಾಪರಮೇಶ್ವರೀ ದೇವಸ್ಥಾನ, ಕಟೀಲು,

ಆನುವಂಶಿಕ ಅರ್ಚಕರು ಮತ್ತು ಆಡಳಿತ ಮೊಕ್ತೇಸರರು, ಆಸ್ರಣ್ಣರು

17. ದುರ್ಗಾಪರಮೇಶ್ವರೀ ದೇವಸ್ಥಾನ, ಮುಚ್ಚೂರು

ಆನುವಂಶಿಕ ಅರ್ಚಕರು ಮತ್ತು ಆಡಳಿತ ಮೊಕ್ತೇಸರರಲ್ಲಿ ಅರ್ಚಕರ ಕುಟುಂಬದವರು ಒಬ್ಬರಿರಬೇಕು.

18. ಅನಂತೇಶ್ವರ ಮತ್ತು ಚಂದ್ರಮೌಳೀಶ್ವರ ದೇವಸ್ಥಾನ, ಉಡುಪಿ

ಈ ದೇವಾಲಯಗಳ ಆಡಳಿತೆ ಶ್ರೀ ಪುತ್ತಿಗೆ ಮಠಕ್ಕೆ ಸೇರಿದೆ.

19. ನೆಲ್ಲಿತೀರ್ಥ (ಮಂಗಳೂರು ತಾಲೂಕು, ದಕ್ಷಿಣಕನ್ನಡ ಜಿಲ್ಲೆ)

ಅರ್ಚಕರು ಶಿವಳ್ಳಿಯವರು. ಗುಹೆಯ ಒಳಗಡೆ ತೀರ್ಥ ಸರೋವರವಿದೆ. ತುಲಾ ಸಂಕ್ರಮಣದಿಂದ ಶಿವರಾತ್ರಿಯವರೆಗೆ ಗುಹೆಯ ಒಳಗೆ ಹೋಗಿ ತೀರ್ಥಸ್ನಾನ ಮಾಡಬಹುದು.

20. ನೆಲ್ಲಿತ್ತೊಟ್ಟು

ಕಾಸರಗೋಡು ತಾಲೂಕಿನ ಅಡೂರು ಗ್ರಾಮದ ನೆಲ್ಲಿತ್ತೊಟ್ಟು ಎಂಬಲ್ಲಿ ಪ್ರತಿ ಧನುಃಸಂಕ್ರಮಣ ದಿವಸ ಗುಹಾತೀರ್ಥಸ್ನಾನ. ಶಿವಳ್ಳಿಯವರಾದ ಹೆಬ್ಬಾರ ಮನೆತನದವರು ಇದಕ್ಕೆ ಪ್ರಥಮ ಪ್ರವೇಶಾಧಿಕಾರವುಳ್ಳವರು. ವರ್ಷದ ಈ ಒಂದೇ ದಿನ ಇಲ್ಲಿ ತೀರ್ಥೋದ್ಭವ ಹಾಗೂ ತೀರ್ಥಸ್ನಾನಪದ್ದತಿ.

21. ಜಾಂಬ್ರಿ ಗುಹೆ

ಕಾಸರಗೋಡು ತಾಲೂಕಿನ ಮುಳ್ಳೇರಿಯಾದ ಸಮೀಪದ ನೆಟ್ಟಣಿಗೆಯಿಂದ ಸುಮಾರು ಆರೇಳು ಕಿ.ಮೀ ದೂರದಲ್ಲಿರುವ 'ಜಾಂಬ್ರಿಗುಹೆ'ಯು ನಿಗೂಢತೆಯನ್ನು ಒಳಗೊಂಡಿರುವ ಒಂದು ಪುಣ್ಯಕ್ಷೇತ್ರ. ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ಮಾತ್ರ, ಮೇಷಮಾಸದ 19ರಂದು ಯಥಾವಿಧಿ ಪ್ರವೇಶಿಸಿ ಒಳಗಿನ ಮೂಲಮೃತ್ತಿಕಾ ಪ್ರಸಾದವನ್ನು ತರಲಾಗುತ್ತದೆ. ಈ ಗುಹೆಯನ್ನು ಪ್ರವೇಶಿಸಲು ಕೆಲವು ನಿರ್ದಿಷ್ಟ ವಿಧಿವಿಧಾನಗಳಿವೆ.

'ನಿಟ್ಟೋಣಿ' ಜನಾಂಗದ 'ಕಾಪಡರು' ಎಂದು ಕರೆಯಲ್ಪಡುವ ಮೊಗೇರ ವ್ಯಕ್ತಿಗಳಿಬ್ಬರು ಮತ್ತು ಇಬ್ಬರು ತಂತ್ರಿಗಳು ಹಾಗೂ ಕೈದೀವಿಗೆ ಹಿಡಿಯುವ ಒಬ್ಬರು ಈ ಗುಹೆಯೊಳಗೆ ಪ್ರವೇಶಿಸಲು ಅರ್ಹರು. ಇವರು ಗುಹಾಪ್ರವೇಶಕ್ಕಿಂತ ಮೊದಲು ಕೆಲವು ನಿಯಮಗಳನ್ನು ಬಹಳ ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ.

ಗುಹಾಪ್ರವೇಶಕ್ಕೆ ಸರ್ವಾಧಿಕಾರವನ್ನು ಪಡೆದರು ಶಿವಳ್ಳಿಯವರಾದ ಕುಂಟಾರು ತಂತ್ರಿ ಮನೆತನದವರು. ಇವರು ವ್ರತನಿಷ್ಠರಾಗಿ ಗುಹಾಪ್ರವೇಶ ಮಾಡಿ ನಿಗದಿತ ವಿಧಿವಿಧಾನಗಳನ್ನು ನೆರವೇರಿಸಿ ಮೂಲಮೃತ್ತಿಕಾಪ್ರಸಾದಸಹಿತ ಹಿಂತಿರುಗುತ್ತಾರೆ. ಗುಹೆಯೊಳಗಿನ ಯಾವುದೇ ಅಂಶಗಳನ್ನು, ವಿಷಯಗಳನ್ನು ಯಾವತ್ತೂ ಇವರು ಬಹಿರಂಗಪಡಿಸುವಂತಿಲ್ಲ. ಕುಂಟಾರು ತಂತ್ರಿಮನೆತನದ ಈಗಿನ ಹಿರಿಯರಾದ ಶ್ರೀ ಸುಬ್ರಾಯ ತಂತ್ರಿಗಳು ಈ ಗುಹಾಪ್ರವೇಶವನ್ನು ಐದು ಬಾರಿ ಮಾಡಿದವರಾಗಿದ್ದಾರೆ.

7.1.4 ಶಿವಳ್ಳಿ ಬ್ರಾಹ್ಮಣರಲ್ಲಿ ಅಗ್ನಿಹೋತ್ರಿಗಳು

ಅಗ್ನ್ಯಾಧಾನವನ್ನು ಮಾಡಿ ಗಾರ್ಹಪತ್ಯ, ದಕ್ಷಿಣಾಗ್ನಿ ಮತ್ತು ಆಹವನೀಯಗಳೆಂಬ ವೈದಿಕಾಗ್ನಿಗಳನ್ನು ಸಂಪಾದಿಸಿಕೊಂಡು ನಿತ್ಯಾಗ್ನಿಹೋತ್ರರತರಾದ ಅಹಿತಾಗ್ನಿಗಳು ಮಾತ್ರ ವೇದೋಕ್ತ ಯಜ್ಞಗಳನ್ನು ಮಾಡಬಹುದಾಗಿದೆ. ಅಂತಹವರು ಈಗ ಬಹಳ ವಿರಳರಾಗಿದ್ದಾರೆ. ಅಗ್ನಿಹೋತ್ರಿಗಳು ಪಾಲಿಸಬೇಕಾದ ನಿಯಮಗಳ ಬಹಳ ಕಠಿಣ. ನಿತ್ಯ ಮೂರುಸಲ ಅಗ್ನಿ ಆರಾಧನೆ, ಪರಾನ್ನ ನಿಷೇಧ, ಏಕಭುಕ್ತಿ ಪತ್ನಿಯು ಒಟ್ಟಿಗೆ ಇರದ ಸಂದರ್ಭ ಸ್ವಯಂಪಾಕ ಇತ್ಯಾದಿಗಳು ಅನುಸರಿಸಬೇಕಾದ ಕೆಲವು ನಿಯಮಗಳು.

ಪತ್ನಿರಹಿತನಾದವನು ಅಗ್ನಿಹೋತ್ರಿಯಾಗಲಾರ. ಅಗ್ನಿಹೋತ್ರಿಯು ಮೃತನಾದರೆ ಅಗ್ನಿಮಂಥನಕ್ಕೆ ಉಪಯೋಗಿಸುವ ಅರಣಿಯೊಂದಿಗೆ ಶವಸಂಸ್ಕಾರ ಮಾಡಬೇಕು.

1372ರ ಬಾರಕೂರಿನ ಶಾಸನದಲ್ಲಿ ಕೇಶವ ಅಹಿತಾಗ್ನಿ ಎಂಬ ಹೆಸರು ಉಲ್ಲೇಖಿಸಲ್ಪಟ್ಟಿದೆ. ಕಳೆದ ಶತಮಾನದಲ್ಲಿದ್ದ ಆಚಾರವಂತರಾದ ಇಬ್ಬರು ಅಗ್ನಿಹೋತ್ರಿಗಳಲ್ಲಿ ದಿ ಅಲೆವೂರು ಸೀತಾರಾಮ ಆಚಾರ್ಯರು ಒಬ್ಬರು.

ಇನ್ನೊಬ್ಬರು, ಎಂ. ಜಿ.ಎಂ. ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥರಾಗಿದ್ದ ದೀಕ್ಷಿತ ಅನನ್ತಕೃಷ್ಣ ಸೋಮಯಾಜಿ (ಕೆದಿಲಾಯ) ಅವರು. ವೇದೋಕ್ತ ಮಹಾಯಾಗಗಳಲ್ಲಿ ಅಗ್ನಿಷ್ಟೋಮಸೋಮಯಾನವನ್ನು 1995ರಲ್ಲಿಯೂ ಆಪ್ತೋರ್ಯಾಮ-ಗರುಡಚಯನ ಮಹಾಯಾಗವನ್ನು 1998ರಲ್ಲಿ ಮಾಡಿದ ಕೀರ್ತಿ ದೀಕ್ಷಿತ ಅನನ್ತಕೃಷ್ಣ ಸೋಮಯಾಜಿಗಳದ್ದು.

7.1.5 ಶಿವಳ್ಳಿಯವರಲ್ಲಿ ಪ್ರವಚನಕಾರರು

ಪುರಾಣ, ವೇದ, ಉಪನಿಷತ್ತು ಮುಂತಾದುವುಗಳನ್ನು ಜನಸಾಮಾನ್ಯರಿಗೆ ತಿಳಿಯುವಂತೆ ಹೇಳುವುದೇ ಪ್ರವಚನದ ಮುಖ್ಯ ಗುರಿ. ಸೀಮಿತ ವರ್ಗಕ್ಕೆ ಮೀಸಲಾಗಿದ್ದ ಕ್ಲಿಷ್ಟ ವಿಷಯಗಳನ್ನು ಆಧುನಿಕ ವಿಚಾರ ಧಾರೆಯೊಂದಿಗೆ ಸಮೀಕರಿಸಿ ಸಾರ್ವಜನಿಕರಿಗೆ ನಮ್ಮ ಸಂಸ್ಕೃತಿ ಮತ್ತು ಪ್ರಾಚೀನ ಋಷಿಗಳು ಕೊಟ್ಟ ಉದಾತ್ತ ಸಂದೇಶಗಳನ್ನು ಪ್ರವಚನದ ಮೂಲಕ ವಿವರಿಸುವುದು ಆರೋಗ್ಯಕರ ಬೆಳವಣಿಗೆ. ಈ ಹಿನ್ನೆಲೆಯಲ್ಲಿ ಸಾಧನೆ ಗೈದ ಶಿವಳ್ಳಿ ಬ್ರಾಹ್ಮಣರು ಹಲವರಿದ್ದಾರೆ. ಮುಖ್ಯವಾಗಿ ದಿ। ನಾರಾಯಣಾಚಾರ್ಯ ದಿ। ಕಿನ್ನಿಮುಲ್ಕಿ ಅನಂತಪದ್ಮನಾಭಆಚಾರ್ಯ, ದಿ। ಅಲೆವೂರು ಲಕ್ಷ್ಮೀನಾರಾಯಣ ಕೊಡಂಚ ಮುಂತಾದವರು ಪ್ರಸ್ತುತ ಪ್ರವಚನಗಾರರಾಗಿ ಜನರಲ್ಲಿ ಜಾಗೃತಿ ಮೂಡಿಸುವವರಲ್ಲಿ ಪ್ರಮುಖರು–

ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯ:–

ಸಂಸ್ಕೃತ ಮತ್ತು ಕನ್ನಡದಲ್ಲಿ ಅಸಾಧಾರಣ ಪಾಂಡಿತ್ಯ, ಅಸ್ಖಲಿತಮಾತು, ಸ್ವತಂತ್ರ ವಿಚಾರಧಾರೆ, ಸರಳ ಶೈಲಿಯಲ್ಲಿ ಮನಮುಟ್ಟುವಂತೆ ವಿಷಯ ನಿರೂಪಣೆ, ವೇದೋಪನಿಷತ್‌ಗಳ ಸಾರವನ್ನು ಪಂಡಿತ ಪಾಮರರಿಗೆ ಮನಮುಟ್ಟುವಂತೆ ವಿವರಿಸುವ ವಿಧಾನ ಅದ್ವಿತೀಯ. ಇವರ ಪ್ರವಚನಕ್ಕಾಗಿ ಜನರು ತವಕಿಸುವ ಪ್ರಮೇಯವಿದೆ. ಬನ್ನಂಜೆಯವರ ಶಿಷ್ಯರಾದ ವಿದ್ವಾನ್ ಉಡುಪಿ ರಾಮನಾಥ ಆಚಾರ್ಯರರು ಅನುಪಮ ಸಾಮಾರ್ಥ್ಯವುಳ್ಳ ಪ್ರವಚನಗಾರರು. ಜನರ ಪ್ರಶಂಸೆಗೆ ಪಾತ್ರರಾದವರು.

ಶ್ರೀ ವಿಶ್ವೇಶತೀರ್ಥ ಶ್ರೀಪಾದರು, ಪೇಜಾವರ ಮಠ–ಸರಳ ಶೈಲಿಯಲ್ಲಿ ವಿಷಯ ಮಂಡನೆ ಅಂತೆಯೇ ದ್ವೈತ ಸಿದ್ಧಾಂತದಲ್ಲಿ ಅಸಾಧಾರಣ ಪಾಂಡಿತ್ಯ ಹೊಂದಿದವರು.

ಶ್ರೀ ವಿದ್ಯಾದೀಶತೀರ್ಥ ಶ್ರೀಪಾದರು, ಪಲಿಮಾರುಮಠ. ಪಾಂಡಿತ್ಯದೊಂದಿಗೆ ಅನಾಯಾಸವಾಗಿ ಪ್ರವಚನವನ್ನು ಮಾಡುವುದನ್ನು ಮೈಗೂಡಿಸಿಕೊಂಡು ಮನಮುಟ್ಟುವಂತೆ, ಅಂತೆಯೇ ಜನಾಕರ್ಷಣೆ ಮಾಡುವ ಪ್ರವಚನಗಾರರು.

ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು–ಅದಮಾರು ಮಠ–ಉತ್ತಮವಾಗ್ಮಿ ಸಾಧಕ. ರಾಮಾಯಣ ಮತ್ತು ಮಹಾಭಾರತವನ್ನು ಹೊಸದೃಷ್ಟಿ ಕೋನದಿಂದ ಮೂಲ ಆಶ್ರಯಕ್ಕೆ ಚ್ಯುತಿ ಬರದಂತೆ ವಿವರಿಸುವುದರಲ್ಲಿ ನಿಸ್ಸೀಮ. ರಾಮಾಯಣ ಮತ್ತು ಮಹಾಭಾರತಕ್ಕೆ ಹೊಸ ಭಾಷ್ಯಾವನ್ನು ಕೊಡುವ ಪ್ರಯತ್ನವನ್ನು ಮಾಡುತ್ತಿದ್ದಾರೆ.

ಸುಗುಣೇಂದ್ರತೀರ್ಥ ಶ್ರೀಪಾದರು, ಪುತ್ತಿಗೆ ಮಠ–ಸಂಸ್ಕೃತ, ಕನ್ನಡ ಮತ್ತು ಆಂಗ್ಲಭಾಷೆಯಲ್ಲಿಯೂ ಪ್ರವಚನ ಮಾಡುವ ಪ್ರತಿಭೆ. ಪಾಶ್ಚಾತರಿಗೂ ನಮ್ಮ ಸಂಸ್ಕೃತಿಯ ಅರಿವು ಮತ್ತು ದ್ವೈತಸಿದ್ಧಾಂತದ ತಿರಳನ್ನು ತಳಸ್ಪರ್ಶಿಯಾಗಿ ಪ್ರಚಾರ ಮಾಡಿದ ಕೀರ್ತಿಗೆ ಪಾತ್ರರಾದವರು.

ವಿದ್ವಾನ್ ಹಯವದನ ಪುರಾಣಿಕ ಪ್ರವಚನದೊಂದಿಗೆ ಹರಿದಾಸ ಸಾಹಿತ್ಯ ವಾದಿರಾಜರ ಕೃತಿಗಳ ಕುರಿತು ಅಧ್ಯಯನ, ಗ್ರಂಥ ಪ್ರಕಟನೆಗಳ ಮೂಲಕ ಜನರಲ್ಲಿ ಧರ್ಮ, ಸಂಸ್ಕೃತಿ, ಆಚಾರ ವಿಚಾರಗಳ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಯಶಸ್ಸನ್ನು ಕಂಡವರು.

ವಿದ್ವಾನ್ ಅದ್ಯಪಾಡಿ ಹರಿದಾಸ ಭಟ್, ವಿದ್ವಾನ್ ಸಗ್ರಿ ರಾಘವೇಂದ್ರ, ಉಪಾಧ್ಯಾಯ, ಲಕ್ಷ್ಮೀಶ ತೋಳ್ಪಾಡಿ, ವಿದೂಷಿ ಡಿ. ಸುಗುಣಾ ತಂತ್ರಿ ಮೊದಲಾದವರು ಧರ್ಮಶಾಸ್ತ್ರ, ಭಾಗವತ ಮುಂತಾದ ವಿಷಯಗಳ ಬಗ್ಗೆ ತರ್ಕ ಬದ್ಧವಾದ ವಿಷಯ ಮಂಡನೆ ಹೊಸ ಚಿಂತನೆಗೆ ಅವಕಾಶವನ್ನು ನೀಡಿ ಜನರ ಪ್ರೀತಿಯನ್ನು ಗಳಿಸಿದವರು.

7.1.6 ಶಿವಳ್ಳಿ ಬ್ರಾಹ್ಮಣರಲ್ಲಿ ಹರಿಕೀರ್ತನಕಾರರು

ಧರ್ಮಜಾಗೃತಿಯನ್ನು ಮೂಡಿಸಬಲ್ಲ, ಭಗವತ್ ಪುರಾಣಗಳನ್ನೆಲ್ಲ ತಿಳಿಸುವ ಅತೀ ಪುರಾತನವಾದ ಕಲೆ ಹರಿಕಥೆ. ಇಲ್ಲಿ ಭಜನೆಯಿದೆ, ಭಕ್ತಿಯಿದೆ, ಸಂಗೀತವಿದೆ, ಸಾಹಿತ್ಯ, ನವಿರಾದ ಹಾಸಮೇಳವಿಸಿ ಸಮಸ್ತರನ್ನು ವಶೀಕರಿಸುವ ದೈವ ಪ್ರಜ್ಞೆ ಇದೆ. ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಾಗಿ ಆಚರಿಸಲ್ಪಡುವ ನವರಾತ್ರಿ, ಶ್ರೀಕೃಷ್ಣ ಜನ್ಮಾಷ್ಟಮಿ ಮೊದಲಾದ ಪರ್ವದಿವಸಗಳಲ್ಲಿ ಈ ಕಲಾ ಪ್ರಕಾರದ ಆರಾಧನೆ ಅತ್ಯಂತ ಆಕರ್ಷಿಣೀಯ. ಕಲಾ ಬೆಳವಣಿಗೆಯಲ್ಲಿ ಸಮಗ್ರ ಕರ್ನಾಟಕದ ಮೂಲೆ ಮೂಲೆಯ ಹರಿಕೀರ್ತನೆಕಾರರ ಸಾಧನೆ ಅಸಾಮಾನ್ಯ. ಉಡುಪಿ ಸೀಮೆಯ ಶಿವಳ್ಳಿ ಬ್ರಾಹ್ಮಣರ ಸಾಧನೆಯೇನು ಕಡಿಮೆಯಿಲ್ಲ.

ದಿ।ಪದ್ಮನಾಭ ಆಚಾರ್ಯ ಕಿನ್ನಿಮೂಲ್ಕಿ, ದಿ।ಶಂಕರ್‌ನಾರಾಯಣ ಸಾಮಗ ಮಲ್ಪೆ, ದಿ।ಅನಂತ ಕೃಷ್ಣ ಕಿನ್ನಿಮೂಲ್ಕಿ, ದಿ। ಗೋವಿಂದ ಹರಿದಾಸ, ಹಂಡೆ ವೇದವ್ಯಾಸ, ಪಾರೆಂಕಿ ವಾಸುದೇವರಾವ್, ಸಸಿಹಿತ್ಲು ಬಾಲಾಜಿರಾವ್, ಶ್ರೀಮತಿ ಪದ್ಮಾವತಿ ಬಾಯಿ ಪುತ್ತೂರು ಇವರುಗಳೆಲ್ಲ ಹರಿಕೀರ್ತನಕಾರರಾಗಿ ಕಲಾ ಸೇವೆಯನ್ನು ಗೈದವರು.

ಹದಿನೆಂಟನೆಯ ಶತಮಾನದಲ್ಲಿದ್ದ ವರಾಹ ತಿಮ್ಮಪ್ಪದಾಸರು ಹರಿಕೀರ್ತನ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ದಿ। ಶ್ರೀ ರಾಮದಾಸ ಸಾಮಗರು ಸ್ವಚ್ಛ ಮತ್ತು ಪ್ರೌಢ ಪೌರಾಣಿಕ ಶೈಲಿಯ ಭಾಷೆ, ನಿರರ್ಗಳವಾಕ್‌ಪ್ರವಾಹ, ಸನ್ನಿವೇಶ ಚಿತ್ರಿಸುವಲ್ಲಿ ಸೂಕ್ಷ್ಮಲಕ್ಷ್ಯ, ರಚನಾ ಕೌಶಲ,

ಪುಂಖಾನುಪುಂಖವಾಗಿ ಮೂಡುವ ದೃಷ್ಟಾಂತಗಳು, ಪದ ಲಾಲಿತ್ಯ, ಆಕರ್ಷಕ ಪೋಣಿಕೆಗಳಿಂದ ಜನರ ಮನಸ್ಸನ್ನು ಸೂರೆಗೊಂಡಿದ್ದಾರೆ.

ಶ್ರೀ ಶ್ರೀಶದಾಸರು:– ಕೀರ್ತನ ಲೋಕದಲ್ಲಿ ಅದ್ವಿತೀಯ ಸಾಧನೆ ಮಾಡಿರುವ ಇವರಿಗೆ ಕೀರ್ತನಾಲಂಕರ, ಹರಿಕಥಾ ವಿಭೂಷಣ ಬಿರುದುಗಳು ದೊರೆತಿವೆ. ಅಖಿಲಭಾರತ ಹರಿಕಥಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನದೊಂದಿಗೆ ಸ್ವರ್ಣಪದಕವನ್ನು ಪಡೆದಿದ್ದಾರೆ.

ಕೀರ್ತನ ವಿದುಷಿ ಯಶೋದಮ್ಮ

ಭಕ್ತಕುಚೇಲ, ಪ್ರಹ್ಲಾದ ಚರಿತೆ, ಅಕ್ಷಯಾಂಬರ, ಧ್ರುವಚರಿತೆ ಮೊದಲಾದ ಕಥಾನಕಗಳನ್ನು ನಿರೂಪಿಸುತ್ತಾ ಪ್ರಶಸ್ತಿ ಸಂಮಾನಗಳಿಗೆ ಪಾತ್ರರಾಗಿದ್ದಾರೆ. ಬಾಲ್ಯದಿಂದಲೇ ಕೀರ್ತನೆಗಳನ್ನು ಹಾಡುವುದರಲ್ಲಿ ಆಸಕ್ತಿ.

ದಿ|ಮಧುಸೂದನ ಭಟ್, ಕಬ್ಬಿನಾಲೆ

ಭಕ್ತಿ ಮಾರ್ಗಕ್ಕೊಪ್ಪುವ ಪೀಠಿಕೆ, ಸಂದರ್ಭೋಚಿತ ಪದ್ಯಗಳು, ಸಮತೂಕದ ಉಪಕತೆಗಳು, ಕಾಲಕ್ಷೇಪಕ್ಕೊಪ್ಪುವ ಭಾಷಾಶೈಲಿ, ಮನಮುಟ್ಟುವ ನಿರೂಪಣೆ, ಹಾಡುಗಾರಿಕೆಯ ಹಿಡಿತ, ಕಥಾ ಸನ್ನಿವೇಶದ ಸಮರ್ಥಚಿತ್ರಣ ಇವುಗಳಲ್ಲದೆ ಹಾಸ್ಯ, ಓಘ, ಆವೇಶಗಳೆಲ್ಲವೂ ಇವರ ಹರಿಕಥೇಯ ಗಮನೀಯ ಅಂಶಗಳು.

ತನ್ನನ್ನು ತಾನು ಮರೆತು ಕೀರ್ತನೆಗಳ ಅಂತಸ್ಸತ್ವಕ್ಕೆ ಜೀವ ತುಂಬುತ್ತಿದ್ದ ಇವರು ಜನಮಾಸದಲ್ಲಿ ಚಿರಪರಿಚಿತರು.

ಶ್ರೀ ಬಿ.ಸಿ.ರಾವ್ ಶಿವಪುರ

ವೃತ್ತಿಯಲ್ಲಿ ಶಿಕ್ಷಕರಾದರೂ ಪ್ರವೃತ್ತಿಯಲ್ಲಿ ಹರಿದಾಸರು. ಊರಿನ ಹರಿಜನ ಕೇರಿಗಳಲ್ಲಿಹರಿಕಥೆಯನ್ನು ನಡೆಸಿ ವಿಸ್ತಾರವನ್ನು ಹೆಚ್ಚಿಸಿದವರು. ಸುಮಾರು 2ಸಾವಿರಕ್ಕೂ ಹೆಚ್ಚು ಹರಿಕಥೆಗಳನ್ನು ನಡೆಸಿರುತ್ತಾರೆ. ಶ್ರೀ ಕೃಷ್ಣ – ಸುಧಾಮ, ಭಕ್ತ ಮಾರ್ಕಂಡೇಯ, ಪಾದುಕಾಪ್ರದಾನ, ಭಕ್ತಕನಕದಾಸ ಮೊದಲಾದ ಭಾವಪೂರ್ಣ ಕಥಾನಕಗಳನ್ನು ಹರಿಕಥೆಗೆ ಪೋಣಿಸಿಕೊಂಡ ಶ್ರೀಯುತರು ತುಳುಭಾಷೆಯಲ್ಲಿಯೂ ಕಾಲಕ್ಷೇಪ ನಡೆಸಿದ್ದಿದೆ. ಕೇವಲ ಪುರಾಣ ಕಥೆಗಳಿಷ್ಟೇ ಮೀಸಲಾಗದೆ, ಕುಟುಂಬ ಯೋಜನೆ, ಜನಸಂಖ್ಯಾಸ್ಫೋಟ, ಸಾಕ್ಷರತಾ ಮಹತ್ವ ಮುಂತಾದ ಸಾಮಾಜಿಕ ವಿಚಾರದಲ್ಲಿಯೂ ಹರಿಕಥೆಗಳನ್ನು ನಡೆಸಿಕೊಂಡು ಬಂದಿದ್ದಾರೆ.

ಆದರ್ಶಗಳನ್ನು ಸಾರುವ ಪುರಾಣಗಳು ಮತ್ತು ತತ್ವವನ್ನು ಪ್ರತಿನಿಧಿಸುವ ಪ್ರತಿಮೆಗಳಿಂದ ತಿಳಿಹೇಳುವ ಮಾಧ್ಯಮವಾದ ಈ ಕಲೆಯು ಜನರನ್ನು ಆಕರ್ಷಿಸುವಲ್ಲಿ ಸಫಲತೆ ಹೊಂದಿದೆ.

7.1.7 ಶಿವಳ್ಳಿಯವರಲ್ಲಿ ದರ್ಶನ ಪಾತ್ರಿಗಳಾಗಿರುವ ದೇವಸ್ಥಾನ ಮತ್ತು ದೇವರು

ದೇವದರ್ಶನ ಬಲಿಮೂರ್ತಿಯನ್ನು ಹೊತ್ತು ದೇವಸ್ಥಾನದಲ್ಲಿ ಪರ್ವಕಾಲ, ಉತ್ಸವದ ಸಮಯದಲ್ಲಿ ಮಾಡುವ ನೃತ್ಯ. ಇದರಲ್ಲಿ ಆವೇಶವಿಲ್ಲ ಮತ್ತು ಭೂತದರ್ಶನ

ಇದರಲ್ಲಿ ಆವೇಶವಿದೆ. ಸಾಮಾನ್ಯವಾಗಿ, ಉತ್ಸವಾದಿಗಳ ಸಮಯದಲ್ಲಿ ಎಲ್ಲ ದೇವಾಲಯಗಳಲ್ಲಿ ದೇವದರ್ಶನವಿದ್ದರೂ, ಜೋಡಿ ಬಲಿಮೂರ್ತಿಯನ್ನು ಹೊತ್ತುಕೊಂಡು ಶಿವಳ್ಳಿ ಬ್ರಾಹ್ಮಣರು ದರ್ಶನದಲ್ಲಿ ಭಾಗವಹಿಸುವ ಕೆಲವು ದೇವಾಲಯಗಳು ಇಂತಿವೆ.

ದೇವಸ್ಥಾನ	ಜೋಡಿ ಬಲಿಮೂರ್ತಿಗಳು
ಕಾಂತಾವರ ದೇವಸ್ಥಾನ	ಪಾರ್ವತಿ ಮತ್ತು ಪರಮೇಶ್ವರ
ಬಳ್ಳಮಂಜ ದೇವಸ್ಥಾನ	ಅನಂತ ಮತ್ತು ಪದ್ಮನಾಭ
ಶರವು ದೇವಸ್ಥಾನ	ಗಣಪತಿ ಮತ್ತು ಈಶ್ವರ
ಪುತ್ತಿಗೆ ದೇವಸ್ಥಾನ	ಪಾರ್ವತಿ ಮತ್ತು ಪರಮೇಶ್ವರ
ಕಾರಿಂಜ ದೇವಸ್ಥಾನ	ಪಾರ್ವತಿ ಮತ್ತು ಪರಮೇಶ್ವರ
ಕುಡುಪು ದೇವಸ್ಥಾನ	ಅನಂತ ಮತ್ತು ಪದ್ಮನಾಭ
ಪೆರ್ಣಂಕಿಲ ದೇವಸ್ಥಾನ	ಗಣಪತಿ ಮತ್ತು ಈಶ್ವರ
ಉಡುಪಿ	ಅನಂತೇಶ್ವರ ಮತ್ತು ಚಂದ್ರಮೌಳೀಶ್ವರ
ಕಾಸರಗೋಡು(ವಿಷ್ಣು ಮಂಗಳ)	ವಿಷ್ಣು ಮತ್ತು ಈಶ್ವರ
ಕೊಕ್ಕಡ ದೇವಸ್ಥಾನ	ಈಶ್ವರ ಮತ್ತು ವಿಷ್ಣು
ಕೊಟ್ರುಗುತ್ತು ದೇವಸ್ಥಾನ	ಲಕ್ಷ್ಮೀ ಮತ್ತು ನರಸಿಂಹ

7.2 ಲೌಕಿಕ:

ಲಲಿತಕಲೆಗಳಲ್ಲಿ ಶಿವಳ್ಳಿ ಪ್ರತಿಭೆಗಳು

ಲಲಿತಕಲೆಗಳಾದ ಹಾಡುಗಾರಿಕೆ, ಪಿಟೀಲು, ಕೊಳಲು, ಮೃದಂಗ, ಗಿಟಾರ್, ವೀಣೆ, ಸಿತಾರ್, ನೃತ್ಯ, ಚಿತ್ರಕಲೆಗಳಲ್ಲಿ ಶಿವಳ್ಳಿಬ್ರಾಹ್ಮಣರು ಸಾಧನೆಗೈದು, ರಾಜ್ಯ ರಾಷ್ಟ್ರ ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಟಿ.ಕೆ. ಗೋವಿಂದ ರಾವ್, ಶ್ರೀಮತಿ ಉಷಾ .ಆರ್ ಚಡಗ, ಮಾಣಿ ಸುಬ್ರಾಯ ಭಾಗವತ, ದಿ। ಬೆಳ್ಳೆ ಆನಂದರಾಮ ಉಪಾಧ್ಯಾಯ, ಶ್ರೀಮತಿ ಬಿ.ಪ್ರಭಾರಾವ್, ದಿ.ಉಡುಪಿ ಲಕ್ಷ್ಮೀಬಾಯಿ, ಶ್ರೀಮತಿ ಶಾರದಾ ಆರ್ ರಾವ್, ಉಡುಪಿ ವಾಸುದೇವ ಭಟ್, ನಾದೋಪಾಸಕ ದಿ। ವಿಷ್ಣುಮೂರ್ತಿಭಟ್, ಕೆ. ವೆಂಕಟರಮಣನ್, ಶ್ರೀಮತಿ ರಂಜನಿಸುರೇಶ್, ಕಡಿಯಾಳಿ ದಿ। ಎಲ್.ಆರ್.ಭಟ್, ಶ್ರೀಮತಿ ಕಾಂಚನ ಎಸ್.ರಂಜಿನಿ, ಕುದ್ಮಾರು ಎಸ್. ವೆಂಕಟರಮಣನ್, ದಿ। ಎಂ.ರಾಜಗೋಪಾಲಾಚಾರ್ಯ, ಕವಿತಾಸರಳಾಯ ಮತ್ತು ತ್ರಿವೇಣಿ ಸರಳಾಯ, ವಿದ್ಯಾಭೂಷಣರು, ಶ್ರೀಮತಿ ಜಯಲಕ್ಷ್ಮೀಶ್ರೀನಿವಾಸ್, ದಿ। ಪಿ.ಕೆ ಸೀತಾರಾಮ ರಾವ್, ಶ್ರೀಮತಿ ಸುಶೀಲಾ.ಪಿ.ಆಚಾರ್ಯ, ಕೆ. ಬಾಲಕೃಷ್ಣ ಆಚಾರ್ಯ, ಎಚ್.ಚಂದ್ರಶೇಖರ ಕೆದಿಲ್ಲಾಯ, ಮಧೂರು ಶರಳಾಯ ಸಹೋದರಿಯರು, ಶ್ರೀಮತಿ ಸುಮಾಶಾಸ್ತ್ರಿ ನಿಡ್ಲೆ ರಾಜರಾಜೇಶ್ವರಿಯವರು ಹಾಡುಗಾರಿಕೆಯಲ್ಲಿ ವಿಶೇಷವಾದ ಸಾಧನೆಯನ್ನು ಮಾಡಿದವರು.

<u>ಮೃದಂಗದಲ್ಲಿ</u> ಕೆ.ಯು.ಜಯಚಂದ್ರರಾವ್, ಉಡುಪಿ ಎಸ್.ಶ್ರೀಧರ್, ಹರ್ಷಸಾಮಗ, ದಿ.ಪಾದೆಬೆಟ್ಟು ವಾಸುದೇವರಾವ್, ಉಳ್ಳೂರು ನಾಗೇಂದ್ರ ಉಡುಪ, ಗೋಪಾಲಕೃಷ್ಣ ಪೋತಿ, ಕುದ್ಮಾರು ಎಸ್. ವಿಶ್ವೇಶ್ವರ, ದಿ। ಧನ್ಯಶಂಕರರಾವ್, ಬಾಲಚಂದ್ರಭಾಗವತ, ಕೆ.ದಿನಕರರಾವ್, ಕೆ.ರಾಮಭಟ್, ಪ್ರಭಾಕರ ಶರಳಾಯ, ದಿ.ಮಹಾದೇವ ಶರಳಾಯ, ಶ್ರೀಶದಾಸರು ಸಾಧನೆ ಗೈದಿದ್ದಾರೆ. <u>ಖಂಜೀರದಲ್ಲಿ</u> ಎಸ್.ಶ್ರೀಕಾಂತ್, ತಬಲಾನಾದನದಲ್ಲಿ ಎನ್.ಮಾಧವಾಚಾರ್ಯ, ಡಾ.ಪಿ.ನಾಗರಾಜ ಉಪಾಧ್ಯ, ದಿ.ದಾಸಭಟ್, ಘಟ, ಖಂಜೀರ, ಸಂಗೀತ ಮತ್ತು ಚಿತ್ರಕಲೆಗಳಲ್ಲಿ ಬಿ.ಕೆ. ಗೋಪಾಲಕೃಷ್ಣರಾವ್, ಡೋಲಿಕ್, ಮೋರ್ಸಿಂಗ್ ತಬಲಾದಲ್ಲಿ ಎಸ್.ಜಿ.ಪ್ರಮಥ್ ಕಿರಣ್, ಘಟಂನಲ್ಲಿ ಗಿರಿಧರ್ ಉಡುಪ ಹಾರ್ಮೋನಿಯಂನಲ್ಲಿ ದಿ.ರಾಜೀವ್‌ಭಟ್, ಸಂಗೀತ ಮತ್ತು ರಂಗನಿರ್ದೇಶಕ ಕೆ.ರಾಘುವೇಂದ್ರಭಟ್, ಸಂಗೀತ ಉಪಕರಣಗಳ ತಯಾರಿಕೆಯಲ್ಲಿ ಮಧ್ವೇಶಭಟ್ ಸಾಧನೆ ಮಾಡಿದ್ದಾರೆ. ಕೆ. ವ್ಯಾಸಕೃಷ್ಣ ಉಪಾಧ್ಯಾಯ ಪಿಟೀಲು, ಕೊಳಲು, ಹಾಡುಗಾರಿಕೆಯಲ್ಲಿ ದಿ.ಕಿನ್ನಿಮೂಲ್ಕಿ ರಾಘುವೇಂದ್ರಭಟ್, ದಿ.ಬಿ.ಕೃಷ್ಣರಾವ್, ಪಾಡಿಗಾರು ಶ್ರೀಧರ ಆಚಾರ್ಯ, ಶ್ರೀಮತಿ ಕೆ. ಆರ್.ಶಾಂತಾ, ಶ್ರೀಮತಿ ಶರ್ಮಿಳಾರಾವ್, ಪಿ.ರವಿರಾಜ ಉಪಾಧ್ಯ, ಶ್ರೀಮತಿ ವಸಂತಿ ರಾಮಭಟ್, ದಿ.ಪದ್ಮನಾಭ ಸರಳಾಯ, ಬಿ.ವಾಸುದೇವರಾವ್, ದಿ.ಫಿಡ್ಲು ಮಂಜುನಾಥಯ್ಯ, ವಿಠಲರಾಮಮೂರ್ತಿ ಇವರು ಪಿಟೀಲುವಾದನದಲ್ಲಿ ಸಾಧನೆ ಗೈದಿದ್ದಾರೆ. ಗಿಟಾರ್‌ನಲ್ಲಿ ರಾಜಗೋಪಾಲಾಚಾರ್ಯ, ಸಿತಾರ್‌ನಲ್ಲಿ ಅನಂತಸತ್ಯ ಸಂಜೀವ, ವೀಣೆಯಲ್ಲಿ ಶ್ರೀಮತಿ ಸುಮಂಗಲಾ ಪ್ರಭಾಕರ್

ಹೆಸರುವಾಸಿಯಾಗಿದ್ದಾರೆ. ದಿ.ಶ್ರೀನಿವಾಸ ಪುತ್ತೂರಾಯ, ಕೆ. ಪ್ರಭಾಕರ ಉಪಾಧ್ಯಾಯ, ಕೆ.ಯು.ರಾಘವೇಂದ್ರ ರಾವ್, ರವಿಚಂದ್ರಕೂಳೂರು, ಪಡುಬಿದ್ರೆ ಬಾಲಕೃಷ್ಣತಂತ್ರಿ ಕೊಳಲುವಾದನದಲ್ಲಿ ಪ್ರಮುಖರು.

ನೃತ್ಯದಲ್ಲಿ ಶ್ರೀಮತಿ ಸುಲೋಚನಾಭಟ್, ಶ್ರೀಮತಿ ಗೀತಾ ಸರಳಾಯ, ಶ್ರೀಮತಿ ಇಂದಿರಾ ಕಡಂಬಿ, ಕೆ.ರಾಧಾಕೃಷ್ಣತಂತ್ರಿ, ಶ್ರೀಮತಿಪ್ರತಿಭಾ ಸಾಮಗ, ಶ್ರೀಮತಿ ಸೀತಾಕೋಟೆ, ಕೊಡವೂರು ಮಾಧವರಾವ್, ಶ್ರೀಮತಿ ಲಕ್ಷ್ಮೀಗುರುರಾಜ್, ಕೊಡವೂರು ಸುಧೀರ್‌ರಾವ್, ಟಿ.ಎಸ್. ಉದಯಕೃಷ್ಣ ಉಪಾಧ್ಯಾಯರು, ಪ್ರಿಯಾಶ್ರೀರಾವ್, ಕೃಷ್ಣಮುಗೇರಾಯ, ಶ್ರೀಮತಿ ಮಧುಮತಿಪ್ರಕಾಶ್, ಉಡುಪಿ ಲಕ್ಷ್ಮೀನಾರಾಯಣ ಆರ್ಚಾರ್ಯ, ಶ್ರೀಮತಿ ಲೀಲಾವತಿ.ಎನ್‌ಉಪಾಧ್ಯಾಯರು ಪ್ರಖ್ಯಾತರಾಗಿದ್ದಾರೆ.

ಚಿತ್ರಕಲೆಯಲ್ಲಿ–ದಿ.ಪಾವಂಜೆ ಗೋಪಾಲಕೃಷ್ಣಯ್ಯ, ದಿ. ಪಾವಂಜೆ ಭುಜಂಗರಾವ್, ದಿ. ನರಹರಿ ಗೋಪಾಲಕೃಷ್ಣ ಪಾವಂಜೆ, ಎಂ.ಆರ್. ಪಾವಂಜೆ, ಶ್ರೀಮತಿ ಅನು ಪಾವಂಜೆ, ಉಪಾಧ್ಯಾಯ ಮೂಡುಬೆಳ್ಳೆ, ಶ್ರೀಮತಿ ಸುಲೋಚನಾ ವೇಣುಗೋಪಾಲ್, ರಮೇಶ್‌ರಾವ್, ಭಾಸ್ಕರರಾವ್, ಪುರುಷೋತ್ತಮ ಅಡ್ವೆ, ಕೆ.ಲಕ್ಷ್ಮಣ ಭಟ್, ಶ್ರೀಮತಿ ರೇಖಾರಾವ್, ಪುಂಡೂರು ಶಂಕರನಾರಾಯಣ ಪುಣಿಂಚತ್ತಾಯ, ಪ್ರವೀಣ್ ಕುಮಾರ ಪುಣಿಂಚತ್ತಾಯ, ದಿ.ಕಟ್ಟಿಂಗೇರಿ ಕೃಷ್ಣಹೆಬ್ಬಾರ್, ಶ್ರೀಮತಿ ರಜನಿ ಪ್ರಸನ್ನ, ಸಂಪತ್‌ಕುಮಾರ್, ಗಂಜೀಫಾ ರಘುಪತಿಭಟ್ ಚಿತ್ರಕಲೆಯಲ್ಲಿ ಸಾಧನೆ ಮಾಡಿದ್ದಾರೆ.

7.2.1 ಶಿವಳ್ಳಿಯವರಲ್ಲಿ ಅವಧಾನಿಗಳು

ಅವಧಾನವೆಂದರೆ ಚಿತ್ತೈಕಾಗ್ರತೆ ಎಂದರ್ಥ. ಈ ಏಕಾಗ್ರತೆಯು ಯೋಗಿಗಳ ತುರೀಯ ವ್ಯವಸ್ಥೆಯಲ್ಲಿ ಪ್ರಕಟವಾಗುವಂತಹದು. ವೇದಾಧ್ಯಯನದ ಪದ, ಘನಕ್ರಮ, ಜಟೆ ಮುಂತಾದ ವಿಧಾನಗಳಲ್ಲಿ ಅವಧಾನಶಕ್ತಿ ನೆರವಿಗೆ ಬರುತ್ತದೆ. ದೇವಸ್ಥಾನಗಳಲ್ಲಿ ವಸಂತ ಮಂಟಪಕ್ಕೆ ದೇವರು ಬಂದು ಕುಳಿತಾಗ ಅವಧಾನ ಸೇವೆ ನಡೆಯುತ್ತದೆ. ಇಲ್ಲಿ ನಡೆಯುತ್ತಿದ್ದ ಪ್ರಾಚೀನ ವೇದಾವಧಾನವೇ ಅನಂತರದ ಕಾಲಘಟ್ಟದಲ್ಲಿ ಕಲಾರೂಪವನ್ನು ಪಡೆದಿರುವ ಸಾಧ್ಯತೆ ಇದೆ. ನಿಧಾನವಾಗಿ ಅದು ರಾಜಾಸ್ಥಾನ, ಪಂಡಿತ ಮಂಡಳಿಗೆ ವಿಸ್ತಾರಹೊಂದಿ ಚತುರ್ವಿದ ಕವಿತಾ ರೂಪದಲ್ಲಿ ಮೈತುಂಬಿ ಕೊಂಡಿರಬೇಕು. ಸಂಸ್ಕೃತ ಭಾಷೆಯಲ್ಲಿ ಆರಂಭಗೊಂಡ ಈ ಅವಧಾನ ವಿದ್ಯೆ ಅನಂತರ ದೇಶ ಭಾಷೆಗಳಲ್ಲಿ ಪ್ರವಹಿಸಿತು. ರತ್ನಾಕರ ವರ್ಣಿಯು ಅವಧಾನ ಕಥೆಯ ಉಲ್ಲೇಖ ಮಾಡಿದ್ದಾನೆ. ಅಶುಕಾವ್ಯ ನಿರ್ಮಿತೀಯ ವಿಶಾರದ ಕವಿಗಳ ಬಗ್ಗೆ ಕುಮಾರ ವ್ಯಾಸನು ಹೇಳಿದ್ದಾನೆ. ಕನ್ನಡ ನಾಡಿನಲ್ಲಿ ಅವಧಾನ ಕಲೆ ಹಲವು ಶತಮಾನಗಳ ಹಿಂದೆ ನಡೆದಿತ್ತೆಂದು ಭಾವಿಸಬಹುದು.

ಡಾ। ಕಬ್ಬಿನಾಲೆ ವಸನ್ತಭಾರದ್ವಾಜ

ಕನ್ನಡ ನಾಡಿನಲ್ಲಿ ಅವಧಾನ ವಿದ್ಯೆಯನ್ನು ಜನಪ್ರೀಯಗೊಳಿಸಿದ ಕೀರ್ತಿಗೆ ಪಾತ್ರರಾದವರು ಕಬ್ಬಿನಾಲೆ ವಸಂತ ಭಾರದ್ವಾಜರು. ಅವಧಾನ ಕಲೆಗೆ ಹೊಸಗನ್ನಡ ಸ್ಪರ್ಶನೀಡಿ ಸಾಂಗತ್ಯ ತ್ರಿಪದಿಗಳಂತಹ ಛಂದೋಬಂಧಗಳಲ್ಲಿ ಆಶು ಕಾವ್ಯಧಾರೆಯನ್ನು ಹರಿಸಿ, ಆಶುಕೀರ್ತನೆ, ಹಸ್ತಾಭಿನಯ ಮುಂತಾದ ವಿನೂತನ ವಿಭಾಗಗಳನ್ನು

ಸಂಯೋಜಿಸಿ ನಿರಂತರ ಪ್ರಯೋಗ ಶೀಲತೆಯನ್ನು ಮಾಡಿದ್ದಾರೆ. ತಮ್ಮ ಸ್ವೋಪಜ್ಞತೆಯಿಂದ ಸೃಷ್ಟಿಸಿದ ಯಕ್ಷಗಾನ ಅಷ್ಟಾವಧಾನ, ಯಕ್ಷಗಾನ ರಂಗದ ವಿಶಿಷ್ಟ ಶಾಸ್ತ್ರ ಪ್ರಯೋಗ, ಮೂಲೆ ಗುಂಪಾಗಿದ್ದ ಯಕ್ಷಗಾನ ಛಂದಸ್ಸು ಮತ್ತೆ ತನ್ನ ವೈಭವ ವಿಸ್ತಾರಗಳನ್ನು ಪ್ರದರ್ಶಿಸಿದೆ. ಇವರ ತುಳು ಅಷ್ಟಾವಧಾನ ಪ್ರದರ್ಶನ ಕೂಡ ಪ್ರಾಚೀನ ತುಳು ಕಾವ್ಯಗಳ ವಿಶೇಷತೆಯನ್ನು ಅನಾವರಣ ಗೈಯುವ ತುಳು ಸಂಸ್ಕೃತಿಯನ್ನು ಸಾಕ್ಷಾತ್ಕರಿಸುವ ವಿಶಿಷ್ಟ ಪ್ರಯೋಗ.

ಕಬ್ಬಿನಾಲೆ ಬಾಲಕೃಷ್ಣ ಭಾರದ್ವಾಜ

ಡಾ। ವಸಂತ ಭಾರದ್ವಾಜರ ಸಹೋದರರಾಗಿರುವ ಇವರು ಕಾರ್ಕಳ ತಾಲೂಕಿನ ಹೆಬ್ರಿ ಹತ್ತಿರದ ಕಬ್ಬಿನಾಲೆಯವರು.

ಮಂಗಳೂರಿನ ಶ್ರೀನಿವಾಸ ಪದವಿಪೂರ್ವ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರು. ನಾಡಿನಾದ್ಯಾಂತ ಅವಧಾನ ಪ್ರದರ್ಶನಗಳು ಜನಮಾನಸವನ್ನು ಸೂರೆಗೊಂಡಿದೆ. ಇತ್ತೀಚೆಗೆ ತುಳು ಭಾಷೆಯಲ್ಲೂ ಅವಧಾನಿಸುವ ಸಾಹಸ ತೋರಿದ್ದಾರೆ.

ಉಡುಪಿ ರಾಮಾನಾಥ ಆಚಾರ್ಯ

ರಾಮಾನಾಥ ಆಚಾರ್ಯರು ಸಂಸ್ಕೃತದಲ್ಲಿ ಎಂ.ಎ.ಬಿ.ಡ್ ಪದವೀಧರರು. ಉಡುಪಿಯ ಸಂಸ್ಕೃತ ಪಾಠಶಾಲೆಯಲ್ಲಿ ಸಂಸ್ಕೃತ ಅಧ್ಯಾಪಕರಾಗಿ ಹತ್ತು ವರ್ಷ ಅಧ್ಯಾಪನ. ಸಂಸ್ಕೃತ ಭಾಷೆಯಲ್ಲಿ ಅಷ್ಟಾವಧಾನ ಪ್ರದರ್ಶನ ನೀಡಿದ್ದಾರೆ.

ಸುಬ್ರಹ್ಮಣ್ಯ ಭಟ್

ಶ್ರೀ ಸುಬ್ರಹ್ಮಣ್ಯ ಭಟ್ಟರು ಸಂಸ್ಕೃತ ಮಹಾಪಾಠ ಶಾಲೆಯಿಂದ ವೇದಾಂತ ವಿದ್ವಾನ್ ಪದವಿ ಪಡೆದಿದ್ದಾರೆ. ಹತ್ತಾರುಕಡೆ ಅಷ್ಟಾವಧಾನ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಆಶು ಕವಿತೆಯಲ್ಲಿ ಸಿದ್ಧಹಸ್ತರು. ಸಂಸ್ಕೃತ ಹಾಗೂ ಕನ್ನಡ ಎರಡೂ ಭಾಷೆಗಳಲ್ಲಿ ಕವಿತಾ ರಚನಾ ಪ್ರವೀಣರು.

7.2.2 ಚಿತ್ರರಂಗಕ್ಕೆ ಶಿವಳ್ಳಿ ಬ್ರಾಹ್ಮಣರ ಕೊಡುಗೆ

ಎಲ್ಲಾ ವರ್ಗದ ಜನರ ಮನಸ್ಸನ್ನು ಸೂಜಿಕಲ್ಲಿನಂತೆ ಸೆಳೆಯುವ ಶಕ್ತಿ ಇರುವ ಕ್ಷೇತ್ರ ಚಲನ ಚಿತ್ರರಂಗ. ಒಳ್ಳೆಯ ಚಿತ್ರ ನಿರ್ಮಾಣದ ಮೂಲಕ ಸಮಾಜಕ್ಕೆ ಸಂದೇಶವನ್ನು ಕೊಡುವ ಸಾಮರ್ಥ್ಯ ಚಿತ್ರರಂಗಕ್ಕಿದೆ. ರಾಷ್ಟ್ರ, ರಾಜ್ಯ ಪ್ರಶಸ್ತಿಯನ್ನು ಗಳಿಸಿರುವ ನಟನಟಿಯರು ನಮ್ಮ ಚಲನಚಿತ್ರ ರಂಗದಲ್ಲಿದ್ದಾರೆ. ಹಲವು ನಟನಟಿಯರು ಚಿತ್ರ ರಸಿಕರ ಹೃದಯದಲ್ಲಿ ಸ್ಥಿರವಾಗಿ ನೆಲೆಸಿದ್ದಾರೆ. ಅಂತಹ ನಟನಟಿಯರಲ್ಲಿ ದಕ್ಷಿಣ ಕನ್ನಡದ ಶಿವಳ್ಳಿ ಬ್ರಾಹ್ಮಣರ ಪೈಕಿ ಹಲವರು ಅವಿಸ್ಮರಣೀಯರು.

ದಿ।ಪಿ.ಕೆ ಸೀತಾರಾಮ ರಾವ್ (1912–1988)

ಸುಮಾರು ಹದಿಮೂರು ಚಿತ್ರದಲ್ಲಿ ಅಭಿನಯಿಸಿದ ಇವರು, ಬಾಲ್ಯದಲ್ಲಿಯೇ ಸಂಗೀತಾಭ್ಯಾಸ ಮಾಡಿ, ವೀಣೆ, ವಯಲಿನ್, ಕೊಳಲು, ಹಾರ್ಮೋನಿಯಂ, ಮೌತ್‌ಆರ್ಗನಂತಹ ಪಂಚವಾದ್ಯ ಪ್ರವೀಣರು.

ತಾರಶಶಾಂಕ, ನಾರದ ವಿಜಯ, ಸತೀಸಾವಿತ್ರಿ, ಗರುಡಗರ್ವಭಂಗ, ಸತ್ಯ ಹರಿಶ್ಚಂದ್ರ ಮೊದಲಾದ ಚಿತ್ರಗಳೊಂದಿಗೆ 'ಸದಾರಮೆ' ಎಂಬ ಮೂಕ ಚಿತ್ರದಲ್ಲಿಯೂ ನಟಿಸಿದ್ದಾರೆ.

ದಿ। ಆರೂರು ಪಟ್ಟಾಭಿ

ಇವರ ಚಿತ್ರಗಳಿಗೆ ರಾಷ್ಟ್ರೀಯ ಪ್ರಶಸ್ತಿ ಬಂದಿದೆ. ಶುಕ್ರದೆಸೆ, ಭಕ್ತವಿಜಯ ಎಂಬ ಚಿತ್ರಗಳನ್ನು ಕನ್ನಡಕ್ಕೆ ನೀಡಿದ್ದಾರೆ. ಬೀಸತ್ತಿಬಾಬು, ಪಗೆತಪುಗೆ ಎಂಬೆರಡು ಚಿತ್ರಗಳನ್ನು ತುಳು ಭಾಷೆಯಲ್ಲಿ ನಿರ್ಮಿಸಿ ತುಳುನಾಡ ವೈಭವವನ್ನು ಹೆಚ್ಚಿಸಿದ್ದಾರೆ.

ಬಿ. ವಿಠಲ ಆಚಾರ್ಯ

ಕನ್ನಡ ಚಿತ್ರರಂಗದ ಪ್ರಾರಂಭದ ದಿನಗಳಲ್ಲಿ ಸೀಮಿತವಲಯವಿದ್ದರೂ ಉತ್ಸಾಹದಿಂದ ಹೊಸ ಬಗೆಯ ಹಲವು ಚಿತ್ರಗಳನ್ನು ನಿರ್ಮಿಸಿ ಕನ್ನಡ ಚಿತ್ರರಂಗದ ಚೈತನ್ಯಕ್ಕೆ ಕಾರಣ ಪುರುಷರು ಶ್ರೀ.ಬಿ.ವಿ. ಆಚಾರ್ಯರು. ಶಂಕರಸಿಂಗ್ ಜೊತೆಗೆ ಏಳು ಚಿತ್ರಗಳನ್ನು ರಚಿಸಿದ್ದು. ಜಗನ್ಮೋಹಿನೀ, ನಾಗಕನ್ನಿಕಾ, ಶ್ರೀಕೃಷ್ಣಲೀಲಾ ಇವು ಅದ್ಭುತ ಯಶಸ್ಸುಗಳಿಸಿವೆ. ಕನ್ಯಾದಾನ ಅವರಿಗೆ ಅಪಾರ ಕೀರ್ತಿತಂದಿರುವ ಚಿತ್ರ ಮುತ್ತೈದೆಭಾಗ್ಯ, ಮನೆತುಂಬಿದ ಹೆಣ್ಣು ಇತರ ಚಿತ್ರಗಳು. ಇವರ ಸ್ವತಃ ನಿರ್ದೇಶನದ ಚಿತ್ರ 'ವೀರಕೇಸರಿ'

ತೆಲುಗು ಚಿತ್ರಗಳನ್ನೂ ನಿರ್ಮಿಸಿ ದಿಗ್ದರ್ಶಿಸಿದ್ದಾರೆ.

ಪ್ರಸಿದ್ಧ ನಟನಟಿಯರಾದ ಹರಿಣಿ, ಲೀಲಾವತಿ, ವಾಣಿಶ್ರೀ, ಕೃಷ್ಣಾಕುಮಾರಿ, ವಿಜಯ ಲಲಿತಾ, ರಾಜ್‌ಕುಮಾರ್ ಮುಂತಾದ ಕಲಾವಿದರು ಇವರ ಗರಡಿಯಲ್ಲಿ ತಯಾರಾದವರು.

ದಿ। ವಾದಿರಾಜ

ಕನ್ನಡ, ತಮಿಳು,ತೆಲುಗು ತ್ರಿಭಾಷಾ ಚಿತ್ರರಂಗದಲ್ಲಿ ಹಾಸ್ಯನಟನಾಗಿ ಪ್ರಖ್ಯಾತರಾಗಿದ್ದರು.

ಕೋಕಿಲವಾಣಿ ಇವರ ಮೊತ್ತಮೊದಲ ಚಲನಚಿತ್ರ, ವೈರಮಾಲೆ, ಜೀವವಾಹಿನಿ ಇವರಿಗೆ ಯಶಸ್ಸನ್ನು ತಂದು ಕೊಟ್ಟ ಚಿತ್ರಗಳು. ನನ್ನ ಮಕ್ಕಳು, ಸೀತೆ, ನಾಮೆಚ್ಚಿದಹುಡುಗಿ ಮೊದಲಾದ ಚಿತ್ರಗಳನ್ನು ನಿರ್ಮಿಸಿದ್ದಾರೆ.

ಕೃಷ್ಣಗಾರುಡಿ, ಧರ್ಮವಿಜಯ ಚಲನ ಚಿತ್ರಗಳಲ್ಲಿ ಡಾ. ರಾಜಕುಮಾರ ಜೊತೆ ಅಭಿನಯಿಸಿದ್ದಾರೆ.

ಹರಿಣಿ:

ಜಗನ್ಮೋಹಿನಿ ಚಿತ್ರದಲ್ಲಿ ಮೋಹಿನಿಯಗಿ ಚಿತ್ರರಸಿಕರನ್ನು ಗಮನ ಸೆಳೆದವರು. ರತ್ನಮಂಜರಿ, ಕರುಣೆಯೇ ಕುಟುಂಬದ ಕಣ್ಣು ಇವರ ಪ್ರತಿಭೆಗೆ ಕನ್ನಡಿಯಾದ ಚಿತ್ರಗಳು.

ನಾಂದೀ, ನಂದಾ ದೀಪಗಳಲ್ಲಿ ಮುಗ್ಧ ಹುಡುಗಿಯಾಗಿ ಗಮನ ಸೆಳೆದರು. ಶ್ರೀನಿವಾಸ ಕಲ್ಯಾಣ, ದಲ್ಲಾಳಿ, ಮಂಗಳಗೌರಿ, ಕನ್ಯಾದಾನ, ಸೌಭಾಗ್ಯಲಕ್ಷ್ಮೀ, ಗಂಧರ್ವಕನ್ಯೆ ಮೊದಲಾದ ಚಿತ್ರಗಳಲ್ಲಿ ಅಭಿನಯಿಸಿ ಚಿತ್ರರಸಿಕರ ಮನಸೂರೆಗೊಂಡಿದ್ದಾರೆ.

ವಿನಯ ಪ್ರಸಾದ್

ಕನ್ನಡದ ಪ್ರತಿಭಾವಂತ ನಟಿ. ರಾಮಕೃಷ್ಣ ಹೆಗಡೆಯವರೊಂದಿಗೆ ಪ್ರಜಾಶಕ್ತಿಯಲ್ಲಿ ಅಭಿನಯಿಸಿದ ವಿನಯಾಪ್ರಕಾಶ 'ನೀನು ನಕ್ಕರೆ ಹಾಲು ಸಕ್ಕರೆ, ಆತಂಕ, ಯಾರಿಗೂ ಹೇಳ್ಬೇಡಿ, ಶ್ರೀರಾಮಪುರ ಪೊಲೀಸ್ ಸ್ಟೇಷನ್ ಮೊದಲಾದ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಇವರ ಮತ್ತು ಅನಂತನಾಗರ ಜೋಡಿಯ ಚಿತ್ರಗಳು ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ. ಮಲಯಾಳಂ ಧಾರಾವಾಹಿ 'ಸ್ತ್ರಿ'ಯಲ್ಲಿ ಅಭಿನಯಿಸಿ ಕೇರಳದಾದ್ಯಂತ ಖ್ಯಾತಿಯನ್ನು ಗಳಿಸಿದ್ದಾರೆ.

ಇವರುಗಳಲ್ಲದೆ ಚಿತ್ರಗಂಗಕ್ಕೆ ಅಮೂಲ್ಯಸೇವೆಯನ್ನು ಸಲ್ಲಿಸಿರುವ ಹಲವಾರು ನಿರ್ಮಾಪಕರು, ನಟನಟಿಯರು ನಮ್ಮ ಮುಂದೆ ನಿಲ್ಲತ್ತಾರೆ.

ಪಣಿಯಾಡಿ ವಾದಿರಾಜರ ಸಹೋದರ ಜವಾಹರ್, ಶ್ರೀಮತಿ ಬಲ್ಲಾಳ್, ಶ್ರೀಮತಿ ಕಿಶೋರಿ ಬಲ್ಲಾಳ, ಶ್ರೀಮತಿ ಕೃಷಮೂರ್ತಿ, ದಿ। ಲಕ್ಷ್ಮೀಭಟ್ ಮುಂತಾದವರು ಕಿರು ತೆರೆಯ ಪ್ರತಿಭಾನ್ವಿತರು.

ಉದ್ಯಾವರ ಮಾಧವಾಚಾರ್ಯ, ಪೆರ್ಡೂರಿನ ರಾಮಕೃಷ್ಣ ಕಲ್ಯಾಣಿ, ರತ್ನಾಕರ ಕಲ್ಯಾಣಿ ಮೊದಲಾದವರು ಚಿತ್ರರಂಗದಲ್ಲಿ ಮೆರೆದಿದ್ದಾರೆ.

7.2.3 ಹೋಟೇಲು ಉದ್ಯಮದಲ್ಲಿ ಶಿವಳ್ಳಿ ಬ್ರಾಹ್ಮಣರು

ಹಿಂದಿನ ಕಾಲದಲ್ಲಿ ಛತ್ರ, ಧರ್ಮಶಾಲೆ, ವಿಶ್ರಾಂತಿಗೃಹ, ಭೋಜನ ಶಾಲೆ ಇತ್ಯಾದಿಗಳು ಯಾತ್ರಾರ್ಥಿಗಳ ಸೌಕರ್ಯ ಮತ್ತು ಸತ್ಕಾರಕ್ಕೆ ಮೀಸಲಾಗಿದ್ದವು. ಅತಿಥಿಸತ್ಕಾರವು ಪುಣ್ಯದ ಕೆಲಸವೆಂದು ಜನರು ನಂಬಿದ್ದರು. ಪ್ರಯಾಣಿಕರ ಆಯಾಸ ಪರಿಹಾರಕ್ಕೆ ಮಜ್ಜಿಗೆ, ಪಾನಕ ಮತ್ತು ಭೋಜನವ್ಯವಸ್ಥೆಯ ಕೇಂದ್ರಗಳು ಪ್ರಮುಖ ರಸ್ತೆಗಳ ಬದಿಯಲ್ಲಿದ್ದು ಪ್ರಯಾಣಿಕರನ್ನು ಸ್ವಾಗತಿಸುತ್ತಿದ್ದವು.

ಸುಮಾರು ಹತ್ತೊಂಬತ್ತನೆಯ ಶತಮಾನದಲ್ಲಿ ಬ್ರಾಹ್ಮಣರಲ್ಲಿ ಕೆಲವರು ಅತಿಥಿಸತ್ಕಾರ ಮತ್ತು ಅನ್ನದಾನದ ಬದಲು ಅನ್ನ ವಿಕ್ರಯದಿಂದ ಜೀವನೋಪಾಯವನ್ನು ಮಾಡತೊಡಗಿದರು. ಈ ಉದ್ಯಮವನ್ನು ಆರಂಭದಲ್ಲಿ ಶಿಸ್ತು ಬದ್ದವಾಗಿ ಶುಚಿರುಚಿಯನ್ನು ಕಾಪಾಡಿ ಶ್ರೀಮಂತಗೊಳಿಸಿದ ಕೀರ್ತಿ ಶಿವಳ್ಳಿ ಬ್ರಾಹ್ಮಣರಿಗೆ ಸಲ್ಲಬೇಕು. ಅನ್ನಬ್ರಹ್ಮನ ಸ್ಥಳವಾದ ಉಡುಪಿಯ ಸಮೀಪದಲ್ಲಿರುವ ಶಿವಳ್ಳಿಬ್ರಾಹ್ಮಣರು ಈ ಕ್ಷೇತ್ರಕ್ಕೆ ಕಾಲಿಟ್ಟಿರುವುದರಿಂದ ಉಡುಪಿ ಶಿವಳ್ಳಿಬ್ರಾಹ್ಮಣರ ಹೋಟೆಲು ಜನಪ್ರಿಯವಾಯಿತು.

ಬಡತನದ ಕಾರಣದಿಂದ ಶಿವಳ್ಳಿ ಬ್ರಾಹ್ಮಣರು ಸ್ವಗ್ರಾಮವನ್ನು ತೊರೆದು, ಕೇರಳ, ಮದ್ರಾಸು, ಆಂದ್ರಪ್ರದೇಶಗಳಿಗೆ ಉದ್ಯೋಗ ನಿಮಿತ್ತವಾಗಿ ವಲಸೆ ಹೋದರು. ಕೇರಳಕ್ಕೆ ಹೋದ ಬ್ರಾಹ್ಮಣರು ದೇವಾಲಯಗಳನ್ನು ಆಶ್ರಯಿಸಿ ಅರ್ಚಕವೃತ್ತಿಯನ್ನು ನಡೆಸುತ್ತಿದ್ದರು. ಕೆಲವರು ಸಣ್ಣ ಪ್ರಮಾಣದಲ್ಲಿ ಹೋಟೇಲು ವ್ಯಾಪಾರಕ್ಕೆ ತಮ್ಮನ್ನು ತೊಡಗಿಸಿಕೊಂಡರು.

ಹೋಟೇಲು ಉದ್ಯಮವು ಲಾಭದಾಯಕ ಮಟ್ಟಕ್ಕೆ ಏರಿದ್ದರಿಂದ ಹೋಟೇಲು ಮಾಲಿಕರಮೇಲಿದ್ದ ಕೀಳರಿಮೆಯು ದೂರವಾಗಿ ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳಾದರು.

ದೇವಸ್ಥಾನದ ಜೀರ್ಣೋದ್ಧಾರ, ಅಷ್ಟ ಮಠದ ಸಂನ್ಯಾಸಿಗಳಿಗೆ ಉದಾರದಾನ, ಪರ್ಯಾಯದ ಸಮಯದಲ್ಲಿ ವಿಶಿಷ್ಟಸೇವೆ. ಹುಟ್ಟೂರಿನ ದೇವಾಲಯಗಳ ಜಾತ್ರೆಗಳಲ್ಲಿ ಅನ್ನ ಸಂತರ್ಪಣೆ, ಊರಲ್ಲಿ ಯಕ್ಷಗಾನ ಬಯಲಾಟ ಹರಕೆಯ ರೂಪದಲ್ಲಿ ಆಡಿಸುವುದು. ಭೂತಕೋಲಗಳನ್ನು ಮಾಡಿಸುವುದು. ವಿದ್ಯಾಸಂಸ್ಥೆಗಳಿಗೆ ಆಶ್ರಯ ಮುಂತಾದ ಸಮಾಜಮುಖಿ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಗೊಂಡು ಹೋಟೇಲು ಮಾಲಿಕರು ಗೌರವಕ್ಕೆ ಪಾತ್ರರಾದರು.

1945ನೇ ಇಸವಿಯು ಹೋಟೇಲು ಉದ್ದಿಮೆಯ ಪರ್ವಕಾಲ ಎರಡನೆಯ ಮಹಾಯುದ್ಧದ ಸಮಯದಲ್ಲಿ ದೇಶದಲ್ಲಿ ಉಂಟಾದ ಆಹಾರ ಧಾನ್ಯಗಳ ಅಭಾವದಿಂದ ರೇಶನ್‌ನಲ್ಲಿ ದೊರೆಯುವ ಆಹಾರ ಸಾಮಾಗ್ರಿಗಳು ಕಳಪೆ ಮಟ್ಟದಲ್ಲಿದ್ದುದರಿಂದ ಮತ್ತು ಜನರಿಗೆ ಅವಶ್ಯಕತೆಗೆ ಬೇಕಾದಷ್ಟು ಸಿಕ್ಕದೆ ಇದ್ದುದರಿಂದ ಹೊಟ್ಟೆ ಪಾಡಿಗೆ ಹೋಟೆಲುಗಳನ್ನು ಅವಲಂಬಿಸಬೇಕಾಯಿತು. ಮುಂದೆ ಸರಕಾರದ ಪ್ರೋತ್ಸಾಹವು ದೊರೆಯಿತು.

ಕೀಳೆಂದು ಭಾವಿಸಿದ್ದ ಹೋಟೇಲು ಉದ್ಯಮವು ಮುಂದೆ ಗೌರವಕ್ಕೆ ಪಾತ್ರವಾಯಿತು. ಪ್ರಾರಂಭದಲ್ಲಿ ಹೋಟೆಲುಗಳಲ್ಲಿ ದುಡಿಯುತ್ತಿದ್ದವರು ಮುಂದೆ ಅವರೇ ಹೋಟೇಲುಗಳನ್ನು ನಡೆಸಿದ ನಿದರ್ಶನಗಳಿವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಿವಳ್ಳಿಯವರ ಹೋಟೇಲುಗಳು

1. ಆನಂದ ಭವನ ಪಲಿಮಾರು : ಸುಮಾರು 75ವರ್ಷಗಳಿಂದ ವ್ಯಾಪಾರ ನಡೆಯುತ್ತಿದೆ.

2. ಕೃಷ್ಣಭವನ ಮಂಗಳೂರು : ಸುಮಾರು 90 ವರ್ಷಗಳ ಇತಿಹಾಸ ದಿ।ಬಾಬು ರಾಯರು ಪ್ರಾರಂಭಿಸಿದ್ದು ಈಗಲೂ ಅಸ್ತಿತ್ವದಲ್ಲಿದೆ.

3. ರಾಮ ವಿಲಾಸ, ಕೈಕಂಬ : 75ವರ್ಷಗಳಿಂದ ರಾಮರಾಯರು ವ್ಯಾಪಾರ ನಡೆಸುತ್ತಾ ಬಂದಿದ್ದರು.

4. ದುರ್ಗಾಭವನ ಮೂಲ್ಕಿ : 90ವರ್ಷಗಳ ಇತಿಹಾಸ, ಮಾನಂಪಾಡಿ ರಾಮಕೃಷ್ಣಭಟ್‌ಇದನ್ನು ಪ್ರಾರಂಭಿಸಿದರು.

5. ಮೋಡರ್ನ್‌ಕೆಫೆ ಹಂಪನ್‌ಕಟ್ಟೆ ಮಂಗಳೂರು: ಎಲ್ಲೂರು ನಾರಾಯಣ ಆಚಾರ್ಯರು ಇದರ ಮಾಲಿಕರಾಗಿದ್ದರು.

6. ಇಂದ್ರ ಭವನ ಮಂಗಳೂರು : ರಘುರಾಮ ಉಡುಪರು ಈ ಹೋಟೇಲಿನ ಸ್ಥಾಪಕರು

7. ದುರ್ಗಾಭವನ ಕಟೀಲು : ತಮ್ಮ ಭಟ್ಟರು ಮಾಲಿಕರಾಗಿದ್ದರು

8. ವಿಶ್ವ ಭವನ

9. ಗಾಂಧಿ ಹೋಟೇಲು ಉಡುಪಿ

10. ಕೊದಂಟಿ ಚಂದ್ರಣ್ಣನವರ ಹೋಟೇಲು ಪಡುಬಿದ್ರೆ

11. ಬಬ್ಬರ್ಯ ಹೋಟೇಲು ಉಡುಪಿ

ದಕ್ಷಿಣ ಕನ್ನಡದಿಂದ ಹೊರನಾಡಿಗೆ ಹೋಗಿ ಹೋಟೇಲು ಉದ್ಯಮವನ್ನು ಪ್ರಥಮವಾಗಿ ಆರಂಭಿಸಿದವರು.

1. 1930ರಲ್ಲಿ ತಿರುನಲ್ವೇಲಿಯಲ್ಲಿ ಪುರುಷೋತ್ತಮ ಆಚಾರ್ಯರು

'ಆಂಜನೇಯ ವಿಲಾಸ' ಎಂಬ ಹೋಟೆಲನ್ನು ಪ್ರಾರಂಭಿಸಿದರು.

2. 1935ರಲ್ಲಿ ಅನಂತಶಯನದಲ್ಲಿ ವಾಪಕ, ಅನಂತರಾವ್ ಹೆಜಮಾಡಿ ಹೋಟೆಲು, ವಾಪಕ ಮಧ್ವರಾಯನ್ ಪೋತಿಯವರ ಗಜಮುಖ ವಿಲಾಸ ಕಾಫಿ ಹೋಟೇಲು.

3. 1935ರಲ್ಲಿ ವಿರುದು ನಗರದಲ್ಲಿ ತೋಕುರು ಸುಬ್ಬರಾಯರ 'ಧನಲಕ್ಷ್ಮೀವಿಲಾಸ' ಹೋಟೇಲು.

4. 1928ರಲ್ಲಿ ಆಲೆಪ್ಪಿಯ ಬೋಟುಚೆಟ್ಟಿಯಲ್ಲಿ ಪಾದೆಬೆಟ್ಟು ವಾಸುದೇವರಾಯರಿಂದ 'ಶ್ರೀಕೃಷ್ಣವಿಲಾಸ' ಮತ್ತು 1930ರಲ್ಲಿ ಅನಂತ ಉಡುಪ ಮತ್ತು ನಾರಾಯಣ ಉಡುಪರಿಂದ 'ಶ್ರೀನಿವಾಸ ಮಂದಿರ' ಹೋಟೇಲು.

5. 1930ರಲ್ಲಿ ಮಧುರೆಯಲ್ಲಿ ಎಲ್ಲೂರು ನರಸಿಂಗರಾಯರ ಉಡುಪಿ ಹೋಟೇಲು.

6. 1940ರಲ್ಲಿ ವಿಜಯವಾಡದಲ್ಲಿ ಎಚ್.ಟಿ. ವಾಸುದೇವರಾಯರ ಶ್ರೀಕೃಷ್ಣ ವಿಲಾಸ ಹೋಟೇಲು.

7. 1940ರಲ್ಲಿ ಮಛಲೀಪಟ್ಟಣದಲ್ಲಿ ವಾಪಕ ಗೋವಿಂದರಾಯರ 'ರಾಧಾಕೃಷ್ಣ ವಿಲಾಸ' ಹೋಟೇಲು.

8. 1912ರಲ್ಲಿ ಮುಂಬಯಿಯಲ್ಲಿ ಕಾಣೇಮಾರು ವೆಂಕಪ್ಪಯ್ಯನವರು ವೆಲ್‌ಕಂ ಹೋಟೇಲು ಸ್ಥಾಪನೆ.

9. ಮಾಟುಂಗದಲ್ಲಿ ರಾಘವೇಂದ್ರರಾಯ ಅಂಬಾ ಭವನ ಹೋಟೇಲು.

10. ಶ್ರೀನಿವಾಸ ಹೆಬ್ಬಾರ್ ಮತ್ತು ಕೆ.ಎಸ್.ಎನ್ ಹೆಬ್ಬಾರರಿಂದ ಮೋಡರ್ನ್ ಹಿಂದೂ ಹೋಟೇಲು.

11. ಎರ್ನಾಕುಲಂನಲ್ಲಿ 60ವರ್ಷ ಹಳೆಯದಾದ ಉಡ್‌ಲ್ಯಾಂಡ್ ಹೋಟೇಲು ರಾಮಕೃಷ್ಣ ಪೋತಿ ಇದರ ಮಾಲಿಕರು.

12. 65ವರ್ಷಗಳ ಇತಿಹಾಸವಿರುವ ಬಿ.ಗೋವಿಂದರಾಯರ ಭಾರತ್ ಕಾಫಿ ಹೌಸ್ ಮತ್ತು ಭಾರತ್ ಟೂರಿಸ್ಟ್ ಹೋಮ್.

13. ನರಸಿಂಹ ಪೋತಿಯವರ 'ಗಾಂಧಿ' ಹೋಟೇಲು

14. ತ್ರಿಶೂರಿನಲ್ಲಿ 70ವರ್ಷಗಳ ಹಿಂದೆ ರಾಜಗೋಪಾಲ ಪೋತಿಯವರ ಉಡುಪಿ ಕೃಷ್ಣ ಭವನ ಮತ್ತು ಎರ್ಮಾಳು ಪೂರ್ಣಯ್ಯನವರ ಪೂರ್ಣಿಮಾ ಹೋಟೇಲು.

15. ಹೈದರಾಬಾದ್‌ನಲ್ಲಿ ಮಲಂಗುಳಿ (ಎಲ್ಲೂರು) ಬಾಬು ರಾಯರಿಂದ ಅಂಬಾಭವನ ಈಗ ತಾಜ್‌ಮಹಲ್ ಗ್ರೂಫ್ ಆಪ್ ಹೋಟೆಲ್ಸ್ ಆಗಿ ಬೆಳೆದಿದೆ.

16. 1930ರಲ್ಲಿ ರಾಮನಾಥಂ ಜಿಲ್ಲೆಯ ತಾತೂರಿನಲ್ಲಿ ಹೆಜಮಾಡಿ ನಾರಾಯಣ ರಾಯರಿಂದ ಮಣಿಶಂಕರ ಭವನ

17. 60ವರ್ಷಗಳ ಹಿಂದೆ ತೂತುಕುಡಿಯಲ್ಲಿ ಎಸ್.ಎಸ್.ಪೋತಿಯವರಿಂದ ಹೋಟೇಲು ಪ್ರಾರಂಭ.

18. ಕುರ್ತಾಲಂ, ಪಾವಂಜೆಯ ಶಿವಳ್ಳಿ ಮನೆತನದವರು ಪ್ರಥಮ ಆರಂಭಿಸಿದ ಹೋಟೇಲು.

19. ಹುಬ್ಬಳ್ಳಿ, ಕೆಮ್ತೂರು ಗುರುರಾಜ ಭಟ್ಟರ ದುರ್ಗಾವಿಲಾಸ ಮತ್ತು ಅಜಂತಾ. ಉಚ್ಚಿಲ ಅನಂತ ಭಟ್ಟರ ಹೋಟೇಲ್ ಅಶೋಕ.

20. ಚೆನ್ನೈ–1930ರಲ್ಲಿ ಚೆನ್ನೈಯಲ್ಲಿ ಕಡಂದಲೆ ಕೃಷ್ಣಭಟರ ವುಡ್‌ಲ್ಯಾಂಡ್ಸ್ ಹೋಟೇಲು.

21. 1930ರಲ್ಲಿ ಕುತ್ತೆತ್ತೂರು ಸೀತಾರಾಮ ಆಚಾರ್ಯರ ಮೋರ್ಡನ್ ಹೋಟೇಲು.

22. 1934ರಲ್ಲಿ ದಾಸಪ್ರಕಾಶ ಹೋಟೇಲು

23. ದೆಹಲಿಯ ಕನೆಟ್ ಸರ್ಕಲ್ಸ್‌ನಲ್ಲಿರುವ ಪ್ರಿಯವದನರಾಯರ ಮದ್ರಾಸ್‌ಕೆಫೆ.

24. 1928ರಲ್ಲಿ ಮೈಸೂರಿನಲ್ಲಿ ಕುತ್ತೆತ್ತೂರು ಗುರುರಾಜಆಚಾರ್ಯರ ಮೋರ್ಡರ್ನ್ ಹೋಟೇಲು.

25. ಬೆಂಗಳೂರಿನ ಕೆಂಪೇಗೌಡ ವೃತ್ತದಲ್ಲಿರುವ ರಾಮನಾಥ ಭಟ್‌ರವರ ಹರೇರಾಮ, ವಾದಿರಾಜಭಟ್ಟರ ಟೂರಿಸ್ಟ್, ಪ್ರಭಾಕರರಾಯರ ಶೀತಲ್, ಅನಂತ ಪದ್ಮನಾಭ ಬಲ್ಲಾಳರ ಸ್ವಾತಿ, ಅದ್ಯಪಾಡಿ ರಾಮಕೃಷ್ಣರಾಯರ ವೃಂದಾವನ, ಪಿ. ಜಯರಾಮ ಬಾಗಿಲ್ತಾಯರ ಅಂಜತಾ ಹೋಟೇಲುಗಳು.

26. ವಿಜಾಪುರದಲ್ಲಿ ಗುರುರಾಜ ಉಡುಪರ ಗಣೇಶ್ ಹೋಟೇಲ್.

27. ಬೆಳಗಾಂನಲ್ಲಿ 1930ರಲ್ಲಿ ಚೊಕ್ಕಾಡಿ ಶ್ರೀನಿವಾಸ ಆಚಾರ್ಯ ಕೃಷ್ಣಹೋಟೇಲ್

28. ಮಹಾರಾಷ್ಟ್ರದ ಮೀರಜ್‌ನಲ್ಲಿ ಸುಖನಿವಾಸ

29. ಕುವೈಟ್‌ನಲ್ಲಿ ವೆಂಕಟರಮಣ ಭಟ್ಟರ ಉಡುಪಿ ರೆಸ್ಟೋರೆಂಟ್.

30. ದುಬಾಯಿಯಲ್ಲಿ ಗೋವಿಂದ ಭಟ್ಟರು ಹೋಟೇಲ್ ಸಂಗೀತ.

31. ಸಿಂಗಾಪುರದಲ್ಲಿ ಮುರಳೀಧರ ಉಪಾಧ್ಯಾಯರ ಹೋಟೇಲ್ ಉಡ್‌ಲ್ಯಾಂಡ್ಸ್.

32. ಯು.ಎಸ್.ಎಯಲ್ಲಿ ಕೃಷ್ಣ ಭಟ್ಟರ ಹೋಟೇಲ್ ಉಡ್‌ಲ್ಯಾಂಡ್ಸ್.

ಬಡತನ ಮತ್ತು ಹೊಟ್ಟೆಪಾಡಿಗಾಗಿ ಪ್ರಾರಂಭದಲ್ಲಿ ಹೋಟೇಲು ಉದ್ಯಮವನ್ನು ಹಲವರ ವಿರೋಧದ ನಡುವೆಯೂ ಪ್ರಾರಂಭಿಸಿ ಹಣ ಸಂಪಾದಿಸಿ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಕೈಲಾದಷ್ಟು ಸಹಾಯ ಮಾಡುತ್ತಿರುವುದರಿಂದ ಈಗ ಇವರಿಗೆ ವಿಶೇಷವಾದ ಗೌರವಗಳು ಸಿಗುತ್ತಿದೆ. ಭೂಮಸೂದೆ ಕಾಯಿದೆಯಿಂದ ಮಠಮಂದಿರಗಳು ಭೂ ಕಳೆದುಕೊಂಡಾಗ ಆದಾಯ ಕಡಿಮೆಯಾದಾಗ ಅವರನ್ನು ರಕ್ಷಿಸಿದವರು ಹೋಟೇಲ್ ಉದ್ಯಮಿಗಳು. ಶಿವಳ್ಳಿ ಬ್ರಾಹ್ಮಣರು ಅಡುಗೆಯಲ್ಲಿ ನಿಷ್ಣಾತರಾದುದರಿಂದ ಅವರು ನಡೆಸುವ ಹೋಟೇಲುಗಳು ಜನಾದರಣೆ ಮತ್ತು ಜನಾಕರ್ಷಣೆಯನ್ನು ಹೊಂದಿದೆ.

7.2.4 ನ್ಯಾಯಾಂಗದಲ್ಲಿ ಶಿವಳ್ಳಿಯವರು

1. **ದಿ। ಪದ್ಮನಾಭ ಕಕ್ಕಿಲ್ಲಾಯ** ಕೇರಳದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ಸೇವೆಸಲ್ಲಿಸಿ, ತಿರುವಾಂಕೂರಿನ ಮಹಾರಾಜರ ಆಪ್ತ ಕಾರ್ಯದರ್ಶಿಯಾಗಿ ನಿವೃತ್ತಿ ಹೊಂದಿದ್ದರು.

2. **ಕೆ.ಪಿ. ಸುಬ್ರಹ್ಮಣ್ಯ ಪೋತಿ** ಗುಜರಾತ್ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನಿವೃತ್ತಿ ಹೊಂದಿದ್ದರು.

3. **ವ್ಯಾಸಂ ಪೋತಿ** ಕೇರಳದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನಿವೃತ್ತಿ ಹೊಂದಿದ್ದರು.

4. **ವೆಂಕಟರಮಣ ಕಕ್ಕಿಲ್ಲಾಯ** ಕೇರಳದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನಿವೃತ್ತಿ ಹೊಂದಿದ್ದರು.

5. **ಬಿ.ವಿ. ಆಚಾರ್ಯ** ಕರ್ನಾಟಕದ ಎಡ್ವೋಕೇಟ್ ಜನರಲ್ ಆಗಿ ನಿವೃತ್ತಿ ಹೊಂದಿದ್ದರು.

6. **ಯು.ಎಲ್. ಭಟ್** ಕೇರಳದ ನ್ಯಾಯಾಧೀಶರಾಗಿ ನಿವೃತ್ತಿ ಹೊಂದಿದ್ದರು.

7. **ಎಸ್. ನಾರಾಯಣಮೂರ್ತಿ** 1975 ರಲ್ಲಿ ಜಿಲ್ಲಾ ಸತ್ರಾ ನ್ಯಾಯಾಧೀಶರಾಗಿ ನಿವೃತ್ತಿ ಹೊಂದಿದ್ದರು. ಕಾನೂನಿನ ಕ್ಲಿಷ್ಟವಾದ ಸಮಸ್ಯೆಗಳನ್ನು ಓದುಗರಿಗೆ ಮನದಟ್ಟಾಗುವಂತೆ ಸುಲಭ ಶೈಲಿಯಲ್ಲಿ ಬರೆದು ಜನ ಸಾಮಾನ್ಯರಿಗೆ ಅರ್ಥವಾಗುವಂತೆ ಪುಸ್ತಕ/ಲೇಖನಗಳನ್ನು ಬರೆದಿದ್ದಾರೆ.

8. **ನ್ಯಾಯವಾದಿ ಪಡುಬಿದ್ರೆ ರಾಘವೇಂದ್ರ ರಾವ್** ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ನ್ಯಾಯವಾದಿಯಾಗಿ ಜನಪ್ರಿಯರು. Karnataka State Commission of Jurists ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

7.2.5 ಯಕ್ಷಗಾನದಲ್ಲಿ ಶಿವಳ್ಳಿ ಬ್ರಾಹ್ಮಣರು

ಕರಾವಳಿ ಕರ್ನಾಟಕದ ಗಂಡುಕಲೆ 'ಯಕ್ಷಗಾನ ಬಯಲಾಟ'. ಈ ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಎಲ್ಲಾ ವರ್ಗದ ಜನರೊಂದಿಗೆ ಶಿವಳ್ಳಿ ಬ್ರಾಹ್ಮಣರೂ ಕೈ ಜೋಡಿಸಿದ್ದಾರೆ. ಮೇಳಗಳನ್ನು ಕಟ್ಟಿ ಪ್ರಸಂಗಗಳನ್ನು ಬರೆದು, ಭಾಗವತರಾಗಿ, ಹಿಮ್ಮೇಳವಾದಕರಾಗಿ ವೇಷಧಾರಿಗಳಾಗಿ ಮೆರೆದವರು ಹಲವರಿದ್ದಾರೆ.

ಶಿವಳ್ಳಿಬ್ರಾಹ್ಮಣರಲ್ಲಿ ಹೆಚ್ಚಿನವರು ಕಳೆದ ಶತಮಾನದ ಆದಿಭಾಗದವರೆಗೆ ಯಕ್ಷಗಾನದಿಂದ ದೂರ ಉಳಿದವರೇ ಹೆಚ್ಚು. ಆಟನೊಡುವುದು ಕೂಡ ಮೈಲಿಗೆಯೆಂಬ ಭಾವನೆ ಅವರಲ್ಲಿತ್ತು. ಕಾಲಸರಿದಂತೆ ತಾಳಮದ್ದಲೆ ಮತ್ತು ಬಯಲಾಟದ ಮೇಳಗಳಲ್ಲಿ ಸೇರಿಕೊಂಡರು ಪ್ರಾರಂಭದಲ್ಲಿ ಪ್ರಸಂಗ ಕರ್ತರಾಗಿ, ಭಾಗವತರಾಗಿ ರಂಗವನ್ನು ಪ್ರವೇಶಿಸಿದ ಶಿವಳ್ಳಿ ಬ್ರಾಹ್ಮಣರು ವೇಷಧಾರಿಗಳಾಗಿಮೆರೆದಿದ್ದಾರೆ. ಎಡನೀರು ಮಠದಶ್ರೀಶ್ರೀ ಕೇಶವಾನಂದಭಾರತಿಸ್ವಾಮಿಗಳು ಭಾಗವತರಾಗಿ ಪ್ರಖ್ಯಾತಿಯನ್ನು ಪಡೆದಿದ್ದರೆ, ದಿ.ದಾಮೋದರ ಮಂಡೆಚ್ಚರು ಭಾಗವತಿಕೆಯಲ್ಲಿ ಸಿದ್ಧಿಯನ್ನುಗಳಿಸಿದ್ದರು ದಿ.ಕೊಕ್ಕಡ ಸುಬ್ರಾಯರು ಭಾಗವತಿಕೆಗೆ ಹೊಸ ಆಯಾಮನ್ನು ನೀಡಿದ್ದಾರೆ. ಕುಬಣೂರು ಶ್ರೀಧರರಾಯರು, ಗಾನಕೋಗಿಲೆ ಬಿರುದಾಂಕಿತ ಭಾಗವತ ದಿನೇಶಅಮ್ಮಣ್ಣಾಯ, ತೆಂಕು-ಬಡಗು ತಿಟ್ಟುಗಳಲ್ಲಿ ಹಾಡಬಲ್ಲ ನಾರಾಯಣ ಶಬರಾಯರು ಜಿಲ್ಲೆಯ ಪ್ರಸಿದ್ಧ ಮತ್ತು ಬೇಡಿಕೆಯ ಭಾಗವತರು. ಪುಂಡೂರಿನ ನರ್ಮದಾ ಪುರುಷೊತ್ತಮ ಇವರು ಮೊತ್ತಮೊದಲ ಮಹಿಳಾ ಭಾಗವತರು. ಶ್ರೀಮತಿ ಲೀಲಾವತಿ ಬೈಪಾಡಿತ್ತಾಯರು ಮೇಳ ತಿರುಗಾಟ ಮಾಡಿದ ಮಹಿಳಾ ಭಾಗವತರು. ಧರ್ಮಸ್ಥಳದ ಜಯರಾಮ ಕುದ್ರೆತ್ತಾಯ, ಮೋಹನ ಬೈಪಾಡಿತ್ತಾಯ, ರಮಾನಂದರಾಯರು, ಪುಂಡೂರಿನ ವಾಮದೇವ ಪುಣಂಚತ್ತಾಯ, ಮಧೂರಿನ ವೆಂಕಟಕೃಷ್ಣ, ಕಳುವಾರು ರಘುಪತಿಭಟ್ಟ, ಕೊಕ್ಕಡ ಉಪ್ಪಾರುಗುತ್ತು ವೆಂಕಟೇಶಬಾಳ್ತಿಲ್ಲಾಯ, ದಿ।ರಾಘವೇಂದ್ರ ತೋಳ್ಪಡಿತ್ತಾಯ, ದಿ।ಮುಚ್ಚೂರು ನಾರಾಯಣ ಭಟ್ಟ, ದಿ।ರಾಘವೇಂದ್ರ ತೊಳ್ಪಾಡಿತ್ತಾಯ, ಪಡುಬಿದ್ರೆ ಕೊಳಂಬೆ ಪ್ರಭಾಕರರಾಯ, ಅಡೂರಿನ ಕುಂಞಮಾಣಿ ಕಲ್ಲೂರಾಯರು, ಕಟೀಲಿನ ಪು. ಶ್ರೀನಿವಾಸ ಭಟ್ಟ, ಇವರೆಲ್ಲರೂ ಭಾಗವತರಾಗಿ ಯಕ್ಷಗಾನ ಕಲಾಮಾತೆಯ ಸೇವೆಯನ್ನು ಮಾಡಿದವರು.

ಹಿಮ್ಮೇಳನವಾದನದಲ್ಲೂ ಹರಿನಾರಾಯಣ ಬೈಪಾಡಿತ್ತಾಯ, ಕೇಶವ ಬೈಪಾಡಿತ್ತಾಯ, ಪದ್ಮನಾಭ ಉಪಾಧ್ಯಾಯ, ಅಡೂರಿನ ಮೋಹನಶರಳಾಯ, ಲಕ್ಷ್ಮೀಶ ಅಮ್ಮಣ್ಣಾಯ, ಧರ್ಮಸ್ಥಳದ ಜನಾರ್ದನ ತೋಳ್ಪಾಡಿತ್ತಾಯ, ಸೀತಾರಾಮ ತೋಳ್ಪಾಡಿತ್ತಾಯ, ಮುಂಡ್ರುಪಾಡಿ ಶ್ರೀಧರರಾಯ, ಕಟೀಲು ವಿಶ್ವೇಶ್ವರರಾಯ, ಮುರಳೀಧರ ಭಟ್ಟ, ಲಕ್ಷ್ಮೀನಾರಾಯಣ ಭಟ್ಟ, ಮಧೂರು ಬಾಲಚಂದ್ರ ಕಲ್ಲೂರಾಯ, ವಾಸುದೇವ ಕಲ್ಲೂರಾಯ, ಲಕ್ಷ್ಮೀನಾರಾಯಣ ಶರ್ಮ, ಮುರಲೀಮಾಧವ, ಎಂ.ನಟರಾಜ ಕಲ್ಲೂರಾಯ, ಕೃಷ್ಣಮೂರ್ತಿ ಕಲ್ಲೂರಾಯ, ಪುಂಡೂರು ಗೋಪಾಲಕೃಷ್ಣ, ಪುಣಿಂಚತ್ತಾಯ, ರಾಮಕೃಷ್ಣ ಕುಣಿಕುಳ್ಳಾಯ ಉಡುಪಿಯ ರಾಘವೇಂದ್ರ ಪಾಂಗಣ್ಣಾಯ,

ರಾಮಚಂದ್ರ ಪಾಂಗಣ್ಣಾಯ, ಕೃಷ್ಣ ಮೂರ್ತಿ ಪಾಂಗಣ್ಣಾಯ, ಜಯಪ್ರಕಾಶ ನಿಡ್ವಣ್ಣಾಯ, ಜೋಗಟ್ಟೆ–ಜಯಾನಂದರಾಯ, ದಿ। ಬೆಳ್ಮಣ್ಣು ಹರಿದಾಸ ಉಡುಪ ಮುಂತಾದವರು ಸಮರ್ಥ ಹಿಮ್ಮೇಳನ ವಾದಕರಾಗಿದ್ದರು.

ಬಯಲಾಟದ ವೇಷ, ತಾಳಮದ್ದಲೆ ಕೂಟ ಮತ್ತು ಹರಿಕಥೆಗಳಲ್ಲಿ ದಿ। ಮಲ್ಪೆ ಶಂಕರನಾರಾಯಣ ಸಾಮಗ, ರಾಮದಾಸ ಸಾಮಗ, ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ವಾಸುದೇವ ಸಾಮಗ ಮುಂತಾದವರು ಪ್ರಖ್ಯಾತರು.

ದಿ। ನಿಡ್ಲೊಡಿ ಅನಂತ ಉಪಾಧ್ಯಾಯ, ಕುಬಣೂರು ಬಾಲಕೃಷ್ಣರಾವ್, ಬಪ್ಪನಾಡು ಗೋಪಾಲಕೃಷ್ಣ ಭಟ್ಟರು ಹಳೆಯ ತಲೆಮಾರಿನ ಅರ್ಥದಾರಿಗಳು.ಕುಬೇವೂರು ಸುಬ್ಬರಾವ್,ಕತ್ತಲಸಾರು ಪುಂಡರೀಕಾಕ್ಷಶಬರಾಯ, ಬಾಳರಮಾನಾಥರಾವ್, ಅಜಾರು ಲಕ್ಷ್ಮೀನಾರಾಯಣ ರಾವ್, ಸುಬ್ರಾಯ ಪುಣಿಂಚತ್ತಾಯ, ರಾಮಕೃಷ್ಣ ಪುಣಿಂಚತ್ತಾಯ, ಪರಮೇಶ್ವರ ಬಳ್ಳಕ್ಕುರಾಯ, ಬಿ.ಶಂಕರನಾರಾಯಣ ಓಕುಣ್ಣಾಯ, ಮಾಲೆಂಕಿ ಶಂಕರ ಕಡಂಬಳಿತ್ತಾಯ, ಶ್ರೀಪತಿ ಕಡಂಬಳಿತ್ತಾಯ, ಪಂಬೆತಡ್ಕಶ್ರೀನಿವಾಸ ಕಡಂಬಳಿತ್ತಾಯ ಸಿರಿಬಾಗಿಲು, ಸುಬ್ರಾಯ ನಿಡುವಣ್ಣಾಯ, ರಾಮಚಂದ್ರ ಅಲೆವೂರಾಯ, ಕೇಶವ ಅಲೆವೂರಾಯ, ಅಡೂರು ಸೂರ್ಯನರಾಯಣಕಲ್ಲೂರಾಯ, ಬೈಲಂಗಡಿ ದಾಮೋದರ ಅಗ್ಗಿತ್ತಾಯ, ಮಧೂರು ವೆಂಕಟಕೃಷ್ಣಕೇಕುಣ್ಣಾಯ, ಮಧೂರು ಮೋಹನಕಲ್ಲೂರಾಯ, ಎಂಕಣ್ಣಮೂಲೆ ಕೃಷ್ಣ ಮನೊಳಿತ್ತಾಯ, ಬೊಳುವರು ನಾರಾಯಣಭಟ್ಟ, ಪುತ್ತೂರು ಬಿ. ಪುರಂದರ ಭಟ್ಟ, ಮಧೂರು ಕೆ. ವಿಷ್ಣುಭಟ್ಟ, ಕೂಡ್ಲು ಸತ್ಯನಾರಾಯಣತಂತ್ರಿ, ದೇಲಂಪಾಡಿ ಸುಬ್ರಾಯತಂತ್ರಿ, ನಿಡ್ಲೋಡಿ ಶ್ರೀಧರ ಉಡುಪ ಮೊದಲಾದವರು ಅರ್ಥದಾರಿಗಳಾಗಿ ಪ್ರಸಿದ್ದರು.

ವೇಷದಾರಿಗಳಾಗಿ ಉಡುಪಿ ಪುಂಡರೀಕಾಕ್ಷಉಪಾಧ್ಯಾಯ, ರವಿ ಅಲೆವೂರಾಯ, ಲಕ್ಷ್ಮೀ ನಾರಾಯಣ ಕುಂಡಂತಾಯ, ಕಬಿನಾಲೆ ವಸನ್ತ ಭಾರದ್ವಾಜ, ಚಿತ್ರಾಪುರ ಸುಬ್ರಹ್ಮಣ್ಯ ಭಟ್ಟ, ದಿ। ಮಚ್ಚಾರು ವೆಂಕಟೇಶಉಡುಪ, ಮುಡಾರು ಶ್ರೀಧರ ಭಟ್ಟ, ಸತ್ಯಾನಂದರಾವ್ ಪೇಜಾವರ, ರಾಘವೇಂದ್ರ ಆಸ್ರಣ್ಣ ಹೊಸಂಗಡಿ, ಸುಬ್ರಹ್ಮಣ್ಯ ಬೈಪಾಡಿತ್ತಾಯ, ಮಧೂರು ಸುರೇಶಕಲ್ಲೂರಾಯ, ಉದಯ ಕುಮಾರ ಕಲ್ಲೂರಾಯ, ಇರುವೈಲು ಪ್ರಕಾಶಪೆಜತ್ತಾಯ, ಪ್ರಜ್ವಲಪೆಜತ್ತಾಯ, ಕೊಳಂಬೆ ದಿ। ರಘುವೀರರಾವ್, ಗಣೇಶರಾವ್, ಪಾವಂಜೆ ಶಿವರಾಮಭಟ್ಟ, ಡಾ। ಬಾಸ್ಕರಾನಂದಕುಮಾರ್, ನಂದಳಿಕೆ ಸುಬ್ರಹ್ಮಣ್ಯ ಬೈಪಾಡಿತ್ತಾಯ ಇವರೆಲ್ಲ ಚಿರಪರಿತರಾಗಿದ್ದಾರೆ.

ಯಕ್ಷಗಾನ ಪ್ರಸಂಗ ಕತೃಗಳಾಗಿ ಹಲವರು ತಮ್ಮಸೇವೆಯನ್ನು ಸಲ್ಲಿಸಿದ್ದಾರೆ.

ಉಡುಪಿಯ ರಾಜಗೋಪಾಲಾಚಾರ್ಯ, ವೆಂಕಟರಾಜ ಪುಣಿಂಚತ್ತಾಯ, ಕಾರಣೀಕ ಶಂಕರನಾರಾಯಣ, ಲಕ್ಷ್ಮೀನಾರಾಯಣಾಚಾರ್ಯ, ಕ.ಪು. ಸೀತಾರಾಮ ಕೆದಿಲ್ಲಾಯ, ಬಿ.ಎಸ್. ಕೃಷ್ಣಯ್ಯ ತೋಳ್ಪಾಡಿತ್ತಾಯ ಆಲೆಟ್ಟಿ ರಾಮಣ್ಣ ಶಗ್ರಿತ್ತಾಯ, ಪಾಂಬೇಲು ವಿಷ್ಣುಭಟ್ಟ, ಹಂಡೆ ಶ್ರೀಪಾದದಾಸ,ಕಬ್ಬಿನಾಲೆ ವಸನ್ತ ಭಾರದ್ವಾಜ, ಕಬ್ಬಿನಾಲೆ ಮಧುಸೂದನ ಭಟ್ಟ, ಸುಬ್ರಹ್ಮಣ್ಯಭಟ್ಟ ಚಿತ್ರಾಪುರ, ಕಂಡೆತ್ತೋಡಿನಾರಾಯಣ ಕೇಕುಣ್ಣಾಯ, ಪದ್ಮನಾಭ ಜೆನ್ನಿ, ಹಂದಾಡಿ ಮದುಸೂಧನಭಟ್ಟ, ಪು.ಶ್ರೀನಿವಾಸ ಭಟ್ಟ,

ಅಗರಿಶ್ರೀನಿವಾಸ ಭಾಗವತ, ಅಗರಿರಘುರಾಮ ಭಾಗವತ, ಅಗರಿ ಭಾಸ್ಕರ ರಾವ್ ಹಲವು ಪ್ರಸಂಗ ಪುಸ್ತಕಗಳನ್ನು ಬರೆದು ಕಲಾದೇವಿಯ ಸೇವೆಯನ್ನು ಮಾಡಿರುತ್ತಾರೆ.

ಯಕ್ಷಗಾನ – ಸಂಘಟಕರು

ಕಟೀಲು ಲಕ್ಷ್ಮೀನಾರಾಯಣ ಆಸ್ರಣ್ಣರು ಇಪ್ಪತ್ತೈದು ವರ್ಷಗಳಿಂದಬಯಲಾಟ ಸಪ್ತಾಹವನ್ನು ಮಾಡಿಸಿ ನೂರಾರು ಯಕ್ಷಗಾನ ಕಲಾವಿದರನ್ನು ಗೌರವಿಸಿದ್ದಾರೆ.

* ಮಧೂರಿನ ವಿಷ್ಣು ಆಸ್ರರು 'ಧನ್ವಂತರಿ ಯಕ್ಷಗಾನ ಸಂಘ'ದ ಮೂಲಕ ಅನೇಕ ತಾಳಮದ್ದಳೆಗಳನ್ನು ನಡೆಸಿ, ಯುವಕರಿಗೆ ಮಾರ್ಗದರ್ಶನ ಮಾಡಿ ಯುವ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಿದ್ದಾರೆ.

* ಕುಬಣೂರು ಎಡ್ವೋಕೇಟ್ ಬಾಲಕೃಷ್ಣರಾಯರು ಶರವು ಮಹಾಗಣಪತಿ ದೇವಾಲಯದಲ್ಲಿ ಯಕ್ಷಗಾನ ಸಂಘವನ್ನು ಸ್ಥಾಪಿಸಿ ದೂರದೂರದ ಊರುಗಳಿಗೂ ತಾಳಮದ್ದಳೆ ತಂಡವನ್ನು ಕರೆದುಕೊಂಡು ಹೋಗಿ ಅದರ ಸತ್ವಗಳನ್ನು ಪರಿಚಯಿಸಿದರು.

* ದಿ|ಕೆ.ವಿ. ಮುಜ್ಜಿನ್ನಾಯರು ಬೆಳ್ತಂಗಡಿಯಲ್ಲಿ ಹತ್ತುಹಲವು ಮುಖಗಳಿಂದ ಯಕ್ಷಗಾನವನ್ನು ಪೋಷಿಸಿದ್ದಾರೆ. ಯಕ್ಷಬ್ರಹ್ಮವೇದಿಕೆಯ ಆಶ್ರಯದಲ್ಲಿ ಕಲಾವಿದರಿಗೆ ಸನ್ಮಾನ, ಕೃತಿ ಪ್ರಕಟನೆ, ಗೋಷ್ಠಿ ಮತ್ತು ಯಕ್ಷಗಾನ, ತಾಳ ಮದ್ದಳೆಗಳನ್ನು ಆಡಿಸಿದ್ದಾರೆ.

* ಕ.ಪು. ಸೀತಾರಾಮ ಕೆದಿಲ್ಲಾಯರು ಮೊತ್ತ ಮೊದಲು ಯಕ್ಷಗಾನ ಛಂದಸ್ಸಿನ ಸಂಶೋಧನೆ ನಡೆಸಿ 'ಯಕ್ಷಗಾನ ಛಂದೋದರ್ಪಣಂ' ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ.

* ಶ್ರೀ. ಎಚ್.ಬಿ.ಎಲ್ ರಾಯರು ಮುಂಬಯಿಯಲ್ಲಿ ಪದವೀಧರ ಯಕ್ಷಗಾನ ಮಂಡಳಿ ಎಂಬ ಸಂಸ್ಥೆ ಕಟ್ಟಿ, ಯಕ್ಷಗಾನ ಸಾಹಿತ್ಯ ಸಮ್ಮೇಳಗಳನ್ನು ಜರಗಿಸಿ ಕವಿ ಕಲಾವಿದರಿಗೆ ಸನ್ಮಾನ ಮತ್ತು ಪ್ರಸಂಗಗಳ ಪ್ರಕಟನೆ ಕಾರ್ಯವನ್ನು ಮಾಡಿರುತ್ತಾರೆ.

* ಗುಂಡ ಶಿಬರಾಯರು ಪ್ರಪ್ರಥಮವಾಗಿ ಬಯಲಾಟ ಮೇಳವನ್ನು ಮುಂಬಯಿಗೆ ಕೊಂಡು ಹೋಗಿ ಪ್ರದರ್ಶನವನ್ನು ಮಾಡಿಸಿದ್ದಾರೆ.

* ಕುಬಣೂರು ಶ್ರೀಧರರಾಯರು ಭಾಗವತರಾಗಿ ಹೆಸರು ಪಡೆದುದಲ್ಲದೆ 'ಯಕ್ಷಪ್ರಭಾ' ಎಂಬ ಮಾಸಪತ್ರಿಕೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ.

* ಅಷ್ಟಾವಧಾನಿ ಕಬ್ಬಿನಾಲೆ ವಸಂತ ಭಾರದ್ವಾಜರು ವೇಷದಾರಿಯಾಗಿ, ಪ್ರಸಂಗರಚಿಸಿ, ಯಕ್ಷಗಾನ ಛಂದಸ್ಸಿನ ಕುರಿತು ಅಧ್ಯಯನ ಮಾಡಿ 'ಡಾಕ್ಟರೇಟ್' ಪದವಿಯನ್ನು ಪಡೆದ ವಿದ್ವಾಂಸರು.

* ಕಟೀಲಿನ ಪು. ಶ್ರೀನಿವಾಸ ಭಟ್ಟರು ಯಕ್ಷಗಾನ ಪ್ರಸಂಗ ಸಾಹಿತ್ಯ ಸಂಬಂಧವಾದ ನೂರಾರು ಲೇಖನಗಳನ್ನು ಹಾಗೂ 'ಯಕ್ಷಗಾನ ಕಲಾವಿದರು' ಎಂಬ ಕೃತಿಯನ್ನು ರಚಿಸಿದ್ದಾರೆ.

* ಚೇಳಾರು ಸೀತಾರಾಮ ಭಟ್ಟ ಮತ್ತು ಚೇಳಾರುಭಟ್ಟರು ಬಯಲಾಟದ ವೇಷಗಳ ಮಣಿಸಾಮಾನುಗಳನ್ನು ತಯಾರಿಸುವುದರಲ್ಲಿ ಸಿದ್ಧಹಸ್ತರು.

* ಕಿನ್ನಿಗೋಳಿಯ 'ಯಕ್ಷಲಹರಿ' ಸಂಸ್ಥೆ ಎಳತ್ತೂರು ಶ್ರೀನಿವಾಸ ಭಟ್ಟರ ನೇತೃತ್ವದಲ್ಲಿ ತಾಳಮದ್ದಳೆ ಸ್ಪರ್ಧೆ, ಸಪ್ತಾಹ, ಸನ್ಮಾನ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ.

* ಉಡುಪಿಯ ಶ್ರೀ ಮನ್ಮಧ್ವ ಸಿದ್ಧಾಂತ ಗ್ರಂಥಾಲಯದ ಪಾವಂಜೆಗುರುರಾವ್ ಮತ್ತು ಮಕ್ಕಳು ಯಕ್ಷಗಾನ ಪ್ರಸಂಗಗಳನ್ನು ಮುದ್ರಿಸಿ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುವುದರ ಮೂಲಕ ಕಲಾ ಸೇವೆಯನ್ನು ಮಾಡುತ್ತಾ ಬರುತ್ತಿದ್ದಾರೆ.

7.2.6 ಶಿವಳ್ಳಿ ಬ್ರಾಹ್ಮಣರ ಪತ್ರಿಕೋದ್ಯಮ ಮತ್ತು ಪ್ರಕಾಶನ ಸಂಸ್ಥೆಗಳು.

ಪತ್ರಿಕೆಗಳು ಪ್ರಜಾಪ್ರಭುತ್ವದ ನಾಲ್ಕನೇ ಅಂಗ. ಸಮಾಜ ಮತ್ತು ಸರಕಾರದ ನಡುವೆ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತದೆ. ಜನ ಸಾಮಾನ್ಯರ ಸಮಾಜದ ಬೇಡಿಕೆಗಳನ್ನು ಸರಕಾರದ ಮುಂದಿಡುವ ಮತ್ತು ಗಮನಕ್ಕೆ ತರುವ ಸರಕಾರದ ಲೋಪದೋಷ, ಕುಂದು ಕೊರತೆಗಳನ್ನು ಬೊಟ್ಟು ಮಾಡಿ ತೋರಿಸುವ ಕೆಲಸವನ್ನು ಪತ್ರಿಕೆಗಳು ಮಾಡುತ್ತವೆ. ಪತ್ರಿಕೆ ಧರ್ಮ, ಸುದ್ಧಿ, ರಾಜಕೀಯ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ಸಿನಿಮಾ, ಕ್ರೀಡೆ, ಕಲೆ, ಹಾಸ್ಯ ಮುಂತಾದ ವಿವಿಧ ಪ್ರಕಾರಗಳಲ್ಲಿ ಪ್ರಚಾರ ಪರಿಕರವಾಗಿ ಕಾರ್ಯನಿರ್ವಹಿಸುತ್ತದೆ. ಶಿವಳ್ಳಿ ಬ್ರಾಹ್ಮಣರೂ ಸಹಾ ಪತ್ರಿಕಾರಂಗದಲ್ಲಿ ಮಹತ್ವರವಾದ ಕೊಡುಗೆಯನ್ನು ಸಲ್ಲಿಸಿದ್ದಾರೆ ಅಂತೆಯೇ ಸಲ್ಲಿಸುತ್ತಾ ಇದ್ದಾರೆ.

ಕೊಡತ್ತೂರು ಅನಂತ ಪದ್ಮನಾಭ ಉಡುಪ, ಶಿವಪುರ ಲಕ್ಷ್ಮೀನಾರಾಯಣ ಭಟ್ಟ ಮತ್ತು ಬನ್ನಂಜೆ ರಾಮಾಚಾರ್ಯ ಈ ತ್ರಿಮೂರ್ತಿಗಳ ಸಾಧನೆಯ ಸಾಕಾರ 'ಯುಗಪುರುಷ' ಮಾಸ ಪತ್ರಿಕೆ. ಉಡುಪಿಯಲ್ಲಿ ಪ್ರಾರಂಭವಾದ ಪತ್ರಿಕೆ ತದನಂತರ ಕಿನ್ನಿಗೋಳಿಗೆ ತಂದು ಬೆಳೆಸಿದವರು ಉಡುಪರು. ಸದ್ಯ ಉಡುಪರ ಮಗನಾದ ಭುವನಾಭಿರಾಮ ಉಡುಪರು ಪತ್ರಿಕೆಯನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಕನ್ನಡದ ಮೇಲ್ಮಟ್ಟದ ಸಾಂಸ್ಕೃತಿಕಪತ್ರಿಕೆ ಎಂಬ ಹೆಗ್ಗಳಿಕೆ ಗಳಿಸಿದೆ. ಸುವರ್ಣ ಮಹೋತ್ಸವನ್ನು ಆಚರಿಸಿ ವಜ್ರಮಹೋತ್ಸವದ ಕಡೆಗೆ ಸಾಗುತ್ತಿದೆ.

ಯಕ್ಷಗಾನ ಕರಾವಳಿ ಕರ್ನಾಟಕ ಬಹಳ ಜನಪ್ರೀಯವಾದ ಗಂಡು ಕಲೆ. ಕಟೀಲು ಮೇಳದಲ್ಲಿ ಭಾಗವತರಾಗಿರುವ ಕುಬಣೂರು ಶ್ರೀಧರರಾಯರು 'ಯಕ್ಷಪ್ರಭಾ' ಎಂಬ ಪತ್ರಿಕೆಯನ್ನು ನಡೆಸುತ್ತಾ ಬರುತ್ತಿದ್ದಾರೆ. ಬಯಲಾಟ, ತಾಳಮದ್ದಲೆ, ಯಕ್ಷಗಾನ ಹಾಡುಗಳು, ಕವಿಗಳು, ವಿಮರ್ಶೆ, ಕಲಾವಿದರ ಪರಿಚಯ, ಸನ್ಮಾನ ಕಾರ್ಯಕ್ರಮಗಳು ಮುಂತಾದ ಯಕ್ಷಗಾನಕ್ಕೆ ಸಂಬಂಧ ಪಟ್ಟ ವಿಷಯಗಳನ್ನು ಈ ಪತ್ರಿಕೆ ಒಳಗೊಂಡಿದೆ. ಯಕ್ಷಪ್ರೇಮಿಗಳಿಗೆ ಪ್ರಿಯವಾದ ಮಾಸಪತ್ರಿಕೆ.

ಖ್ಯಾತರಾದ ನೆರಿಯ ಹೆಬ್ಬಾರದ ಮನೆತನದ ವೃತ್ತಿಯಲ್ಲಿ ವೈದ್ಯರಾಗಿರುವ ಡಾ। ಜಿ.ಕೆ. ಹೆಬ್ಬಾರ ಇವರ ಸಂಪಾದಕತ್ವದಲ್ಲಿ 'ಸುಜಾತ' ಎಂಬ ಮಾಸಪತ್ರಿಕೆ ಸುಂದರವಾದ ಮುದ್ರಣ, ಅಂದದ ಮುಖಪುಟ, ಕೃಷಿಗೆ ಸಂಬಂಧಿಸಿದಂತೆ ಅಮೂಲ್ಯವಾದ ಲೇಖನಮಾಹಿತಿಗಳನ್ನು ಒಳಗೊಂಡಿರುವ ಪತ್ರಿಕೆ. ಕೃಷಿಯ ಬಗ್ಗೆ ಮಾಹಿತಿ, ರೈತರಿಗೆ ಗೊಬ್ಬರ, ಕೀಟನಾಶಕಗಳು, ಪರ್ಯಾಯ ಬೆಳೆ, ಆರ್ಥಿಕ ಬೆಳೆ, ಆಹಾರ ಬೆಳೆ, ನೀರಿನ ಪೂರೈಕೆ, ಇಂಗು ಗುಂಡಿಗಳು, ಹೊಸತಳಿ ಇತ್ಯಾದಿಗಳ ಅಧಿಕೃತ ಮಾಹಿತಿಗಳನ್ನು ಒಳಗೊಂಡು ರೈತರ ಗಮನ ಸೆಳೆಯುವಲ್ಲಿ ಯಶಸ್ಸನ್ನು ಗಳಿಸಿದೆ.

ಉಡುಪಿ ಧರ್ಮಕ್ಷೇತ್ರ ಅಂತೆಯೇ ವಿದ್ಯಾವಂತರ ಸುಸಂಸ್ಕೃತನಾಡು. ಕಲೆ, ಸಾಹಿತ್ಯ, ಸಂಸ್ಕೃತಿಗಳಿಗೆ ಪ್ರೋತ್ಸಾಹ ನೀಡುತ್ತಾ ಬರುತ್ತಿರುವ ಊರು. ಇಲ್ಲಿಂದ ಪ್ರಕಟವಾಗಿ ಹೋದ ಪತ್ರಿಕೆಗಳು ಹಲವಾರು. 1906ರಲ್ಲಿ ಕರೋಡಿ ಸುಬ್ಬರಾಮ ಮತ್ತು ಕಡೆಕಾರು ಶ್ರೀರಾಜಗೋಪಾಲಯಾರರಿಂದ ಸಂಪಾದಿತ ಪತ್ರಿಕೆ 'ಕೃಷ್ಣಸೂಕ್ತಿ'. ಇದು ಧಾರ್ಮಿಕ ಪತ್ರಿಕೆ. ಭಕ್ತಿ, ಮುಕ್ತಿ, ಆದರ್ಶಜೀವನ, ಪುರಾಣ ವಿಚಾರಗಳಿಂದ ಕೂಡಿದ್ದ ಈ ಪತ್ರಿಕೆ ಎರಡು ದಶಕಗಳ ಕಾಲ ಉಡುಪಿಯ ಸುತ್ತಮುತ್ತಲು ಜನಪ್ರೀಯತೆಯನ್ನು ಹೊಂದಿತ್ತು. ಮುದ್ರಾಡಿ ಜನಾರ್ದನಾಚಾರ್ಯರು 1931ರ ಸುಮಾರಿಗೆ ಶ್ರೀ ಕೃಷ್ಣ ಸಂದೇಶ ಮಾಸ ಪತ್ರಿಕೆಯ ಹೊರ ತಂದು ಜನರಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಮೂಡಿಸಿದರು.

ಉಡುಪಿ ಕೆರೆಕಟ್ಟೆ ಗೋವಿಂದ ಹರಿದಾಸರು ದಾಸ ಸಾಹಿತ್ಯ ಪ್ರಚಾರಕ್ಕಾಗಿ 'ವಾಣಿ' ಪತ್ರಿಕೆಯನ್ನು ಕೆಲಕಾಲ ನಡೆಸಿದ್ದಾರೆ.

ಬಿ.ಜನಾರ್ದನ ಭಟ್ಟರು ಉಡುಪಿಯಿಂದ 'ಧರ್ಮಬೋಧ' ಹೆಸರಿನ ಮಾಸಪತ್ರಿಕೆಯನ್ನು ಪ್ರಕಟಿಸುತ್ತಿದ್ದರು.

ಬನ್ನಂಜೆ ರಾಮಾಚಾರ್ಯರು ಪ್ರತಿಕಾರಂಗದ ಭೀಷ್ಮರು. ಪ್ರಾರಂಭದಲ್ಲಿ ನವಭಾರತ ಪತ್ರಿಕೆ, ಅನಂತರ ಉದಯವಾಣಿಯಲ್ಲಿ ಸಹಸಂಪಾದಕರಾಗಿ ದುಡಿದು ಹೆಸರು ಗಳಿಸಿದ್ದಾರೆ. 1938ರಲ್ಲಿ ನವಶಕ್ತಿ ಎಂಬ ಮಾಸಪತ್ರಿಕೆ ಮತ್ತು 1953ರಲ್ಲಿ ಸುದರ್ಶನ ಸಾಪ್ತಾಹಿಕವನ್ನು ಪ್ರಕಟಿಸಿದ್ದಾರೆ.

ಯು.ಎಸ್. ಪಣಿಯಾಡಿಯವರು ಸ್ವಾತಂತ್ರ್ಯಪೂರ್ವದಲ್ಲಿ ಪತ್ರಿಕಾರಂಗದಲ್ಲಿ ಅಪೂರ್ವ ಸಾಧನೆ ಮಾಡಿದವರು. 'ಅಂತರಂಗ' ವಾರಪತ್ರಿಕೆಯನ್ನು ಹೊರತಂದು ಜನರಲ್ಲಿ ಜಾಗೃತಿ ಮೂಡಿಸಿದರು.

1958ರಲ್ಲಿ ಕೆ.ಎಲ್ ಭಟ್ಟರ ಸಂಪಾದಕತ್ವದಲ್ಲಿ 'ಭವ್ಯವಾಣಿ' ಮಾಸಪತ್ರಿಕೆ ಪ್ರಕಟವಾಗಿತ್ತು. ವಿಜ್ಞಾನ, ಸಾಹಿತ್ಯ, ವಿಮರ್ಶೆ, ಕತೆ, ಕವನ, ಲೇಖನಗಳ ಮೂಲಕ ಓದುಗರ ಪ್ರಿಯ ಮಾಸಪತ್ರಿಕೆಯಾಗಿತ್ತು.

ಬಾಳ ರಾಘವೇಂದ್ರರಾಯರ 'ದೇಶರಂಜನ' 1953ರಲ್ಲಿ ಕೆ.ಎಸ್ ಉಪಾಧ್ಯಾಯರು 'ಪ್ರವಾಸಿ' ಎಂಬ ಪತ್ರಿಕೆ ಪ್ರಕಟವಾಗುತ್ತಿತ್ತು.1947ರಲ್ಲಿ ಯು.ಶ್ರೀನಿವಾಸ ಭಟ್ಟರ 'ಅರುಣ' ಮಾಸಪತ್ರಿಕೆ, 1941ರ ಕಾಲದಲ್ಲಿ ರಾಜಗೋಪಾಲರ ಸಂಪಾದಕತ್ವದಲ್ಲಿ 'ಪ್ರಕಾಶಿನಿ' ಮಾಸಪತ್ರಿಕೆ ಪ್ರಕಟವಾಗುತ್ತಿತ್ತು. 'ಪಿಗ್ಮಿ' ಪತ್ರಿಕೆಯು ಕು.ಶಿ. ಹರಿದಾಸ ಭಟ್ಟರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿತ್ತು.

* ಶ್ರೀ.ಎಸ್.ಎಲ್. ಭಟ್ಟರ ಸಂಪಾದಕತ್ವದಲ್ಲಿ 'ರಾಯಭಾರಿ' ಎಂಬ ಪತ್ರಿಕೆ ರಾಜಕೀಯ ಸುದ್ದಿಯೊಂದಿಗೆ ಕತೆ, ಕವನಗಳನ್ನು ಒಳಗೊಂಡು ಪ್ರಸಾರವಾಗುತ್ತಿತ್ತು.

* ವಕೀಲರಾಗಿದ್ದ ಕೆ.ಆರ್. ಆಚಾರ್ಯರ ಸಂಪಾದಕತ್ವದಲ್ಲಿ ಜನತೆಯಲ್ಲಿ ರಾಷ್ಟ್ರಪ್ರೇಮವನ್ನು ಜಾಗೃತ ಗೊಳಿಸಿದ ಪತ್ರಿಕೆ 'ರಾಷ್ಟ್ರ ಬಂಧು'.

* ಕಸ್ತೂರಿ ಲೋಕ ಶಿಕ್ಷಣ ಟ್ರಸ್ಟ್ ಹುಬ್ಬಳ್ಳಿಯಿಂದ ಪ್ರಕಟವಾಗುತ್ತಿರುವ ಮಾಸಪತ್ರಿಕೆ. ಕಸ್ತೂರಿ ಪತ್ರಿಕೆಯನ್ನು ಕಟ್ಟಿ ಬೆಳೆಸಿದ ಕೀರ್ತಿ ಪಾಡಿಗಾರು ವೆಂಕಟ್ರಮಣ ಆಚಾರ್ಯರಿಗೆ ಸಲ್ಲಬೇಕು.

*ಮಲ್ಪೆಯ ಬಾ. ಸಾಮಗರು ದೆಹಲಿಯಲ್ಲಿ 'ದೆಹಲಿ ಕನ್ನಡಿಗ' ಎನ್ನುವ ಕನ್ನಡ ಪತ್ರಿಕೆ 'ತುಳುವೆರ್' ಎನ್ನುವ ತುಳುಪತ್ರಿಕೆಯನ್ನು ನಡೆಸುತ್ತಾ ಬರುತ್ತಿದ್ದಾರೆ. ದೂರದ ಊರಿನಲ್ಲಿ ಮಾತೃಭಾಷಾ ಪತ್ರಿಕೆಯನ್ನು ನಡೆಸುತ್ತಿರುವ ಕೀರ್ತಿಗೆ ಪಾತ್ರರಾಗಿದ್ದಾರೆ.

* ಬನ್ನಂಜೆ ಗೋವಿಂದಾಚಾರ್ಯರು ಉದಯವಾಣಿಯ ಸಹ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಯು.ಬಿ.ರಾಜಲಕ್ಷ್ಮೀ 'ತರಂಗ' ವಾರಪತ್ರಿಕೆಯ ಸಹ ಸಂಪಾದಕರಾಗಿದ್ದಾರೆ.

* ತುಳು ಜಾನಪದ ಸಂಸ್ಕೃತಿಯನ್ನು ಸಂಗ್ರಹಿಸಿ ಪ್ರಚಾರ ಮಾಡುತ್ತಿದ್ದ 'ರಾಶಿ'ತುಳು ಜಾನಪದ ಪತ್ರಿಕೆಯ ಸಂಪಾದಕ ಮಂಡಳಿಯಲ್ಲಿ ಶ್ರೀನಿವಾಸ ಭಟ್ಟರು ಹಾಗೂ ಡಾ. ಪದ್ಮನಾಭ ಭಟ್ಟರು ಕಾರ್ಯನಿರತರಾಗಿದ್ದರು.

* ಕಿನ್ನಿಗೋಳಿಯಿಂದ ಸಚ್ಚಿದಾನಂದ ಉಡುಪರ ಸಂಪಾದಕತ್ವದಲ್ಲಿ ಪ್ರಕಟವಾಗುವ ಪತ್ರಿಕೆ 'ಅನಂತ ಪ್ರಕಾಶನ' ವಿಷಯ ವೈವಿಧ್ಯಗಳಿಂದ ಕೂಡಿದ ಸಂಗ್ರಹಯೋಗ್ಯ ಪತ್ರಿಕೆ ಇದಾಗಿದೆ.

* ಮಿಥುನ ಕೊಡೆತ್ತೂರರ ಸಂಪಾದಕತ್ವದಲ್ಲಿ ಕಿನ್ನಿಗೋಳಿಯಿಂದ ವಾರಪತ್ರಿಕೆ 'ವಾರಪತ್ರಿಕೆ', ನಿಮ್ಮ ಮನೆ ಮನೆಯವರ ಗೆಳೆಯ ಎನ್ನುವ ಧ್ಯೇಯ ವಾಕ್ಯದೊಂದಿಗೆ ಪ್ರಕಟವಾಗುತ್ತಿದ್ದ ಪತ್ರಿಕೆ. ಸುತ್ತಮುತ್ತಲಿನ ಸುದ್ದಿಗಳು, ರಂಜನೀಯ ವಿಚಾರಗಳನ್ನು ಒಳಗೊಂಡು ಜನರ ಮೆಚ್ಚುಗೆ ಗಳಿಸಿತ್ತು.

* ಶ್ರೀಶ್ರೀಸುಗುಣೇಂದ್ರತೀರ್ಥಪಾದರ ಸಂಪಾದಕತ್ವದಲ್ಲಿ ಪುತ್ತಿಗೆ ಮಠದವತಿಯಿಂದ ಪ್ರಕಟವಾಗುತ್ತಿರುವ ಧಾರ್ಮಿಕ ಪತ್ರಿಕೆ 'ಸುಗುಣ ಮಾಲಾ', ಪುತ್ತಿಗೆ ಮಠದ ಮುಖವಾಣಿಯಾಗಿರುವ ಈ ಪತ್ರಿಕೆ ಭಕ್ತಾಭಿಮಾನಿಗಳ ಗಮನ ಸೆಳೆಯುತ್ತಿದೆ.

*ಶ್ರೀಮದ್ ಹೃಷೀಕೇಶತೀರ್ಥ ಸ್ವಾಮಿಯವರ ಸ್ಮಾರಕ ಟ್ರಸ್ಟ್ (ರಿ) ಶ್ರೀ ಪಲಿಮಾರು ಹೃಷಿಕೇಶ ಮಠ ಉಡುಪಿ ಇಲ್ಲಿಂದ ಪ್ರಕಟವಾಗುವ ಮಾಸಪತ್ರಿಕೆ 'ಸರ್ವಮೂಲ'. ಶ್ರೀ ವಿದ್ಯಾಧೀಶ ತೀರ್ಥರು ಸಂಸ್ಥಾಪಕರು. ಸದ್ಯ ಸಗ್ರಿ ರಾಘವೇಂದ್ರ ಉಪಾಧ್ಯಾಯರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟಗೊಳ್ಳುತ್ತಿರುವ ಪತ್ರಿಕೆ. ಧರ್ಮ ಪ್ರಸಾರದ ಪರಮ ಧ್ಯೇಯವನ್ನು ಹೊಂದಿದೆ.

* ಉಡುಪಿ ಪೇಜಾವರಮಠ, ಶ್ರೀ ವಿಜಯಧ್ವಜ ಜ್ಞಾನಪೀಠ(ರಿ) ವತಿಯಿಂದ ಪ್ರಕಟಗೊಳ್ಳತ್ತಿರುವ 'ಆಚಾರವಿಚಾರ' ಧಾರ್ಮಿಕಪತ್ರಿಕೆ. ಡಾ.ಎಚ್.ಕೆ. ಸುರೇಶ ಆಚಾರ್ಯ ಪ್ರಧಾನ ಸಂಪಾದಕರಾಗಿರುವ ಈ ಪತ್ರಿಕೆ ಸನಾತನ ಧರ್ಮ ಪ್ರಚಾರ, ತತ್ವಪ್ರಚಾರಗಳನ್ನು ಸತ್ವಯುತವಾಗಿ ಮಾಡುತ್ತಾ ಬರುತ್ತಿದೆ.

ಪ್ರಕಾಶನ ಸಂಸ್ಥೆಗಳು

* ದಿವಂಗತ ಪಾವಂಜೆ ಗುರುರಾಯರು (1869–1950) ಪ್ರಕಾಶಕರಾಗಿ ಉಡುಪಿಯ ಶ್ರೀ ಮನ್ಮಧ್ವ ಸಿದ್ಧಾಂತ ಗ್ರಂಥಾಲಯದ ಮೂಲಕ ಐನೂರಕ್ಕೂ ಹೆಚ್ಚು ಯಕ್ಷಗಾನ ಕೃತಿಗಳನ್ನೂ ದಾಸ ಸಾಹಿತ್ಯದ ಸಂಪುಟಗಳನ್ನೂ ಹಾಗೂ ವೈದಿಕ ಮಂತ್ರ ಅನುಷ್ಠಾನ ವಿಧಿಗಳನ್ನು ತಿಳಿಸುವ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

* ಕೊಡೆತ್ತೂರು ಅನಂತಪದ್ಮನಾಭ ಉಡುಪರು ಕಿನ್ನಿಗೋಳಿಯಲ್ಲಿ 'ಯುಗ ಪುರುಷ' ಪ್ರಕಟನಾಲಯವನ್ನು ಕಟ್ಟಿ ಬೆಳೆಸಿದವರು. 374ಕ್ಕೂ ಹೆಚ್ಚು ಕೃತಿಗಳು ಈ ಸಂಸ್ಥೆಯ ಮೂಲಕ ಪ್ರಕಟಗೊಂಡಿವೆ. ಸದ್ಯ ಸುಪುತ್ರ ಭುವನಾಭಿರಾಮ ಉಡುಪರು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

* ಪಣಿಯಾಡಿ ಶ್ರೀನಿವಾಸ ಉಪಾಧ್ಯಾಯರು ಉಡುಪಿಯಲ್ಲಿ ತುಳುನಾಡು ಪ್ರೆಸ್ಸನ್ನು ಸ್ಥಾಪಿಸಿ, ತುಳು, ಕನ್ನಡ ಭಾಷಾ ಸಾಹಿತ್ಯ ಕೃತಿಗಳನ್ನು ಪ್ರಕಟ ಮಾಡಿದ್ದಾರೆ.

* ಈಶ್ವರ ಭಟ್ ಪುತ್ತಿಗೆಯವರು ಶಾರದಾ ಪ್ರಕಾಶನದಲ್ಲಿ ಕಟೀಲು ಕ್ಷೇತ್ರದ ಭ್ರಮರಾಂಭಾ, ಪುತ್ತಿಗೆ ಕ್ಷೇತ್ರದ ಶ್ರೀಸೋಮನಾಥೇಶ್ವರ, ಭಾಮಿನಿ ಷಟ್ಪದಿಯ ಈಶ್ವರಪುರಾಣ, ಬೆಶೀನೀರ್ ಕೇಣುವೆ, ಮಾಣಿಗೆರಡ್‌ಪಾತೆರ ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ.

* ಹಳೆಯಂಗಡಿ ಶ್ರೀಮತಿ ಶಕುಂತಲಾ ಭಟ್ ಇವರು ರಾಮ ಪ್ರಕಾಶನ ಸಂಸ್ಥೆಯ ಮೂಲಕ ತುಳು ಕನ್ನಡ ಭಾಷೆಯ ಸುಮಾರು 12ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

* ಸಚ್ಚಿದಾನಂದ ಉಡುಪರ ನೇತೃತ್ವದಲ್ಲಿ ಕಿನ್ನಿಗೋಳಿಯಲ್ಲಿರುವ ಗಾಯತ್ರಿ ಪ್ರಕಾಶನ, ಕವನ, ಕಾದಂಬರಿ, ತುಳು ಕೃತಿಗಳನ್ನು ಪ್ರಕಟಿಸಿದ್ದಾರೆ.

* ಮುಂಬಯಿ ನಗರದಲ್ಲಿ ನೆಲೆಸಿರುವ ಎಚ್.ಬಿ.ಎಲ್. ರಾಯರು ಯಕ್ಷಗಾನ ಸಾಹಿತ್ಯ, ತುಳು ಭಾಷೆ ಮತ್ತು ಆಧ್ಯಾತ್ಮಿಕ ಕ್ಷೇತ್ರಕ್ಕೆ ಸಂಬಂಧಪಟ್ಟ ಕೃತಿಗಳನ್ನು ಪ್ರಕಟಿಸಿರುತ್ತಾರೆ.

ಸಂಪಾದಕರಾಗಿ, ಪ್ರಕಾಶಕರಾಗಿ ಸೇವೆ ಸಲ್ಲಿಸುತ್ತಿರುವ ಶಿವಳ್ಳಿ ಬ್ರಾಹ್ಮಣರು ಹಲವಾರು ಮಂದಿ ಇದ್ದಾರೆ. ಕನ್ನಡ, ಸಂಸ್ಕೃತ, ತುಳು ಸಾಹಿತ್ಯ ಪ್ರಪಂಚಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಿದ್ದಾರೆ. ತಮ್ಮ ಛಾಪನ್ನು ಒತ್ತಿದ್ದಾರೆ.

7.2.7 ಶಿವಳ್ಳಿ ಬ್ರಾಹ್ಮಣರಲ್ಲಿ ವಿಜ್ಞಾನಿಗಳು ಮತ್ತು ಸಂಶೋಧಕರು:–

ಶಿವಳ್ಳಿ ಬ್ರಾಹ್ಮಣರಲ್ಲಿ ಅನೇಕವ್ಯಕ್ತಿಗಳು ವೈಜ್ಞಾನಿಕ ಕ್ಷೇತ್ರದಲ್ಲಿ ಸಂಶೋಧನೆ ನಡೆಸಿ ಅಂತರಾಷ್ಟ್ರೀಯ,ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತರಾಗಿದ್ದಾರೆ.

ಪ್ರೊ ಯು.ಆರ್.ರಾವ್

ಶಿವಳ್ಳಿ ಬ್ರಾಹ್ಮಣರಲ್ಲಿ ವಿಜ್ಞಾನಿ ಉಡುಪಿಯ ರಾಮಚಂದ್ರ ರಾವ್ ಇವರು ಅಗ್ರಗಣ್ಯರು ಅಂತರಾಷ್ಟ್ರೀಯ ಖ್ಯಾತಿಯ ಬಾಹ್ಯಾಕಾಶ ವಿಜ್ಞಾನಿ. ಭಾರತದ ಬಾಹ್ಯಾಕಾಶ ತಂತ್ರಜ್ಞಾನವನ್ನು ಉತ್ತುಂಗಕ್ಕೆ ಒಯ್ದವರು. ಇವರ ಮಾರ್ಗದರ್ಶನದಲ್ಲಿ 1975ರಲ್ಲಿ

ಭಾರತದ ಮೊತ್ತಮೊದಲ ಉಪಗ್ರಹ ಆರ್ಯಭಟವನ್ನು ಅಂತರಿಕ್ಷಕ್ಕೆ ಕಳುಹಿಸಲಾಯಿತು. ಅನಂತರ ಭಾಸ್ಕರ,ಆಪ್ಪಲ್, ರೋಹಿಣಿ, ಇನ್‌ಸಾಟ್, ಐ.ಆರ್.ಎಸ್ ಮುಂತಾದ ಬಹೂಪಯೋಗಿ ಹಾಗೂ ಅತ್ಯಾಧುನಿಕ ತಂತ್ರ ಜ್ಞಾನವುಳ್ಳ ಹದಿನೈದಕ್ಕೂ ಹೆಚ್ಚು ಉಪಗ್ರಹಗಳನ್ನು ಇವರ ನೇತ್ರತ್ವದಲ್ಲಿತಯಾರಿಸಲಾಗಿದೆ. ರಾಕೆಟ್ ತಾಂತ್ರಿಕತೆಯಲ್ಲಿ ASLV, PSLV, GSLU ಮುಂತಾದ ವಾಹನ ನೌಕೆಗಳ ತಯಾರಿಕೆಗೂ ಕಾರಣಕರ್ತರು. ಇನ್‌ಸಾಟ ಉಪಗ್ರಹವಂತೂ ಭಾರತದ ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನದಲ್ಲಿ ಕ್ರಾಂತಿಕಾರಿ ಪ್ರಗತಿಯನ್ನು ಕಂಡಿತು. ಮುನ್ನೂರಕ್ಕೂ ಹೆಚ್ಚು ಸಂಶೋಧನ ಲೇಖನಗಳು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅನೇಕ ರಾಷ್ಟ್ರೀಯ ಅಂತರಾಷ್ಟ್ರೀಯ ಪ್ರಶಸ್ತಿಗಳಿಂದ ಗೌರವಿಸಲ್ಪಟ್ಟಿದ್ದಾರೆ.

ಡಾ.ಎಚ್.ವಿ.ಕೆ.ಉಡುಪ:-

ಭಾರತದ ಆನ್ವಯಿಕ ವಿದ್ಯುತ್ ರಸಾಯನ ಶಾಸ್ತ್ರದ ಪಿತ ಎಂದು ಖ್ಯಾತಿಪಡೆದಿದ್ದಾರೆ.350ಕ್ಕೂ ಹೆಚ್ಚು ವೈಜ್ಞಾನಿಕ ಪ್ರಬಂಧಗಳನ್ನು ಮಂಡಿಸಿದ್ದಾರೆ. ಇವುಗಳಲ್ಲಿ 120ಕ್ಕೂ ಹೆಚ್ಚಿನವು ಪೇಟೆಂಟ್ ಪಡೆದಿವೆ. ರಷ್ಯಾ,ಅಮೇರಿಕಾ,ಇಂಗ್ಲೆಂಡ್,ಸ್ವೀಡನ್,ರುಮೇನಿಯಾ,ಪಶ್ಚಿಮ ಜರ್ಮನಿ,ಜಪಾನ್ ಮುಂತಾದ ರಾಷ್ಟ್ರಗಳಲ್ಲಿ ಸಂಚರಿಸಿ ಅನೇಕ ವಿಚಾರ ಸಂಕೀರ್ಣಗಳಲ್ಲಿ ಭಾಗವಹಿಸಿದ್ದಾರೆ. ಜವುಳಿ ರಸಾಯನಶಾಸ್ತ್ರ ಕೈಗಾರಿಕೆಗಳಿಗೆ ಅಗತ್ಯವಾದ ಸೇಂದ್ರಿಯ ಮತ್ತು ನಿರಿಂದ್ರಿಯ ರಾಸಾಯನಿಕಗಳು, ಇಲೆಕ್ಟ್ರೋಪ್ಲೇಟಿಂಗ್ ಮತ್ತು ಲೋಹಪುಡಿಗಳು,ಕರಗದ ವಿದ್ಯುತ್ ದ್ವಾರದ ಅಭಿವೃದ್ಧಿ ಲೋಹಪುಡಿಗಳ ಮೇಲೆ ಹೈಡ್ರೋಕ್ಸೈಡ್ ಸಂಸ್ಕರಣ ಇತ್ಯಾದಿ ಕ್ಷೇತ್ರಗಳಲ್ಲಿ ವಿಶೇಷ ತಜ್ಞತೆಯನ್ನು ಪಡೆದಿದ್ದಾರೆ.

ಡಾ.ಎನ್.ಗೋಪಾಲ ಕೃಷ್ಣನ್:-

ಕೇರಳದ ತಿರುವನಂತಪುರದ ಸಿ.ಎಸ್.ಐ.ಆರ್(esir)ವಿಜ್ಞಾನ ಸಂಸ್ದೆಯ ಹಿರಿಯ ವಿಜ್ಞಾನಿ. ಇವರ ನಲ್ವತ್ತೆಂಟಕ್ಕೂ ಹೆಚ್ಚು ವೈಜ್ಞಾನಿಕ ಪ್ರಬಂಧಗಳು ನೂರಾರು ಲೇಖನಗಳು ದೇಶವಿದೇಶಗಳ ಪತ್ರಿಕೆ ಗಳಲ್ಲಿ ಪ್ರಕಟಗೋಂಡಿದೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈಂಟಿಫಿಕ್ ಹೆರಿಟೇಜೌ ಎಂಬ ಸಂಸ್ಥೆಯ ನಿರ್ದೇಶರಾಗಿಯೂಸೇವೆ ಸಲ್ಲಿಸಿದ್ದಾರೆ. ಈ ಸಂಸ್ದೆಯ ಮೂಲಕ ಭಾರತದ ವೇದ, ಧರ್ಮಶಾಸ್ತ್ರ ಉಪನಿಷತ್ ತತ್ವಗಳನ್ನು ವೈಜ್ಞಾನಿಕ ವಿಶ್ಲೇಷಣೆ ಮೂಲಕ ಪ್ರಚುರಪಡಿಸಿದ್ದಾರೆ.

ಡಾ.ಟಿ.ಬಾಲಕೃಷ್ಣ ಭಟ್ಟ:-

ರಕ್ಷಣಾ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಖ್ಯಾತ ವಿಜ್ಞಾನಿ. ನಾಸಾ ಮತ್ತು ಎನ್.ಆರ್. ಸಿಯಲ್ಲಿ ಕೂಡಾ ಸೇವೆ ಸಲ್ಲಿಸಿದ್ದಾರೆ. ಅಮೇರಿಕದ ಜೆಟ್ ಪ್ರೊ. ಪಲ್ಯನ್ ಪ್ರಯೋಗಾಲಯದಲ್ಲಿ ಮೂರುವರ್ಷಗಳ ಕಾಲ ಸಂದರ್ಶಕ ವಿಜ್ಞಾನಿಯಾಗಿ ಕೆಲಸಮಾಡಿದ್ದಾರೆ.ಯುದ್ದ ಕವಚದ ಉತ್ಪಾದನೆಯಲ್ಲಿ ಹೊಸ ತಂತ್ರ ಜ್ಞಾನವನ್ನು ಕಂಡುಹಿಡಿದಿದ್ದಾರೆ. ಅರ್ಜುನ ಮತ್ತು ಅಜೇಯ ಯುದ್ಧ ಟ್ಯಾಂಕ್‌ಗಳಿಗೆ ಕಾಂಚನ ಎಂಬ

ರಕ್ಷಾ ಕವಚವನ್ನು ನಿರ್ಮಿಸಿದ ಕೀರ್ತಿ ಅವರದ್ದು. ವಾಸವಿಕ್ ಪ್ರಶಸ್ತಿ, ರಾಷ್ಟ್ರೀಯ ಲೋಹಶಾಸ್ತ್ರಜ್ಞ ಪ್ರಶಸ್ತಿ, ನಾಸಾ ಸಂಶೋಧನ ಪ್ರಶಸ್ತಿಗಳು ಸಿಕ್ಕಿವೆ.

ಸದ್ಯ ಹೈದರಾಬಾದಿನ ಡಿಫೆನ್ಸ್ ಮೆಟಲರ್ಜಿಕಲ್ ರಿಸರ್ಚ್ ಲ್ಯಾಬೋರೇಟರಿಯಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಡಾ.ರಮೇಶ ವಿ.ಭಟ್ಟ:-

ಹೈದರಬಾದಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ನ್ಯೂಟ್ರಿಷಿಯನ್ ಆಫ್ ದಿ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ ಎನ್ನುವ ಸಂಸ್ಥೆಯಲ್ಲಿ ಸುಮಾರು ಮೂವತ್ತು ವರ್ಷಗಳ ಕಾಲ ಆಹಾರ ವಿಜ್ಞಾನಿಯಾಗಿ ದುಡಿದು ಹೆಸರುಗಳಿಸಿದ್ದಾರೆ. ಆಹಾರ ಉಪವಿಜ್ಞಾನ, ಆಹಾರ ಸಂರಕ್ಷಣೆ, ಆಹಾರದ ಗುಣಮಟ್ಟ, ಆಹಾರದಿಂದ ಉಂಟಾಗುವ ರೋಗಗಳ ಬಗ್ಗೆ ಅನೇಕ ಸಂಶೋಧನೆಗಳನ್ನು ಮಾಡಿದ್ದಾರೆ. FAO,WHO,VNIP, IAEA ,IARC ಗಳಲ್ಲಿ ಆಮಂತ್ರಿತ ವೈಜ್ಞಾನಿಕ ಸಲಹಾಗಾರರಾಗಿ ಕೆಲಸ ಮಾಡಿದ್ದಾರೆ.

ಡಾ.ಬಿ.ಆರ್.ಸಾಮಗ:-

ಸುರತ್ಕಲ್ಲಿನ ರಾಷ್ಟ್ರೀಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸಿವಿಲ್ ವಿಭಾಗದ ಮುಖ್ಯಸ್ಥರಾಗಿ ಸಂಶೋಧಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ನಲ್ವತ್ತಕ್ಕೂ ಮಿಕ್ಕ ಸಂಶೋಧನ ಲೇಖನಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಬೇಸಿಕ್ ಇಂಜಿನಿಯರಿಂಗ್ ಹೈಡ್ರಾಲಿಕ್ಸ್ ಮತ್ತು ಎಕ್ಸಪರಿಮೆಂಟಲ್ ಹೈಡ್ರಾಲಿಕ್ಸ್ ಎ ಲ್ಯಾಬರೋಟರಿ ಮ್ಯಾನುವಲ್ ಎಂಬ ಎರಡು ಕೃತಿಗಳನ್ನು ರಚಿಸಿದ್ದಾರೆ. ನವದೆಹಲಿಯ ಇಂಡಿಯಾ ಇಂಟರ್ ನ್ಯಾಷನಲ್ ಫ್ರೆಂಡ್ ಶಿಪ್ ಸೊಸೈಟಿಯಿಂದ 'ರಾಷ್ಟ್ರೀಯಗೌರವ' ಪ್ರಶಸ್ತಿಯನ್ನು ಪಡೆದಿದ್ದಾರೆ.

ಡಾ.ಎಂ.ಎನ್.ಮಧ್ಯಸ್ಥ:-

ಕಳೆದ ಮೂವತ್ತೈದು ವರ್ಷಗಳಿಂದ ಉಪನ್ಯಾಸಕರಾಗಿ,ಸಂಶೋಧಕರಾಗಿಸೇವೆ ಸಲ್ಲಿಸುತ್ತಿದ್ದಾರೆ. ಜೀವವಿಜ್ಞಾನ, ಜೀವವೈವಿಧ್ಯ, ಪ್ರಾಣಿಶಾಸ್ತ್ರ, ಪರಿಸರವಿಜ್ಞಾನ,ಜಲಜೀವಶಾಸ್ತ್ರ ಮುಂತಾದ ವಿಭಾಗದಲ್ಲಿ ಸಂಶೋಧನೆಯನ್ನು ಮಾಡಿದ್ದಾರೆ. ಮಂಗಳೂರು ವಿಶ್ವವಿದ್ಯಾಲಯದ ಬಯೋಸಾಯನ್ಸ್ ವಿಭಾಗದಲ್ಲಿ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ಇಂಗ್ಲೆಂಡ್,ಅಮೇರಿಕ, ಜಪಾನ್ ಮುಂತಾದ ರಾಷ್ಟ್ರಗಳಲ್ಲಿ ವಿಶ್ವವಿದ್ಯಾನಿಯಗಳಲ್ಲಿ ಸಂದರ್ಶನ ಪ್ರಾಧ್ಯಾಪಕರಾಗಿ ದುಡಿದಿದ್ದಾರೆ. ಮೆಡಲ್ ಜುವಾಲೋಜಿಕಲ್ ಸೊಸೈಟಿ ಆಫ್ ಇಂಡಿಯಾ ವತಿಯಿಂದ 'ಇಪ್ಪತ್ತನೇ ಶತಮಾನದ ಶ್ರೇಷ್ಠ' ಚಿನ್ನದ ಪದಕದಿಂದ ಪುರಸ್ಕೃತರು.

ಡಾ.ನಯನಾಭಿರಾಮ ಉಡುಪ:-

ಉಡುಪರು ಔಷಧೀಯ ವಿಜ್ಞಾನಕಾಲೇಜಿನಲ್ಲಿ ಫಾರ್ಮಸಿ ಮ್ಯಾನೇಜ್‌ಮೆಂಟ್ ವಿಭಾಗದ ಮುಖ್ಯಸ್ಥರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಮುನ್ನೂರ ಐವತ್ತಕ್ಕೂ

ಹೆಚ್ಚು ಸಂಶೋಧನ ಲೇಖನಗಳು ಹಾಗೂ 5ಪುಸ್ತಕಗಳು ಪ್ರಕಟವಾಗಿವೆ. ಪರದೇಶದ ಅನೇಕ ವಿಶ್ವವಿದ್ಯಾಲಯಗಳಲ್ಲಿ ಉಪನ್ಯಾಸ, ಮಾರ್ಗದರ್ಶನಗಳನ್ನು ನೀಡಿದ್ದಾರೆ.

ಇಂಡಿಯನ್ ಜರ್ನಲ್ ಆಫ್ ಫಾರ್ಮಾಸ್ಯುಟಿಕಲ್ ಸಾಯನ್ಸ್,ಇಂಡಿಯನ್ ಡ್ರಗ್ಸ್ ಆಂಡ್ ಫಾರ್ಮಟುಡೆ, ಇಂಡಿಯನ್ ಜನರಲ್ ಆಫ್ ಫಾರ್ಮಾಸ್ಯುಟಿಕಲ್ ಎಜುಕೇಶನ್ ಮುಂತಾದ ಪತ್ರಿಕೆಗಳ ಸಂಪಾದಕ ಮಂಡಳಿಯ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಡಾ. ಪಿ.ಸಿ ದಾಂಡಿಯಾ ಪ್ರಶಸ್ತಿ, ಶ್ರೇಷ್ಠ ಪ್ರಾಂಶುಪಾಲ ಪ್ರಶಸ್ತಿ ಲಭಿಸಿವೆ.

ಡಾ.ಕೆ.ಭಾಸ್ಕರ ಉಡುಪ

ಕೆಂಪು ರಕ್ತಕಣದ ಕುರಿತು ಆಳವಾದ ಸಂಶೋಧನೆ ನಡೆಸಿ ಪ್ರಖ್ಯಾತರಾಗಿದ್ದಾರೆ. ಅಮೇರಿಕದ ಕನ್ಸಾಸ್ ವಿಶ್ವವಿದ್ಯಾಲಯದಲ್ಲಿ ಮೆಡಿಕಲ್ ಸೆಂಟರಿನ ಡಾ.ಕೆ.ಆರ್ ರೈಸ್‌ಮನ್ನಾ ಪ್ರಯೋಗಾಲಯದಲ್ಲಿ ಸಂಶೋಧಕರಾಗಿ, ಯು.ಎ.ಯಂ.ಎಸ್‌ನ ಔಷಧ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿದ್ದಾರೆ. ಅಟ್ಲ್‌ಕಾಕ್‌ನ ಜೆರಿಯಾಟ್ರಿಕ್ ರಿಸರ್ಚ್ ಎಜ್ಯುಕೇಶನ್ ಆಂಡ್ ಕ್ಲಿನಿಕಲ್ ಸೆಂಟರಿನ ಮೆಡಿಕಲ್ ಕಾಲೇಜಿನಲ್ಲಿ ಸಂಶೋಧನೆ ನಡೆಸಿ ಇವರೇ ಕಂಡು ಹಿಡಿದ ಎರಿಥೋ ಪೋಯೆಂಟನ್ ಸಿದ್ಧಾಂತ ಮುಂದೆ ಅನೇಕ ಸಂಶೋಧನೆಗಳಿಗೆ ಎಡೆಮಾಡಿ ಕೊಟ್ಟಿದೆ.

ಡಾ.ಬಿ.ಎ ದಾಸಣ್ಣಾಚಾರ್ಯ

ಅಂತಾರಾಷ್ಟ್ರೀಯ ಖ್ಯಾತಿಯ ವಿಜ್ಞಾನಿ ಡಾ.ರಾಜಾರಾಮಣ್ಣ ಮತ್ತು ಡಾ.ಪಿ.ಕೆ ಅಯ್ಯಂಗಾರರ ಮಾರ್ಗದರ್ಶದಂತೆ ಎಂ.ಎಸ್ಸಿ ಮತ್ತು ಪಿ.ಎಚ್.ಡಿ ಪಡೆದವರು ಕೆನಡದ Noble Laureati B.N Brock House ಜೊತೆ ಕೆಲಸ ಮಾಡಿ Neutron Scattering by germanium and liquid argon ಬಗ್ಗೆ ವಿಶೇಷ ಸಂಶೋಧನೆ ಮಾಡಿ ವಿಶ್ವದ ಗಮನ ಸೆಳೆದವರು. 200ಕ್ಕೂ ಹೆಚ್ಚು ಸಂಶೋಧನ ಲೇಖನಗಳು, ಪ್ರಕಟಗೊಂಡಿವೆ. ವಿಜ್ಞಾನ ಜಗತ್ತಿಗೆ ಇವರು ಸಲ್ಲಿಸಿದ ಸೇವೆಗಾಗಿ ಮಹೇಂದ್ರಲಾಲ್ 'ಸರ್ಕಾರ್ ಪ್ರಶಸ್ತಿ' ಮತ್ತು 'ಹೋಮಿಜಹಂಗೀರ್' ಬಾಬ ಪ್ರಶಸ್ತಿ ಲಭಿಸಿದೆ.

ಡಾ.ವ್ಯಾಸರಾವ್ ನಿಂಜೂರು

ಗಾಮಾ ಕಿರಣಗಳು ಮತ್ತು ಆಹಾರ ಸಂರಕ್ಷಣೆ, ಕಿಣ್ವಗಳ ಮೇಲೆ ವಿಕಿರಣದ ಪ್ರಭಾವ, ಪ್ರೊಟೀನ್ ಭಾಜಕ ಕೆಥೇಪ್ಸಿನ್ ವರ್ಗದ ಕಿಣ್ವಗಳು. ಲೈಸೋಸೋಮ್ ಕಿಣ್ವಗಳು ಹೀಗೆ ಕಿಣ್ವ ಶಾಸ್ತ್ರದ ಮೇಲೆ ಸಂಶೋಧನೆ ನಡೆಸಿದ ಭಾರತದ ಹೆಸರಾಂತ ವಿಜ್ಞಾನಿ ಬಾಬಾ ಪರಮಾಣು ಸಂಶೋಧನ ಕೇಂದ್ರದ ಬಯೋಕೆಮಿಸ್ಟ್ರಿ ಆಂಡ್ ಫುಡ್ ಟೆಕ್ನಾಲಜಿ ವಿಭಾಗದಲ್ಲಿ ಸೇವೆಸಲ್ಲಿಸಿದ್ದಾರೆ. ಆಹಾರ ವಿಜ್ಞಾನ ವಿಭಾಗದಲ್ಲಿ ಮುಖ್ಯಸ್ಥರಾಗಿದ್ದರು. 87ಕ್ಕೂ ಹೆಚ್ಚು ವೈಜ್ಞಾನಿಕ ಪ್ರಬಂಧಗಳು ದೇಶ ವಿದೇಶದ ಪ್ರತಿಷ್ಠಿತ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿದೆ. ಅಮೇರಿಕ, ಇಂಗ್ಲೆಂಡ್, ಪ್ರಾನ್ಸ್, ಶ್ರೀಲಂಕಾ ದೇಶದ ಅನೇಕ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ವಿಜ್ಞಾನಿಯಗಿ ದುಡಿದಿದ್ದಾರೆ. ಕನ್ನಡದಲ್ಲಿ ವೈಜ್ಞಾನಿಕ ಲೇಖನಗಳು ಪ್ರಕಟಗೊಂಡಿವೆ.

ಡಾ.ಕೆ.ಎನ್ ಉಡುಪ

ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ಶಿಕ್ಷಣ ಪಡೆದು ಅದೇ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿ ಬಹುದೊಡ್ಡ ಸಂಸ್ಥೆಯಾಗಿ ಬೆಳೆಸಿದವರು. ದೇಶದ ಅಗ್ರಮಾನ್ಯ ಶಸ್ತ್ರಚಿಕಿತ್ಸಕರಾಗಿ, ಪ್ರಾಧ್ಯಾಪಕರಾಗಿ ಸಂಶೋಧಕರಾಗಿ, ವಿಶಿಷ್ಟ ಕೊಡುಗೆ ನೀಡಿದ್ದಾರೆ. ದೇಶ ವಿದೇಶಗಳ ನಿಯತ ಕಾಲಿಕೆಗಳಲ್ಲಿ ನೂರಾರು ವೈದ್ಯವಿಜ್ಞಾನ ಲೇಖನಗಳು ಪ್ರಕಟವಾಗಿವೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್ W.H.O ಸಂಸ್ಥೆಗಳು ಸದಸ್ಯತನ ಹಾಗು ಫೆಲೋಶಿಪ್ ನೀಡಿ ಗೌರವಿಸಿವೆ. ಪದ್ಮಶ್ರೀ ಪುರಸ್ಕೃತರು.

ಡಾ.ಅಂಬಲಪಾಡಿ ಸೀತಾರಾಮ ಆಚಾರ್ಯ

ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಎಂ.ಎಸ್ಸಿ ಪದವಿ ಭಾರತೀಯ ವಿಜ್ಞಾನ ಸಂಸ್ಥೆಯಿಂದ ಪಿ.ಎಚ್.ಡಿ ಪದವಿ. ಅಮೇರಿಕೆಯಾ ಯೇಲ್ (yale) ವಿಶ್ವವಿದ್ಯಾಲಯದ Molecular Biophysics ವಿಭಾಗದಲ್ಲಿ ಸೇವೆ. ಅನಂತರ National Institute of Health, Bethesda Rockefeller ವಿಶ್ವವಿದ್ಯಾಲಯ, Albert Einstein college of medicine ಮುಂತಾದ ಸಂಸ್ಥೆಗಳಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ. ಪ್ರೊಟೀನ್ ಮತ್ತು ರಕ್ತದ ಕುರಿತು ವಿಶೇಷವಾದ ಸಂಶೋಧನೆ ಮಾಡಿದ್ದಾರೆ. 83ಕ್ಕೂ ಮಿಕ್ಕಿ ಸಂಶೋಧನ ಲೇಖನಗಳು ನಿಯತ ಕಾಲಿಕೆಗಳಲ್ಲಿ ಪ್ರಕಟವಾಗಿದೆ. 18ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ರಾಷ್ಟ್ರೀಯ ಅಂತರಾಷ್ಟ್ರೀಯ ಸಂಸ್ಥೆಗಳಿಂದ ಗೌರವ ಲಭಿಸಿದೆ.

ಡಾ. ಪುಷ್ಪರಾಜ

ಮುಂಬಯಿ ವಿಶ್ವವಿದ್ಯಾನಿಲಯದಿಂದ ಪದವಿ ಮತ್ತು ಡಾಕ್ಟರೇಟ್. ಮುಂಬಯಿಯ ಬಾಬಾ ಪರಮಾಣು ಸಂಶೋಧನ ಕೇಂದ್ರದಲ್ಲಿ ವಿಜ್ಞಾನಿ. ಅನಂತರ ಕೆನಡದ ಬಿಟ್ಟಾವಾ ವಿಶ್ವವಿದ್ಯಾಲಯದಲ್ಲಿ ' 'ಫೆಲೋ' ಆಗಿ ಕಾರ್ಯನಿರ್ವಹಿಸಿದ್ದರು. ವಿಕಿರಣ ಸಂರಕ್ಷಣಾ ಕ್ಷೇತ್ರದಲ್ಲಿ ಸಂಶೋಧನೆ ಮಾಡಿ ಖ್ಯಾತಿ ಪಡೆದಿದ್ದಾರೆ. ಬಾಬಾ ಪರಮಾಣು ಸಂಶೋಧನ ಕೇಂದ್ರದ 'Radiation hazards control' ವಿಭಾಗದ ಮುಖ್ಯಸ್ಥರಾಗಿದ್ದರು. 88ಕ್ಕೂ ಮಿಕ್ಕಿ ಸಂಶೋಧನ ಬರಹಗಳು ನಿಯತ ಕಾಲಿಕೆಗಳಲ್ಲಿ ಪ್ರಕಟ. ಆಸ್ಟ್ರಿಯಾದ ವಿಯನ್ನಾದಲ್ಲಿರುವ 'International Atomics Energy Agency' ಇದರ ಸದಸ್ಯರು. National Regulatory body ಯ ಸದಸ್ಯ.

ಡಾ.ಬಿ.ಎಸ್ ರಾವ್

ಮುಂಬಯಿಯ ಬಾಬಾ ಪರಮಾಣು ಸಂಶೋಧನ ಸಂಸ್ಥೆಯಲ್ಲಿ ಪದವಿ. ಮುಂಬೈ ವಿಶ್ವವಿದ್ಯಾಲಯದಿಂದ ಬಯೋಫಿಸಿಕ್ಸ್‌ನಲ್ಲಿ ಡಾಕ್ಟರೇಟ್ ಪದವಿ. ಖ್ಯಾತ ವಿಕಿರಣ ತಜ್ಞ, ಕಳೆದ 33ವರ್ಷಗಳಿಂದ Biophysics ಮತ್ತು Radiation safety ಬಗ್ಗೆ ಸಂಶೋಧನೆ, ಬೋಧನೆಯಲ್ಲಿ ತೊಡಗಿದ್ದು ಭಾರತದ ಶ್ರೇಷ್ಠ ವಿಕಿರಣ ಸಂರಕ್ಷಣಾ

ವಿಜ್ಞಾನಿ. 85ಕ್ಕೂ ಮಿಕ್ಕಿ ಲೇಖನಗಳು ರಾಷ್ಟ್ರೀಯ ಅಂತರಾಷ್ಟ್ರೀಯ ನಿಯತ ಕಾಲಿಕೆಗಳಲ್ಲಿ ಪ್ರಕಟವಾಗಿದೆ. ಯುರೋಪಿಯನ್ ಕಮೀಷನಿನ Madam Marie curie Fellowship, ಹಂಗೇರಿಯ Fredric Juliet curie Institute ನ ಸಂದರ್ಶಕ ವಿಜ್ಞಾನಿ. International Journal of Radiation Biology ಇದರ ಸಂಪಾದಕ ಮಂಡಳಿ ಸದಸ್ಯ. ಅಂತೆಯೇ Radiation Protecting Environment Journals ಸಂಪಾದಕರು.

ಇವರಲ್ಲದೆ ಒಂದು ಸಿಗಡಿ ಮೀನು ಗಂಟೆಗೆ ಸಾವಿರಕ್ಕೂ ಹೆಚ್ಚು ಮರಿ ಇಡುವಂತೆ ಮಾಡುವ ಹಾಗೆ ಸಂಶೋಧನೆಮಾಡಿ ಅಂತಾರಾಷ್ಟ್ರೀಯ ಗಮನ ಸೆಳೆದ ವಿಜ್ಞಾನಿ ಅಡೂರು ಲಕ್ಷ್ಮೀನಾರಾಯಣ ಶರಳಾಯ. ನವದೆಹಲಿಯ Life Science Research Board of the Defence Research ನಿರ್ದೇಶಕರಾದ ಡಾ. ಮಂಜಿ, ಬರೋಡದ ಎಂ.ಎಸ್.ವಿಶ್ವವಿದ್ಯಾಲಯದ Food and Nutrition ವಿಭಾಗದ ಮುಖ್ಯಸ್ಥರಾದ ಪ್ರೊ.ಉಳಿಯಾರು ಮಾಣಿ, ಬೆಂಗಳೂರಿನ DRDO Electronics units ನ ನಿರ್ದೇಶಕರಾದ ಪಿ.ಎನ್.ಎ.ಪಿ.ರಾವ್, ಹೈದರಬಾದಿನ IICT ಯಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀಪತಿ ರಾವ್ ಅಮೇರಿಕದಲ್ಲಿರುವ ಡಾ.ರಘುವೀರ ಬಲ್ಲಾಳ್, ಡಾ.ರಮಾನಂದ ಮಧ್ಯಸ್ಥ, ಡಾ.ವೆಂಕಟರಾಜ್ ಭಟ್, ಡಾ.ಉದ್ಯಾವರ ಕೃಷ್ಣ ಮೂರ್ತಿ, ಡಾ.ಮಾಧವ ಮಧ್ಯಸ್ಥ, ಶ್ರೀ.ಕೆ.ಪಿ.ರಾವ್, ಡಾ. ನರಹರಿರಾವ್ ಮುಂತಾದವರು ವಿಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು.

7.2.8 ಶಿವಳ್ಳಿ ಬ್ರಾಹ್ಮಣರಲ್ಲಿ ನಾಟಿ ವೈದ್ಯರು

ಚಿಕಿತ್ಸಾ ಪದ್ಧತಿಗಳಲ್ಲಿ ನಾಟಿ ವೈದ್ಯರು ಭವ್ಯ ಪರಂಪರೆಯಿದೆ ತನ್ನದೆ ಆದ ವೈಶಿಷ್ಟ್ಯ ಮತ್ತು ಮಹತ್ತವನ್ನು ಪಡೆದುಕೂಂಡು ಬಂದಿದೆ. ಹಳ್ಳಿಗಳಲ್ಲಿ ಈ ಪದ್ದತಿಯಿಂದ ರೋಗಗಳಿಗೆ ಔಷಧಿಯನ್ನು ಕೊಟ್ಟು ಗುಣಪಡಿಸಿ ಕೊಳ್ಳುತ್ತಿದ್ದರು.ಸಾಮಾನ್ಯವಾಗಿ ವಂಶಪಾರಂಪರ್ಯವಾಗಿ ಬರುವ ವಿದ್ಯೆಯಿದು. ಔಷದೀಯ ರಹಸ್ಯಗಳನ್ನು ಹೊರಗಿನವರಿಗೆ ಹೇಳುವ ಕ್ರಮವಿಲ್ಲ. ಎಲೆ,ಬೇರು,ಕೆತ್ತೆಗಳಿಂದ ಔಷಧಿಯನ್ನು ತಯಾರುಮಾಡಿ ಕೊಡುತ್ತಿದ್ದರು, ಲೇಪ, ಕಷಾಯ,ಶೇಕ ಕೊಡುವೂದೂ ನಾಟಿಮದ್ದಿನಲ್ಲಿ ಸೇರಿವೆ. ದೈವ ಅಥವಾ ದೇವರನ್ನು ಸ್ಮರಿಸು ಔಷದಕೊಡುವ ಪದ್ದತಿಯು ಇದೆ. ನಾಟಿಮದ್ದಿನಲ್ಲಿ ವಿಶ್ವಾಸವಿಟ್ಟು ಔಷಧಿಸೇವಿಸಿ ರೋಗನಿವಾರಣೆ ಮಾಡಿಕೊಂಡವರು ಅನೇಕರಿದ್ದಾರೆ.ಶಿವಳ್ಳಿ ಬ್ರಾಹ್ಮಣರಲ್ಲೂ ಹೆಸರಾಂತ ನಾಟಿವೈದ್ಯರಿದ್ದಾರೆ.

ಮಿಜಾರಿನ ಒಂಟಿಮಾರಿನ ಪದ್ಮಾವತಿ ಅಮ್ಮ ನಾಟಿ ವೈದ್ಯೆಯಾಗಿ ಪ್ರಸಿದ್ಧಿಯನ್ನು ಪಡೆದಿದ್ದಾರೆ.ಇವರು ಸಾಮಾನ್ಯವಾಗಿ ಹೆಚ್ಚಿನ ರೋಗಗಳಿಗೆ ಮದ್ದು ಕೊಡುತ್ತಿದ್ದರು. ಅರಸಿನ ಕಾಯಿಲೆಗೆ ಕೊಡುತ್ತಿದ್ದ ಔಷಧಿ ರಾಮ ಬಾಣ. ಮುಚ್ಚೂರು ದೇವಸ್ಥಾನದ ಅರ್ಚಕರಮನೆಯವರು ವನಸ್ಪತಿಗಳಿಂದ ತಯಾರಿಸಿ ಕೊಡುತ್ತಿದ್ದ 'ಬಾಣಂತಿ' ಕಷಾಯ ಪ್ರಯೋಜನ ಕಾರಿಯಾಗಿತ್ತು. ಸಿದ್ದಕಟ್ಟೆಯ ಮಾದೇರಿ ಸುಂದರಿಯಮ್ಮನವರು ಎಲ್ಲಾ ರೀತಿಯ ನಾಟಿಮದ್ದುಗಳನ್ನು ತಿಳಿದವರು.ಸಂತತಿ

ಪ್ರತಿಬಂಧಕಕ್ಕೆ ಅವರ ಮದ್ದು ಪರಿಣಾಮಕಾರಿ. ಶಿಬರೂರು ಸಮೀಪದ ಕುದ್ಕೋಳಿ ಅಂಬಕ್ಕನವರು ಬಾಲಗ್ರಹಕ್ಕೆ ಮದ್ದುಕೊಡುವುದರಲ್ಲಿ ಎತ್ತಿದ ಕೈ.

ಮುಲ್ಕಿಯ ಅತಿಕಾರಿಬೆಟ್ಟು ಮೊಯಿಲೊಟ್ಟಿನಲ್ಲಿಯ ಪುಳಿಕೃಷ್ಣಭಟ್ಟರು ಸರ್ಪಸುತ್ತಿಗೆ ಮದ್ದು ಕೊಡುವುದಲ್ಲಿ ಸಿದ್ಧಹಸ್ತರಾಗಿದ್ದರು. ಮಕ್ಕಳ ತಾಮರೆ ರೋಗಕ್ಕೆ ಹೆಜಮಾಡಿಯ ದಿ.ಬಾಗಿಲ್ತಾಯ ಮಾಧವರಾಯರು ಔಷಧಿ ನೀಡುತ್ತಿದ್ದರು. ಅಡ್ವೆಚೆನ್ನಿ ವಾಸುದೇವಭಟ್ಟರೂ ನಾಟಿಮದ್ದಿನಲ್ಲಿ ಪರಿಣತರು.

ಕಾಸರಗೋಡಿನ ಪುಂಡೂರು ಪುಣಿಂಚತ್ತಾಯರ ವಂಶದವರು ನಾಟಿಮದ್ದು ಕೊಡುವುದರಲ್ಲಿ ಸಿದ್ದಹಸ್ತರು.ಸುಬ್ರಾಯ ಪುಣಿಂಚತ್ತಾಯ, ದಾಮೋದರ ಪುಣಿಂಚತ್ತಾಯ, ವೆಂಕಟರಾಜ ಪುಣಿಂಚತ್ತಾಯ ಇವರಲ್ಲಿ ಪ್ರಸಿದ್ದ ನಾಟಿವೈದ್ಯರು. ಕಟೀಲಿನ ದಿ.ಗೋಪಾಲಕೃಷ್ಣ ಆಸ್ರಣ್ಣರು ನಾನಾ ಬಗೆಯ ರೋಗಗಳಮದ್ದು ಕೊಡುತ್ತಿದ್ದರು.ಅವರದ್ದು ಏಕಮೂಲಿಕಾ ಪ್ರಯೋಗ. ಒಂದು ಬೇರನ್ನು ನೀರು, ಹಾಲು, ವೀಳ್ಯದೆಲೆ, ಲಿಂಬೆ, ಶುಂಠಿ, ಸಿಯಾಳ ಹೀಗೆ ಬೇರೆ ಬೇರೆ ರಸಗಳಲ್ಲಿ ಅರೆದು ಕುಡಿಯಲು ಹೇಳುತ್ತಿದ್ದರು. ಇವರ ಸಹೋದರ ದಿ.ಕೃಷ್ಣ ಆಸ್ರಣ್ಣರು ಸರ್ಪಸುತ್ತು, ಬಂಗಾರು ರೋಗಗಳಿಗೆ ಮದ್ದು ಕೊಡುತ್ತಿದ್ದರು. ಅಸ್ರಣ್ಣರತಾಯಿ ಕಮಲಮ್ಮ ಮಕ್ಕಳ ಆರೋಗ್ಯ ರಕ್ಷಣೆಗೆ ಔಷಧಿ ನೀಡುತ್ತಿದ್ದರು. ಮಂಜನಾಡಿಯಶ್ಯಾನುಭೋಗರ ಮನೆಯ ಕಾವೇರಿಯಮ್ಮನ 'ಬಾಣಂತಿಮದ್ದು' ಒಂದು ಪರಿಣಾಮಕಾರಿ ಔಷಧಿ. ಪಡುಬಿದ್ರಿಯ ಪತ್ತಪ್ಪ ಶ್ರೀನಿವಾಸಾಚಾರ್ಯ ಮತ್ತು ಮೋಂಟು ಗೋವಿಂದಣ್ಣ, ಇರುವೈಲು ಅಣ್ಣಿಭಟ್ಟರು ಖ್ಯಾತ ನಾಟಿ ವೈದ್ಯರು.ಪಾಜಕದ ಮಾಧವ ಉಪಾಧ್ಯಾಯರು ಸರ್ಪಗಳಿಗೆ ಔಷಧಿ ಮಾಡುವುದರಲ್ಲಿ ಪರಿಣತರು. ಮೈಸೂರು ಅರಮನೆಯಲ್ಲಿ ರಾಜವೈದ್ಯರಾಗಿದ್ದ ಅತ್ತೂರು ರಘುನಂದನರಾಯರು ನಾಟಿ ವೈದ್ಯ ಪರಿಣತರು ಮದವೂರು ಕೇಕುಣ್ಣಾಯ ರಾಮಕೃಷ್ಣಭಟ್ಟರು ಸರ್ಪಸುತ್ತು ಮತ್ತು ಚರ್ಮರೋಗಗಳನ್ನು ಉಪಶಮನಗೊಳಿಸುವುದರಲ್ಲಿ ಪ್ರಸಿದ್ದರಾಗಿದ್ದಾರೆ.

ಒಟ್ಟಿನಲ್ಲಿ ಸಮಾಜದ ಜನರ ಸ್ವಾಸ್ಥ ಕಾಪಾಡುವಲ್ಲಿ ಶಿವಳ್ಳಿ ಬ್ರಾಹ್ಮಣರಲ್ಲೂ ನಾಟಿ ವೈದ್ಯರು ತಮ್ಮ ಕೈಲಾದ ಸೇವೆ ಮಾಡಿರುವುದು ಗಮನ ಸೆಳೆದಿದೆ.

7.2.9 ಶಿವಳ್ಳಿ ಬ್ರಾಹ್ಮಣರಲ್ಲಿ ಹಿರಿಯ ಸಾಹಿತ್ಯ ಸಾಧಕರು

ಎಸ್.ಯು. ಪಣಿಯಾಡಿ: ಉಡುಪಿಯ ಸ್ವಾತಂತ್ರ್ಯ ಹೋರಾಟಗಾರ, ಸಮಾಜಸುಧಾರಕ, ಅಂತರಂಗ ಪತ್ರಿಕೆಯ ಸ್ಥಾಪಕ ಮತ್ತು ತುಳು ಚಳವಳಿಯ ನೇತಾರರಾಗಿದ್ದರು. ಮೊದಲ ತುಳು ಕಾದಂಬರಿ 'ಸತೀಕಮಲೆ' ಬ್ರಾಹ್ಮಣ ತುಳುವಿನಲ್ಲಿ 1936 ಪ್ರಕಟಿಸಿದ್ದರು. ತುಳುನಾಡ ಛಾಪಖಾನೆಯನ್ನು ತೆರೆದು ತುಳು ಸಾಹಿತ್ಯ ಮಾಲೆಯೆಂಬ ಹೆಸರಲ್ಲಿ ತುಳು ಕೃತಿಗಳನ್ನು ಪ್ರಕಟಿಸಿದ್ದರು.

ಪೇಜಾವರ ಸದಾಶಿವರಾಯರು: ಇವರ 'ವರುಣ' ಎಂಬ ನೀಳ್ಗವನ ಕನ್ನಡದ ಶ್ರೇಷ್ಠ ಕಥನ ಕವನಗಳಲ್ಲಿ ಒಂದು ಇವರ 'ನಾಟ್ಯೋತ್ಸವ' ಎಂಬ ಕವನ ಕನ್ನಡದ ಮೊದಲನೆಯ ನವ್ಯ ಕವನದಾಗಿದೆ. 'ವರುಣ' ಎಂಬ ಕವನ ಸಂಕಲನವನ್ನು ಹೊರತಂದಿದ್ದಾರೆ.

ಮುದ್ರಾಡಿ ಜನಾರ್ದನ ಆಚಾರ್ಯ: ಕನ್ನಡ ಪತ್ರಿಕೋದ್ಯಮಿ. 'ಚಂದ್ರನ ಸಾಕ್ಷಿ' **'ಪ್ರಮಥನಾಥ'** ಎಂಬ ಕತೆಗಳನ್ನು ಬರೆದಿದ್ದಾರೆ.

ಕು.ಶಿ. ಹರಿದಾಸ ಭಟ್ಟ: 'ಲೋಕಾಭಿರಾಮ' ಎನ್ನುವ ಅಂಕಣವನ್ನು ಬರೆದು ಪ್ರಖ್ಯಾತರು
ಡಾ. ಯು.ಆರ್. ಅನಂತಮೂರ್ತಿ: ಜ್ಞಾನಪೀಠ ಪ್ರಶಸ್ತಿ ವಿಜೇತರು. ಸಮಕಾಲೀನ ಕನ್ನಡ ಸಾಹಿತ್ಯಕಾರರಲ್ಲಿ ಚಿಂತನೆ, ವಿಮರ್ಶೆ, ಸೃಜನಶೀಲಕೃತಿಗಳಿಂದ ಕನ್ನಡಿಗರು ಮತ್ತು ಭಾರತೀಯರ ಮೆಚ್ಚುಗೆಗೆ ಪಾತ್ರರಾರದವರು, ಸಂಸ್ಕಾರ, ಭಾರತೀಪುರ, ಘಟಶ್ರಾದ್ಧ, ಅಜ್ಜನ ಹೆಗಲ ಸುಕ್ಕುಗಳು ಮೊದಲಾದ ಕೃತಿಗಳ ಮೂಲಕ ಕನ್ನಡವನ್ನು ಶ್ರೀಮಂತಗೊಳಿಸಿದವರು. 2002 ರಲ್ಲಿ ತುಮಕೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.
ಕಾಪು ಹಯಗ್ರೀವ ಆಚಾರ್ಯ: ತುಳಸೀ ಮೀಮಾಂಸಾ, ಪೂಜಾ ಮೀಮಾಂಸಾ, ಶತಶಾಂತಿ ಪ್ರಕಾಶಿಕಾ, ಶಾಂತಿಪದ್ಧತಿ, ಗರುಡಪುರಾಣ ಇವರ ಕೃತಿಗಳು.
ರಸಿಕ ಪುತ್ತಿಗೆ: ಅವಳ ನೆನಪು, ನವನೀತಂ, ಸಿಂಹನಾದ ಇವರ ಕವನ ಸಂಕಲನಗಳು.
ವೆಂಕಟರಾಜ ಪುಣಿಂಚತ್ತಾಯ: ತುಳು ಗ್ರಂಥ ಸಂಪಾದಕರು. ತುಳು ಭಾಷೆಯಲ್ಲಿ ರಚಿಸಲ್ಪಟ್ಟಿರುವ ಶ್ರೀ ಭಾಗವತೊ, ದೇವೀ ಮಹಾತ್ಮೆ, ತುಳು ಮಹಾಭಾರತೊ, ಮತ್ತು ಕಾವೇರಿ ಪ್ರಾಚೀನ ಶಿಷ್ಟ ಕಾವ್ಯ ಕೃತಿಗಳ ಗ್ರಂಥ ಸಂಪಾದನೆ ಮಾಡಿದ್ದಾರೆ.
ಡಾ.ಪಿ.ಗುರುರಾಜ ಭಟ್ಟ: ತುಳುನಾಡಿನ ಚರಿತ್ರೆಯನ್ನು ಸಂಗ್ರಹಿಸಿ ಇವರು ಬರೆದ Studies in Tuluva History and culture ಕೃತಿ ಇತಿಹಾಸದ ದೃಷ್ಟಿಯಿಂದ ಮೇರುಕೃತಿ.
ಡಾ.ಯು.ಪಿ.ಉಪಾಧ್ಯಾಯ: ಬಹುಭಾಷಾ ವಿದ್ವಾಂಸರು. ಇವರ ಪ್ರಧಾನ ಸಂಪಾದಕತ್ವದಲ್ಲಿ ವಿಶ್ವ ಕೋಶ ಮಾದರಿಯ ತುಳು ನಿಘಂಟು ಆರು ಸಂಪುಟಗಳಲ್ಲಿ ಪ್ರಕಟಗೊಂಡಿದೆ.
ಡಾ. ಸುಶೀಲಾ ಪಿ. ಉಪಾಧ್ಯಾಯ: ಜಾನಪದ ಕಲಾವಿದೆ. ನೂರಾರು ಪಾಡ್ದನಗಳ ಸಂಗ್ರಹ ಮಾಡಿ ಧ್ವನಿಸುರುಳಿ ಹೊರತಂದಿದ್ದಾರೆ.
ಹೆಬ್ರಿ ಖಂಡಿಗ ಪದ್ಮನಾಭ ಚೆನ್ನಿ: ಮೂರು ಸಾವಿರಕ್ಕೂ ಮಿಕ್ಕಿದ ಭಾಮಿನಿ ಷಟ್ಪದಿಗಳಿಂದ ಕೂಡಿದ 'ಶ್ರೀ ರಾಮ ಭಕ್ತಿ ಸಾರಾಮೃತ' ಎಂಬ ರಾಮಾಯಣ ಕಾವ್ಯವನ್ನು ರಚಿಸಿದ್ದಾರೆ. ಪುಷ್ಪವೇಣಿ ಸ್ವಯಂವರ, ಕಂಜಾಕ್ಷಿ ಪರಿಣಯ, ನಾರದ ಪ್ರತಾಪ ಎಂಬ ಮೂರು ಯಕ್ಷಗಾನ ಕೃತಿಗಳನ್ನು ಬರೆದಿದ್ದಾರೆ. ಪ್ರಹ್ಲಾದ ಚರಿತ್ರೆ ಎಂಬ ಸಂಕೀರ್ತನೆ ಪದಗಳ ಸಂಕಲನವನ್ನು ಹೊರತಂದಿದ್ದಾರೆ.
ಸಾಂತ್ಯಾರು ವೆಂಕಟರಾಜ: ಮಾನಸಗಂಗೆ ಕವನ ಸಂಕಲನ, ಕಾವ್ಯಮನೋರಮಾ ಮತ್ತು ಅಂಬಾಸ್ತವನ ಎರಡು ಸಂಸ್ಕೃತ ಕಾವ್ಯಗಳನ್ನು ಬರೆದಿದ್ದಾರೆ.
ಪಾ.ವೆಂ. ಆಚಾರ್ಯ: ಬಯ್ಯಮಲ್ಲಿಗೆ ಎನ್ನುವ ಕವನ ಸಂಕಲನ. ಪದಾರ್ಥ ಚಿಂತಾಮಣಿ ಎಂಬ ಪದಮೂಲ ಶೋಧ ಕೃತಿ. ಹೌಸಿಂಗ್ ಕಾಲನಿ, ಕನ್ನಡದ ಮುಖ್ಯ ನವ್ಯಕವನ.

ಇವರೆಲ್ಲ ಶಿವಳ್ಳಿ ಬ್ರಾಹ್ಮಣರು. ಸಂಸ್ಕೃತ ಕನ್ನಡ ಸಾರಸ್ವತ ಲೋಕಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

7.2.10 ರಾಜಕೀಯ ಕ್ಷೇತ್ರದಲ್ಲಿ ಶಿವಳ್ಳಿಯವರು

1. ಡಾ.ವಿ.ಎಸ್. ಆಚಾರ್ಯ: ತನ್ನ ವೈದ್ಯಕೀಯ ಶಿಕ್ಷಣವನ್ನು ಮಣಿಪಾಲದಲ್ಲಿ ಮುಗಿಸಿದ ಅನಂತರ ಮಲ್ಪೆಯ ಬಳಿ ವೈದ್ಯಕೀಯ ಸೇವೆಯನ್ನು 1965 ರಲ್ಲಿ ಪ್ರಾರಂಭಿಸಿದ ಡಾ। ವಿ.ಎಸ್.ಆಚಾರ್ಯರು ಅನಂತರ ಉಡುಪಿಯ ನಗರ ಸಭಾ ಅಧ್ಯಕ್ಷರಾಗಿ, ಉಡುಪಿ ವಿಧಾನಸಭಾ ಸದಸ್ಯರಾಗಿ, ಇದೀಗ ಎರಡನೇ ಬಾರಿ ವಿಧಾನ ಪರಿಷತ್ ಸದಸ್ಯರಾಗಿ

ಕರ್ನಾಟಕದ ರಾಜಕೀಯದಲ್ಲಿ ಕಳೆದ ನಾಲ್ಕು ದಶಕಗಳಿಂದ ಪರಿಚಿತರು. ಸದ್ಯ ಗೃಹಸಚಿವರು.

2. ರಘುಪತಿ ಭಟ್:ಉಡುಪಿಕ್ಷೇತ್ರದಿಂದ ಎಂ.ಎಲ್.ಎ. ಆಗಿ ಆಯ್ಕೆಗೊಂಡಿದ್ದಾರೆ. ಬಿ.ಜೆ.ಪಿ ಪಕ್ಷದ ಧುರೀಣರಾಗಿ ಜನಮನವನ್ನು ಗೆದ್ದಿದ್ದಾರೆ.

3.ಸುರೇಶ್ ಕಲ್ಮಾಡಿ: ಮಹಾರಾಷ್ಟ್ರದ ಪೂನದಿಂದ ಎಂ.ಪಿ. ಆಗಿ ಆಯ್ಕೆಗೊಂಡು ರೈಲ್ವೇ ಮಂತ್ರಿ (State) ಆಗಿ ಸೇವೆಸಲ್ಲಿಸಿದ್ದಾರೆ. ಕ್ರೀಡಾರಂಗದ ಮುಖ್ಯಸ್ಥರಾಗಿ ಭಾರತವನ್ನು ಪ್ರತಿನಿಧೀಕರಿಸಿದ್ದಾರೆ.

4. ದಿ। ಕುಬಣೂರು ಬಾಲಕೃಷ್ಣ ರಾಯರು: ವಿಧಾನಪರಿಷತ್ತಿನ (MLC) ಸದಸ್ಯರಾಗಿ ಆಯ್ಕೆಗೊಂಡು ಯಕ್ಷಗಾನಕ್ಕೆ ವಿಧಿಸಿದ್ದ ಮನೋರಂಜನೆ ತೆರಿಗೆಯನ್ನು ರದ್ದುಗೊಳಿಸಿ ಯಕ್ಷರಂಗಕ್ಕೆ ಉಪಕಾರ ಮಾಡಿದ್ದರು.

5. ನ್ಯಾಯವಾದಿ ಯು.ಪಿ. ಕುಣಿಕುಳ್ಳಾಯ: ಕಾಸರಗೋಡು ಕ್ಷೇತ್ರದಿಂದ ಎರಡು ಸಲ ಎಂ.ಎಲ್.ಎ. ಆಗಿ ಆಯ್ಕೆಗೊಂಡಿದ್ದರು.

6. ಬಿ.ವಿ. ಕಕ್ಕಿಲ್ಲಾಯ: ಎಂ.ಎಲ್. ಎ. ಆಗಿ ಎರಡು ಸಲ, ರಾಜ್ಯಸಭಾ ಸದಸ್ಯರಾಗಿ ಒಂದು ಸಲ
ಆಯ್ಕೆಗೊಂಡಿದ್ದರು.

7. ಕೆ. ಆರ್. ಆಚಾರ್ಯ: ಎಂ.ಪಿ. ಆಗಿ ಎರಡು ಸಲ ಆಯ್ಕೆ ಗೊಂಡಿದ್ದರು.

8. ಎನ್.ಶಿವ. ರಾವ್: ಎಂ. ಎಲ್. ಎ. ಆಗಿ ಬಂಟ್ವಾಳ ಕ್ಷೇತ್ರದಿಂದ ಆಯ್ಕೆಗೊಂಡಿದ್ದರು.

9. ಡಾ। ಯು.ಕೃಷ್ಣ ರಾವ್: ಮದ್ರಾಸು ಲೆಜಿಸ್ಲೇಟಿವ್ ಅಸೆಂಬ್ಲಿಯ Speaker ಆಗಿ Industrial Minister
ಆಗಿ ಕೀರ್ತಿ ಪಡೆದಿದ್ದರು.

10. ಡಾ। ಯು.ರಾಮ ರಾವ್: ಮದ್ರಾಸು ಪ್ರಾಂತ್ಯದ ಲೆಜಿಸ್ಲೇಟಿವ್ ಅಸೆಂಬ್ಲಿಯ ಸದಸ್ಯರಾಗಿದ್ದರು.

7.2.11 ಶಿವಳ್ಳಿ ಬ್ರಾಹ್ಮಣರ ಸಂಸ್ಕೃತ ಕೃತಿಗಳು

1.ಹಸ್ತಾಮಲಕಾಚಾರ್ಯ: (ಕ್ರಿ.ಶ.9ನೇ ಶತಮಾನ)

ಶಿವಳ್ಳಿ ಗ್ರಾಮದ ಪ್ರಭಾಕರ ಎಂಬ ಬ್ರಾಹ್ಮಣನ ಮಗ. ಅದ್ವೈತಮತ ಪ್ರತಿಷ್ಠಾಪಕರಾದ ಶ್ರೀ ಶಂಕರ ಭಗವತ್ಪಾದರ ಪ್ರಮುಖ ನಾಲ್ವರು ಶಿಷ್ಯರಲ್ಲಿ ಒಬ್ಬರು ಎಂದು ಮಾಧವೀಯ ಶಂಕರವಿಜಯದಿಂದ ತಿಳಿದುಬರುತ್ತದೆ. ಅವರು ಹೇಳಿದ ಹನ್ನೆರಡು ಶ್ಲೋಕಾತ್ಮಕವಾದ ಪ್ರಕರಣವೇ ತುಳುನಾಡಿನ ಮೊತ್ತಮೊದಲ ಸಂಸ್ಕೃತ ಕೃತಿ.

1. ಹಸ್ತಾಮಲಕಪ್ರಕರಣ
2. **ಬಿಲ್ವಮಂಗಲಾಚಾರ್ಯ:(ಕ್ರಿ.ಶ.11ನೇ ಶತಮಾನ)**

ಧರ್ಮಸ್ಥಳದ ಬಳಿಯ ಕೊಕ್ಕಡದ ದಿವಾಕರ ಎಂಬ ಶಿವಳ್ಳಿ ಬ್ರಾಹ್ಮಣನು ಕೇರಳದಲ್ಲಿ ಸಂಸ್ಕೃತ ವ್ಯಾಕರಣ, ಕಾವ್ಯಾದಿಗಳನ್ನು ಅಧ್ಯಯನಮಾಡಿ, **'ಲೀಲಾಶುಕ'** ಎಂಬ ಕಾವ್ಯನಾಮದಿಂದ ಕೃತಿಗಳನ್ನು ರಚಿಸಿದ. ಕುಂಬಳೆಯ ಸಮೀಪ ಬಿಲ್ವಮಂಗಲ ಎಂಬ ಇನ್ನೊಂದು ಹೆಸರುಳ್ಳ 'ಅನಂತಪುರ' ಕ್ಷೇತ್ರದಲ್ಲಿ ವಾಸಿಸುತ್ತಿದ್ದುದರಿಂದ

'ಬಿಲ್ವಮಂಗಲಮುನಿ' ಎಂದು ಪ್ರಸಿದ್ಧನಾದ. ಕೇರಳದ ವೈಷ್ಣವ ಕ್ಷೇತ್ರಗಳಲ್ಲೆಲ್ಲ ಇವನ ಕುರಿತಾದ ಐತಿಹ್ಯಗಳು ಇವೆ.

2.ಕೃಷ್ಣಕರ್ಣಾಮೃತ
3. ಗೋವಿಂದದಾಮೋದರಸ್ತೋತ್ರ
4.ಶ್ಯಾಮಲಾದಂಡಕ

3. ತ್ರಿವಿಕ್ರಮಪಂಡಿತ:(ಕ್ರಿ.ಶ.13ನೇ ಶತಕ)

ಕಾಸರಗೋಡು ಸಮೀಪದ ಕಾವುಮಠದಲ್ಲಿನ ಪೆಜತ್ತಾಯ ವಂಶದ ಸುಬ್ರಹ್ಮಣ್ಯಪಂಡಿತರ ಮಗ. ಅದ್ವೈತಮತಾವಲಂಬಿಯಾಗಿದ್ದ ಇವರು ಶ್ರೀ ಮಧ್ವಾಚಾರ್ಯರೊಂದಿಗೆ 15 ದಿನಗಳವರೆಗೆ ವಾದಮಾಡಿ ಸೋತರಲ್ಲದೆ ಅವರ ಶಿಷ್ಯತ್ವವನ್ನು ಅಂಗೀಕರಿಸಿದರು.

5.ಉಷಾಹರಣ(ಮಹಾಕಾವ್ಯ)
6.ತತ್ತ್ವದೀಪಿಕಾ(ಮೇರುಕೃತಿ)
7.ವಿಷ್ಣುಸ್ತುತಿ
8.ಮಧ್ವಸ್ತುತಿ
9.ವಾಯುಸ್ತುತಿ
10.ತಿಥಿನಿರ್ಣಯ

4. ಮಧ್ವಾಚಾರ್ಯ:(ಕ್ರಿ.ಶ. 1238-1317)

ಉಡುಪಿಯ ಸಮೀಪ ಪಾಜಕದಲ್ಲಿ ಮಧ್ಯಗೇಹ (ನಡ್ಯಂತಿಲ್ಲಾಯ) ಕುಲದಲ್ಲಿ ಜನಿಸಿದ ವಾಸುದೇವನು ಅದ್ವೈತ-ಭಾಗವತ ಸಂಪ್ರದಾಯದ ಪುರುಷೋತ್ತಮ ತೀರ್ಥರಿಂದ (ಅಚ್ಯುತಪ್ರಜ್ಞ ಎಂದು ಅವರ ಇನ್ನೊಂದು ಹೆಸರು) ಸಂನ್ಯಾಸ ದೀಕ್ಷೆಯನ್ನು ಪಡೆದು 'ಆನಂದತೀರ್ಥ'ನಾದ. 'ಪೂರ್ಣಪ್ರಜ್ಞ' ಎಂದು ಅವರ ಇನ್ನೊಂದು ಹೆಸರು. 'ಮಧ್ವ' ಎಂಬುದು ಅವರಿಂದ ಸ್ವಯಂ ಆವಿಷ್ಕೃತ ವೈದಿಕ ಹೆಸರು. ದ್ವೈತಮತವನ್ನು (ಇದಕ್ಕೆ 'ತತ್ವವಾದ' ಎಂಬ ಇನ್ನೊಂದು ಹೆಸರಿದೆ) ಪ್ರಚಾರಮಾಡಿ 'ಮಧ್ವಾಚಾರ್ಯ' ಎಂದು ಪ್ರಸಿದ್ದರಾದರು. ಭಾರತದ ಆಚಾರ್ಯತ್ರಯರಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟಿದ್ದಾರೆ. ಅವರ 37 ಕೃತಿಗಳು ಪ್ರಸಿದ್ಧವಾಗಿದ್ದುವು.ಇತ್ತೀಚೆಗೆ ಸಿಕ್ಕಿದ 'ನ್ಯಾಸಪದ್ಧತಿ', 'ತಿಥಿನಿರ್ಣಯ' ಹಾಗೂ 'ಕಂದುಕಸ್ತುತಿ'ಗಳನ್ನು ಸೇರಿಸಿ ಅವರ ಕೃತಿಗಳ ಸಂಖ್ಯೆ ಈಗ 40 ಆಗಿದೆ.

ಕಾವ್ಯಗಳು-

11.ಯಮಕಭಾರತ (ಚಿತ್ರಕಾವ್ಯ)
12.ದ್ವಾದಶಸ್ತೋತ್ರಗಳು
13.ಕೃಷ್ಣಕಂದುಕಸ್ತುತಿ
14.ನರಸಿಂಹ ನಖಸ್ತುತಿ

ಪ್ರಕರಣಗ್ರಂಥಗಳು

15. ತತ್ವವಿವೇಕ
16.ತತ್ವೋದ್ಯೋತ (ವಾದ)
17. ತತ್ವಸಂಖ್ಯಾನ
18.ವಿಷ್ಣುತತ್ವವಿನಿರ್ಣಯ
19. ಕರ್ಮನಿರ್ಣಯ (ಖಂಡಾರ್ಥನಿರ್ಣಯ)
20.ಪ್ರಮಾಣಲಕ್ಷಣ

21. ಕಥಾಲಕ್ಷಣ(ವಾದಲಕ್ಷಣ)
22.ಉಪಾಧಿಖಂಡನ
23. ಮಿಥ್ಯಾತ್ವಾನುಮಾನಖಂಡನ
24.ಮಾಯಾವಾದಖಂಡನ.

ಇತಿಹಾಸ-ಪುರಾಣ ಸಮನ್ವಯ ಗ್ರಂಥಗಳು.

25.ಮಹಾಭಾರತತಾತ್ಪರ್ಯನಿರ್ಣಯ (ಮೇರುಕೃತಿ)

26.ಭಾಗವತತಾತ್ಪರ್ಯನಿರ್ಣಯ

ಆಚಾರಗ್ರಂಥಗಳು

27.ಸದಾಚಾರಸ್ಮೃತಿ
28.ಜಯಂತೀನಿರ್ಣಯ
29.ಯತಿಪ್ರಣವಕಲ್ಪ
30.ಕೃಷ್ಣಾಮೃತಮಹಾರ್ಣವ
31. ನ್ಯಾಸಪದ್ಧತಿ
32.ತಿಥಿನಿರ್ಣಯ
33.ತಂತ್ರಸಾರಸಂಗ್ರಹ
34.ಋಗ್ಭಾಷ್ಯ(1ನೇ ಮಂಡಲದ 40 ಸೂಕ್ತಗಳವರೆಗೆ)
35-44 ದಶೋಪನಿಷದ್‌ಭಾಷ್ಯಗಳು
45.ಭಗವದ್‌ಗೀತಾಭಾಷ್ಯ
46. ಗೀತಾತಾತ್ಪರ್ಯನಿರ್ಣಯ
47.ಬ್ರಹ್ಮಸೂತ್ರಭಾಷ್ಯ
48.ಅನುವ್ಯಾಖ್ಯಾನ
49.ಅಣುಭಾಷ್ಯ (ಸರ್ವಶಾಸ್ತ್ರಾರ್ಥಸಂಗ್ರಹ)
50.ನ್ಯಾಯವಿವರಣ.

5.ವಿಷ್ಣುತೀರ್ಥ (ಕ್ರಿ.ಶ.13ನೇ ಶತಮಾನ)

ಪೂರ್ವಾಶ್ರಮದಲ್ಲಿ ಮಧ್ವಾಚಾರ್ಯರ ಸಹೋದರ ಹಾಗೂ ಶಿಷ್ಯ. ಸೋದೆಮಠ ಮತ್ತು ಸುಬ್ರಹ್ಮಣ್ಯಮಠಗಳ ಮೊದಲ ಯತಿ.

51.ಸನ್ಯಾಸಪದ್ಧತಿ (ವಿಷ್ಣುತೀರ್ಥರು)
52.ಶ್ರವಣದ್ವಾದಶೀನಿರ್ಣಯ
53.ಮಧ್ವವಿಜಯ ಪ್ರಮೇಯಮಾಲಿಕಾ
54.ರಾಮಸ್ತೋತ್ರ
55.ರಮೇಶಸ್ತುತಿ.

6.ಶಂಕರಪಂಡಿತ: (ಕ್ರಿ.ಶ.13ನೇ ಶತಮಾನ)

ತ್ರಿವಿಕ್ರಮಪಂಡಿತರ ತಮ್ಮ.ಮಧ್ವಾಚಾರ್ಯರ ಶಿಷ್ಯ ಹಾಗೂ ಗ್ರಂಥಪಾಲ.

56.ಅನುವ್ಯಾಖ್ಯಾನ- ಸಂಬಂಧದೀಪಿಕಾ

57.ಅನುವ್ಯಾಖ್ಯಾನ- ನ್ಯಾಯವಿವರಣ ಸಂಬಂಧದೀಪಿಕಾ

7.ಕಲ್ಯಾಣೀದೇವಿ: (ಕ್ರಿ.ಶ.13ನೇ ಶತಮಾನ)

ಪ್ರಾಚೀನ ತುಳುನಾಡಿನ ಏಕೈಕ ಸಂಸ್ಕೃತ ಕವಯಿತ್ರಿ. ತ್ರಿವಿಕ್ರಮಪಂಡಿತರ ತಂಗಿ. ಅವಿವಾಹಿತೆಯಾಗಿಯೇ ಇದ್ದಳು. (ಮಧ್ವಾಚಾರ್ಯರ ಅಕ್ಕ ಇನ್ನೊಬ್ಬ ಕಲ್ಯಾಣೀದೇವಿ ಕೂಡ ಸ್ತೋತ್ರಗಳನ್ನು ರಚಿಸಿದ್ದಳು ಎನ್ನಲಾಗಿದೆ.)

58.ಗೋವಿಂದಸ್ತೋತ್ರ 59.ಮುಕುಂದಸ್ತೋತ್ರ

60.ಅಣುವಾಯುಸ್ತುತಿ 61.ಪೂರ್ಣಬೋಧಸೋತ್ರ

8.ನಾರಾಯಣಪಂಡಿತ: (ಕ್ರಿ.ಶ.1290-1370)

ತ್ರಿವಿಕ್ರಮಪಂಡಿತರ ಮೂರನೇ ಮಗ. ಮಧ್ವಾಚಾರ್ಯರ ಜೀವನಚರಿತ್ರೆಯನ್ನು 'ಮಧ್ವವಿಜಯ' ಎಂಬ ಐತಿಹಾಸಿಕ ಕಾವ್ಯವನ್ನಾಗಿ ಹೆಣೆದವರು. 'ಸಂಗ್ರಹ ರಾಮಾಯಣ' ಮಹಾಕ್ಯಾವ್ಯ ಇವರ ಮೇರುಕೃತಿ.

ಕಾವ್ಯಾಗ್ರಂಥಗಳು

62.ಸಂಗ್ರಹರಾಮಾಯಣ (ಮಹಾಕಾವ್ಯಾ) 63.ಮಧ್ವವಿಜಯ (ಐತಿಹಾಸಿಕ ಕಾವ್ಯ)

64.ಪಾರಿಜಾತಹರಣ (ಖಂಡಕಾವ್ಯ) 65.ಶುಭೋದಯ(ಖಂಡಕಾವ್ಯ)

66.ಮಣಿಮಂಜರಿ(ದುಷ್ಕಾವ್ಯ)

ಆಚಾರಗ್ರಂಥಗಳು

67. ಯೋಗದೀಪಿಕಾ 68.ಧ್ಯಾನಮಾಲಾ

ಸ್ತೋತ್ರಗಳು

69.ಶಿವಸ್ತುತಿ 70.ನರಸಿಂಹಸ್ತುತಿ.

71. ರಾಮಗೀತ್ಯಷ್ಟಕ 72. ದಾಶರಥ್ಯಷ್ಟಕ

73. ಕೃಷ್ಣಮಾಲಾಸ್ತೋತ್ರ 74.ಮಹಾಲಕ್ಷ್ಮೀಸ್ತುತಿ

75. ಮಾನಸಪೂಜಾ 76.ಮಧ್ವಕವಚ

77. ಪ್ರಮೇಯನವಮಾಲಿಕಾ(ಅಣುಮಧ್ವವಿಜಯ)

78. ನಯಚಂದ್ರಿಕಾ (ಅನುವ್ಯಾಖ್ಯಾನಟೀಕೆ) 79.ತತ್ವಮಂಜರಿ

80. ಭಾವಪ್ರಕಾಶಿಕಾ(ಮಧ್ವವಿಜಯಟೀಕೆ) 81.ಯಮಕಭಾರತಟೀಕಾ

82. ಪ್ರಮಾಣಲಕ್ಷಣಟೀಕೆ 83.ಅಣುಭಾಷ್ಯಟೀಕೆ

84. ಕೃಷ್ಣಾಮೃತಮಹಾರ್ಣವಟೀಕೆ 85.ಮಿಥ್ಯಾತ್ವಾನುಮಾನಖಂಡನಟೀಕೆ.

9.ವಾಮನಪಂಡಿತ:(ಕ್ರಿ.ಶ.14ನೇ ಶತಮಾನ)

'ತ್ರೈವಿಕ್ರಮಾರ್ಯದಾಸ' ಎಂಬುದು ಇವರ ಕಾವ್ಯನಾಮ. ಇಲ್ಲಿ ತ್ರೈವಿಕ್ರಮ ಎಂದರೆ ನಾರಾಯಣಪಂಡಿತರೇ. ಅವರ ಮಗನೇ ಇರಬೇಕು. ಪ್ರಶ್ನೋಪನಿಷದ್ ಭಾಷ್ಯ ಟೀಕೆಯಲ್ಲಿ 'ಸಮಾರ್ಪಯದ್ ವಾಮನೋಯಂ' ಎಂದಿದೆ. ಆದ್ದರಿಂದ ಇವರ ನಿಜನಾಮ 'ವಾಮನ' ಎಂದು ತಿಳಿಯುತ್ತದೆ.

86.ಆನಂದಮಾಲಾ (ಅಣುಭಾಷ್ಯ ಟೀಕೆ)

87–92 ಆರು ಉಪನಿಷದ್‌ಭಾಷ್ಯ ಟೀಕೆಗಳು

93.ಮಣಿಮಂಜುರೀವ್ಯಾಖ್ಯಾನ

10. ಅವರಜನಿ: (ಕ್ರಿ.ಶ.14ನೇ ಶತಕ)

ತ್ರಿವಿಕ್ರಮಪಂಡಿತರ ಮಕ್ಕಳಲ್ಲಿ ಒಬ್ಬ. ನಾರಾಯಣಪಂಡಿತರ ಸಹೋದರ. ನಿಜನಾಮ ತಿಳಿದಿಲ್ಲ.

94.ವಾಸುದೇವಗೀತಿ 95.ನಂದಸೂನುಸ್ತೋತ್ರ

11. ಉಪಾಂತ್ಯನಂದನ: (ಕ್ರಿ.ಶ.14ನೇಶತಕ)

ಈತನೂ ತ್ರಿವಿಕ್ರಮಪಂಡಿತರ ಪುತ್ರ. ನಿಜನಾಮವನ್ನು ಮರೆಮಾಡಿಕೊಂಡಿದ್ದಾನೆ.

96.ರಮೇಶ ಗೀತಿ

12.ಹೃಷೀಕೇಶತೀರ್ಥ: (ಕ್ರಿ.ಶ.14ನೇ ಶತಮಾನ)

ಮಧ್ವಾಚಾರ್ಯರ ಪ್ರಥಮ ಶಿಷ್ಯ. ಮಧ್ವಾಚಾರ್ಯರ ಎಲ್ಲ ಕೃತಿಗಳ ಪ್ರತಿ ತೆಗೆದು ರಕ್ಷಿಸಿದವರು. ಉಡುಪಿ ಪಲಿಮಾರುಮಠದ ಮೂಲಯತಿ.

97.ಸಂಪ್ರದಾಯಪದ್ಧತಿ

98.ಅಣುಮಧ್ವಚರಿತ

13.ಕಮಲಾಕ್ಷತೀರ್ಥ:(ಕ್ರಿ.ಶ.14ನೇ ಶತಮಾನ)

ಉಡುಪಿ ಪೇಜಾವರ ಮಠದ ದ್ವಿತೀಯ ಯತಿ.

99.ಹರಿಗಾಥಾಸ್ತುತಿ

14.ಅನಂತತೀರ್ಥ:(ಕ್ರಿ.ಶ. 14ನೇ ಶತಮಾನ)

ಯಾವ ಮಠದ ಯತಿ ಎಂದು ಗೊತ್ತಾಗಿಲ್ಲ.

100.ಭಾಗವತವ್ಯಾಖ್ಯಾನ (ತ್ರಿಸ್ಕಂಧಪರಿಮಿತ)

15. ರಾಜರಾಜೇಶ್ವರತೀರ್ಥ: (ಕ್ರಿ.ಶ.14ನೇ ಶತಮಾನ)

ಪಲಿಮಾರುಮಠದ ಆರನೇ ಯತಿ. ಕಾಳಿದಾಸನ ಮೇಘಸಂದೇಶವನ್ನು ಅನುಕರಿಸಿ ನಿರ್ಮಿತವಾದ ಸಂದೇಶಕಾವ್ಯಗಳಲ್ಲಿ ಇವರ 'ರಾಮಸಂದೇಶ' ಒಂದು ಮನೋಜ್ಞ ಖಂಡಕಾವ್ಯ. ಲಕ್ಷ್ಮೀರ್ಯಸ್ಯ ಪರಿಗ್ರಹ: ಎಂದು ಆರಂಭವಾಗುವ ಇವರ 'ಮಂಗಲಾಷ್ಟಕ' ತುಂಬ ಜನಪ್ರಿಯ.

101.ರಾಮಸಂದೇಶ(ಖಂಡಕಾವ್ಯ) 102.ಮಂಗಲಾಷ್ಟಕ

16. ವಿಜಯಧ್ವಜತೀರ್ಥ:

ಪೇಜಾವರಮಠದ ಏಳನೆಯ ಯತಿ.

103.ಪದರತ್ನಾವಲಿ(ಭಾಗವತವ್ಯಾಖ್ಯಾನ)

104.ದಶಾವತಾರ ಹರಿಗಾಥಾ(ಸ್ತೋತ್ರ)

17. ವೇದಾತ್ಮತೀರ್ಥ:

ಸೋದೆಮಠದ 10ನೇ ಯತಿ.

105.ಕವಿಕರ್ಣಾಮೃತ(ವಾಯುಸ್ತುತಿವ್ಯಾಖ್ಯಾನ)

18.ವೇದಾಂಗತೀರ್ಥ: (ಕ್ರಿ.ಶ.1450)

ಸೋದೆಮಠದ 13ನೇ ಯತಿ.

106.ಮಹಭಾರತತಾತ್ಪರ್ಯನಿರ್ಣಯಟೀಕೆ 107.ಭಗವದ್ಗೀತಾಟಿಪ್ಪಣಿ

108.ಪದಾರ್ಥದೀಪಿಕಾ(ಮಧ್ವವಿಜಯಟೀಕೆ) 109.ಪಾರಿಜಾತಹರಣಟೀಕೆ

110.ಅಣುಮಧ್ವವಿಜಯವ್ಯಾಖ್ಯಾನ

19. ವಾದಿರಾಜತೀರ್ಥ:(ಕ್ರಿ.ಶ. 1480–1600)

ಸೋದೆಮಠದ 20ನೇ ಯತಿ. ಮಾಧ್ವ ಯತಿಗಳಲ್ಲಿ ಅತ್ಯಂತ ಪ್ರಸಿದ್ದರು. ಕುಂಭಾಸಿ ಕ್ಷೇತ್ರದ ಬಳಿಯ ಹೂವಿನಕೆರೆ ಗ್ರಾಮದಲ್ಲಿ ಹುಟ್ಟಿದ ಇವರ ಬಾಲ್ಯನಾಮ 'ಭೂವರಾಹ' ಎಂದು. 120 ವರ್ಷ ಜೀವಿಸಿ 16ನೇ ಶತಮಾನವನ್ನು ಸಂಪೂರ್ಣ ಕಂಡರು. ಸಮಾಜಸುಧಾರಕರಾದ ಇವರು ಉಡುಪಿ ಕೃಷ್ಣನ ಪೂಜಾಪರ್ಯಾಯದ ಅವಧಿಯನ್ನು ಎರಡು ತಿಂಗಳಿಂದ ಎರಡು ವರ್ಷಕ್ಕೆ ಹೆಚ್ಚಿಸಿದರು. ಹಯಗ್ರೀವೋಪಾಸಕರಾದ ಇವರು 'ಹಯವದನ' ಮುದ್ರಾಂಕಿತವಾದ ಅಸಂಖ್ಯ ಕೀರ್ತನೆಗಳನ್ನು ಕನ್ನಡದಲ್ಲಿ ರಚಿಸಿದರು. ಸಂಸ್ಕೃತದಲ್ಲಿ ಕೂಡ ಅವರು ಶಾಸ್ತ್ರ–ಕಾವ್ಯಗಳನ್ನು ಹಾಗೂ ಸ್ತೋತ್ರಗಳನ್ನು ಬರೆದಿದ್ದಾರೆ.

ಕಾವ್ಯಗಳು

111. ರುಕ್ಮಿಣೀಶವಿಜಯ(ಮಹಾಕಾವ್ಯ)

112. ತೀರ್ಥಪ್ರಬಂಧ(ಪ್ರವಾಸಕಾವ್ಯ)

113. ಕವಿಕದಂಬಕಂಠಭೂಷಾ

ಶಾಸ್ತ್ರಗ್ರಂಥಗಳು

114.ಯುಕ್ತಿಮಲ್ಲಿಕಾ(ಮೇರುಕೃತಿ)

115.ನ್ಯಾಯರತ್ನಾವಲೀ

116.ಸರಸಭಾರತೀವಿಲಾಸ

117.ಚಕ್ರಮೀಮಾಂಸಾ

118.ಹರಿಭಕ್ತಲತಾ

119ಶ್ರುತಿತತ್ವಪ್ರಕಾಶಿಕಾ

120.ಉಪನ್ಯಾಸರತ್ನಮಾಲಾ

121.ಸಂಕಲ್ಪಪದ್ದತಿ

122.ಕಲ್ಪಲತಾ

123.ವಿವರಣವ್ರಣ

124.ಭೂಗೋಲವರ್ಣನ

125.ಚಿಂತಾಖಂಡನ

126.ಸದಾಚಾರಸ್ಮೃತಿ

127.ಭಾಗವತಾನುಕ್ರಮಣಿಕಾ

128.ಪಾಷಂಡಮತಖಂಡನ

129.ವಾಯುಸ್ತುತಿ ಪುರಶ್ಚರವಿಧಿ

130. ಸಂಸ್ಕೃತ ಸೂತ್ರಾರ್ಥ

131.ಅಧಿಕರಣನಾಮಾವಲಿ

132. ತಾರತಮ್ಯ

133.ನಯಸಿದ್ದಾಂತಸಂಗ್ರಹ

134. ಮಾಧ್ವವಾಗ್ವಜ್ರಾವಲಿ

ಜ್ಯೋತಿಷ ಗ್ರಂಥಗಳು

135. ಶಕುನಮಾಲಾ

136.ಮುಹೂರ್ತರಾಜ

137. ಏಕಾದಶೀನಿರ್ಣಯ

ಸ್ತೋತ್ರಗಳು

138. ರಮೇಶಪ್ರಾತ:ಸ್ಮರಣ

139. ಉಕ್ತಿಪ್ರತ್ಯುಕ್ತಿಸ್ತೋತ್ರ

140. ರಾಮಕವಚ

141. ಅವತಾರತ್ರಯಸ್ತೋತ್ರ

142. ವ್ಯಾಸವರ್ಣನ

143. ಪಾಷಂಡಮತಖಂಡನ ವ್ಯಾಸಸ್ತೋತ್ರ

144. ತ್ರಿವಿಕ್ರಮಸ್ತೋತ್ರ

145. ಹಯಗ್ರೀವಧ್ಯಾನಪ್ರಕರಣ

146. ಹಯಗ್ರೀವಸ್ತುತಿ

147. ಹಯಗ್ರೀವಸಂಪದಾಸ್ತೋತ್ರ

148.ದಶಾವತಾರಸ್ತೋತ್ರ

149. ಧೀಶುದ್ಧಿಸ್ತೋತ್ರ

150. ಶ್ರೀಶಗುಣದರ್ಪಣ

151. ಶ್ಲೋಕತ್ರಯ(ನೈವೇದ್ಯಪ್ರಕಾರ)

152. ಸಪ್ತರಾತ್ರೋತ್ಸವಪ್ರಕಾರ

153. ಅಭಯಸಂಸ್ತವ

154. ಲಕ್ಷ್ಮ್ಯಾರ್ಯಾವೃತ್ತ

155. ದುರ್ಗಾಸ್ತವ

156. ವಿಭೀಷಣಹನೂಮತ್‌ಸಂವಾದರೂಪವಾಯುಸ್ತುತಿ

157. ಸಹಸ್ರಾರಸ್ತುತಿ (ಚಕ್ರಸ್ತುತಿ)

158. ಕುರುಸ್ತುತಿ

159.ವಿಷ್ಣುಸ್ತುತಿ

160. ಸ್ವಪ್ನಪದ್ಯ

ಪಂಚಕಗಳು

161. ಹಯಾಸ್ಯ ನುತಿಪಂಚಕ

162 .ಅಕ್ಷಪಂಚಕ

163. ವರಾಹಪಂಚಕ

164. ನವಗ್ರಹಸ್ತೋತ್ರ

165. ಹಯಗ್ರೀವಸ್ತೋತ್ರ

166.ರಾಮಪಂಚಕ

ಅಷ್ಟಕಗಳು

167. ಕೃಷ್ಣಾಷ್ಟಕ

168. ರೂಪ್ಯಪೀಠಕೃಷ್ಣಸ್ತುತಿ

169. ಶ್ರೀಕೃಷ್ಣಸ್ತವ

170.ಕೃಷ್ಣಸ್ತೋತ್ರ

171. ಅಷ್ಟಮಹಿಷೀಯುಕ್ತ ಕೃಷ್ಣಸ್ತುತಿ

172. ವೇದವ್ಯಾಸಾಷ್ಟಕ

173. ಶ್ರೀನೃಹರ್ಯಷ್ಟಕ

174. ಹರ್ಯಷ್ಟಕ

175. ಹಯವದನಾಷ್ಟಕ

176. ಪರಮಸ್ತುತಿ

177. ಋಣಮೋಚನಸ್ತೋತ್ರ

178. ವೆಂಕಟೇಶಮಂಗಲಾಷ್ಟಕ

179. ದಶಾವತಾರಸ್ತುತಿ

180. ಚತುರ್ವಿಂಶತಿಮೂರ್ತಿ ಭೇದಸ್ತೋತ್ರ

181. ವರಾಹ-ಹಯವದನಸ್ತೋತ್ರ

182. ಮಧ್ವಾಷ್ಟಕ

183. ಮಧ್ವಮುನಿಪ್ರತಾಪಾಷ್ಟಕ

184. ಹರಿಭಕ್ತ್ಯಾಷ್ಟಕ

185. ವಿಷ್ಣುಸ್ತುತಿ

186. ಶ್ರೀಪಾದರಾಜಾಷ್ಟಕ

ದಶಕಗಳು

187. ಆಪಾದಸ್ತೋತ್ರ

188. ರಾಮದಶಕ

189. ಹಯಾಸ್ಯದಶಕ

190. ಪ್ರಾರ್ಥನಾದಶಕ

191. ಹಯಗ್ರೀವಸ್ತೋತ್ರ

ಟೀಕಾಗ್ರಂಥಗಳು

192. ಮಹಾಭಾರತ ಲಕ್ಷಾಲಂಕಾರ

193. ಮಹಾಭಾರತ ತಾತ್ಪರ್ಯನಿರ್ಣಯ ಭಾವಪ್ರಕಾಶಿಕಾ

194–200 ಸಪ್ತೋಪನಿಷದ್‌ಭಾಷ್ಯಟೀಕೆಗಳು

201. ತಂತ್ರಸಾರಟೀಕಾ

202. ಸನತ್ಸುಜಾತೀಯ ವ್ಯಾಖ್ಯಾನ

203. ನ್ಯಾಯಸುಧಾ ಗುರ್ವರ್ಥದೀಪಿಕಾ ಗುರ್ವರ್ಥದೀಪಿಕಾ

204. ತತ್ವಪ್ರಕಾಶಿಕಾ

205. ಗೀತಾಭಾಷ್ಯಟಿಪ್ಪಣಿ

206. ವಿಷ್ಣುಸಹಸ್ರನಾಮ ವ್ಯಾಖ್ಯಾನ

20.ಸುರೋತ್ತಮತೀರ್ಥ:(ಕ್ರಿ.ಶ.16ನೇ ಶತಕ)

ಪೂರ್ವಾಶ್ರಮದಲ್ಲಿ ವಾದಿರಾಜರ ತಮ್ಮ. ಬಾರಕೂರಿನ ಭಂಡಾರಕೇರಿಮಠದ 16ನೇ ಯತಿ.

207. ಯುಕ್ತಿಮಲ್ಲಿಕಾ ಟೀಕೆ

208.ಪಾಷಂಡಮತಖಂಡನಟೀಕೆ

209(ವಿಷ್ಣುತೀರ್ಥೀಯ) ಸನ್ಯಾಸಪದ್ದತಿ ಟೀಕೆ.

21.ವೇದವೇದ್ಯತೀರ್ಥ (ಕ್ರಿ.ಶ.16ನೇ ಶತಮಾನ)

ವಾದಿರಾಜತೀರ್ಥರ ಸಾಕ್ಷಾತ್‌ಶಿಷ್ಯ. ಸೋದೆಮಠದ 21ನೇ ಯತಿ.

210. ತಂತ್ರಸಾರ ಟಿಪ್ಪಣಿ

22.ವೇದನಿಧಿತೀರ್ಥ (1547–1572)

ಉಡುಪಿ ಶಿರೂರು ಮಠದ 13ನೇ ಯತಿ.

211.ಸುಖಬೋಧಿನೀ (ಗೀತಾಭಾಷ್ಯಟೀಕೆ)

23. ಶ್ರೀಧರತೀರ್ಥ (1552–1592)

ಶಿರೂರುಮಠದ 14ನೇ ಯತಿ.

212. ಶ್ರೀಕೃಷ್ಣಲೀಲಾ(ಕಾವ್ಯ)

24.ವಿಶ್ವೇಶ್ವರತೀರ್ಥ(ಕ್ರಿ.ಶ.16ನೇ ಶತಮಾನ)

ಪೇಜಾವರಮಠದ 14ನೇ ಯತಿ.

213. ಐತರೇಯ ಭಾಷ್ಯ ಟೀಕಾ.

25. ವಿಶ್ವಪತಿತೀರ್ಥ(ಕ್ರಿ.ಶ.17ನೇ ಶತಮಾನ)

ಪೇಜಾವರಮಠದ 19ನೇ ಯತಿ. ‘ಮಾಧ್ವಮಲ್ಲಿನಾಥ’ ಎಂದು ಪ್ರಸಿದ್ಧ.

214. ವೆಂಕಟನಾಯಕಸ್ತೋತ್ರ.(ಸ್ವತಂತ್ರ ಕೃತಿ)

215. ದ್ವಾದಶಸ್ತೋತ್ರಟೀಕಾ.

216. ಸಂಗ್ರಹರಾಮಾಯಣ ವ್ಯಾಖ್ಯಾನ(ಛಾತ್ರೋಪಯೋಗಿ).

217. ಪದಾರ್ಥದೀಪಿಕೋದ್ಬೋಧಿಕಾ (ಮಧ್ವವಿಜಯಟೀಕೆ)

218. ಪದಾರ್ಥಪ್ರಕಾಶ (ರಾಮಸಂದೇಶಟೀಕೆ).

219. ಪಂಚಸ್ತುತಿ ಟೀಕಾ. 220. ಬ್ರಹ್ಮಪಾರಸ್ತೋತ್ರಟೀಕಾ.

221. ಮಣಿಮಂಜರೀಟೀಕಾ.

26.ಯಾದವೇಂದ್ರತೀರ್ಥ

ಪುತ್ತಿಗೆಮಠ ನಾಲ್ಕನೆಯ ಅಥವಾ 19ನೇಯ ಯತಿ.

222. ಭಾಗವತ ವ್ಯಾಖ್ಯಾನ.

27. ರಾಘುವೇಂದ್ರತೀರ್ಥ

ಪುತ್ತಿಗೆಮಠ 21ನೇ ಯತಿ.

223. ನ್ಯಾಯಸುಧಾ ವ್ಯಾಖ್ಯಾನ.

28. ವಿಬುಧವರ್ಯತೀರ್ಥ ಸೋದೆಮಠದ 28ನೇ ಯತಿ.

224. ಸುಭದ್ರಾಹರಣ (ಮಹಾಕಾವ್ಯ).

225. ವಿಷ್ಣುಸಹಸ್ರನಾಮವ್ಯಾಖ್ಯಾ.

29. ರಘುವರ್ಯತೀರ್ಥ (1630–1712)

ಪಲಿಮಾರುಮಠದ 19ನೇ ಯತಿ.

226. ರಘುನಾಥವಿಜಯ (ನಾನಾವೃತ್ತೋದಾಹರಣ ಕಾವ್ಯ).

227.ಲಘು ಪರಿಭಾಷಾ (ನ್ಯಾಯಶಾಸ್ತ್ರಗ್ರಂಥ)

228. ಕೃಷ್ಣಸ್ತುತಿ.

229. ಸುಭಾಷಿತಮಂಡಲ.

230. ಪ್ರಮೇಯ ನವಮಾಲಿಕಾವ್ಯಾಖ್ಯಾನ.

30.ರಘುಪ್ರವೀರತೀರ್ಥ (ಕ್ರಿ.ಶ.18–19ಶತಮಾನ)

ಪಲಿಮಾರುಮಠದ22ನೇ ಯತಿ.

231. ಹನೂಮದ್–ಭೀಮ–ಮಧ್ವಾಷ್ಟೋತ್ತರಸ್ತೋತ್ರ.

31.ನರಸಿಂಹಾಚಾರ್ಯ

232. ನ್ಯಾಯಸುಧಾವ್ಯಾಖ್ಯಾನ (ಅಪೂರ್ಣ)

32.ರಾಮಚಂದ್ರಾಚಾರ್ಯ(ಕ್ರಿ.ಶ.17ನೇ ಶತಮಾನ)

233.ವಾದಿರಾಜಗುರುವರಚರಿತಾಮೃತಮ್ (ಐತಿಹಾಸಿಕಕಾವ್ಯ)

33. ಬಲ್ಲಾಳ ನಾರಾಯಣಾಚಾರ್ಯ(ಕ್ರಿ.ಶ.19ನೇ ಶತಮಾನ)

ಅಂಬಲಪಾಡಿ ಬಲ್ಲಾಳ ಮನೆತನದವರು.

234.ಸದಾಚಾರಸ್ಮೃತಿಟೀಕಾ.

34.ಲಕ್ಷ್ಮೀನಾರಾಯಣಾಚಾರ್ಯ(ಕ್ರಿ.ಶ.19ನೇ ಶತಮಾನ)

235. ಸುಭದ್ರಾಹರಣ ವ್ಯಾಖ್ಯೆ.

35.ಬಿಳಿಯೂರು ಶ್ರೀನಿವಾಸ ಭಟ್ಟ(ನಿ.1957)

ಉಡುಪಿ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಸಾಹಿತ್ಯಾಧ್ಯಾಪಕರಾಗಿದ್ದರು.

236. ರಮಾನಂದ (ರೂಪಕ). 237. ಬಲರಾಮಪ್ರತಾಪ.

238. ಚೈತ್ರಾಭರಣ. 239. ಜಯಸಿಂಹಚರಿತ.

36. ಪಡುಮುನ್ನೂರು ನಾರಾಯಣಾಚಾರ್ಯ(1891–1973).

ಧಾರವಾಡ ನಗರದಲ್ಲಿ ವಿರೂಪಾಕ್ಷ ಶಾಸ್ತ್ರಿಗಳ ಶಿಷ್ಯನಾಗಿ ನ್ಯಾಯಶಾಸ್ತ್ರವನ್ನು ಕಲಿತರು. ಉಡುಪಿ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಪ್ರಾಧ್ಯಾಪಕರಾಗಿದ್ದರು. ಬನ್ನಂಜೆ ಗೋವಿಂದಾಚಾರ್ಯರ ತಂದೆ.

240. ನ್ಯಾಯಾಮೃತಕುಲ್ಯಾ(ವೇದಾಂತ ಗ್ರಂಥ).

241. ಸಂಗ್ರಹಾರ್ಥಸಂಗ್ರಹ(ತರ್ಕಸಂಗ್ರಹ ಟೀಕೆ).

242. ನ್ಯಾಯರತ್ನಾವಲೀಪ್ರಕಾಶಸಂಗ್ರಹ(ಟೀಕೆ).

37. ಪ್ರಾ1ಕೆ.ಎಲ್. ವ್ಯಾಸರಾಯ ಶಾಸ್ತ್ರಿ(1898–1972)

ಪಾವಂಜೆ ಬಳಿಯ ಕೊಳುವೈಲು ಇವರ ಜನ್ಮಸ್ಥಾನ. ಕೇರಳದ ತಿರುವನಂತಪುರದಲ್ಲಿ ಸಂಸ್ಕೃತಾಧ್ಯಯನ ಮಾಡಿ ಮದರಾಸುಪ್ರಾಂತದ ಸರಕಾರಿ ಕಾಲೇಜುಗಳಲ್ಲಿ ಸಂಸ್ಕೃತಪ್ರಾಧ್ಯಾಪಕರಾಗಿದ್ದರು. ಸಂಸ್ಕೃತಾಧ್ಯಾಯನಕ್ಕೆ ಇವರ ಬಾಲಾದರ್ಶ, ಪ್ರಥಮಾದರ್ಶ, ದ್ವಿತೀಯಾದರ್ಶ, ತೃತೀಯಾದರ್ಶ, ಶಬ್ದಮಂಜರೀ, ಧಾತುಮಂಜರಿ ಪುಸ್ತಕಗಳು ಉಪಯುಕ್ತವಾಗಿವೆ. ಅಮೆರಿಕದ ಎಡ್ವಿನ್ ಜೆರೋ ಅಲಂಕಾಶಾಸ್ತ್ರದಲ್ಲಿ ಇವರ ವಿದ್ಯಾರ್ಥಿಯಾಗಿದ್ದರು. (ದಿ.ಕು.ಶಿ. ಹರಿದಾಸ ಭಟ್ಟರ ಮಾವ.).

243. ಮಹಾತ್ಮವಿಜಯ (ಖಂಡಕಾವ್ಯ).

244. ಮಧ್ವಾನಂದಲಹರಿ(ಖಂಡಕಾವ್ಯ).

245. ಕಾಲಿದಾಸೀಯ ನಾಟಕ ಕಥಾಮಂಜರಿ (ಗ್ರದ್ಯಗ್ರಂಥ).

246. ವಿದ್ಯುನ್ಮಾಲಾ(ಏಕಾಂಕ ರೂಪಕ).

247. ಪೂರ್ಣ ಪ್ರಜ್ಞ ನಾಟಕ (ರೂಪಕ)

248. ಶಬ್ದಮಂಜರಿ(ವ್ಯಾಕರಣ).

249. ಧಾತುಮಂಜರಿ (ವ್ಯಾಕರಣ).

250. ಸಂಸ್ಕೃತ ಬಾಲಾದರ್ಶ(ಪಾಠ್ಯ).

251. ಸಂಸ್ಕೃತ ಪ್ರಥಮಾದರ್ಶ(ಪಾಠ್ಯ)

252. ಸಂಸ್ಕೃತ ದ್ವಿತೀಯಾದರ್ಶ(ಪಾಠ್ಯ)

253. ಸಂಸ್ಕೃತ ತೃತೀಯಾದರ್ಶ(ಪಾಠ್ಯ)

38. ಶ್ರೀನಿವಾಸ ಕೆದಿಲಾಯ

ಹಂಗಾರಕಟ್ಟೆಯ ಸಮೀಪ ಬಾಳೆಕುದ್ರು ಮಠದಲ್ಲಿ ಪಾಠ-ಪ್ರವಚನ ಮಾಡಿಕೊಂಡಿದ್ದರು.(ಸ್ವಾಮಿ ಜಗದಾತ್ಮಾನಂದಜಿ ಹಾಗೂ ಬಿ.ವಿ ಕೆದ್ಲಾಯ ಅವರ ತಂದೆ)

254. ಶ್ರೀ ಶಂಕರವಿಜಯಸಾರ (ಐತಿಹಾಸಿಕ ಖಂಡಕಾವ್ಯ).

39. ಕಂಚಾರ್ತಿ ಲಕ್ಷ್ಮೀನಾರಾಯಣ ಉಪಾಧ್ಯಾಯ

ಪುರಿ ಜಗದ್ಗುರು ಭಾರತೀಕೃಷ್ಣತೀರ್ಥರ ಶಿಷ್ಯನಾದ ಇವರು ಮುಂಬಯಿಯಲ್ಲಿ ವಾಸಿಸುತ್ತಿದ್ದರು.

255. ಶಂಕರನಾರಾಯಣ ಶತಕ. 256. ಕಾವೇರೀಶತಕ.

257. ಮಾತೃಲಹರಿ.

40. ಪ್ರಾ.ಅಗ್ರಹಾರ ಗೋಪಾಲಕೃಷ್ಣ ಭಟ್ಟ(ನಿ.1972)

ಉಡುಪಿ ಮಹಾತ್ಮಾಗಾಂಧಿ ಸ್ಮಾರಕಕಲಾ ಶಾಲೆಯಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ನಿವೃತ್ತರು.

258. ಶ್ರೀಕೃಷ್ಣದೌತ್ಯ(ಖಂಡಕಾವ್ಯ).

259.ಕಿಶೋರವಿಹಾರ(ಖಂಡಕಾವ್ಯ).

260. ಝಾನ್ಸೀ ಲಕ್ಷ್ಮೀಬಾಯಿ(ಖಂಡಕಾವ್ಯ).

41. ಉದ್ಯಾವರ ಲಕ್ಷ್ಮೀನಾರಾಯಣಾಚಾರ್ಯ(1904-1966)

ಮಧುರೆಯ ಗುರುಕುಲದಲ್ಲಿ ಸಂಸ್ಕೃತಧ್ಯಾಯನ ಮಾಡಿ, ತಮಿಳುನಾಡಿನ ಪರಮಕುಡಿ, ರಾಜಪಾಳಯಂ ಪ್ರೌಢಶಾಲೆಗಳಲ್ಲಿ ಸಂಸ್ಕೃತಾಧ್ಯಾಪಕರಾಗಿದ್ದರು.(ಉದ್ಯಾವರ ಮಾಧವಾಚಾರ್ಯರ ತಂದೆ).

261. ರಾಸವಿಲಾಸ (ಭಕ್ತಿಕಾವ್ಯ).

42. ಅಲೆವೂರು ಸೀತಾರಾಮಾಚಾರ್ಯ

ಆಗ್ನಿಹೋತ್ರಿಯಾಗಿದ್ದ ಇವರು ವ್ಯಾಕರಣಶಾಸ್ತ್ರದಲ್ಲಿ ಪಾರಂಗತರಾಗಿದ್ದರು. ಉಡುಪಿ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಅಧ್ಯಾಪಕರಾಗಿ ನಿವೃತ್ತರು.

262. ದೇಶಭಕ್ತಿಗೀತಿಕಾ(ಪದ್ಯ).

263. ಗ್ರಾಮ–ನಗರ ಸಂವಾದ(ಸಂಭಾಷಣೆ).

264. ಭೈಮೀನೈಷಧೀಯ(ರೂಪಕ).

265. ಚಂದ್ರಹಾಸವಿಲಾಸ(ರೂಪಕ)

266. ನವ್ಯಸುಂದರೀ (ರೂಪಕ)

267. ಇಂದುಮತೀವ್ಯತಿಷಂಗ(ರೂಪಕ).

268. ಅನ್ವಯಾರ್ಥವಿವೃತಿ(ದಶಾವತಾರಸ್ತುತಿ ವ್ಯಾಖ್ಯೆ)

43. ಕನರಾಡಿ ವಿಠಲೋಪಾಧ್ಯಾಯ(1910–1991)

ಉಡುಪಿ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಸಂಸ್ಕೃತ ಪ್ರಾಥಮಿಕ ಶಿಕ್ಷಣ ಪಡೆದು ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕನಾಗಿ ನಿವೃತ್ತರು.

269. ಧ್ರುವಚರಿತ (15 ಸರ್ಗಗಳ ಮಹಾಕಾವ್ಯ).

270. ಪ್ರಹ್ಲಾದಚಂಪೂ (ಚಂಪೂಕಾವ್ಯ).

44. ಇನ್ನ ಕೃಷ್ಣಾಚಾರ್ಯ

ವ್ಯಾಕರಣ, ವೇದಾಂತಗಳನ್ನು ಅಧ್ಯಯನಮಾಡಿ ಬೆಂಗಳೂರು ನಗರದಲ್ಲಿ ಖ್ಯಾತ ಪಂಡಿತರಾಗಿದ್ದರು.

271.ಶಿವ ಸುಪ್ರಭಾತ.

45. ಕೆ.ನಾರಾಯಣಾಚಾರ್ಯ (ನಿ.1996)

ರಾಮಕುಂಜ ಗ್ರಾಮದ ಇವರು ಉಡುಪಿ ಸಂಸ್ಕೃತ ಕಾಲೇಜಿನಲ್ಲಿ ಕಲಿತು ಹುಂಚ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ನಿವೃತ್ತರು.

272. ರುಕ್ಮಿಣೀಹರಣ(ಖಂಡಕಾವ್ಯ).

273. ಶ್ರೀಕೃಷ್ಣಸ್ತುತಿಶತಕ.

274. ಲಘುಮಂಗಲಾಷ್ಟಕ.

275. ರಾಘವೇಂದ್ರಾಷ್ಟಕ.

276. ಗಣೇಶಪ್ರಾರ್ಥನೆ

277. ಭಿಲ್ಲೇಶ್ವರಾಷ್ಟಕ

278. ಗೈರ್ವಾಣೀ ಭಾರತೀಜಯಂತಿ

279. ಚತುರ್ವಿಂಶತಿನಾಮಸ್ತೋತ್ರ

280. ದಶಾವತಾರಸ್ತೋತ್ರ

281.ಗಣೇಶ ಸುಪ್ರಭಾತ.

282. ಕೃಷ್ಣಪ್ರಾತ:ಸ್ಮರಣ

283 .ಮಧ್ವಸ್ತುತಿ

284. ಪಂಚಚಾಮರಪಂಚಕ.

285. ಕೃಷ್ಣಭುಜಂಗಸ್ತೋತ್ರ.

286. ಜಿನದತ್ತರಾಯಚರಿತ

287. ಪದ್ಮಾವತೀ ನವರತ್ನಮಾಲಿಕಾ

288. ದ್ರವ್ಯಸಂಗ್ರಹ.

289. ರಾಮಕುಂಜೇಶ್ವರಾಷ್ಟಕ

46. ವಿದ್ಯಾಮಾನ್ಯತೀರ್ಥ(1913–2000)

ಮೊದಲು ಬಾರಕೂರಿನ ಭಂಡಾರಕೇರಿಮಠದ ಯತಿಯಾಗಿದ್ದು, ಅನಂತರ ಉಡುಪಿ ಪಲಿಮಾರುಮಠದ ಯತಿಯಾದವರು. ದ್ವೈತವೇದಾಂತದ ಪ್ರಸಿದ್ಧ ಶಿಕ್ಷಕರು.

290. ಅಥ ಶಬ್ದಾರ್ಥವಿಚಾರ.

291. ದ್ವೈತಸರ್ವೋತ್ತಮತ್ವ

292. ಅದ್ವೈತತತ್ವಸುಧಾಸಮೀಕ್ಷೆ.

293. ಬ್ರಹ್ಮಸೂತ್ರಶಾಂಕರಭಾಷ್ಯವಿಮರ್ಶೆ.

294. ತತ್ವಮಾರ್ತಾಂಡವಿಮರ್ಶೆ.

47. ವಿಶ್ವೇಶತೀರ್ಥ

ಪೇಜಾವರಮಠದ 31ನೇ ಯತಿ. ವಿದ್ಯಾಮಾನ್ಯತೀರ್ಥರ ಶಿಷ್ಯ.

295. ಸಾಂಬವಿಜಯ (ಅಪೂರ್ಣಕಾವ್ಯ).

296.ಸರಸಕವಿತೆಗಳು.

48. ಮಧೂರು ವೆಂಕಟೇಶ ಶರಳಾಯ(ಜ.1927)

ಮಂಡ್ಯದಲ್ಲಿ ಕಾರ್ಮೆಲ್ ಪ್ರೌಢಶಾಲೆಯಲ್ಲಿ ಸಂಸ್ಕೃತಾಧ್ಯಾಪಕರಾಗಿ ನಿವೃತ್ತರು. ಅಣ್ಣ ಮಧೂರು ಮಹಾದೇವ ಶರಳಾಯ ಅವರೊಂದಿಗೆ ಕೃತಿಗಳನ್ನು ರಚಿಸಿದ್ದಾರೆ.

297. ಶ್ರೀಕೃಷ್ಣವಿಘ್ನೇಶಲೀಲಾಮೃತ (ಖಂಡಕಾವ್ಯ).

298. ಶಬರೀವೃತ್ತಾಂತ (ಖಂಡಕಾವ್ಯ).

49. ಪಡುಬಿದ್ರಿ ಅನಂತಕೃಷ್ಣಾಚಾರ್ಯ(1899–1993)

ಉಡುಪಿ ಸಂಸ್ಕೃತ ಮಹಾಪಾಠಶಾಲೆ ಹಾಗೂ ತ್ರಿಪುಣಿತುರ ಸಂಸ್ಕೃತ ಕಲಾಶಾಲೆಗಳಲ್ಲಿ ಸಂಸ್ಕೃತ ಕಲಿತು,ತ್ರಿಪುಣಿತುರದಲ್ಲಿ ಜ್ಯೋತಿಷ, ಧರ್ಮಶಾಸ್ತ್ರ ಹಾಗೂ ಯಾಜ್ಞಿಕ ಪ್ರಯೋಗಗಳನ್ನು ಅಭ್ಯಸಿಸಿ, ಕೊಚ್ಚಿ ಸಂಸ್ಥಾನದ ರಾಜವಂಶದ ರಾಜಪುರೋಹಿತರಾಗಿದ್ದರು. ಪಲಿಮಾರುಮಠದ ವಿದ್ಯಾಮಾನ್ಯತೀರ್ಥರಿಂದ ಸಂನ್ಯಾಸ ಸ್ವೀಕರಿಸಿ 'ವಿದ್ಯಾಪತಿತೀರ್ಥ'ರಾಗಿ ವೃಂದಾವನಸ್ಥರಾದರು.

299.ಮಧ್ವಾದಿ ಗುರುವರಚರಿತ(ಗದ್ಯ).

50. ಪುಂಡೂರು ವೆಂಕಟರಾಜ ಪುಣಿಂಚತ್ತಾಯ (ಜ.1937)

ಸಂಸ್ಕೃತ ಸಾಹಿತ್ಯ ಶಿರೋಮಣಿ ಪದವಿಯನ್ನು ಪಡೆದು ಎಡನೀರು ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ನಿವೃತ್ತರು. ಪ್ರಸಿದ್ಧ ತುಳು ಸಾಹಿತ್ಯ ಸಂಶೋಧಕರು.

300. ಭಕ್ತಕುಚೇಲ(ರೂಪಕ)

301.ಕರುಣಾ(ರೂಪಕ).

302. ಕಿಂಕರ್ಮ ಕಿಮಕರ್ಮೇತಿ(ರೂಪಕ).

303. ಬುದ್ಧಂಶರಣಂ ಗಚ್ಛಾಮಿ(ರೂಪಕ)

304 ಗಂಗಾಲಹರಿ (ರೂಪಕ)

305. ಕೃಷ್ಣಜನನ(ಯಕ್ಷಗಾನ ರೂಪಕ)

306.ಮೈತ್ರಾವರುಣಿಚರಿತ(ಯಕ್ಷಗಾನ ಪ್ರಸಂಗ).

307 ಸುಬ್ರಹ್ಮಣ್ಯ ಸುಪ್ರಭಾತ.

308. ಮಲ್ಲಿಕಾರ್ಜುನ ಸುಪ್ರಭಾತ.

51. ಪ್ರಾಮುಗ್ಗೇರಿ ಮಂಜುನಾಥ ಭಟ್ಟ(1916-1999)

ತಿರುವನಂತಪುರದಲ್ಲಿ ಅಧ್ಯಯನ ಮಾಡಿ ಮಂಗಳೂರಿನ ಸಂತ ಎಲೋಶಿಯಸ್ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ನಿವೃತ್ತರು.

309. ವಿರಕ್ತಿವೀಥಿಕಾ(ಖಂಡಕಾವ್ಯ).

310 ಅನ್ಯೋಕ್ತಿಗಳು (ಸುಭಾಷಿತ)

311. ಭಕ್ತಿವೀಥಿಕಾ(ಖಂಡಕಾವ್ಯ)

52. ಕಿನ್ನಿಮೂಲ್ಕಿ ಕೃಷ್ಣರಾಜ ಭಟ್ಟ (1920-1999)

ಉಡುಪಿ ಸಂಸ್ಕೃತ ಕಾಲೇಜಿನಲ್ಲಿ ಕಲಿತು ಸಂಸ್ಕೃತ ಸಾಹಿತ್ಯ ಶಿರೋಮಣಿಯಾಗಿ, ಉಡುಪಿಯ ಸಂತ ಸಿಸಿಲಿ ಪ್ರೌಢಶಾಲೆಯಲ್ಲಿ ಹಿಂದಿ ಅಧ್ಯಾಪಕರಾಗಿ ನಿವೃತ್ತರು.

312.ಕನ್ನರ್ಪಾಡಿ ಜಯದುರ್ಗಾ ಪ್ರಾಭಾತಿಕಸ್ತೋತ್ರ.

53. ಕಟ್ಟೆ ವಾದಿರಾಜ ಆಚಾರ್ಯ

ಉಡುಪಿ ಸಂಸ್ಕೃತ ಮಹಾಪಾಠಶಾಲೆಯಲ್ಲಿ ನ್ಯಾಯಶಾಸ್ತ್ರವನ್ನು ಕಲಿತು, ಕಡಿಯಾಳಿಯ ಕಮಲಾಬಾಯಿ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ನಿವೃತ್ತರು.

313.ವಿಚಾರಲಹರೀ(ಕವಿತೆ)

54. ಬನ್ನಂಜೆ ಗೋವಿಂದಾಚಾರ್ಯ (ಜ.1936)

ಪಡುಮುನ್ನೂರು ನಾರಾಯಣ ಆಚಾರ್ಯರ ಪುತ್ರ. ವಿದ್ಯಾಮಾನ್ಯತೀರ್ಥರ ಶಿಷ್ಯ. 'ಉದಯವಾಣಿ' ಕನ್ನಡ ದಿನಪತ್ರಿಕೆಯ ಸಂಪಾದಕವರ್ಗದಲ್ಲಿ ಉದ್ಯೋಗಿಯಾಗಿ ನಿವೃತ್ತರು. ಪ್ರವಚನಪಟು.

314.ಪ್ರಾಣಸೂತ್ರ (ಯೋಗಶಾಸ್ತ್ರಗ್ರಂಥ).

315.ನಕ್ಷತ್ರಮಾಲಿಕಾ(ಕವಿತೆ)

318.ಮಹಿಲಾಷ್ಟಕ(ಕವಿತೆ)

316.ಗೋಪಾಲಕೃಷ್ಣ ಸುಪ್ರಭಾತ.

317.ಮನ್ಯುಸೂಕ್ತ ವ್ಯಾಖ್ಯಾನ.

325.ವಾಯುಸ್ತುತಿ ಟೀಕೆ

319.ಪುರುಷಸೂಕ್ತ ವ್ಯಾಖ್ಯಾನ

320.ಚತುರ್ದಶಸ್ತೋತ್ರ ವ್ಯಾಖ್ಯಾನ.

321.ಆನಂದಮಾಲಾ ಟಿಪ್ಪಣಿ

322.ಧ್ಯಾನಮಾಲಾ ಟಿಪ್ಪಣಿ.

323.ಶಾಕುಂತಲ ಸಮೀಕ್ಷಾ.

324.ಕಾಕಕೂಜಿತಮ್(ಕಾವ್ಯ).

326.ಕೃಷ್ಣಮಾಲಾ ಟಿಪ್ಪಣಿ.

327.ಜೀವನಗೀತ (ಕವಿತೆ)

328.ಪ್ರಾಚೀನಂ ರಾಜ್ಯಶಾಸ್ತ್ರಮ್.

55. ಸಾಂತ್ಯಾರು ವೆಂಕಟರಾಜ

ಪ್ರಸಿದ್ಧ ಕನ್ನಡ ಕವಿ.

329.ಕಾವ್ಯಮನೋರಮಾ (ನಾನಾ ವೃತ್ತಗಳ ಮುಕ್ತಕಸಂಗ್ರಹ).

330.ಅಂಬಾಸ್ತುತಿ.

56. ಪ್ರಾಕೆಮ್ಮೂರು ವಿಷ್ಣುಮೂರ್ತಿ ಭಟ್ಟ

ಉಡುಪಿ ಸಂಸ್ಕೃತ ಕಲಾಶಾಲೆಯಲ್ಲಿ ವೇದಾಂತವನ್ನು ಕಲಿತು, ಉಜಿರೆ ಎಸ್. ಡಿ.ಎಂ. ಕಾಲೇಜಿನಲ್ಲಿ ಸಂಸ್ಕೃತ ವಿಭಾಗಾಧ್ಯಕ್ಷರಾಗಿ ನಿವೃತ್ತರು.

331.ಕರ್ಮಫಲ(ಏಕಾಂಕರೂಪಕ).

332.ದೈವರಾತಮ್(ಏಕಾಂಕರೂಪಕ).

57.ಎಲ್ಲೂರು ರಾಮಚಂದ್ರ ಭಟ್ಟ

ಎಲ್ಲೂರು ವಿಶ್ವನಾಥ ದೇವಸ್ಥಾನದ ಅರ್ಚಕರಾಗಿದ್ದರು.

333.ಎಲ್ಲೂರು ವಿಶ್ವನಾಥ ಸುಪ್ರಭಾತ

58.ನಿಡ್ಡೋಡಿ ಅನಂತಕೃಷ್ಣ ಉಪಾಧ್ಯಾಯ

334.ಕಟೀಲು ದುರ್ಗಾಪರಮೇಶ್ವರೀ ಸುಪ್ರಭಾತ.

59. ಕೊಕ್ಕಡ ಅನಂತಪದ್ಮನಾಭ ಶಾಸ್ತ್ರಿ

ಸರಕಾರಿ ಪ್ರೌಢಶಾಲೆಗಳಲ್ಲಿ ಸಂಸ್ಕೃತಾಧ್ಯಾಪಕರಾಗಿ ನಿವೃತ್ತಿಯ ಬಳಿಕ ಹಂಗಾರಕಟ್ಟೆಯ ಮಹರ್ಷಿ ವೇದ ವಿದ್ಯಾಪೀಠದ ಪ್ರಾಂಶುಪಾಲರು.

335.ಅಪಟಲ ಪ್ರೇಮಪಟಲಂ(ಸ್ತೋತ್ರಸಂಗ್ರಹ)

336.ಕೊಕ್ಕಡ ವೈದ್ಯ ನಾಥ ಸುಪ್ರಭಾತ.

337.ಕಡಂದಲೆ ಸುಬ್ರಹ್ಮಣ್ಯ ಸುಪ್ರಭಾತ.

338.ಪುನರೂರು ವಿಶ್ವನಾಥ ಸುಪ್ರಭಾತ.

339.ಬಪ್ಪನಾಡು ದುರ್ಗಾಪರಮೇಶ್ವರೀ ಸುಪ್ರಭಾತ.

60.ಕ.ಪು.ಸೀತಾರಾಮ ಕೆದಿಲಾಯ

ಶಿಶಿಲದ ಕೃಷಿಕ ಹಾಗೂ ಸಾಹಿತ್ಯ ಸಂಶೋಧಕರು.

340.ಗಣೇಶಾಷ್ಟಕ 341.ದುರ್ಗಾಷ್ಟಕ. 342.ಮಂಜುನಾಥಸ್ತೋತ್ರ.

343.ಶಿಶಿಲೇಶ್ವರಾಷ್ಟಕ. 344.ವಿಷ್ಣುಸ್ತೋತ್ರ.

ಈಗಲೂ ಕೃತಿಕಾರರು ಇರುವುದರಿಂದ, ಹಾಗೂ ಕೃತಿನಿರ್ಮಾಣ ನಿರಂತರವಾಗಿ ಮುಂದುವರಿದುಕೊಡಿರುವುದರಿಂದ ಈ ಪಟ್ಟಿ ಇನ್ನೂ ಬೆಳೆಯುತ್ತ ಹೋಗುತ್ತದೆ.

ತುಳುನಾಡಿನ ಸಂಸ್ಕೃತ ವಾಙ್ಮಯ ಇತಿಹಾಸದಲ್ಲಿ ಹಾಗೆಯೇ ಸಂಸ್ಕೃತ ಸಾಹಿತ್ಯಕ್ಕೆ ಶಿವಳ್ಳಿ ಬ್ರಾಹ್ಮಣರ ಕೊಡುಗೆಯಲ್ಲಿ ಪೂರ್ವಕಾಲ, ಮಧ್ಯಕಾಲ ಹಾಗೂ ಆಧುನಿಕಕಾಲ ಎಂಬುದಾಗಿ ಕೃತಿಗಳ ನಿರ್ಮಾಣಕಾಲವನ್ನು ಸರಿಯಾಗಿ ವಿಭಜಿಸಿ ಅಧ್ಯಯನ ಮಾಡಬಹುದಾಗಿದೆ. ಈ ಕಾಲವಿಭಾಗಕ್ಕೆ ಮಹಾಕಾವ್ಯಗಳ ಉದ್ಭವವೇ ಆಧಾರ. 'ಉಷಾಹರಣ'ವೇ ಪ್ರಾತಿನಿಧಿಕವಾಗಿರುವ ಪೂರ್ವಕಾಲದಲ್ಲಿ ಹಸ್ತಾಮಲಕಾಚಾರ್ಯ, ಬಿಲ್ವಮಂಗಲಾಚಾರ್ಯ, ತ್ರಿವಿಕ್ರಮಪಂಡಿತ, ಮಧ್ವಾಚಾರ್ಯ, ನಾರಾಯಣಪಂಡಿತ, ರಾಜರಾಜೇಶ್ವರತೀರ್ಥ ಮೊದಲಾದ ಕವಿಗಳು ಇದ್ದರು. ತುಳುನಾಡಿನ ಏಕೈಕ ಸಂಸ್ಕೃತ ಕವಯಿತ್ರಿ ಕಲ್ಯಾಣೀದೇವಿ ಕೂಡ ಇದೇ ಕಾಲದಲ್ಲಿ ಇದ್ದರು. ಉಷಾಹರಣವಲ್ಲದೆ, ಸಂಗ್ರಹರಾಮಾಯಣ, ಮಧ್ವವಿಜಯ ಮೊದಲಾದ ಮಹಾಕಾವ್ಯಗಳು; ಕೃಷ್ಣಕರ್ಣಾಮೃತ, ದ್ವಾದಶಸ್ತೋತ್ರ, ವಾಯುಸ್ತುತಿ ಇತ್ಯಾದಿ ಸ್ತೋತ್ರಕಾವ್ಯಗಳು; ರಾಮಸಂದೇಶ, ಪಾರಿಜಾತಹರಣ ಮುಂತಾದ ಖಂಡಕಾವ್ಯಗಳು; ಯಮಕಭಾರತ ಎಂಬ ಚಿತ್ರಕಾವ್ಯ; ವೇದಾಂತಗ್ರಂಥಗಳಲ್ಲಿ ಮಧ್ವಾಚಾರ್ಯರ ಪ್ರಸ್ಥಾನತ್ರಯ ಭಾಷ್ಯಗಳು; ಅವರದೇ ಮಹಾಭಾರತತಾತ್ಪರ್ಯನಿರ್ಣಯ ಎಂಬ ಪುರಾಣೇತಿಹಾಸ ಸಮನ್ವಯಗ್ರಂಥ; ತತ್ವದೀಪಿಕಾ ಮೊದಲಾದ ವ್ಯಾಖ್ಯಾನಗಳು ಉಲ್ಲೇಖನೀಯ ಕೃತಿಗಳಾಗಿವೆ.

'ರುಗ್ಮಿಣೀಶ ವಿಜಯ'ದಿಂದ ಅಂಕಿತವಾದ ಮಧ್ಯಕಾಲದಲ್ಲಿ ವಾದಿರಾಜತೀರ್ಥ, ರಘುವರ್ಯತೀರ್ಥ, ವಿಬುಧವರ್ಯತೀರ್ಥರೇ ಮೊದಲಾದ ಮಹಾಕವಿಗಳು, ವಿಶ್ವಪತಿ ತೀರ್ಥಾದಿ ವ್ಯಾಖ್ಯಾನಕಾರರು ಆಗಿಹೋಗಿದ್ದಾರೆ. ರುಕ್ಮಿಣೀಶವಿಜಯವಲ್ಲದೆ ರಘುನಾಥವಿಜಯ ಸುಭದ್ರಾಹರಣ ಮೊದಲಾದ ಕಾವ್ಯಗಳು, ಯುಕ್ತಿಮಲ್ಲಿಕಾ ಎಂಬ ವೇದಾಂತಗ್ರಂಥ, ತೀರ್ಥಪ್ರಬಂಧ ಎಂಬ ಪ್ರವಾಸಸಾಹಿತ್ಯ ಕೃತಿ–ಈಕಾಲದ ಉಲ್ಲೇಖಾರ್ಹ ಗ್ರಂಥಗಳು.ಅನೇಕ ಮಂದಿ ಕವಿಗಳು ಮಾಡಬಹುದಾದ ಕಾರ್ಯವನ್ನು ವಾದಿರಾಜರೊಬ್ಬರೇ ಮಾಡಿದ್ದು ಈ ಅವಧಿಯ ವಿಶೇಷ. 'ಧ್ರುವಚರಿತ'ಪ್ರತಿನಿಧಿಸುವ ಆಧುನಿಕ ಕಾಲದಲ್ಲಿ ವಿಠಲೋಪಾಧ್ಯಾಯರೇ ಮೊದಲಾದ ಮಹಾಕವಿಗಳು, ಲಕ್ಷ್ಮೀನಾರಾಯಣಾಚಾರ್ಯ, ಗೋಪಾಲಕೃಷ್ಣಭಟ್ಟ, ಅನಂತ ಪದ್ಮನಾಭಶಾಸ್ತ್ರಿ, ಗೋವಿಂದಾಚಾರ್ಯ ಮುಂತಾದ ಸರಸಕವಿಗಳು ಇದ್ದಾರೆ. 'ಧ್ರುವಚರಿತೆ' ಮಹಾಕಾವ್ಯವಾದರೆ, 'ಝಾನ್ಸಿ ಲಕ್ಷ್ಮೀಬಾಯಿ' ಎಂಬ ಖಂಡಕಾವ್ಯ, ರಾಸವಿಲಾಸ, ವಿರಕ್ತಿ ವೀಥಿಕಾ, ಭಕ್ತಿವೀಥಿಕಾ ಇತ್ಯಾದಿ ಸ್ತೋತ್ರಕಾವ್ಯಗಳು ನಿರ್ಮಿತವಾಗಿವೆ. ರೂಪಕ(ನಾಟಕ) ಸಾಹಿತ್ಯ ನಿರ್ಮಾಣ ತುಳುನಾಡಿನಲ್ಲಿ ಆಧುನಿಕ ಕಾಲದಲ್ಲಿ ಉಂಟಾಗಿದೆ. ಶ್ರೀನಿವಾಸಭಟ್ಟ, ಸೀತಾರಾಮಾಚಾರ್ಯ, ವಿಷ್ಣುಮೂರ್ತಿ ಭಟ್ಟ, ವೆಂಕಟರಾಜ ಪುಣಿಂಚತ್ತಾಯ

ಮೊದಲಾದ ನಾಟಕಕಾರರು ಇದ್ದಾರೆ. ಸ್ತೋತ್ರಕಾವ್ಯಗಳಲ್ಲಿ ಸುಪ್ರಭಾತ ಸ್ತೋತ್ರಗಳ ಆವಿರ್ಭಾವ ಈ ಕಾಲದಲ್ಲಿ ವಿಶೇಷವಾಗಿ ಉಲ್ಲೇಖನೀಯ. ರಾಜಗೋಪಾಲಚಾರ್ಯ, ಅನಂತಪದ್ಮನಾಭಶಾಸ್ತ್ರಿ, ವಾಸುದೇವ ಸೋಮಯಾಜಿ, ವೆಂಕಟರಾಜ ಪುಣಿಂಚತ್ತಾಯ, ಗೋವಿಂದಾಚಾರ್ಯ, ನಾರಾಯಣಭಟ್ಟ, ಸೀತಾರಾಮಾಚಾರ್ಯ, ಅನಂತಕೃಷ್ಣ ಉಪಾಧ್ಯಾಯರು ಸುಪ್ರಭಾತ ಕವಿಗಳಾಗಿ ಪ್ರಸಿದ್ದರು.

7.3 ಕರ್ನಾಟಕ ಸಂಸ್ಕೃತಿಗೆ ಶಿವಳ್ಳಿ ಬ್ರಾಹ್ಮಣರ ಕೊಡುಗೆ.

ಹಿಂದೆ ತುಳುನಾಡು ಕಾಡುಗಳಿಂದ ಆವೃತ್ತವಾಗಿದ್ದ ನಾಡಾಗಿತ್ತು. ಕಾಲಕ್ರಮೇಣ ಕಾಡನ್ನು ಕಡಿದು ಮೂಲ ನಿವಾಸಿಗಳು ಕೃಷಿಯನ್ನು ಮಾಡಿಕೊಂಡು ಬಂದರು. ಆಗ ಪ್ರಕೃತಿಯನ್ನು ಆರಾಧಿಸುವುದು ಸಹಜ. ಇತಿಹಾಸವನ್ನು ಗಮನಿಸಿದಾಗ, ಸ್ಥಳೀಯ ಜನರು ದೈವಾರಾಧನೆ ಮತ್ತು ನಾಗಾರಾಧನೆಗೆ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದರು. ಈಗಲೂ ಕೊಡುತ್ತಾ ಬರುತ್ತಿದ್ದಾರೆ. ತಮ್ಮದೇ ಆದ ಪದ್ಧತಿಯಲ್ಲಿ ಆರಾಧಿಸುತ್ತಾ ಇದ್ದರು. ಬ್ರಾಹ್ಮಣರು ತುಳು ನಾಡಿಗೆ ಬಂದ ನಂತರ ಅವರ ಆಚಾರ ವಿಚಾರ, ಪೂಜಾಪದ್ಧತಿಗಳನ್ನು ನೋಡಿ ಅವರ ಕ್ರಮಕ್ಕೆ, ಪದ್ಧತಿಗೆ ಆಕರ್ಷಿತರಾಗಿ ತಾವು ಸಹಾ ಅವರ ಪದ್ಧತಿಯನ್ನು ಸ್ವೀಕಾರ ಮಾಡಿಕೊಂಡರು. ವಿಶೇಷವಾಗಿ ದೈವಾರಾಧನೆ ಮತ್ತು ನಾಗಾರಾಧನೆಯಲ್ಲಿ ವೈದಿಕ ಸಂಪ್ರದಾಯವನ್ನೇ ಅನುಸರಿಸಿದರು. ಅಷ್ಟರವರೆಗೆ ತಾವೇ ಭೂತಕ್ಕೆ ತಂಬಿಲ, ನಾಗನಿಗೆ 'ತನು' ಕೊಡುತ್ತಿದ್ದರು. ಬ್ರಾಹ್ಮಣರ ಆಗಮನದ ಅನಂತರ ಅರ್ಚಕರಲ್ಲಿ ಮಾಡಿಸುವ ಪರಿಪಾಠವನ್ನು ರೂಢಿಸಿಕೊಂಡರು. ಬ್ರಾಹ್ಮಣ ಪುರೋಹಿತರು ತಾವು ಆರಾಧನೆ ಮಾಡುವ ಕ್ರಮದಲ್ಲಿ ಮಾಡತೊಡಗಿದರು. ಪ್ರಾಣಿ ಬಲಿ ಕೊಡುವುದನ್ನು ನಿಲ್ಲಿಸಿ ಸಾತ್ವಿಕ ಆಹಾರವಾದ ಸೀಯಾಳ, ಅವಲಕ್ಕಿ, ಕುಂಬಳ ಕಾಯಿಗಳಲ್ಲಿ ದೈವಕ್ಕೆ ತಂಬಿಲ, ಬಲಿ ಕೊಡುವ ಪದ್ಧತಿಯನ್ನು ರೂಢಿಗೆ ತಂದರು. ಈಗ ತುಳು ನಾಡಿನ ಹೆಚ್ಚಿನ ಕಡೆ ಈ ಪದ್ಧತಿಯನ್ನೇ ಎಲ್ಲಾ ವರ್ಗದವರು ಅನುಸರಿಸಿಕೊಂಡು ಬರುತ್ತಿದ್ದಾರೆ. ಪ್ರಾರಂಭ ಹಂತದಲ್ಲಿ ದೈವದ ಬಗ್ಗೆ ಒಲವು ಹೊಂದದೆ ಇದ್ದ ಶಿವಳ್ಳಿ ಬ್ರಾಹ್ಮಣರು ತುಳು ನಾಡಿನ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಬ್ರಾಹ್ಮಣೇತರ ವರ್ಗದವರು ಆರಾಧಿಸುತ್ತಿದ್ದ ಪದ್ಧತಿಯಲ್ಲಿ ಸ್ವಲ್ಪ ಮಾರ್ಪಾಟು ಮಾಡಿ ವೈದಿಕ ಸಂಪ್ರದಾಯಕ್ಕೆ ಪರಿವರ್ತನೆ ಮಾಡಿ ಆರಾಧನಾ ಕ್ರಮವನ್ನು ರೂಢಿಗೆ ತಂದರು. ದೈವ ಕೋಲಕ್ಕೆ ಮುಹೂರ್ತ ಹೇಳುವುದರಿಂದ ಹಿಡಿದು ಧಾರ್ಮಿಕ ಕಾರ್ಯಗಳಿಗೆ ಮುಂದಾಳುತನವನ್ನು ವಹಿಸಿಕೊಂಡರು. ಬ್ರಾಹ್ಮಣೇತರ ವಿಶ್ವಾಸವನ್ನು ಗಳಿಸಿ ಅವರಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ವೈದಿಕ ಪದ್ಧತಿಗೆ ಸರಿಹೋಗುವ ರೀತಿಯಲ್ಲಿ ನಾಗಾರಾಧನೆ ಮತ್ತು ದೈವಾರಾಧನೆಯನ್ನು ಆಚರಣೆ ತಂದರು. ಶಿವಳ್ಳಿ ಬ್ರಾಹ್ಮಣ ಕುಟುಂಬದ ಶ್ರೇಯಸ್ಸಿಗಾಗಿ, ಗಣ ಹೋಮ, ಸತ್ಯನಾರಾಯಣ ಪೂಜೆ ಮತ್ತು ವ್ರತಗಳನ್ನು ಆಚರಿಸುತ್ತಿದ್ದರು. ತುಳು ಜನರು ಇವರ ಆರಾಧನಾ ಕ್ರಮದ ಪ್ರಭಾವಕ್ಕೆ ಒಳಗಾಗಿ ತಮ್ಮ ಮನೆಗಳಲ್ಲೂ ಗಣಹೋಮ, ಸತ್ಯನಾರಾಯಣ ಪೂಜೆಗಳನ್ನು ಮಾಡಿಸುವ ಪದ್ಧತಿಯನ್ನು ಅನುಸರಿಸಿಕೊಂಡು ಬಂದರು. ಊರಿನ ಜನರಿಗೆ, ಒಳ್ಳೆಯದಾಗುವ ದೃಷ್ಟಿಯಿಂದ ಸಾರ್ವಜನಿಕ ಸತ್ಯನಾರಾಯಣ ಪೂಜೆ, ದೇವಸ್ಥಾನಗಳಲ್ಲಿ 108 ತೆಂಗಿನಕಾಯಿಯ

ಡಾ. ಕೃಷ್ಣಮೂರ್ತಿನಿಟಿಲಾಪುರ
ಸಂಸ್ಕೃತ ಸಾಹಿತ್ಯಕ್ಕೆ ಶಿವಳ್ಳಿಯವರ ಕೊಡುಗೆ ಶಿವಳ್ಳಿ ಬ್ರಾಹ್ಮಣರು ಭಾಗ-1 2001 – ಪುಟ 257

ಗಣಹೋಮ ಮುಂತಾದವುಗಳನ್ನು ಜನರ ಸೇರುವಿಕೆಯಲ್ಲಿ ಮಾಡತೊಡಗಿದರು. ಇದರಿಂದ ಜನರಲ್ಲಿ ಭಕ್ತಿ, ಶ್ರದ್ಧೆ ಮೂಡುವಂತೆ ಮಾಡಿದರು. ತುಳುನಾಡಿನ ಬ್ರಾಹ್ಮಣೇತರರಲ್ಲಿ ದೇವರ ಬಗ್ಗೆ ಶ್ರದ್ಧೆ ಮಾಡುವಂತೆ ಮಾಡಿದುರಲ್ಲಿ ಶಿವಳ್ಳಿ ಬ್ರಾಹ್ಮಣರ ಪಾತ್ರವೂ ಇದೆ. ಶಿವಳ್ಳಿ ಬ್ರಾಹ್ಮಣರೇ ಹೆಚ್ಚಾಗಿ ಊರಿನ ದೇವಸ್ಥಾನದಲ್ಲಿ ಅರ್ಚಕ ವೃತ್ತಿಯನ್ನು ಮಾಡುವುದರಿಂದ ಊರಿನ ಬ್ರಾಹ್ಮಣೇತರ ವರ್ಗದವರ ಮೇಲೆ ಧಾರ್ಮಿಕ ನೆಲೆಗಟ್ಟಿನಲ್ಲಿ ಹಿಡಿತವನ್ನು ಸಾಧಿಸಿದ್ದರು. ಧಾರ್ಮಿಕ ಆಚರಣೆಗಳಲ್ಲಿ ಈಗಲೂ ಶಿವಳ್ಳಿ ಬ್ರಾಹ್ಮಣರೇ ಹೆಚ್ಚಾಗಿ ಮುಂದಾಳತ್ವ ವಹಿಸುವುದನ್ನು ಕಾಣುತ್ತೇವೆ.

ಜೀವನ ನಿರ್ವಹಣೆಗೆ ವೈದಿಕ ವೃತ್ತಿಯನ್ನೇ ಪ್ರಾರಂಭಹಂತದಲ್ಲಿ ಶಿವಳ್ಳಿ ಬ್ರಾಹ್ಮಣರು ನೆಚ್ಚಿಕೊಂಡರು. ಅದರಲ್ಲಿಯೂ ಹೆಚ್ಚಾಗಿ ದೇವಸ್ಥಾನಗಳಲ್ಲಿ ಆರ್ಚಕ ವೃತ್ತಿಯನ್ನು ಅವಲಂಬಿಸಿಕೊಂಡಿದ್ದರು. ದೇವಸ್ಥಾನಕ್ಕೆ ಬರುವ ಎಲ್ಲಾ ವರ್ಗದ ಭಕ್ತರೊಂದಿಗೆ ಅನ್ಯೋನ್ಯವಾಗಿ ಇರುವುದು ಅನಿವಾರ್ಯವಾಗಿತ್ತು. ತುಳು ಜನರ ಆಡು ಭಾಷೆಯಲ್ಲಿ ವ್ಯವಹರಿಸುವುದು ಸಂವಹನದ ದೃಷ್ಟಿಯಿಂದ ಅಗತ್ಯವಾಗಿತ್ತು. ಶಿವಳ್ಳಿ ಬ್ರಾಹ್ಮಣರಿಗೆ ಅವರದ್ದೇ ಆದ ಬ್ರಾಹ್ಮಣ ತುಳು ಇದ್ದರೂ ಬ್ರಾಹ್ಮಣೇತರರೊಂದಿಗೆ ವ್ಯವಹರಿಸುವಾಗ ಅವರ ತುಳುವಿನಲ್ಲಿಯೇ ಮಾತನಾಡುವ ದೃಷ್ಟಿಯಿಂದ ತುಳುವರ ತುಳುವನ್ನು ಕಲಿತು ಅವರೊಂದಿಗೆ ಸಾಮಾನ್ಯ ತುಳುವಿನಲ್ಲಿಯೇ ವ್ಯವಹರಿಸಿಕೊಂಡು ಬಂದರು. ಇದರಿಂದ ಅವರೊಂದಿಗೆ ಬೇಗನೆ ಆತ್ಮೀಯತೆ ಬೆಳೆಯಲು ಕಾರಣವಾಯಿತು. ಆದರೆ ತಮ್ಮ ವರ್ಗದದವರೊಂದಿಗೆ ವ್ಯವಹರಿಸುವಾಗ ಬ್ರಾಹ್ಮಣ ತುಳುವಿನಲ್ಲಿಯೇ ವ್ಯವಹರಿಸಿಕೊಂಡು ಬರುತ್ತಿದ್ದಾರೆ. ಭಾಷೆಯ ಪ್ರಯೋಗದಲ್ಲಿ ಮಡಿವಂತಿಕೆ ಉಳಿಸಿಕೊಳ್ಳಲಿಲ್ಲ.

ಶಿವಳ್ಳಿ ಬ್ರಾಹ್ಮಣರ ಉಪನಯನ ಮದುವೆ ಸಂದರ್ಭದಲ್ಲಿ ಮಡಿವಾಳ, ಕ್ಷೌರಿಕ ಮುಂತಾದ ವರ್ಗದವರಿಗೆ ವಿಶೇಷವಾದ ಪ್ರಾಶಸ್ತ್ಯವಿದೆ. ಉಪನಯನ ಮತ್ತು ಮದುವೆ ಮಂಟಪವನ್ನು ಸಿಂಗರಿಸುವವರು ಮಡಿವಾಳರು. ಉಪನಯನದ ದಿವಸ ವಟುವಿನ ಚವಲ ಮಾಡುವವರು ಕ್ಷೌರಿಕರು. ಪ್ರತಿಫಲವಾಗಿ ಮರ‍್ಯಾದೆ ರೂಪದಲ್ಲಿ ಅವರಿಗೆ, ಅಕ್ಕಿ, ತೆಂಗಿನಕಾಯಿ, ಬಟ್ಟೆ, ಎಣ್ಣೆ ಮತ್ತು ಹಣವನ್ನು ನೀಡುತ್ತಾರೆ. ಅನ್ಯವರ್ಗದವರನ್ನು ಶುಭ ಮತ್ತು ಅಶುಭ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾರೆ. ಚಿಕ್ಕ ಮಗುವಿಗೆ 'ದೃಷ್ಟಿ' ಆಗಿದ್ದರೆ ಹರಿಜನ ಮಹಿಳೆಯ ಸೆರಗಿಗೆ ಮಗುವನ್ನು ಹಾಕಿ ದೃಷ್ಟಿ ತೆಗೆಯಿಸುವ ಪದ್ಧತಿ ಶಿವಳ್ಳಿ ಬ್ರಾಹ್ಮಣರಲ್ಲಿ ಇದೆ. ಯುಗಾದಿ, ದೀಪಾವಳಿ, ಜಾತ್ರೆ ಸಮಯದಲ್ಲಿ ಭೂತಕಟ್ಟುವವರಿಗೆ, ಮಡಿವಾಳರಿಗೆ, ಕ್ಷೌರಿಕರಿಗೆ, ಆಚಾರಿಗೆ ಮರ‍್ಯಾದೆಯ ರೂಪದಲ್ಲಿ ಅಕ್ಕಿ, ತೆಂಗಿನಕಾಯಿ, ಬಟ್ಟೆ, ಹಣ ಕೊಡುವ ಪದ್ಧತಿಯೂ ಇದೆ.

ಜ್ಯೋತಿಷ್ಯದಲ್ಲಿಯೂ ಶಿವಳ್ಳಿ ಬ್ರಾಹ್ಮಣರು ಹೆಚ್ಚಾಗಿ ತಮ್ಮನ್ನು ತೊಡಗಿಸಿಕೊಂಡಿರುವುದರಿಂದ ತುಳುನಾಡಿನ ಜನರ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿದ್ದಾರೆ. ತಾವು ವಿಶೇಷವಾಗಿ ಜ್ಯೋತಿಷ್ಯ, ಜಾತಕವನ್ನು ನಂಬುವುದು ಮತ್ತು ಮದುವೆ ಸಂದರ್ಭದಲ್ಲಿ ಗಂಡು ಹೆಣ್ಣಿನ ಜಾತಕಕ್ಕೆ ಹೆಚ್ಚಿನ ಮಹತ್ವ ಕೊಡುವುದು ಸರ್ವೆ ಸಾಮಾನ್ಯ. ತುಳು ಜನರಲ್ಲಿ ಅಷ್ಟಾಗಿ ಜಾತಕ ಮಾಡಿಸುವ ಪದ್ಧತಿ ಇರಲಿಲ್ಲ. ಈಗೀಗ ಬ್ರಾಹ್ಮಣೇತರರು ಸಹಾ, ಮನೆ ಒಕ್ಕಲಿಗೆ, ಮದುವೆಗೆ ಮುಹೂರ್ತ ನೋಡುವ ಪದ್ಧತಿ ಮತ್ತು ಜಾತಕ ಮಾಡಿಸುವುದನ್ನು ರೂಢಿ ಮಾಡಿಕೊಂಡಿದ್ದಾರೆ.

ತುಳುನಾಡಿನಲ್ಲಿ ಪ್ರಾರಂಭದಲ್ಲಿದ್ದ ದೇವಸ್ಥಾನಗಳು ಹೆಚ್ಚಾಗಿ ಶಿವ ದೇವಾಲಯಗಳು. ಶಿವಳ್ಳಿ ಬ್ರಾಹ್ಮಣರೂ ಪ್ರಾರಂಭದಲ್ಲಿ ಶೈವ ಆರಾಧಕರು. ಅನಂತರ ವಿಷ್ಣು, ಜನಾರ್ದನ, ದೇವಿ, ಗಣಪತಿ, ಸುಬ್ರಹ್ಮಣ್ಯ ಮುಂತಾದ ದೇವರನ್ನು ಆರಾಧಿಸುತ್ತಿದ್ದರು. ಆದರೆ ವಿಷ್ಣುವಿನ ದಶಾವತಾರದಲ್ಲಿ ಹೇಳಿರುವ ದೇವತೆಗಳು ಮಧ್ವಾಚಾರ್ಯರ ಅನಂತರ ಹೆಚ್ಚು ಪ್ರಚಾರದಲ್ಲಿ ಬಂದದ್ದು. ತುಳುನಾಡನ್ನು ಗಮನಿಸಿದಾಗ ಕೃಷ್ಣ, ರಾಮ ಪರಶುರಾಮರ ದೇವಸ್ಥಾನಗಳು ಕಡಿಮೆ ಇರುವುದು. ಆದರೆ ಶಿವಳ್ಳಿಯವರಲ್ಲಿ ಶಿವ ಆರಾಧನೆಯಲ್ಲಿಯ ಭಕ್ತಿಗೂ ವಿಷ್ಣುವಿನಲ್ಲಿಯೂ ಭಕ್ತಿ ತಾರತಮ್ಯವಿಲ್ಲ. ಎರಡೂ ದೇವರನ್ನು ಸಮಾನವಾಗಿ ಕಾಣುತ್ತಾರೆ. ಪ್ರಾರಂಭದಿಂದಲೇ ಇವರು ಪಂಚಾಯತನ ಪೂಜೆಯನ್ನು ಮಾಡಿಕೊಂಡು ಬಂದುದು ಕಾರಣ. ಯಾವ ದೇವರಲ್ಲಿ ತಾರತಮ್ಯವನ್ನು ಕಾಣುವುದಿಲ್ಲ. ಕೃಷ್ಣಾಷ್ಟಮಿಯನ್ನೂ, ನವರಾತ್ರಿಯನ್ನೂ ಶಿವರಾತ್ರಿಯನ್ನೂ ಬಹಳ ಶ್ರದ್ಧೆ, ಭಕ್ತಿ, ಸಂಭ್ರಮದಿಂದ ಆಚರಿಸುತ್ತಾರೆ. ಶಿವ ಮತ್ತು ವಿಷ್ಣುವಿನಲ್ಲಿ ಭೇದ ಭಾವ ತೋರಲಿಲ್ಲ. ಎರಡೂ ಒಂದೇ ಎಂಬ ಸಿದ್ಧಾಂತವನ್ನು ಒಪ್ಪಿಕೊಂಡವರು. ಆಚರಣೆಯಲ್ಲಿ ಉದಾರೀಕರಣ ಮತ್ತು ಸಮನ್ವಯ ದೃಷ್ಟಿಕೋನವನ್ನು ಕಾಣಬಹುದು. ಯಾವ ದೇವರನ್ನು ಆರಾಧನೆ ಮಾಡಿದರೂ ಕೊನೆಗೆ ಸಲ್ಲುವುದು ಸರ್ವಶಕ್ತ ಮತ್ತು ಸರ್ವ ವ್ಯಾಪ್ತಿಯಾದ ಭಗವಂತನಿಗೆ ಎಂಬ ತತ್ವವನ್ನು ಒಪ್ಪಿಕೊಂಡವರು. ಅರ್ಚಕರ ವೃತ್ತಿಯನ್ನು ಅವಲಂಬಿಸಿರುವ ಶಿವಳ್ಳಿ ಬ್ರಾಹ್ಮಣರು ಆಯಾಯ ಊರಿನ ದೇವರನ್ನು ಶ್ರದ್ಧೆಯಿಂದ ಅರ್ಚನೆ ಮಾಡುವುದನ್ನು ಕಾಣಬಹುದು. ಜನರ ಭಾವನೆಗಳಿಗೆ ಧಕ್ಕೆ ಬರದ ರೀತಿಯಲ್ಲಿ ಉದಾರೀಕರಣ ತತ್ವವನ್ನು ಹೊಂದಿ ಜನರೊಂದಿಗೆ ಸಾಮರಸ್ಯದ ಭಾವನೆಯನ್ನು ಹೊಂದಿರುವುದನ್ನು ಕಾಣಬಹುದು.

ಸಾಮಾನ್ಯ ತುಳುವಿನ ಪರಿಷ್ಕಾರದ ಪರಿಣಾಮವಾಗಿ ರೂಪತಾಳಿದ್ದು 'ಶಿವಳ್ಳಿ ತುಳು'. ಭಾಷಾ ಚರಿತ್ರೆಯಲ್ಲಿ ಮೂಲ ಭಾಷೆಯಿಂದ ಪ್ರಭೇದ ರೂಪದಲ್ಲಿ ಕವಲೊಡೆದು ಪ್ರತ್ಯೇಕವಾದೊಂದು ಭಾಷಾ ರೂಪ ಸೃಷ್ಟಿಯಾಗುವುದು ಒಂದು ಗಮನಾರ್ಹ ಘಟನೆ. ಶಿವಳ್ಳಿ ತುಳು ಇಂತಹದೊಂದು ಘಟನೆಯ ಫಲಿತ ರೂಪ. ತುಳುನಾಡಿನ ಜನ ಸಾಮಾನ್ಯರ ಆಡುಮಾತಾದ ತುಳುವಿಗೆ ಬ್ರಾಹ್ಮಣೇತರ ತುಳು, ಸಾಮಾನ್ಯ ತುಳು ಎಂದೇ ಕರೆಯುವುದು ರೂಢಿ. ಈ ತುಳುವನ್ನೇ 'ಸಂಸ್ಕರಿಸಿ' ಅರ್ಥಾತ್ ಸಂಸ್ಕೃತ ಶಬ್ದಗಳ ಮೂಲಕ ಪರಿಷ್ಕರಿಸಿ ಬ್ರಾಹ್ಮಣರು ರೂಪಿಸಿದ ತುಳು ಪ್ರಭೇದ 'ಬ್ರಾಹ್ಮಣರ ತುಳು' ಅಥವಾ 'ಶಿವಳ್ಳಿ ತುಳು' ಎಂಬ ಹೆಸರಿನಿಂದ ಗುರುತಿಸಲ್ಪಟ್ಟಿದೆ. ಬ್ರಾಹ್ಮಣ ಸಮುದಾಯ ಇರುವಲ್ಲೆಲ್ಲ ಆಯಾ ನಾಡಿನ ಭಾಷೆಯಲ್ಲಿ ಇಂತಹದೊಂದು ಪ್ರತ್ಯೇಕರೂಪ ಅಂದರೆ ಬ್ರಾಹ್ಮಣ ಭಾಷಾ ಪ್ರಭೇದ ಇರುವುದು ಸಹಜವೇ. ಅಲ್ಲದೆ ಈ ಪ್ರಭೇದವು ಕಾವ್ಯ, ಸಾಹಿತ್ಯ ರಚನೆಗೆ ಸುಲಲಿತವಾಗಿ ಒಗ್ಗುವ ಕಾರಣ ಹೆಚ್ಚಿನ ಕೃತಿಗಳಿಗೆ ಇದೇ ಭಾಷಾಮಾಧ್ಯಮವಾಯಿತು. ತುಳುವಿನಲ್ಲಿರುವ ಪ್ರಾಚೀನ ಸಾಹಿತ್ಯ ಕೃತಿಗಳೆಲ್ಲವೂ ರಚಿತವಾದುದು ಶಿವಳ್ಳಿ ಬ್ರಾಹ್ಮಣರ ತುಳುವಿನಲ್ಲೇ.

ಪ್ರಾಚೀನ ಕಾವ್ಯಗಳೇ ತುಳುವಿನಲ್ಲಿ ಸೃಷ್ಟಿಯಾಗಲಿಲ್ಲವೆಂಬ ಅಭಿಪ್ರಾಯ ಸಾರ್ವತ್ರಿಕವಾಗಿ ಹಬ್ಬಿದ್ದ ಸಂದರ್ಭದಲ್ಲಿ ವಿದ್ವಾನ್ ವೆಂಕಟರಾಜ ಪುಣಿಂಚತ್ತಾಯರು ಶ್ರಮಪಟ್ಟು ಸಂಶೋಧಿಸಿ 'ಶ್ರೀ ಭಾಗವತೊ' ಎನ್ನುವ ಕಾವ್ಯವನ್ನು ಬೆಳಕಿಗೆ ತಂದರು. ತುಳುವಿನ ಪ್ರಾಚೀನ ಕಾವ್ಯ ಪರಂಪರೆಯೊಂದು ಇತ್ತು ಎಂಬುದಕ್ಕೆ ಪ್ರಥಮ

ಸಾಕ್ಷಿಯಾಯಿತು. ಇನ್ನಷ್ಟು ಕಾವ್ಯವನ್ನು ತುಳುವಿನಲ್ಲಿ ರಚಿತವಾಗಿರುವ ಸಾಧ್ಯತೆಯನ್ನು ಊಹಿಸಲು ಎಡೆಮಾಡಿಕೊಟ್ಟಿತು. ಈ ಆಶಾಕಿರಣದ ಬೆಳಕಿನಲ್ಲಿ ಮುಂದುವರಿದ ಪುಣಿಂಚತ್ತಾಯರಿಗೆ ಹಳೆಯ ಕೃತಿಗಳಾದ 'ಮಹಾಭಾರತೊ' ತುಳು 'ದೇವೀ ಮಹಾತ್ಮೆ' 'ರಾಮಾಯಣೊ', ಮತ್ತು 'ಕಾವೇರಿ' ಕೃತಿಗಳು ಲಭ್ಯವಾದವು.

ಪ್ರಾಚೀನ ತುಳು ಕಾವ್ಯಗಳಲ್ಲಿ ಪ್ರಯುಕ್ತವಾದ ಭಾಷಾಮಾಧ್ಯಮ ಶಿವಳ್ಳಿ ತುಳು. ಪಾಯಃ ಶಿವಳ್ಳಿ ತುಳುವಿನಲ್ಲಿರುವ ಸಂಸ್ಕೃತ ಶಬ್ದಗಳ ಆಧಿಕ್ಯವು ಛಂದೋ ಬಂಧಗಳಿಗೆ, ಮೂಲಭಾಷೆಯ ಅರ್ಥವನ್ನೂ ಭಾವವನ್ನು ವ್ಯಂಜಿಸಲಿಕ್ಕೆ ಅತ್ಯಂತ ಯೋಗ್ಯವಾದುದರಿಂದ ಕಾವ್ಯರಚನೆಗೆ ಈ ಭಾಷೆಯನ್ನು ಬಳಸಿರಬೇಕು. ತುಳುವಿನ ಪ್ರಾಚೀನ ಶಿಷ್ಟ ಸಾಹಿತ್ಯದ ಹುಟ್ಟು ಮತ್ತು ಬೆಳವಣಿಗೆಯಲ್ಲಿ ಭಾಷಾ ಮಾಧ್ಯವಾಗಿ ಶಿವಳ್ಳಿ ತುಳು ಬಳಕೆಯಾಗಿದ್ದು ಇದು ತುಳು ಸಂಸ್ಕೃತಿಗೆ ಸಾಹಿತ್ಯಕವಾಗಿ ಶಿವಳ್ಳಿಯವರ ಕೊಡುಗೆಯಾಗಿದೆ. 'ತುಳು ಮಹಾ ಭಾರತೊ' ಕೃತಿಯಲ್ಲಿ ಕರ್ಜೂರದ ಉಲ್ಲೇಖ, ಕೀಲುಕೊಡೆಯ ವರ್ಣನೆ, ತುಳುನಾಡಿನ ವಾದ್ಯಗಳ ವರ್ಣನೆ, ಭೂತದಕೋಲ, ತುಳುನಾಡಿನ ಗಿಡಮರಗಳ ಹೆಸರುಗಳು ಇವೆ. ಒಟ್ಟಿನಲ್ಲಿ ಕರ್ನಾಟಕದ ಸಂಸ್ಕೃತಿಗೆ ತುಳುನಾಡಿನ ಸಂಸ್ಕೃತಿ ತಮ್ಮದೇ ಆದ ವಿಶಿಷ್ಟವಾದ ಕೊಡುಗೆಯನ್ನು ಶಿವಳ್ಳಿ ಬ್ರಾಹ್ಮಣರು ನೀಡಿದ್ದಾರೆ.

ಅಧ್ಯಾಯ ಎಂಟು– ಉಪಸಂಹಾರ

ಈ ವರೆಗಿನ ಅಧ್ಯಯನ ಮತ್ತು ಸಂಶೋಧನೆಯನ್ನು ಅವಲೋಕಿಸುದಾದರೆ ಶಿವಳ್ಳಿ ಬ್ರಾಹ್ಮಣರು ಎಲ್ಲಿಂದ ಬಂದರೆಂಬುದನ್ನು ನಿಖರವಾಗಿ ಹೇಳುವುದು ಕಷ್ಟ ಸಾಧ್ಯವಾದರೂ ತಾಳಗುಂದದಿಂದ ಹಂತ ಹಂತವಾಗಿ ಕರಾವಳಿ ಪ್ರದೇಶಕ್ಕೆ ವಲಸೆ ಬಂದುದು ತಿಳಿದು ಬರುತ್ತದೆ. ಶಾಸನಗಳನ್ನು ಗಮನಿಸಿದಾಗ ರಾಜರುಗಳು ಬ್ರಾಹ್ಮಣರಿಗೆ ಅಶನಾರ್ಥವಾಗಿ ಭೂಮಿಯನ್ನು ದಾನಮಾಡಿದ ಮಾಹಿತಿ ಒದಗಿ ಬರುತ್ತದೆಯೇ ಹೊರತು ಯಾವ ಬ್ರಾಹ್ಮಣರಿಗೆ ಎಂಬ ವಿಷಯ ತಿಳಿದು ಬರುವುದಿಲ್ಲ. ಶಿವಳ್ಳಿ, ಕೋಟ, ಹವ್ಯಕ ಎಂಬ ನಿರ್ಧಿಷ್ಟ ಪಂಗಡವನ್ನು ಹೇಳಲಿಲ್ಲ. ಶಿವಳ್ಳಿ ಬ್ರಾಹ್ಮಣರು ಮೂಲತಃ ಕರಾವಳಿ ಪ್ರದೇಶದವರು ಅಲ್ಲ, ಬೇರೆ ಕಡೆಯಿಂದ ವಲಸೆ ಬಂದವರೆಂಬುದು ಸ್ಪಷ್ಟ. ಇಲ್ಲಿ ತಮ್ಮ ಸಂಸ್ಕೃತಿ, ಆಚಾರ ವಿಚಾರ, ಪೂಜೆ ಪುರಸ್ಕಾರಗಳಿಂದಾಗಿ ಜನರ ಪ್ರೀತಿಯನ್ನು ಗಳಿಸಿ ಇಲ್ಲಿಯ ಜನರ ಮೇಲೆ ತಮ್ಮ ಪ್ರಭಾವವನ್ನು ಬೀರಿದ್ದಾರೆ. ಇಲ್ಲಿಯ ಜನರೊಂದಿಗೆ ಬೇರೆ ಬ್ರಾಹ್ಮಣರಿಗಿಂತ ಹೆಚ್ಚಾಗಿ ಬೆರೆತು ಗೌರವವನ್ನು ಗಳಿಸಿಕೊಂಡದ್ದು ಸ್ಪಷ್ಟವಾಗಿ ಕಂಡುಬರುತ್ತದೆ.

ತುಳುನಾಡಿನ ಸಾಮಾನ್ಯ ತುಳುವಿಗೂ ಶಿವಳ್ಳಿ ತುಳುವಿಗೂ ತುಂಬಾ ವ್ಯತ್ಯಾಸವಿದೆ. ಶಿವಳ್ಳಿ ತುಳುವಿನಲ್ಲಿ ಸಂಸ್ಕೃತ ಶಬ್ದಗಳು ಹೆಚ್ಚಾಗಿ ಕಂಡು ಬರುತ್ತದೆ. ಶಿವಳ್ಳಿಯವರ ಮೂಲವೃತ್ತಿ ಅರ್ಚಕ ವೃತ್ತಿಯಾಗಿದ್ದುದರಿಂದ ಪೂಜಾ ಸಮಯದಲ್ಲಿ ಮಂತ್ರಗಳನ್ನು ಸಂಸ್ಕೃತದಲ್ಲಿ ಪಠಿಸುವುದರಿಂದ ಅವರ ಆಡು ಭಾಷೆಯಲ್ಲೂ ಸಂಸ್ಕೃತ ಶಬ್ದಗಳು ಹೆಚ್ಚಾಗಿ ಬಳಕೆಯಗಿರುವುದು ಕಂಡು ಬರುತ್ತದೆ. ಸಾಮಾನ್ಯ ತುಳುವರೊಂದಿಗೆ ವ್ಯವಹರಿಸುವುದು ವೃತ್ತಿಯ ದೃಷ್ಟಿಯಿಂದ ಆನಿವಾರ್ಯವಾಗಿದ್ದರಿಂದ ಸಾಮಾನ್ಯರ ತುಳುವನ್ನು ಕರಗತ ಮಾಡಿಕೊಂಡಿದ್ದಾರೆ. ಸಾಮಾನ್ಯ ತುಳುವರ ಕೆಲವು ಶಬ್ದಗಳನ್ನು ಶಿವಳ್ಳಿ ಬ್ರಾಹ್ಮಣರು ಸ್ವೀಕಾರ ಮಾಡಿದ್ದೂ ಇದೆ. ಉದಾಹರಣೆಗೆ 'ಗಂಡ ಹೆಂಡತಿ' ಶಬ್ದ ಶಿವಳ್ಳಿ ಬ್ರಾಹ್ಮಣರ ತುಳುವಿನಲ್ಲಿ ಪುರುಷ–ರಾಮಣಿ ಎಂದಿದ್ದರೆ ಸಾಮಾನ್ಯ ತುಳುವರಲ್ಲಿ ಕಂಡಣಿ–ಬುಡೆದಿ ಎಂದಿದೆ. ಬೆಳ್ತಂಗಡಿ, ಪುತ್ತೂರು ಕಡೆಯ ಬ್ರಾಹ್ಮಣರೂ ಸಹ ಕಂಡಣಿ–ಬುಡೆದಿ ಎಂದೇ ಹೆಚ್ಚಾಗಿ ಬಳಸುತ್ತಾರೆ.

ಪ್ರಾಚೀನ ಕಾಲದಿಂದಲೂ ರಾಜರ ಒಳಿತಿಗಾಗಿ ನಾಡಿನ ಒಳಿತಾಗಿ, ತಮ್ಮ ಕುಟುಂಬದ, ಮನೆಯ ಒಳಿತಾಗಿ ಯಾಗ, ಯಜ್ಞ ಪೂಜೆಗಳನ್ನು ನಡೆಸಿಕೊಂಡು ಬರುತ್ತಿದ್ದರು. ಈಗೀಗ ಚಂಡಿಕಾ ಹೋಮ, ಗಣಹೋಮ, ಸತ್ಯ ನಾರಾಯಣ ಪೂಜೆ, ನಾಗಪೂಜೆ ಮುಂತಾದವುಗಳನ್ನು ತುಳುನಾಡಿನ ಉಳಿದ ವರ್ಗದವರೂ ಪ್ರತೀ ವರ್ಷವೆಂಬಂತೆ ತಮ್ಮ ತಮ್ಮ ಮನೆಗಳಲ್ಲಿ ವೈದಿಕರಿಂದ ಮಾಡಿಸಿಕೊಂಡು ಬರುವುದನ್ನು ಕಾಣುತ್ತೇವೆ.

ಭೂತಾರಾಧನೆ ತುಳುವ ಸಂಸ್ಕೃತಿಯಲ್ಲಿ ಬ್ರಾಹ್ಮಣೇತರ ಕೆಳವರ್ಗದವರು ರೂಢಿಸಿಕೊಂಡು ಬಂದ ಆರಾಧನಾ ನಂಬಿಕೆ. ಈ ಆರಾಧನೆಯನ್ನು ಕೃಷಿ ಕಾರ್ಯ ನಿರ್ವಹಿಸುವ ಶಿವಳ್ಳಿಯವರು ಪುರಸ್ಕರಿಸಿದರು.

ಶಿವಳ್ಳಿ ಬ್ರಾಹ್ಮಣರು ಮುಂಚಿನಿಂದಲೂ ಭೂತರಾಧನೆಯನ್ನು ಸಾತ್ವಿಕ ರೀತಿಯಿಂದ ಆಚರಿಸಿಕೊಂಡು ಬರುತ್ತಿದ್ದರು. ಶಿವಳ್ಳಿ ಬ್ರಾಹ್ಮಣರ ಪ್ರಭಾವಕ್ಕೆ ಒಳಗಾಗಿ

ಇತ್ತೀಚೆಗೆ ತುಳು ಜನರೂ ಸಹಾ ಭೂತಗಳಿಗೆ ಕೋಳಿ, ಹಂದಿ ಮುಂತಾದ ಪ್ರಾಣಿಗಳನ್ನು ಬಲಿಕೊಡುವುದರ ಬದಲು ಸಿಯಾಳ, ತೆಂಗಿನಕಾಯಿ, ಕುಂಬಳಕಾಯಿ ಮುಂತಾದ ಸಾತ್ವಿಕ ಆಹಾರವನ್ನು ಕೊಡುವುದನ್ನು ಕಾಣುತ್ತೇವೆ. ಊರಿನ ದೇವಸ್ಥಾನಗಳಲ್ಲಿ ಅರ್ಚಕತ್ವ, ಪೂಜೆ, ನಾಗಪ್ರತಿಷ್ಠೆ ಭೂತದತಂಬಿಲಗಳಲ್ಲಿ ಶಿವಳ್ಳಿ ಬ್ರಾಹ್ಮಣರೇ ಹೆಚ್ಚು ಭಾಗವಹಿಸುವುದರಿಂದ ಅವರ ಬಗ್ಗೆ ಹೆಚ್ಚಿನ ಗೌರವ, ಶ್ರದ್ಧೆಗಳು ತುಳುವರಲ್ಲಿ ಕಂಡು ಬರುತ್ತದೆ. ಪೌರೋಹಿತ್ಯ ಮತ್ತು ಜ್ಯೋತಿಷ್ಯ ಕ್ಷೇತ್ರದಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿರುವುದರಿಂದ ಶಿವಳ್ಳಿ ಬ್ರಾಹ್ಮಣರೊಂದಿಗೆ ಸಂಪರ್ಕ ಹೆಚ್ಚಾಗಿದೆ. ಧಾರ್ಮಿಕ ಕ್ಷೇತ್ರದಲ್ಲಿ ಅನಿವಾರ್ಯವಾಗಿ ಶಿವಳ್ಳಿಯವರನ್ನೇ ತುಳು ಜನರು ಅವಲಂಬಿಸಿರುವುದರಿಂದ ಶಿವಳ್ಳಿಯವರ ಪ್ರಭಾವ ಆಗಿರುವುದು ವಾಸ್ತವ.

ಶಿವಳ್ಳಿ ಬ್ರಾಹ್ಮಣರು 'ಪಂಚಾಯತನ' ಪೂಜೆಯನ್ನು ಪ್ರಾರಂಭದಿಂದಲೂ ಮಾಡಿಕೊಂಡು ಬಂದವರು. ಎಲ್ಲಾ ದೇವರನ್ನು ಸಮಾನವಾಗಿ ಕಾಣುತ್ತಾರೆ, ಪೂಜಿಸುತ್ತಾರೆ. ಗಂಧ, ಭಸ್ಮ, ಕುಂಕುಮವನ್ನು ಪ್ರಸಾದವೆಂದು ಸ್ವೀಕರಿಸುತ್ತಾರೆ. ಶಿವ, ವಿಷ್ಣು, ಗಣಪತಿ, ದೇವಿ, ಶಾಸ್ತರರಲ್ಲಿ ಭೇದಭಾವವಿಲ್ಲ. ಎಲ್ಲಾ ಹಬ್ಬಗಳನ್ನು ಆಚರಿಸುತ್ತಾರೆ. ಶಿವರಾತ್ರಿ ಎಷ್ಟು ಮುಖ್ಯವೋ ಅಷ್ಟೇ ಪ್ರಾಮುಖ್ಯತೆಯನ್ನು ಅಷ್ಟಮಿಗೂ ನೀಡುತ್ತಾರೆ. ಹರಿಹರರಲ್ಲಿ ಭೇದವನ್ನು ಕಾಣುವುದಿಲ್ಲ. ಒಂದರ್ಥದಲ್ಲಿ ಹರಿಹರರಲ್ಲಿ ಸಮನ್ವಯವನ್ನು ಕಂಡವರು. ದೇವಸ್ಥಾನಗಳಲ್ಲಿ ಪೂಜೆ ಮತ್ತು ವೈದಿಕ ವೃತ್ತಿಯನ್ನು ಅವಲಂಬಿಸಿ ಕೊಂಡಿರುವುದರಿಂದ ಮಡಿ ಮೈಲಿಗೆ ಶಿವಳ್ಳಿ ಬ್ರಾಹ್ಮಣರಲ್ಲಿ ಉಳಿದವರಿಗಿಂತ ಸ್ವಲ್ಪ ಹೆಚ್ಚು. ಉಳಿದ ವರ್ಗದವರೊಂದಿಗೆ ಅಷ್ಟಾಗಿ ಬೆರೆಯುತ್ತಿರಲಿಲ್ಲ. ಕೆಲವು ಸಾರಿ ಪರಿಸ್ಥಿತಿಯೇ ನಮ್ಮ ಮನೋಧರ್ಮ, ವರ್ತನೆಯನ್ನು ಬದಲಿಸುವು ಸಹಜ. ಪರಿಸ್ಥಿತಿಗೆ ಅನುಗುಣವಾಗಿ ಶಿವಳ್ಳಿ ಬ್ರಾಹ್ಮಣರಲ್ಲಿಯೂ ಪರಿವರ್ತನೆಗಳು ಆಗಿದೆ. ಈಗೀಗ ಮಡಿ ಮೈಲಿಗೆಯಲ್ಲೂ ಸಡಿಲಿಕೆ ಕಂಡು ಬರುತ್ತದೆ. ಎಲ್ಲಾ ವರ್ಗದವರೊಂದಿಗೆ ಅನ್ಯೋನ್ಯವಾಗಿ ಬೆರೆಯುತ್ತಾರೆ. ಸಾರ್ವಜನಿಕವಾಗಿ ತಮ್ಮನ್ನು ತೊಡಗಿಸಿಕೊಂಡದ್ದು ಒಂದು ಕಾರಣವಾದರೆ, ಇಂದಿನ ಶಿಕ್ಷಣ ಪದ್ಧತಿಯೂ ಕಾರಣವಾಗಿದೆ.

ತುಳುನಾಡಿಗೆ ವಲಸೆ ಬಂದ ಬ್ರಾಹ್ಮಣರು ನೆಲೆನಿಂತ ಸ್ಥಳದಿಂದಾಗಿ ಅವರನ್ನು ಶಿವಳ್ಳಿ ಬ್ರಾಹ್ಮಣ, ಕೋಟ ಬ್ರಾಹ್ಮಣ, ಕಂದಾವರ ಶಿವಳ್ಳಿಯವರೆಂದು ಕರೆಯುತ್ತಾರೆ. ಶಿವಳ್ಳಿಯವರಲ್ಲಿ ಮಾಧ್ವ ಶಿವಳ್ಳಿ, ಸ್ಮಾರ್ತ ಶಿವಳ್ಳಿ, ಕಂದಾವರಶಿವಳ್ಳಿ, ನಾಡ ಶಿವಳ್ಳಿ ಎಂಬ ಪಂಗಡವಿದೆ. ಮಾಧ್ವ ಸಿದ್ಧಾಂತವನ್ನು ಪಾಲಿಸುವವರು ಮಾಧ್ವ ಶಿವಳ್ಳಿಯವರು. ಕಂದಾವರದಲ್ಲಿ ಹೋಗಿ ನೆಲೆಸಿದ ಕಾರಣ ಅವರನ್ನು ಕಂದಾವರ ಶಿವಳ್ಳಿಯವರೆಂದು ಕರೆಯುತ್ತಾರೆ. ಅಂತೆಯೇ ಸ್ಮಾರ್ತ ಶಿವಳ್ಳಿ ಮತ್ತು ನಾಡ ಶಿವಳ್ಳಿ ಎಂಬ ಸಂಗಡವೂ ಇದೆ. ನಾಡ ಶಿವಳ್ಳಿಯವರು ಬೆಳ್ತಂಗಡಿ ತಾಲೂಕಿನ ನಿಡ್ಲೆ ಗ್ರಾಮದಲ್ಲಿ ಹೆಚ್ಚಿನವರು ವಾಸವಾಗಿದ್ದಾರೆ. ಇವರು ವೈದಿಕ ವೃತ್ತಿಗಿಂತ ಹೆಚ್ಚಾಗಿ ಕೃಷಿಯನ್ನು ಅವಲಂಬಿಸಿ ಕೊಂಡಿರುವವರು.

ಶಿವಳ್ಳಿಯವರಲ್ಲಿಯೇ ಅಂಬಲಪಾಡಿಯ ನಿಡಂಬೂರು ಬಲ್ಲಾಳರು ಮತ್ತು ಚಿಟ್ಪಾಡಿಯ ಮೂಡಿಲ್ಲಾಯ ಬಲ್ಲಾಳರು 'ಬ್ರಹ್ಮಕ್ಷತ್ರೀಯರು'. ಇವರು ವಿಜಯನಗರ ರಾಜರು ತುಳು ನಾಡನ್ನು ಆಳ್ವಿಕೆ ಮಾಡಿಕೊಂಡಿದ್ದ ಕಾಲದಲ್ಲಿ ಸಾಮಾಜಿಕ-ರಾಜಕೀಯ ಸಂಘಟನೆಗೆ ಸಂಬಂಧಿಸಿದ ಕರ್ತವ್ಯಗಳನ್ನು ನಿರ್ವಹಿಸಿಕೊಂಡಿದ್ದರು.

ಶಿವಳ್ಳಿ ಬ್ರಾಹ್ಮಣರಲ್ಲಿ ಕುಲನಾಮಗಳ ವೈಪುಲ್ಯವನ್ನು, ವೈವಿಧ್ಯವನ್ನು ಗುರುತರವಾಗಿ ಗಮನಿಸಬಹುದು. ಇಷ್ಟೊಂದು ವಿಪುಲ ಸಂಖ್ಯೆಯ ಹಾಗೂ ವೈವಿಧ್ಯಮಯ ಕುಲನಾಮಗಳನ್ನು ಬೇರೆ ಪಂಗಡದಲ್ಲಿ ಕಾಣಸಿಗುವುದು ಕಡಿಮೆ. ಸ್ಥಳ, ಸಸ್ಯ, ಭೂಲಕ್ಷಣ, ದಿಕ್ಕು ಇತ್ಯಾದಿಗಳು ಪೂರ್ವ ಪದದಲ್ಲಿ ಷಷ್ಠಿ/ವಿಭಕ್ತಿ ಸಹಿತವಾಗಿ ಇರುತ್ತದೆ. ಉತ್ತರ ಪದವು 'ಆಯೆ' ಎಂಬ ಪ್ರಥಮ ಪುರುಷ ಪುಲ್ಲಿಂಗ ಸರ್ವನಾಮವಾಗಿ ಇರುತ್ತದೆ. ಬೇರೆ ಬೇರೆ ಊರಿಗೆ ವಲಸೆ ಹೋದಾಗ ಅಲ್ಲಿಯ ಸ್ಥಳದ ಹೆಸರುಗಳೂ ಸೇರಿರುವುದು ಕಂಡು ಬರುತ್ತದೆ. ಉದಾಹರಣೆಗೆ – ಮಂಜನಾಡಿ+ತ್ತ+ಆಯ. ದಕ್ಷಿಣ ತುಳುನಾಡಿನಲ್ಲಿ ಕುಲನಾಮಗಳು ಈಗಲೂ ಪ್ರಚಲಿತದಲ್ಲಿದೆ. ಆದರೆ ಉತ್ತರ ತುಳುನಾಡಿನ ಶಿವಳ್ಳಿಯವರಲ್ಲಿ ಕುಲನಾಮಕ್ಕಿಂತ ಹೆಚ್ಚಾಗಿ ತಮ್ಮ ವೃತ್ತಿವಾಚಕ ಹೆಸರುಗಳು ಹೆಚ್ಚು ಪ್ರಚಲಿತದಲ್ಲಿದೆ. ದಕ್ಷಿಣದ ಶಿವಳ್ಳಿಯವರಲ್ಲಿ ಕೆಲವರ ನಿಜನಾಮಕ್ಕಿಂತ ಹೆಚ್ಚಾಗಿ ಕುಲನಾಮದಿಂದ ಪರಿಚಿತರಾದವರೂ ಇದ್ದಾರೆ. ಹೊಸ ಪೀಳಿಗೆಯವರಲ್ಲಿ ಕುಲನಾಮಗಳನ್ನು ಬಳಸುವ ಪದ್ಧತಿ ಕಡಿಮೆಯಾಗುತ್ತಿದೆ.

ತುಳುನಾಡಿನಲ್ಲಿ ಲಭ್ಯವಾದ ಶಾಸನಗಳನ್ನು ಅಧ್ಯಯನ ಮಾಡಿದಾಗ ಗಮನಿಸಿದಾಗ ಶಿವಳ್ಳಿ ಬ್ರಾಹ್ಮಣರು ಯಾವಾಗ ತುಳುನಾಡಿಗೆ ಬಂದರೆಂಬ ಮಾಹಿತಿ ಲಭ್ಯವಾಗುವುದಿಲ್ಲ. ಬ್ರಾಹ್ಮಣರಿಗೆ ರಾಜಾಶ್ರಯ ಮತ್ತು ದಾನ ಮಾಹಿತಿ ಮಾತ್ರ ಲಭ್ಯವಾಗುತ್ತದೆ. 'ಗ್ರಾಮ ಪದ್ಧತಿಯಲ್ಲಿ' ಶಿವಳ್ಳಿ ಬ್ರಾಹ್ಮಣರ ಕುಲನಾಮಗಳ ಪಟ್ಟಿಸಿಗುತ್ತದೆ. ಮತ್ತು ಯಾವ ಊರಿನಲ್ಲಿ ನೆಲೆಸಿದ್ದರು ಎಂಬ ಬಗ್ಗೆ ವಿವರಣೆ ಇದೆ. ಗ್ರಾಮಪದ್ಧತಿಯನ್ನು ಯಾವಾಗ ಬರೆದರು ಎಂಬ ಬಗ್ಗೆ ನಿಖರವಾಗಿ ಹೇಳಲು ಸಾಧ್ಯವಿಲ್ಲ. ಡಾ. ಗುರುರಾಜ ಭಟ್ಟರ ಪ್ರಕಾರ 17 ರಿಂದ 18ರ ಶತಮಾನದಲ್ಲಿ ಬರೆದಿರಬಹುದೆಂದು ಊಹೆ ಮಾತ್ರ ಮಾಡುತ್ತಾರೆ.

ಮಧ್ವಾಚಾರ್ಯರ ತಂದೆ ನಡುವಂತಿಲ್ಲಾಯರು, ಅವರಿಗೆ ಪಾಠ ಪ್ರವಚನ ಮಾಡಿದವರು ತೋಟಂತಿಲ್ಲಾಯರು, ಹಾಲಿಗಾಗಿ ಆಕಳನ್ನಿತ್ತವರು ಮೂಡಂತಿಲ್ಲಾಯರು. ಆಚಾರ್ಯ ಮದ್ವರು ಸಂಚಾರ ಕಾಲದಲ್ಲಿ ರಾಮಕುಂಜದಲ್ಲಿ ನೂರಿತ್ತಾಯರಿಗೆ, ಕೊಕ್ಕಡದಲ್ಲಿ ಎಡಪಾಡಿತ್ತಾಯರಿಗೆ, ನಡ್ಯಂತಾಡಿಯಲ್ಲಿ ಕುಞ್ಞಣ್ಣಾಯರಿಗೆ ಕ್ರಮವಾಗಿ ಕೇಶವ, ವಾಸುದೇವ, ಶ್ರೀಕೃಷ್ಣ ಮೂರ್ತಿಗಳನ್ನು ಅರ್ಚನೆಗಾಗಿ ಕೊಟ್ಟ ಮಾಹಿತಿ ಮತ್ತು ಪೆಜತ್ತಾಯ, ಕುದಿಸುತ್ತೂರಾಯ ಕುಲಗಳ ಹೆಸರುಗಳು ಆಚಾರ್ಯರ ಜೀವನ ಚರಿತ್ರೆಯಿಂದ ತಿಳಿದು ಬರುತ್ತದೆ.

ಕಲ್ಲುಡ–ಕಲ್ಲುರ್ಟಿಪಾಡ್ದನದಲ್ಲಿ ವೈಲಾಯ, ಕಾಂತಬಾರೆ–ಬುದಬಾರೆ ಪಾಡ್ದನದಲ್ಲಿ ಪುತ್ತುರಾಯ ಕುಲನಾಮಗಳ ಮಾಹಿತಿಯೂ ಇದೆ. 13–14ನೇ ಶತಮಾನದಲ್ಲಿ ಜೀವಿಸಿದ್ದ ಮಧ್ವಾಚಾರ್ಯರ ಜೀವನ ಚರಿತ್ರೆಯಲ್ಲಿ ಶಿವಳ್ಳಿ ಬ್ರಾಹ್ಮಣ ಕುಲಗಳು ಅಧಿಕೃತವಾಗಿ ಕಂಡು ಬರುತ್ತದೆ.

ಷೋಡಶ ಸಂಸ್ಕಾರಗಳಾದ ಗರ್ಭಾಧಾನ, ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ನಿಷ್ಕ್ರಮಣ, ಅನ್ನಪ್ರಾಶನ, ಚೂಡಾಕರ್ಮ, ಉಪನಯನ, ಮಾತೃಭೋಜನ, ಮಹಾನಾಮ್ನಿ, ಮಹಾವ್ರತ, ಉಪನಿಷತ್‌ವ್ರತ, ಕೇಶಾಂತ, ಸಮಾವರ್ತನ, ವಿವಾಹ ಸಂಸ್ಕಾರಗಳನ್ನು ಶಿವಳ್ಳಿ ಬ್ರಾಹ್ಮಣರಲ್ಲಿ ಹಲವು ವರ್ಷಗಳಿಂದ ನಡೆಸುಕೊಂಡು ಬರುತ್ತಿದ್ದರು. ಈಗ ಕೆಲವು ಸಂಸ್ಕಾರಗಳನ್ನು ಮಾತ್ರ ಮಾಡುತ್ತಾರೆ.

ಅದರಲ್ಲಿ ಮುಖ್ಯವಾಗಿ ಸೀಮಂತೋನ್ನಯನ, ನಾಮಕರಣ, ಅನ್ನಪ್ರಾಶನ, ಉಪನಯನ ಮತ್ತು ವಿವಾಹ ಸಂಸ್ಕಾರವನ್ನು ಮಾಡುತ್ತಾರೆ. ಉಳಿದ ಸಂಸ್ಕಾರಗಳ ಮಹತ್ವದ ಬಗ್ಗೆ ಅರಿವಿನ ಕೊರತೆಯಿಂದ ಆಚರಣೆ ಮಾಡುತ್ತಿಲ್ಲ.

* ಯುಗಾದಿ, ಅಕ್ಷಯ ತೃತೀಯ, ಪ್ರಥಮ ಏಕಾದೇಶಿ, ನಾಗರ ಪಂಚಮಿ, ಉಪಾಕರ್ಮ, ಅಷ್ಟಮಿ, ಗಣೇಶ ಚತುರ್ಥಿ, ಮಹಾಲಯ ಅಮವಾಸ್ಯೆ, ಅನಂತ ಪದ್ಮನಾಭವ್ರತ, ನವರಾತ್ರಿ, ದೀಪಾವಳಿ, ಉತ್ಥಾನದ್ವಾದಶೀ, ಮಕರಸಂಕ್ರಾತಿ, ಶಿವರಾತ್ರಿಯನ್ನು ಶ್ರದ್ಧೆ, ಸಡಗರದಿಂದ ಆಚರಿಸಿಕೊಂಡು ಬರುತ್ತಿದ್ದಾರೆ. ಇಂದಿನ ಶಿಕ್ಷಣ ಪದ್ಧತಿ, ಜೀವನಕ್ರಮ, ವಿಭಕ್ತಿ ಕುಟುಂಬ ವ್ಯವಸ್ಥೆಯಿಂದಾಗಿ ಹಿಂದಿನಷ್ಟು ವ್ರತನಿಷ್ಠರಾಗಿ ಅಲ್ಲದಿದ್ದರೂ ಎಲ್ಲವನ್ನೂ ಮರೆತಿಲ್ಲ.

* ಶಿವಳ್ಳಿ ಬ್ರಾಹ್ಮಣರಲ್ಲಿ ಈಗಲೂ ವೈದಿಕರಿಗೆ ವಿಶೇಷವಾದ ಗೌರವ ಸ್ಥಾನಮಾನಗಳಿವೆ. ಹಿರಿಯರನ್ನು ಮರ್ಯಾದೆಯಿಂದ ಕಾಣುತ್ತಾರೆ. ಕೌಟುಂಬಿಕ ವ್ಯವಸ್ಥೆಯಲ್ಲಿ ಹಿರಿಯರ ಮಾತಿಗೆ ಹೆಚ್ಚಿನ ಬೆಲೆಯಿದೆ. ಸ್ತ್ರೀಯರಿಗೂ ಶಿಕ್ಷಣ ಕೊಡಿಸುವುದರಲ್ಲಿ ತಾರತಮ್ಯವಿಲ್ಲ. ಮದುವೆ ಸಂದರ್ಭದಲ್ಲಿ ವರದಕ್ಷಿಣೆಯ ಪಿಡುಗು ಇಲ್ಲ. ಹುಡುಗರಿಗಿಂತ ಹುಡುಗಿಯರ ಸಂಖ್ಯೆ ಶಿವಳ್ಳಿಯವರಲ್ಲಿ ಕಡಿಮೆ. ಹಳ್ಳಿ ಪ್ರದೇಶದ ಹುಡುಗರನ್ನು ಮದುವೆಯಾಗಲು ಮುಂದೆ ಬರುವ ಹುಡುಗಿಯರು ಕಡಿಮೆ. ಹೆಚ್ಚಿನ ಹುಡುಗಿಯರು ಶಿಕ್ಷಣ ಪಡೆಯುತ್ತಿರುವ ಕಾರಣ ಉದ್ಯೋಗದ ಹುಡುಗನನ್ನೇ ಆಯ್ಕೆ ಮಾಡುತ್ತಾರೆ. ಬ್ರಾಹ್ಮಣರ ಬೇರೆ ಪಂಗಡದ ಹುಡುಗಿಯರನ್ನು ಮದುವೆಯಾಗುವ ಪರಿಪಾಠ ಈಗೀಗ ಹೆಚ್ಚಾಗುತ್ತಿದೆ. ಸಮಾಜವೂ ಇದಕ್ಕೆ ಸಮ್ಮತಿಯನ್ನು ಸೂಚಿಸುತ್ತಿದೆ. ಶಿವಳ್ಳಿ ಬ್ರಾಹ್ಮಣರು ವೈದಿಕ ವೃತ್ತಿಯಲ್ಲಿ ಹೇಗೆ ಪ್ರಖ್ಯಾತರೋ ಹಾಗೆಯೇ ಹೋಟೇಲು ಉದ್ಯಮದಲ್ಲೂ ಸಾಧನೆಯನ್ನು ಮಾಡಿದ್ದಾರೆ. ದೇಶಾದ್ಯಂತ 'ಉಡುಪಿ ಬ್ರಾಹ್ಮಣರ ಹೋಟೇಲು' ವಿಸ್ತ್ರತಗೊಂಡಿದೆ. ಉಳಿದ ಬ್ರಾಹ್ಮಣ ಪಂಗಡಕ್ಕಿಂತ ಹೆಚ್ಚು ಹೋಟೇಲು ಉದ್ಯಮದಲ್ಲಿ ಯಶಸ್ಸನ್ನು ಗಳಿಸಿದ್ದಾರೆ.

ಲಲಿತಕಲೆ, ಅವಧಾನ, ಪ್ರವಚನ, ಹರಿಕೀರ್ತನ, ಚಲನಚಿತ್ರರಂಗ, ಯಕ್ಷಗಾನ, ಶಿಕ್ಷಣ, ಪತ್ರಿಕೋದ್ಯಮ, ಸಾಹಿತ್ಯ, ವಿಜ್ಞಾನ, ಆಡಳಿತ, ನ್ಯಾಯಾಂಗ, ಸಂಶೋಧನೆ ಮುಂತಾದ ಕ್ಷೇತ್ರಗಳಲ್ಲೂ ಸಾಧನೆಯನ್ನು ಮಾಡಿ ತುಳು ನಾಡಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ಅಧ್ಯಯನದ ಫಲಶ್ರುತಿ

1. ಶಿವಳ್ಳಿಯವರು ಮೂಲತಃ ತುಳುನಾಡಿನವರು ಅಲ್ಲ. ತಾಳಗುಂದದಿಂದ ಹಂತಹಂತವಾಗಿ ತುಳುನಾಡಿಗೆ ಬಂದು ನೆಲೆಸಿದವರು.
2. ಉಡುಪಿ ಹತ್ತಿರದ 'ಶಿವಳ್ಳಿ' ಗ್ರಾಮದಲ್ಲಿ ನೆಲೆಸಿದ್ದ ಕಾರಣ ಅವರಿಗೆ 'ಶಿವಳ್ಳಿ ಬ್ರಾಹ್ಮಣರು' ಎಂದು ಕರೆಯುತ್ತಾರೆ.
3. ಮಧ್ವಾಚಾರ್ಯರಿಂದ ಉಡುಪಿಯಲ್ಲಿ ಕೃಷ್ಣ ಮಠ ಸ್ಥಾಪನೆ, ದ್ವೈತ ಸಿದ್ಧಾಂತವನ್ನು ಪ್ರತಿಪಾದನೆ ಮಾಡಿದ್ದು ಮಧ್ವಾಚಾರ್ಯರ ಪ್ರಭಾವಕ್ಕೆ ಒಳಗಾಗಿ ಕೆಲವು ಶಿವಳ್ಳಿ ಬ್ರಾಹ್ಮಣರು ಮಧ್ವರಾದದ್ದು.
4. ಅಷ್ಟಮಠಗಳ ಸ್ಥಾಪನೆಯಿಂದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕವಾಗಿ ಬದಲಾವಣೆಗಳು, ಪ್ರಗತಿಗಳು ಕಂಡು ಬಂದವು.
5. ಅಷ್ಟ ಮಠಗಳ ಯತಿಗಳು ಸಂಸ್ಕೃತ, ಕನ್ನಡ, ತುಳು ಕೃತಿಗಳನ್ನು ಸಾರಸ್ವತ ಲೋಕಕ್ಕೆ ಕೊಟ್ಟದ್ದು.
6. ಉಡುಪಿಯ ಪರ್ಯಾಯ ಉತ್ಸವ ನಾಡಹಬ್ಬವಾಗಿ ಪರಿವರ್ತನೆ ಹೊಂದಿದ್ದು.
7. ಅಷ್ಟಮಠಗಳು ರಾಜ್ಯಾದ್ಯಂತ ವೈದಿಕ ವಿದ್ಯೆಗೆ ಪೂರಕವಾದ ಸಂಸ್ಥೆಗಳನ್ನು ಸ್ಥಾಪಿಸಿ ಉಚಿತವಾಗಿ ವೈದಿಕ ವಿದ್ಯೆಯನ್ನು ಕಲಿಯಲು ಅವಕಾಶ ಮಾಡಿಕೊಟ್ಟು ವೈದಿಕ ವೃತ್ತಿ ಉಳಿಯುವಂತೆ ಮಾಡಿದ್ದಾರೆ.
8. ಅಲ್ಲಲ್ಲಿ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿ ಶೈಕ್ಷಣಿಕವಾಗಿ ನಾಡಿನ ಜನರು ಮುಂದುವರಿಯುವಂತೆ ಕಾಳಜಿ ವಹಿಸಿದ್ದಾರೆ.
9. ಅಷ್ಟಮಠದ ಯತಿಗಳು ರಾಜ್ಯಾದ್ಯಂತ ಸಂಚರಿಸಿ ಧರ್ಮ ಜಾಗೃತಿಯನ್ನು ಮೂಡಿಸುತ್ತಾ ಬಂದಿರುತ್ತಾರೆ.
10. ಶಿವಳ್ಳಿ ಬ್ರಾಹ್ಮಣರು ತುಳುನಾಡಿನಲ್ಲಿ ದೈವಾರಾಧನೆಯಲ್ಲಿ ವೈದಿಕ ಪೂಜಾಕ್ರಮವನ್ನು ಅಳವಡಿಸಿ ಪ್ರಾಣಿಬಲಿಯನ್ನು ನಿಲ್ಲಿಸಿ ಸಾತ್ವಿಕವಾಗಿ ಆರಾಧನೆ ಮಾಡುವ ಪದ್ಧತಿಯನ್ನು ಅಳವಡಿಸಿದ್ದಾರೆ.

11. ತುಳುನಾಡಿನಲ್ಲಿ 'ಸಾಮೂಹಿಕ ಸತ್ಯನಾರಾಯಣ' ಪೂಜೆಯನ್ನು ಶಾಸ್ತ್ರ ಸಮ್ಮತವಾಗುವಂತೆ ರೂಢಿಗೆ ತಂದವರು ಶಿವಳ್ಳಿ ಬ್ರಾಹ್ಮಣರು.
12. ಸಂಸ್ಕೃತಿ, ಸಾಹಿತ್ಯ, ಕಲೆ, ನ್ಯಾಯಾಂಗ ರಾಜಕೀಯ ಮುಂತಾದ ಕ್ಷೇತ್ರಗಳಲ್ಲಿ ಶಿವಳ್ಳಿ ಬ್ರಾಹ್ಮಣ ಸಾಧನೆ ಮಾಡಿ ತುಳುನಾಡಿಗೆ ಹಾಗೂ ಕರ್ನಾಟಕ ಸಂಸ್ಕೃತಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ಅನುಬಂಧ

1. ಶಾಸನಗಳು
2. ನಕ್ಷೆ
3. ಛಾಯಾಚಿತ್ರಗಳು
4. ಪರಾಮರ್ಶನ ಗ್ರಂಥಗಳು
5. ವಕ್ತೃಗಳ ವಿಳಾಸ

ಶಾಸನಗಳು

೧ನೆಯ ಆಳುವರಸನ ವಡ್ಡರ್ಸೆ ಶಾಸನ

ಸ್ಥಳ : ಮಹಾಲಿಂಗೇಶ್ವರ ದೇವಸ್ಥಾನ, ವಡ್ಡರ್ಸೆ, ಉಡುಪಿ ತಾಲೂಕು

ಪ್ರಕಟಣೆ : *ARSIE.*, 1931-32, No. 296 ; ಕೆ.ವಿ. ರಮೇಶ : *Ep. Ind.*, Vol. XXXVII, pp. 313-316

ಭಾಷೆ : } ಕನ್ನಡ
ಲಿಪಿ : }

ತೇದಿ : ಸು. ಕ್ರಿ.ಶ. ೭ನೆಯ ಶತಮಾನದ ಮಧ್ಯಭಾಗ

ಶಾಸನ ಪಾಠ

A

1 ಕನಕ ಶಿವನ್ನರೆದೋನ್ [।*]
2 ಸ್ವಸ್ತಿ [॥*] ಶ್ರೀಮತು
3 ಆಳುವರಸರಾ
4 ರಾಜ್ಯದುಳ್ಳೆ ಕನ್ದವರ್ಮ-
5 ರಸರಾ ಪ್ರಮಾ[ಣ್ಯಾಳಾ] ಗು[ಣ್ಡಣ್ಣ]-
6 ರಾ ನಾಟ್ಟು ಮುದಿಮೆ ಉ[ಳ್]
7 . . [ಬ]ನ್ನ ಸತ್ತಿಗಾರಿ ಮುದಿ-
8 ಮೆ ಕೆಯೆ ಆಡಕಪ್ಪವೊಡ್ಡ-
9 ಜ್ಸಿಯ ನ್ವಾರಕೆಯೆ ವಿಲೊ . .
10 ಒಱಿದು ಕಞ್ಚು ಕಿಱ್ಱಿ ಞ್ಚು ವೊ .
11 . . ವು

B

1 ನ್ದಿ
2 [ದಿ]ತ್ಯ[ರ್ಸ]ರು . . ಆ[ವ್ಬಲ್ಕೈಳಯಿಯಾ] ಸತ್ಯಾ-

3 [ದಿ]ತ್ಯರ್ಸರು ಗ . ಮೆಗೆ ಅಪ್ಪ [ಅ]-
4 ದುಗೆಟಿ ಸತ್ತಿಗಾರಿ ಬನ್ನೆ ಆ[ಯ್ಪವುರ]
5 ಚಿರಿಯಣ್ಣ ಗುಣ್ಡಣ್ಣರಾ ವೆಸದಿನ್ . .
6 ಪದಿನೇಟ್ಬ್ಕಿಙ್ಚ ಒನ್ದು ಸಟ್ಟ್ಬಗ ಒತ್ತನೊಬು ತ . .
7 ಪದಿನೇಟ್ಬಿರುಣ್ಬಾಪ್ಪಾರ್ವಾರ್ರ್ ಆಳಪ್ಪಕ್ಕೆನ್ನಾಲ್ವ . . ಲ್ಲಿ . . ಒನ್ದು
8 [ವೊ]ಡ್ಡರ[ಸೆ]. ಡುಮ ಪಾಡಿಯಾನ್ ಗೋಪ[ರಸ] ಯರ[ಯ್ದಾ]ಯ
9 ಆ . ರ . [ವೊ]ಡ್ಡರ[ಸೆ] . . ಗೋಪ . . ಪಡುವಳಿ[ಯಾ]ನಾಡೊಳ . .
10 . . [ಣ್ಣ]ರಿರ್ವ್ವ[ರ್ಪ]ಡುವಳಿ[ಯಾ]ನಾಟ್ಟು ಮುದಿ[ಮೆ] ಬರಸಿ . . ಯ್ವಳಿರ್ಪ್ಪ
11 . . . . [ಕೊ]ಟ್ಟದು ಪನ್ನೆರಡು ಕಿ . . .
12 . . ಕ . . . . .ಭೂಮಿ ಕೊಟ್ಟಾ . . . . .ನಬೀದ
13 . . . . ಪಾತಕ ಮಕ್ಕು[ಂ]

C

1 . . ತ್ಯ[ರ್ಸ]ರ್ಗ್ಗ ಪ[ಟು]ಆಯಾ ಮೆಬಿಕ್ಕೆ ಆ
2 . . . . ಪತ್ತೊನ್ದಿಯು ನಗ್ಗ ಪಾಡಿಯಾ ಗಬಿದ್ದ ಉ ನಗ್ಗ ಪಾಡಿಯಾನ್
3 . . . . ತ ಪತ್ತೊನ್ದಿ ಅವರ್ಗ್ಗಲ್ಲ

ಸಾರಾಂಶ

ಆಳುಪ ವಂಶದ ಆಳುವರಸನೆಂಬ ರಾಜನ ಆಳಿಕೆಯಲ್ಲಿ ಕಂದವರ್ಮರಸನ ನಂಬಿಕಸ್ಥನಾದ ಗುಂಡಂಣನು ನಾಡಿನ ಅಧಿಕಾರಿಯಾಗಿ ಸೇವೆಸಲ್ಲಿಸುತ್ತಿದ್ದಾಗ (ವಡ್ಡರ್ಸೆ ಪ್ರಾಂತದ) ಬನ್ನ (ಇಂದಿನ ಬನ್ನಾಡಿ)ದ ಆಡಳಿತವನ್ನು ಸತ್ತಿಗಾರಿ ಎಂಬಾತನು ನಿರ್ವಹಿಸುತ್ತಿದ್ದಾಗ ಮತ್ತು ವಡ್ಡರ್ಸೆಯ ಒಕ್ಕಲುತನವು ಆಡಕಪ್ಪನೆಂಬಾತನಿಗೆ ಸೇರಿದ್ದಾಗ ಹದಿನೇಳು ಬ್ರಾಹ್ಮಣರಿಗೆ ಅಶನಾರ್ತ್ಥವಾಗಿ ಚಿರಿಯಣ್ಣ ಮತ್ತು ಗುಂಡಣ್ಣ ಎಂಬಿಬ್ಬರ ಆಜ್ಞೆಯ ಮೇರೆಗೆ ಒಂದಿಷ್ಟು ಹಣವನ್ನು ದಾನಮಾಡಲಾಯಿತು. ಶಾಸನ ಪಾಠದ ದಾನಭಾಗವು ಸಾಕಷ್ಟು ಸವೆದುಹೋಗಿರುವ ಕಾರಣ ಹೆಚ್ಚಿನ ವಿವರಗಳು ನಷ್ಟವಾಗಿವೆ.

೨ನೆಯ ಆಳುವರಸನ ಬೆಳ್ಮಣ್ಣು ತಾಮ್ರ ಶಾಸನ*

ಸ್ಥಳ : ಮಹಿಷಮರ್ದಿನಿ ದೇವಾಲಯ, ಬೆಳ್ಮಣ್ಣು, ಕಾರ್ಕಳ ತಾಲೂಕು

ಪ್ರಕಟಣೆ : ಬೆಳ್ಮಣ್ಣು ಶ್ರೀ ದುರ್ಗಾಪರಮೇಶ್ವರಿ ದೇವಾಲಯ [ಒಂದು ಐತಿಹಾಸಿಕ ಪರಿಚಯ] ಲೇಖಕರು : ಡಾ. ಪಿ. ಗುರುರಾಜಭಟ್ 1973.

ಭಾಷೆ: ⎫
ಲಿಪಿ : ⎭ ಕನ್ನಡ

ತೇದಿ : ಸು. ಕ್ರಿ.ಶ. ೮ನೆಯ ಶತಮಾನದ ಮಧ್ಯಭಾಗ

ಶಾಸನ ಪಾಠ

ಪತ್ರ ೧

1 ಓಂ ನಮಶ್ಶಿವಾಯಃ ಸ್ವಸ್ತ್ಯಾಣ್ಡ ವಿಭೂತ ವಿಸ್ಮಿತ

2 ಪಿತಾಮಹಲೋಕನ ಸಂಬರ್ದ್ಧಿತ ಕುಲಾಭಿ-

3 ಮಾನ ಸಕಲ ಶ್ರೀಮದಾಳುವರಸ-

4 ರಾ ಪೃಥಿವಿರಾಜ್ಯದೊ[ಳ್*] ಮಾನಾಡೊಳ್ ಶ್ರೀಯಾಳು-

ಪತ್ರ ೨ : ಮುಂಭಾಗ

5 ವರಸರುಂ ಶ್ರೀ ಎಱೆಯಪ್ಪರಸರು ಮಿಬ್ಬ್ದು ಸೂ-

6 ರ್ಯ್ಯ ಗ್ರಹಾಣದನ್ದು ಬೆಳ್ಮಣ್ಣ ಸಭೆಗೆ

7 ಸಿವವಳ್ಳಿ ಮರಿಯಾದಿ ಸರ್ವ್ವಪರಿಹಾರಮಾಗೆ

8 ಪಾಣಿಗ್ರಹಾಣಗೆಯ್ದುರ್ [।*]ಕನ್ಯಾಪುರದಾ ಮಾಣಿ

9 ದೇವನಾ ಬಾಗಿನುಳ್ ಚೊಕ್ಕಪಾಡಿಯಾ
10 ಭಟ್ಟರು ಮಿಱ್ದು ಕಾಯಿಸಿದಾರ್[।*]ಇದರ್ಕೆ ಕಾಪು
11 ಬೊಯ್ಗ್ಗವರ್ಮ್ಮನುಂ ಬೇಳದಾ ನನ್ದನುಂ ಕುಱಿ-
12 ನೊಱಿ ನನ್ದನುಂ ಸಾನ್ತ್ರಾರ ಮಿಾದಿನಿಯುಂ ಉರಪ-

ಪತ್ರ ೩ : ಮುಂಭಾಗ

13 ಣನು ಮಿವನ್ದಿರ್ಗೆ ಕಾಪು[।*]ಕಾವೊರ್ಗೆ ಅನನ್ಯ ಪುಣ್ಯಂ
14 ಅಶ್ವಮೇಧ ಪಲಮಕ್ಕುಂ ಶಿವವಳ್ಳಿಗೆ ಪುಣ್ಡವ-
15 ರ್ದ್ಧನಕ್ಕೆ ಗೋಸಹಾಸ್ರ ಕೊಟ್ಟ ಪಲಮಕ್ಕುಂ[।*]
16 ಇದನಱಿವೋರುಂ ಬಕ್ರಬರ್ಪ್ಪೊರುಂ ಪಞ್ಚಮಹಾ-

ಪತ್ರ ೩ : ಹಿಂಭಾಗ

17 ಪಾತಕರಪ್ಪೋರ್ ಇಪ್ಪತ್ತೊನ್ದುನರಖದುಳಿರ್ಪ್ಪಾರ್
18 ವಾರಣಾಶಿಯುಂ ಶಿವವಳ್ಳಿಯುಮನಱಿದ ಪಾಪ-
19 ಮಕ್ಕುಂ ದಿವ್ಯಸಾಹಾಸ್ರವರಿಷಂ ವೃಷ್ಟೆಯುಳ್
20 ಪುೞುವಾಗಿರ್ಪ್ಪಾರ್ ಕ್ಷಯಮಾಗಿ ಪುಟ್ಟನವೆವಾರ್

ಪತ್ರ ೪ : ಮುಂಭಾಗ

21 ಇದನಱಿವಲ್ಲಿ ಸಾವವರ್ಗ್ಗಳ್ ಇನ್ದ್ರಲೋಕಮನ್ನಿ-
22 ಡಿಯಾಳ್ದಿರ್ಪ್ಪಾರ್ ಅತಿನುತೆ ವಿನ್ಧ್ಯವಾಸಿ-
23 ನಿ ಮಹಾಮುನಿ ಸೇವಿತೆ ಬ್ರಹ್ಮ ಮುಖ್ಯರಾನ್ನ್
24 ಕ್ಷಿತಿಪತಿ ಕಾವೊರ್ಳಕ್ಕೆ ನಿಜ ಧರ್ಮ್ಮ ಪರರ್ಕ್ಕ-

ಪತ್ರ ೪ : ಹಿಂಭಾಗ

25 ಳಪ್ಪೋರಾನ್ ಕೃತು ಶತಮಶ್ವಮೇಧ ಪಲಮೆಯ್ದುಗೆ
26 ಪಾಣ್ಡ್ಯ ಕುಲಕರ್ಗಳಿನ್ತತಿಶಯ ಮಾಗಿ ನಿ-
27 ಲ್ಕೆ ಧರ್ಮ್ಮಂ ಜಗದುಳ್ ಆದಿತ್ಯನುಳ್ಳಿನಂ[।*]
28 ಯಸ್ಯ ಯಸ್ಯ ಯದಾ ಭೂಮಿ ಯಸ್ಯ ತಸ್ಯ ತಥಾ ಪಲಂ[।*]

ಸಾರಾಂಶ

ಆಳುಪರ ಆಡಳಿತಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ ದೊರೆತಿರುವ ಈ ಏಕೈಕ ತಾಮ್ರಶಾಸನದ ಪ್ರಕಾರ ಆಳುವರಸನು ರಾಜ್ಯವಾಳುತ್ತಿದ್ದಾಗ 'ಮಹಾನಾಡು' ಎಂಬ ಸಭೆಯಲ್ಲಿ ಆಳುವರಸನೂ ಎಱೆಯಪ್ಪರಸನೂ ಸ್ವತಃ ಹಾಜರಿದ್ದು ಸೂರ್ಯಗ್ರಹಣದಂದು ಶಿವವಳ್ಳಿಯ ಸಭೆಗೆ ಅನ್ವಯಿಸುವಂತಹ ಕಟ್ಟುಕಟ್ಟಳೆಗಳ ಮರ್ಯಾದೆಯನ್ನು ಬೆಳ್ಮಣ್ಣಿನ ಸಭೆಗೂ ಅನ್ವಯಿಸುವಂತೆ ಆಜ್ಞೆ ಹೊರಡಿಸಿದರು.

ಈ ಆಜ್ಞೆಯನ್ನು ಕಂತಾಪುರದ ಮಾಣಿ ಹಾಗೂ ಚೊಕ್ಕಪಾಡಿಯ ಭಟ್ಟರು ಕಾಪಾಡಿಕೊಂಡು ಬರುವುದು. ಈ ಶಾಸನದ ರಕ್ಷಕರು ಕಾಪಿನ ಬೊಯ್ಗ ವರ್ಮ, ಬೇಳದ ನಂದ, ಕುಬಿನೊಱ ನಂದ, ಸಾಂತೌರ ಮಾದಿನಿ ಮತ್ತು ಉರಪಣ. ಈ ಶಾಸನವನ್ನು ಕಾಪಾಡಿದವರ್ಗೆ ಶಿವವಳ್ಳಿ ಮತ್ತು ಪುಂಡ್ರವರ್ಧನವೆಂಬೀ ಧರ್ಮಕ್ಷೇತ್ರಗಳಲ್ಲಿ ಸಾವಿರ ಹಸುಗಳನ್ನು ದಾನ ಕೊಟ್ಟ ಫಲ. ಈ ಆಜ್ಞೆಯನ್ನು ಮೀರಿದವರಿಗೆ ವಾರಣಾಸಿಯನ್ನೂ ಶಿವವಳ್ಳಿಯನ್ನೂ ಅಳಿದ ಪಾಪ.

ಶಾಸನ ಪಾಠದ ಕೊನೆಯಲ್ಲಿ ಪಾಂಡ್ಯಕುಲಗಳನ್ನು ಸ್ತುತಿಸಲಾಗಿದೆ. ಈ ಶಾಸನದ ಮುದ್ರೆಯುಂಗುರದಲ್ಲಿ ಎರಡು ಮೀನುಗಳ ಚಿತ್ರಣವಿದೆ.

ಕುಂದವರ್ಮನ ಕದಿರೆ ಶಾಸನ, ಕಲಿ ೪೦೬೮

ಸ್ಥಳ : ಮಂಜುನಾಥ ದೇವಸ್ಥಾನದಲ್ಲಿರುವ ಲೋಕೇಶ್ವರನ ಕಂಚಿನ ಪ್ರತಿಮೆಯ ಪೀಠ, ಕದಿರೆ, ಮಂಗಳೂರು ತಾಲೂಕು

ಪ್ರಕಟಣೆ: *ARSIE.*, 1901, No. 27–B ; *SII.*, Vol. VII, No. 191

ಭಾಷೆ : ಸಂಸ್ಕೃತ

ಲಿಪಿ : ಗ್ರಂಥ

ತೇದಿ : ಕಲಿ ೪೦೬೮, ಕನ್ಯೆಯಲ್ಲಿ ಗುರು, ರೋಹಿಣೀ ನಕ್ಷತ್ರ = ಕ್ರಿ.ಶ. ೯೬೮, ಜನವರಿ ೧೩

ಶಾಸನ ಪಾಠ

1 ಸ್ವಸ್ತಿ ಶ್ರೀ [॥*] ಶ್ರೀಮತ್ಸೋಮಕುಲಾಂಭೋಜ ರವಿಣಾ ದೀಪ್ತ ತೇಜಸಾ [।*] ರಾಜಲಕ್ಷ್ಮ್ಯೈ ಕುಚಾಲಕ್ತ ಕಲಂಕೀಕೃತ ವಕ್ಷಸಾ [॥ 1*] ಉದ್ದಾಮ ಬಾಹು ವೀರ್ಯ್ಯೇಣ ರಕ್ಷಿತಾ ಕ್ಷಿತಿಮಂಡಲಾ [।*] ನಿಷ್ಕಳಂಕ ಯಶಶ್ಚನ್ದ್ರ ಚನ್ದ್ರಿಕಾ ವಿಲಸದ್ದಿಶಾ [॥ 2*] ಸುರಾಪಾನ ಕೃತೋ ದೋಷೋ ಯೇನ ರಾಜ್ಞಾ ನಿರಾಕೃತಃ [।*] ದ್ವಿಜಾನಾಮಗ್ರಹಾರೇ–

2 ಭ್ಯಶ್ಚಾರು ಚಾರಿತ್ರ ಷಾ(ಶಾ)ಳಿನಾ [॥ 3*] ದತ್ತಾಳುಪೆನ್ನಿರಾಕೃತ್ಯ ಬಲಾದ್ವಿಶ್ವಾಸ ಘಾತಿನಮ್ [।*] ರಾಜ್ಯಂ ಸ್ವಭುಜವೀರ್ಯ್ಯೇಣ ಗೃಹೀತಂ ಯೇನ ಮಾನಿನಾ [॥ 4*] ಸೋಯಂ ಕರ್ಣ್ಣ ಸಮಸ್ತ್ಯಾಗೇ ಪಾರ್ಥಕಲ್ಪಃ ಪರಾಕ್ರಮೇ [।*] ಸುರೇನ್ದ್ರ ಸದೃಶೋ ಲಕ್ಷ್ಮ್ಯಾ ಬೃಹಸ್ಪತಿಸಮೋ ಧಿಯಾ [॥ 5*] ಶ್ರೀ ಕುನ್ದವರ್ಮ್ಮರ್ ಗುಣವಾನಾಳುಪೇನ್ದ್ರೋ ಮಹೀಪತಿಃ [।*]

3 ಪಾದಾರವಿನ್ದ ಭ್ರಮರೋ ಬಾಲಚನ್ದ್ರ ಶಿಖಾಮಣೇಃ [॥ 6*] ಕಲೌ ವರ್ಷ ಸಹಸ್ರಾಣಾ ಮತಿಕ್ರಾನ್ತೇ ಚತುಷ್ಟಯೇ [।*] ಪುನರಬ್ದಗತೇಚ್ವೈವಾಷ್ಟ ಷಷ್ಟ್ಯಾ ಸಮನ್ವಿತೇ [॥ 7*] ಗತೇಷು ನವಮಾಸೇಷು ಕನ್ಯಾಯಾಂ ಸಂಸ್ಥಿತೇ ಗುರೌ [।*] ಪಶ್ಚಿಮೇಹನಿ ರೋಹಿಣ್ಯಾಂ ಮುಹೂರ್ತ್ತೇ ಶುಭಲಕ್ಷಣೇ [॥ 8*]

4 ಲೋಕೇಶ್ವರಸ್ಯ ದೇವಸ್ಯ ಪ್ರತಿಷ್ಠಾಮಕರೋತ್ಪ್ರಭುಃ [।*] ಶ್ರೀಮತ್ಕದಿರಿಕಾ ನಾಮ್ನಿ ವಿಹಾರೇ ಸುಮನೋಹರೇ [॥ 9*] ಸ್ವಸ್ತಿ ಶ್ರೀ ೦ ೦ ।

ಸಾರಾಂಶ

ಕುಂದವರ್ಮ ಆಳುಪೇನ್ದ್ರನು ಕದಿರಿಕಾ ವಿಹಾರದಲ್ಲಿ ಲೋಕೇಶ್ವರನ ಪ್ರತಿಮೆಯನ್ನು ಪ್ರತಿಷ್ಠಾಪಿಸಿದನೆಂಬ ವಿಷಯವನ್ನು ಈ ಶಾಸನವು ಸಾರಿ ಹೇಳುತ್ತದೆ. ರಾಜನನ್ನು ಸೋಮವಂಶದವನಿದ್ದನೆಂದೂ ಮದ್ಯಪಾನವನ್ನು ತ್ಯಜಿಸಿದ್ದನೆಂದೂ ಬ್ರಾಹ್ಮಣರಿಗೆಂದು ಅಗ್ರಹಾರಗಳನ್ನು ಸೃಷ್ಟಿಸಿದನೆಂದೂ ದ್ರೋಹವೆಸಗಿದ್ದ ದತ್ತಾಳುಪನನ್ನು ಪದಚ್ಯುತಗೊಳಿಸಿ ಸಿಂಹಾಸನವನ್ನು ಆಕ್ರಮಿಸಿಕೊಂಡನೆಂದೂ ತ್ಯಾಗದಲ್ಲಿ ಕರ್ಣನೆಂದೂ ವೀರದಲ್ಲಿ ಅರ್ಜುನನೆಂದೂ ಬುದ್ಧಿಯಲ್ಲಿ ಬೃಹಸ್ಪತಿಯೆಂದೂ ಬಾಲಚಂದ್ರ ಶಿಖಾಮಣಿಯ ಪರಮ ಭಕ್ತನೆಂದೂ ಈ ಶಾಸನದಲ್ಲಿ ಹೊಗಳಲಾಗಿದೆ.

ವೀರ ಕುಲಶೇಖರದೇವ ಆಳುಪೇಂದ್ರನ ಮಂಗಳೂರು ಶಾಸನ

ಸ್ಥಳ: ಕೆನರಾ ಹೈಸ್ಕೂಲಿನ ಹೊರಾಂಗಣದಲ್ಲಿರುವ ಶಿಲಾಫಲಕ, ಮಂಗಳೂರು, ಮಂಗಳೂರು ತಾಲೂಕು

ಪ್ರಕಟಣೆ: *ARSIE.*, 1901, No. 23-B ; *SII.*, Vol. VII, No. 185

ಭಾಷೆ: } ಕನ್ನಡ
ಲಿಪಿ : }

ತೇದಿ: ರಕ್ತಾಕ್ಷಿ, ಮೇಷ ೧೩, ಆದಿವಾರ = ಕ್ರಿ.ಶ. ೧೨೦೪, ಏಪ್ರಿಲ್ ೪

ಶಾಸನ ಪಾಠ

ಮುಂಬದಿ

1 ಶ್ರೀ ಸ್ವಸ್ತಿ [।*] ಶ್ರೀಮತು ಪಾಂಡ್ಯಚಕ್ರವರ್ತಿ ರಾಯಗಜಾಂ-
2 ಕುಸ ಶ್ರೀ ವೀರ ಕುಲಶೇಖರದೇವಾಳ್ಪೇಂದ್ರ ದೇವರಸ-
3 ರು ವಿಜಯರಾಜ್ಯಂ ಗೆಯುತ್ತಮಿದ್ದು ರಕ್ತಾಕ್ಷಿ
4 ಸಂವತ್ಸರದ ಮೇಷಮಾಸ ೧೩ನೆಯ ಆದಿವಾ-
5 ರದಂದು ಮಂಗಲಾಪುರದ ಹಿರಿಯರಮ-
6 ನೆಯ ಭುವನಾಶ್ರಯದ ಮೊಗಸಾಲೆಯಲು
7 ಸಮಸ್ತ ಪ್ರಧಾನರುಂ ಯೆರಡು ಕೋಲ ಬಳಿಯುಂ
8 ವೆರಸು ವೊಡ್ಡೋಲಗಂ ಗೊಟ್ಟಿರ್ದ್ದ ಪ್ರಸ್ತಾವದಲು ಅ-
9 ಳಿಯ ವೀರ ಬಂ[ಕಿ]ದೇವರಸರ್ಗ್ಗೆ ಮುಗರುನಾಡಿನ
10 ರಾಜ್ಯಮಂ ಬಿಡುವಲ್ಲಿ ಮಾವ ಕುಲಶೇಖರದೇವರ್ಸ-
11 ರುಂ ಅಳಿಯ ಬಂಕಿದೇವರ್ಸರುಂ ಬಂಕೇಶ್ವರದ ದೇ-
12 ವರಿಗೆ ಶಿಲಾಶಾಸನಂ ಗೆ[ಯ್ದು]ಕೊಟ್ಟ ಕ್ರಮವೆಂತೆಂದ-
13 ಡೆ [।*]ಯಿಾ ದೇವರ ದೇವಸ್ವದ ಕುಡಿತಱಿಯೊಳಗೆ ಯಿಾ ಸ್ತಾನದ ಪಾದ-
14 ಮೂಲದವರ ಮೇಲೆ ಯಿಳಿದೆತ್ತ ಕಳದಡೆ ಬೆಟ್ಟಂದ . ರಿ .

15 ದಡೆ ಹಣೆ ಕೂಡಿ ಎಳೆಗೊಳು ಕಡಿಹೊಡೆ ಎಂದಿವರ ನಾ-
16 ಲ್ಕು ಜಾತಿಯೊಳು ಬ್ರಾಹ್ಮಣ ಮಾಡಿದಡೆ ಕಂಣು ಕೈ
17 ಜಾತಿ ಸರ್ವ್ವಸ್ಯ ನಾಲ್ಕು ಜಾತಿಯಿಂ ಪೊಱಗು [।*] ಸೆಟ್ಟಿಮಾ-
18 ಡಿದಡೆ ಸರ್ವ್ವಸ್ಯ ಬಳಂಜದಿಂ ಪೊಱಗು [।*] ಪೊಕ್ಕಲು
19 ಮಕ್ಕಳು ಮಾಡಿದಡೆ ವೊಂದು ತಲೆ ಸಾವಿರ ಹೊಂ-
20 ನು [।*] ಯಿಾ ಸ್ಥಾನದೊಳಗೆ ಅರೆ ಕಿತ್ತಡೆ ಐವತ್ತು ನೆ-
21 ರೆ ಕಿತ್ತಡೆ ನೂರೊಂದು ದಂಡ ಕೊಂ[ದಡೆ] ಕೊಲಿಸಿ ಕೊ-
22 ಂಡವ ಹಗೆಗಳ ಏಳು ದಿನಯಿದ್ದು ಹೋಹ ಮರಿಯಾ-
23 ದೆ [।*]ಯಿಾ ಸ್ಥಾನದ ತಂತ್ರಿ ಸಂಕ್ರಾಂತಿಗಳು ತಪ್ಪದೆ
24 ಆಯನದ ಅವಭೃತ್ತು ಸ್ನಾನದ ಮುಟ್ಟ ತಾನು ಮಾಡು-
25 ವ ಕ್ರಮಂಗಳ ಮಾಡದಡೆ ಹತ್ತುವರೆ ದಂಡ [।*] ಅಸ್ರ-
26 ಂಣ ಕಾಲ ಕಾಲಂಗಳಲ್ಲು ತಾ ಮಾಡುವ ಕ್ರಮಂಗ-
27 ಳ ಮಾಡದಡೆ ವೊಂದು ಧಾರೆ ಕೀಲ್ಸಾಂತಿ ಕಾಲಕಾಲದಲು ತಾನು ಮಾಡುವ
ಕ್ರಮಂಗಳ ಮಾಡದಡೆ ಪೊಬ್ಬ[ಗೆ] ಅರೆ ದಂ-
28 ಡ [।*] ಪಾದಮೂಲದವರು ನಿವೇದ್ಯಕ್ಕೆ ಯಿಕ್ಕುವ ಅಕ್ಕಿ ಹೊತ್ತು ತಪ್ಪಿದಡೆ
ಕುಂದಿದಡೆ ದಿನ ದಿನ ನಡವ ಕಥಾ ಮಾಲೆ[ಯ]
29 ಯಿಷ್ಟನೂ ದಿನಾಯ ನೋಡಿ ಹೇಳದಿದ್ದಡೆ ಅ[ಧ್ಯ]ಕ್ಷ ಅಯಿದುವರೆ ದಂಡ
[।*]ಯಿವ ನಿತ್ಯದ ಸೇನಬ ಬರೆಯದಡೆ ಹತ್ತುವರೆ ದಂಡ [।*] ಯಿವ ಸಿಕ್ಷಿಸಿ
ನಂದಾ ದೀವಿಗೆಗೆ ಎಂಣೆಯ ಸಲಿಸದಡೆ ಅಧಿಕಾರಿ ಹತ್ತೂವರೆ ದಂಡ [।*]
ಕುಂ . . .
30 ಸಲಿಸದಿರ್ದ್ದಡೆ ಸಂ[ಖ] ಮೊದಲಾಗಿವುಳ ಏಳು ಮುಟ್ಟಿನ ಪದಾ[ರ್ತ್ಥ]ಗಳು
ತ್ರಿಕಾಲದ ಶ್ರೀವಲಿಯಿಂ ಮುಟ್ಟಿನ ನಿರ್ಮಾಲ್ಯ . . ಬಂದು ವೋಲಗಿಸದಿದ್ದಡೆ
ಯಥಾಕ್ರಮದಲು ಅಡಪು ನಡೆಯದಿದ್ದಡೆ ಯಿವೆಲ್ಲಕ್ಕೆ ಅಂದಂದಿನ ಗ್ರಾಸಕ್ಕೆ
ಯಿಂಮಡಿ ದಂಡ [।*]

ಹಿಂಬದಿ

31 ಆ ಮಾಸ . . . . ದತ್ತ ಮಂಗಲ-
32 ದ ಅತಿಕಾರಿಗಳು ಆಯನಕ್ಕೆ ನಡಸುವ ಮ-

33 ರಿಯಾಡೆಯ [ನಡ]ಯಿಸಿ ಮಾಡದಿರ್ದ್ದಡೆ [ನೂ]ರೊ-
34 ಂದು [ದ]ಂಡ ಹೊಂನು [।*] ಸಿವರಾತ್ರಿಯ ಎಂಣೆ ಆಯ-
35 ನದಲ್ಲು ಹರಿಬ[ತ್ರ]ರ[ಬಿ]ಯ [ಆ]ರಾ[ಧ]ನ ದಿನದಲು
36 ಬ್ರಾಹ್ಮಣರಿಗೆ ಅಕ್ಕಿಯಿದನೂ ಅಂಗಡಿಯ ಅಧಿ-
37 ಕಾರಿ ನಡಯಿಸದಿದ್ದಡೆ ಹತ್ತುವರೆ ದಂಡ [।*] ಮಾಡಕ್ಕೆ
38 [ಕು]ಳಯಿನಾಡಲು ಯಿರದಲು ಬೆಳಿಯಂತೂರ-
39 ಲು ಯಿವರಿಂದ ಭಳವಳಿಯ ಕೊಂಡು ಬಂದು ನೆರುವ್ವುದು [।*]
40 ಅಮಸೆ ನಾಲ್ಕು ಅಗ್ರವ ನಡಯಿಸದಿದ್ದಡೆ ಹತ್ತುವರೆ ದ-
41 ಂಡ [।*] ನಂದಾದೀವಿಗೆ ನಂದವೆ ನೋಡದಿರ್ದ್ದಡೆ ಆಸ್ರಂಣ ನೊಂ-
42 ದು [ದಾ]ರೆ ದಂಡ [।*] ದೇವಾಲ್ಯದಲು ಅರಮನೆ ಕಟ್ಟುವ ಮ-
43 ರಿಯಾದೆ ಯಿಲ್ಲ [।*] ಕೂತಾಡುವ ಬಾಕೆನೆಂಗೆಯವರು ತಾ-
44 ವು ಎಂದೂ ಬಹ ಮರಿಯಾದೆಯಲು ಬಾರದಿದ್ದಡೆ
45 ಆಯಿದುವರೆ ದಂಡ [।*] ಯಿಂತಿವೆಲ್ಲವಂ ವಿಚಾರಿಸಿ ರ-
46 ಕ್ಷಿಸದಿದ್ದಡೆ ಅರಸಿಂಗೆ ಗಂಗೆ ರಾಮೇಸ್ವರದಲು
47 ಸಾವಿರ ಕವಿಲೆ ಸಾವಿರ ಬ್ರಾಹ್ಮಣರ ಕೊಂದ ಪಾ-
48 ಪ[।*] ಯಿಂತೀ ಧರ್ಮ್ಮವಮಂ ಸಿಲಾಸಾಸನಂಗೆಯಿದು
49 ಕೊಟ್ಟ ವೀರ ಕುಲಸೇಖರ ದೇವರ್ಗ್ಗೆ ಅಳಿಯಂದಿರು ಬ-
50 ಂಕಿದೇವರು ಬಂಮದೇವರು ಕುಲಸೇಖರ ದೇವರ್ಗ್ಗೆ ಮ-
51 ಂಗಳ ಮಹಾ ಶ್ರೀ ಶ್ರೀ [॥*]

ಸಾರಾಂಶ

ವೀರ ಕುಲಶೇಖರದೇವನು ರಾಜ್ಯವಾಳುತ್ತಿದ್ದಾಗ ರಾಜಧಾನಿ ಮಂಗಲಾಪುರದ ಹಿರಿಯ ಅರಮನೆಯ 'ಭುವನಾಶ್ರಯ'ವೆಂಬ ಮುಗಸಾಲೆಯಲ್ಲಿ ಎಲ್ಲ ಮಂತ್ರಿಗಳೂ, ಸೇನಾಪತಿಗಳೂ ಒಡಗೂಡಿ ಒಡ್ಡೋಲಗದಲ್ಲಿ ಕುಳಿತಿರುವಾಗ, ತನ್ನ ಅಳಿಯ ವೀರ ಬಂಕಿದೇವರಸನಿಗೆ ಮುಗರು ನಾಡಿನ ರಾಜ್ಯಭಾರವನ್ನು ಬಿಟ್ಟು ಕೊಟ್ಟನೆಂದೂ ಆ ಸಂದರ್ಭದಲ್ಲಿ ಕುಲಶೇಖರನೂ ಅಳಿಯ ಬಂಕಿದೇವನೂ ಸೇರಿ ಬಂಕೇಶ್ವರದೇವರಿಗೆ ದಾನಗಳನ್ನು ಮಾಡಿದರೆಂದೂ ಈ ಶಾಸನದಲ್ಲಿ ಹೇಳಲಾಗಿದೆ.

ಬಂಕೇಶ್ವರ ದೇವಾಲಯದ ಸ್ಥಾನದ ತಂತ್ರಿಯು ಪ್ರತಿ ಸಂಕ್ರಾಂತಿಯಂದು ಅವಭೃತ

ಸ್ನಾನಕ್ಕೆ ಸಂಬಂಧಿಸಿದ ಎಲ್ಲ ಕರ್ತವ್ಯಗಳನ್ನೂ ನೆರವೇರಿಸಬೇಕೆಂದೂ ಪಾದಮೂಲದವರು ದೇವರ ನಿತ್ಯನೈವೇದ್ಯಕ್ಕೆ ನಿರ್ದಿಷ್ಟ ಅಳತೆಯ ಅಕ್ಕಿಯನ್ನು ತಪ್ಪದೆ, ಆಳತೆಗುಂದದೆ ಸಮರ್ಪಿಸಬೇಕೆಂದೂ, ಅಧ್ಯಕ್ಷನು ದಿನನಿತ್ಯ ದೇವಾಲಯದಲ್ಲಿ ಕಥಾಮಾಲೆಯನ್ನು ಹೇಳಬೇಕೆಂದೂ, ಅಧಿಕಾರಿಯು ಮೇಲೆ ಹೇಳಿದವರ ಕಾರ್ಯಗಳಲ್ಲಿ ಲೋಪವಾದಲ್ಲಿ ಶಿಕ್ಷಿಸಬೇಕೆಂದೂ, ದೇವಾಲಯದಲ್ಲಿ ನಂದಾದೀವಿಗೆಗೆ ಎಣ್ಣೆ ಒದಗಿಸಬೇಕೆಂದೂ, ಅಂಗಡಿಯ ಅಧಿಕಾರಿಯು ಶಿವರಾತ್ರಿಯಂದು ದೀಪಗಳಿಗೆ ಎಣ್ಣೆಯನ್ನೂ ಆರಾಧನೆಯ ದಿನದಂದು ಬ್ರಾಹ್ಮಣಭೋಜನಕ್ಕೆ ಅಕ್ಕಿಯನ್ನೂ ಒದಗಿಸಬೇಕೆಂದೂ, ಆಸ್ರಣ್ಣನು ದೇವಾಲಯದ ದೀಪಗಳು ನಂದದಂತೆ ನೋಡಿಕೊಳ್ಳಬೇಕೆಂದೂ, ದೇವದಾಸಿಯರು ಕ್ರಮಪ್ರಕಾರ ದಿನನಿತ್ಯವೂ ನರ್ತಿಸಬೇಕೆಂದೂ ಶಾಸನದಲ್ಲಿ ವಿಧಿಸಲಾಗಿದೆ.

ದೇವಾಲಯದ ಆವರಣದಲ್ಲಿ ಅರಮನೆಯನ್ನು ಕಟ್ಟುವ ಅಧಿಕಾರವಿಲ್ಲವೆಂದೂ, ಮೇಲಿನ ಎಲ್ಲಾ ಕಾರ್ಯಕಲಾಪಗಳನ್ನೂ ವಿಚಾರಿಸಿ ರಕ್ಷಿಸದಿದ್ದರೆ ಅರಸನಿಗೆ ಬ್ರಹ್ಮಹತ್ಯೆಯ ದೋಷ ತಗಲುವುದೆಂದೂ ನಮೂದಿಸಲಾಗಿದೆ. ಕೊನೆಯದಾಗಿ ಆಳರಸ ಕುಲಶೇಖರದೇವನಿಗೂ ಅವನ ಅಳಿಯಂದಿರಾದ ಬಂಕಿದೇವ, ಬಂಮದೇವ ಹಾಗೂ ಕುಲಶೇಖರದೇವರಿಗೂ ಮಂಗಳವನ್ನು ಕೋರಲಾಗಿದೆ.

೨ನೆಯ ಹರಿಹರನ ಬಾರಕೂರು ಶಾಸನ, ಶಕ ೧೩೦೧

ಸ್ಥಳ: ಸೋಮನಾಥೇಶ್ವರ ದೇವಸ್ಥಾನದಲ್ಲಿರುವ ಶಿಲಾಫಲಕ, ಮಣಿಗಾರಕೇರಿ, ಬಾರಕೂರು, ಉಡುಪಿ ತಾಲೂಕು

ಪ್ರಕಟಣೆ: *ARSIE.*, 1901, No. 155; *SII.*, Vol. VII, No. 352

ಭಾಷೆ: } ಕನ್ನಡ
ಲಿಪಿ: }

ತೇದಿ: ಶಕ ೧೩೦೧, ಕಾಳಯುಕ್ತ, ಮಾರ್ಗಶಿರ ಶು. [೧], ಸೋಮವಾರ = ಕ್ರಿ.ಶ. ೧೩೭೮, ನವಂಬರ್ ೨೧–೨೨

ಶಾಸನ ಪಾಠ

1 ಶ್ರೀ ಗಣಾಧಿಪತಏ(ಂ) ನಮ[ಃ] ॥ ನಮಸ್ತುಂಗ ಶಿರಶ್ಚುಂಬಿ–
2 ಶ್ಚಂದ್ರ ಚಾಮರ ಚಾರವೇ [।*] ತ್ರೈಲೋಕ್ಯ ನಗರಾರಂಭ(ಂ) ಮೂಲಸ್ಥ [ಂಭಾ]–
3 ಯ ಸಂಭವೇ ॥ ಸ್ವಸ್ತಿ ಶ್ರೀ [॥*] ಜಯಾಭ್ಯುದಯ ಶಕವರುಷ ೧೩೦೧ನೆಯ–
4 ವರ್ತ್ತಮಾನ ಕಾಳಯುಕ್ತಾಕ್ಷಿ ಸಂವಛ್ಚರದ ಮಾರ್ಗ್ಗಸಿರ ಸು [೧] ಸೋಮವಾ–
5 ರದಂದು ಶ್ರೀಮನ್ ಮಹಾಮಂಡಳೇಸ್ವರ ಅರಿರಾಯ ವಿಭಾಡ ಭಾಶೆಗೆ ತ–
6 ಪ್ಪುವರಾಯರ ಗಂಡ ಶ್ರೀ ವೀರ ಬುಕ್ಕಂಣ್ನ ವೊಡೆಯರ ಕುಮಾರ ಶ್ರೀಮ–
7 ತು ರಾಜಾಧಿರಾಜ ರಾಜಪರಮೇಸ್ವರ ಶ್ರೀ ವೀರ ಹರಿಯಪ್ಪ ವೊಡೆಯ–
8 ರ ವಿಜಯ ರಾಜ್ಯಾಭ್ಯುದಯದಲ್ಲು ಶ್ರೀ ಮನ್ ಮಹಾಪ್ರಧಾನ ಬೊಂಮರಸ–
9 ವೊಡೆಯರು ಬಾರಕೂರ ರಾಜ್ಯವನಾಳುವಲ್ಲಿ ಮಣಿಗಾರ ಕೇರಿಯ–
10 ವೊಳಗಣ ಸೋಮಇದೇವರಲ್ಲಿ ಕವಿಲಿ ಸೆಟ್ಟಿಯ ರಾಮಂಣ್ನ ಸೆಟ್ಟಿಯ
11 ಹೆಂಡತ್ತಿ ನಾಗವೆ ರುದ್ರಪೂಜೆಗೆ ಬ್ರಾಹ್ಮಣ ಭೋಜನಕ್ಕೆ ಮೂವ–
12 ರಿಂಗೆ ನಾಗವೆ ದೇವರಿಂಗೆ ಕೊಟ್ಟ ಗ[೩ಂಕ್ಕೆ] ಕೊಂ[ಡು] ಕಬೂರ[ಲ್ಲಿ ದೇವ]–

13 ರೀ ಮೂಲದಿ ಬಾಳ ಒಳಗೆ ಪ್ರತಿದಿನ ೧ಕ್ಕೆ ಕಂಚ್ಚಿನ ಅಕ್ಕಿ ಹಾ ೧॥ ಮೇ-
14 ಲು ಬೀಯಕ್ಕೆಬಾ [೨] ತೊ[ಟಾ]ರದ ಒಳಗೆ ತೋ. ತುಪ್ಪ ಮೇಲೋಗರ [೩] ಮೊಸರು
15 ವೀಳೆಯ ಇಷ್ಟನು ನಡಸುವರು ತೊಳಶಿಯ ಮಾಲೆಗೆ ಕೊಟ್ಟ ೪ ಕಾರ್ತ್ತಿ[ಕ*] ಮಾಸದ-
16 ಲ್ಲಿ ಪ್ರತಿದಿನ ೧ಕ್ಕೆ ದೀಪೋತ್ಸವ[ಹಂ]ನಬ್ಬದ ತುಪ್ಪದ ದೀವಿಗೆಗೆ ಹುಂಣಮೆಯ
17 ದಿನ ಪಂಚಾಮ್ರಿತ ಉಪಾರ ಸಿಖರದ ದೀವಿ[ಗೆ] ಇ ಧರ್ಮ್ಮಕ್ಕೆ ನಾಗವೆ ಕೊಟ್ಟ ಗ ೧೫ ಅ-
18 [ಂತು] ಗ ೪೨ ವನೂ ಕೊಂಡು ಇ ಬಾಳಿಂದಲ್ಲಿ ಮಣಿಗಾಱಕೇರಿಯ ೩ ಸೆಟ್ಟಿ ಕಾಱರೂ ಸಮ-
19 ಸ್ತ ಹಲರೂ ದೇವರ ಶ್ರೀಕಾರಿಯವ ನಡ್ಸುವಾತನು [।*] ಇ ಧರ್ಮ
20 ದೇವ[ರ] ಅಮ್ರುತಪಡಿ ನಡವ[ದೆ] ಇ ಧರ್ಮ ನಡಉದು ಆ ನಾಗವೆ [ಕೊ] ಟ್ಟದು ತಾ-
21 ಂಬ್ರದ [ಚ]ಱಕಲು ೧ ಸಟ್ಟುಗ ೧ ಕುಡಿಇವ ತಂಬುಗೆ ೧ ದೇವರಿಂಗೆ [ಪ] ಂಣತೆ-
22 ೧ ಇಷ್ಟನೂ ಮಾಡಿಶಿ ಕೊಟ್ಟಳು ಇವಱ ಹಱಿವುಱಿಯನು ದೇವ[ರೇ] ಮಾಡಿಸುವ-
23 ರು [।*] ಯಿ ಧ[ರ್ಮ್ಮ]ಕ್ಕೆ ಆವನಾನೊಬ್ಬ ಆಳುಪಿದರೆ ವಾರಣಾಸಿಯ[ಲ್ಲಿ] (೧)
24 ೧೦೦೦ ಕವಿಲೆಯ ವಧ್ಸಿದ ದೋಶದಲ್ಲಿ ಹೋಹರು ಬ್ರಾಹ್ಮಣರ
25 ೧೦೦೦ ಪ್ರಜೆಯ ವಧ್ಸಿದ ದೋಶದಲ್ಲಿ ಹೋಹರು॥ ಸ್ವದತ್ತಾಂ ಪರ-
26 ದತ್ತಾಂ ವಾ ಯೋ [ಹರೇತು] ವಸುಂಧರ [।*] ಶಷ್ಟಿರ್ವ್ವರುಶ ಸಹಸ್ರಾಣಿ ವಿ-
27 ಷ್ಟಾಯಾಂ ಜಾಯತೇ ಕ್ರಿಮಿಃ [॥*] [ನಾಗವೆ ದೇವಿಯ]ರ ಒಪ್ಪ ಶ್ರೀ [॥*]

ಸಾರಾಂಶ

ಮಹಾರಾಜಾಧಿರಾಜ, ರಾಜಪರಮೇಶ್ವರ ವೀರ ಹರಿಯಪ್ಪ ಒಡೆಯನ ಆಳಿಕೆಯಲ್ಲಿ ಮಹಾಪ್ರಧಾನ ಬೊಮ್ಮರಸ ಒಡೆಯರು ಬಾರಕೂರು ರಾಜ್ಯವನ್ನು ಆಳುತ್ತಿದ್ದಾಗ, ರಾಮಂಣ ಸೆಟ್ಟಿಯ ಹೆಂಡತಿ ನಾಗವೆ ಬಾರಕೂರ ಮಣಿಗಾರಕೇರಿಯ ಸೋಮಯ

ದೇವರಿಗೆ ರುದ್ರಪೂಜೆಗೆ ಹಾಗೂ ಮೂವರು ಬ್ರಾಹ್ಮಣರ ಭೋಜನಕ್ಕೆ ಮೂವತ್ತು ಗದ್ಯಾಣಗಳನ್ನು ದಾನ ಮಾಡಿದಳು. ಅದರಂತೆಯೇ ಅದೇ ದೇವರ ತುಪ್ಪದ ದೀವಿಗೆ, ಪಂಚಾಮೃತ ಇತ್ಯಾದಿ ಇನ್ನೂ ಹಲವು ಸೇವೆಗಳಿಗೆ ಗದ್ಯಾಣಗಳನ್ನು ನಾಗವೆ ದಾನ ಮಾಡಿದಳು. ಈ ದಾನವನ್ನು ಪಡೆದುಕೊಂಡು ದೇವರ ಶ್ರೀ ಕಾರ್ಯ್ಯವನ್ನು ನಡೆಸುವ ಹೊಣೆ ಬಾರಕೂರ ಮಣಿಗಾರಕೇರಿಯ ಮೂರು ಸೆಟ್ಟಿಕಾರರದ್ದು ಮತ್ತು ಸಮಸ್ತ ಹಲರದ್ದು.

೨ನೆಯ ಹರಿಹರನ ಬಾರಕೂರು ಶಾಸನ, ಶಕ ೧೩೦೨

ಸ್ಥಳ: ಗೋಪಾಲಕೃಷ್ಣ ದೇವಸ್ಥಾನದ ಬಾವಿಯ ಪಕ್ಕದಲ್ಲಿರುವ ಕಲ್ಲು, ಮೂಡಕೇರಿ, ಬಾರಕೂರು, ಉಡುಪಿ ತಾಲೂಕು

ಪ್ರಕಟಣೆ: *ARSIE.*, 1901, No. 135; *SII.*, Vol. VII, No. 325

ಭಾಷೆ: ಕನ್ನಡ
ಲಿಪಿ: ಕನ್ನಡ

ತೇದಿ: ಶಕ ೧೩೦೨, ರೌದ್ರಿ = ಕ್ರಿ.ಶ. ೧೩೮೦-೮೧

ಶಾಸನ ಪಾಠ

1 ಶ್ರೀ ಗಣಾಧಿಪತಯೇ ನಮಃ [।*] ನಮಸ್ತುಂಗಶಿರಶ್ಚುಂಬಿ ಚಂದ್ರ ಚಾಮರ ಚಾರವೇ । ತ್ರೈಲೋಕ್ಯನಗರಾರಂ[ಭ]-

2 ಮೂಲಸ್ತಂಭಾಯ ಶಂಭವೇ । ಸ್ವಸ್ತಿ ಶ್ರೀಮ[ತ್ಸ್ಯ]ಕಾಬ್ದ ೧೩೦೨ನೆಯ ರವುದ್ರಿ ಸಂವತ್ಸರದಲು ಶ್ರೀ-

3 ಮದ್ರಾಜಾಧಿರಾಜ ರಾಜಪರಮೇಶ್ವರ ಅರಿರಾಯವಿಭಾಡ ಬಾಷೆಗೆ ತಪ್ಪುವ ರಾಯರ ಗಂಡ

4 ಪೂರ್ವ್ವಪಶ್ಚಿಮ ದಕ್ಷಿಣ ಸಮುದ್ರಾಧಿಪತಿ ಶ್ರೀ ವೀರ ಹರಿಹರರಾಯರ ರಾಜ್ಯಾಭ್ಯುದ-

5 ಯದಲು ರಾಯನ ನಿರೂಪದಿಂ ಶ್ರೀಮನುಮಹಾಪ್ರಧಾನಂ ಬೊಂಮರ್ಸ ಒಡೆಯರು ಬಾರಕೂರು ರಾಜ್ಯ-

6 ವನಾಳುವ ಕಾಲದಲು ಕುಮಾರ ಮಾಧವಸ್ವಾಮಿಗಳು ಬಾರಕೂರ ಮಠದಲಿ ತಾಉ ಪ್ರತಿಷ್ಟೆಯ್ಯ ಮಾ-

7 ಡಿದ ಗೋಪಿನಾಥ ದೇವರ ದೇವಸ್ವದ ಕುಳವ ಬರದು ನಟ್ಟ ಸ್ಯಾಸನದ ಕ್ರಮವೆಂತೆಂದಡೆ ಪೂ[ರ್ವ್ವ]ದಲಿ ಸ್ವಾ-

8 ಗಳು ೨ ಕೊಯಿಲು ಯಿಪ್ಪತ್ತಯೆರಡು ಆದಱಿಂದ ಬಡಗಲು ಮುಂನೆಯ ಗದೆ
ಗಳು ೨ ಕೊಯಿಲು ಯೆಂಟು ಆದಱಿಂದ ಬ–
9 ಡಗಲು ಸಾಲಬಳಿಯ ಕಲ್ಲಾಯ ಗದ್ದೆ ೧ ಕೊಯಿಲು ಯೆಂಟು ಆದಱಿಂದ
ಮುಡಲು ಶಂಕರನಾರಾಯಣ ನಡುವಂತಿಲನ ಬಡಗ
10 ಬಯಲಲೂ ಕೊಳಕೆಯ ಗದೆ ೧ ಕೊಯಿಲು ಹಂನೆರಡು ಆದಱಿಂದ ಮೂಡಲು
ಭಟ ಸೋಮಾಜ್ಯರ ಮನೆಯ ಬಯ–
11 ಲಲು ಬಡಗ ಬಳಿಯಲಿ [ಹಿರಿ]ಯ ಗದ್ದೆ ೧ ಕೊಯಿಲು ಹದಿನಾಱು [ಅ]ದ
ಱಿಂದ ಪಡುವಲು ಬಳಿಯೆಂಬ ಗದ್ದೆ ೧ ಕೊಯಿಲು ಹ–
12 ತು [ಅ]ದಱಿಂದ ತೆಂಕಲು ಬಾಗಿಲ ಗದ್ದೆ ೧ ಕೊಯಿಲು ಯೆಂಟು [ಅ]ದ
ಱಿಂದ ಮೇಲಣ ಹಾಳಿ ೧ ಕೊಯಿಲು ವೊಂದು ಮನೆಠಾಉ ಕ–
13 ಣನು ಹೊಡಿ ಕಾಡು ಸಹಿತ ದೇವರ ಮೂಲ॥ ಬಂನಿಂಜದ ಅಧಿವಾಸದ
ಬಯಲ ಒಳಗೆ ಶ್ರೀ ಕ್ರುಷ್ಣದೇವರ ಮೂಲದ ಬದ್ದಬಾಳಿನ ವಿವ–
14 ರ ತೆಂಕಬಡಗ ಹೋಹ ಹೆಧಾರಿಯಿಂದ ಮೂಡಲು ಗುಡ್ಡೆಯ ಗದೆ ೧ [ಕು]
ಯಿಲು ಲ ನಯಕ ಬಳಿ ೧ ಕೊಯಿಲ್ಲು ಳ ಹೊಯಿಗೆಯ ಗದ್ದೆ [೧]
15 ಕೊಯಿಲ್ಲು ಲ ಹೆದಾರಿಯಿಂದ ಪಡುವಲು ಹಿರಿಯ ಗದ್ದೆ ೧ ಕೊಯಿಲ್ಲು ೯
ಆದಱಿಂದ ಬಡಗ[ಲು] ಬಳಿಯ ಕಂಡ ೧ ಕೊಯಿಲು [ಳ] ಅ–
16 ದಱ ಬಡಗಣ ಕಲಂಬುಳಯೆಂಬ ಗದ್ದೆ ೧ ಕೊಯಿಲು ೧೦ ಕುದುರೆತಕಂಡ ೧
ಕೊಯಿಲು ಳ ಆದಱಿಂದ ಪಡುವಲು ಕುದು–
17 ರಕಂಡಗಳು ೩ ಕೊಯಿಲು ಲ ಸಿತಿಂಬಳಿ ೧ ಕೊಯಿಲು ೫ ಕಂಡಕಯೆಂಬ
ಗದ್ದೆ ೧ ಕೊಯಿಲು ೭ ತೆಂಕಣ ಕೊಂಕ ೧ ಕೊಯಿ–
18 ಲು ೬ ನಡುವಣ ಕಯ್ಯಲೆಯೆಂಬ ಗದೆ ೧ ಕೊಯಿಲು ಳ ಬಡಗಣ ಕಯ್ಯಲೆ
ಯಾರು ೧ ಕೊಯಿಲು ೭ ಆದಱಿಂದ [ಪ]ಡುವ ಕಯ್ಯ–
19 ಲೆಯಾರು ೧ ಹಾಳಿ ೧ ಅಂತ್ತು ೨ ಕೊಯಿಲು ೧೦ ಗುಂಡಿಲದ ಪದಿಲದೊಳಗ
ಮೂಡಣ ಕಡೆಯ ಬಳಿ ೧ ಕೊಯಿಲು ಳ ತೆಂಗಿನ ಕಟು ಸಹ
20 ಆಗಡಿಯಿಂದ ಪಡವಲು ಪೋಉಗಿಯ ಗದೆ ೧ ಕೊಯಿಲು ೫ ಆದಱಿಂದ
ಪಡುವ ಪಟೆಲಯೆಂಬ ಗದೆ ೧ ಕೊಯಿಲು ಲ ಹಿರಿಯ ಪಟೆಲ
21 ಯೆಂಬ ಗದೆ ೧ ಕೊಯಿಲು ೧೬ ಹಿರಿಯ ಪಟೆಲದ ಮೂಡಣ ಕೊಂಕೆಯೆಂಬ
ಗದೆ ೧ ಕೊಯಿಲು ೫ ಹಿರಿಯ ಪಟೆಲದ ಬಡಗಣ ಹಾ–

22 ವನೂ ಅಯ್ಯನವರೂ ಮೊದಲಾಗಿ ಆರು [ಕೊ]ಳಸಲ್ಲದು [।*] ಕೊಂಡವರು ನಿಸ್ಸಂತಾನವಾಗಿ ನರಕದಲಿ [ಬೀ]–

23 ಳುವರು ಗ್ರುಹಸ್ತರು ಅಯ್ಯನವರು ಆದರೆ ಹಿರಿಯಾತಂಗಲ್ಲದೆ ಕಿಱಿಯವರಿಂಗೆ ಉ[ಂ]ಬಳಿ ಭಾ–

24 ಗ ಸಲ್ಲದು [।*] ಯಿ ಧರ್ಮ್ಮದ ಪಾಲನೆಯ ಮುಱುಕೇರಿಯ ೩ ವರು ಸೆಟ್ಟಿ ಕಾಱರು ಸಮಸ್ತಹಲರು ಚ[ಲ]

25 ದಾಕ್ಷಿಂಣ್ಯ ಲೋಭರಹಿತರಾಗಿ ಮಾಡುವರು [।*] ಮಾಡದಿದ್ದರೆ ೩ ವರು ದೇವರ ಕಿತ್ತ ದೋಷ [।*] ಭಂಡ್ಡಿ–

26 ಯ ಮಠದಲ್ಲಿ ಕಲ್ಲ ಸಂಕ್ಕಟಿಂದಂ ಪಡುವಲು ಹೊಳೆಯಿಂ ಬಡಗಲು [ವಿಪ್ರ] ವಾಳಿಯ ಕೆಱೆಯ ನಟ್ಟ–

27 ರಲ್ಲಿಂ ಮೂಡಲು ಆಱಯಿಂ ತೆಂಕ್ಕಲು ದೇವರ ಮನೆ ಅರಿತ ಹೊಲೆಯರ ಅಂಕ ಸೆಟ್ಟಿ ಬಂಟ್ಟ ಪರಭಾ–

28 ಳಿಗೆ ಜನನ ಸಲ್ಲದು [।*] ಇ ಅಡಕವ ತಪ್ಪಿದಡೆ ೧ ತಲೆ ೧೦೦೦ ಹೊಂನು ಅರ್ಸಿಂಗೆ ದಂಡ್ಡ ॥ ಸ್ವದತ್ತಾಂ ಪರ–

29 ದತ್ತಾಂ ವ್ವಾ ಯೋ ಹರೇತ ವಸುಂಧರಾಂ [।*] ಶಷ್ಟಿರ್ವ್ವರುಶ ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿ ॥ ದಾ–

30 ನ ಪಾಲನಯೋರ್ಮ್ಮಧ್ಯೇ ದಾನಾತ್ಶ್ರೇಯೋನು ಪಾಲನಂ [।*] ದಾನಾತ್ಸ್ವರ್ಗ್ಗ ಮವಾಪ್ನೋತಿ ಪಾಲನಾದಚ್ಯುತಂ ಪ–

31 ದಂ ॥ ಶ್ರೀ ಶ್ರೀ

ಸಾರಾಂಶ

ಮಹಾರಾಜಾಧಿರಾಜ ರಾಜಪರಮೇಶ್ವರ ವೀರ ಹರಿಹರ ರಾಯನ ಆಜ್ಞೆಯ ಮೇರೆಗೆ ಮಹಾಪ್ರಧಾನ ಬೊಂಮರಸ ಒಡೆಯನು ಬಾರಕೂರ ರಾಜ್ಯವನು ಆಳುವ ಕಾಲದಲ್ಲಿ ಕುಮಾರ ಮಾಧವಸ್ವಾಮಿಗಳು ಬಾರಕೂರ ಮಠದಲ್ಲಿ ಪ್ರತಿಷ್ಠೆ ಮಾಡಿಸಿದ ಗೋಪಿನಾಥ ದೇವರಿಗೆ ದೇವಸ್ವವನ್ನು ಸೃಷ್ಟಿಸಿದ ವಿವರಗಳನ್ನು ಈ ಶಾಸನವು ನೀಡುತ್ತದೆ. ಬಾರಕೂರ ಸೌಮ್ಯದೇವರಿಗೆ ನಡೆಯಬೇಕಾದ ಸೇವೆಗಳ ಬಗೆಗೂ, ಬ್ರಾಹ್ಮಣ ಭೋಜನ, ವೇದಾಧ್ಯಯನ ಇತ್ಯಾದಿ ಕಾರ್ಯಕ್ರಮಗಳ ಬಗೆಗೂ ಸಹ ವಿವರಗಳನ್ನು ನೀಡಲಾಗಿದೆ.

೨ನೆಯ ಹರಿಹರನ ಉಡುಪಿ ಶಾಸನ, ಶಕ ೧೩೧೭

ಸ್ಥಳ: ಕೃಷ್ಣ ಮಠದ ಉತ್ತರ ದಿಕ್ಕಿನ ಗೋಡೆಗೆ ತಾಗಿಸಿಟ್ಟಿರುವ ಶಿಲಾಫಲಕ, ಉಡುಪಿ, ಉಡುಪಿ ತಾಲೂಕು

ಪ್ರಕಟಣೆ: *ARSIE.*, 1901, No. 112 ; *SII.*, Vol. VII, No. 299

ಭಾಷೆ :
ಲಿಪಿ : } ಕನ್ನಡ

ತೇದಿ: ಶಕ ೧೩೧೭, ಭಾವ, ವೈಶಾಖ ಶು. ೧, ಗುರುವಾರ = ಕ್ರಿ.ಶ. ೧೩೯೪, ಏಪ್ರಿಲ್ ೨

ಶಾಸನ ಪಾಠ

1 ಸ್ವಸ್ತಿ ಶ್ರೀ [||*] ಗಣಾಧಿಪತಏ(೦) ನಾಮಃ [|*] ಪಾಂತು ಓ ಜಲದ ಸ್ಯಾಮಾಃ ಶಾಂರ್ಗಜ್ಯಾಘಾತ ಕರ್ಕಶಾಃ [|*] ತ್ರಯಿಲೋಕ್ಯಮಂಟಪಸ್ತಂಭಾಃ

2 ಶ್ಚತ್ವಾರೋ ಹರಿಬಾಹವಃ [||*] ಸ್ವಸ್ತಿ ಶ್ರೀ [||*] ಜಯಾಭ್ಯುದಯ ಶಕ ವರುಶ ಸಾವಿರದ ಮುನುಱ ಹದಿನೇಳನೆಯ ಭವ ಸಂವಚ್ಚರದ ವಯಿಶಕ ಸು-

3 ಧ ಪಾಡ್ಯ ಗುರುವರದಲು ಶ್ರೀ ಮಹಾರಾಜಾಧಿರಾಜ ಪರಮೇಶ್ವರ ಶ್ರೀ ವೀರ ಹರಿಹರ ಮಹಾರಾಯರು ವಿಜಯನಗರದಲು

4 ಸಕಲ ರಾಜ್ಯವನು ಪರಿಪಾಲಿಸುವ ಕಾಲದಲು ಆ ಮಹಾರಾಯರ ಆಜ್ಞೆಯಿಂದ ಹೆಗ್ಗಡೆ ಶಂಕರಸರು ಬಾರಕೂರ ರಾಜ್ಯವನಾಳುವ ಕಾ-

5 ಲದಲಿ ಶಿವಳಿಯ ಮೂಡೆಲ ನಿಡುಂಬುರ ಗ್ರಾಮದ ಮಧ್ಯದ ಉಡುಪಿನ ಸ್ಥಾನದ ಶ್ರೀ ಕ್ರುಷ್ಣದೇವರಿಗೆ ನಡವ ಅಮ್ರುತಪಡಿ ನಂದಾದೀ-

6 ಪ್ತಿಗೆ ಮೂಲವಾಗಿ ಕೊಂಡು ಬಾಳಿದ ಗದೆಗಳ ವಿವರ ಶಿವಳಿಯ ಗ್ರಾಮದ ಚಗುರಿಯ ಅಧಿವಾಸದಲು ಕುಂಜಾತ್ತ ಬೆಟ್ಟಿನ ಪಡುಸ ಬಯ-

7 ಲಲು ಕಲಸಂಕಟಂದ ಬಡಗಲೂ ಮುಕ್ಕೋಣೆಂಬ ಗದ್ದೆ ೧ ಕೊಯಿಲು ಹಂನೆರಡು ಆದಱಿಂದ ಬಡಗ ಪಡುವಲು ಕುಕಿಯುಗದ್ದೆ-

8 ಮಿ ದೇವರಾಯನು ಸೂರಿಯ ಗ್ರಹಣದಲಿ ಧಾರಾಪೂರ್ಬ್ಬಕವಾಗಿ ಶಿಲಾಸ್ಯಾಸ
ನವ ನ[ಟ್ಟು] ಕೊಟ್ಟ ಭಂ-

9 ಡ್ಡಿಯ ಮಠದೂರ ಹಡಿಕೆಯ ಹೊಂನನೂ ನಡವ ಮನುಶ್ಯನ ಜೀವಿತವನೂ
ನಷ್ಟೆಯನುಕ್ಕಳಬ .

10 ಮೂಱು ಭಾಗಿಯ ಮಾಡಿ ಅಲ್ಲಿ ಒಂದ್ದು ಭಾಗಿ ಹೊಂನಿಂದ ಹೊಱಗಣ
ಸೌಮ್ಯದೇವರಲ್ಲಿ ವರುಷಂಪ್ರತಿ ಧ-

11 ನುರ್ಮಾಸ ೧೬ ಹೋಹಲ್ಲಿ ಶಿವಗಂಗೆಯ ಪ್ರತಿಷ್ಠೆಯ ಮಾಡಿದ ದಿನ ರಂಗ
ಪೂಜೆ ಬ್ರಾಹ್ಮಣ ಭೋಜನವ ನಡಿ-

12 ಸಿ ವೇದಾಧ್ಯಯನಕ್ಕೆ ೧·೧೨ ಹೊಂನನೂ ಕೊಟ್ಟು ಹೊಂನು ಮಿಕ್ಕಡೆ ಸೌಮ್ಯ
ದೇವರಿಂಗೆ ಕುಡುಉದು ಭ-

13 ಂಡಿಯ ಮಠದ ತೆಂಕ್ಕದೇವರಿಗೆ ಒಂದು ಭಾಗೆಯ ಹೊಂನಿಂ[ದ] ದಿನಂಪ್ರತಿ
ರುದ್ರಪೂಜೆಯ ೩ ವರು ಬ್ರಾ-

14 ಹ್ಮರಿಂಗೆ ನಡಸಿ ಹೊಂನು ಮಿಕ್ಕಡೆ ತೆಂಕ್ಕದೇವರಿಂಗೆ ಕುಡುಉದು ಒಂದು
ಭಾಗಿಯ ಹೊಂನು ತಪ್ಪು

15 ವೊಪ್ಪು ಮೊದಲಾಧ ತೇಜೋಪಾರ್ಜ್ಜನೆ ಆ ಊರ ಒಡೆತನ ಗೋಪಿನಾಥ
ದೇವರಿಂಗೆ ಆ ಆತಾರದಲು ಅವ .

16 ಯ ಬಾಳು ಒತ್ತಿನಮೇಲೆ ಕೋ ಉರ ಒಳಗೆ ಸರಕ್ಕದ ಕಾಣಬಾಳು ಬೆಕ್ಕಾಟೆ
ಯಲ್ಲಿ ಹಳೆನೀರ ಬಾಳು ಹಾ[ನೆ]ಯ

17 ಹಳಿಯಲಿ ಲೊಕ್ಕಿಯ ಹಡುಹಿನ ತೋಟ ಆದಕ್ಕೆ ಎರಡು ಆರೆ ಮೂಡೆಯ ತೆಱ
ಮೊದಲಾದ ಪ್ರಮಾ-

18 ಣದಿಂ ಹೊಂನು ೩ನೂ ಸೌಮ್ಯದೇವರಿಂಗೆ ಗಂಧಕ್ಕೆ ಕೊಟ್ಟು ಕಟ್ಟೆಯ ಚಪ್ಪರ
ಅಱವಟ್ಟಿಗೆಯನೂ ನಡ್ಸು-

19 ವಧು [ಭ]ಂಡಿಯ ಮಠದಲಿ ಮೂಲದ ತೋಟ ೨ ಯಿಷ್ಟು ಗೋಪಿನಾಥ
ದೇವರಿಂಗ್ಗೆ ಬೀಡು ದೇವಸ್ವ ಇ ಆಯ-

20 ದಿಂದ ದೇವರಿಂಗೆ ದಿನಂಪ್ರತಿ ನೈವೇದ್ಯ ೩ ಹಾನೆ ಅಕ್ಕಿ ನಂದಾವೆಳಕುಗೆ ರುದ್ರ
ಪೂಜೆಗೆ ೩ ವರು ಬ್ರಾಹ್ಮ-

21 ಣರೂ ಆಶ್ರಂಣಂಗೆ ಅಕಿ ಹಾನೆ ೧ ನೈಮಿತ್ತಿಕ ಕ್ಷೀರಾಬ್ಧಿ ಹೂವಿನ ತೋಟ
ಜೀರ್ಣೋದ್ಧಾರವ ಮಾಡುವರು [।*] ಇವಸು-

22 ಳಿ ೧ ಕೊಯಿಲು ೩ ಆದಱ ಬಡಗಣ ಕಟ್ಟು ಸಹ ಮೂಡಣ ಬಳಿಯ ಕಟ್ಟೆಂದ
ಪಡುವಲು ತೆಂಗಿನ ಕಟ್ಟು ೪ ಅದಱಿಂದ ಪಡುವಲು–

23 ಯಿಾಶ್ವರಪಟೆಲಯೆಂಬ ಗದೆ ೧ ಕೊಯಿಲು ೮ ಹೆಬಾರಥಿಂದ ಕೊಂಡ ಕೊಡಿಯ
ಗದ್ವೆ ೧ ಕೊಯಿಲು ೮ ತಾಳಿತಮೂರ್ಕಿಯೆಂಬ ಗದೆ

24 ೧ ಕೊಯಿಲು ೫ ಅದಱಿಂದ ಬಡಗ ಪಡುವಲು ಮುರ್ಕಿಯಲ್ಲಿ ನೆಂಗಾಸಯೆಂಬ
ಗದ್ದೆ ೧ ಹಿರಿಯ ಗದೆ ೧ ಅಂತು ಗದೆ ೨ ಕೊ–

25 ಯಿಲು ೧೦ ಆದಱಿಂದ ಬಡಗ ಮುಡಲು ಕೊಡುಂಕುರ ಉಲಾಲಿ ತೆಂಗಿನ
ತೋಟ ಕಣಬಾವಿ ೧ ಆದಱಿಂದ ತೆಂಕಲು ತನ್ನಡೆ–

26 ಯ ಗದೆ ೧ ಆದಱಿಂದ ತೆಂಕಣ ಯೆರಡು ಹಾಳಿ ಅಂತೂ ೩ ಕೊಯಿಲು ೧೦
ಸೇನಪಳಿಯ ಬಯಲ ಒಳಗೆ ಆಧಿಪಲಿಯೆಂಬ–

27 ಗದೆ ೧ ಕೊಯಿಲು ೮ ಕೊಡಿಲತ ಬಯಲ ಪಟೆಲದಲ್ಲಿ ಮೂಡಣ ಕಡೆಯಲ್ಲಿ
ಪರೆಲೆಯೆಂಬ ಗದ್ದೆ ೧ ಕೊಯಿಲು ೧೦ ಆದಱ ಬಡ–

28 ಗಲು ಬುದಿವಂತಬಳಿಯೆಂಬ ಗದ್ದೆ ೧ ಕೊಯಿಲು ೬ ಅದಱ ಬಡಗಣ
ಗುಡ್ಡೆಯ ಗದ್ದೆ ೧ ಕೊಯಿಲು ೧೦ ಅದಱ ಬಡಗಣ ಆಲು–

29 ಡಿಯ ಗದೆ ೧ ಕೊಯಿಲು ೭ ಅದಱಿಂದ ಪಡುವಲು ಪೊರಿಂಕೆಯೆಂಬ ಗದೆ ೨
ಕೊಯಿಲು ೧೦ ಕಟ್ಟು ತೆಂಗಿನಮರ ಸಹ ಅಲ್ಲಿಂದ ಬ–

30 ಡಗ ಹೊಯಿಗೆಯ ಗದೆ ೧ ಕೊಯಿಲು ೫ ಕಟ್ಟು ತೆಂಗು ಸಹ ಆದಱ
ಬಡಗಣ ಬಜತುಮರು ೩ ಅಱ[3] ಕೊಯಿಲು ೧೨ ಅದಱ ಬ–

31 ಡಗಣ ಭಟ್ಟರ ಬಳಿಯೆರಡು ಅಱ[3] ಕೊಯಿಲು ೧೦ ಅದಱ ಬಡಗಣ ಮುರಂ
ತುಮರುಯೆಂಬ ಗದೆ ೧ ಕೊಯಿಲು ೮ ಕುಳಂಬೆಯೆಂಬ–

32 ಗದೆ ೧ ಕೊಯಿಲು ೧೦ ಆದಱಿಂದ ಪಡವಣ ಹೊಸತುಮರು ೧ ಕೊಯಿಲು
೪ ಪಡುವ ಭಾಗಿಯ ಪೇರೊಳಕೆಯಿ ಬಯಲ ಒಳಗೆ ಮುಡ ಬ–

33 ಳಿಯಲ್ಲಿ ಕೋಟೆಯ ಗದೆ ೧ ಕೊಯಿಲು ೮ ಅದಱ ಪಡುವಣ ಬಳಿಯೆಂಬ ಗದ್ದೆ
೧ ಕೊಯಿಲು ೬ ಆದಱ ಪಡುವಣ ಬುಲಂ[ಥ]ನೆಂ–

34 ಬ ಗದೆ ೧ ಕೊಯಿಲು ೧೦ ಅದಱ ಪಡುವಣ ಆಂಮುಂಣ ಬಾಸುಯೆಂಬ ಗದೆ
೧ ಕೊಯಿಲು ೧೨ ಆದಱ ಪಡುವಣ ಪಿಂ[ಚ]ದ ಗದೆ ೧

35 ಕೊಯಿಲು ೮ ಆದಱ ಬಡಗಣ ಕೋಟೆಯ ಗದೆ ೧ ಕೊಯಿಲು ೧೦ ಕೇಸರಿಕ
ನಡಿಯ ಗದ್ದೆಯಿಂದ ಮೂಡಲು ಕೊಡಂಕುರ ಹೆದ್ದಾರಿ–

36 ಯಿಂದ ಪಡುವಲು ಗದೆ ೬ ಅಯಿದು ಗದೆಯ ಕಟಿನ ತೆಂಗಿನ ಮರ ಸಹ ಶ್ರೀ
ಕ್ರುಷ್ಣದೇವರ ಮೂಲ॥ ಸ್ವಸ್ತಿ ಉಡುಪಿನ ಅಂಗ–
37 ಳದಿಂದ ಬಡಗ, ಶ್ರೀ ಕೃಷ್ಣದೇವರ ಬಾಳಿನ ಚತುಸೀಮೆಯ ವಿವರ ಬಯಲಿಂದ
ಪಡುವಲು ನಿಡುಂಬುರರ [ಛ]ತ್ರದ ಠಾವಿಂ–
38 ದ ಪಚಿನವನ ಗದೆಯಿಂದ ಬಡಗಲು ತೆಂಕಿಲನ ಮೂಲದಿಂದ ಮುಡಲು
ಉಪ್ಪಳದ ಬಾಹರಿಗಳ ಮೂಲದಿಂದ ತೆಂಕಲೂ–
39 ಯಿಂತೀ ಚತು ಸೀಮೆಯೊಳಗುಳ ಬಾಗಲ ಗದೆ ಅಡಕೆಯ ತೋಠ ತೆಂಗಿನ
ಮರ ಹಲಸ ಮಲು ಮನೆಠಲು ಕಣ ಬವಿ ತುಂಬೆನೆ[ಕ]–
40 ಲ್ಲು ಸಹ ಶ್ರೀ ಕ್ರುಷ್ಣದೇವರ ಮುಲ ಉಡುಪಿನ ಬಯಲ ಒಳಗೆ ನಾಯರ ಗದೆ
೧ ಕೊಯಿಲು ೨೦ ಆದಱ ಆಗ್ನೇಯದ ಮೂಲೆಯಲ್ಲಿ
41 ಹಾಳಿ ೨ ಕೊಯಿಲು ೨ ಸಾಲಿಂದ ಮೂಡಣ ಹೊಳಗದೆ ೧ ಕೊಯಿಲು ೪
ಆದಱಿಂದ ಬಡಗಲು ಬುಡಂಬನೆಂಬ ಗದೆ ೧ ಕೊಯಿ
42 ಲು ೨ ದೊಡಸಾಲಿಂದ ತೆಂಕಣ ಕೊಂಕನೆಂಬ ಗದೆ ಆಱು ೨ ಕೊಯಿಲು ೯
ಕೆದಲದ ಬಯಲ ಒಳಗೆ ಬಳಿಗಳೆಂಬ ಗದೆ ೨ ಕೊಯಿಲು ೬
43 ಉಡುಪಿನ ಸನಥ ತೆಂಕಲು ತಿನಕಳದೆ ಕೊರ್ನಾಡಿನವನ ಬಗಿಲ ಗದೆಯಿಂದ
ತೆಂಕಲು ಪಲಡಿಯಹಳಿ[ಗ]ಳು ಕೊಲ್ಲಳ
44 ದ ಸವಿಾಪದಲು ೩ ಕೊಯಿಲು ೪ ಶ್ರೀಕ್ರಿಷ್ಣದೇವರಿಂದ ನಿಡಂಬುರರು–
ನೆನಪಳಿಯ ಬಯಲ ಒಳಗೆ ಯೆಂಟು ಗದೆಗ–
45 ಳ ತೆಗದುಕೊಂಡು ಆಡಕೆ ದೇವರಿಗೆ ಪ್ರತಿಪಣೆಯ ಪಾಡಿಯ ಬಯಲ ಒಳಗೆ
ಸರ್ವಮಾನ್ಯವಗಿ ದಾರಪೂರ್ವಕವಾಗಿ . . . . . .
46 ಲ ೧ ಕೊಯಿಲು ೮ ಕಂಗಬೆಟನಲಿ ರಾಮುಕಂಗಿನ ಜನರ್ಜ[ನ] ಕಂಗಿನತನು
ಕೊಠಲು ಆಲಿ ಕಣ ಬವಿ ಅಱಯೆಕಲು ಸ–
47 ಹ ದೇವರ ಮೂಲ ಆರ್ಕಳಪೂಡಿನ ಮೂಡೆ ಕಡೆಯಲು ಕಂಣಾರಡಿಕಯಂಬ
ಬಾಳು ಮಜಲು ಮಕ್ಕಿ ಮನೆ ಠಲು ಕಣ ಬಾವಿ
48 ಗಳು ಕೆಱು ಹೊಲ ತೆಂಗು ಹಲಸು ನೂಲು ಒಠೆಯ ಮರ ಸಹ ತೆರತೆಗದು
ಆಯಿವತರಲಿ ೭ ಮೂಡೆ ಅಕ್ಕಿ ಗೇಣಿ ಸಹ ಬುವಿ–
49 ದೇವರ ಮೂಲ ಬೆಳಿಕಾಳಯಿ ಆದಿವಾಸದಲು ಕಂಣಠನೆಂಬವನು ಕೊಟ ಬಾಳ
ಚತುಸೀಮೆಯ ವಿವರ ಕಂಡಿಂ . ಪಡುವಲು

50 ಕುಂ[ಞ]ಣ ಬಾಳಿಂದ ಗೋವಿಂದ ಕಂಣರೆನ ಕಡುವಿನ ಬಳಿಂದೆ ಬಯರಿಂಜ ತವನ ತೋಟ ಕಡುವಳಿಂದಲು ಬಡಗಲು ಸಿದ್ದ.

51 ಅ ಗಡಿಯಿಂದಂ ಮೂಡಲು ಹೋರಳಕಳ ಗಡಿಯಿಂದ ತೆಂಕಲು ಯಿಂತೀ ಚತು ಸೀಮೆ [ಒ]ಳಗಣ ಕಟೆಯ ಗಡಿ ದೇವಸ್ವದ ಗದೆ ಬ[ಯ]–

52 ಲ ಗದೆ ಸಹ ೫ ಗದೆಗಳು ಪುಕ್ಕಿ ಮನೆ ಠಾಉ ಭಾವಿ ಕ[ಳ]ಓಣಿ ತೆಂಗಿನ ತೋಟ ಹೊಲ ನೆಲ ಕಂಣಜನಿಂದ ಕೊಂಡ ಜನಾನ ಸಹ ಶ್ರೀ ಕ್ರಿಷ್ಣ–

53 ದೇವರ ಮೂಲ ॥ ಉಡುಲಾಳ ಬಳಿಯಿಂದ ಆದ ತೆಂಕಲು ಕೊಯಿಲು ೩ ದೇವರ ಮೂಲ ಬಯಲುರ ಬಯಲ ಒಳಗೆ ದೇವರ ಗದೆ .

54 . . . ಯೆಂಬ ಗದೆ ೧ ಕುಂಡಿಲ ಗದೆ ೧ ಕೊಯಿಲು ೪ ದೇವರ ಮೂಲ ಹಾಜೆವನಾಲಿ ಮೂಡದ ಗದೆಯೆಂಬ ಗದೆ ದೇವರ ಮೂಲ.

55 . . . ಉಡುಪಿನ ಬಯಲ ಗದೆಗಳ ಗೇಣಿಯಿಂದ ಪಾಯಸಮೊಸೆರೋಗರು ಚಿಪಲಿಯಿಂದವನು ನಾಲ್ವನೆ ಬೆಳಾತಿಗೆ ಅಕ್ಕಿಯಿಂದ ದಿನ ದಿನ

56 . . . . ಸುವರು ಸಗುಬಂನಿಂಜ ಕೊಟಉರು ಅಂತು ಮುಙು ಅಧಿವಸದ ಮೂಲದ ದೇವಸ್ವದ ಗೇಣಿಯಿಂದ ಕನಙ ಯಿಪ್ಪತ್ತು

57 . . . . ನಂದಾ[ದೀಪ್ತಿ]. ಳನು ಯಿಪ್ಪತ್ತು ಹಾಗಿ . . . . ಯೆಂಟು ಮಂದಿ ಪರು[ಪ]ತ್ತಿನವರು ನಡಸಿಬಹೆರು ॥

ಸಾರಾಂಶ

ಮಹಾರಾಜಾಧಿರಾಜ, ಪರಮೇಶ್ವರ, ವೀರ ಹರಿಹರಮಹಾರಾಯನು ರಾಜಧಾನಿ ವಿಜೆಯನಗರದಿಂದ ಸಾಮ್ರಾಜ್ಯವನ್ನು ಆಳುತ್ತಿದ್ದ ಕಾಲದಲ್ಲಿ ಅವನ ಆಜ್ಞೆಯ ಮೇರೆಗೆ ಹೆಗ್ಗಡೆ ಶಂಕರಸನು ಬಾರಕೂರು ರಾಜ್ಯವನ್ನು ಆಳುತ್ತಿದ್ದಾಗ ಶಿವಳ್ಳಿಗೆ ಸೇರಿದ ಮೂಡಲನಿಡುಂಬುರ ಗ್ರಾಮದ ಮಧ್ಯದ ಉಡುಪಿಯ ಕೃಷ್ಣದೇವರಿಗೆ ಅಮ್ರುತಪಡಿ ಮತ್ತು ನಂದಾದೀಪ್ತಿ ನಡೆಯುವ ಸಲುವಾಗಿ ನೀಡಲಾದ ಗದ್ದೆಗಳ ವಿವರವನ್ನು ಈ ಶಾಸನದಲ್ಲಿ ಕೊಡಲಾಗಿದೆ.

ಉಡುಪಿ ಕೃಷ್ಣಮಠದ ಶಾಸನ, ಶಕ ೧೫೩೭

ಸ್ಥಳ: ಶ್ರೀ ಕೃಷ್ಣಮಠದ ಪಶ್ಚಿಮ ದಿಕ್ಕಿನ ಗೋಡೆಗೆ ಸೇರಿಸಿ ಕಟ್ಟಲ್ಪಟ್ಟ ಶಿಲಾ ಫಲಕ, ಉಡುಪಿ, ಉಡುಪಿ ತಾಲೂಕು

ಪ್ರಕಟಣೆ: *ARSIE.*, 1901, No. 113; *SII.*, Vol. VII, No. 301

ಭಾಷೆ:
ಲಿಪಿ: } ಕನ್ನಡ

ತೇದಿ: ಶಕ ೧೫೩೭, ಆನಂದ, ಪುಷ್ಯ ಶು. ೧೦, ಶನಿವಾರ = ಕ್ರಿ.ಶ. ೧೬೧೪, ಡಿಸೆಂಬರ್ ೨೦–೨೧

ಶಾಸನ ಪಾಠ

1 ಸ್ವಸ್ತಿ ಶ್ರೀ [||*] ಜಯಾಭ್ಯುದಯ ಶಾಲಿವಾಹನ ಶ[ಕ*]ವರುಷ ೧೫೩೭ನೆಯ ಸಂದ ಆನಂ–

2 ದ ಸಂವತ್ಸರದ ಪುಷ್ಯ ಶುದ್ಧ ೧೦ ಸ್ತಿರವಾರದಲ್ಲು ವಿದ್ಯಾಧೀಶ ತ್ರೀರ್ಥ ಶ್ರೀಪದಂಗಳು ವಿ–

3 ದ್ಯೋಪದೇಶ ತೀರ್ಥಪ್ರಸಾದಂಗಳ ಉಡುಪಿನ ಶ್ರೀ ಕೃಷ್ಣದೇವರ ಪೂಜಾಕಾಲದಲು ಕೊ–

4 [ಳಪಿ]ಗ್ರಾಮದೊಳಗಣ ಸಂಕುವಾಳಿ ಅಗ್ರಹಾರದ ಕೊಂಕಣವರ್ಗದ ಬ್ರಾಂಹ್ಮ–

5 ಣ ರುಕುಶಾಕೆ ಭಾರದ್ವಾಜ ಗೋತ್ರದ ಸೌದೆಯ ಚಿಂನವರದ ನಾರಣಪ್ಪಯ ಮಗ

6 ಲಿಂಗಪ್ಪಯ ಶ್ರೀ ಕ್ರುಷ್ಣದೇವರ ಸಂನ್ಮುಖದಲ್ಲಿ ದಿನ ೧ಕ್ಕೆ ಆರೆಹಾನೆ ಅಕ್ಕಿಗೆ ಬೆಲ್ಲ ತುಪ್ಪ

7 ವರ್ಶದಿ ನಿತ್ಯದಲ್ಲಿ ಅತಿರಸ ನಿವೇದ್ಯ ಎಳ್ಳೆಂಣೆ ನಂದಾದೀಪ ೧ಕ್ಕೆ ಸಹವಾಗಿ ಕೃಷ್ಣದೇವರಿ–

8 ಗೆ ಆಚಂದ್ರಾರ್ಕ್ಕ ಸ್ಥಾಯಿಯಾಗಿ ಅತಿರಸ ನೈವೇದ್ಯ ಎಳೆಂಣೆ ನಂದಾದೀಪ ಸಹವಾಗಿ

9 ಸಹಿರಂಣ್ಯೋದಕ ದಾನ ಧಾರಾಪೂರ್ವ್ವಕವಾಗಿ ಶ್ರೀ ಕೃಷ್ಣದೇವರಿಗೆ ಭೂ ಸ್ವಾಸ್ಥಿಗೆಂ-

10 ದು ಧಾರೆ[ಯ*]ನೆರೆದು ಕೊಟ್ಟ ಗ ೧೦೦ ಅಕ್ಷರದಲ್ಲು ನೂರು [।*] ಯಿ ಧರ್ಮಕ್ಕೆ [ಕಾ]ಲ ಕಾ-

11 ಲಂ ಪ್ರತಿಯಾಗಿ ಅಕ್ಕಿಯ ಹಾನೆ [೫೦]ರ ಹೊಲಿಕೆ . ಮುಡಿ ೨೦ [।*] ಯಿ ಧರ್ಮವನು

12 ವೊಯಿದರಿಗೆ ವಾರಣಾಶಿಎಲಿ ಸಹಸ್ರ ಕಪಿಲೆಯ ಕೊಂದ ದೋಸದ-

13 ಲ್ಲಿ ಹೋಹರು॥ ಸ್ವದತಾಂ ಪರದತ್ತಾ ವಾ ಯೋ ಹರೇತ ವಸುಂಧರಾಂ [।*]

14 ಶಷ್ಟಿರ್ವ್ವರುಷ ಸಹಸ್ರಾಣಿ ವಿಷ್ಟಾಯಾ[ಂ*] ಜಾಯತೇ ಕ್ರಿಮಿಃ॥ ದಾನ ಪಾಲನ-

15 ಯೋರ್ಮಧ್ಯೇ ಪಾಲನ[*ಂ]ತು ವಿಸಿಶ್ಯತೇ [।*] ದಾನಾತ್ಸ್ವರ್ಗ್ಗ ಮಾಪ್ನೋತಿ ಪಾಲನಾದ-

16 ಚ್ಚುತಂ ಪದಂ [।*] ಮಂಗಳ ಮ[ಹಾ] ಶ್ರೀ ಮಹಾ ಶ್ರೀ ಶ್ರೀ ಶ್ರೀ ಶ್ರೀ [॥*]

ಸಾರಾಂಶ

ಉಡುಪಿಯ ಶ್ರೀ ಕೃಷ್ಣದೇವರ ಪೂಜಾಕಾಲದಲ್ಲಿ ದೇವರಿಗೆ ನಿತ್ಯ ಅತಿರಸ ನಿವೇದ್ಯ ಎಳ್ಳೆಣ್ಣೆ ನಂದಾದೀಪ ಇತ್ಯಾದಿ ಸೇವೆಗಳಿಗಾಗಿ ಕೊಂಕಣ ವರ್ಗದ ಬ್ರಾಹ್ಮಣ ಋಕ್ ಶಾಖೆಯ ಭಾರದ್ವಾಜ ಗೋತ್ರದ ಲಿಂಗಪ್ಪಯ್ಯ ನೂರು ಗದ್ಯಾಣಗಳನ್ನು ಭೂಸ್ವಾಸ್ಥಿಗೆಂದು ದಾನ ಕೊಟ್ಟನು.

ಶಿವಳ್ಳಿ ಬ್ರಾಹ್ಮಣರು ನೆಲೆಸಿರುವ ಪ್ರದೇಶ



ಛಾಯಾಚಿತ್ರಗಳು



ಮಾತೃಭೋಜನ



ವಟುವಿಗೆ ತುಳಸಿಕಟ್ಟೆ ಸಮೀಪ ಗಡಿಗೆ ನೀರು ಪ್ರೋಕ್ಷಣೆ




ದರ್ಭೆಯನ್ನು ಕತ್ತರಿಸಿ ಸಾಂಕೇತಿಕವಾಗಿ ಚವಲ



ಯಜ್ಞೋಪವಿತಧಾರಣೆ



ಗಾಯತ್ರಿ ಮಂತ್ರೋಪದೇಶ



ದಂಡುಕೋಲು ಹಿಡಿದಿರುವ ವಟು



ಆಹ್ವಾನ ಪತ್ರಿಕೆಯ ಕರಡು ಪ್ರತಿ ಬರೆಯುವುದು



ಆಹ್ವಾನ ಪತ್ರಿಕೆಯ ಕರಡು ಪ್ರತಿಯನ್ನು ವಧುವರರ ಕಡೆಯವರು ವಿನಿಮಯ ಮಾಡಿಕೊಳ್ಳುವುದು



ನಿಶ್ಚಿತಾರ್ಥದ ದಿವಸ ವಧುವಿಗೆ ಸೀರೆ ಉಡುಗೊರೆ



ಮದುವೆಯ ಹಿಂದಿನ ರಾತ್ರಿ ಮದುವೆಯ ಭೋಜನಕ್ಕಾಗಿ ತರಕಾರಿ ಹಚ್ಚುವ ಮೂಲಕ ಮುತ್ತೈದೆಯರಿಂದ ವಿದ್ಯುಕ್ತ ಆರಂಭ



ಹೆಣ್ಣಿನ ಕಡೆಯವರು ಗಂಡಿನ ಕಡೆಯವರನ್ನು ಸ್ವಾಗತಿಸುವುದು



ಗಂಡಿನ ಕಡೆಯವರು ಹೆಣ್ಣಿನ ಕಡೆಯವರನ್ನು ಸ್ವಾಗತಿಸುವುದು



ವರನನ್ನು ಪಾದ ತೊಳೆದು ಸ್ವಾಗತಿಸುವುದು



ವಧುವಿನ ಧಾರೆ ಸೀರೆ



ವಧುವಿನ ತಂದೆ ವರನಿಗೆ ಮಧುಪರ್ಕ ಕೊಡುವುದು



ವಧುವನ್ನು ಧಾರಾ ಮಂಟಪಕ್ಕೆ ಕರೆದುಕೊಂಡು ಬರುವುದು



ವಧುವರರು ಪರಸ್ಪರ ಮಾಲೆ ಹಾಕಿಕೊಳ್ಳುವ ಮೊದಲು ಅಡ್ಡಹಿಡಿಯಲಾದ ಪರದೆ




ಮದುವೆಯಲ್ಲಿ ಧಾರೆ ಎರೆದುಕೊಡುವುದು



ತಲೆಯ ಮೇಲೆ ಕನ್ನಡಿ ಹಿಡಿದು ಧಾರೆ ಎರೆಯುವುದು



ವಧು ಸಪ್ತಪದಿ ತುಳಿಯುವುದು



ವಧುವರರು ಹೋಮಕುಂಡಕ್ಕೆ ಅರಳು (ಲಾಜ) ಹಾಕುವುದು



ವಧುವಿಗೆ ವರನಿಂದ ಮಾಂಗಲ್ಯಧಾರಣೆ



ವಧು ವರನ ಪಾದ ತೊಳೆಯುವುದು



ಉಂಗುರದಾಟ


ದಂಡಕೋಲು ಸಹಿತ ಪೇಟಧಾರಿ ಮದುಮಗ


ಸೀಮಂತ ಸಂದರ್ಭದಲ್ಲಿ ಗರ್ಭಿಣಿಯ ವಿಶೇಷ ಅಲಂಕಾರ



ಗರ್ಭಿಣಿ ಹೆಂಡತಿಗೆ ಗಂಡ ಹೂ ಮುಡಿಸುವುದು



ಅನಂತವ್ರತಧಾರಿ ದಾರ ಕಟ್ಟುವುದು

ಪರಾಮರ್ಶನ ಗ್ರಂಥಗಳು

1. ಅನಂತರಾಮ ಭಟ್ ಕೆ. – ವಿಶ್ವಗುರು ಮಧ್ವಾಚಾರ್ಯ
ಯುಗ ಪುರುಷ ಮುದ್ರಾಣಾಲಯ,
ಕಿನ್ನಿಗೋಳಿ 1973

2. ಅನಂತರಾಮು ಕೆ. – ದಕ್ಷಿಣದ ಸಿರಿನಾಡು
ಅನಂತ ಪ್ರಕಾಶನ, ಮೈಸೂರು 1997

3. ಅಮೃತ ಸೋಮೇಶ್ವರ – ತುಳು ಬದುಕು
ಪ್ರಕೃತಿ ಪ್ರಕಾಶನ
ಕೋಟೆಕಾರು, 1984

4. ಉದಯವರ್ಮರಾಜ – ತುಳುನಾಡಿನ ಗತ ವೈಭವ
ಕನ್ನಡ ಸಾಹಿತ್ಯ ಪರಿಷತ್ತು,
ಕಾಸರಗೋಡು, 1998

5. ಎಚ್.ಬಿ. ಎಲ್ ರಾವ್ – (ಸಂ) ಶಿವಳ್ಳಿ ಬ್ರಾಹ್ಮಣರು ಸಂಪುಟ1
ಶಿವಳ್ಳಿ ಪ್ರತಿಷ್ಠಾನ ಮುಂಬೈ 2001

6. ಎಚ್.ಬಿ. ಎಲ್ ರಾವ್ – (ಸಂ) ಶಿವಳ್ಳಿ ಬ್ರಾಹ್ಮಣರು ಸಂಪುಟ2
ಶಿವಳ್ಳಿ ಪ್ರತಿಷ್ಠಾನ ಮುಂಬೈ 2005

7. ಕಡವ ಶಂಭು ಶರ್ಮ – ತುಳು ದೇಶ ಭಾಷಾ ವಿಚಾರ 1970

8. ಕಾರಂತ ಕೋ – ಕೂಟ ಮಹಾಜಗತ್ತು ಸಾಲಿಗ್ರಾಮ
1958

9. ಕಿಲ್ಲೆ ಎಸ್. ಎಸ್. ಮತ್ತು ಶೀನಪ್ಪ ಹೆಗ್ಗಡೆ – ಪ್ರಾಚೀನ ತುಳುನಾಡು ಮಂಗಳೂರು
1954

10. ಕುಂಡಂತಾಯ ಕೆ.ಎಲ್. – ಪರ್ವಕಾಲ
ಸರಸ್ವತಿ ಪ್ರಕಾಶನ ಉಡುಪಿ –2007

11. ಕುಪ್ಪಣ್ಣಾಚಾರ್ಯ ಪಿ – ಶ್ರೀ ಮನ್ಮಧ್ವಾಚಾರ್ಯರು
ಯುಗ ಪುರುಷ ಪ್ರಕಟಣಾಲಯ
ಕಿನ್ನಿಗೋಳಿ 1986

12. ಕುಶಾಲಪ್ಪ ಗೌಡ ಕೆ ಮತ್ತು ಚಿನ್ನಪ್ಪ ಗೌಡ ಕೆ. – ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು ಶ್ರೀ ಧ.ಮಂ. ಪ್ರಕಾಶ ಮಾಲೆ ಉಜಿರೆ

13. ಗಣಪತಿ ರಾವ್ ಐಗಳ್ ಮಂಜೇಶ್ವರ – ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಉಡುಪಿ 1923 ಪ್ರ.ಆವೃತ್ತಿ 2004 ಈಗಿನ ಆವೃತ್ತಿ

14. ಕೇಶವಕೃಷ್ಣ ಕುಡ್ವ, ಕಾರ್ಕಳ – ದಕ್ಷಿಣ ಕನ್ನಡದ ಇತಿಹಾಸ (ತುಳುವ ಚರಿತ್ರೆ)ಪ್ರಕಾಶಕರು –ಕೇಶವಕೃಷ್ಣ ಕುಡ್ವ ಕಾರ್ಕಳ, ಬಲ್ಲಾಳ್‌ಬಾಗ್ ಮಂಗಳೂರು 1948

15. ಗುರುರಾಜ ಭಟ್ – ತುಳುನಾಡು ಪ್ರಕಾಶಕರು– ಕೆ. ಲಕ್ಷ್ಮೀನಾರಾಯಣ ಭಟ್, ಸಂಪಾದಕ ಭವ್ಯವಾಣಿ ಪಡುಪೇಟೆ, ಉಡುಪಿ

16. ಗುರುರಾಜ ಭಟ್ಟ ಪಿ. – ಅಳುಪರಸರು ಐ.ಬಿ.ಎಚ್. ಪ್ರಕಾಶ ಬೆಂಗಳೂರು 1976

17. ಗುರುರಾಜ ಭಟ್ಟ – ಉಡುಪಿಯ ಇತಿಹಾಸ ಐ.ಬಿ.ಎಚ್. ಬೆಂಗಳೂರು 1972

18. ಗೋವಿಂದಚಾರ್ಯ ಬನ್ನಂಜೆ – ಆಚಾರ್ಯಮಧ್ವ ಬದುಕು–ಬರಹ ಪ್ರಕಾಶಕರು ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಉಡುಪಿ–1995

19. ಚಂದ್ರಶೇಖರ ಐತಾಳ ಗುಡ್ಮಿ – ಮದ್ದುಂಟೆ ಜನನ ಮರಣಕ್ಕೆ ಕೊಣಾಜೆ –1973

20. ಚಿನ್ನಪ್ಪ ಗೌಡ ಕೆ. – ಭೂತಾರಾಧನೆ –ಕೆಲವು ಅಧ್ಯಯನಗಳು ತುಳುವ ಪ್ರಕಾಶನ – 1983

21. ಚಿನ್ನಪ್ಪ ಗೌಡ ಕೆ. – ಭೂತಾರಾಧನೆ – ಜಾನಪದೀಯ ಅಧ್ಯಯನ ಮುಡಿಪು ಪ್ರಕಾಶನ ಮಂಗಳ ಗಂಗೋತ್ರಿ 1990

22.ತಿಪ್ಪೇರುದ್ರಸ್ವಾಮಿ ಎಚ್ – ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಡಿ.ವಿ.ಕೆ. ಮೂರ್ತಿ ಮೈಸೂರು 1985

23. ನರಸಿಂಹಾಚಾರ್ ಡಿ.ಎಲ್. – (ಸಂ) ಕನ್ನಡ ನಿಘಂಟು – ಮೊದಲನೇ ಸಂಪುಟ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು 1970

24. ನರಸಿಂಹಮೂರ್ತಿ ಎಚ್. ವಿ. – ನಮ್ಮ ಹಬ್ಬಗಳು ವಿಕಾಸ ಪ್ರಕಾಶನ ಉಡುಪಿ 2002

25. ನಾರಾಯಣ ತಂತ್ರಿ ಅಗ್ರಹಾರ – ಪಾಜಕ ಕ್ಷೇತ್ರ ಪ್ರಕಾಶಕರು ನಾರಾಯಣ ತಂತ್ರಿ ಅಗ್ರಹಾರ ಸಂಸ್ಕೃತ ಮಹಾಪಾಠ ಶಾಲಾ ಉಡುಪಿ –1966

26. ಪಾಂಡುರಂಗ ಡಿ. ಆರ್ – ಹೊಯ್ಸಳ ಕರ್ನಾಟಕ ಬ್ರಾಹ್ಮಣರು ಸಾಂಸ್ಕೃತಿಕ ಅಧ್ಯಯನ ಸಹಕಾರ –ಹೊಯ್ಸಳ ಕರ್ನಾಟಕ ಸಂಘ ಬೆಂಗಳೂರು 1997

27. ಪಾ.ನ. ಮಯ್ಯ – ಕೋಟದವರು ಪಾರಂಪಳ್ಳಿ ಪ್ರಕಾಶನ ಮಂಗಳೂರು 1995

28. ಪ್ರಣತಾರ್ತಿಹರನ್ ಈ. – ಸಂಕೇತಿ –ಒಂದು ಅಧ್ಯಯನ ಸಮುದಾಯ ಅಧ್ಯಯನ ಕೇಂದ್ರ ಮೈಸೂರು 2003

29.ಮೋಹನ ಕೃಷ್ಣ ರೈ ಕೆ. – ತುಳು ಸಂಸ್ಕೃತಿ ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ–1999

30. ರಂಗಸ್ವಾಮಿ ಡಿ.ಟಿ. – ಭಾರತದ ಹಬ್ಬ ಹರಿದಿನಗಳು ಪ್ರಕಾಶಕರು –ಸಮಾಜ ಪುಸ್ತಕಾಲಯ ಧಾರವಾಡ– 1984

31. ರಂಗಸ್ವಾಮಿ ಡಿ.ಟಿ – ಭಾರತದ ಹಬ್ಬಗಳು ಪ್ರಕಾಶಕರು –ಸಮಾಜ ಪುಸ್ತಕಾಲಯ ಧಾರವಾಡ –2003

32.ರಘುಪತಿ ಭಟ್ ಕೆಮ್ಮೂರು – ತುಳುನಾಡಿನ ಸ್ಥಳ ನಾಮಗಳು ಕನ್ನಡ ಸಾಹಿತ್ಯ ಪರಿಷತ್ತು 1979

33. ರಮೇಶ್ ಕೆ.ವಿ – ಎಂ.ಜೆ. ಶರ್ಮ ತುಳುನಾಡಿನ ಶಾಸನಗಳು ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಸಂಶೋಧನ ಕೇಂದ್ರ ಉಡುಪಿ–ಮೈಸೂರು 1978

34. ರಮೇಶ ಬಿ.ಜಿ. – ನಮ್ಮ ಹಬ್ಬಗಳು
ಚಂದ ಪ್ರಕಾಶನ –ಬೆಂಗಳೂರು
2007

35. ರಾಮಕೃಷ್ಣ ಆಚಾರ್ ಪಾಲ್ತಾಡಿ – ಜಾನಪದ ಮಿನದನ
ಸುಪ್ರಿಯಾ ಪ್ರಕಾಶನ ದರ್ಬೆ
ಪುತ್ತೂರು 1997

36. ರಾಮಚಂದ್ರ ಅಮ್ಮಣ್ಣಾಯ ಉಡುಪಿ – ತುಳುನಾಡಿನಲ್ಲಿ ಮಧ್ವ ಪರ್ಯಟನೆ
ಕೃದೇವ ಪ್ರಕಾಶನ ಉಡುಪಿ –2000

37. ರಾಮಚಂದ್ರ ರಾವ್ ಎಸ್.ಕೆ. – ಭಾರತದ ದೇವಾಲಯಗಳ ನೆಲೆ–
ಹಿನ್ನೆಲೆ ಐ.ಬಿ.ಎಚ್. ಪ್ರಕಾಶನ
ಬೆಂಗಳೂರು –1980

38. ರಾಮರಾವ್ ಬೆನಗಲ್ ಮತ್ತು ಸುಂದರಶಾಸ್ತ್ರಿ ಪಾನ್ಯಂ
ಪುರಾಣನಾಮ ಚೂಡಾಮಣಿ 1941
ಪ್ರಕಾಶಕರು: ಪ್ರೊ ಆರ್ವಿಯಸ್ –
ಸುಂದರಂ ಮೈಸೂರು

39. ವಸಂತ ಮಾಧವ ಕೆ.ಜಿ. – ಕರಾವಳಿ ಕರ್ನಾಟಕದ ಕನ್ನಡ
ಶಾಸನಗಳ ಅಧ್ಯಯನ
ನಾನಾ ಪ್ರಕಾಶನ, ಹಳೆಯಂಗಡಿ
2001

40. ವಸಂತ ಮಾಧವ ಕೆ.ಜೆ. – ಕರಾವಳಿ ಕರ್ನಾಟಕದ ರಾಜಕೀಯ
ಇತಿಹಾಸ ಅಧ್ಯಯನ ಮತ್ತು
ಸಂಶೋಧನೆ ನಮ್ಮ–ಅನಂತಪ್ರಕಾಶನ
ಮಂಗಳೂರು 1998

41. ವಿವೇಕ ರೈ. ಬಿ.ಎ. – ತುಳುವ ಅಧ್ಯಯನ, ಕೆಲವು
ವಿಚಾರಗಳು,ತುಳುವಪ್ರಕಾಶನ
ಮಂಗಳೂರು–1980

42.ವಿವೇಕ ರೈ ಬಿ.ಎ. – ತುಳು ಜನಪದ ಸಾಹಿತ್ಯ
ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು–1985

43. ವಿವೇಕ ರೈ ಬಿ.ಎ – ತುಳುವ ಅಧ್ಯಯನ
ತುಳುವ ಪ್ರಕಾಶನ 1980

44. ವಿಶ್ವನಾಥ್ ಸಂಪಟೂರು – ಹಬ್ಬಗಳ ಮತ್ತು ದಿನಾಚರಣೆಗಳು
ಅಂಕಿತ ಪುಸ್ತಕ ಪ್ರಕಾಶಕರು
ಬೆಂಗಳೂರು–2007

45. ಶಂಭು ಶರ್ಮ ಕಡವ	–	ತುಳು ದೇಶ ಭಾಷಾ ವಿಚಾರವು ಕೆ.ವಿ.ಶರ್ಮ
46. ಶೀನಪ್ಪ ಹೆಗ್ಗಡೆ ಎನ್.ಎ.	–	ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳ ಪಾಂಡ್ಯಾನ ಅಳಿಯಕಟ್ಟು
47. ಶ್ರೀಕಂಠ ಕುಮಾರ ಸ್ವಾಮಿ ಆರ್.ಕೆ.	–	ಶ್ರಾದ್ಧ ತನುಮನು ಪ್ರಕಾಶನ ಮೈಸೂರು 2003
48. ಶ್ರೀಕಂಠ ಕುಮಾರ ಸ್ವಾಮಿ	–	ಸಂಸ್ಕಾರಗಳು ಮತ್ತು ಮಾನವೀಯ ಮೌಲ್ಯಗಳು ಆಪಸ್ತಂಬ ಪ್ರಕಾಶನ ಬೆಂಗಳೂರು–2009
49.ಶ್ರೀನಿವಾಸ ರಾವ್ ಐ.ಕೆ	–	ಸ್ಥಾನಿಕ ಬ್ರಾಹ್ಮಣರು ಸ್ಥೂಲಬುಕ್ ಕಂಪೆನಿ ಮಂಗಳೂರು–1957
50. ಶ್ರೀ ಗುರೂಜಿ	–	ಹಿಂದೂ ಹಬ್ಬ ಹರಿದಿನಗಳು ವಿವೇಕ ಪ್ರಕಾಶನ, ಸಾಲಿಗ್ರಾಮ 1995
51. ಶ್ರೀ ವತ್ಸ ಎಸ್. ವ.ಟಿ.	–	ಸಂಸ್ಕೃತಿ– ಸಂಪದ ಪ್ರಕಾಶಕರು –ಹೆಚ್. ಬಿ. ಎಲ್.ರಾವ್ 2008
52. ಸ್ವಾಮಿ ಹರ್ಷಾನಂದ	–	ಹಿಂದೂ ಹಬ್ಬಗಳು ಮತ್ತು ಉತ್ಸವಗಳು ಶ್ರೀ ರಾಮಕೃಷ್ಣ ಆಶ್ರಮ–ಮೈಸೂರು 2005
53. ಸಿಂಗಣ್ಣ ಚಿ.ಸಿ.	–	ಹಬ್ಬಗಳು ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ ಗುಲಬರ್ಗ 2007
54. ಸೀತಾರಾಮಾಚಾರ್ಯ ನಾರಾಯಣಾಚಾರ್ಯ ಉಡುಪಿ	–	ಇತಿಹಾಸದ ಯಥಾರ್ಥತೆ 1970
55. Gururaj Baht P.	-	Studies in Tuluva History and culture –1975

ವಕ್ತೃಗಳ ವಿಳಾಸ

1. ಅರುಣ ಕುಮಾರ್ ಎಸ್. ಆರ್.
   ಕನ್ನಡ ಉಪನ್ಯಾಸಕರು ಭುವನೇಂದ್ರ ಕಾಲೇಜು, ಕಾರ್ಕಳ
2. ಉಮಾನಾಥ ಶೆಣೈ
   ಇತಿಹಾಸ ಉಪನ್ಯಾಸಕರು, ಶ್ರೀ ಧ. ಮಂ. ಕಾಲೇಜು, ಉಜಿರೆ
3. ಎ.ವಿ. ನಾವಡ
   ನಿರ್ದೇಶಕರು, ಸ್ನಾತಕೋತ್ತರ ವಿಭಾಗ
   ಥಿಯೋಲಾಜಿಕಲ್ ಕಾಲೇಜು, ಬಲ್ಮಠ ಮಂಗಳೂರು.
4. ಗಣೇಶ ತಂತ್ರಿ
   ಅಂಚೆ : ಶಿಶಿಲ
   ವಲಯ– ಕೊಕ್ಕಡ, ಬೆಳ್ತಂಗಡಿ ತಾಲೂಕು
5. ಗೋವಿಂದ ಆಚಾರ್ಯ ಬನ್ನಂಜೆ
   ಈಶಾವಾಸ್ಯಂ
   ಅಂಬಲಪಾಡಿ, ಉಡುಪಿ
6. ದಿವಾಕರ ಕೊಕ್ಕಡ
   ಉಪ ನಿರ್ದೇಶಕರು
   ಹಾಮಾನ. ಸಂಶೋಧನಾಕೇಂದ್ರ, ಉಜಿರೆ
   ಬೆಳ್ತಂಗಡಿ ತಾಲೂಕು
7. ಎನ್. ಜಿ. ಪಟವರ್ಧನ್, ಶಿವಾಜಿನಗರ
   ಅಂಚೆ : ಉಜಿರೆ
   ಬೆಳ್ತಂಗಡಿ ತಾಲೂಕು
8. ನಾಗೇಶ ತಂತ್ರಿ
   ಕೆಮ್ಮಿಂಜೆ, ಪುತ್ತೂರು ತಾಲೂಕು
9. ಪದ್ಮನಾಭ ಕೇಕುಣ್ಣಾಯ
   ನವದುರ್ಗಾ, ಅಂಚೆ– ಕುಂಜಿಬೆಟ್ಟು ಉಡುಪಿ
10. ಪಾ.ನಾ. ಮಯ್ಯ
    ಶ್ರೀನಿವಾಸ, ಓಣಿಕೆರೆ ರಸ್ತೆ
    ಜಪ್ಪು, ಮಂಗಳೂರು
11. ಪ್ರಭಾಕರ ಜೋಶಿ
    ನಿವೃತ್ತ ಪ್ರಾಧ್ಯಾಕರು
    ಬೆಸೆಂಟ್ ಪದವಿ ಪೂರ್ವ ಕಾಲೇಜು
    ಮಂಗಳೂರು
12. ಮಹಾಬಲ ಭಟ್ಟ
    ಮುಖ್ಯಸ್ಥರು, ಸಂಸ್ಕೃತ ವಿಭಾಗ
    ಶ್ರೀ. ಧ. ಮಂ.ಕಾಲೇಜು, ಉಜಿರೆ
    ಬೆಳ್ತಂಗಡಿ ತಾಲೂಕು

13. ಮುರಳೀಧರ ಉಪಾಧ್ಯಾಯ
ಸಖೀಗೀತ, ದೊಡ್ಡಣ ಗುಡ್ಡೆ
ಅಂಚೆ- ಕುಂಜಿಬೆಟ್ಟು, ಉಡುಪಿ
14. ಯು.ಪಿ ಉಪಾಧ್ಯಾಯ
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಸಮೀಪ, ಉಳಿಯಾರಗೋಳಿ, ಕಾಪು
15. ರವೀಂದ್ರ ತಂತ್ರಿ
ಕುಂಟಾರು, ಕಾಸರಗೋಡು ತಾಲೂಕು
16. ರಾಜಾರಾಮ ಶರ್ಮ
ಅಂಚೆ: ಬೆಳಾಲು
ಬೆಳ್ತಂಗಡಿ ತಾಲೂಕು
17. ರಾಮಚಂದ್ರ ಪುರೋಹಿತ
ಸಂಸ್ಕೃತ ಉಪನ್ಯಾಸಕರು
ಶ್ರೀ ಧ. ಮಂ ಕಾಲೇಜು, ಉಜಿರೆ
18. ರಾಮಕೃಷ್ಣ ಮಚ್ಚಾಲೆ
ಅಂಚೆ-ನಿಡ್ಲೆ
ಬೆಳ್ತಂಗಡಿ ತಾಲೂಕು
19. ವಸಂತ ಪರ್ಲತ್ತಾಯ
ಅರ್ಚಕರು
ಅಂಚೆ- ಧರ್ಮಸ್ಥಳ
ಬೆಳ್ತಂಗಡಿ ತಾಲೂಕು
20. ವಸಂತ ಶರ್ಮ
ಛಾಯಚಿತ್ರ ಗ್ರಾಹಕರು
ಬೆಳ್ತಂಗಡಿ ತಾಲೂಕು
21. ವಂಸತ ಕುಮಾರ್ ತಾಳ್ತಾಜೆ
ಸುಧಾಮ
ಉಪ್ಪಿನಂಗಡಿ, ಪುತ್ತೂರು ತಾಲೂಕು
22. ವಿಘ್ನರಾಜ, ಶ್ರೀ ಗುರು ನಿಲಯ
ಕನ್ಯಾಡಿ-II- ಅಂಚೆ-ಧರ್ಮಸ್ಥಳ
ಬೆಳ್ತಂಗಡಿ ತಾಲೂಕು
23. ವಿಷ್ಣುಮೂರ್ತಿ ಭಟ್, ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರು
ಅಂಚೆ- ಉಜಿರೆ
ಬೆಳ್ತಂಗಡಿ ತಾಲೂಕು
24. ವೆಂಕಟರಾಜ ಪುಣಿಂಚತ್ತಾಯ
'ಗಾಯತ್ರಿ' ಐತ್ತನಡ್ಕ
ಅಂಚೆ-ಕಕ್ಕೆಬೆಟ್ಟು
ಕಾಸರಗೋಡು ತಾಲೂಕು

25. ವೆಂಕಟ ಕೃಷ್ಣ ಶಾಸ್ತ್ರಿ
ಅಂಚೆ–ಕೊಕ್ಕಡ
ಬೆಳ್ತಗಂಡಿ–ತಾಲೂಕು
26. ಶಂಕರನಾರಾಯಣ ವೈಲಾಯ
ಪುತ್ಯ–ಮನೆ
ಅಂಚೆ–ಮಂಡೆಕೋಲು
ಸುಳ್ಯ ತಾಲೂಕು
27. ಶ್ರೀನಿವಾಸ ಭಟ್ಟ, ಪಂಚವಟಿ, ಕಟೀಲು
ಮಂಗಳೂರು
28. ಶ್ರೀಧರ ಗೋರೆ, ಜ್ಯೋತಿಷ್ಯರು
ಬಲ್ಯ, ಅಂಚೆ– ನೆಲ್ಯಾಡಿ
ಪುತ್ತೂರು ತಾಲೂಕು
29. ಶ್ರೀಪತಿ ತಂತ್ರಿ
ಪಂಚಾರ್ಷೇಯ, ಮಹಾಕಾಳಿ ರಸ್ತೆ
ಅಂಬಲಪಾಡಿ– ಉಡುಪಿ
30. ಸುಶೀಲಾ ಉಪಾಧ್ಯಾಯ
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಸಮೀಪ, ಉಳಿಯಾರ ಗೋಳಿ, ಕಾಪು
31. ಶ್ರೀಪತಿ ಎಳಚಿತ್ತಾಯ, ಪುರೋಹಿತರು
ಅಂಚೆ– ಉಜಿರೆ, ಬೆಳ್ತಂಗಡಿ ತಾಲೂಕು
32. ಸುಬ್ರಹ್ಮಣ್ಯ ನೆಲ್ಲಿತ್ತಾಯ, ಉಮ್ಮಂತಿಮಾರು ಅಂಚೆ– ಶಿಶಿಲ
ಬೆಳ್ತಂಗಡಿ ತಾಲೂಕು
33. ಸುಬ್ರಹ್ಮಣ್ಯ ಉಪಾಧ್ಯಾಯ
ಪುರೋಹಿತರು
ಅಂಚೆ– ಶಿಶಿಲ
ಬೆಳ್ತಂಗಡಿ ತಾಲೂಕು
34. ಹರಿಕೃಷ್ಣ ಪುನರೂರು, ಶುಭವಾಗಲಿ
ಹೋಟೇಲ್ ಉದ್ಯಮಿ
ಅಂಚೆ–ಪುನರೂರು
ಮುಲ್ಕಿ.